

# ಚಿಗುರಿದ ಕನಸು

# ಚಿಗುರಿದ ಕನಸು

ಶಿವರಾಮ ಕಾರಂತ

ಬೆಲೆ: ರೂ. 4 00

ಪ್ರಕಾಶಕರು :

ಹರ್ಷ ಪ್ರಕಟಣಾಲಯ, ಪುತ್ತೂರು, ದ. ಕ.

ಹೊಸ ಮುದ್ರಣ: 1964

ಮುದ್ರಕರು:
ಆರ್. ಎನ್. ಹಬ್ಬು, ಉಷಾ ಪ್ರೆಸ್, ಮೈಸೂರು-1

# ಮುನ್ನುಡಿ

ಈ ಕಾದಂಬರಿಯ ಬರವನ್ನು ಬಹು ಮೊದಲೇ ಸೂಚಿಸಿದ್ದೆನಾದರೂ ಅಚ್ಚುಮನೆಯ ವಾಸ ಇದಕ್ಕೆ ಸಾಕಷ್ಟು ಕಾಲ ಹಿಡಿಯಿತು. ಅಂತು ಈಗ ಅದನ್ನು ತಮ್ಮ ಮುಂದೆ ಇರಿಸುತ್ತಿದ್ದೇನೆ. ಇದೂ ನನ್ನಿತರ ಬರಹಗಳಂತೆ ಕನ್ನಡ ಜಿಲ್ಲೆಯ ಒಂದು ಚಿತ್ರವನ್ನು ಕೊಡುತ್ತದೆ. ಇದು " ಅಸಾಧ್ಯ "ದ ಚಿತ್ರವಲ್ಲ; ನಿರಾಶೆಯ ಚಿತ್ರವಲ್ಲ. ಸಾಧ್ಯದ ಚಿತ್ರ–ತಕ್ಕ ಕಾಲ. ತಕ್ಕ ಸನ್ನಿವೇಷ, ತಕ್ಕ ವ್ಯಕ್ತಿ, ತಕ್ಕ ಸಾಹಸಗಳು ಕೂಡಿ ಬಂದಾಗ—ಒದಗಿ ಬರುವ ಒಂದು ಆಶಾದಾಯಕ ಪರಿಸ್ಥಿತಿಯನ್ನು ಇಲ್ಲಿ ಚಿತ್ರಿಸಲು ಯತ್ನಿಸಿದ್ದೇನೆ. ಬರಿಯ ಕೃಷಿ ಜೀವನದ ಚಿತ್ರವೇ ಇಲ್ಲಿನ ಮುಖ್ಯ ವಸ್ತುವಾದುದರಿಂದ ಓದುಗರಿಗೆ ಹೇಗೆ ಅನಿಸೀತೆಂದು ನಾನು ಹೇಳಲಾರೆ. ಆದರೆ ಇಲ್ಲಿನ ವ್ಯಕ್ತಿಗಳ ಸಂಖ್ಯೆಯು ಮಿತವಾಗಿದ್ದರೂ, ಅವರ ಸಂಸಾರಿಕ ಜೀವನದ ಒಂದೆರಡು ಪ್ರಾಮುಖ್ಯ ಸೆಲೆಗಳು ಸೇರಿಕೊಂಡು, ಸಚಿತ್ರದ ಅಂಗವಾಗಿ ಬಂದಿದೆ.

ನಮ್ಮ ಜಿಲ್ಲೆಯ ಘಟ್ಟದ ಸರಹದ್ದಿನಲ್ಲಿ, ಅದರ ಆಚೆಯೂ ಈಚೆಯೂ " ಬಂಗಾಡಿ "ಯಂತೆ ಎಷ್ಟೆಷ್ಟೋ ಪ್ರದೇಶಗಳಿವೆ—ಕೃಷಿಕನ ಕನಸಾಗಬಲ್ಲಂಥವು. ಆದರೆ ಅವನ್ನು ಆದರ್ಶವಾಗಿ ಮಾಡಿತೋರಿಸಲು ಲೂಯಿ ಬ್ರೂಮ್ ಫೀಲ್ಡ್‌ನಂತಹ ಸಾಹಸಿಗಳಾಗಿದ್ದಲ್ಲಿ—ಸುತ್ತಲಿನ ಜೀವನಕ್ಕೆ, ಈ ಲೇಖಕ ತೋರಿದ ಆಸೆಗಿಂತ ನೂರುಮಡಿ ಚೆಲುವಿನ ದಾರಿಯನ್ನು ತೋರಿಸಲು ಸಾಧ್ಯವಾದೀತು.

ಕಾದಂಬರಿ ಹೇಳಬಹುದಾದ ಸಂದೇಶವನ್ನು ನನ್ನ ಮುನ್ನುಡಿ ಹೇಳಬೇಕಾಗಿಲ್ಲವಲ್ಲ.

27—6—'51 ಇತಿ

ಪುತ್ತೂರು ಶಿವರಾಮ ಕಾರಂತ

# ಚಿಗುರಿದ ಕನಸು

## ಅಧ್ಯಾಯ ೧

ಶಂಕರ ಸುಂದರ ಕಾಯ: ಅವನದು ಹದನಾದ ಎತ್ತರ, ಬಿಳು ಗೆಂಪು ಮೈ; ಕೋಮಲವಾಗಿ ಕಾಣಿಸುವ ಚೆಲುವಿನ ಮೈಕಟ್ಟು; ಅಂಡಾ ಕಾರವಾದ ಮುಖ; ಅದರಲ್ಲಿ ನೀಲವೊತ್ತಿದ ಹೊಳೆವ ಕಂಗಳು; ತುಸು ಕೆಂಚೊತ್ತಿದ ಮಿದುವಾದ ತಲೆಗೂದಲುಗಳು. ಬಿಳಿಯ ಪಾಯಿಜಾಮ, ಬಿಳಿಯ ಷರಾಯಿಗಳನ್ನು ಧರಿಸಿ, ನವದೆಹಲಿಯ ಜನಹೀನ ವರ್ತುಲದ ಸೋಫಾಗಳಲ್ಲಿ ಕುಳಿತು ಸಂಜೆ ಮುಂಜಾನೆಗಳ ತನ್ನ ಬಿಡುವಿನ ಸಮಯ ವನ್ನು ಕಳೆಯುವುದು ಅವನ ಹವ್ಯಾಸ. ಒಂಟಿಯಾಗಿ ಕುಳಿತಿರುವಾಗ ಲೆಲ್ಲ ಅಂತರ್ಮುಖಿಯಾಗಲೆಳಸುತ್ತದೆ ಅವನ ಮನಸ್ಸು. ಬಾಹ್ಯ ಜಗತ್ತಿ ನೊಡನೆ ಆಟವಾಡಿ ತೃಪ್ತಿ ದೊರೆಯದ ಆ ಮನಸ್ಸು ತನ್ನನ್ನೇ ಮರೆಹೋಗ ಬೇಕಾಗುತ್ತದೆ. ಅವನ ಚಿಂತೆಗಳಿಗೆ ಸ್ಪಷ್ಟವಾದೊಂದು ಗುರಿ ಕಾಣಿಸ ದಾದರೂ, ಅಂದು ಚಿಂತೆಗೊಳಗಾಗುತ್ತದೆ.

ಶಂಕರ ಹುಟ್ಟಿದುದು ಮುಂಬಯಿಯಲ್ಲಿ; ಬಾಲ್ಯವನ್ನು ಕಳೆದುದೂ ಅಲ್ಲಿಯೆ. ಆದರೆ ತನಗೊಂದು ಹುಟ್ಟೂರಿಲ್ಲವಲ್ಲ ಎನ್ನುತ್ತದೆ ಅವನ ಮನಸ್ಸು. ಮುಂಬಯಿಯಲ್ಲಿ ಬಾಲ್ಯ ಕಳೆದವನಾದರೂ, ಅದನ್ನಾಗಲಿ–ಈಗ ಆತನಿರುವ ನವದೇಹಲಿಯನ್ನಾಗಲಿ–ಹುಟ್ಟೂರೆಂದು ತಬ್ಬಿ ಸಂತಸ ಗೊಳ್ಳಲಾರದ ಅವನ ಜೀವ—'ತಾನೆಲ್ಲಿಯವನು, ಎಲ್ಲಿದ್ದೇನೆ' ಎಂದು ಅಂತರ್ಮುಖಿಯಾಗುತ್ತದೆ. ಆತ ತಪಸ್ವಿಯಂತೆ ಕಾಣಿಸುತ್ತಾನೆ. ಸಾಮಾನ್ಯ ದೃಷ್ಟಿಗೆ ಅವನಲ್ಲಿ ಯಾವೊಂದು ಕೊರತೆಯೂ ಇರುವಂತೆ ಕಾಣಿಸದು, ಹೊಣೆ ಹೊತ್ತು ಸಂಸಾರವನ್ನಿದಿರಿಸಲೇಬೇಕೆಂದಿಲ್ಲ: ಅತ್ತ ಇರುವ ಹೊಣೆ ವಿದ್ಯಾಭ್ಯಾಸದ್ದು. ಮೇಧಾವಿಯಾದ ಅವನಿಗೆ ಅದು ಹೊಣೆಯೆಂಬಷ್ಟು ಕಷ್ಟದ ಕೆಲಸವಾಗಿ ಕಾಣಿಸುವುದಿಲ್ಲ.

ಆತ ಕುಟುಂಬದಲ್ಲಿನ ಹಿರಿಯ ಹುಡುಗ. ತಂದೆತಾಯಿಗಳಿಬ್ಬರೇನೆ ಅವನಿಗೆ ಪರಿಚಿತರಾದ ಹಿರಿಯರು. ಇನ್ನು ಅವನಿಗೊಬ್ಬ ಕಿರಿಯ ತಮ್ಮ

ನಿದ್ದಾನೆ. ಮನೆಯವರದು ಸಾಮಾನ್ಯ ವರಮಾನ. ಶಂಕರಗೆ ಎಳೆತನದ ಸ್ಮರಣೆಗಳು ಅಷ್ಟೊಂದು ನೆನಪಿಗೆ ಬರುತ್ತಲಿಲ್ಲ; ಬಂದು ಕಾಡುತ್ತಲಿಲ್ಲ. ಹಳೆಯ ನೆನಹುಗಳಲ್ಲಿ ಕಾಣಿಸುತ್ತಿದ್ದುದೆಂದರೆ–ಎಳೆಯನಾಗಿದ್ದಾಗ, ಅವನನ್ನು ಅವನ ತಾಯಿ ಕೆಲವೊಮ್ಮೆ ಮುಂಬಯಿಯ ಬೀದಿಗಳ ಜನಸಂದಣಿಯಲ್ಲಿ, ಅವನಿಗೆ ಕಾವಲಾಗಿದ್ದು, ಸಾಲೆಗೆ ಬಿಟ್ಟುಬರುತ್ತಿದ್ದಂಥ ಚಿತ್ರ. ಇದಕ್ಕೂ ಹೆಚ್ಚಿನ ದಿನಗಳ ಮಾಸಲು ನೆನಪೂ ಅವನಿಗಿಲ್ಲ. ಅವು ಸುಖದ ದಿನಗಳೇ; ಅಸುಖದುವೇ ಎಂದೂ ಸ್ಮರಿಸಲಾರ. ಅವುಗಳಲ್ಲೇ ತಾಳಿ ಉಳಿದ ನೆನಪೆಂದರೆ—ಮುಂಬಯಿಯಲ್ಲಿ ಆತನಾಡುತ್ತಿದ್ದ ತಾಯ್ನುಡಿಯ ವಿಚಾರ. 'ಆಯಿ, ಆಯಿ' ಎಂದು ಅಮ್ಮನನ್ನು ಕರೆದವನು ಅವನು. ಮನೆಯಲ್ಲೂ ಅದೇ ಮಾತು ಬಳಕೆಯಾಗಿತ್ತು, ಅವರ ಮನೆಯ ಸುತ್ತಮುತ್ತಲೂ ಅದೇ ಮಾತು ಬಳಕೆಯಲ್ಲಿತ್ತು, ಆದರೆ ತಂದೆಯ ಮಾತು, ಮರಾಠಿಯೆ—ಎಂಬ ನೆನಪು ಬರುತ್ತಿರಲಿಲ್ಲ, ಅದರಂತಿರುವ ಒಂದು ಭಾಷೆಯೆಂದು ತಿಳಿದಿದ್ದ. ಅಥವ ತಂದೆಯೂ ಸಹ ತನ್ನ ತಾಯ್ನುಡಿಯನ್ನು ಮರೆತು, ಮರಾಠಿಯನ್ನು ರೂಢಿಮಾಡಿಕೊಂಡಿರುವರೆಂಬ ನೆನಪು ಅವನಿಗೆ. ತಾವು—ಮುಂಬಯಿಯವರೇ ಅಲ್ಲ. ತಮ್ಮ ಹಿರಿಯರು ಎಲ್ಲಿಂದಲೋ ಅಲ್ಲಿಗೆ ಬಂದವರೆನ್ನುತ್ತಿದ್ದ ನೆನಪು. ಈ ವಿಚಾರವಾದ ನೆನಪು—ಅವನಿಗೆ ಆಗಾಗ ಆಗುತ್ತಿದ್ದ ಸ್ಮರಣೆಗಳಲ್ಲಿ ಮುಖ್ಯವಾದುದು.

ಆತ ಎಳೆಯನಾಗಿರುವಾಗಲೇ, ಅವನ ಹಿರಿಯರು ನೌಕರಿಯ ಬೆನ್ನು ಹತ್ತಿ ದೆಹಲಿಗೆ ಹೋದರು. ಮುಂಬಯಿಯಲ್ಲಿ ಅವನು ಶಾಲೆಯಲ್ಲಿ, ನೆರೆಕರೆಯಲ್ಲಿ ಮರಾಠಿಯನ್ನಾಡುತ್ತಿದ್ದರೆ. ಅಲ್ಲಿ ಹೊಸತೇ ಆದ ಆವರಣ ಪ್ರಾಪ್ತಿಸಿತು. ಬರಿಯ ಮನೆ ಮಾತಾಯಿತು–ಮರಾಠಿ. ಮನೆಯ ಹೊರಗೆ ಕೆಲಸದವರಲ್ಲಿ, ಪರಿಚಿತರಲ್ಲಿ ಹಿಂದುಸ್ಥಾನಿ ಬಳಕೆಯಾಯಿತು. ಶಾಲೆಯಲ್ಲಿ ಅದೇ ಭಾಷೆ ಪ್ರಚಾರದಲ್ಲಿತ್ತು. ಅದರ ಜತೆಗೆ ಇಂಗ್ಲಿಷೂ ಸೇರಿಕೊಂಡಿತು. ಎರಡೆರಡು ಹೊಸ ಭಾಷೆಗಳು ಸೇರಿ, ಅವನ ಗಂಟಲನ್ನು ಬಹು ದಿನ ಬಿಗಿ ಹಿಡಿದುವು. ಎರಡರಲ್ಲೂ ಅವನಿಗೆ ಸಲುಗೆ ಸಾಲದು. ಅವನ ಮನೆಯ ಮಾತೂ ಬದಲಾಗುತ್ತ ಬಂದಿತು. ತಂದೆತಾಯರು, ನಾಡಿನ ಆವರಣಕ್ಕೆ ಒಗ್ಗುವಂತೆ, ತಮ್ಮ ಆಡು ಭಾಷೆಯನ್ನು ಹಿಂದುಸ್ಥಾ

ನಿಗೆ ಬದಲಿಸಿದರು. ಇದರಿಂದ ಶಂಕರಗೆ ತುಂಬ ಸಂಕೋಚವಾಯಿತು. ಅವನ ತಮ್ಮ ವಿಟ್ಠಲನೂ ಈ ತೊಡಕಿಗೆ ಗುರಿಯಾದವನೇ. ಆದರೆ ಆತಗೆ ಹೊಸ ನುಡಿಯು ತೀರ ಸುಲಭವಾಗಿ ಬಂದಿತು. ಶಂಕರ ಹೈಸ್ಕೂಲು ವಿದ್ಯಾಭ್ಯಾಸ ತೊಡಗಿದಾಗ ಇಂಗ್ಲಿಷು ಮಾಧ್ಯಮ ರೂಢಿಯಾಗಿತ್ತು. ದೇಶಭಾಷೆಯ ತೊಡಕನ್ನು ತಪ್ಪಿಸಲು ಆತ–ಸಂಸ್ಕೃತವನ್ನು ಕೊಂಡು, ಮೆಟ್ರಿಕ್ ಪರೀಕ್ಷೆಯನ್ನು ಮುಗಿಸಿದ. ಅತಿ ಕಷ್ಟದಿಂದ ಪಾಸಾದ. ಅಲ್ಲಿಂದ ಮತ್ತೊಂದು ಬದಲಾವಣೆಯಾಯಿತು. ಇಂಟರ್ ಪರೀಕ್ಷೆಯಲ್ಲಿ ಫ್ರೆಂಚ್ ಭಾಷೆಯ ಅಭ್ಯಾಸ ನಡೆಯಿಸಿದ. ಇವೆಲ್ಲವುಗಳ ಪರಿಣಾಮವೆಂದರೆ— ಯಾವುದನ್ನೂ ಚೆನ್ನಾಗಿ ಓದಿ ಅರ್ಥಮಾಡಿಕೊಳ್ಳಲಾರ; ಯಾವುದರಲ್ಲೂ ಆಡಲಾರ, ನುಡಿಯೆಂಬುದು ಗಂಟಲು ಹಿಡಿಯುವ ವಸ್ತುವಾಯಿತು. ಅದರ ಮೇಲೆ ಮೋಹ ಬಾರದಾಯಿತು. ಜತೆಗೆ—ಅವನ ಹಿರಿಯರು ಮುಂಬಯಿಯನ್ನು ಮರೆತು, ತಾವು ದಿಲ್ಲಿಯವರೆಂದೇ ತಿಳಿದು ವರ್ತಿಸ ತೊಡಗಿದುದರ ಪರಿಣಾಮವಾಗಿ "ತನ್ನ ಊರು" ಎಂಬ ಮಮತೆಯೂ ಶೂನ್ಯವಾಯಿತು.

ಈ ಎಲ್ಲ ಪರೀಕ್ಷೆಗಳಲ್ಲಿ ಅವನ ತಮ್ಮ ವಿಟ್ಠಲನೇ ಸುಲಭ ವಿಜಯಿಯಾದ. ಅವನಿಗೆ ಹೊಸ ನುಡಿಗಳೂ ಕಷ್ಟವಾಗಲಿಲ್ಲ. ಹೊಸ ಆವರಣವೂ ಅಹಿತವೆನಿಸಲಿಲ್ಲ. ಬಾಯಿ ತುಂಬ ಮಾತನಾಡುವ ಚಪಲ ಅವನದ್ದು. ಸ್ವಭಾವ ಕೆಟ್ಟುದಲ್ಲವಾದರೂ–ಅಣ್ಣನ ಪಾಲಿಗೆ ವಿಟ್ಠಲ ವಿನಯಶೀಲನಲ್ಲ. ಎಳೆತನದಲ್ಲಿ ಅಣ್ಣನ ಮೇಲೊಂದು ಬಗೆಯ ಅಸೂಯೆ ಬೆಳೆದುಬಂದಿತ್ತು. ಕ್ರಮೇಣ ಹಿರಿಯನನ್ನು ಅಧಿಕರಿಸುವ ಹಟಮಾರಿತನವೂ ಸೇರಿಕೊಂಡಿತು. ತಿಳಿವು ಬಂದು, ಹೈಸ್ಕೂಲಿನಲ್ಲಿ ಓದತೊಡಗಿದ ಮೇಲೆ, ಅಣ್ಣನ ಮಿತಭಾಷೆ, ನುಡಿಯ ತೊಡಕುಗಳನ್ನು ಕಂಡು, ಅವನಿಗಿಂತ ತಾನೇ ಬುದ್ಧಿವಂತ-ಎಂಬ ಜಂಬವೂ ಸೇರಿಕೊಂಡಿತು. ತಾಯಿಗೆ ಅವನೇ ಹೆಚ್ಚಿನ ಮೆಚ್ಚಿಗೆಯವ. ತಂದೆ ಮಾತನಾಡಿಸುವುದೂ ಅವನನ್ನೇ. ಹೀಗಾಗಿ ಮನೆಯವರ ಮೋಹವೂ ಅವನ ತಲೆಯನ್ನು ಬೀಗಿಸಿತು.

ಹಿರಿಯರು ವಿಟ್ಠಲನಲ್ಲಿ ತೋರಿಸುತ್ತಿದ್ದ ಅತ್ಯಾದರ, ತನ್ನ ವಿಷಯದ 'ಅನಾದರ' ಎಂಬ ತಿಳಿವು ಅಣ್ಣ ಶಂಕರನಿಗಾಗದೆ ಹೋಗಲಿಲ್ಲ. ಆತ

ಮೆಲ್ಲ ಮೆಲ್ಲಗೆ-ಮೂಕ ಜೀವಿಯಾಗುತ್ತ ಬಂದ. ತನಗೆ ತಿಳಿದುದನ್ನು ಹೇಳ ಲಾರ, ತಿಳಿಯದ್ದನ್ನೂ ಹೇಳಲಾರ. ಹೈಸ್ಕೂಲು ಕಾಲೇಜು ಜೀವನವೆಲ್ಲ—ಒಂದು ಬಗೆಯ ಏಕಾಂಗಿತನದಲ್ಲೇ ಕಳೆಯಿತು. ಅವನ ಚಿಂತೆ, ಆಸೆ, ಯೋಚನೆಗಳೇನಿದ್ದರೂ ಅವನೊಬ್ಬನೇ ಅದನ್ನು ಅರಿತವನು. ತೀರ ಬೇಸರ ವಾಯಿತೆಂದರೆ, ಕಷ್ಟವಾಗಿ ಕಂಡರೂ "ಪುಸ್ತಕ" ಮಿತ್ರರನ್ನು ನೆಚ್ಚಿ ಬಾಳ್ವೆ ನಡೆಸತೊಡಗಿದ. ಹೀಗಾಗಿ ವಿಟ್ಠಲನ ಸಾಮಾಜಿಕ ಜೀವನಕ್ಕೂ, ಶಂಕರನ ಒಂಟಿತನಕ್ಕೂ ಹೇಳಲಾರದಷ್ಟು ತಾರತಮ್ಯ. ಬಹುಮಂದಿ ಮಿತ್ರರೂ ಅವನಿಗಿರಲಿಲ್ಲ. ಇರುವ ಒಬ್ಬಿಬ್ಬರೊಡನೆ ಮಿತವಾದ ಸಂಭಾಷಣೆ.

ಆತನ ತಂದೆ ಸುಂದರರಾಯರಿಗಾಗಲಿ, ತಾಯಿ ಪ್ರತಿಮಾದೇವಿ ಗಾಗಲಿ,ಹಿರಿಯ ಮಗನ ಮೇಲೆ ಸಾಕಷ್ಟು ಗೌರವ ಬೆಳೆದು ಬಂದಿತ್ತು.ಅದು ಅವ್ಯಕ್ತ ಗೌರವ. ಅವರ ವ್ಯಕ್ತಿ ಪ್ರೀತಿಯೆಲ್ಲವು ಕಿರಿಯ ಹುಡುಗನಾದ ವಿಟ್ಠಲನ ಮೇಲೆ. ಈ ಗೌರವಕ್ಕೆ ಕಾರಣ-ಶಂಕರನ ಮೇಧಾವಿತನ. ಅದು ಮನೆಮಾತಿನಲ್ಲಿ ಪ್ರಕಟವಾಗದೆ ಹೋದರೂ, ಶಾಲೆ ಕಾಲೇಜುಗಳ ಪರೀಕ್ಷೆ ಗಳಲ್ಲಿ ಪ್ರಕಟವಾಗದೆ ಇರಲಿಲ್ಲ. ಪ್ರತಿಯೊಂದು ಪರೀಕ್ಷೆಯಲ್ಲೂ ಹೆಚ್ಚಿನ ಪ್ರಶಸ್ತಿ ಪಡೆದೇ ಪಾಸಾಗುತ್ತಿದ್ದವ ಅವನು. ಆದರೆ ತಂದೆಯಾಗಲಿ, ತಾಯಾಗಲಿ ಅವನನ್ನು ಎದುರಿನಲ್ಲಿ ಹೊಗಳಿದವರಲ್ಲ; ಕೊಂಡಾಡಿದವರಲ್ಲ. ಹಾಗೆ ತಂದೆ—ಸುಂದರರಾಯರು ಮನೆಯಲ್ಲಿ ವಿಶೇಷ ಸಲುಗೆಯಿಂದ ಯಾರೊಡನೆಯೂ ಇರುವವರಲ್ಲ.

ತಾಯಿ ಪ್ರತಿಮೆಯ ಪ್ರಕಟವಾದ ಪ್ರೀತಿ ಕಿರಿಯ ವಿಟ್ಠಲನ ಮೇಲೆ. ಮೊದಲಿನಿಂದ, ಅವನು ಎಳೆಯ ಮಗುವಿದ್ದಾಗಲೂ, ಬಂದ ಗೆಳತಿಯರು "ಈ ಮಗುವಿಗೆ ನಿನ್ನದೇ ರೂಪ" ಎಂದರೆ, ಒಂದಂಗುಲ ದಪ್ಪನಾಗುತ್ತಾಳೆ ಪ್ರತಿಮೆ. ಪ್ರತಿಮೆ ರೂಪವಂತೆ. ತನ್ನಂತೆ ಮಗ ರೂಪವಂತನೆಂದರೆ—ಅವಳನ್ನು ಹೊಗಳಿದಂತೆಯೇ. ಇತ್ತ ವಿಟ್ಠಲ ಅಣ್ಣನಷ್ಟು ಬುದ್ಧಿವಂತನಲ್ಲ ವಾದರೂ ಮಾತಿನಲ್ಲಿ ಚುರುಕು; ಹಾಸ್ಯ ಪರಿಹಾಸ್ಯಗಳಲ್ಲಿ ಮೇಲುಗೈ. ತಾಯಂತೆ ಬಾಯಿ ತುಂಬ ಮಾತನಾಡುವ ಸ್ವಭಾವದವನು. ಓದಿನಲ್ಲಿ ಬುದ್ಧಿವಂತನೆಂಬ ಪ್ರಶಸ್ತಿ ಪಡೆದವನಲ್ಲವಾದರೂ, ಹಿಂದಲ್ಲ; ಜತೆಗೆ—ಕ್ರಿಕೆಟ್ ಮೊದಲಾದ ಆಟಗಳಲ್ಲಿ, ಪಂದ್ಯ, ಸ್ಪರ್ಧೆಗಳಲ್ಲಿ, ತಪ್ಪದೆ ಭಾಗಿ

ಯಾಗಿ–ಮನೆಗೆ ಆಗಾಗ ಪದಕಗಳನ್ನೂ, ಬಹುಮಾನದ ಬಟ್ಟಲುಗಳನ್ನೂ ಹೊತ್ತು ತರುವವ. ಅವನ್ನು ತನ್ನ ಗೆಳತಿಯರಿಗೆ ತೋರಿಸಿ, "ನಮ್ಮ ವಿಟ್ಠಲ ಹಾಗೆ, ಅವನು ಹೀಗೆ" ಎನ್ನುವುದು ತಾಯ ಚಪಲ. ತಾನೇ ಆಟಗಾರ್ತಿ ಯೆಂಬ ಹೆಮ್ಮೆ ಅವಳಿಗಾಗುತ್ತದೆ. ವಿಟ್ಠಲನ ಮೇಲೆ ಅಪಾರವಾದ ಮಮತೆ ಪ್ರತಿಮೆಗೆ. ಮಗ ಕಣ್ಮುಂದೆಯೇ ಓಡಾಡಬೇಕೆಂಬ ಆಸೆ ಅವಳಿ ಗಿದ್ದುದರಿಂದ ಅವನ ಯಾವತ್ತು ವಿದ್ಯಾಭ್ಯಾಸ ದಿಲ್ಲಿಯಲ್ಲೇ ಸಾಗಿತು. ಈ ಬಗೆಯ ನೆಚ್ಚು ಹಿರಿಯ ಮಗನ ವಿಚಾರದಲ್ಲಿ ಅವಳಿಗಿರಲಿಲ್ಲ. ಈ ವ್ಯತ್ಯಾಸ ಶಂಕರನ ಮನಸ್ಸಿಗೂ ಹೊಳೆದ ಸಂಗತಿಯೇ.

ಮನೆಗೆ ಹೆಸರಿನ ಯಜಮಾನರೇ—ಸುಂದರರಾಯರು. ಅವರ ಹೆಚ್ಚಿನ ಸಮಯವೆಲ್ಲ ಆಫೀಸಿನಲ್ಲೇ ಕಳೆಯುತ್ತದೆ. ಮನೆಗೆ ಬಂದರೆ—ವಿಶ್ರಾಂತಿ, ಹರಟೆಗಳು ಇದ್ದರೂ, ಮನೆ ನಡೆಯಿಸುವ ಹೊಣೆ, ಮಕ್ಕಳ ಚಿಂತನೆ, ಭವಿಷ್ಯಗಳ ಹೊಣೆಯನ್ನು ಹೊತ್ತವಳು, ತರ್ಕಿಸುವವಳು–ತಾಯಿ. ಅವಳ ಎದುರಿಗೆ, ತನ್ನ ವ್ಯಕ್ತಿತ್ವವನ್ನು ಸ್ಥಾಪಿಸುವ ಆಸೆಯಾಗಲಿ, ಧೈರ್ಯವಾಗಲಿ ಎರಡೂ ಇಲ್ಲದ ವ್ಯಕ್ತಿ ಸುಂದರರಾಯರು. ಅವರ ಹಿರಿತನ, ಕೈವಾಡಗಳೇನಿದ್ದರೂ—ಕಚೇರಿಯಲ್ಲಿ. ದಿಲ್ಲಿಯ ಸರಕಾರೀ ಆವರಣದಲ್ಲಿ ಓಡಾಡುವ ಅವರು–ಮೇಲಿನ ಅಧಿಕಾರಿಗಳನ್ನು ಒಲಿಸಿ ಕೊಂಡು, ತಮ್ಮ ಸ್ವಾಮಿಭಕ್ತಿ, ಶ್ರಮಗಳನ್ನು ಸುರಿಸಿ—ಇನ್ನೂ ಇನ್ನೂ ಮೇಲಿನ ಹಂತಕ್ಕೆ ಏರುವ ಹಂಬಲದಲ್ಲೇ 'ಸುಖದ ಸೀಮೆಯಿದೆ' ಎಂದು ತಿಳಿದವರು. ಆ ಕೆಲಸದಲ್ಲಿಯೇ ಯಶಸ್ಸನ್ನು ಸಂಪಾದಿಸಿದ್ದಾರೆ. ಇನ್ನೂ ಇನ್ನೂ ಗಳಿಸಬಹುದೆಂಬ ಆಸೆಯಿದೆ. ಅವರ ವೇಳೆ ಅದರಲ್ಲೇ ಹೋಗು ವುದರಿಂದ—ಅದು ಮನೆಗೆ ಸಂದುದಲ್ಲ.

ಪ್ರತಿಮೆ ದೇಹಲಿಯ ವನಿತಾವಲಯಗಳಲ್ಲಿ ಮೆರೆದಾಡುವ ಚಪಲ ವುಳ್ಳ ವ್ಯಕ್ತಿ. ಗಂಡನಿಗೆ ಸೆಕ್ರೆಟೇರಿಯಟಿನಲ್ಲಿ ಹಿರಿಯ ಹುದ್ದೆಯಿದೆ ಎಂದ ಮೇಲೆ ಕೇಳಬೇಕಿಲ್ಲ. ಅವಳಂತೆಯೆ ಆ ಊರಲ್ಲಿ ನೂರಾರು ನೌಕರರ ಪತ್ನಿ ಯರಿದ್ದಾರೆ. ಗಂಡಂದಿರ ದರ್ಜೆಯ ಮೇಲಿಂದ ಅವರ ಸ್ಥಾನ, ಅಂತಸ್ತು ಗಳು ಬರುವಂತೆ ಅವರ ತಿಳಿವು, ಅವರ ಕ್ಲಬ್ಬು, ಸದನಗಳಲ್ಲೂ—ಸರ ಕಾರಿ ರಾಜಕೀಯವೇ ಬಹುವಾಗಿ ತುಂಬಿರುತ್ತದೆ. ಉಳಿದವರಂತೆ ಪ್ರತಿಮೆ

ಯಾದರೂ ತನ್ನ ಗಂಡನ ಕೆಲಸ, ಹಿರಿಮೆ, ಓಡಾಟ, ಬಡತಿ, ಸಂಚಾರ, ಕಾರುಭಾರಗಳನ್ನೆಲ್ಲ ತಾನೇ ಸಾಧಿಸುತ್ತಿರುವಷ್ಟು ಉತ್ಸಾಹದಿಂದ ಮಾತಾಡಿ ಮೆರೆಯುವಳು. ಕ್ಲಬ್ಬುಗಳು, ಸಮಾರಂಭಗಳು, ಸಭೆಗಳು ಅವರ ನವಿಲಿನ ನಲಿದಾಟದ ಉದ್ಯಾನಗಳು. ಬರಿಯ ಅಲ್ಲಿಯೇ ಇರಲಾರದುದಕ್ಕೆ ಅವಳ ಮನೆ, ಗೆಳೆಯರ ಮನೆಗಳೂ ಆಗಾಗ ಕ್ಲಬ್ಬಿನಂತೆಯೇ ಹರಟೆಯ, ಸಂದ ರ್ಶನಗಳ ತಾಣಗಳಾಗುತ್ತವೆ. ಅಲ್ಲಿ ನಟಿಸುವ ಜೀವನದ ಕೃತಕ ಬಗೆ ಅವರ ಮನೆಯಲ್ಲೂ ತುಂಬಿ ತುಳುಕುತ್ತದೆ. ಈ ಆವರಣಕ್ಕೆ ಇಷ್ಟುಷ್ಟೂ ಹೊಂದಿ ಕೊಳ್ಳಲಾರದ ವ್ಯಕ್ತಿ ಶಂಕರ. ಪ್ರತಿಮೆ ತನ್ನ ಪರಿಚಿತರಿಗೆ ಅವನ ಪರಿ ಚಯ ಮಾಡಿಕೊಟ್ಟರೂ, ಅವನದು ಬರಿಯ ಶೀತಳ ಮರುಧ್ವನಿ. ಅವನಿಗೆ ಅವ್ಯೊಂದೂ ಹಿಡಿಸವು. ಇಂಥ ಗದ್ದಲಗಳು ಮನೆಯ ವರಾಂಡ, ದಿವಾನ ಖಾನೆ, ಹೂದೋಟಗಳಲ್ಲಿ ನಡೆಯುವಾಗಲೆಲ್ಲ—ಕದವಿಕ್ಕಿ ಪುಸ್ತಕಕ್ಕೆ ಅಂಟಿ ಕುಳಿತಿರುತ್ತಾನೆ. ಅಲ್ಲೂ ಶಾಂತಿ ದೊರೆಯದೆ ಹೋದರೆ, ವಿಹಾರಕ್ಕೆ ಹೊರಟುಬಿಡುತ್ತಾನೆ. ಇವುಗಳಿಂದೆಲ್ಲ ಅವನಿಗೆ ಪಾರಾಗುವ ಅವಕಾಶ ದೊರಕಿದುದು ಅವನ ಇಂಟರ್ ಪರೀಕ್ಷೆಯು ಮುಗಿದ ದಿನ.

ಅಲ್ಲಿಯ ತನಕ ಶಂಕರನೂ ಓದುತ್ತಿದ್ದ; ವ್ಯಾಸಂಗ ಮಾಡುತ್ತಿದ್ದ. ಆದರೂ, ಹಲವರಂತೆ ತನ್ನ ಭವಿಷ್ಯದ ಕಡೆಗೆ ನಿಡುನೋಟ ಚಾಚಿದವನಲ್ಲ. ತಾನು ಮುಂದೇನಾಗಬೇಕು ಎಂದು ವಿಚಾರಮಾಡಿದವನಲ್ಲ. ಇಂಟರ್ ಪರೀಕ್ಷೆ ಕಳೆಯಲು ಆ ಸಂಧಿಕಾಲ ಉಂಟಾಯಿತು. ಮುಂದೇನು ಕಲಿಯ ಬೇಕು ಎಲ್ಲಿಗೆ ಹೋಗಬೇಕು–ಎಂಬ ಆತುರ ಅವನನ್ನು ಬಾಧಿಸತೊಡಗಿತು. ಕಲಿಯುವಿಕೆಯ ಹಂಬಲಕ್ಕಿಂತ ಹೆಚ್ಚಾಗಿ "ತನ್ನಿಷ್ಟಕ್ಕೆ ತಾನಿರಬಲ್ಲ ರಾಜ್ಯ ವೊಂದು ದೊರೆಯಲಾರದೇ" ಎಂಬ ಹಂಬಲ ಅವನಲ್ಲಿ ಉಂಟಾಯಿತು. ದಿಲ್ಲಿಯಲ್ಲಿ ದೊರೆಯಲಾರದ ಶಾಂತಿ, ಹೊರಗೆಲ್ಲಾದರೂ ದೊರೆತೀತೇ ಎಂಬ ಆಸೆಯುಂಟಾಯಿತು. ಇತ್ತ ಕುಳಿತು, ಪುಸ್ತಕಗಳನ್ನು ತಿರುವಿ ತಿರುವಿ ಬೇಸರವೂ ಬರುತ್ತಲಿತ್ತು. ಪರೀಕ್ಷೆ ಮುಗಿದ ಮರುದಿನ–ಓದುವು ದಕ್ಕೇನಿದೆ? ಕಾಲವೆಲ್ಲ ಬರಿದಾಗಿ ಕಾಣುತ್ತದಲ್ಲ! ಕೈತುಂಬ ಕೆಲಸವಿಲ್ಲದೆ ಹೋದರೆ ಮನಸ್ಸನ್ನು ರಮಿಸುವ ದಾರಿಯಾವುದು—ಹಾಗೆಯೇ ಕುಳಿತು ಕೊಂಡರೆ ಹುಚ್ಚು ಹಿಡಿಯಲಾರದೇ–ಎಂಬ ಯೋಚನೆಗಳು ಬರತೊಡ

ಗಿದ್ದುವು. ಮಾಡುವ ಕೆಲಸವಿಲ್ಲದೆಯೆ, ಹಲವು ಬಾರಿ ಸಿಕ್ಕಿದ ಪುಸ್ತಕ ತಿರುವಿ ಓದುತ್ತಿದ್ದನಾದರೂ, ಅವನಿಗೆ ಅದರಿಂದ ಆತ್ಮತೃಪ್ತಿಯುಂಟಾಗುತ್ತಿರಲಿಲ್ಲ. ಅವೆಲ್ಲ ಆಪರೋಕ್ಷ ಜ್ಞಾನ, ತನ್ನ ಶಕ್ತಿಗಳಿಗೆ ಕೆಲಸ ಕೊಡದಂಥ ಕರ್ತೃತ್ವಹೀನ ಉದ್ಯೋಗ ಎಂದೆನಿಸತೊಡಗಿತು. ಇವುಗಳಿಂದ ಪಾರಾಗಲೆಂದು ಮನೆ ಬಿಟ್ಟು ತಾಸುತಾಸುಗಳ ಕಾಲ ಅಲೆದಾಡುತ್ತಾನೆ ಆತ.

ರಜೆಯ ದಿನ ಬಂತೆಂದರೆ—ಮನೆಯಿಂದ ಹೊರಬೀಳುತ್ತಾನೆ. ಮನೆಯ ಅಂಗಣದಿಂದ, ವರಾಂಡದಿಂದ ಕೇಳಿಸುವ ಮಹಿಳಾ ಮಂಡಲದ ಕಿಲ ಕಿಲ ನಗು, ಪೊಳ್ಳು ಮಾತುಗಳು ಅವನಿಗೆ ರುಚಿಸವು. ಹೀಗಾಗಿ ಗೆಳೆಯರಿರಲಿ, ಇಲ್ಲದಿರಲಿ—ಒಬ್ಬನೇ ನವದೆಹಲಿಯ ವಿಸ್ತರದ ನಿಡಿದಾದ ರಸ್ತೆಗಳನ್ನು ಅಳೆಯಲು ತೊಡಗುತ್ತಾನೆ. ಹಾಗೆಷ್ಟೂ ದೂರ ಅಲೆದಾಡಬಹುದು. ದೂರ ಹೆಚ್ಚಿದಂತೆ ಜನಸಂದಣಿ ಕಡಿಮೆಯಾಗುತ್ತ ಬಂದು—ನಾಲ್ಕುಸುತ್ತಲಿನ ಪ್ರಪಂಚ ತನ್ನ ಏಕಾಂತವಾಸದ ಮನೆ ಎನಿಸುತ್ತದೆ; ಆಗ ಕಾಲೂ ದಣಿದಿರುತ್ತದೆ. ತಿರುಗಾಟ, ವ್ಯಾಯಾಮಗಳೇ ಅವನ ಉದ್ದೇಶವಲ್ಲ. ಶಾಂತಆವರಣಕ್ಕಾಗಿ ಹಸಿಯುತ್ತಿದೆ ಅವನ ಮನಸ್ಸು. ಅಂಥೊಂದು ಹಾದಿಯ ಮಗ್ಗುಲು, ವರ್ತುಲ ಬಂತೆಂದರೆ—ಅಲ್ಲಿನ ನೆಲದ ಮೇಲೋ, ಪೀಠಗಳ ಮೇಲೋ ಕುಳಿತುಬಿಡುತ್ತಾನೆ. ಅಂಥ ಹಲವು ದಿನಗಳಂತೆ ಒಂದು ದಿನ ಹೊರಟಿದ್ದಾನೆ. ಕುತುಬ್ ಮಿನಾರಿನ ದಾರಿ ಹಿಡಿದು ನಡೆದು, ದಣಿದು, ಮುಂದುವರಿದ, ವಿಮಾನ ನಿಲ್ದಾಣವನ್ನೂ ಮುಂದುವರಿದು ಸಾಗಿದ. ನಾಗರಿಕರ ಸಂಚಾರ ಕಾಣಿಸದಾಯಿತು. ದೂರದಿಂದ ಬರುತ್ತಿರುವ, ತಿರುಗಿ ಹಳ್ಳಿಗೆ ಮರಳುತ್ತಿರುವ, ಹತ್ತೆಂಟು ಹಳ್ಳಿಯ ಜನಗಳಲ್ಲದೆ ಇನ್ನಾರೂ ಕಾಣಿಸಲಿಲ್ಲ. ಹಾಗೆಂದು ಹಾದಿಯ ಮಗ್ಗುಲಿನ ಕಲ್ಲೊಂದರ ಮೇಲೆ ಹೋಗಿ ಕುಳಿತ.

ಅಲ್ಲಿಂದ ನಾಳಿನ ಕನಸುಗಳನ್ನು ಹೆಣೆಯತೊಡಗಿದ. ಬಟ್ಟಬಯಲಾಗಿತ್ತು ಹೊರಗಿನ ನೆಲ, ಮೇಲಿನ ಬಾನು. ಅಷ್ಟೇ ಬರಿದಾಗಿತ್ತು ಅವನ ಮನಸ್ಸಿನ ತೆರೆ. ಈ ತನಕ ಮುಂದೇನು ಮಾಡಬೇಕು ಎಂದು ಯೋಚಿಸದ ಅವನಿಗೆ "ಮುಂದೇನು" ಎಂಬ ಆದರ್ಶದ ಕನಸು ಈಗ ಥಟ್ಟನೆ ಹೊಳೆಯುತ್ತದೆಯೇ? ಶೂನ್ಯದೃಷ್ಟಿಯಿಂದ ರಸ್ತೆಯನ್ನು ನೋಡುತ್ತ ಕುಳಿತ.

ಹಾದಿ ಸಾಗುವ ಜನರಿದ್ದೂ ಇಲ್ಲದಂತೆ ನಿರುಕಿಸಿದ. ಅವನ ಅದೃಷ್ಟಕ್ಕೆಂಬಂತೆ ಹಳೆಯ ಮೋಟರು ಲಾರಿಯೊಂದು ಆ ಹಾದಿಯಾಗಿ ಸರಿದು ಬಂತು. ಅದರ ವಿಕಟ ಧ್ವನಿ ಅವನನ್ನು ಈ ಧ್ಯಾನದಿಂದ ಎಚ್ಚರಿಸಿತು. ಆತ ಬಂಡಿಯನ್ನು ನೋಡಿದ. ಬಂಡಿಯಲ್ಲಿ ದೆವ್ವನ ಗಾತ್ರದ ವಿದ್ಯುತ್ ತಂತಿಗಳ ಸುರುಳಿಗಳು ತುಂಬಿದ್ದುವು. ಅವೇ ಗಾಲಿಗಳು, ಅವನ ಮನವನ್ನು ಸೆಳೆದುವು. ಬಂಡಿ ಅದೃಶ್ಯವಾಗುವ ತನಕ ನೋಡಿದ. ಅನಂತರವೂ ಚಿತ್ತಭಿತ್ತಿಯಲ್ಲಿ ಈ ವಿದ್ಯುತ್ತಿನ ಸರಿಗೆಯ ಗಾಲಿಗಳು, ಅವನ ಕಣ್ಣಿಗೆ ಅಷ್ಟೇ ಗಾತ್ರದಿಂದ ಕಾಣಿಸತೊಡಗಿದುವು. ಅಲ್ಲಿಂದಲೇ ಸ್ಫುರಿಸಿತು ಒಂದು ಯೋಚನೆ. ವಿದ್ಯುತ್ತಿನ ಆ ಸಂಕೇತ—ತಾನೊಬ್ಬ ವಿದ್ಯುತ್ ಎಂಜನಿಯರನಾದರೇನು—ಇಂದಿನ ಯುಗವೇ ವಿದ್ಯುತ್ ಯುಗ—ಎಂಬ ಆಸೆ ಮೂಡಿಸಿತು. ಅದೊಂದು ಆದರ್ಶವೆಂದು ಅನಿಸದೆ ಹೋದರೂ, ವಿಜ್ಞಾನದ ಮೇಲೆ ಅಭಿಮಾನವಿದ್ದ ಅವನಿಗೆ, ಆ ಶಿಕ್ಷಣ ದೊರಕಿದರೆ ತನ್ನ ಕೈಮನಗಳೆರಡಕ್ಕೂ ತಕ್ಕ ಉದ್ಯೋಗ, ದೊರಕೀತಲ್ಲ—ಎಂಬ ಆಸೆಯಾಯಿತು. ಇನ್ನೊಂದು ಆದರ್ಶ ಕಾಣಿಸದಿರುವಾಗ, ಹಿರಿಯಾಸೆಗಳೆಲ್ಲವೂ ಆ ಎಳೆಯ ಮನವನ್ನು ಕುಲುಕಿಸಿ ತನ್ನದಾಗಿ ಮಾಡಿಕೊಂಡಿರುವಾಗ, ಈ ವಿದ್ಯುದ್ದೇವತೆ ಅವನ ಮನವನ್ನು ಆವರಿಸಿಕೊಂಡುದರಲ್ಲಿ ಆಶ್ಚರ್ಯವೇನಿಲ್ಲ. ಬರಿಯ ಬಿ. ಎ., ಎಂ. ಎ. ಗಳಿಗಿಂತ ಶಾಸ್ತ್ರೀಯ ಶಿಕ್ಷಣ ಲೇಸೆಂಬ ಅಭಿಪ್ರಾಯ ವಿದ್ಯಾರ್ಥಿ ಬಳಗಗಳಲ್ಲಿ ಮೂಡಿರುವ ದಿನಗಳವು. ಒಂದು ಕ್ಷಣದಲ್ಲಿ ಮಿಂಚಿದ ಈ ಆದರ್ಶವೇ ತನ್ನ ಯಾವಜ್ಜೀವದ ಆದರ್ಶವೆಂದು ತರ್ಕಿಸಿ, ಕಾಶೀ ವಿಶ್ವವಿದ್ಯಾಲಯಕ್ಕೊಂದು ಕಾಗದ ಬರೆದು ಹಾಕಿದ. ಎಂಜಿನಿಯರಿಂಗ್ ಕಾಲೇಜಿನ ವಿವರಗಳನ್ನು ತರಿಸಿಕೊಂಡ. ಅನಂತರವೂ ಅದೇ ಒಳಿತೆಂದು ಕಂಡಿತು. ಆದಿತ್ಯವಾರವೊಂದರ ದಿನ ತಂದೆ ಮನೆಯಲ್ಲಿ ವಿರಾಮವಾಗಿರುವ ಅವಕಾಶ ನೋಡಿ, "ನಾನು ಬನಾರಿಸಿಗೆ ಹೋಗಬೇಕೆಂದಿದ್ದೇನೆ. ಇಲೆಕ್ಟ್ರಿಕಲ್ ಎಂಜನಿಯರಿಂಗ್ ಕಲಿಯುವುದಕ್ಕೆ" ಎಂದ. ಸ್ವತಃ ಮಗನ ಭವಿಷ್ಯದ ಸಲುವಾಗಿ ಅವರೇ ಅಷ್ಟು ಯೋಚಿಸಿದವರಲ್ಲ. ಮಗನ ಆಸೆ ಸಲ್ಲದ್ದೆಂದು ಕಾಣಿಸಲಿಲ್ಲ. ಪರೀಕ್ಷಾಫಲ ಬರುತ್ತಲೇ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಿದ. ಯಥಾವಕಾಶವಾಗಿ ಅವನಿಗೆ ಕಾಶಿಯಿಂದ

ಕರೆಯೂ ಬಂದಿತು. ಅಲ್ಲಿಯ ತನಕ ಮಗನನ್ನು ತಂದೆ "ಏನಾಯಿತು, ಬೇರೆ ಏನಾದರೂ ಪ್ರಯತ್ನಮಾಡು" ಎಂದವರಲ್ಲ. ಇವನೂ ಮಾಡಿದವ ನಲ್ಲ. ಆದರೆ ಸುದೈವಕ್ಕೆ ಅಲ್ಲಿಂದ ಕರೆ ಬರುತ್ತಲೇ ಆ ಸುದ್ದಿಯನ್ನು ತಂದೆಗೆ ತಿಳಿಸಿದ. ತಂದೆ ಇವೆಲ್ಲ ಮನೆಗೆಲಸದ ತೀರ್ಮಾನಗಳೆಂಬುದ ರಿಂದ "ಪ್ರತಿಮಾ, ಶಂಕರ ಬನಾರಸಿಗೆ ಎಂಜಿನಿಯರಿಂಗಿಗೆ ಹೋಗಬೇಕೆನ್ನು ತ್ತಾನಲ್ಲ" ಎಂದು ಹೆಂಡತಿಗೆ ತಿಳಿಸಿದರು. ಶಂಕರ ತಾಯೊಡನೆ ತನ್ನ ಈ ಕನಸನ್ನು ತೋಡಿಕೊಂಡೇ ಇರಲಿಲ್ಲ.

ಹಾಗೆಂದು ತಾಯಿ–ಎರಡನೆಯ ವಿಚಾರ ಮಾಡಿದವಳಲ್ಲ. ವಿಟ್ಠಲನ ವಿಚಾರವಾದರೆ ಅವಳು ತುಸು ದೀರ್ಘ ಯೋಚನೆಮಾಡುವವಳು. ಆ ಮಗು ತೀರ ಸಮೀಪ ಇರಬೇಕೆಂಬ ಹವಣಿಕೆಯಿಂದ. ಶಂಕರನ ವಿಷಯದಲ್ಲಿ ಆ ನೆಚ್ಚು, ಮೋಹ ಇರಲಿಲ್ಲ. ಅಲ್ಲದೆ ಮಗ ಆರಿಸಿದ ಭವಿಷ್ಯ–ಅನುಮಾನಕ್ಕೆ ಎಡೆಕೊಡುವಂಥ ದಾರಿಯಲ್ಲ. ಎಂಜಿನಿಯರಿಕೆ ಗುಮಾಸ್ತಿಕೆಯಲ್ಲ; ಹಿರಿಯ ನೌಕರಿ; ಗೌರವದ ನೌಕರಿ. ಆದುದರಿಂದ ಪ್ರತಿಮೆಯೆಂದಳು "ಅವನ ಇಷ್ಟ, ನಿಮ್ಮ ಇಷ್ಟ"—ಎಂದು. ಮನೆಯ ನೂರಾರು ವಿಷಯ ಗಳಲ್ಲಿ ಸುಂದರರಾಯರ ಇಷ್ಟ ಎಂಬುದು ನಿಜವಾಗಿಯೂ ಇರಲಿಲ್ಲ. ಇತ್ತ ಶಂಕರನ ಈ ಇಷ್ಟ, ಆಳವಾದ ಚಿಂತನೆಯ ಫಲದಿಂದ ಉಂಟಾದ ಇಷ್ಟವೂ ಅಲ್ಲ. ಬರಿಯ ಬಾನಿಗೆ ಕೈಚಾಚಿದಾಗ ದೊರೆತ ಹಕ್ಕಿ ಅದು. ಅಂತು ಕಾಲಕೂಡಿ ಬಂದಿತು. ಆತ ಕಾಶೀ ವಿಶ್ವವಿದ್ಯಾನಿಲಯವನ್ನು ಸೇರಿಕೊಂಡ.

ಅಲ್ಲಿನ ಹೊಸ ಆವರಣ ಶಂಕರನಿಗೆ ತೀರ ಪ್ರಿಯವಾಗಿ ಕಾಣಿಸ ದಿದ್ದರೂ, ಸಾಕಷ್ಟು ಹಿತಕರವೆನಿಸಿತು. ವಿದ್ಯಾರ್ಥಿಗಳದೇ ರಾಜ್ಯ. ನಿವಾಸ, ಓದು ಒಂದೇ ಕಡೆ. ಸಮವಯಸ್ಸಿನ ವಿವಿಧ ಪ್ರಾಂತಗಳ ಗೆಳೆಯರಲ್ಲಿ ತನಗೆ ಹೊಂದಿದವರನ್ನು ಕೂಡಿ ಬಾಳಬಹುದಾದ ಆವರಣ. ಸಾಕಷ್ಟು ಓದೂ ಇದೆ; ಅಭಿರುಚಿ ಬೆಳೆಯಿಸುವುದಕ್ಕೆ ಅವಕಾಶವಿದೆ. ಕನಸು ಕಾಣುವುದಕ್ಕೂ ಅನುಕೂಲತೆಯಿದೆ. ಮನೆಗಿಂತ ಈ ಆವರಣ ಅವನ ಪಾಲಿಗೆ ಹೆಚ್ಚಿಗೆ ಒಗ್ಗುತ್ತ ಬಂದಿತು.

ಇಂಥ ಆವರಣದಲ್ಲಿ ನಾಲ್ಕು ವರ್ಷಗಳ ಕಾಲವನ್ನು ಕಳೆಯುವಾಗ ಅವನ ಜೀವನಕ್ಕೆ ಒಂದು ರೂಪವುಂಟಾಯಿತು. ಪ್ರತಿ ವರ್ಷವೂ

ಒಂದೊಂದು ಹೊಸ ಊರಿಗೆ ಹೋಗಿ, ಉದ್ಯೋಗ ಶಾಲೆಗಳನ್ನು ಸೇರಿ, ಅನುಭವ ಪಡೆದು ಬರುವುದರ ಜತೆಗೆ, ಜೀವನದ ಅನುಭವ, ಮಾನವ ಸ್ವಭಾವ ಶೀಲಗಳ ಪರಿಚಿತಿ, ಬಡತನ ಶ್ರೀಮಂತಿಕೆಗಳ ತಾರತಮ್ಯ—ಒಂದೊಂದಾಗಿ ತಿಳಿದು ನಾಳಿನ ವಿಚಾರದ ಕಡೆಗೆ ದೃಷ್ಟಿ ತೀವ್ರವಾಗಿ ಹರಿಯಿತು. ತಾನು ಕೈಕೊಂಡ ಎಂಜಿನಿಯರಿಂಗ್ ಶಿಕ್ಷಣ ಅವನ ಪಾಲಿಗೆ ರುಚಿಕರವಾಗಿಯೇ ಕಾಣಿಸಿತು. ಆದರೆ ತನ್ನ ಬದುಕಿನ ನಾಳಿನ ರೂಪದ ವಿಚಾರದಲ್ಲಿ ಅವನಲ್ಲಿ ದಿನೇ ದಿನೇ ಚಿಂತೆಯೂ ಹೆಚ್ಚುತ್ತ ಬಂದಿತು. ತಾನೊಬ್ಬ ಎಂಜನಿಯರನಾಗಿ ಯಾವುದಾದರೊಂದು ಸಂಸ್ಥೆಯನ್ನು ಸೇರಿ, ದುಡಿದು—ತನ್ನ ಜೀವನ ಸಾಗಿಸಬಲ್ಲೆ ಎಂಬ ಧೈರ್ಯವುಂಟಾಗಿದೆ. ಪ್ರತಿ ವರ್ಷವೂ ರಜೆ ಬಂದಾಗ ದಿಲ್ಲಿಗೆ ಹೋಗಿ ಬರುತ್ತಿದ್ದಾನೆ. ತಂದೆತಾಯಿಯ ರನ್ನು ಕಂಡುಬರುತ್ತಿದ್ದಾನೆ. ಆದರೂ "ದೇಹಲಿ" ತನ್ನದಲ್ಲ ಎಂಬ ಒಂದು ಭಾವನೆ ಎಳೆತನದಿಂದ ಅವನಲ್ಲಿ ಮೂಡಿದೆ. ಅಲ್ಲಿ ತನ್ನ ಭವಿಷ್ಯವನ್ನು ಕಳೆಯಲಾರೆ ಎಂದನಿಸುತ್ತಿತ್ತು. ಇನ್ನೊಂದೂರಿನ ಕಡೆಗೆ ಮನಸ್ಸು ಸ್ಪಷ್ಟವಾದ ಕಲ್ಪನೆ ಪಡೆಯಲಾರದಾಗಿದೆ. ತನ್ನ ಹುಟ್ಟೂರಾದ ಮುಂಬಯಿಯ ಕಹಿ–ಸಿಹಿ ನೆನವರಿಕೆಗಳೆರಡೂ ಬಾರದೆ ಇವೆ.

ಅವನ ವಿದ್ಯಾಭ್ಯಾಸ ಪೂರ್ಣವಾಗುತ್ತ ಬಂದಂತೆ–ಅವನ ವಿದ್ಯಾಭಿ ರುಚಿಯೇನೋ ಬೆಳೆಯಿತು. ಅವುಗಳಿಂದ ಮನಸ್ಸು, ಬಹು ಬಾರಿ ತುಂಬಿ ದಂತೆ ಕಂಡರೂ, ಒಮ್ಮೊಮ್ಮೆ–ಯಾವುದೋ ಕಳೆದುಕೊಂಡ ವಸ್ತುವಿಗಾಗಿ ಹಂಬಲಿಸುವಂತೆ ಆ ಮನಸ್ಸು ಏನನ್ನೋ ಹುಡುಕಾಡುತ್ತಿತ್ತು. ನಾಳೆ ಎಲ್ಲಾದರೊಂದು ಉದ್ಯೋಗ ದೊರಕಿಸಿಯೇನು ಎಂದು ಯೋಚಿಸುವಾಗ ಆ "ಎಲ್ಲಿ" ಎಂಬುದು ಹಿರಿಯ ಆಕೃತಿ ತಾಳುತ್ತಿತ್ತು. ತನಗೊಂದು ಊರು ಬೇಡವೇ, ತನ್ನದೆಂಬುವ ಊರು ಬೇಡವೇ–ಎನಿಸುತ್ತಿತ್ತು. ಅದು ದೇಹಲಿಯಲ್ಲ–ಎಂದು ಮನಸ್ಸು ಒತ್ತಿ ಒತ್ತಿ ಹೇಳುತ್ತಿತ್ತು.

ಕಾಶಿಯ ಹಾಸ್ಟೆಲು ಜೀವನದಲ್ಲಿ ಆತ ಗೆಳೆಯರೊಡನೆ ಹರಟುವಾಗ–ತಾನು ಎಳೆತನದಲ್ಲಿ ಕಲಿತು, ಮುಂದೆ ಮರೆತ, ಮರಾಠಿ ನುಡಿಯನ್ನು ಕೇಳಿ ದಾಗ ಕಿವಿ ನಿಮಿರುತ್ತಿತ್ತು! ತಾನು ಈಗೀಗ ಪಳಗಿರುವ ಹಿಂದೂಸ್ತಾನಿ, ಆಂಗ್ಲ ಭಾಷೆಗಳು ತನ್ನದಲ್ಲ ಅನಿಸುತ್ತಿತ್ತು. ಬಹುದಿನ ತಾಯ್ನುಡಿಯನ್ನು

ಆಡದವನಾದರೂ—ಕಾಶಿಯ ಆವರಣದಲ್ಲಿ, ದೊರೆತ ಕೆಲವು ಮರಾಠಿ ಮಿತ್ರರ ಪರಿಚಿತಿಯಿಂದಾಗಿ "ಅದೆಷ್ಟು ಸುಂದರವಾದ ಭಾಷೆ" ಎನ್ನುತ್ತಿದ್ದ. ಅವನ ನಾಲಿಗೆಯು ಅದನ್ನು ನುಡಿಯಲು ಹವಣಿಸುತ್ತಿತ್ತು. ಅದು ತನಗೆ ಮರವೆಯಾಗಿಲ್ಲ ಎಂಬ ಎಚ್ಚರ ಹುಟ್ಟಿಸಿ, ಆ ನುಡಿಯ ಮೇಲಿನ ಮೋಹ ಹೆಚ್ಚಿಸುತ್ತಿತ್ತು. ನುಡಿಯ ಜತೆಗೆ ಒಮ್ಮೊಮ್ಮೆ ನಾಡಿನ ಮೋಹ ಉದಯಿಸುತ್ತದೆ. ತನ್ನ ಹುಟ್ಟೂರು ಮುಂಬಯಿ–ಎಂದು ನೆನವರಿಕೆಯಾಗುತ್ತದೆ. ತಾವು ಉತ್ತರ ಹಿಂದುಸ್ಥಾನಕ್ಕೆ ಬಂದ ಮುಸಾಫಿರರು; ನೆಲೆಯಿಲ್ಲದ ಜನರು ಎಂದು ಅನಿಸುತ್ತದೆ. ಅಲ್ಲಿಂದಲೂ ಪುನಃ ಮುಂದಕ್ಕೆ ಹರಿಯಿತೆಂದರೆ—ತಾವು ಮುಂಬಯಿಗೂ ಪರದೇಶಿಗಳಾಗಿ ಬಂದವರಲ್ಲವೆ! ತಮ್ಮ ಪೂರ್ವಜರ ಊರು ಯಾವುದೋ ಇದೆಯಲ್ಲ. ತನಗೇಕೆ ಅದರ ಸ್ಮರಣೆಯಾಗಲೊಲ್ಲದು. ಮೋಹ ಕಾಣಿಸಲೊಲ್ಲದು. ನೆಲ, ನುಡಿಗಳೆರಡೂ ತನ್ನ ಜೀವನದಲ್ಲಿ ಶಕ್ತಿಯನ್ನೇ ಕೇಳಲಾರದ ಅಭಿಮಾನಶೂನ್ಯಸ್ಥಿತಿಗೆ ತಾನು ಇಳಿದೆನಲ್ಲ—ಎಂದೆನಿಸುತ್ತದೆ.

ನುಡಿಯ ಮಮತೆ ಉಕ್ಕಿಬಂದು, ತನ್ನ ಸ್ನೇಹಿತರಿಂದ ಮರಾಠಿ ಕತೆ, ಕಾದಂಬರಿಗಳನ್ನು ಕೊಂಡು, ಓದುವ ಹವ್ಯಾಸಕ್ಕೂ ಅವನನ್ನು ತಳ್ಳಿತು. ಅವುಗಳಲ್ಲಿನ ಬಣ್ಣನೆಗಳಿಂದ ಮಹಾರಾಷ್ಟ್ರ ಸುಂದರವಾದ ನಾಡೆಂದು ಅನಿಸಿತು. ಅದು ತನ್ನ ನಾಡಾಗಿದ್ದರೆಷ್ಟು ಚೆನ್ನ—ಎಂದೂ ಅನಿಸಿತು. ಇವುಗಳಿಂದಾಗಿ—ನೌಕರಿಯನ್ನು ಬೆನ್ನಟ್ಟಿಕೊಂಡು, ಊರಿಂದ ಊರಿಗೆ ಅಲೆಯುವ ಜೀವನ ಸೊಗಸಲ್ಲ ಎಂಬ ಅಭಿಪ್ರಾಯವೂ ಮೂಡಿಕೊಂಡಿತು. ಮನುಷ್ಯನಿಗೆ ತನ್ನ ಊರು, ತನ್ನ ನುಡಿ, ತನ್ನ ಮನೆಯೆಂಬ ಹಿಗ್ಗು ಬೇಡವೇ ಎಂದನಿಸುತ್ತಿತ್ತು. ಆ ಆಸೆಯೊಂದಿಗೆ ತನ್ನ ಈಗಣ ಪಾಡನ್ನು ಹೋಲಿಸಿ ನೋಡುತ್ತಾನೆ—ತಮಗೊಂದು ಊರೆಂಬುದಿಲ್ಲ, ಅದು ಹಿಂದೆ ಯಾವುದೋ ತಾನು ತಿಳಿಯದ ನಾಡಾಗಿತ್ತು. ತಾನು ಹುಟ್ಟಿದಾಗ ಮುಂಬಯಿಯಾಗಿತ್ತು; ಬೆಳೆಯುವಾಗ–ದೆಹಲಿಯಾಗಿದೆ. ಇನ್ನು–ತಂದೆ ಉದ್ಯೋಗದಿಂದ ನಿವೃತ್ತಿ ಹೊಂದಿದ ಬಳಿಕ ಇನ್ನೇನು ಊರನ್ನು ಸೇರಬೇಕೋ! ಮನೆಯ ಮಾತು ಇದೇ ಬಗೆಯಲ್ಲಿ ಪರದೇಶಿಯಾಯಿತು. ಮನೆಯ ತುಣುಕಾದರೂ ತಮ್ಮದೇ! ದೊಡ್ಡಮನೆಯೇ ಆಗಿರಲಿ—ಅದು

ತಮ್ಮದೆಂಬ ಹೆಮ್ಮೆ, ಆ ಬಾಡಿಗೆಯ ಗೂಡಿನ ವಿಷಯವಾಗಿ ಉಂಟಾದೀತೇ—ಎಂದೆನಿಸತೊಡಗಿತು.

ದೊಡ್ಡ ಕಣ್ಣಿಂದ 'ಹಿಂದೂಸ್ಥಾನವೆಲ್ಲ ತಮ್ಮದು' ಎಂಬ ಹೆಮ್ಮೆ ಕೊಚ್ಚಬಹುದಾದರೂ, ಯಾವುದನ್ನು ಮುಟ್ಟಿದರೂ 'ತನ್ನದಲ್ಲ' ಎಂದು ತೋರುವ ವ್ಯಕ್ತಿಯಲ್ಲಿ, ದೇಶ ಪ್ರೇಮದ ಹೆಮ್ಮೆಯೆಲ್ಲಿಂದ ಬಂದೀತು? ಅವನ ಇಂಥ ಪ್ರಮುಖ ಬಾಯಾರಿಕೆಗೆ—ಮುಂದಿನ ಆಸೆಯೇ ಉತ್ತರವಾಗುತ್ತ ಬಂದಿತು—ಅವನ ವ್ಯಾಸಂಗ ಮುಗಿಯಿತು. ತಾನು ತನ್ನದೇ ಆದ ಊರನ್ನು ಕಂಡುಕೊಂಡೇನು, ಮನೆಮಾರು ಕೊಂಡೇನು—ಎನಿಸಿತು. ಆದರೆ ತನ್ನ ಉದ್ಯೋಗ ಅದನ್ನು ಮಾಡಲು ಎಡೆಕೊಟ್ಟೀತೇ—ಎಂದು ಯೋಚಿಸಿದರೆ ಸಂದೇಹವೂ ಅದರ ಜತೆಗೆ ಸೇರಿಕೊಳ್ಳುತ್ತದೆ.

ತೀರ ನಿ ರಾ ಶೆ ಯಾ ದಾ ಗ ಅಂದುಕೊಳ್ಳುತ್ತಾನೆ—ಏನಾದರೇನು? ನಾಲ್ಕು ವರ್ಷಕಾಲ ಎಲ್ಲಾದರೂ ದುಡಿಯುತ್ತೇನೆ. ಕೈಯಲ್ಲಿಷ್ಟು ಕಾಸು ಸಂಪಾದಿಸಿಕೊಂಡು ಒಂದು ತುಣುಕು ನೆಲ ಗಳಿಸಿ, ಪುಟ್ಟ ಗೂಡೊಂದನ್ನು ಕಟ್ಟಿ, ಹಕ್ಕಿಯಂತೆ ಸುಖವಾಗಿ ಬಾಳುತ್ತೇನೆ. ಅದಕ್ಕೆಷ್ಟು ಸಮಯ ಹಿಡಿದೀತು–ಅಷ್ಟು ಹಣ ಕೈಯಲ್ಲಿ ಕೂಡಲು–ಎಂದರೆ ತಿರುಗಿ ನಿರಾಶೆಯೇ.

ಅಲ್ಲಿಯತನಕ—ಎಂಜಿನಿಯರನಾದ, ತಾನು ಗುಡ್ಡಗಾಡುಗಳಲ್ಲಿರಬೇಕಾದೀತು! ಜಲಪಾತಗಳಿರುವಲ್ಲಿ, ಅವಾದರೂ ಸುಂದರ ತಾವುಗಳು. ಬದಲು ದಿನನಿತ್ಯ ಕಲ್ಲಿದ್ದಲಿನ ಹೊಗೆಯನ್ನು ಕಕ್ಕುವ ಉಗಿ ಟರ್ಬೈನುಗಳ ಬೆನ್ನಿಗೆ ಅಂಟಬಾಳಬೇಕಾದರೆ—ಆ ಸೊಗವೂ ಕಾಣಸಿಗದು. ನೌಕರಿಯೆಂದ ಮೇಲೆ, ಯಾರ್ಯಾರ ಇಚ್ಛೆಯಂತೆ—ಕಾಲ್ಚೆಂಡಾಗಿ ಊರಿಂದೂರಿಗೆ ಅಲೆಯಬೇಕಾದೀತು! ಎಂಜಿನಿಯರನೆಂಬ ಹೆಮ್ಮೆಯನ್ನು ನಾಡಗುಡಿಯಿಲ್ಲದ ಪರದೇಶಿ—ಎಂಬ ವ್ಯಥೆ ನುಂಗಿಬಿಡುತ್ತದೆ ಕ್ಷಣದಲ್ಲಿ. ಆದರೂ ಮನದಲ್ಲಿ ಉತ್ಕಟವಾದ ಹಂಬಲ ಉಂಟಾಗುತ್ತದೆ—ಎಲ್ಲಾದರೊಂದು ದಿನ, ಎಲ್ಲಾದರೊಂದು ಕಡೆ ನೆಲದ ಮಗುವಾಗಿ ತಾನು ಬಾಳಬೇಕೆಂದು.

ಕಾಶಿಯಲ್ಲಿ ಕಳೆದ ಅವನ ವೇಳೆಗಳಲ್ಲಿ ಈ ಸುಂದರ ಕನಸುಗಳನ್ನಾದರೂ ಕಾಣಲು ಶಕ್ಯವಿದೆ. ಅವನ ಮನಕ್ಕೆ ಅವನದೇ ಅಂಕೆ. ಆದರೆ ರಜೆಗೆ ಊರಿಗೆ ಬಂದರೆ, ತಂದೆ ತಾಯರನ್ನು ಕಾಣಲು ಬಂದರೆ, ಹೊರ

ಗಿಂದ ತಡೆ ಹಾಕುವವರಿಲ್ಲದೆ ಹೋದರೂ ಅವನ ಮನಸ್ಸು ಕನಸನ್ನು ಕಾಣಲಾರದಷ್ಟು ಸೆರೆಮನೆಯಾಗುತ್ತದೆ. "ಮನೆ" ಯು ತನ್ನ ಪರದೇಶಿತನದ ಲಾಂಛನವೆನಿಸುತ್ತದೆ. ಊಟಕ್ಕೆ, ಉಪಹಾರಕ್ಕೆ, ನಿದ್ರೆಗೆ— ಮಾತ್ರ ಮನೆಯಲ್ಲಿ ಕುಳಿತಿರುತ್ತಾನೆ. ಉಳಿದ ವೇಳೆಗಳಲ್ಲಿ ಕನಸುಗಳನ್ನು ಹೊತ್ತೋ, ದಿಙ್ಮೂಢನಾಗಿಯೋ ನವದೇಹಲಿಯ ವಿಸ್ತರಣಗಳಲ್ಲಿ, ಕಾಲುದಾರಿಗಳಲ್ಲಿ, ರಾಜಮಾರ್ಗಗಳಲ್ಲಿ ಅಲೆದಾಡುತ್ತಾನೆ. ದಿನದಿನ ಬೆಳೆಯುತ್ತಿದೆ—ಆ ನಗರ. ವಿಸ್ತರಣಗಳು ಇನ್ನೂ ವಿಸ್ತರಿಸಿ, ಜನಸಂದಣಿ ಕಾಣಿಸದಿರಬೇಕಾದರೆ ಮತ್ತೂ ಮತ್ತೂ ದೂರ ನಡೆದುಹೋಗಬೇಕಾಗುತ್ತದೆ.

ಹಾಗೆಂದು ಜನರನ್ನೇ ಕಾಣದತಾವನ್ನರಸಿ, ಒಂಟಿಯಾಗಿಯೂ ಕುಳಿತಿರಲಾರ; ಒಂದು ಬಗೆಯ ಭೀತಿ. ಹಾಗೆಂದು ತೀರ ದೂರಹೋಗಿ, ಜನರು ಕೆಲವರೇ ಕಾಣಿಸುವ ರಸ್ತೆಯ ಮಗ್ಗುಲಲ್ಲೋ, ವರ್ತುಲಗಳಲ್ಲೋ ಕೈಯಲ್ಲೇನಾದರೂ ಹಿಡಿದುಕೊಂಡು ಕುಳಿತಿರುತ್ತಾನೆ. ತುಸುಹೊತ್ತು, ಹಾದಿಸಾಗುವವರನ್ನು ಕಂಡೂ ಕಾಣದವರಂತೆ ನೋಡುತ್ತ, ಕುಳಿತು ಅನಂತರ ಕೈಯ ಪುಸ್ತಕ ಬಿಡಿಸುತ್ತಾನೆ. ಜ್ಞಾನದ ಹಸಿವೂ ಬೆಳೆದು ಬಂದಿದೆ ಅವನಲ್ಲಿ. ಅದಕ್ಕಾಗಿ ಗ್ರಂಥಗಳ ಪಠನ. ಭಾವನೆಯ ಹಸಿವೆಗೆ ಇನ್ನೂ ಮದ್ದನ್ನು ದೊರಕಿಸಿಕೊಂಡವನಲ್ಲ. ಅದನ್ನು ನೆನೆದೇ ಮಂಕುಗೊಳ್ಳುತ್ತಾನೆ.

ಈಗ ಅವನ ಓದು ಮುಗಿದಿದೆ. ಬರಿಯ ಒಂದು ಎಪ್ರೆಂಟಿಸ್ ತನದ ಕಾಲ ಮುಗಿಯಿತೆಂದರೆ ಓದಿನ ನಿರ್ಬಂಧವಿಲ್ಲ. ಇಂದು ಬಂದವ, ದೇಹಲಿಯಲ್ಲಿ ಕುಳಿತುಕೊಂಡು ಕಾಶಿಯಲ್ಲಿ ಸಹಪಾಠಿಯಾಗಿದ್ದ, ಒಬ್ಬ ಗೆಳೆಯನ ನಿರೀಕ್ಷೆಯಿಂದ ಕಾದು ಕುಳಿತಿದ್ದಾನೆ. ಈ ಒಂದೆರಡು ವರ್ಷಗಳಲ್ಲಿ-ಅವನ ಆಸೆ ಅಂತರಂಗಗಳನ್ನು ಆತ ಚರ್ಚಿಸಿದ್ದೇನಾದರೂ ಇದ್ದರೆ ಅದು ಈ ಗೆಳೆಯನಲ್ಲಿ. ಇಬ್ಬರೂ ಜತೆಸೇರಿ ಶಿವಸಮುದ್ರದ ವಿದ್ಯುತ್ ಕೇಂದ್ರಕ್ಕೆ ಹೋಗಿ ತಮ್ಮ ವ್ಯಾಸಂಗದ ಕೊನೆಯ ಹಂತವನ್ನು ಮುಗಿಸಲು ನಿರ್ಧರಿಸಿದ್ದಾರೆ, ಸೀತಾರಾಮ ಆತನ ಸಹಪಾಠಿ. ಇವನದೇ ವಯಸ್ಸು. ಜೀವನದ ಸಾಮಾನ್ಯ ವಿಚಾರಗಳಲ್ಲಿ ಹೆಚ್ಚು ಕಡಮೆ ಒಂದೇ ಆದ ಅಭಿಪ್ರಾಯವುಳ್ಳವರು. ಹಿಂದೆ ಎರಡು ಮೂರಾವರ್ಷಿಯೂ ಎಪ್ರೆಂಟಿಸ್ ಆಗಿ ಜತೆ

ಯಲ್ಲಿ ಹೋದವರು. ಈ ಬಾರಿಯೂ ಅವನ ಜತೆಯಲ್ಲಿ ಶಿವಸಮುದ್ರಕ್ಕೆ ಹೋಗಿ, ಅಲ್ಲಿನ ವಿದ್ಯುತ್‌ಕೇಂದ್ರದಲ್ಲಿ ಅಭ್ಯಾಸಮಾಡಬೇಕು ಎಂಬ ಬಯಕೆಯನ್ನಿರಿಸಿಕೊಂಡಿದ್ದರು. ಈ ತನಕ ಅವರು ಓಡಾಡಿದುದೆಲ್ಲ ಉತ್ತರ ಹಿಂದೂಸ್ಥಾನದ ಕೆಲವೊಂದು ಉದ್ಯಮಕೇಂದ್ರಗಳಲ್ಲಿ. ಸೀತಾರಾಮ ಆರಿಸಿದ ಈ ಕೇಂದ್ರವು ಅವನ ಊರಿಗೆ ಸಮೀಪವಾದುದು. ನಾಳೆ ದಿನ ತನ್ನ ಜೀವನ ದಕ್ಷಿಣಹಿಂದೂಸ್ಥಾನದಲ್ಲಿ ಕಳೆಯಬಹುದು—ಎಂಬ ಆಸೆಯಿಂದ. ಅವನ ಊರು ದಕ್ಷಿಣಕನ್ನಡ ಜಿಲ್ಲೆಯ ಒಂದು ಹಳ್ಳಿ. ಸಹ್ಯಾದ್ರಿಯ ಸೆರಗಿಗೆ ಸಮೀಪವಾಗಿ ಮಲೆನಾಡಿನ ಬೆಟ್ಟಗುಡ್ಡಗಳ ಬೆಡಗನ್ನು ಬೇನೆ ಬವಣೆಗಳ ಕೊರಗನ್ನು ಅನುಭವಿಸುತ್ತಿರುವ 'ಮುದ್ರಾಡಿ' ಎಂಬ ಹಳ್ಳಿ. ಹೀಗಾಗಿ ಬೆಂಗಳೂರು, ಮೈಸೂರು, ಶಿವಸಮುದ್ರಗಳು ಅವನಿಗೆ ನೆರೆಮನೆ. ತನ್ನ ಗೆಳೆಯ ಶಂಕರ ಆ ಊರುಗಳನ್ನೂ, ತನ್ನ ಊರಾದ ಮುದ್ರಾಡಿಯನ್ನೂ ನೋಡಬೇಕೆಂಬ ಹಂಬಲವೂ ಸೇರಿತ್ತು. "ಶಂಕರ, ಶಿವಸಮುದ್ರದಲ್ಲಿ ನಮ್ಮ ಅಭ್ಯಾಸ ಮುಗಿದಮೇಲೆ ನಿನ್ನನ್ನು ನಮ್ಮ ಜಿಲ್ಲೆಗೆ ಕರೆದುಕೊಂಡು ಹೋಗಬೇಕೆಂಬ ಆಸೆ ನನ್ನದು. ಈ ನಾಲ್ಕು ವರ್ಷಕಾಲ ಅಣ್ಣ–ತಮ್ಮಂದಿರಂತೆ ಕೂಡಿ, ಆಡಿ, ನಲಿದದ್ದು ನಿಜ. ನಾಳೆ ದಿನ ನೌಕರಿ ದೊರಕಿಸಿಕೊಂಡೆವಾದರೆ ನಾನೆಲ್ಲೊ, ನೀನೆಲ್ಲೊ. ಕಟ್ಟಕೊನೆಯ ಸಹವಾಸದ ಈ ದಿನಗಳನ್ನು ಸವಿನೆನಪಿನಿಂದ ಕಳೆಯಬೇಕೆಂಬುದು ನನ್ನ ಅಪೇಕ್ಷೆ. ಅಲ್ಲದೆ ನೋಡು—ದೇಹಲಿ, ಕಾಶಿಗಳಲ್ಲಿ, ಓಡಾಡಿದ ನಿನಗೆ ನನ್ನೂರು ಎಷ್ಟು ಸುಂದರವಾದುದೆಂಬ ಕಲ್ಪನೆಯಾಗದು. ನಮ್ಮ ಮನೆಗೆ ನಾಲ್ಕೆಂಟು ಮೈಲು ದೂರದಲ್ಲಿಯು ಪಶ್ಚಿಮ ಘಟ್ಟದ ಗೋಡೆ ಇದೆ. ಅಲ್ಲಿಂದ ಕೆಳಕ್ಕೆ ಧುಮುಕುವ ಬೆಟ್ಟ ಝರಿಗಳು ಒಂದೆರಡಲ್ಲ. ಕವಿಯ ಪಾಲಿಗೂ ಅದು ಸ್ವರ್ಗ. ಅಷ್ಟೆಲ್ಲ ಏಕೆ ? ನಮ್ಮ ಮನೆಗೆ ಮೂರು ಹರದಾರಿಯ ಒಳಗಾಗಿ ಸುಂದರವಾದುದೊಂದು ಜಲಪಾತವಿದೆ. ಅಲ್ಲಿಂದ ನೂರು ಮೈಲಿನೊಳಗೆ ನಮ್ಮ ದೇಶದಲ್ಲಿಯೇ ಹೆಸರಾದ ಗೆರಸೊಪ್ಪೆ ಜಲಪಾತವಿದೆ. ಅವನ್ನೆಲ್ಲ ನಿನಗೆ ತೋರಿಸಬೇಕೆಂಬುದು ನನ್ನ ಆಸೆ" ಎಂದು ತನ್ನ ಗೆಳೆಯನಿಗೆ ತನ್ನೂರಿನ ಸೌಂದರ್ಯ ಬಣ್ಣಿಸಿದಾನೆ. ಅವನಲ್ಲಿ ಅದನ್ನು ಕಾಣಬೇಕೆಂಬ ಹಂಬಲ ಮೂಡಿಸಿದ್ದಾನೆ.

ಇನ್ನೊಮ್ಮೆ ಸೀತಾರಾಮನ ಹೆಸರಿಗೆ ಅಂಟಿದ ಮುದ್ರಾಡಿ ಎಂಬ ನಾಮಕರಣವು, ಶಂಕರನ ಕುತೂಹಲವನ್ನು ಬಲುವಾಗಿ ಕೆರಳಿಸಿತು. "ಮುದ್ರಾಡಿ ಎಂಬುದೇನಯ್ಯ ?" ಎಂದು ಕೇಳಿದ್ದಕ್ಕೆ "ಅದು ನಮ್ಮ ಹಳ್ಳಿಯ ಹೆಸರು. ಈಗಿನ ಫೇಶನಿನಂತೆ ರಾವ್, ಗೀವ್–ಎಂಬ ಮೇಲು ಹೆಸರುಗಳನ್ನು ಹಾಕಿಕೊಳ್ಳದೆ ಊರಿನ ಹೆಸರು ಹಾಕಿಕೊಂಡಿದ್ದೇನೆ" ಎನ್ನುತ್ತ ಸೀತಾರಾಮ ತನ್ನ ಹಳ್ಳಿಯ ಪ್ರಕೃತಿ ಸೌಂದರ್ಯವನ್ನು ಅವನ ಮುಂದೆ ಬಾಯಿತುಂಬ ಬಣ್ಣಿಸಿದ. ಮಾತಿಗೆ ಮಾತು ಬಂದು ; ಸೀತಾರಾಮನೆಂದ "ಅಲ್ಲವೆ ಶಂಕರ್, ನೀನು ಬರಿದೆ 'ಶಂಕರ್' ಎಂದು ಹಾಕಿಕೊಳ್ಳುತ್ತೀಯಾ. ಮಹಾರಾಷ್ಟ್ರದವನಲ್ಲವೇ ನೀನು ? ಮಹಾರಾಷ್ಟ್ರದಲ್ಲಿ ಗೋಖಲೆ ದಾಮಲೆ, ಬಖಲೆ ಎಂಬಂಥ ಅಡ್ಡಹೆಸರುಗಳಿರುತ್ತವೆ. ನಿನಗೆ ಅಂಥ ಬಿರುದೇನಿಲ್ಲವೇ ?" ಎನ್ನುತ್ತಲೇ ಶಂಕರ ನಕ್ಕ.

"ನನ್ನ ತಂದೆ 'ರಾವ್' ಎಂದು ಹಾಕಿಕೊಳ್ಳುತ್ತಾರೆ. ನಮ್ಮೂರು ಯಾವುದೊ, ನನಗೆ ಗೊತ್ತಿಲ್ಲ. ನನ್ನ ತಾಯಿ ಮಾತ್ರ ಮಹಾರಾಷ್ಟ್ರದಲ್ಲಿ ಹುಟ್ಟಿದವಳು. ತಂದೆಯ ಊರು ಬೇರೆಯೆ. ಅವರು ಹುಟ್ಟಿದ್ದು ಮುಂಬಯಿಯಲ್ಲಾದರೂ ಅವರಿಗೆ ಹಿರಿಯರ ಊರು ಮುಂಬಯಿ ಅಲ್ಲ. ಇನ್ನೆಲ್ಲೋ ಅಂತೆ"

"ಬಿ. ಶಂಕರ್ ಎಂದು ಹಾಕುತ್ತೀಯಾ ? 'ಬಿ' ಎಂಬುದೇನು ?"

"ತಂದೆ ಹಾಗೆ ಬಳಸುತ್ತಿದ್ದಾರೆ. ನಾನೂ ಬಳಸುತ್ತಿದ್ದೇನೆ. ನಾನು ಬಹುದಿನ 'ಬಿ' ಎಂಬುದು ಬೊಂಬಾಯಿಯ ಪ್ರಥಮಾಕ್ಷರ ಎಂದು ತಿಳಿದಿದ್ದೆ. ನಾನು ಅದೇನೆಂಬ ಗೊಂದಲಕ್ಕೇ ಹೋಗಿರಲಿಲ್ಲ. ಬಲು ಹಿಂದೊಮ್ಮೆ ನಮ್ಮ ಅಪ್ಪನಿಗೆ ಬಂದ ಕಾಗದವೊಂದನ್ನು ಕುತೂಹಲದಿಂದ ತೆಗೆದು ಓದಿದೆ. 'Dear Mr. Bangadi' ಎಂದಿತ್ತು ಅದರಲ್ಲಿ. ಯಾರ ಕಾಗದವೋ ಎಂಬ ಅನುಮಾನವಾಯಿತು. ಲಕೋಟೆಯನ್ನು ತೆಗೆದು ನೋಡಿದೆ ಅದು ತಂದೆಯನ್ನೇ ಉದ್ದೇಶಿಸಿ ಬರೆದದ್ದು. ವಿಳಾಸವೂ ಸಮನಾಗಿತ್ತು. ಆಗ ತಂದೆಯನ್ನು ಕೇಳಿದೆ, ಈ ಬಂಗಾಡಿ ಎಂಬುದೇನೆಂದು. ಅವರೆಂದರು- ಅವರ ತಂದೆಯೋ ಅಜ್ಜನೋ ಹುಟ್ಟಿ ಬೆಳೆದ ಊರಿನ ಹೆಸರಂತೆ ಅದು. ಅಷ್ಟಕ್ಕೆ ಆ ಸಂಗತಿಯನ್ನು ಮರೆತುಬಿಟ್ಟೆ. ನಿಜವನ್ನು ಹೇಳುವುದಾದರೆ

ನನಗೆ ಬಹುದಿನಗಳಿಂದ ಒಂದು ನೋವು ಬಂದಿದೆ. ಊರೇ ಇಲ್ಲದ ಪರದೇಶಿಯಂತಿದ್ದೇನಲ್ಲ ನಾನು! ದೇಹಲಿ ನನ್ನೂರಾಗಬಲ್ಲುದೇ. ಇಲ್ಲವೆ ಕಾಶಿ ಆಗಬಲ್ಲುದೇ, ಮುಂಬಯಿ ಆಗಬಲ್ಲುದೇ ಎಂಬ ಅನುಮಾನ ಉಂಟಾಗುತ್ತದೆ. ನಿನ್ನಲ್ಲಿ ಊರಿನ ಒಂದು ಮೋಹ ಕಾಣುತ್ತೇನೆ. ಅನೇಕರಲ್ಲಿ ಕಾಣುತ್ತೇನೆ. ನನಗೂ ನನ್ನದೊಂದು ಊರು ಇರಲಾರದೇ—ಎಂಬ ಆಸೆಯಾದರೂ, ದೇಹಲಿ ಅದಲ್ಲ ಎನ್ನುತ್ತದೆ ಮನಸ್ಸು."

"ನೋಡು ನಮ್ಮ ಜಿಲ್ಲೆಯಲ್ಲಿಯೂ ಅಂಥ ಒಂದು ಹಳ್ಳಿ ಇರಬೇಕು. ಎಲ್ಲಿ, ಏನು, ಎಂಬುದು ತಿಳಿಯದು. ಆದರೆ 'ಬಂಗಾಡಿ' ಎಂಬ ಹೆಸರು ಪರಿಚಿತ. ಬಂಗರೆಂಬ ಜೈನಅರಸುಗಳು ನಮ್ಮ ಜಿಲ್ಲೆಯಲ್ಲಿ ಆಳಿದ ಕಾಲವೊಂದಿತ್ತು. ಆದರಿಂದ ಆ ಹೆಸರು ಬಂದಿತೋ ಏನೋ. ಆ ಹೆಸರು ನನ್ನ ಹಳ್ಳಿಯ ಸಮೀಪವೇ ಇರುವ-ಜನ್ನಾಡಿ, ಹಾಲಾಡಿ, ಹಾರಾಡಿ—ಎಂಬ ಹಲವಾರು ಹೆಸರುಗಳಂತಿದೆ. ಅದರಂತೆ ಇದೂ ಒಂದಿರಬೇಕು. ಇದ್ದರೆ ಎಷ್ಟು ಚೆನ್ನ! ಹಾಗಿದ್ದರಂತು ನಮ್ಮ ಜಿಲ್ಲೆಯನ್ನು ನೋಡಿ ನಿನಗೆ ಹುಚ್ಚೇ ಹಿಡಿದೀತು."

ಈ ಸಂಭಾಷಣೆ ನಡೆದದ್ದು ಅವರಿಬ್ಬರೂ ಒಂದು ದಿನ ಸಂಜೆ ಊರ ಹೊರಗಿನ ಬಯಲಿಗೆ ಸಂಚಾರಕ್ಕೆ ಹೊರಟ ದಿನ. ಇಬ್ಬರೂ ಗಂಗೆಯ ತಡಿಗೆ ಹೊರಟಿದ್ದರು. ಜತೆಯಲ್ಲಿ ನಡೆದು, ಆಚೀಚಿನ ಪೈರು ತುಂಬಿದ ಯವ ಗೋಧಿಯ ಹೊಲಗಳನ್ನು ನೋಡುತ್ತ, ನದಿಯ ದಂಡೆಯ ಮೇಲೆ ಹೋಗಿ ಕುಳಿತರು. ನದಿಯ ನೀರಂತೆ ಇಬ್ಬರ ಮನಸ್ಸೂ ಶಾಂತವಾಗಿ ಉಲ್ಲಾಸಕರವಾಗಿ ಹರಿಯುತ್ತಲಿತ್ತು. ಸೀತಾರಾಮನ ಊಹೆಯನ್ನು ಕೆರಳಿದ ಅವೊಂದು ಮಾತು, ಶಂಕರನ ಮನಸ್ಸಿನಲ್ಲಿ ಹಿರಿಯ ಒಂದು ಆಸೆಯನ್ನೇ ಹುಟ್ಟಿಸಿದ ಹಾಗೆ ಕಾಣುತ್ತದೆ. 'ತನಗೂ ಒಂದು ಹುಟ್ಟೂರಿದೆ. ತನ್ನ ಹಿರಿಯರು ಹುಟ್ಟಿಬೆಳೆದು, ನಲಿದು ಮಣ್ಣುಗೂಡಿದ ತಾವು. ತನ್ನದು ಎಂದು ಹೆಮ್ಮೆಪಡಬಹುದಾದ ತಾವು. ತನ್ನ ಕುಲಕ್ಕೆ ರಕ್ತ ಮಾಂಸಗಳ ಅಸ್ತಿತ್ವವನ್ನು ತಂದುಕೊಟ್ಟು, ಕಾಳು ಕಡ್ಡಿಯಿಂದ ಪೋಷಿಸಿ ಬಣ್ಣದ ಬೆಡಗುಗಳಿಂದ ರಂಜಿಸಿ ಜೀವನವನ್ನು ಅರಳಿಸಿ, ಬದುಕನ್ನು ಬೆಳಗಿಸಿದ ಊರು. ಅದು ದಿಲ್ಲಿ ಮುಂಬಯಿಗಳ ಬಾಡಿಗೆ ಮನೆಯಾಗಿರಲಾರದು,

ಅದಾವುದೆಂದು ತಾನು ತಿಳಿಯಬೇಕು. ಸಾಧ್ಯವಾದರೆ ಅದನ್ನು ನಾನು ಕಾಣಲೇಬೇಕು. ಒಂದು ದಿನವಾದರೂ ಆ ನೆಲದಲ್ಲಿ ನಲಿದಾಡಬೇಕು. ಹಿರಿಯರ ಸ್ಮರಣೆಯಾದರೂ ತನ್ನ ಜೀವನದಲ್ಲಿ ಸ್ಫುರಿಸುವಂತೆ ಮಾಡಬೇಕು. ಆ ಹಳ್ಳಿ ಎಂಥದೇ ಇರಲಿ. ಅದು ನನ್ನದು. ಗೆಳೆಯನ ಮುದ್ರಾಡಿಯಂತೆ ಅದು ಸುಂದರ ಸೀಮೆಯಾದರೆ ಲೇಸೇ ಆಯಿತು. ಬದಲು ಅದು ಬೆಂಗಾಡಾಗಿದ್ದರೂ ತನ್ನವರನ್ನು ಹುಟ್ಟಿಸಿ ತನ್ನ ಮಡಿಲೊಳಗೆ ಹಾಕಿಕೊಂಡ ಆ ನೆಲವನ್ನು ತಾನು ಕಾಣಬೇಕು ' ಎಂಬ ಆಸೆ ಉದಯಿಸಿತು ಮನಸ್ಸಿನಲ್ಲಿ.

ವಿರಾಮದ ಹರಟೆಯಲ್ಲಿ ಹುಟ್ಟಿದ ಈ ಆಸೆಯು ಗಿಡ ತರುಣ ಶಂಕರನ ಮನಸ್ಸಿನಲ್ಲಿ ಭಾವಾವೇಶದ ಅಮಲನ್ನುಂಡು ಬೆಳೆಯಿತು. ಸಂಶೋಧಕರಂತೆ ತನ್ನ ಕುಲವೃಕ್ಷವನ್ನು ಹುಡುಕಿ ನೋಡುವ ಚಪಲವಾಯಿತು. ಆದರೆ ಈ ಆಸೆಯಲ್ಲಿ ತಾಳಮೇಳವಿಲ್ಲದೆ ಕಾಣಿಸಿದ ಭಾಗವೊಂದೇ, ಸೀತಾರಾಮು ಕನ್ನಡಜಿಲ್ಲೆಯವ, ಕನ್ನಡ ಆಡುತ್ತಿದ್ದಾನೆ. ಬೇರೆ ಒಂದು ನುಡಿಯೂ ಬರುತ್ತದೆ. ತನ್ನ ತಾಯ್ನುಡಿ ಮರಾಠಿಯಾಗಿದೆ. ಹಿರಿಯರ ನುಡಿಯೂ ಅದೇ ಇದ್ದಿರಬಹುದೇ ? ತನ್ನ ನಾಡಿನ ಮಮತೆಗೂ ನುಡಿಯ ಒಲುಮೆಗೂ ಹೊಂದಿಕೆ ಬಂದೀತೆ ? ಎಂಬ ಅನುಮಾನ. ಆದರೆ ಮನಸ್ಸನ್ನು ಕದಲಿಸುವಂಥ ಪ್ರಶ್ನೆಗಳೇನಲ್ಲ. ಕನಸುಗಳಲ್ಲಿ ಹೆಚ್ಚುಕಡಮೆಗಳಂತೆ ಇದೂ ಒಂದು, ಅಂತು ' ಬಂಗಾಡಿ ' ಎಂಬ ಊರೊಂದು ಇದ್ದರೆ ಅದನ್ನು ತಾನು ನೋಡಲೇಬೇಕು. ಕಂಡು ಅದು ಚೆನ್ನಾಗಿದ್ದರೆ ತನ್ನ ತಂದೆಗೂ, ತಾಯಿಗೂ ಹೇಳಬೇಕು. " ಅಪ್ಪಾ, ಅಷ್ಟು ಚೆನ್ನಾದ ಊರಿದ್ದು ಎಲ್ಲ ಮರೆತವರ ಹಾಗೆ ದಿಲ್ಲಿಗೆ ಜೋತು ಬಿದ್ದಿದ್ದೀರಲ್ಲ–" ಎನ್ನುವ ಹಂಬಲ ಅವನದು. ಅದಕ್ಕೆ ಕಾರಣವೆಂದರೆ ದಿಲ್ಲಿ ಅವರ ಊರೆನಿಸುವುದಾದರೂ ಅವನದ್ದೆಂದೂ ಆಗಿರಲಿಲ್ಲ. ವರ್ಷ ವರ್ಷಕ್ಕೆ ಬದಲಿಸುವ ಬಾಡಿಗೆಯ ಮನೆ ಅವನ ಮನೆ ಎಂದೆನಿಸಿರಲಿಲ್ಲ. ತಂದೆಯ ನೌಕರಿಯ ಬಡತಿಯಿಂದ ಬಾಡಿಗೆ ಮನೆಯ ವೈಶಾಲ್ಯ ಬೆಳೆದಿರಬಹುದು. ಮನೆಗೆ ಹೂದೋಟ ಸೇರಿರಬಹುದು. ಸುಂದರರಾಯರು ಸೆಕ್ರೆಟೇರಿಯಟ್‌ನ ಉಪಕಾರ್ಯದರ್ಶಿಗಳಲ್ಲೊಬ್ಬರು. ಹಾಗಾಗಿ ದೊಡ್ಡ ಮನೆಯನ್ನೇ ಗಳಿಸಿದ್ದಾರೆ. ಈಗ ಅದರ ಸುತ್ತ ಸುಂದರವಾದ ಉದ್ಯಾನವೂ ಇದೆ. ಮುಖ್ಯವಾದೊಂದು

ರಸ್ತೆಯ ಮಗ್ಗುಲಿಗೇನೆ ಈ ಮನೆಯಿದೆ. ಅವನ ತಾಯಿ ಪ್ರತಿಮೆಗಂತು ತನ್ನ ಗೆಳತಿಯರಿಗೆ ಅದನ್ನು ತೋರಿಸಿದಷ್ಟು ತೃಪ್ತಿಯಿಲ್ಲ; ಅವಳ ಹಿಗ್ಗಿಗೆ ಮೇರೆಯೇ ಇಲ್ಲ. ಅಷ್ಟಿದ್ದರೂ ಶಂಕರನಿಗೆ ಮಾತ್ರ ಅತೃಪ್ತಿ. ಅವನ ಪಾಲಿಗೆ ತಾವು ಚಿರಪ್ರವಾಸಿಗಳೆಂದು ಕಾಣುತ್ತಿದೆ, ಈ ಎಲ್ಲ–ಬದಲಿಸಿದ ಮನೆ, ನೆಲಗಳನ್ನು ಕಂಡು. ತಾವು ಮುಂಬಯಿಯಲ್ಲಿ ಮೂರನೆಯ ವರ್ಗದ ರೈಲು ಡಬ್ಬಿಯಲ್ಲಿ ಪ್ರವಾಸಮಾಡುತ್ತಿದ್ದೆವು. ಅನಂತರ ಇಂಟರಿಗೆ ಬಂದೆವು, ದೆಹಲಿಗೆ ಬಂದು ಸೇರಿದ ಮೇಲೆ II Class, I Class ಪ್ರವಾಸ ತೊಡಗಿದೆ. ರೈಲುಡಬ್ಬಿ ಶುಚಿಯಾಗಿದೆ. ಆದರೆ ಅದು ಮನೆಯಲ್ಲ, ಮಠವಲ್ಲ. ತಾವು ಸಂಚಾರಿಗಳೇ ಎಂದು ತೋರುತ್ತದೆ. ಇಂಥೆಲ್ಲ ಅತೃಪ್ತ ಜೀವನಕ್ಕೆ ಸೀತಾರಾಮನ ಉತ್ತರ ಕಾಯುತ್ತಿದ್ದಾನೆ ಅವನು.

ವ್ಯಾಸಂಗ ಮುಗಿಸಿ ಕಾಶಿಯಿಂದ ದೇಹಲಿಗೆ ಬಂದದ್ದಾಗಿದೆ. ಅವನೆನ್ನುವ ೧ನೇ ತರಗತಿಯ ರೈಲ್ವೆ ಡಬ್ಬಿಗೆ. ಸೀತಾರಾಮನು ಇಂದೋ ನಾಳೆಯೋ ಬರಬೇಕು. ಅವನನ್ನು ಶಿವಸಮುದ್ರಕ್ಕೂ ಕನ್ನಡ ಜಿಲ್ಲೆಗೂ ಕರೆದೊಯ್ಯಬೇಕು. ಅವನ ಹುಟ್ಟೂರನ್ನು ತೋರಿಸಿಕೊಡಬೇಕು. ಅದು ದೊರೆತರೆ ಅವನ ಹಸಿವಿಗೆ ತಕ್ಕ ಪರಿಹಾರ. ಈಗೀಗ ಶಿವಸಮುದ್ರಕ್ಕಿಂತ ಮುಖ್ಯವಾಗಿ, ಕನ್ನಡ ಜಿಲ್ಲೆಯನ್ನು ನೋಡಬೇಕೆಂಬ ಬಯಕೆ ಉಂಟಾಗಿದೆ. ಹುಟ್ಟೂರಾದ ಬಂಗಾಡಿ ಎಂಬುದಿದ್ದರೆ ಕಾಣಬೇಕೆಂಬ ಹಂಬಲದಿಂದ.

ಇದಕ್ಕೆ ಕಡಿಮೆಯಾಗದಂತಹ ಇನ್ನೊಂದು ಆಂತರಿಕ ಬಯಕೆಯೂ ಅವನನ್ನು ಕಾಡುತ್ತಿದೆ. ಅದು ಇತ್ತೀಚಿನಿಂದ; ಅವನ ವಯೋಗುಣಕ್ಕೆ ತಕ್ಕುದಾದ ಬಯಕೆ; ವಿಚಿತ್ರವಾದುದೇನಲ್ಲ. ಅವನಿಗೆ ಈಗ ೨೪ ವಯಸ್ಸು. ಅವನ ಸ್ನೇಹ ಈತನಕ ಮಿತಸಂಖ್ಯೆಯ ಗೆಳೆಯರಲ್ಲಿ ಹಂಚಿಹೋಗಿತ್ತು. ಅವರೆಲ್ಲ ಇವನಂತೆ ತರುಣರು, ಸಹಪಾಠಿಗಳು, ಸಮ ವಯಸ್ಕರು. ಅವರ ಸಂಭಾಷಣೆಗಳಲ್ಲಿ ಆಗಾಗ ವಿಲಾಸ ಶೃಂಗಾರದ ಮಾತುಕತೆಗಳು ಜೆಲ್ಲಾಡುವುದು ಸ್ವಾಭಾವಿಕ. ಅಂಥ ಸಂಭಾಷಣೆಗಳಿಗೆ ಶಂಕರನ ನಾಲಿಗೆ ಹಿಮ್ಮೆಟ್ಟುತ್ತದೆ. ಭಾಗ ವಹಿಸುವ ಸಾಹಸವಿಲ್ಲ. ನಾಲಗೆ ತಡೆದು ಕುಳಿತರೂ, ಕಿವಿ ಕಣ್ಣು ಕುಳಿತಿರುವುದಿಲ್ಲ. ಹೃದಯದ ಅಂತರಾಳವೂ ಸುಮ್ಮನಿರುವುದಿಲ್ಲ. ವ್ಯಾಸಂಗದೆಡೆಯಲ್ಲಿ-ಅಹುದೋ, ಅಲ್ಲವೋ ಎಂಬಷ್ಟು

ಮೆಲುನಡೆಯಿಂದ ಶೃಂಗಾರದ ಬಯಕೆ ಕಾಲಿರಿಸಿತು. ವಿಶ್ವವಿದ್ಯಾಲಯದ ಆವರಣದಲ್ಲಿ, ಸಂಜೆ ವಿಹರಿಸುವಾಗ, ಒನಪುಗಾತಿಯರನ್ನು ಕಾಣುತ್ತಾನೆ. ಚೆಲುವೆಯರನ್ನು ಕಾಣುತ್ತಾನೆ. ಅವರ ವಿಚಾರಗಳಲ್ಲಿ ತನ್ನ ಗೆಳೆಯರು ಆಡುತ್ತಿದ್ದ ಲಘು ನುಡಿಗಳನ್ನು ಕೇಳುತ್ತಾನೆ. ಇವನಾಗಿ ಮಾತನಾಡದಿರುತ್ತಿದ್ದರೇನು ? ಸಂಭಾಷಣೆಯಲ್ಲಿ ಭಾಗವಹಿಸದಿದ್ದರೇನು ? ಮನದಾಸೆ ಬೆಳೆಯುವುದಕ್ಕೆ ಅಂಥ ದೃಶ್ಯಗಳೆಲ್ಲ ಸಹಜ ಪುಷ್ಟಿಯನ್ನು ಕೊಡುತ್ತವೆ. ಅದು ಬಲಿಯು ತೊಡಗಿದ ಪ್ರಸಂಗ ಬೇರೆ.

ಹಿಂದಿನ ವರ್ಷದ ಬೇಸಿಗೆ ರಜೆಯಲ್ಲಿ ದೇಹಲಿಯ ಮನೆಗೆ ಬಂದಾಗ ಸಣ್ಣದೊಂದು ಘಟನೆ ನಡೆಯಿತು. ಅವರ ಮನೆಯೆಂದರೆ ಪ್ರತಿಮಾದೇವಿಯ ಅನೇಕ ಮಿತ್ರರು ಬಂದು ಹೋಗುವಂಥ ತಾವು. ಮನೆಯ ದಿವಾನಖಾನೆಯಲ್ಲೋ ವರಾಂಡಾದಲ್ಲೊ, ಉದ್ಯಾನದಲ್ಲೋ ಪ್ರತಿ ಸಂಜೆ ಎಂಬಂತೆ ಮಹಿಳೆಯರ ಸಭೆ ಸೇರುತ್ತದೆ. ಹಿಂದಿನ ವರ್ಷ ಬಂದಾಗಲೂ ಇಂಥ ಸಭೆಗಳಿರುತ್ತಿದ್ದುವು. ಅದು ನಿತ್ಯದ ನೋಟ. ಹಾಗೆ ಬರುವವರಲ್ಲಿ ಸುಂದರರಾಯರ ಸ್ನೇಹಿತರಾದ ಜಯರಾಮರ ಮನೆಯವರು ತೀರಸಲಿಗೆಯುಳ್ಳ ಸ್ನೇಹಿತರು, ಅವರು ತಮಿಳು ದೇಶದವರು. ಜಯರಾಮ ನಮ್ಮ ರಾಯರನ್ನು ಮನೆಗೆ ಬಂದು ಒಮ್ಮೆಯಾದರೂ ಭೇಟಿಯಾಗಬೇಕು. ಇಬ್ಬರದೂ ಒಂದೇ ಆಫೀಸು. ರಾಯರಿಗೆ ಸಮಾನವಾದ ಕೆಲಸ ಅವರದ್ದು. ಕೆಲಸದ ನೆರವಿಗೂ, ನಿತ್ಯದ ಸ್ನೇಹಕ್ಕೂ ಒದಗುವಂಥ ವ್ಯಕ್ತಿ ಅವರು. ಮನೆಯ ಯಜಮಾನರಲ್ಲಿರುವ ಬಳಕೆ ಸ್ನೇಹ, ಸಲಿಗೆಗಳು ಮನೆಯೊಡತಿಯರೊಳಗೆ ಇದ್ದೇ ಇದೆ. ಮಿಸೆಸ್ ಜಯರಾಮ್ ಪ್ರತಿಮೆಯ ಮಿತ್ರರ ಗುಂಪಿನಲ್ಲಿ ಮುಖ್ಯಳು. ಆಕೆಯ ಸ್ವಂತ ಹೆಸರು ಏನಿದ್ದರೂ ಮಿಸೆಸ್. ಜಯರಾಮ್ ಎಂದು ಕರೆಯುವುದೇ ಅಲ್ಲಿನ ರೂಢಿ. ಪ್ರತಿಮೆಯಂತೆಯೇ ಪ್ರತಿಷ್ಠೆ, ವಾಗಾಡಂಬರ, ವೇಷಾಡಂಬರ ಎಲ್ಲವನ್ನೂ ಪ್ರದರ್ಶಿಸುವವಳು. ಅವರ ಸ್ತ್ರೀ ಸಮಾಜದಲ್ಲಿ ಹಿಂದುಸ್ಥಾನಿ, ಇಂಗ್ಲಿಷುಗಳನ್ನು ನೀರು ಕುಡಿದಷ್ಟು ಸುಲಭದಿಂದ ಆಡುತ್ತಾಳೆ. ಆದರೆ ತನ್ನ ಮಕ್ಕಳೊಡನೆ ಆಡುವ ಮಾತು ಅಚ್ಚ ತಮಿಳು. ತಾನು ಬರುವಾಗ ಒಬ್ಬಳೇ ಬರುವುದೆಂಬುದೂ ಇಲ್ಲ. ಜತೆಗೆ ನಾಲ್ಕಾರು ಮಕ್ಕಳು

ಬಂದೇ ತೀರಬೇಕು. ಅವರಲ್ಲಿ ಹಿರಿಯಾಕೆಯೇ ವರಲಕ್ಷ್ಮಿ. ಅವಳು ನೋಟಕ್ಕೆ ತುಸು ಕಡುಪಾಗಿದ್ದರೂ ಲಕ್ಷಣವಂತಳಾದ ಹುಡುಗಿ. ದೊಡ್ಡ ಕಣ್ಣುಗಳು, ತಿದ್ದಿತೀಡಿದ ಹುಬ್ಬು, ಎಲೆಯಾಕಾರದ ಮುಖ, ದೀರ್ಘವಾದ ಕೇಶರಾಶಿ. ಹದಿನೆಂಟು ಇಪ್ಪತ್ತರಷ್ಟು ವಯಸ್ಸು. ಆಕೆ ವೀಣೆ ನುಡಿಸಬಲ್ಲಳು; ಬಾಯಿಯಿಂದ ಹಾಡಬಲ್ಲಳು. ಸಿನೆಮಾ ಗಾನವನ್ನಂತು ಚೆನ್ನಾಗಿ ಹಾಡುತ್ತಾಳೆ. ಇಂಟರ್‌ಮೀಡಿಯೆಟ್ ಪರೀಕ್ಷೆ ಮುಗಿಸಿದ್ದಾಳೆ. ಪ್ರತಿಮೆ ಮತ್ತು ಮಿಸೆಸ್ ಜಯರಾಯರ ಹರಟೆಗಳಲ್ಲಿ ಭಾಗಿಯಾಗುವವಳು ಆಕೆ. ಅವರ ಕುಟುಂಬ ದಿಲ್ಲಿಯಲ್ಲೇ ಕೆಲವು ವರ್ಷಗಳಿಂದ ವಾಸವಾಗಿತ್ತು. ಅವರ ಮನೆ ಈ ಮೂರು ವರ್ಷಗಳಿಂದ ಪ್ರತಿಮೆಯ ನೆರೆಮನೆಯಾಗಿದೆ. ಮೊದಲಿನಿಂದ ಆ ಮನೆಯವರು ಈ ಮನೆಗೆ ಬಂದು ಹೋಗುತ್ತಿದ್ದರು. ಈ ಹುಡುಗಿ ಸ್ಪಷ್ಟವಾಗಿ ಶಂಕರನ ಗೋಚರಕ್ಕೆ ಬಂದದ್ದು—ಇತ್ತೀಚೆಗೆ; ತಾಯಿ ಪ್ರತಿಮೆ ಮಗನನ್ನು ಕರೆದು 'ಮಿಸ್. ಜಯರಾಮ್ ಇವಳು' ಎಂದು ಪರಿಚಯ ಮಾಡಿಕೊಟ್ಟ ಮೇಲೆ. ಜನರ ಹಿಂಡು ಬಂತೆಂದರೆ ಶಂಕರನಿಗೆ ಅಳುಕು; ಕೋಣೆಯನ್ನು ಬಿಟ್ಟು ಏಳಲಾರ. ಮನೆಗೆ ಬಂದವರೊಡನೆ ಸಲುಗೆಯಿಂದಲೂ ವರ್ತಿಸಲಾರ. ವರಲಕ್ಷ್ಮಿ ತಾನಾಗಿ ಅವನನ್ನು ಒಂದೆರಡು ಬಾರಿ ಮಾತನಾಡಿಸಿದ್ದರೂ, ಚುಟುಕಿನ ಉತ್ತರದಿಂದಲೇ ಸಂಭಾಷಣೆ ಮುಗಿಸಿದ್ದ.

ಹಿಂದಣ ವರ್ಷ ರಜೆಗೆ ಶಂಕರ ಮನೆಗೆ ಬಂದಿದ್ದಾಗ ಪ್ರತಿಮೆಯ ಮನೆಯವರಿಗೆ ಎರಡು ಮೂರು ಬಾರಿ ಜಯರಾಮರ ಮನೆಯಲ್ಲಿ ಊಟವಿತ್ತು. ಶಂಕರ ಉಪಾಯವಿಲ್ಲದೆ ಅಲ್ಲಿಗೆ ಹೋಗಿದ್ದ. ಅವರ ಮನೆಯ ನಡವಳಿಕೆಗೂ ತಮ್ಮ ಮನೆಯ ನಡವಳಿಕೆಗೂ ಇರುವ ವ್ಯತ್ಯಾಸವೇ ಶಂಕರನ ಕಣ್ಣನ್ನು ತೆರೆದದ್ದು. ತಮ್ಮ ಮನೆಗೆ ಬಂದಾಗ ಮಿಸೆಸ್ ಜಯರಾಮ್ ತೀರ ಅರ್ವಾಚೀನಳಂತೆ ವರ್ತಿಸುತ್ತಿದ್ದರೂ, ಅವರ ಮನೆಯಲ್ಲಿ, ಅದೂ ಹಬ್ಬ ಹುಣ್ಣಿಮೆಗಳು ಬಂದಾಗ, ಹಳೆಯ ಸಂಪ್ರದಾಯಗಳನ್ನೆಷ್ಟೂ ಬಿಡದೆ ಅನುಸರಿಸಿಕೊಂಡು ಬರುತ್ತಿದ್ದಳು. ಅಗೆಲ್ಲ-ತಮಿಳು ದೇಶದ ಮರಿಯೇ ಅವರ ಮನೆ ಆಗುತ್ತಿತ್ತು.

ಶಂಕರನ ಪಾಲಿಗೆ ಇವೆಲ್ಲವೂ ಹಚ್ಚ ಹೊಸತು. ಅವರ ಮನೆಯಲ್ಲಿ

ಹಳೆಯ ಕಟ್ಟಳೆಗಳ ಬೇರು, ಬುಡವೊಂದೂ ಕಾಣುವುದಕ್ಕಿಲ್ಲ. ಹೆಚ್ಚೆಂದರೆ ದಿಲ್ಲಿಯ ಹಬ್ಬಹುಣ್ಣಿಮೆಗಳ ರೀತಿ ಕಾಣುತ್ತಿತ್ತು. ದಿಲ್ಲಿಗೆ ಹೋದರೆ ದಿಲ್ಲಿಯವರ ಹಾಗೆ ಇರಬೇಕು—ಎಂದು ತೋರಿಸುವ ಪ್ರಯತ್ನ ಪ್ರತಿಮೆಯದು. ಅದು ನಂಬಿಕೆಯಿಂದ, ಪರಂಪರೆಯಿಂದ ಬೆಳೆದ ಕಟ್ಟಳೆಗಳಲ್ಲವಾದುದರಿಂದ ಉತ್ತರ ಹಿಂದೂಸ್ಥಾನದ ಅವರ ಮನೆಯ ಚಾಕರಿ ಆಳುಗಳು ಅನುಸರಿಸುತಿದ್ದ ಕಟ್ಟುಕಟ್ಟಲೆ ಎಂದರೂ ತಪ್ಪಿಲ್ಲ. ಅವುಗಳಲ್ಲಿ ಶಂಕರನೆಂದೂ ಮನಸ್ಸು ಹಾಕಿದವನಲ್ಲ. ಅವನಿಗೆ ಜಯರಾಮರ ಮನೆ ಹಾಗೆ ಕಾಣಿಸಲಿಲ್ಲ. ಮನೆಯ ರಂಗವಲ್ಲಿ, ತೋರಣ, ಮನೆ ಇರಿಸುವ ಬಗೆ, ಸುಮಂಗಲೆಯರನ್ನು ಸತ್ಕರಿಸುವ ವಿಧಾನ, ಹಬ್ಬ ಹುಣ್ಣಿಮೆಗಳ ಆಚರಣೆ—ಎಲ್ಲವೂ ನವೀನವಾಗಿ ಕಾಣಿಸಿದುವು; ಆಕರ್ಷಣೀಯವಾಗಿಯೂ ಕಾಣಿಸಿದ್ದುವು. ಅಂಥವುಗಳಲ್ಲಿ ಮಿಸೆಸ್ ಜಯರಾಮ್ ವಹಿಸುತ್ತಿದ್ದ ಆಸಕ್ತಿಗಿಂತ ಹೆಚ್ಚಾಗಿ ವರಲಕ್ಷ್ಮಿಯ ಪಾತ್ರ ಕಾಣಿಸುತ್ತಿತ್ತು. ಆ ಸಂಪ್ರದಾಯಗಳ ಹಿನ್ನೆಲೆಯೊಂದಿಗೆ ವರಲಕ್ಷ್ಮಿ ತೀರ ಚೆಲುವೆಯಾಗಿ ಕಂಡಳು ಅವನ ಪಾಲಿಗೆ.

ಈ ವಿಚಾರವೇ ಆಕೆಯ ವಿಷಯದಲ್ಲಿ ಗೌರವವನ್ನುಂಟುಮಾಡಿದ್ದು. ಈ ಗೌರವದಿಂದ ಬಹುಬಾರಿ ಅವನ ಮನದ ಆಗಸದಲ್ಲಿ ವರಲಕ್ಷ್ಮಿ ಮಿಂಚಿ ಮಾಯವಾಗಿದ್ದಳು. ತಮ್ಮ ಮುಸಾಫಿರ್ ಮನೆಯ ನಡವಳಿಕೆಯನ್ನು ನೆನೆಯುವಾಗಲೆಲ್ಲ, ಜಯರಾಮರ ಮನೆಯ ಸಂಪ್ರದಾಯಗಳಿಗೆ ಹೆಚ್ಚಿನ ಚೆಲುವು ಕಾಣುತ್ತಿತ್ತು, ತಮ್ಮ ಕುಲದ ಹಿನ್ನೆಲೆಗೆ, ಹಿರಿಯರ ಜೀವನಕ್ಕೆ ಹೊಂದಿ ಸಾಗುವ ನಡವಳಿಕೆ, ಶಿಷ್ಟಾಚಾರಗಳನ್ನು ಕಂಡು 'ನಮ್ಮದೇನು, ತಳವಿಲ್ಲದ, ಬೇರಿಲ್ಲದ ಸಂಸ್ಕೃತಿ' ಎಂದೆನಿಸುತ್ತಿತ್ತು. ಅದೇ ವಿಚಾರವೇ ಈ ಬಾರಿ ಬೇಸಿಗೆಯಲ್ಲಿ ಮನೆಗೆ ಬಂದಾಗ ಇನ್ನಷ್ಟು ಪಕ್ವಗೊಂಡಿತು. ಹಾಗೆ ಪಕ್ವವಾಗಲು ಎರಡೆರಡು ಕಾರಣಗಳು ಸೇರಿದ್ದುವು—ತಾನೊಂದು ಊರನ್ನು ಗಳಿಸಬೇಕೆಂಬ ಹಂಬಲ. ತನ್ನ ಜೀವನಕ್ಕೂ ಹಿಂದಿಗೂ ಒಂದು ಹಿನ್ನೆಲೆಯಿದ್ದರೆ ಎಷ್ಟು ಸೊಗಸು—ಎಂಬ ಆಸೆ.

ಈ ವೇಳೆಯಲ್ಲಿ ಅವನ ಸಲುವಾಗಿ ಸುಂದರರಾಯರ ಕಡೆಗೆ ಬರುತ್ತಿದ್ದ ಜಾತಕಗಳೋ, ನಂಟುತನದ ಬೇಡಿಕೆಗಳೋ ಒಂದೆರಡಲ್ಲ. ಶಂಕರನಿಗೂ ಅದು ತಿಳಿಯದ ವಿಷಯವಲ್ಲ. ಬಂದ ನಂಟುತನಗಳು ತಮ್ಮ ಅಂತ

ಸ್ತಿಗೆ ಸಮನಲ್ಲದವು ಎಂದು ತೋಚಿ "ಮುಂದೆ ನೋಡುವ, ಹುಡುಗನಿಗೊಂದು ಉದ್ಯೋಗವಾಗಲಿ" ಎಂದು ತಂದೆ ಮುಂದೆ ತಳ್ಳಿದರು.

ಶಂಕರನ ಮನದಲ್ಲಿ ತಾನೊಂದು ಊರು ಸೇರಿ, ಸಂಸಾರ ಮಾಡಿಕೊಂಡು ಇರಬೇಕೆಂಬ ಬಯಕೆ ಮೂಡಿದೆ. ರಜೆಯಲ್ಲಿ ಊರಿಗೆ ಬರುವಾಗ ಆ ಬಯಕೆ ಬಲವಾಗಿ ಬೇರೂರಿತ್ತು. ರಜೆಯೂ ಪ್ರಾರಂಭವಾಯಿತು, ಜತೆಗೆ ಬೇಸಿಗೆಯೂ ಪ್ರಾರಂಭವಾಯಿತು. ಬಂದ ಎರಡು ಮೂರು ದಿನ ದೇಹಲಿಯಲ್ಲಿ ಬಿರುಗಾಳಿ. ಅದರ ಪರಿಣಾಮ ಆತನಿಗೆ ಪ್ರಾಪ್ತಿಸಿದ ಶೀತ, ನೆಗಡಿ, ತಲೆನೋವು. ಆತ ಮನೆಯೊಳಗೆ ನಾಲ್ಕು ದಿನ ಮಲಗಿರಬೇಕಾದ ಪಾಡು ಬಂದಿತು. ಈ ಅವಕಾಶವೇ ಆಧುನಿಕ ಮಹಿಳೆಯಾದ ವರಲಕ್ಷ್ಮಿಗೆ ಸ್ನೇಹದ ಧೈರ್ಯವನ್ನು ತಂದೊಡ್ಡಿತು. ಆಕೆ ಅವನ ಬಳಿಗೆ ಬಂದು "ಚೆನ್ನಾಗಿತ್ತಲ್ಲವೆ, ತಲೆನೋವೇ ?" ಎಂದು ಮಾತನಾಡಿಸಿ ಹೋಗುತ್ತಾಳೆ. ಆ ಅವಧಿಯ ಉದ್ದಕ್ಕೂ ಆತ ಬೇಸರದಿಂದ ಮಲಗಿರುವುದನ್ನು ಕಂಡು ಸಮೀಪ ಕುರ್ಚಿಯನ್ನೆಳೆದುಕೊಂಡು ಕುಳಿತು ಸಂಭಾಷಿಸುತ್ತಾಳೆ. ಅದಕ್ಕೆ ಶಂಕರ ತೋರಿದ ಸಲುಗೆಯೂ ಕಾರಣವಾಯಿತು. ಆ ಸಲುಗೆಗೆ ಅವನಿಗೆ ಅವಳಲ್ಲಿ ಉಂಟಾದ ಆಸಕ್ತಿಯೇ ಕಾರಣ. ಈ ಆಸಕ್ತಿಯನ್ನು ತಡೆಯುವ ಇಲ್ಲವೆ ಅಪಾರ್ಥಗಳನ್ನು ನೆನೆಯುವ ರೀತಿ ಆ ಎರಡು ಮನೆಯವರದ್ದೂ ಆಗಿರಲಿಲ್ಲ. ಪ್ರತಿಮೆಗೆ 'ವರಲಕ್ಷ್ಮಿ ತನ್ನ ಸೊಸೆಯಾದರೇನು ?' ಎಂಬ ವಿಚಾರವೂ ಹೊಳೆದಿತ್ತು. ಆ ವಿಚಾರದಲ್ಲಿ ಅವಳು ಪ್ರತ್ಯಕ್ಷ ಮಾತನಾಡಲು ಮಿಸೆಸ್ ಜಯರಾಮ್‌ರವರ ಮನೆಯ ಸಾಂಪ್ರದಾಯಿಕತೆ ತಡೆಯಾಗಿತ್ತು. ತಮ್ಮಂತೆ ಅವರು ಹೊರಗೆ ಕೊಸ್ಮಾಪಾಲಿಟನರಂತೆ ವರ್ತಿಸುತ್ತಿದ್ದರೂ, ಹಳೆಯ ಶಿಷ್ಟಾಚಾರ ಬಿಡದವರು; ಮದುವೆಯ ವಿಚಾರದಲ್ಲಿ ತಮ್ಮ ಕುಲ, ನೆಲೆಗಳಿಗೆ ಗಂಟು ಬೀಳತಕ್ಕವರು—ಎಂಬ ಅಭಿಪ್ರಾಯ ಅವಳಲ್ಲಿ ಮೂಡಿತ್ತು.

ಶಂಕರ ಊರಿಗೆ ಬಂದು ಹದಿನೈದು ದಿನಗಳಾದುವು. ಈ ಅವಧಿಯಲ್ಲಿ ವರಲಕ್ಷ್ಮಿಯೊಡನೆ ಸ್ನೇಹವೂ, ಅಭಿಮಾನವೂ ಬೆಳೆದು ಬಂದಿತು. ಆಳತೆ ತಪ್ಪಿದ ಸಲುಗೆ ಅವರಲ್ಲಿ ಕಾಣಿಸದಾದರೂ, ಅಂತರಂಗದ ಇಂಗಿತ ಹೇಳುವಷ್ಟು ಬಯಕೆಗಳನ್ನು ಉಭಯತರ ಕಣ್ಣುಗಳೂ ಸೂಚಿಸಿದುವು.

ಬಾಯನ್ನು ತೆರೆಯುವ ಸಾಹಸ ಇಬ್ಬರಿಗೂ ಬಂದಿರಲಿಲ್ಲ. 'ಆಕೆಯನ್ನು ಕೇಳಲೇ?' ಎಂಬ ಆಸೆ ಶಂಕರನಲ್ಲಿ ಮೂಡಿತು. ತನ್ನ ತಂದೆತಾಯಿಗಳನ್ನು ಈ ವಿಷಯದಲ್ಲಿ ಕೇಳಬೇಕು—ಎಂಬ ಯೋಚನೆ ಅವನಿಗೆ ಹೊಳೆಯಲಿಲ್ಲ.

ಒಂದು ದಿನ ಶಂಕರ ತನ್ನ ಆಸೆ ತಡೆಯದ್ದಕ್ಕೆ, ತನ್ನ ಗೆಳೆಯರ ನೇಕರ ಪ್ರಣಯ ಸಾಹಸಗಳನ್ನು ಕೇಳಿ ಧೈರ್ಯಗೊಂಡವನಂತೆ, ಚಿಕ್ಕದೊಂದು ಕಾಗದ ಬರೆದ. ಬಣ್ಣ ಬೆಡಗಿಲ್ಲದ ಮಾತಿನಲ್ಲಿ "ನನಗೆ ಬರೆಯಲು ಧೈರ್ಯವಿಲ್ಲ. ನನ್ನ ಊಹೆ ತಪ್ಪಿದ್ದರೆ ಕ್ಷಮಿಸು; ಈ ಕಾಗದವನ್ನು ಹರಿದು ಹಾಕು. ನೀನು ನನ್ನಲ್ಲಿ ಆಸಕ್ತಳಾಗಿದ್ದೀಯಾ—ಎಂದು ನನ್ನ ಊಹೆ. ನನಗಂತೂ ನಿನ್ನ ಗೆಳೆತನದ ಬಾಯಾರಿಕೆ ಉಂಟಾಗಿದೆ. ನಿನಗೆ ಒಪ್ಪಿಗೆಯಾದರೆ ಕಾಗದ ಬರೆ. ಇಲ್ಲವಾದರೆ ಇಲ್ಲಿಗೆ ಮರೆಯೋಣ, ಕ್ಷಮಿಸು" ಎಂದು ಬರೆದ. ಬರೆದದ್ದಾಯಿತು. ಅದನ್ನು ಆವಳಿಗೆ ಕೊಡುವ ದಾರಿ ಹೊಳೆಯಲಿಲ್ಲ. ಅ ಸಂಜೆ ವರಲಕ್ಷ್ಮಿ ಮನೆಗೆ ಬಂದಾಗ ಒಂದು ಕಾದಂಬರಿಯ ವಿಚಾರದಲ್ಲಿ ಮಾತುಕತೆ ಬಂದಿತು. "ಅದು ಬಲು ಒಳ್ಳೆಯ ಗ್ರಂಥ. ನಾನು ಮೂರಾವರ್ತಿ ಓದಿದ್ದೇನೆ. ಪ್ರತಿ ನನ್ನಲ್ಲಿದೆ. ಓದುತ್ತೀಯಾದರೆ ಕೊಡುತ್ತೇನೆ" ಎಂದು ಹೇಳಿದ. "ಒಂದಾವರ್ತಿಯಾದರೂ ಓದಬಹುದಲ್ಲ" ಎಂದು ನಕ್ಕು ನುಡಿದಳು ವರ.

ಅವಳೆದುರಿಗೇನೆ ಗ್ರಂಥ ಹುಡುಕಿ ತಂದ. ಅದರ ಹಾಳೆಯನ್ನು ತಿರುವಿದ. ತನ್ನ ಪತ್ರವನ್ನಿರಿಸಿದ. ಕೊಡುವಾಗ "ಕ್ಷಮೆಯೊಡನೆ" ಎಂದ. ಆಗ ಅವನ ಮುಖ ತಗ್ಗಿದುದನ್ನು, ಧೈರ್ಯಗುಂದಿದುದನ್ನು ಅವಳೂ ಕಂಡಳು. ಕಾರಣವೇನೋ ಇರಬೇಕು—ಎನಿಸಿತು. ಹೊರಗೆ, ತೆರೆದ ಬಾಗಿಲ ಹತ್ತು ಗಜದಾಚೆ, ಅವರ ಹಿರಿಯರ ಸಭೆ ನಡೆಯುತ್ತಿತ್ತು. ವರಲಕ್ಷ್ಮಿ ಪುಸ್ತಕವನ್ನು ಹಿಡಿದಳು. ಕಡಿಮೀರಿ ನಿಂತಿದ್ದ ಕಾಗದ ಕಾಣಿಸಿತು. ಪುಸ್ತಕವನ್ನು ಸವರುತ್ತ ಏನೇನೋ ವಿಚಾರ ಹರಟತೊಡಗಿದಳು. ಶಂಕರನಿಗೆ, ಪುಸ್ತಕ ಸಭೆಗೆ ಹೋಗಿ ಬಹಿರಂಗವಾದರೆ ಏನು ಗತಿ, ಎಂಬ ಭೀತಿ. ಆದರೆ ವರ ಹಾಗೆ ಮಾಡಲಿಲ್ಲ. ನಿಮಿಷದಲ್ಲಿ ಇಂಗಿತ ಅರಿತವಳಂತೆ, ಪತ್ರ ಅಲ್ಲಿಂದ ಮಾಯಕಗೊಳಿಸಿದಳು, ಆದರ ಹಾಳೆಗಳನ್ನು ತಿರುವುತ್ತ ಯಾವಾವುವೋ ಬರಹಗಾರರ ಕುರಿತು ಮಾತನಾಡತೊಡಗಿದಳು. ಆ ಸಂಜೆ

ಅವಳು ಮಹಿಳಾ ಸಭೆಯನ್ನು ಸೇರದೆ ಬೇಸರದ ನೆಪ ಹೇಳಿ, ತನ್ನ ಮನೆಗೆ ಹೊರಟು ಹೋದಳು.

ಶಂಕರ ತಾನು ಪಾರಾದೆ–ಎಂದು ತಿಳಿದ. ತನ್ನ ಕಾಗದದ ಪ್ರತಿ ಫಲವೇನೆಂದು ಅವನಿಗೆ ತಿಳಿಯದು. ಆ ದಿನ ಸರಿಯಿತು, ಮರುದಿನ ಬಂದಿತು. ವರಲಕ್ಷ್ಮಿ ಮನೆಗೆ ಬರಲಿಲ್ಲ. ಹಾಗೆ ಎರಡು ಮೂರು ದಿನಗಳು ಸರಿದರೂ ವರಲಕ್ಷ್ಮಿ ಕಾಣೆ.

ಒಮ್ಮೆಗೇ ಶಂಕರನ ಆಶಾಭಂಗವಾದಂತಾಯಿತು. ಒಂದು ದಿನ ಅಶೋಕ ರಸ್ತೆಯ ವರ್ತುಲವೊಂದರ ಬಳಿ ಆಸನದಲ್ಲಿ ಕುಳಿತಿದ್ದ–ಉದಾಸೀನನಾಗಿ. ಶಿವಸಮುದ್ರದ ಯೋಚನೆಯನ್ನು ನೆನೆಯುತ್ತಿರುವಾಗಲೇ ಆಕೆಯ ಚಿಂತೆಯು ಅವನನ್ನು ಬಾಧಿಸುತ್ತಿತ್ತು. ತಿರುಗಿ ವರಲಕ್ಷ್ಮಿಗೆ ಮುಖವನ್ನು ತೋರಿಸಲಾರೆ–ಎಂದನಿಸುತ್ತಿತ್ತು. ಸೀತಾರಾಮ ಬಂದಿದ್ದರೆ ಬೇಗನೆ ಊರು ಬಿಡಬಹುದಿತ್ತು, ಈ ಪ್ರಸಂಗವನ್ನು ಮರೆಯಬಹುದಿತ್ತು-ಎಂದು ಎಣಿಸುತ್ತಿರುವಾಗಲೇ ಒಬ್ಬ ಬಾಲಕನು ಅವನ ಬಳಿಗೆ ಬಂದು ನಿಂತ. ಕಿರಿಯ; ಹದಿನೆಂಟು ವಯಸ್ಸಾಗಬಹುದು. ಎಲ್ಲೋ ಅವನನ್ನು ಕಂಡ ನೆನಪು; ಎಲ್ಲೆಂದು ನೆನಪಾಗದು.

ಆತನಾಗಿಯೇ ಶಂಕರನನ್ನು ಮಾತನಾಡಿಸಿದ. "ಏನು ಇಲ್ಲಿ ಒಬ್ಬರೇ ಕುಳಿತಿರಿ" ಎಂದು ಕೇಳಿದ.

"ಕುಳಿತೆ. ನೀನು ಯಾರು ? ಎಲ್ಲೋ ಕಂಡ ನೆನಪಾಗುತ್ತದಲ್ಲ?"

"ನಿಮ್ಮ ಮನೆಗೆ ಬಂದಿದ್ದೆನಲ್ಲ ಹಲಕೆಲವು ಬಾರಿ. ಮಿಸೆಸ್ ಜಯರಾಮರ ಜತೆಗೆ."

"ಅವರ ಮನೆಯವನೇ ?"

"ಮನೆಯವನಲ್ಲ ; ಅಲ್ಲಿಯ ಕೆಲಸದವನು."

"ಹಾಗೋ" ಎಂದು ಸಂಭಾಷಣೆ ಮುಗಿಸಿದ.

ಅಷ್ಟಕ್ಕೆ ಹುಡುಗ ಒಂದು ಕಾಗದ ಕೊಡುತ್ತ "ಅವರು ಕೊಟ್ಟದ್ದು ನಿಮಗೆ. ಅದನ್ನು ಕೊಡುವುದಕ್ಕೇ ಬಂದೆ. ಮನೆಯಲ್ಲಿ ಕೊಡಲು ಹೋಗಬೇಡ–ಎಂದಿದ್ದಳು ವರಲಕ್ಷ್ಮಿಯಮ್ಮ. ಉತ್ತರವೇನಾದರೂ ಇದ್ದರೆ ಅದನ್ನು ನಾನೇ ಬಂದು ಕೊಂಡುಹೋಗುತ್ತೇನೆ" ಎಂದ.

ಅವನೆದುರಿಗೆ ಕಾಗದ ಬಿಡಿಸಲು ಶಂಕರಗೆ ಆಧ್ಯೈರ್ಯವೂ ಆಯಿತು. ನಾಚಿಕೆಯೂ ಆಯಿತು. "ಆಗಲಿ" ಎಂದು ಹೇಳಿದ. "ನಾಳೆ ಈ ಹೊತ್ತಿಗೆ ಇಲ್ಲಿಗೆ ಬರಲೇ?" ಎಂದು ಕೇಳಿದ ಹುಡುಗ.

"ಹೂಂ"

ಆತ ಹೊರಟುಹೋಗಿ ಪತ್ರವೇನೆಂದು ತವಕಿಸಿ ನೋಡಬೇಕೆಂದು ಕೈಯಿಕ್ಕಿದಾಗಲೇ 'ಶಂಕರ್' ಎಂದು ಕೂಗಿ, ಬೆನ್ನು ತಟ್ಟಿ ಎದುರಿಗೆ ನಿಂತ–ದೆಹಲಿಗೆ ಅವನನ್ನು ಹುಡುಕಿಕೊಂಡು ಬಂದಿದ್ದ, ಗೆಳೆಯ ಸೀತಾರಾಮ.

# ಅಧ್ಯಾಯ ೨

ಶಿವಸಮುದ್ರದಲ್ಲಿ ಸೀತಾರಾಮ ಮತ್ತು ಶಂಕರರು ಬಂದಿಳಿದ ಊರಿಗೆ 'ಬ್ಲಫ್' ಎಂದು ಹೆಸರು. ಏಕೆ ಬಂದಿತೋ ಆ ಹೆಸರು. 'ಬ್ಲಫ್' ಎಂದರೆ 'ಬಡಾಯಿ'. ತನ್ನದೇ ಆದ ಸೌಂದರ್ಯದಿಂದ, ಹೆಚ್ಚಳದಿಂದ, ಮೆರೆಯಬಲ್ಲ ಆ ಊರಿಗೆ ಬಡಾಯಿ ಕೊಚ್ಚಬೇಕಾದ ಅವಶ್ಯವಿಲ್ಲ. ಬೆಟ್ಟಗಳ ಎಡೆಯಿಂದ ಹರಿದು ಬರುವ ಕಾವೇರಿನದಿಯು ಅಲ್ಲಿ ಕಣಿವೆಯ ಆಳಕ್ಕೆ ಧುಮುಕುವ ನೋಟ ಬಲು ಸುಂದರವಾದದ್ದು, ಬಡಾಯಿಯೇನೂ ಅಲ್ಲ. ಆ ನಾಡು ಚೆಲುವಿನ ಸ್ವಪ್ನದಂತೆ ಕಾಣಿಸುತ್ತದೆ. ಈ ಜಲಪಾತಕ್ಕೆ ಸಮೀಪವಾಗಿ ಒಂದು ಶುಚಿಯಾದ ಸುಂದರವಾದ ವಿದ್ಯುತ್ ಉತ್ಪನ್ನ ಕೇಂದ್ರ ಬೆಳೆದಿದೆ. ಕೇಂದ್ರದ ಮನೆಯೊಂದರಲ್ಲಿ ಅವರಿಬ್ಬರೂ ವಾಸವಾಗಿದ್ದಾರೆ. ನಿಯುತ ವೇಳೆಗಳಲ್ಲಿ ಅಲ್ಲಿನ ಶಕ್ತಿ ಉತ್ಪನ್ನಮಾಡುವ ತಾಣಕ್ಕೆ ಹೋಗಿ ಅನುಭವ ಪಡೆದು ಬರುತ್ತಾರೆ. ದಿನಕ್ಕೆ ತಾಸು ನಾಲ್ಕು ತಾಸು ವಿರಾಮವಿರುತ್ತದೆ. ಬೆಳಗಿನ ವಿರಾಮವನ್ನು ಊರಲ್ಲಿ ಕಳೆದರೆ, ಸಂಜೆಯು ವೇಳೆಯನ್ನೆಲ್ಲ ಜಲಪಾತದ ಬಳಿಗೆ ಹೋಗಿ ಅದರ ಚೆಲುವನ್ನು ಕಾಣುವುದರಲ್ಲಿ ಕಳೆಯುತ್ತಿರುತ್ತಾರೆ. ದಿನದ ಕೆಲಸದಲ್ಲೂ ತಾವು ಕಲಿತುಕೊಂಡ ವಿದ್ಯೆಗಾಗಿ ಹೆಮ್ಮೆಪಡುತ್ತಾರೆ. ಸಂಜೆ ವಿಹಾರಕ್ಕೆ ಹೋದಾಗ ಆ ಸುಂದರ ಶಾಂತ ಆವರಣದಲ್ಲಿ ಅಂತರ್ಮುಖಿಗಳಾಗುವುದುಂಟು. ಅಂಥ ತಾವು ಒಂದರಲ್ಲಿ ತಾವು ಬದುಕಿದ್ದು ಬಾಳನ್ನು ಕಳೆಯುವ ಆಸೆಯಾಗುತ್ತದೆ. ಆ ಊರಿನ ಹವೆ ಹಿತವಾದ ಉಷ್ಣವುಳ್ಳದ್ದು. ಕಾಶಿ, ದೇಹಲಿಗಳ ಬಿಸಿಲು ಬೇಗೆಗಳಿಲ್ಲ. ಅಂಥ ತಾವಿನಲ್ಲಿ ಕುಳಿತು ಕನಸುಕಾಣುತ್ತಿರುವ ಶಂಕರ ಸಲ್ಲಪಿಸುವುದುಂಟು. "ಸೀತಾರಾಮು, ನಿನ್ನ ಊರಿನ ಬಳಿಯಲ್ಲೂ ಜಲಪಾತವೊಂದಿದೆ ಎಂದೆಯಲ್ಲ. ಅದು ಹೀಗಿದೆಯೇ ?" ಎಂದು ಕೇಳಿದ ಒಮ್ಮೆ.

"ಅದೇ? ಅದು ಚಿಕ್ಕದು. ಇದಕ್ಕೂ ಆಳವಾಗಿ ಬೀಳುವುದಾದರೂ ಇಷ್ಟು ಗಾತ್ರದ್ದಲ್ಲ. ಅಲ್ಲಿ ನೀರಿನ ಸೆಲೆ ಕಡಿಮೆ. ಆದರೆ ಎರಡು ಸಾವಿರ ಅಡಿಯಷ್ಟು ಉನ್ನತಕ್ಕೆ ಚಾಚಿದ ಘಟ್ಟದಿಂದ ಬೀಳುತ್ತದೆ. ಸದಾ ನೀಲ, ಹಸುರು ನೀಲಗಳಿಂದ ತುಂಬಿ ತುಳುಕಾಡುವ ಪರ್ವತ ಪ್ರದೇಶವದು.

ಒಮ್ಮೊಮ್ಮೆ ಅಲ್ಲಿನ ಮಳೆ ಇನ್ನೂರು ಮುನ್ನೂರು ಅಂಗುಲದಷ್ಟಾಗುತ್ತದೆ. ಇಂಥ ಜಲಪಾತಗಳು ನಮ್ಮ ಜಿಲ್ಲೆಯಲ್ಲಿ ಹಲವಿವೆ. ಬೆಟ್ಟಗಳ ಮೇಲಿನ ಸೆರಗಿನಲ್ಲಿರುವುದೇ ಈ ಮೈಸೂರು ಸೀಮೆ. ಅಲ್ಲಿ ಜಲಾಶಯ ಕಟ್ಟಿಕೊಂಡರೆ ಎಷ್ಟೋ ಶಕ್ತಿ ಉತ್ಪನ್ನ ಮಾಡಬಹುದು. ನೋರ್ವೆ, ಸ್ವೀಡನ್ ಸುಳ್ಳು. ಇಂದು ಆ ಎಲ್ಲ ಶಕ್ತಿಯು ಇಂಗಿ, ಆವಿಯಾಗಿ, ಹರಿದು ಹಾಳಾಗುತ್ತಿದೆ."

" ಹಾಗೆನ್ನುತ್ತೀಯಾ? ಅಷ್ಟು ಹೆಚ್ಚಿನ ಮಳೆ ಇದೆಯೇ? ಹಾಗಿದ್ದರೆ ಆ ಪ್ರದೇಶ ಅತ್ಯಂತ ಮನೋಹರವಾಗಿ ಕಾಣಿಸಬೇಕು."

" ಕಣ್ಣಿನ ಸೊಗಸಷ್ಟೇ ನಮಗೆ. ನೀರಿನ ಉಪಯೋಗವಿಲ್ಲ. ಒಂದು ನೀರ್ಕಟ್ಟೆಯಿಲ್ಲ, ಕಾಲುವೆಯಿಲ್ಲ, ಜಲಶಕ್ತಿಯ ಕೇಂದ್ರವಿಲ್ಲ. ಸಂಪತ್ತಿದ್ದೂ ವ್ಯರ್ಥವಾಗಿದೆ. ಜನ ಬಡವರಾಗಿಯೇ ಉಳಿದಿದ್ದಾರೆ. ನನ್ನಂಥವ ನಾಳೆ ಕೆಲಸ ಗಳಿಸಬೇಕಾದರೆ ಯಾವಾವ ಊರಿಗೆ ಹೋಗಿ ಬಾಳಬೇಕು."

"ನಿಜ; ಇಂಥ ಕೆಲಸವನ್ನೂ ಲಕ್ಷಾವಧಿ ಹಣ ವ್ಯಯಿಸಿ ಮಾಡಬೇಕಾದುದು. ಸರಕಾರ ಮನಸ್ಸು ಮಾಡಿದರೆ ಆಗುವ ಕೆಲಸವೇ ಹೊರತು ಬಡ ಜನಗಳ ಕೈನಿಲುಕಿನದಲ್ಲ. ಆದರೂ ನನಗನಿಸುತ್ತದೆ—ಎಷ್ಟೋ ಚಿಕ್ಕ ಪುಟ್ಟ ಜಲಪಾತಗಳ ಲಾಭ ಪಡೆಯಬಹುದು ನಾವೆಂದು. ದಾರಿಯ ದೀಪ, ಮನೆಯ ದೀಪ ಉರಿಸುವುದು ಮುಖ್ಯ ಕೆಲಸವಲ್ಲ. ಜಲಶಕ್ತಿಯನ್ನು ಬೆಳೆಸಿ ಸಣ್ಣ ದೊಡ್ಡ ಕೈಗಾರಿಕೆಗಳನ್ನು ತೊಡಗಿ, ನಮ್ಮ ಸಂಪತ್ತನ್ನು ಬೆಳೆಯಿಸಬೇಕಾದದ್ದು ಹೆಚ್ಚಿನ ಕೆಲಸ."

" ನಿಜ, ಅದೆಲ್ಲ ಸಮನಾದ ವಿಚಾರವೇ. ಆದರೆ ಅಷ್ಟು ಹಣ ನನ್ನಲ್ಲಿದೆಯೇ " ನಿನ್ನಲ್ಲಿದೆಯೆ? ನಾವು ' ಚಾಕರಿ ಕೊಡಿ ' ಎಂದು ಭಿಕ್ಷೆ ಬೇಡುವುದಕ್ಕೆ ಸಿದ್ಧರಾದವರು. ಈಗ ಕಲಿತ ವಿದ್ಯೆಯಿಂದಲೇ ಉದ್ಯೋಗ ದೊರೆಯದೆ ಹೋದರೆ ಗುಮಾಸ್ತಿಕೆಯನ್ನಾದರೂ ಮಾಡಿ ಬಾಳಬೇಕಾದವರು."

ಈ ಕೊನೆಯ ಮಾತು ಶಂಕರನ ಮನಸ್ಸಿಗೆ ತುಂಬ ಅಸಮಾಧಾನವನ್ನುಂಟುಮಾಡಿತು. ತನ್ನಂತಿರುವ ಹಲವಾರು ಜನ ಕಾಲೇಜುಗಳಿಂದ ಹೊರಬೀಳುತ್ತಾರೆ; ನೌಕರಿಯನ್ನು ಹಂಬಲಿಸುತ್ತಾರೆ. ನೌಕರಿಯೆಂದರೆ ಯಾವಾವ ಊರಿಗೋ ಸುತ್ತಾಡಬೇಕು, ಯಾರ್ಯಾರ ಹಿಂದೆಯೋ ಅಲೆದಾಡಬೇಕು, ನಿಶ್ಚಿತ ನೆಲೆಯಿಲ್ಲದ ಮುಸಾಫಿರರಾಗಬೇಕು. ತನ್ನ ತಂದೆಯನ್ನು

ಕಾಣಬಾರದೇ? ಮುತ್ತಜ್ಜ ಹುಟ್ಟಿದ್ದು ಎಲ್ಲೋ! ಅಜ್ಜ ಬಾಳಿದ್ದು ಎಲ್ಲೋ, ತಂದೆಯ ಜನನ ಎಲ್ಲೋ, ತನ್ನದು ಇನ್ನೆಲ್ಲೋ. ನೌಕರಿಯ ಹಂಗಿಗಾಗಿ ನೆಲದ ಹಂಗು ತೊರೆದವರು ತಾವು. ನೆಲ ಕೊಡುವ ಸುಖವನ್ನು ಸವಿಯುವುದಕ್ಕಿಲ್ಲ. ತಾವು ಕುಳಿತ ಇದೇ ತಾವಿನ ಮಗ್ಗುಲಲ್ಲಿ ಬೆಳಕವಾಡಿ ಹಳ್ಳಿಯಿದೆ. ಎಷ್ಟು ಜನ ಅಲ್ಲಿ ಬದುಕಿಲ್ಲ; ತಮ್ಮ ನೆಲವನ್ನು ನೆಚ್ಚಿ ಬದುಕುತ್ತಿಲ್ಲ! ಬಡತನವಾದರೂ ಪರಾಶ್ರಯದ ಹಂಗಿನಲ್ಲಿ ಬಾಳುವೆ ಮಾಡುತ್ತಿಲ್ಲ! ಯಾವುದೋ ಒಂದು ಬಗೆಯ ಆತ್ಮತೃಪ್ತಿ ಅವರ ಮುಖದಲ್ಲಿ ಕಾಣಿಸುವಂತೆ ತನ್ನ ತಂದೆಯ ಮುಖದ ಮೇಲೆ ಕಾಣಿಸುತ್ತಿದೆಯೇ?

ಎಷ್ಟು ಸುಲಭದಲ್ಲಿ ಮುಂಬಯಿ ಬಿಟ್ಟು ದಿಲ್ಲಿಗೆ ಬಂದರು. ಸಂಸಾರವನ್ನು ಕಟ್ಟಿಕೊಂಡೇ ಬಂದರು. ಮರಾಠಿ ಬಿಟ್ಟು ಹಿಂದುಸ್ತಾನಿ ಕಲಿತರು. ನೌಕರಿಯ ಲಾಲಸೆಯಿಂದ ಎಷ್ಟು ಜನರ ಬೆನ್ನ ಹಿಂದೆ ಸುತ್ತಲಿಲ್ಲ, ಆಶ್ರಯ ಮಾಡಲಿಲ್ಲ. ಈಗಂತು ಉಪಕಾರ್ಯದರ್ಶಿಯಂಥ ದೊಡ್ಡ ಹುದ್ದೆ ಗಳಿಸಿದ್ದಾರೆ. ಆದರೂ ತೃಪ್ತಿ ದೊರೆತಂತಿಲ್ಲ. 'ತನಗಿಂತ ಕಡಿಮೆ ಸರ್ವಿಸಾದ ಇಂಥವ ಮೇಲೆ ಕುಳಿತಿದ್ದಾನೆ' ಎನ್ನುವ ಗೊಣಗುಟ್ಟುವಿಕೆ ಇದ್ದೇ ಇದೆ. ತಾಯಿಯ ಪ್ರಪಂಚದಲ್ಲೂ, ತಂದೆಯ ಪ್ರಪಂಚದಲ್ಲೂ, ಆಫೀಸುಗಳ ಕೀಟಲೆ, ತಕರಾರು, ಒಳಸಂಚುಗಳು–ಇವುಗಳ ಮಾತೇ ಹೆಚ್ಚು. ಅತೃಪ್ತಿಯಿಂದ ಕುದಿಯುವ ಮಾತುಗಳೇ ಎಲ್ಲ. ಅವೆಲ್ಲವನ್ನು ಮರೆಯಿಸುವುದಕ್ಕೆ ತೋರಿಕೆಯ ಸಾಮಾಜಿಕ ನಾಟಕಗಳನ್ನಾಡುತ್ತಾರೆ. ಚಹಾಪಾರ್ಟಿಗಳು, ಡಿನ್ನರ್ ಪಾರ್ಟಿಗಳು, ಸತ್ಕಾರ ಕೂಟಗಳು, ವಿದಾಯ ಸಭೆಗಳು. ಅದಕ್ಕೆ ಹೋಗುವಾಗ ನಾಟಕ ವೇಷಧಾರಿಗಳಂತೆ ಉಡಿಗೆ ತೊಡಿಗೆ; ಅಲಂಕಾರ, ಆಭರಣ! ಕೈತುಂಬ ಸಂಬಳ ಬರುತ್ತಿದ್ದರೂ ತಾವು ಸುಖಪಡುತ್ತಿರುವುದೂ ಕಾಣದು, ಅನ್ಯರಿಗೆ ಸುಖಕೊಡುತ್ತಿರುವುದೂ ಕಾಣದು. ಇಂಥ ಸಂಗತಿಗಳನ್ನು ಶಂಕರ ಕುಳಿತು ನೆನೆಯತೊಡಗಿದನೆಂದರೆ, ಅವನ ಅನುಮಾನಗಳಿಗೆ ಉತ್ತರ ದೊರೆಯದಾಗುತ್ತದೆ. ತಾನು ಅಂಥ ಒಬ್ಬ ನೌಕರನಾಗಬೇಕೇ? ನೌಕರಿಯ ಬೆನ್ನು ಹಿಡಿದು, ತನ್ನ ಆಯ್ಕೆ ಇಲ್ಲದ ಊರಿನಲ್ಲಿ ಬರಿಯ ಶ್ರಮಜೀವಿಯಾಗಿ ಬಾಳಬೇಕೇ?—ಎಂಬ ಸಂದೇಹ ಅವನಿಗೆ ಹೆಚ್ಚುತ್ತದೆ.

ಕೆಲಸವಿಲ್ಲದ ರಜಾದಿನ ಬಂತೆಂದರೆ ಗೆಳೆಯ ಸೀತಾರಾಮನನ್ನು

ಕಟ್ಟಿಕೊಂಡು ಬೆಳಕವಾಡಿಗೆ ಹೋಗುತ್ತಾನೆ. ಅಲ್ಲಿನ ಹೊಲಗಳ ದಂಡೆ ಯಲ್ಲಿ ಕುಳಿತುಕೊಳ್ಳುತ್ತಾನೆ. ಎತ್ತಾದರೆ ಎತ್ತು, ದನವಾದರೆ ದನವನ್ನು ನೇಗಿಲಿಗೆ ಕಟ್ಟಿ ಉಳುವ ರೈತನನ್ನು ಮಾತನಾಡಿಸುತ್ತಾನೆ. ಮಳೆ ಬೆಳೆ ಗಳನ್ನು ಕುರಿತು ಚರ್ಚಿಸುತ್ತಾನೆ. ಅದಷ್ಟೂ ರಸವತ್ತಾದ ಸಂಭಾಷಣೆ ಗಳಲ್ಲ. ರೈತನ ಬಾಳಿನ ಕೊರಗು ಬವಣೆಗಳೆಲ್ಲ ಕಾಡುವಂಥವು. ಬೇನೆ ಯಿದೆ; ಬರಗಾಲವಿದೆ; ರೋಗ ರುಜೆಯಿದೆ; ಮಕ್ಕಳು ಮರಿಗಳ ಪೋಷಣೆಯ ಆತುರವಿದೆ: ಸಾಲದ ಹೊರೆಯಿದೆ. ಆದರೂ ಬಹು ದೂರದ ಚಿಂತೆ ಮಾಡುವವರಲ್ಲ. "ಏನೋ ಆಗುತ್ತದೆ. ಅವನು ಈ ತನಕ ನಡೆಯಿಸಿಕೊಂಡು ಬಂದಿದ್ದಾನೆ; ನಾಳೆಗೂ ನಡೆಯಿಸಿಯಾನು. ಕಷ್ಟ ಯಾರಿಗೆ ತಪ್ಪಿದ್ದು? ಇಷ್ಟಾದರೂ ಇದೆಯಲ್ಲ, ಅದೇ ಸಂತೋಷ" ಎನ್ನುವ ಒಂದೊಂದು ತೃಪ್ತಿಯ ಮಾತಾದರೂ ಅವನ ಕಿವಿಗೆ ಬೀಳುತ್ತದೆ. ಅದನ್ನೇ ನೆನೆಯುತ್ತ ಮನೆಗೆ ಮರಳುತ್ತಾನೆ. ಗೆಳೆಯನೊಡನೆ "ನಿಮ್ಮೂರು ಹೀಗೇ ಇದೆಯೇ? ಅಲ್ಲಿ ನದಿ ಇದೆಯೇ! ನಾಲೆ ಇದೆಯೇ! ಏನು ಬೆಳೆ ಯುತ್ತಾರೆ? ಜನರು ಆಡುವ ಮಾತು ಯಾವುದು? ಉಡಿಗೆ ತೊಡಿಗೆ ಹೇಗೆ?" ಎಂದು ವಿಚಾರಿಸುತ್ತಾನೆ.

ಈ ಎರಡು ಮೂರು ತಿಂಗಳ ಕಾಲ ಆ ಊರಲ್ಲಿ ವಾಸಿಸಿದುದರ ಫಲ ವಾಗಿ ಶಂಕರನಿಗೆ ತುಣುಕು ತುಣುಕು ಕನ್ನಡ ತಿಳಿಯಲು ತೊಡಗಿದೆ. ಅದು ಅಲ್ಲಿನ ಗ್ರಾಮ್ಯ ಭಾಷೆ. ಹಳ್ಳಿಯವರೊಡನೆ ಮಾತನಾಡುವಾಗ ಮಧ್ಯವರ್ತಿಯಾಗಿ ಸೀತಾರಾಮ ಇದ್ದೇ ಇರುವ. ಹೀಗಾಗಿ ಗೆಳೆಯನ ಆಸಕ್ತಿಯನ್ನು ತಾನೂ ವಹಿಸಿಕೊಂಡು ಅವರನ್ನು ಮಾತನಾಡಿಸುವ ಹೊಣೆಯು ಅವನದ್ದು. ಆಗ ಎಷ್ಟೋ ಬಾರಿ ಸೀತಾರಾಮನಿಗೆ ಗೆಳೆಯನ ಮಂಕು ಎಲ್ಲಿಗೆಲ್ಲ ಹರಿಯುತ್ತದೆ, ಏತಕ್ಕೆ ಹರಿಯುತ್ತದೆ—ಎಂದು ವಿಸ್ಮಯವಾಗುವುದುಂಟು. ಆತ ನಗುತ್ತ "ಏನು ಶಂಕರ್, ನೀನು ಎಂಜಿ ನಿಯರಿಂಗ್ ಓದುವ ಬದಲು ಕೃಷಿ ತೆಗೆದುಕೊಂಡಿದ್ದರೆ ಎಷ್ಟೋ ಲೇಸಿ ತ್ತಲ್ಲ. ಈ ಹೊಲಗದ್ದೆಗಳ ಮೇಲೆ ಅಷ್ಟೇನು ಮೋಹ ನಿನಗೆ? ಆದರೆ ಒಂದನ್ನು ಖಂಡಿತವಾಗಿ ತಿಳಿದುಕೋ. ಇಂಥ ಗದ್ದೆಗಳನ್ನು, ಬಡಕಲು ಎತ್ತುಗಳನ್ನು ಕಟ್ಟಿಕೊಂಡು ನಮ್ಮಂತಹ ಮಧ್ಯಮ ವರ್ಗದ ಜೀವಿಗಳ

ಜೀವನ ಸಾಗಲಾರದು. ನನಗೂ ಹೊಲ, ಮನೆಗಳಿವೆ; ನನ್ನ ತಂದೆ ತಾಯಿಯು, ಒಬ್ಬ ಅಣ್ಣ ಇವರಂತೆ ದುಡಿಯುತ್ತಿದ್ದಾರೆ ಊರಿನಲ್ಲಿ. ಆದರೆ ಆ ಜೀವನ ಕಂಡು ನನಗೆ ಮೋಹ ಹುಟ್ಟಿಲ್ಲ, ಹುಟ್ಟುವಂತಿಲ್ಲ. ಆ ದರಿದ್ರ ಬಾಳು ಇಷ್ಟಿಷ್ಟೂ ಹಿಡಿಸುವುದಿಲ್ಲ. ಒಮ್ಮೆ ಊರಿಗೆ ಹೋದರೆ ತಿರುಗಿ ಎಂದು ಅಲ್ಲಿಂದ ಹೊರಟೇನು—ಅನಿಸುತ್ತದೆ. ಏನು ಸೌಕರ್ಯ ವಿದೆ ಹಳ್ಳಿಗಳಲ್ಲಿ? ಪ್ರಾಯಶಃ ಮುಂಬಯಿ, ದಿಲ್ಲಿ, ಕಾಶಿಯಲ್ಲೇ ಹುಟ್ಟಿ ಬೆಳೆದ ನಿನಗೆ ಇದೆಲ್ಲ ಹೊಸತಾಗಿ ಕಂಡು, ಸುಂದರವಾಗಿ ಕಾಣಿಸುತ್ತಿರ ಬಹುದು. ಹಳ್ಳಿ ನೋಡುವುದಕ್ಕೇನೋ ಸೊಗಸು ನಿಜ. ಆದರೆ ನಾಗ ರಿಕ ಸೌಕರ್ಯ ಒಂದೊಂದೂ ಇಲ್ಲ. ಏಳೆಂಟು ದಿನ ಕುಳಿತರೆ ಬೇಸರ ಬರುತ್ತದೆ. ನಮ್ಮೂರು ಈ ಬೆಳಕವಾಡಿಗಿಂತ ಎಷ್ಟೋ ಎಷ್ಟೋ ಚೆಲು ವಿನ ಊರು. ಆ ಚೆಲುವೆಲ್ಲ ಕಣ್ಣಿನದು. ಬೆಟ್ಟದ ಬಣ್ಣ, ಬಾನಿನ ಬಣ್ಣ ಮಣ್ಣಿನಬಣ್ಣ, ಮುಗಿಲಿನ ಬಣ್ಣ—ಹೊಟ್ಟೆಗೂ ಬಟ್ಟೆಗೂ ಕೊಡದ ಬಣ್ಣ ಗಳವು. ಅತಿಯಾದ ಮಳೆಯಿಂದ ಸತ್ವ ಶೂನ್ಯವಾದ ನೆಲ; ಸತ್ವ ಕಳೆದುಕೊಂಡ ಹುಲ್ಲು ತಿಂದು ಬಡಕಲಾದ ದನಕರುಗಳು; ಹೊಟ್ಟೆಗೆ ಇದ್ದರೆ ಉಂಟು—ಇಲ್ಲವಾದರೆ ಇಲ್ಲ—ಎಂಬಂಥ ಜನ! ಹರಕು ಪಂಚೆ ಪೀತಾಂಬರವಾಗಿ ಕಾಣಿಸುವ ಬಡತನ! ಆರು ತಿಂಗಳ ಕಾಲ ಕೆಲಸಮಾಡಿ ದರೆ ಆರು ತಿಂಗಳು ಜ್ವರದಿಂದ ಮಲಗಬೇಕಾದ ಹವೆ. ಅಂಥ ಹಳ್ಳಿಯ ಜೀವನ ಅನುಭವಿಸಿದರೆ ಬಾಳಿನ ಬಣ್ಣಗಳೆಲ್ಲ ಕಳಚಿ ನಮಗೆ ಇದಿರಾಗು ವುದು ರೈತನ ಬಡ ಅಸ್ಥಿಪಂಜರ ಮಾತ್ರ!"

"ನೀನಷ್ಟು ನಿರಾಶಾವಾದಿಯೇ? ಇಂದು ವಿಜ್ಞಾನ ನಮಗಷ್ಟು ಕಲಿಸಿಕೊಟ್ಟಿರುವಾಗ ಈ ತೆರನ ದಾರಿದ್ರ್ಯವನ್ನು ಇನ್ನೂ ಇನ್ನೂ ಕಾಣ ಬೇಕಾದೀತೇ? ನನಗೆ ಹಳ್ಳಿಗಳ ಮೇಲೆ ಏತಕ್ಕೋ ಮಮತೆ ಹುಟ್ಟುತ್ತಿದೆ. ಇನ್ನೂ 'ಮಮತೆ' ಅನ್ನಲಾರೆ ಅದನ್ನು. ಅಷ್ಟೊಂದು ಬೆಳೆಯದ ಅಭಿ ಮಾನ. ಸಿಟಿ, ಶಹರುಗಳ ಪೊಳ್ಳು ಜೀವನ ಮಾತ್ರ ಇಷ್ಟಿಷ್ಟೂ ಹಿಡಿಸು ವುದಿಲ್ಲ. ನಾನು ಇಂಟರ್ ಪರೀಕ್ಷೆ ಮುಗಿದೊಡನೆ ಏನುಮಾಡಲಿ—ಎಂದು ಯೋಚಿಸಿದಾಗ ಎಂಜಿನಿಯರಿಂಗಿನ ನೆನಪಾಯಿತು. ಹಾರಿದೆ ಅದಕ್ಕೆ. ಈಗೀಗ, ಕೃಷಿ ವಿದ್ಯಾಭ್ಯಾಸ ಪಡೆದಿದ್ದರೇ ಲೇಸು—ಅದರ ಬದಲು ಎನಿ

ಸುತ್ತ್ರದ.

" ಎಂಜಿನಿಯರಿಂಗನ್ನಂತು ಕಲಿತಾಯಿತು. ಅದರ ಮೇಲೆ ಇನ್ನೊಂದು ಡಿಗ್ರಿ ಪಡೆಯುವ ಯೋಚನೆಯೇ? ನಿನಗೆ ಕೆಲಸ ದೊರಕಿಸಿಕೊಳ್ಳು ವುದೂ ಸುಲಭ. ಸೆಕ್ರೆಟೇರಿಯಟ್‌ನಲ್ಲೇ ಇದ್ದಾರೆ. ಅವರ ವರ್ಚಸ್ಸಿನಿಂದ ಎಲ್ಲಿಯೂ ಉದ್ಯೋಗ ದೊರಕೀತು, ಆದರೆ ಇನ್ನೂ ಎಗ್ರಿಕಲ್ಚರಲ್ ಕೋರ್ಸ್ ತೆಗೆದುಕೊಳ್ಳುತ್ತೇನೆ ಎಂದರೆ ತಂದೆ ಒಪ್ಪಿಯಾರೆ?"

" ಎಂದೂ ಒಪ್ಪಲಾರರು. ನಾನು ಕೇಳುವುದೂ ಸಮನಲ್ಲ."

" ಹಾಗಿದ್ದ ಮೇಲೆ ನನಗೂ ನಿನಗೂ ನೌಕರಿಯೇ ಮೋಕ್ಷಸಾಧನ! ಚೇಷ್ಟೆ ಮಾಡುತ್ತೇನೆ ಎಂದು ತಿಳಿಯಬೇಡ. ಕಲಿತಾಯಿತು, ಪ್ರಾಯ ವಾಯಿತು, ಸಂಸಾರವನ್ನು ಕಟ್ಟಿಕೊಂಡು ಕುಣಿಯುವ ಕಾಲವೂ ಬಂದಿದೆ. ನನಗಂತು ಊರಿಗೆ ಹೋದಾಗಲೆಲ್ಲ ತಂದೆ ಪೀಡಿಸುತ್ತಿದ್ದಾರೆ. 'ಮದುವೆ ಯಾಗು, ಮದುವೆಯಾಗು' ಅನ್ನುತ್ತಿದ್ದಾರೆ. ಆಗಬೇಕಾದದ್ದೂ ಸರಿಯೆ. ನಮ್ಮವರು ಜಾತಿಯ ಗಡಿಬಿಟ್ಟು ಹೋಗುವವರಲ್ಲ. ಅದು ಸಾಧ್ಯವಿದ್ದರೆ".

"ಏನು ಮಾಡುತ್ತಿದ್ದೆ?"

"ಕಾಶಿಯಲ್ಲೇ ನನ್ನ ಸ್ವಯಂವರ ನಡೆಯುತ್ತಿತ್ತೋ ಏನೋ, ಆದರೆ ಕಾಲೇಜು ಜೀವನದಲ್ಲಿ ಶೃಂಗಾರ, ವಿಲಾಸ ಬರಿಯ ನಾಟಕವೆಂದು ಗೊತ್ತು. ಮದುವೆಯಾಗುವ ಕನ್ಯೆಗಾಗಿ ಮನೆಯ ಕಟ್ಟುಪಾಡು ಮುರಿಯುವ ಶಕ್ತಿ ನನಗೆ ಇಲ್ಲ. ನಾಳೆ ನನಗೆ ಜೋತುಬೀಳುವವಳು ಯಾವಳಾದರೂ ಒಬ್ಬ ಹಳ್ಳಿಯ ಹುಡುಗಿ ಎಂಬುದನ್ನು ಬಲ್ಲೆ. ಆದರೆ ಅದರಿಂದ ಒಂದು ಲಾಭ ವೇನೋ ಇದೆ. ಗಂಡ ಹೋದಲ್ಲಿಗೆ ಬರುತ್ತಾಳೆ, ಬಂದದ್ದನ್ನು ಅನುಭವಿ ಸುತ್ತಾಳೆ. ನನಗೆ ಆ ಕಷ್ಟ ಬರಲಾರದು."

"ಯಾವ ಕಷ್ಟ?"

"ನಿನ್ನಂಥವರಿಗೆ ಬರಬಹುದಾದ ಕಷ್ಟ." ಒಂದು ನಿಮಿಷ ಸೀತಾ ರಾಮ ಸುಮ್ಮನೆ ಕುಳಿತ. ಅನಂತರ ಗೆಳೆಯನ ಮುಖ ನೋಡುತ್ತ ಮೆಲು ನಗೆಯಿಂದ ಹೇಳತೊಡಗಿದ "ನಿಮ್ಮ ಮನೆಯಲ್ಲಿ ನಾಲ್ಕು ದಿನ ಇದ್ದಾಗ ಉಂಟಾದ ಅಲ್ಪಾನುಭವದಿಂದ ಹೇಳುತ್ತಿದ್ದೇನೆ. ತಪ್ಪಿದ್ದರೆ ಕ್ಷಮಿಸು."

"ಹೇಳು, ತಪ್ಪೇನು?"

"ನಿಮ್ಮ ಮನೆಯವರೆಲ್ಲ ಮೇಲು ಅಂತಸ್ತಿನ ಜನರು. ಅಲ್ಲಿಗೆ ಬಂದು ಹೋಗುವವರೂ ಅಂತಹರೇ. ಪದವಿಯುಳ್ಳವರು, ವಿದ್ಯೆಯುಳ್ಳವರು, ಹಣವುಳ್ಳವರು. ನಿನ್ನ ಪಾಲಿಗೆ ಬರುವ ಕನ್ಯೆ ಅಂಥ ಸಮಾಜದಿಂದಲೇ ಬರಬೇಕೆಂಬುದು ನಿರ್ವಿವಾದ. ನಗರದಲ್ಲೇ ಹುಟ್ಟಿ, ನಗರದಲ್ಲೇ ಬೆಳೆದು ಅಲ್ಲಿಯೇ ವಿದ್ಯಾಭ್ಯಾಸ ಪಡೆದು, ಬೆಡಗುಗಾತಿಯಾದ ದೊರೆಸಾನಿಯೊಬ್ಬಳನ್ನು ನೀನು ಮದುವೆಯಾದರೆ ನಾಳೆ, ಅವಳ ಮಾತೂ ನಡೆಯಬೇಕಾಗುತ್ತದೆ. ನಮ್ಮ ಹಳ್ಳಿಯ ಹುಡುಗಿಯರ ಹಾಗೆ ವಿಧಿಯನ್ನು ನಂಬಿ ಬೆನ್ನ ಹಿಂದೆ ಬರುವ ವ್ಯಕ್ತಿ, ಅಂಥವಳಾಗಬಲ್ಲಳೇ? ಯಾವುದಾದರೂ ಊರಿಗೆ ಹೋದರೆ, ನಿನ್ನ ಜತೆಗೆ ಬರುವ ಬದಲು, ತವರುಮನೆ ಬಿಟ್ಟು ಕದಲದೆ ಕುಳಿತರೂ ಕುಳಿತಳೇ. ಊರಿನ ಆಯ್ಕೆಯಲ್ಲಿ ಅವಳಿಗೂ ಪಾಲುಂಟು. ಆಗ ನಿನ್ನ ಉದ್ಯೋಗದ ಆಯ್ಕೆಯಲ್ಲಿ ಅವಳಿಗೂ ಒಂದು ಅಧಿಕಾರ ಬರುತ್ತದೆ. ನಿನ್ನ ತಂದೆ, ತಾಯಿಗಳ ಉಪದೇಶದೊಡನೆ, ನಿನ್ನ ನಾಳಿನ ಹೆಂಡತಿಯ ಉಪದೇಶವನ್ನೂ ನೀನು ಕೇಳುವುದು ಅನಿವಾರ್ಯವಾಗುತ್ತದೆ."

ಶಂಕರ ಈ ಉಪನ್ಯಾಸವನ್ನು ಕೇಳುತ್ತಲೇ ಇದ್ದ. ಗೆಳೆಯನ ಒಂದೊಂದು ಮಾತು ಮಾರ್ಮಿಕವಾಗಿ ಮನವನ್ನು ನಾಟುತ್ತಲಿತ್ತು. ಅವನ ಪರಿಶೀಲನೆ, ತೀರ್ಮಾನಗಳೆರಡನ್ನೂ ಕೇಳಿದ ಬಳಿಕ, ತನ್ನಲ್ಲಿ ಹೊಸತಾಗಿ ಬೇರೂರಿದ ಆಸೆಗೂ, ತನ್ನ ಭಾವೀ ಪತ್ನಿಗೂ ಮೇಳಕಾಣಿಸಲಿಲ್ಲ. ಈ ಭಾವೀ ಮಡದಿಯ ವಿಚಾರದಲ್ಲಿ ಸೀತಾರಾಮ ಅಜ್ಞಾನಿ. ಆದರೆ ಅವಳ ಕುಲಗೋತ್ರ ಹೇಳುವುದರಲ್ಲಿ ಭವಿಷ್ಯವಾದಿಯಂತೆ ಸ್ಪಷ್ಟ ತೀರ್ಮಾನ ನುಡಿದು ಬಿಟ್ಟಿದ್ದಾನೆ. ಕಾವೇರಿ ನದಿ ದಂಡೆಯ ಮೇಲೆ ಕುಳಿತು, ಸೃಷ್ಟಿ ಸೌಂದರ್ಯದಲ್ಲಿ ತೇಲುತ್ತಿರುವಾಗ, ಶಂಕರನ ಚಿದಾಕಾಶದಲ್ಲಿ ವರಲಕ್ಷ್ಮಿಯು ಹಲವು ಬಾರಿ ಮಿಂಚಿ ಹೋಗಿದ್ದಾಳೆ. ದಿಲ್ಲಿಯಿಂದ ಬಂದ ಬಳಿಕ ನಾಲ್ಕಾರು ಪತ್ರಗಳು ಬಂದಿವೆ. ಅನುಮಾನಿಸಿ ಅನುಮಾನಿಸಿ ಪತ್ರವ್ಯವಹಾರತೊಡಗಿದವ ಶಂಕರ. ಅಳುಕುದೋರದೆ ಅವನ ಆಸೆಯ ಗಿಡಕ್ಕೆ ನೀರೆರೆಯುವೆನೆಂಬ ಭರವಸೆಕೊಟ್ಟವಳು ಅವಳು. ಅಲ್ಲಿಂದ ಆತ ಬರಿಯ ನಾಲ್ಕಾರು ದಿನಗಳನ್ನು ಮಾತ್ರ ದಿಲ್ಲಿಯಲ್ಲಿ ಕಳೆದುದು. ಅಷ್ಟಕ್ಕೆ ಸೀತಾರಾಮ ಬಂದು ಕೂಡಿದ. ಇದ್ದ ವಿರಾಮದಲ್ಲಿ ಅವನಿಗೆ ದೇಹಲಿಯನ್ನು ತೋರಿಸುವ ಕೆಲಸ

ಮಾಡಬೇಕಾಯಿತು. ಹೀಗಾಗಿ ವಿರಾಮದಲ್ಲಿ ವರಲಕ್ಷ್ಮಿಯೊಡನೆ ತಮ್ಮ ಭವಿಷ್ಯವನ್ನು ತರ್ಕಿಸುವ ಅವಕಾಶ ದೊರಕಲಿಲ್ಲ. ಬಳಿಕ ದಿಲ್ಲಿಯನ್ನು ಬಿಟ್ಟು ಶಿವಸಮುದ್ರಕ್ಕೆ ಬಂದುದಾಯಿತು.

ದೂರ ಹೆಚ್ಚಿದಂತೆ ಆಸೆ ಹೆಚ್ಚುತ್ತದೆ. ಪ್ರೇಮ ಉತ್ಕಟವಾಗುತ್ತದೆ. ಬರೆದು ಮನಸ್ಸನ್ನು ಪ್ರಕಟಿಸಬೇಕು. ಬರೆಯಲು ಹವಣಿಸಿದರೆ ಶೃಂಗಾರ ಕಾವ್ಯಕ್ಕೆ ಒಡಲಾರದ ಕೈ ಶಂಕರನದು. "ದಿಲ್ಲಿಯ ಹವೆ ಹೇಗಿದೆ? ವರಲಕ್ಷ್ಮಿ, ನಿನ್ನ ತಂಗಿ ತಮ್ಮಂದಿರು ಹೇಗಿದ್ದಾರೆ? ನಾನು ಕೊಟ್ಟ ಕಾದಂಬರಿ ಹೇಗಿತ್ತು?" ಎಂದು ವಾಸ್ತವಿಕ ಸುಖದುಃಖಗಳ ಪ್ರಶ್ನೆ ಮಾಡುತ್ತಿದ್ದ. ಲಾವಣ್ಯಮಯ ಜೀವನಕ್ಕೆ, ಸುರಸ ಶೃಂಗಾರದ ಮಾತುಗಳಿಗೆ ಪಳಗಿರಲಿಲ್ಲ ಅವನ ಲೇಖನಿ. ಕಾಶಿಯ ತನ್ನ ಇತರ ಸಹಪಾಠಿಗಳಂತೆ ತುಸು ಧೈರ್ಯವಂತನಾಗಿದ್ದರೆ, ಮನದ ಬಯಕೆಗಳಿಗೆ ಮಾತಿನ ಬಣ್ಣನೆ ಒದಗಿಸಬಲ್ಲವನಾಗಿದ್ದರೆ, ಸ್ವಪ್ನ ಮಂದಿರವನ್ನೇ ಆತ ಕಟ್ಟಬಹುದಿತ್ತು. ಇಂಥ ಪತ್ರಗಳು ವರಲಕ್ಷ್ಮಿಯಲ್ಲಿ ಒಲುಮೆಯ ಪ್ರೇರಣೆ ಹುಟ್ಟಿಸದಾದರೂ ಆಕೆ ಇವನಿಗಿಂತ ಎಷ್ಟೋ ವಾಸಿ. ಬೆಡಗು ಬಿನ್ನಾಣ ಬಲ್ಲವಳು. ಪ್ರತ್ಯಕ್ಷದರ್ಶನದಲ್ಲಿ ತಡೆದ ನಾಲಿಗೆಗೆ ಲೇಖನಿಯ ಮೂಲಕ ಸ್ವಾತಂತ್ರ್ಯ ಕೊಡಬಲ್ಲಳು. ಶಂಕರನನ್ನೊಲಿಸುವ ಮಾತುಗಳೇ ಅವಳ ಪತ್ರಗಳಲ್ಲಿ. ಹೋದ ಮರುದಿನವೇ 'ಬರುವುದೆಂದಿಗೆ ?' ಎಂದು ಕೇಳಿದ್ದಾಳೆ. ಕ್ಷಣಗಳನ್ನು ದಿನವಾಗಿ ಮಾಡಿದ್ದಾಳೆ ; ದಿನವನ್ನು ಯುಗವಾಗಿ ಹೋಲಿಸಿದ್ದಾಳೆ ; ಆಸೆಯ ಅರಮನೆ ಕಟ್ಟಿದ್ದಾಳೆ ; ನಾಳಿನ ಜೀವನದ ಭವ್ಯ ಕನಸನ್ನು ಹೆಣೆದಿದ್ದಾಳೆ. ಅಂಥ ಬಣ್ಣನೆಯ ಮಾತುಗಳನ್ನೋದಿದ ಶಂಕರನಿಗೂ ಅನಿಸುತ್ತಿತ್ತು—ಆಕೆ ಓದಿದ ಸಾಹಿತ್ಯ ಸಾರ್ಥಕವೆಂದು.

ಆದರೆ ವರಲಕ್ಷ್ಮಿಯೂ ಹುಚ್ಚು ಹುಡುಗಿ. ಭಾವನೆ ತುಂಬಿದ್ದರೇನು ? ಯೌವನ ಬಲಿತಿದ್ದರೇನು ? ಅವರವರ ಮನ ಕುಣಿದಂತೆ ಜಗತ್ತು ಕುಣಿಯುವುದಿಲ್ಲ. ಆಕೆಗೆ ಹೊರಗಿನ ಪ್ರಪಂಚದ ಜ್ಞಾನವಿಲ್ಲ. ಸಂಪ್ರದಾಯಬದ್ಧವಾದ ತಮ್ಮ ಮನೆಯ ಅರಿವೇ ಉಳ್ಳವಳಾಗಿರಲಿಲ್ಲ. ಎಳೆ ಹುಚ್ಚು ಹೊಳೆಗಳನ್ನೆಲ್ಲ ಪತ್ರಗಳಲ್ಲಿ ಹರಿಯಿಸುತ್ತಿದ್ದಳು. ತಾನು ಬಯಸಿದ ಆಸೆಗಳೆಲ್ಲ ಮರುಕ್ಷಣ ಫಲಿಸುವುದೆಂಬ ಆಶಾವಾದಿತ್ವ ಅವಳದ್ದು.

ಆದರೆ ಈ ಆಸೆಯ ಮರಕ್ಕೆ ಅವಳ ತಂದೆತಾಯರೇ ಕೊಡಲಿ ಏಟನ್ನು ಕೊಟ್ಟರು ಒಂದು ದಿನ.

ಶಂಕರ ಹೊರಟುಹೋದ ಒಂದು ತಿಂಗಳಲ್ಲಿ ಅವರ ಮನೆಗೆ ಕಲ್ಕತ್ತೆಯಿಂದ ನಂಟರ ಧಾಳಿಯಾಯಿತು. ಅಲ್ಲಿಂದ ಸುಂದರಿ ನಟೇಶನ್ ಮತ್ತು ಅವರ ಮಗ ರಾಧಾಕೃಷ್ಣ ಎಂಬುವರು ಅಭ್ಯಾಗತರಾಗಿ ಬಂದರು. ಅವರನ್ನು ಸ್ಟೇಷನಿನಲ್ಲಿ ಇದಿರಿಸಿ, ಸ್ವಾಗತಿಸಿ, ಕರೆದು ತರಲು ವರಲಕ್ಷ್ಮಿಯ ತಂದೆ ತಾಯರು ತಾವೇ ಹೋಗಿದ್ದರು. ಹಾಗೆಲ್ಲ ಚಿಕ್ಕಪುಟ್ಟ ವ್ಯಕ್ತಿಗಳನ್ನು ಜಯರಾಮ್ ಆಗಲಿ ಅವರ ಮಡದಿಯಾಗಲಿ ತಾವೇ ಹೋಗಿ ಕರೆದು ತರುವುದು ಅಪೂರ್ವ. ಹಾಗೆ ಮಾಡಿದರೆಂದರೆ ತಮ್ಮ ಸಮಾನ ವರ್ಗದ ಇಲ್ಲವೇ ಮೇಲಂತಸ್ತಿನ ಜನರು ಮನೆಗೆ ಬರುತ್ತಾರೆಂದು ಗೊತ್ತು. ಬಂದ ಅತಿಥಿಗಳನ್ನು ಊಟ ಉಪಚಾರಗಳಿಂದ ಸತ್ಕರಿಸಿದ ರೀತಿಯೂ ಅಸಾಮಾನ್ಯವಾಗಿತ್ತು. ಆ ಸಂಭ್ರಮದಲ್ಲಿ ವಿಶೇಷ ಪಾಲು ನಮ್ಮ ವರಲಕ್ಷ್ಮಿಗಿತ್ತು. ತಾಯಿ, ಮಗಳ ವಿಚಾರದಲ್ಲಿ "ಆ ಸೀರೆ ಬೇಡ, ಈ ಕುಪ್ಪಸ ಬೇಡ, ಆ ಚಿನ್ನ ಹಾಕು, ಈ ಹೂ ಮುಡಿ" ಎಂದು ಆಗಾಗ ಸಲಹೆಗಳನ್ನು ನೀಡುತ್ತಿದ್ದಳು. ಬಂದವರು ಮೂರು ದಿನ ಕಾಲ ಮನೆಯಲ್ಲಿದ್ದು ಹೋದರು. ವರಲಕ್ಷ್ಮಿ ಅವರೆಲ್ಲರಿಗೂ ಬಡಿಸಿದ್ದುಂಟು. ಬೆಳ್ಳಿಯ ತಟ್ಟೆ ತಾಲಿಗಳಲ್ಲಿ ಹಾಲು ಹಣ್ಣು ಕೊಟ್ಟದುಂಟು. ಬಂದ ಹುಡುಗ ರಾಧಾಕೃಷ್ಣನು ಅವಳ ಮುಖವನ್ನು ಮೇಲಿಂದ ಮೇಲೆ ನೋಡಬಯಸಿ ನಕ್ಕುದುಂಟು. ಹೊರಡುವಾಗ 'ಬರುತ್ತೇನೆ' ಎಂದು ಅವಳನ್ನೇ ಉದ್ದೇಶಿಸಿ ಹೇಳಿಯೂ ಹೋದ. ಹೊರಡುವ ಮುಂಚಿನ ದಿನ ರಾತ್ರಿ ಮಿಸೆಸ್. ಜಯರಾಮ್ ಮಗಳನ್ನು ಕರೆದು ಹುಡುಗ ಚೆನ್ನಾಗಿದ್ದಾನಲ್ಲವೇ! ಈ ವರ್ಷ ಎಫ್. ಸಿ. ಎಸ್. ಪರೀಕ್ಷೆಗೆ ಕುಳಿತುಕೊಳ್ಳುತ್ತಾನಂತೆ. ಅವನ ತಂದೆ ಕಲ್ಕತ್ತೆಯಲ್ಲಿ ಆಡಿಟರ್ ಜನರಲ್, ಹುಡುಗ ಪ್ರತಿ ಪರೀಕ್ಷೆಯಲ್ಲೂ ರೇಂಕ್ ಗಳಿಸಿದವ" ಎಂದುದಲ್ಲದೆ "ಜಾತಕವಂತು ಬಹಳ ಉತ್ತಮವಾಗಿ ಕೂಡುತ್ತದೆ. ನಮ್ಮ ಪೂಜೆಯ ಅಯ್ಯಂಗಾರರು ಹೇಳಿದರು 'ವರಲಕ್ಷ್ಮಿಗೆ ಇದು ಕಟ್ಟಿಟ್ಟ ವರ' ಎಂದಂದಳು.

ತಾಯಿಯ ಮಾತಿನಿಂದ ತಬ್ಬಿಬ್ಬಾದಳು ವರಲಕ್ಷ್ಮಿ. ಅವಳು ತೇಲು

ತ್ತಿದ್ದ ಸ್ವಪ್ನ ರಾಜ್ಯವು ಬೇರೆಯೇ ಆಗಿತ್ತು. ಮನೆಗೆ ಬಂದ ಯುವಕ, ರಾಧಾಕೃಷ್ಣ ನೋಡುವುದಕ್ಕೆ ಚೆನ್ನಾಗಿದ್ದ; ಸುಂದರ ಕಾಯ, ಬೆಳ್ಳಗಿನ ಬಣ್ಣ, ನೀಳವಾದ ಶರೀರ, ಗಂಭೀರವಾದ ಮುಖ ಮುದ್ರೆ. 'ಹುಡುಗ ಚೆನ್ನಿಲ್ಲ' ಎನ್ನುವ ಮಾತನ್ನು ಯಾರೂ ಆಡುವಂತಿಲ್ಲ. ಆದರೆ ಅವಳಿಗೆ ಇಂಥದೊಂದು ವಿಪತ್ತು ಕಾದಿತ್ತು—ಎಂಬ ಊಹೆಯೂ ಆಗಿರಲಿಲ್ಲ. ನೆಪ ತಯಾರಿಸುವುದಕ್ಕೂ ಅವಕಾಶವಿರಲಿಲ್ಲ. ತಾಯಿಯ ಮಾತಿಗೆ 'ಹಾಂ' ಎನ್ನಲಿಲ್ಲ 'ಹೂಂ' ಎನ್ನಲಿಲ್ಲ. ಆದರಿಂದ ಮಗಳ ಒಪ್ಪಿಗೆಯ ಅರ್ಥವನ್ನು ಕಲ್ಪಿಸಿಕೊಂಡಳು ತಾಯಿ.

ಮನೆಗೆ ಬಂದ ಅಭ್ಯಾಗತರು ಹೊರಟು ಹೋದರು. ರಾಧಾಕೃಷ್ಣ ತುಂಬ ಸಂತೋಷಗೊಂಡೇ ಹೊರಟು ಹೋಗಿದ್ದ. ಅವರು ಹೋದ ಬಳಿಕ ತಮ್ಮ ಸೆಕ್ರೆಟೇರಿಯಟ್ ಕೆಲಸಕ್ಕೆ ಹೋದರು—ಜಯರಾಮರು. ದಿನವೆಲ್ಲ ಮಿಸೆಸ್ ಜಯರಾಮಳು ಆತ್ಮವಿಶ್ವಾಸದಿಂದ ಮಗಳೊಡನೆ ಹೆಚ್ಚಿನ ಮಾತು ಕತೆಗಳನ್ನು ನಡೆಯಿಸಲಿಲ್ಲ. ಆ ಸಂಜೆ ಮಗಳೊಡನೆ ಪ್ರತಿಮಾದೇವಿಯ ಮನೆಗೆ ಹೋದಳು. ಪ್ರತಿಮೆಯು "ಏನು ಮೂರು ದಿವಸಗಳಿಂದ ಕಾಣೆ! ಊರಲ್ಲಿಯೇ ಇರಲಿಲ್ಲವೇ? ಎಲ್ಲಿಗೆ ಹೋಗಿದ್ದಿರಿ?", ಎಂದು ಕೇಳುತ್ತಲೇ, ಮಿಸೆಸ್ ಜಯರಾಮ ಮನೆಗೆ ಬಂದ ಅತಿಥಿಗಳ ಪ್ರಸ್ತಾಪ, ನಂಟುತನದ ಕತೆಗಳನ್ನು ಹೇಳಿದಳು. ವರಲಕ್ಷ್ಮಿ ಅದನ್ನು ಕೇಳಿದೊಡನೆಯೇ ಮುನಿಸು ಗೊಂಡು "ಏನಮ್ಮಾ, ಇಲ್ಲದ ಚೇಷ್ಟೆ ಮಾಡುತ್ತೀಯಾ? ನಾನು ಇಷ್ಟು ಬೇಗ ಮದುವೆಯಾಗುವುದಿಲ್ಲ. ನನ್ನ ಎಂ. ಎಸ್. ಸಿ. ಆಗಬೇಕು. ಮದುವೆ ಮಾಡಿ ನಿವಾರಿಸಿಕೊಳ್ಳುವುದಕ್ಕೆ ನಾನು ನಿನಗಷ್ಟು ಭಾರವಾಗಿದ್ದೇನೆಯೇ?" ಎಂದು ಒರಟಾಗಿಯೇ ನುಡಿದಳು. ಪ್ರತಿಮೆ ತಾನು ಸ್ವತಹ ಹೆಚ್ಚು ಕಲಿ ತವಳಲ್ಲವಾದರೂ, ನವಸಮಾಜದಲ್ಲಿ ಹೆಣ್ಣುಮಕ್ಕಳ ವಿದ್ಯಾಭ್ಯಾಸ ಬಿ.ಎ. ಎಮ್. ಎ. ತನಕವಾದರೂ ಆಗಬೇಕು--ಎಂದು ತಿಳಿದವಳು. ಆದುದ ರಿಂದ ಆಕೆ "ಏನ್ರಿ, ಮಿಸೆಸ್ ಜಯರಾಮ್, ಹಳ್ಳಿಯವರ ಹಾಗೆ ಅನ್ನು ತ್ತೀರಲ್ಲ. ಹುಡುಗಿಗೆ ಇಷ್ಟವಿಲ್ಲದೆಯೂ ಲಗ್ನಮಾಡುತ್ತೀರಾ? ಅಲ್ಲದೆ ಅವಳು ಇನ್ನೂ ಚಿಕ್ಕವಳು. ಕಲಿಯುವುದರಲ್ಲೂ ಜಾಣೆ. ಕನಿಷ್ಠ ಪಕ್ಷಕ್ಕೆ ಒಂದು ಎಮ್. ಎ. ಆದರೂ ಆಗಬೇಡವೇ? ಏಕಿಷ್ಟು ಅವಸರ?"

ಎಂದು ನುಡಿದಳು. ಅಷ್ಟು ಚೆನ್ನಾದ ನಂಟುತನ ಬರುವಾಗ ಅಂಥ ಸಂದರ್ಭ ಬಿಡುವುದೇ ? ಹುಡುಗ ಎಫ್. ಸಿ. ಎಸ್. ಪರೀಕ್ಷೆಗೆ ಕುಳಿತು ಕೊಳ್ಳುತ್ತಾನೆ. ತಂದೆಗೆ ಬಹು ದೊಡ್ಡ ನೌಕರಿ; ತಾವಾಗಿ ಹುಡುಕಿ ಬಂದಿದ್ದಾರೆ. ಬೇಡಿದರೆ ದೊರೆಯಲಾರದ ಸಂಬಂಧ. ಎಮ್. ಎಸ್. ಸಿ. ಆಗುವುದಾದರೆ ಮದುವೆಯಾದ ಮೇಲೂ ಆಗಬಹುದಲ್ಲ. ಕಲಿಯುವು ದಾದರೆ ' ಬೇಡ ' ಅನ್ನುವ ಹುಡುಗನಲ್ಲ " ಎಂದು ಉತ್ತರಿಸಿದಳು.

ವರಲಕ್ಷ್ಮಿ ಈ ಸಂಭಾಷಣೆಯಲ್ಲಿ ಉದಾಸೀನಳಾಗಿ ಮುಖ ತಿರುಗಿಸಿ ದಳು. ಅಲ್ಲಿಂದ ಅವರ ಹರಟೆಯ ಮಾತುಗಳು ನೂರಾರು ವಿಷಯಗಳ ಕಡೆಗೆ ತಿರುಗಿದುವು. ಆಕೆಯ ತಾಯ ಮನಸ್ಸು ತುಂಬ ನೊಂದಿತ್ತು ; ರೋಷಗೊಂಡಿತ್ತು. ಮನೆಗೆ ಮರಳಿದ ಮೇಲೆಯೂ ಮಗಳೊಡನೆ ಮಾತ ನಾಡದೆ ಗಂಡನಿಗೆ ಆ ಸಂಗತಿ ತಿಳಿಸಿದಳು. ತಮ್ಮಲ್ಲಿ ಅತಿಯಾದ ವಿಶ್ವಾಸ ವುಳ್ಳ ಜಯರಾಮ " ನಿನಗ್ಯಾಕಷ್ಟು ಗಡಿಬಿಡಿ ? ನಾನು ಹೇಳಿದರೆ ಕೇಳು ತ್ತಾಳೆ. ಅವಳಿಗೆ ಎಮ್. ಎಸ್. ಸಿ. ಮಾಡುವ ಆಸೆ ಇರಬಹುದು. ಕಲಿ ಯುವುದಕ್ಕೆ ಯಾರು ಬೇಡವೆನ್ನುತ್ತಾರೆ ? ಅದಕ್ಕೂ ಇದಕ್ಕೂ ಸಂಬಂಧ ವೇನಂತೆ ?" ಎಂದು ಅಧಿಕಾರ ವಾಣಿಯಿಂದಲೇ ಹೇಳಿದರು.

ಜಯರಾಮರು ತಮ್ಮ ಮಕ್ಕಳ ಮಾತಿಗೆ ಬೆಲೆಕೊಡುವ ಸ್ವಭಾವ ದವರಲ್ಲ. ಈಗ ಕೊಡುತ್ತಾರೆಯೇ ? ಅದರ ಬದಲು, ಮುಂಬರುವ ವಿವಾಹಕ್ಕೆ ಏನೇನು ಸಿದ್ಧತೆಗಳಾಗಬೇಕು ?" ಎಂದು ಹೆಂಡತಿಯೊಡನೆ ಚರ್ಚಿಸತೊಡಗಿದರು. ಗಂಡನ ಮಾತಿನಲ್ಲಿ ಧೈರ್ಯತಾಳಿ ಆಕೆಯೂ ಚರ್ಚೆಯಲ್ಲಿ ಭಾಗವಹಿಸಿದಳು.

ಧೈರ್ಯಕೆಟ್ಟವಳು, ಅಧೈರ್ಯಕ್ಕೊಳಗಾದವಳು ವರಲಕ್ಷ್ಮಿ: ತನ್ನ ಭವಿಷ್ಯ ತನ್ನ ಕೈಯಲ್ಲಿಲ್ಲ—ಎಂದು ತಿಳಿಯತೊಡಗಿದ ಮೇಲೆ. ಆದರೂ ಹೊರನೋಟಕ್ಕೆ ನಯವಾಗಿ ಆಕೆ ಕಾಣಿಸಿಕೊಂಡರೂ ಅಂತರಂಗದಲ್ಲಿ ತನ್ನಿಷ್ಟ ಸಾಧಿಸಬೇಕೆಂಬ ಹಟವೂ ಇತ್ತು, ಶಕ್ತಿಯೂ ಇತ್ತು. ವಿಚಾರ ಶೀಲತೆಗಿಂತ ಆವೇಶದ ಹಟ ಹೆಚ್ಚು. ಆ ಆವೇಶವಾದರೂ ಅಷ್ಟೊಂದು ಪ್ರಕಟವಾಗುವ ಬಗೆಯದಲ್ಲ. ಮುಖ ಗಂಟಿಕ್ಕುವುದರಲ್ಲಿ, ಮೆಲುನಡಿಗೆ ಯಲ್ಲಿ, ಕತ್ತು ತಿರುಗಿಸುವುದರಲ್ಲಿ ಮುಖ್ಯವಾಗುತ್ತಿತ್ತು. ಮಾತಿಲ್ಲದ

ಮೌನದಿಂದ, ಕೇಳಿದರೂ ಕೇಳಿಸದಂತಹ ನಟನೆಯಿಂದ ಹಿರಿಯರನ್ನು ಅನಾದರಿಸಿ ತನ್ನ ಕೆಲಸ ಸಾಧಿಸುವ ಸ್ವಭಾವ ಅವಳದ್ದು. ಹಿಂದಿನಿಂದಲೇ ಅದನ್ನು ಸಾಧಿಸತೊಡಗಿದಳು. ಚಿನ್ನಾಭರಣದ ಮಾತುಗಳು ಬಂದಾಗ ಲೆಲ್ಲ "ನನ್ನನ್ನೇಕೆ ಕೇಳುತ್ತೀರಿ? ಅದನ್ನು ಹಾಕುವವರನ್ನು ಕೇಳಿ" ಎಂಬ ಉತ್ತರದಿಂದ ತಾಯಿ ತಂದೆಯರನ್ನು ದಂಗುಬಡಿಸಿದಳು. ಜಯರಾಮ ದಂಪತಿಗಳು ಇನ್ನೂ ಹೆಚ್ಚಿನ ಹಿರಿಯರಿಗೆ ಶರಣು ಹೋಗಬೇಕಾಯಿತು. ಮನೆಯ ಮಟ್ಟಿಗೆ ಹಿರಿಯಳಾದ ಎಪ್ಪತ್ತು ವರ್ಷದ ಮುದುಕಿ, ಜಯ ರಾಮರ ತಾಯಿ, ಅಧಿಕಾರದ ಸ್ಥಾನದಲ್ಲಿಲ್ಲವಾದರೂ ಗೌರವದ ಸ್ಥಾನದಲ್ಲಿದ್ದಾಳೆ. ಹೆಚ್ಚಿನ ಹರಟೆಗೆ ಹೋಗದೆ ಜಪಸರ ಹಿಡಿದು. ಜೀವನ ನಡೆಯಿಸುವ ಹಿರಿಯ ವ್ಯಕ್ತಿ. ಯಾರಲ್ಲೂ ಹೆಚ್ಚಿನ ಮಾತುಕತೆಯಿಲ್ಲ. ಮನಸ್ಸಾದರೆ ಮೊಮ್ಮಕ್ಕಳನ್ನು ಸುತ್ತ ಕುಳ್ಳಿರಿಸಿಕೊಂಡು ಹಳೆಯ ಕತೆಗಳನ್ನು ಹೇಳುತ್ತಾಳೆ. ದೂರು ಅಕೆಯ ಬಳಿಗೆ ಹೋಯಿತು. ನೆಂಟರ ವೈಭವವನ್ನೆಲ್ಲ ಬಣ್ಣಿಸಿದ್ದಾಯಿತು. ವರಲಕ್ಷ್ಮಿಯ ಒರಟು ದಾರಿಯನ್ನು ಖಂಡಿಸಿದ್ದಾಯಿತು. "ನೀನು ಹೇಳಿ ವರಲಕ್ಷ್ಮಿಯ ಮನ ಒಲಿಸಬೇಕು." ಎಂದು ತಾಯಿಯನ್ನು ಮಗ ಬೇಡಿಕೊಂಡನು; ಸೊಸೆಯೂ ಬೇಡಿಕೊಂಡಳು. ಅತ್ತೆಗೆ ಶರಣುಹೋಗುವ ಸ್ವಭಾವ ಶ್ರೀಮತಿ ಜಯರಾಮಳದ್ದಲ್ಲ. ಆದರೆ ಈ ಬಾರಿ ಬೇರೆಗತಿಯಿರಲಿಲ್ಲ. ಮುದುಕಿ "ನೋಡುವ" ಎಂದಳು. ಮನೆಯಲ್ಲಿ ಜನರು ಕಡಿಮೆಯಾದ ವೇಳೆಯನ್ನು ಆರಿಸಿ "ಯಾಕೆ ಹಾಗೆ ಮಾಡುತ್ತೀ ಅಮ್ಮಾ? ಹುಟ್ಟಿದ ಹೆಣ್ಣಿಗೊಂದು ಗಂಡು ಬೇಡವೇ? ನೆಂಟುತನ ಚೆನ್ನಾಗಿದೆ ಅನ್ನುತ್ತಾರೆ. ನನಗೂ ಹಾಗನಿಸುತ್ತಿದೆ. ಹುಡುಗನೂ ರೂಪವಂತ, ವಿದ್ಯಾವಂತ. ಒಲ್ಲೆನೆನ್ನುವುದರಲ್ಲಿ ಏನು ಅರ್ಥ?" ಎಂದು ಉಪದೇಶಿಸಿದಳು. "ಅಜ್ಜಿ, ನೀನು ಕೇಳಿದ್ದಕ್ಕೆ ಹೇಳುತ್ತಿದ್ದೇನೆ. ಇವರೆಲ್ಲ ಏನು ತಿಳಿದಿದ್ದಾರೆ? ನಾವು ಸಣ್ಣವರಾದ ಮಾತ್ರಕ್ಕೆ ನಮಗೆ ಸ್ವಂತ ಬುದ್ಧಿ, ಆಸೆ, ಎರಡೂ ಇಲ್ಲ, ಇರಬಾರದು—ಎಂದು ತಿಳಿಯುತ್ತಾರೆಯೇ? ಆತ ಚೆನ್ನಾಗಿರಬಹುದು. ಚೆನ್ನಾಗಿದ್ದಾನೆ ಎಂದೇ ಇರಿಸಿಕೊಳ್ಳುವ. ಆದರೆ ನನಗೊಂದು ಮನಸ್ಸೆಂಬುದು ಇಲ್ಲವೇ? ನನಗೆ ಸಮನೆಂದು ಕಂಡಾಗ ನಾನು ಮದುವೆಯಾಗಬಾರದೇಕೆ? ಈಗೇಕೆ

ಒತ್ತಾಯ? ನಾನು ಓದಬೇಕು, ಓದಿ ದೊಡ್ಡವಳಾಗಬೇಕು." ಎಂದು ತನ್ನ ಪಕ್ಷವನ್ನು ಮಂಡಿಸಿದಳು. ಅವರಲ್ಲಿ ತುಂಬ ಚರ್ಚೆ ನಡೆಯಿತು. ಚರ್ಚೆಯು ವರಲಕ್ಷ್ಮಿಯ ಪಾಲಿಗೆ ಅಷ್ಟೊಂದು ಸುಲಭವಾಗಿರಲಿಲ್ಲ. ಆದರೂ ಕೆಲವೊಂದು ವಿಚಾರವನ್ನು ತನ್ನ ಅಂತರಂಗದಲ್ಲೇ ಬಚ್ಚಿಟ್ಟು ಕೊಳ್ಳುವಷ್ಟು ಜಾಣ್ಮೆ ತೋರಿದಳು. ಒಟ್ಟಿಂದ ಮೊಮ್ಮಗಳಿಗೆ ಮದುವೆ ಇಷ್ಟವಿದ್ದಲ್ಲ, ಎಂದು ಖಚಿತವಾದ ಮೇಲೆ, ದಾಂಪತ್ಯದ ವಿಷಯದಲ್ಲಿ ಮನಸ್ಸು ಮುರಿಯುವ ಕೆಲಸ, ಬಲವಂತ, ಪ್ರಯೋಜನವಿಲ್ಲವೆಂಬ ತೀರ್ಮಾನಕ್ಕೆ ಅಜ್ಜಿಯೂ ಬಂದಳು. ವರಲಕ್ಷ್ಮಿಯ ಕಣ್ಣೀರು ಅದಕ್ಕೆ ಕಾರಣವೋ, ಮೊಮ್ಮಗಳ ಮೇಲಿನ ಕನಿಕರ ಅದಕ್ಕೆ ಕಾರಣವೋ—ಅದು ಬೇರೆ ಮಾತು.

ಅಲ್ಲಿಂದ ಈ ತೀರ್ಮಾನ ಮಗನ ಕಿವಿಗೆ ಮುಟ್ಟಿ, ಸೊಸೆಯ ಕಿವಿಡೂ ಹೋಯಿತು. ಅದು ಸವಿಯಾದ ತೀರ್ಮಾನವೇನಲ್ಲ. ತಮ್ಮ ತೀರ್ಮಾನ ಹೊರಿಸುವ ದಾರಿಯೂ ಕಾಣಲಿಲ್ಲ. ಓದು ಕಲಿತ ದೊಡ್ಡ ಹುಡುಗಿ; ಚಿಕ್ಕ ಮಗುವಲ್ಲ, ತಾಯಿಯಂತು ಮಗಳ ಮೇಲೆ ತುಂಬ ಮುನಿಸುಗೊಂಡಳು. ಆದರೆ ತಮ್ಮ ನಿಶ್ಚಯವನ್ನು ಅವರು ಬಿಟ್ಟುಕೊಡಲೇಬೇಕಾಯಿತು.

ವರಲಕ್ಷ್ಮಿ, ಇಷ್ಟೊಂದು ಗೊಂದಲದ ಸಂಗತಿಗಳನ್ನು ತನ್ನಲ್ಲಿರಿಸಿ ಕೊಳ್ಳಲಾರದೆ, ಪತ್ರವೊಂದರಲ್ಲಿ ಹಾಳೆಹಾಳೆಗಳನ್ನು ತುಂಬಿಸಿ ಶಂಕರನಿಗೆ ಬರೆದಳು. ಅವನ ಅಭಿಮಾನ ಹೆಚ್ಚುವುದಕ್ಕೆ ಈ ದೀರ್ಘಪ್ರಬಂಧ ಸಾಕಾಯಿತು. ಅದೊಂದರಿಂದಲೇ ಆಕೆಯನ್ನು ಉದಾತ್ತನಾಯಕಿಯಾಗಿ ತಿಳಿದು ಕೊಂಡ. ಈ ಪತ್ರ ಬಂದು ಕೈಸೇರಿದ ಎರಡು ದಿನಗಳಲ್ಲಿಯೆ, ಸೀತಾರಾಮ ನಿಗೂ ಶಂಕರನಿಗೂ ಸಂಸಾರವನ್ನು ಕುರಿತಾದ ಸಂಭಾಷಣೆ ನಡೆದದ್ದು. ತನ್ನ ಮನಸ್ಸಿನ ಭಾವನಾಲೋಕಕ್ಕೂ, ಸೀತಾರಾಮ ಹುಟ್ಟಿಸಿದಂಥ ನಿರಾಶಾವಾದಕ್ಕೂ ಮೇಳ ತರುವ ಕೆಲಸವು ಶಂಕರನ ಪಾಲಿಗೆ ಸುಲಭವಾಗಲಿಲ್ಲ. ಅನಂತರ ಆತ ಅಂಥ ವಿಚಾರಗಳಲ್ಲಿ ಚರ್ಚೆ ಬಂದಾಗಲೆಲ್ಲ—ಸೀತಾರಾಮನ ಉಪನ್ಯಾಸ ಕೇಳುತ್ತಾನೆ, ಮೌನಿ ಶ್ರೋತಾರನಾಗುತ್ತಾನೆ. ಅವನ ನಿತ್ಯದ ಅನುಮಾನ ನಿರಾಧಾರವಾದುದು ಎಂದು ವರಲಕ್ಷ್ಮಿ ತೋರಿಸಿಕೊಟ್ಟಾಳು—ಎಂಬ ಆಸೆ ಅವನದು. ಈ ಒಂದು ಸಂಶಯದ ಬೀಜ ಅವನ ಮನವನ್ನು

ಬಹುವಾಗಿ ಕೊರೆಯತೊಡಗಿತು.

ಸಂಭಾಷಣೆ ನಡೆದ ರಾತ್ರಿಯಿಂತು ಶಂಕರನ ಮನಸ್ಸು ತುಂಬ ವಿಪ್ಲವಕ್ಕೊಳಗಾಗಿತ್ತು. ಸೀತಾರಾಮನಾಡಿದ ನುಡಿಗಳು ಅವನನ್ನು ಕೊರೆಯತೊಡಗಿದುವು. ತನ್ನ ಭವಿಷ್ಯದ ಚಿತ್ರ ಅಸ್ಪಷ್ಟವಾದುದು—ಎಂಬುದು ಗೊತ್ತು. ಆದರೆ ಮನದ ಒಲ ಯಾವುದಾದರೊಂದು ತಾವನ್ನು ನೆಚ್ಚಿ, ನೆಲೆಸುವುದರಲ್ಲಿ ಸರಿಯುತ್ತಿದೆ. ಬೆಳಕವಾಡಿಯಲ್ಲಿ ಕಂಡಂಥ ಬಡ ರೈತರ ಜತೆಯಲ್ಲಿ ಬಾಳಿ, ಅವರ ಸುಖದುಃಖಗಳಲ್ಲಿ ಭಾಗಿಯಾಗಬೇಕೆಂದು ಬಯಸುತ್ತಿದೆ. ತನಗೆ ನಾಗರಿಕ ಜೀವನದ ಗೊಂದಲದಿಂದ ಏನೂ ಆಗಬೇಕಾಗಿಲ್ಲ ಎಂದಂದುಕೊಳ್ಳುತ್ತಾನೆ. ಮೊದಲಿನಿಂದಲೂ ಮೇಲುಮಟ್ಟದ ಜನಗಳ ಆಡಂಬರದ ಜೀವನ ನಾಟಕ ಅವನನ್ನು ಆಕರ್ಷಿಸಿರಲಿಲ್ಲ. ತಾನವರಂತೆ ಆಗಬಾರದು—ಎಂದಂದುಕೊಳ್ಳುತ್ತಾನೆ. ಅನ್ನುವಾಗಲೆಲ್ಲ ವರಲಕ್ಷ್ಮಿಯ ನೆನಪಾಗುತ್ತದೆ. ಅವಳನ್ನು ಕೇಳಬೇಡವೇ? ತನ್ನ ಭವಿಷ್ಯದ ರೂಪುರೆಕಾಣಿಗಳನ್ನು ಅವಳೊಡನೆಯೂ ಚರ್ಚಿಸುತ್ತೇನೆ-ಎಂದುಕೊಂಡ. ಆ ವಿಷಯದಲ್ಲಿ ಪತ್ರ ಬರೆಯಲು ಯೋಚಿಸಿದಾಗ, ತನಗಾಗಿ ಅವಳು ಮನೆಯವರೊಡನೆ ಕಾದಾಡಿದ ವೀರ ರಮಣಿಯೆಂದೂ, ಅಂಥವಳಿಂದ ತನ್ನ ಮನದ ಆಸೆ, ಆದರ್ಶಗಳನ್ನು ಮರೆಯಿಸುವುದು ಸಮನಲ್ಲವೆಂದೂ ತೋರಿತು. ಆದರೆ ಜತೆಗೆ ಹೀಗೂ ಹೊಳೆಯಿತು—ಅವಳು ನಗರಗಳಲ್ಲಿಯೆ ಹುಟ್ಟಿ ಬೆಳೆದವಳು; ಅವರ ಮನೆಯಲ್ಲಿ ಹಳೆಯ ಸಂಪ್ರದಾಯಗಳ ಪ್ರಭಾವ ಕಾಣಬಹುದಾದರೂ ಜೀವನವೆಲ್ಲ ನಗರದ ಬೆಡಗಿನಲ್ಲೇ ಕಳೆದದ್ದು. ತಾನು ಕಂಡ ಹಳ್ಳಿಯ ಜೀವನ, ಸ್ವಲ್ಪವಾದರೂ, ಅದರ ಮೇಲಿಂದ ತರ್ಕಿಸುವಲ್ಲಿ, ಬೆಡಗಿಲ್ಲದ್ದು. ಅವಳು ಅಂತಹ ಆದರ್ಶಕ್ಕೆ ಒಲಿಯದೆ ಹೋದರೆ!-ಎಂಬ ಭೀತಿಯೂ ಆಯಿತು.

'ಏನೂ ಆಗಲಿ, ಕಾಗದ ಬರೆಯುತ್ತೇನೆ' ಎಂದುಕೊಂಡ. ಬರೆಯುವ ಧೈರ್ಯ ಸಾಲದುದಕ್ಕೋ ಏನೋ—'ತಾನು ಇಂಥ ಜೀವನದ ಕಡೆಗೆ ಒಲಿದಿದ್ದೇನೆ' ಎಂದು ಬರೆಯಲಿಲ್ಲ. ತಾನು ಕಂಡ ಹಳ್ಳಿಯನ್ನು ಬಣ್ಣಿಸಿದ. ಹಳ್ಳಿಯ ಜನರ ತೃಪ್ತ ಜೀವನ, ನೆಲದ ಮೋಹವನ್ನು ತನ್ನ ಊಹೆಗೆ ಸಮನಾದಂತೆ ತಿಳಿಸಿಹೇಳಿದ. ಜತೆಗೆ "ನೀನು ನನಗಾಗಿ ಮಾಡಿದ ತ್ಯಾಗ

ವನ್ನು ಮರೆಯಲಾರೆ" ಎಂಬ ಮುಕ್ತಾಯದ ಮಾತುಗಳನ್ನೂ ಸೇರಿಸಿದ.

ಅದರ ಬೆನ್ನಿಗೇನೆ ಹೊಳೆಯಿತು—ಅವರ ಮನೆಯ ಸಾಂಪ್ರದಾಯಿಕ ಆವರಣ. ಅದು ಅನುಮಾನವನ್ನು ತಂದೊಡ್ಡಿತು. ತನ್ನ ಊರಾವುದೋ ತಿಳಿಯದು; ಕುಲದ ಬೇರೆಲ್ಲೋ ತಿಳಿಯದು. ತಂದೆ ಬ್ರಾಹ್ಮಣ ಕುಲದ ಒಂದು ಬಳಗದಿಂದ ಬಂದವರು; ತಾಯಿ ಮಹಾರಾಷ್ಟ್ರ ಕನ್ಯೆ; ಬೇರೊಂದು ಕುಲದವಳು. ಇದರಿಂದ ವರಲಕ್ಷ್ಮಿಯ ಮನೆಯವರನ್ನು ಕುರಿತಾದ ಅಂಜಿಕೆಯನ್ನು ಅದೇ ಪತ್ರದಲ್ಲಿ ಸೇರಿಸಬೇಕಾಯಿತು. ನೇರಾಗಿ ದಾಂಪತ್ಯದ ಮಾತನ್ನು ಆತ ಹೇಳಿದ್ದಿದ್ದರೆ ಅದು ಈ ಪತ್ರವೊಂದರಲ್ಲೆ. ಉಳಿದುವೆಲ್ಲವು ಮಮತೆಯ, ಗೆಳೆತನದ ಮಾತುಗಳಾಗಿದ್ದುವು. My Dear 'Vara.' ಎಂಬುದಕ್ಕಿಂತ ಹೆಚ್ಚಿನ ಸಲುಗೆಯನ್ನು ಕಾಗದದಲ್ಲೂ ತೋರಿಸಿಲ್ಲ, ಮುಖದಲ್ಲೂ ತೋರಿಸಿಲ್ಲ. ಮನ ಹೇಳಿತ್ತು, ಕಣ್ಣು ಅಂದಿತ್ತು.

ಈ ಪತ್ರ ವರಲಕ್ಷ್ಮಿಗೆ ತಲ್ಪಿತು-ಬರೆದ ನಾಲ್ಕು ದಿನಗಳಲ್ಲಿ. ಅವಳು ಅದನ್ನು ವಿರಾಮದಲ್ಲಿ ಒಂಟಿಯಾಗಿ ಮನನಮಾಡಿದಳು. ಉಳಿದ ವಿಚಾರಗಳನ್ನು ಕಂಡು ಸಂತೋಷವೆನಿಸಲಿಲ್ಲ. ಹಿಂದೆ ಶಿವಸಮುದ್ರದ ಬಣ್ಣನೆಗಳನ್ನು ಓದಿದಾಗ ಉಂಟಾದ ಹಿಗ್ಗು, ಸಂತಸ, ಬೆಳಕವಾಡಿಯ ರೈತರ ಒರಟು ಜೀವನವನ್ನು ಕೇಳಿ ಆಗಲಿಲ್ಲ. ತನ್ನ ಮೇಲಿನ ಅಭಿಮಾನ ವ್ಯಕ್ತಮಾಡಿದುದರ ಸಲುವಾಗಿ ಹಿಗ್ಗೂ ಆಯಿತು. ಅದೇ ದಿನ ಆಕೆ ಪತ್ರಕ್ಕೆ ಪ್ರತ್ಯುತ್ತರವನ್ನೂ ಬರೆದು ಹಾಕಿದಳು.

ಆ ಪತ್ರದಲ್ಲಿ "ನಿಮ್ಮ ಕೆಲಸ ಮುಗಿಯುತ್ತಾ ಬಂದಿರಬೇಕು. ಹಾಗಾದರೆ, ಎಂದು ಊರಿಗೆ ಮರಳುತ್ತೀರಿ? ನಿಮ್ಮನ್ನು ಕಾಣಲು ಮನಸ್ಸು ತವಕಿಸುತ್ತದೆ; ಬಲು ಬೇಸರವಾಗುತ್ತದೆ" ಎಂದು ಬರೆದು, ಪರಿಹಾಸ್ಯಕ್ಕೆ "ಬೆಳಕುವಾಡಿಯಲ್ಲೇ ಬಿಡಾರಹೂಡುವ ಯೋಚನೆ ಇಲ್ಲವಲ್ಲ? ನನಗಂತು ದಿಲ್ಲಿಯಂತಹ ಶಹರು ಕೊಡುವ ಸುಖ ಇನ್ನೆಲ್ಲೂ ದೊರೆಯಲಾರದು ಎಂದೆನಿಸುತ್ತದೆ.ನಾಗರಿಕತೆಯ ಮುಸುಡನ್ನೂ ಕಾಣದ ಹಳ್ಳಿಯಲ್ಲಿ ಏನು ಸಂತೋಷವಿದ್ದೀತು? ಎಂಬ ಉದ್ಗಾರವನ್ನೂ ಸೇರಿಸಿದಳು.

ಈ ಪತ್ರ ಮಾತ್ರ ಶಂಕರನನ್ನು ಚಕಿತನನ್ನಾಗಿ ಮಾಡಿತು. ಪತ್ರದಲ್ಲಿ ಹಿರಿಯರಿಂದ ಒಪ್ಪಿಗೆ ದೊರೆಯುವ ಮಾತೇ ಇರಲಿಲ್ಲ. ಬರವಣಿಗೆಯಿಂದ

ಅವರನ್ನು ಕಡೆಗಣಿಸುವ ಸಾಹಸ ಆಕೆಗಿದ್ದೀತೆಂದೂ ಅನಿಸಲಿಲ್ಲ. ಆದರೆ ತನಗಾಗಿ ಹಂಬಲಿಸುವ ಅವಳ ಮಾತುಗಳನ್ನು ಓದಿ, ಅವನು ತಳೆದ ಆಸೆಗೆ ಕಳೆಯೇರಿತು. ಆದರೆ ತನ್ನ ಸ್ವಂತ ಆಸೆಗಳ ವಿಚಾರದಲ್ಲಿ, ಅವಳ ನಗರದ ಮೇಲಿನ ಮೋಹ, ಬರೆಯನ್ನೆಳೆಯಿತು. ಸೀತಾರಾಮನ ವಾದಕ್ಕೆ ಅದು ಹೆಚ್ಚಿನ ಪುಷ್ಟಿಕೊಟ್ಟಿತು. ಪತ್ರವನ್ನು ಓದಿ ಉಸಿರುಗರೆದನು. ಕೂಡಲೆ ಪ್ರತ್ಯುತ್ತರ ಬರೆಯಲು ಹಿಂಜರಿದನು. ಮನಸ್ಸಿನಲ್ಲಿ "ಈ ಸ್ನೇಹದ ಬೆಳವಣಿಗೆ ಇಷ್ಟಕ್ಕೆ ಸಾಕು. ನನ್ನ ಮನ ನಾನೇ ಅರಿತಂತಿಲ್ಲ. ಆದರ ನೆಲೆ ನಿಶ್ಚಯವಾದ ಬಳಿಕ ಮುಂದಿನ ಸಾಹಸ" ಎಂದೂ ತೋರಿತು.

ಎರಡು ದಿನಕಾಲ ಹಾಗೆಯೇ ಕುಳಿತ. ಮುಂದೆ ಮೌನವಾಗಿರಲಾರದೆ ಉತ್ತರ ಬರೆದ—"ನನ್ನ ಇಲ್ಲಿನ ಕೆಲಸ ಮುಗಿಯುತ್ತ ಬಂತು, ಒಮ್ಮೆ ಈ ಕಡೆಗೆ ಬಂದಿದ್ದೇನೆ. ಆಗಾಗ ಬಂದು ನೋಡಬಹುದಾದ ಊರಲ್ಲ. ಬಂದಾಗಲೇ ಸುತ್ತಮುತ್ತಲಿನ ನಾಲ್ಕು ಊರುಗಳನ್ನು ಕಂಡುಬರುವ ಆಸೆಯಾಗಿದೆ. ಗೆಳೆಯ ಸೀತಾರಾಮ ಜತೆಗೆ ಇದ್ದಾನೆ; ಅವನ ಊರಿಗೂ ಹೋಗಬೇಕೆಂದಿದೆ. ಅದು ನನ್ನ ಹಿರಿಯರ ಊರೆಂದು ಕೇಳಿ ನೋಡುವ ಆಸೆಯಾಗಿದೆ" ಎಂದು ಪತ್ರವನ್ನು ಬರೆದು ಹಾಕಿದ,

ಇಷ್ಟರಲ್ಲಿ ವರಲಕ್ಷ್ಮಿಯ ಅಜಾಗರೂಕತೆಯಿಂದ ಒಂದು ಪ್ರಮಾದ ಉಂಟಾಯಿತು. ಅವನು ಬರೆದ ಒಂದು ಕಾಗದ, ಅವಳ ತಾಯಿಯ ಕಣ್ಣಿಗೆ ಬಿದ್ದಿತು. 'ಸಾಂಪ್ರದಾಯವಂದಿಗರಾದ ನಿನ್ನ ಹಿರಿಯರು ಇದಕ್ಕೆ ಒಪ್ಪಿಯಾರೆ?' ಎಂದು ಆತ ಭೀತಿಯನ್ನು ವ್ಯಕ್ತಮಾಡಿದ ಪತ್ರವೇ ಅದು. ಮಿಸೆಸ್ ಜಯರಾಮ, ಮಗಳು ಕಾಲೇಜಿಗೆ ಹೋದಾಗ ಅವಳ ಬೀರು, ಪೆಟ್ಟಿಗೆಗಳನ್ನೆಲ್ಲ ಶೋಧಿಸಿದಳು, ಶಂಕರನ ಯಾವತ್ತು ಕಾಗದಗಳು ಒತ್ತಟ್ಟಿಗೆ ದೊರೆತುವು. 'ಹೋ! ಈ ನಿರ್ಧಾರದಿಂದ ನಾವು ಗೊತ್ತುಮಾಡಿದ ನಂಟಸ್ತಿಕೆಯನ್ನು ಮುರಿದದ್ದು. ಯಾರು ಈ ಮಂಕನ್ನು ಇವಳ ತಲೆಗೆ ತುರುಕಿದರೊ! ಶಂಕರನೇ-ಅವಳ ತಾಯಿಯೇ? ಪ್ರತಿಮೆಯು ಸಹ ಒಮ್ಮೆ ಬಹುಹಿಂದೆ ಅಂಥ ಆಸೆ ವ್ಯಕ್ತಮಾಡಿದ್ದ ನೆನಪು. ಅವರ ಮನೆಯವರು ಎಂಥವರೇ ಆದರೂ ಜಾತಿ, ಕುಲಗಳು ಬೇರೆಯಾದ ಮೇಲೆ, ಅದು ಸಲ್ಲುವ ಸಂಬಂಧವಲ್ಲ' ಎಂದುಕೊಂಡು ಈ ಎಲ್ಲ ಸಂಗತಿಗಳನ್ನೂ ಗಂಡನಿಗೆ

ತಿಳಿಸಿದಳು.

ಈ ಮೊದಲೇ ಮಗಳಿಂದ ಪರಾಜಯಗೊಂಡಿದ್ದ ಆ ದಂಪತಿಗಳು ಮಗಳ ಪ್ರಣಯದ ಪತ್ರಗಳಿಗಾಗಿ ಉರಿದುಬಿದ್ದರು. ಈ ರೀತಿಯ ಪತ್ರ ವ್ಯವಹಾರಕ್ಕೆ ಎಡೆಕೊಡುವುದು ತಪ್ಪೆಂದು ತೋರಿತು. ಆ ರಾತ್ರಿಯೇ ಸಭೆ ಸೇರಿದರು. ಮಗಳ ಮುಂದೆ, ತಾಯಿಯ ಮುಂದೆ, ಜಯರಾಮ ಕೋಪಾವೇಶದಿಂದ ಕಾಗದಗಳನ್ನು ಚೆಲ್ಲಿ " ಹೀಗೆಂದರೇನು ? ಹೆತ್ತತಾಯಿ ತಂದೆಯರು ಇದ್ದೂ ಇಲ್ಲದಂತೆ ವರ್ತಿಸುತ್ತೀಯಲ್ಲ. ಇದಕ್ಕಾಗಿಯಲ್ಲವೆ ಮೊನ್ನಿನ ಸಂಬಂಧ ಬೇಡವೆಂದದ್ದು ? ನಾವು ಬದುಕಿರುವಷ್ಟರ ತನಕ ಜಾತಿ ಕುಲ ಬಿಟ್ಟ ವಿವಾಹಕ್ಕೆ ಒಪ್ಪುವವರಲ್ಲ. ಅವನಿಗೂ ಹಾಗೆ ಬರೆ. ನೀನು ಬರೆಯದಿದ್ದರೆ ನಾನೇ ಬರೆಯಬೇಕಾಗುತ್ತದೆ " ಎಂದು ಕಟ್ಟಪ್ಪಣೆ ಮಾಡಿದರು. ವರಲಕ್ಷ್ಮಿ ಯಾವ ಮಾತನ್ನೂ ಆಡುವಂತಿರಲಿಲ್ಲ. ಎದುರು ಮಾತನಾಡುವಂತಿಲ್ಲ. ತನ್ನ ಕೆಲಸ ಸಮನಾದುದೆಂಬ ಧೈರ್ಯವೂ ಅವಳಿಗಿರ ಲಿಲ್ಲ. ಇಷ್ಟೆಲ್ಲ ಪತ್ರಗಳು ಅವರ ಕೈಗೆ ಸಿಕ್ಕಿದ ಬಳಿಕ, ಅಲ್ಲಗಳೆಯುವ ಮಾತೇ ಇಲ್ಲ, ಏನೆನ್ನುವುದಕ್ಕೂ ಇಲ್ಲ. ಮುಖ ಬಾಡಿತು; ಎದೆ ನಡುಗಿತು; ಕಣ್ಣು ಮಳೆಗರೆಯಿತು. ಹೋಗಿ ಮಲಗಿಕೊಂಡಳು. ಮರುದಿನ ಅಜ್ಜಿ ಯಿಂದಲೂ ಅವಳಿಗೆ ದೀರ್ಘೋಪದೇಶವಾಯಿತು. ಅವಳ ಕಣ್ಣಿಗೂ ವರಲಕ್ಷ್ಮಿ ಅಪರಾಧಿನಿ ಎನಿಸಿದಳು. " ನೀನು ಹಾಗೆಲ್ಲ ಮಾಡುತ್ತೀ ಎಂದು ನಾನು ಕನಸಿನಲ್ಲೂ ಊಹಿಸಿರಲಿಲ್ಲ " ಎಂದು ಅವಳೂ ನೋವಿನ ಕಂಬನಿ ಸುರಿಸಿದಳು.

ವರಲಕ್ಷ್ಮಿ ನಾಲ್ಕೆಂಟು ದಿನಗಳ ಕಾಲ ಮನೆಯಲ್ಲಿ ಮೂಕಳಾಗಿಯೇ ಇದ್ದಳು. ತಾಯಿಯ ಜತೆಗೆ ಪ್ರತಿಮಾದೇವಿಯ ಮನೆಗೆ ಹೋಗುವುದನ್ನು ಬಿಟ್ಟಳು. ಮನೆಯವರಲ್ಲಿನ ಸಲಿಗೆಯೂ ಶೂನ್ಯವಾಯಿತು. ಸದಾ ಪುಸ್ತಕ ಪಠಣದಲ್ಲಿ, ಕಾಲೇಜಿನ ವ್ಯಾಸಂಗದಲ್ಲಿ ಲೀನಳಾದವಳಂತೆ ವರ್ತಿಸಿದಳು. ಹೊರಗಿನ ನಟನೆ ಹೇಗಿದ್ದರೂ ಮನಸ್ಸು ಮಾತ್ರ ಕುದಿಯುತ್ತಿತ್ತು. ತಾಯಿಯ ಮೇಲಿನ ಅಭಿಮಾನ ನುಚ್ಚುನುರಿಯಾಯಿತು. ತನ್ನ ಪತ್ರ ವ್ಯವಹಾರವನ್ನು ಕದ್ದು ಇಣಿಕಿನೋಡಿದ ಅವಳ ವಿಷಯದಲ್ಲಿ ಅನಾದರ ಹೆಚ್ಚಿತು. ಅವಳ ಕಡೆಗೆ ಮನಸ್ಸು ಒರಟಾಗುತ್ತ ಹೋಯಿತು. ' ಏನೇ

ಇರಲಿ, ನಾನು ಬೇಕಾದರೆ ಮದುವೆಯಾಗದೆಯೆ ಕುಳಿತೇನು. ಹೊರತು ಇವರ ಕಟ್ಟಿಗೆ ಸಿಲುಕುವವಳಲ್ಲ. 'ನನ್ನ ವಿದ್ಯಾಭ್ಯಾಸ ಮುಗಿಸಿ ಸ್ವತಂತ್ರ ಜೀವನ ನಡಸಿಯೇನು. ತಾನು ಚಿಕ್ಕವಳೆಂಬುದರಿಂದಲ್ಲವೇ ಇಷ್ಟೆಲ್ಲ ಜಬರಿಕೆ' ಎಂದು ಮನದಲ್ಲಿ ಶಪಥಮಾಡಿದಳು.

ಹತ್ತು ಹತ್ತು ಬಾರಿ ಶಂಕರನಿಗೆ ಇದನ್ನೆಲ್ಲ ತಿಳಿಸಬೇಕೆಂಬ ಆತುರವಾಯಿತು. ಮೊದಲೇ ಆತ ಕೇಳಿದ್ದ; 'ಮನೆಯವರ ಸಮ್ಮತಿ ದೊರಕೀತೆ?' ಎಂಬ ಸಂದೇಹವನ್ನು ಸೂಚಿಸಿದ್ದ. ಅದು ದೊರೆಯದೆಂಬುದು ಸ್ಪಷ್ಟವಾದ ಬಳಿಕ, ಆ ವಿಚಾರವನ್ನು ಅವನಿಗೆ ತಿಳಿಸಿಬರುವ ಲಾಭವೇನು ?—ಎಂದು ತೋರಿತು, 'ಅವನೊಮ್ಮೆ ಇಲ್ಲಿಗೆ ಬಂದರೆ, ಅವನನ್ನು ಭೇಟಿಯಾಗಿ ಎಲ್ಲವನ್ನೂ ನಿರ್ಧರಿಸಬೇಕು' ಎಂದು ಯೋಚಿಸಿದಳು. ಆತ ಬೇಗನೆ ಬರುವ ಭರವಸೆ ತೋರದುದರಿಂದ ಮುಂದೆ ಪತ್ರವ್ಯವಹಾರ ಮಾಡಲಿಲ್ಲ.

ಒಂದೆರಡು ದಿವಸಗಳಲ್ಲಿಯೆ ಶಂಕರನ ಕಾಗದವೇನೋ ಬಂದಿತು. ಅದರಲ್ಲಿ ತಾನು ಸೀತಾರಾಮನೊಂದಿಗೆ ದಕ್ಷಿಣ ಹಿಂದೂಸ್ಥಾನ, ದಕ್ಷಿಣ ಕನ್ನಡದ ಊರುಗಳನ್ನು ಸುತ್ತಿಬರುವ ವಿಚಾರವನ್ನು ಸೂಚಿಸಿದ್ದ. ಆ ಪತ್ರ ಮಾತ್ರ ಮಿಸೆಸ್ ಜಯರಾಮಳ ಕೈಯನ್ನು ಸೇರಿ ಅದೃಶ್ಯವಾಯಿತು. ಇಷ್ಟೆಲ್ಲ ಮಾಡಿದ ಅವಳು, ಮಗಳ ಅಂಚೆಯನ್ನು ತಡೆಯದೆ ಕುಳಿತಾಳೆಯೇ? ವರಲಕ್ಷ್ಮಿಗೆ, ಶಂಕರನ ಬದಲಿಸಿದ ಮನವೂ ತಿಳಿಯಲಾರದೆ, ಪತ್ರವ್ಯವಹಾರಕ್ಕೆ ಕೊನೆ ಬಂದಿತು. ಹೆಚ್ಚಿನ ವಿಚಾರವನ್ನು, ಶಂಕರನ ವಿಳಾಸವನ್ನು ಪ್ರತಿಮೆಯಿಂದ ತಿಳಿಯುವ ಕುತೂಹಲವಾದರೂ ಧೈರ್ಯಬಾರದೆ ಹೋಯಿತು.

ಶಂಕರನ ವಿಚಾರ ಅನಂತರ ಅವಳಿಗೆ ತಿಳಿದುದು, ಮಂಜುನಾಥನ ಬಾಯಿಯಿಂದ. ಮಂಜುನಾಥ ಅವರ ಮನೆಯ ಆಳು. ಅವಳ ಸಮ ವಯಸ್ಸಿನ ಹುಡುಗ. ಅವಳ ಮೊದಲನೆಯ ಪತ್ರವನ್ನು ಶಂಕರನಿಗೆ ಕೊಟ್ಟವನು. ವರಲಕ್ಷ್ಮಿ ನಾಲ್ಕು ಮಾತುಗಳನ್ನಾಡುವ ಸಲುಗೆ ಇರಿಸಿಕೊಂಡಿದ್ದರೆ, ಸ್ವಲ್ಪ ವಿಶ್ವಾಸವನ್ನಿರಿಸಿಕೊಂಡಿದ್ದರೆ ಅದು ಅವನ ವಿಚಾರದಲ್ಲಿ. ಆತ ಪ್ರತಿಮೆಯ ಮನೆಗೆ ಮನೆಯ ಮಕ್ಕಳನ್ನು ಕರೆದುಕೊಂಡು ತಿರುಗಾಟಕ್ಕೆ ಹೋಗುವ ರೂಢಿಯಿತ್ತು. ಅಲ್ಲಿ ತಾನು ಕೇಳಿದ ಸುದ್ದಿಯನ್ನು–ಶಂಕರ ಕನ್ನಡ ಜಿಲ್ಲೆಗೆ ಹೋದ ವಿಚಾರ, ಬರುವುದಕ್ಕೆ ಇನ್ನೂ ಒಂದು ತಿಂಗಳು ಬೇಕು ಎಂಬ

ಸುದ್ದಿ, ಬಂದೊಡನೆಯೇ ಪಂಜಾಬಿನಲ್ಲೆಲ್ಲೋ ಉದ್ಯೋಗ ದೊರಕೀತೆಂಬ ಭರವಸೆ–ಇವೆಲ್ಲವನ್ನು ಆ ಮನೆಯಲ್ಲಿ ಕೇಳಿ–ವರಲಕ್ಷ್ಮಿಗೆ ತಿಳಿಸಿದ.

ಮಂಜುನಾಥ ಮನೆಯಲ್ಲಾದ ಗಲಭೆಯನ್ನು ಚೆನ್ನಾಗಿ ಬಲ್ಲವನು. ಅವನಿಗೆ ವರಲಕ್ಷ್ಮಿಯ ಮೇಲೆ ಅಭಿಮಾನವೂ ಇತ್ತು. ಆದರವೂ ಇತ್ತು. ಹಿಂದೆ ಶಂಕರನಿಗೆ ಕಾಗದಗಳನ್ನು ಒಯ್ದುಕೊಟ್ಟವನು ಅವನು. ಅವಳ ಪಕ್ಷ ಅವನದು. ಅವನನ್ನು ಮನೆಯ ಆಳು ಎಂಬ ಕಣ್ಣಿನಿಂದ ನೋಡಿದವಳಲ್ಲ. ಅವನ ವೆಚ್ಚಕ್ಕೆ ಕೇಳದೆಯೆ ವರ ಹಣ ಕೊಟ್ಟಿದ್ದುಂಟು ಹೀಗಾಗಿ ಅತ್ತ, ಅಷ್ಟೆಲ್ಲ ಗದ್ದಲವಾದ ಮರುದಿನ, ವರಲಕ್ಷ್ಮಿ ತಲೆತಗ್ಗಿಸಿ ತನ್ನ ಕೊಠಡಿಯಲ್ಲಿ ಓದುತ್ತ ಕುಳಿತಾಗ "ತುಂಬ ಬೇಸರವಾಯಿತೇ ?" ಎಂದು ಕಾಫಿಗೆ ಕರೆಯುವ ನೆಪದಿಂದ, ಹೋದಾಗ ಕೇಳಿದ್ದ.

ತಾಯಿಯ ಜತೆಗೆ ಪ್ರತಿಮಾದೇವಿಯ ಮನೆಗೆ ಸಂಜೆ ಹೋಗುವುದನ್ನು ನಿಲ್ಲಿಸಿದ ಬಳಿಕಂತು ವರಲಕ್ಷ್ಮಿಗೆ ಹೊತ್ತೇ ಹೋಗದು. ಆದರಿಂದ "ಮಂಜು ಬೇಸರವಾಗುತ್ತಿದೆ, ತಿರುಗಾಡಲು ಬರುತ್ತೀಯಾ" ಎಂದು ಕೇಳುವುದುಂಟು. ತಾವಿಬ್ಬರೇ ಅಲೆದಾಡಲಾರದ್ದಕ್ಕೆ ತನ್ನ ತಮ್ಮನನ್ನು ಕರೆದುಕೊಳ್ಳುತ್ತಾಳೆ. ಅವನಿಗೂ ಚಿಕ್ಕ ಕಿರಿಗೂಸೊಂದನ್ನು ಗಾಡಿಯಲ್ಲಿ ಕುಳ್ಳಿರಿಸಿಕೊಂಡು ಮಂಜುನಾಥ ಅದನ್ನು ತಳ್ಳುತ್ತ ಅವಳ ಜತೆಗೆ ಹೊರಡುತ್ತಾನೆ. ನವದೇಹಲಿಯ ವಿಸ್ತರಣಗಳಿಗೂ, ಕನಾಟ್ ಸರ್ಕಸ್ಸಿಗೂ ಹೋಗಿ ಬಯಲಲ್ಲಿ ಕುಳಿತು ಮಕ್ಕಳನ್ನಾಡಿಸುತ್ತಿರುತ್ತಾರೆ. ನಡುವೆ ತನ್ನ ನೋವನ್ನು ತೋಡಿಕೊಳ್ಳುವ ಹಂಬಲವಾಗುತ್ತದೆ–ವರಲಕ್ಷ್ಮಿಗೆ. ಅದನ್ನು ಬಹುದಿನ ಬಚ್ಚಿಟ್ಟುಕೊಳ್ಳಲಾರದೆ ಮಂಜುನಾಥನೊಡನೆ ತೋಡಿಕೊಳ್ಳುತ್ತಾಳೆ. 'ಮಂಜು, ಅವರೆಲ್ಲ ನನ್ನನ್ನು 'ಇದೊಂದು ಪಶು' ಎಂದು ತಿಳಿದುಕೊಂಡಿರಬೇಕು. ನನ್ನ ಮನಸ್ಸು ನನಗೆ ತಿಳಿದಿದೆ. ಇವರನ್ನು ನಾನು ಗಣಿಸುವವಳೇ ?' ಎಂದು ಹೆಮ್ಮೆಯ ಮಾತನಾಡುತ್ತಾಳೆ. ಮಂಜುನಾಥ 'ಹಾಂ, ಹೂಂ,' ಅನ್ನಲಾರ. ಅವಳು ನಕ್ಕರೆ ನಗುತ್ತಾನೆ, ಬೇಸರಪಟ್ಟರೆ ತಾನೂ ಬೇಸರದ ಮುಖಹಾಕಿಕೊಳ್ಳುತ್ತಾನೆ. ಅತ ಅವರಲ್ಲಿಗೆ ಕೆಲಸ ಅರಸಿಕೊಂಡು ಬಂದವನು; ತೀರ ಅವಿದ್ಯಾವಂತನಲ್ಲ. ತುಸುಮಟ್ಟಿನ ಓದು ಆಗಿದೆ. ಮನೆಯ ಸಂಬಂಧ ಕಡಿದು, ತಾರುಣ್ಯದ ಸೊಕ್ಕಿನಿಂದ ಊರು

ಬಿಟ್ಟು ಬಂದಿದ್ದಾನೆ. ನಾಗರಿಕ ಮೋಹಮಯ ಆವರಣದಲ್ಲಿ ಹೆಜ್ಜೆ ಹೆಜ್ಜೆಗೂ ತರುಣ ತರುಣಿಯರು ಕೂಡಿ ವಿಹರಿಸುತ್ತಿದ್ದ ವಲಯದಲ್ಲಿ, ಅವನ ಹೃದಯವು ಬೆಡಗಿಗೂ, ವಿಲಾಸಕ್ಕೂ ತೂಗಾಡುತ್ತಿದ್ದ ದಿನಗಳು ! ವರಲಕ್ಷ್ಮಿಯ ರೂಪ ಬೆಡಗುಗಳಿಗೆ ಅವನ ಮನಸ್ಸು ಒಲಿದಿತ್ತು, ಆದರೆ ತನ್ನ ಸ್ಥಾನ, ಮಾನಗಳ ಬೆದರಿಕೆಯಿಂದ ಆತ ಮೂಕನಾಗಿದ್ದಾನಷ್ಟೆ. ಒಮ್ಮೊಮ್ಮೆ ಇವರು ಉದಾಸೀನರಾಗಿ ಕುಳಿತಾಗ, ಕರೆದೊಯ್ದ ಚಿಕ್ಕ ಮಕ್ಕಳು ದೂರ ಸರಿದರೆ, ವರ ಅವನ ಬೆನ್ನು ತಟ್ಟಿ ಎಚ್ಚರಿಸಿ ' ಮಂಜು, ಅಲ್ಲೇನು ನೋಡುತ್ತೀ ? ಮಗು ಹೋದುದು ಕಾಣಿಸುವುದಿಲ್ಲವೇ ? ಹೋಗಿ ಕರೆದು ತಾ " ಎಂದು ಅವನನ್ನು ಅಟ್ಟುತ್ತಿದ್ದಳು. ಮಗುವನ್ನು ಕರೆದು ತಂದು ಅವಳ ಕೈಗೆ ಒಪ್ಪಿಸುವಾಗ, ಹಸ್ತಸ್ಪರ್ಶವಾಯಿತೆಂದರೆ ಅವನ ಆಸೆಗಳು ಕೆರಳುತ್ತವೆ. ಬೆನ್ನು ಚಪ್ಪರಿಸಿದ ಅವಳ ಸಲುಗೆಯ ವಿಚಾರದಲ್ಲಿ ತನ್ನದೇ ಆದ ಅರ್ಥ ಕಲ್ಪಿಸಿಕೊಳ್ಳುವುದೂ ಉಂಟು. ಆದರೆ ತನ್ನೊಡತಿಯ ಪ್ರಣಯದ ಸೆಳೆತ ಯಾವಲ್ಲಿಗೆ ಸಾಗಿದೆ–ಎಂಬುದನ್ನು ಬಲ್ಲ. ಅವಳ ಹಟ, ದಿಟ್ಟತನಗಳನ್ನು ನೆನೆದಾಗ ಅಭಿಮಾನ ಕೆರಳುವಷ್ಟೇ ಅಳುಕೂ ಉಂಟಾಗುತ್ತದೆ.

# ಅಧ್ಯಾಯ ೩

ಶ್ರಾವಣಮಾಸ ಬಂದಿದೆ. ಮಳೆಯ ಭರ ಇಳಿಮುಖವಾಗಿದೆ. ಬಾನ ಬಯಲು ಮುಗಿಲ ದಟ್ಟಣಿಯಿಂದ ತುಂಬಿದ್ದರೂ, ಬರಿಯ ಜಿನುಗು ಮಳೆಯಷ್ಟೆ ಬರುತ್ತಿದೆ. ಮೋಡಗಳೆಲ್ಲ ಇಳಿಮೋಡಗಳು ; ನೆಲವನ್ನು ಬಿಟ್ಟು ಬಹು ಮೇಲಕ್ಕೇರಲು ಇಷ್ಟವಿಲ್ಲದೆ ಕೆಳಗೇನೆ ಹಾರಾಡುತ್ತಿವೆ. ಒಮ್ಮೊಮ್ಮೆ ಮುಗಿಲುಗಳು ಚದುರಿ ಹೋಳವಾಯಿತೆಂದರೆ, ಆಗುಂಬೆಯ ಘಟ್ಟದ ಸೆರಗು ಕಡುನೀಲಿ ಹಸುರುಬಣ್ಣಗಳ ಹೊದಿಕೆಯಿಂದ, ಕೋಟೆಯ ಗೋಡೆಗಳಂತೆ ಕಾಣಿಸುತ್ತವೆ. ಘಟ್ಟದ ಸೆರಗಿನಲ್ಲಿ ಅಲ್ಲಲ್ಲಿ ಕಾಡಿನ ದಟ್ಟಣಿ ಕಡಿಮೆಯಾಗಿದ್ದ ಭಾಗಗಳುಂಟು. ಆ ಭಾಗಗಳಲ್ಲಿ ಹುಲ್ಲು ಎಳೆಹಸುರು ಬಣ್ಣ ತಳೆದು, ಈ ನೀಲ ಗೋಡೆಯ ರಮಣೀಯತೆಯನ್ನು ಮತ್ತಷ್ಟು ಹೆಚ್ಚಿಸುತ್ತದೆ. ಆಗುಂಬೆಯ ಬಳಿ ಸಹ್ಯಾದ್ರಿಯು ಒಂದು ಸೆರಗು ಪಡುವಣಕ್ಕೆ ಚಾಚಿದೆ. ಅಲ್ಲೆ ಒಂದು ಕಡಿದಾದ ಭಾಗದಿಂದ 'ಒನಕೆ ಅಬ್ಬಿ' ಶುಭ್ರವಸನಧಾರಿಯಾದ ಗಂಗೆಯಂತೆ ಕೆಳಕ್ಕೆ ಧುಮುಕುತ್ತದೆ. ಒನಕೆಯಂತೆ ನೆಟ್ಟಗೆ ಇಳಿವ ನೀರಧಾರೆಯನ್ನು ಕಂಡ ಹಳ್ಳಿಯ ಜನ ಅದಕ್ಕೆ ಚೆಂದದ ಹೆಸರನ್ನು ಕೊಟ್ಟಿಲ್ಲ. ಈ ನೀರು ಎದುರಿನ ಬೆಟ್ಟದ ದೆಸೆಯಿಂದ ಪೂರ್ಣ ಕಾಣಿಸುವುದಿಲ್ಲ. ಸ್ವರ್ಗದಿಂದ ಧುಮುಕಿದ ಗಂಗೆ, ಶಿವನ ಜಡೆಯಲ್ಲಿ ಸಿಲುಕಿದಂತೆ ಕಣ್ಮರೆಯಾಗುತ್ತದೆ. ಮುಂದೆ ಬೆಟ್ಟದ ಕೊರಕಲುಗಳಲ್ಲಿ ಭರದಿಂದ ಸಾಗಿ, ಇತರ ಕೊರಕಲುಗಳ ನೀರನ್ನು ಕುಡಿದು ಮುಂದುವರಿಯುತ್ತ 'ಸೀತಾನದಿ' ಎಂಬ ಹೆಸರುಗಳಿಸಿ ಪಡುವಣ ಕಡಲಿಗೋಡುತ್ತದೆ. ಸೀತಾನದಿಯ ಇಕ್ಕೆಡೆಗಳಲ್ಲೂ ದಟ್ಟನಾದ ಕಾಡುಗಳಿವೆ. ಅಲ್ಲಲ್ಲಿ ವಿಶಾಲವಾಗಿ, ಹಸನಾಗಿ ಹಾಸಿದ ಹುಲ್ಲುಗಾವಲುಗಳಿವೆ. ಆ ಪ್ರಾಂತ್ಯಕ್ಕೆ ತುಸು ದೂರದ ಊರು ಸೀತಾರಾಮ ಹುಟ್ಟಿದ ಮುದ್ರಾಡಿ ಎಂಬ ಹಳ್ಳಿ. ಸೀತಾರಾಮ ಗೆಳೆಯ ಶಂಕರನನ್ನು ಕರೆದುಕೊಂಡು ಊರಿಗೆ ಬಂದು ಒಂದು ವಾರವಾಯಿತು. ಜಿನುಗು ಮಳೆಯೇ ಇರಲಿ, ಜಡಿಮಳೆಯೇ ಬರಲಿ, ಕೆಲವೊಂದು ತಾಸಿನ ಬಿಸಿಲಿರಲಿ, ಬಾನಲ್ಲಿ ಮುಗಿಲು ತುಂಬಿರಲಿ ಬೆಳಗು ಸಂಜೆಯೂ ಇಬ್ಬರೂ ಜತೆಯಲ್ಲಿ ವಿಹಾರಕ್ಕೆ ಹೋಗು

ತ್ತಾರೆ. ಕಾಲ, ದೂರಗಳ ಅರಿವಿಲ್ಲದವರಂತೆ ನಡೆದು, ದಣಿದು ಯಾವುದಾದರೊಂದು ಹೊಳೆ ಇಲ್ಲವೆ ನದಿಯ ದಂಡೆಯಲ್ಲಿ ಕುಳಿತು, ಓಡುವ ನದಿ ನೀರಿನ ನೃತ್ಯವಿಲಾಸಗಳನ್ನು ಕಂಡು ಸುಖಿಸುತ್ತಾರೆ. ಅವರ ಊರಿನ ದಕ್ಷಿಣಕ್ಕೂ ಒಂದು ನದಿಯಿದೆ; ಉತ್ತರದಲ್ಲಿ ಸೀತಾನದಿಯಿದೆ. ಹೆಚ್ಚು ಕಡಿಮೆ ಯಾವ ಕಡೆಗೆ ನಡೆದುಹೋದರೂ ಮಳೆಗಾಲದಲ್ಲಿ ತುಂಬಿದ ಹಳ್ಳ ಕೊಳ್ಳಗಳೇ. ಮನೆ ಬಿಟ್ಟು ಹರದಾರಿ ದೂರ ಹೋಗುವುದರೊಳಗೆ ಕಾಣ ಸಿಗುವ ಗುಡ್ಡಗಳೆಷ್ಟೋ, ಕಾಡುಗಳೆಷ್ಟೋ. ಹಳ್ಳಗಳೆಷ್ಟೋ. ಬಟ್ಟಬಯಲಾದ, ಧೂಳಿನ ರಾಜ್ಯವಾದ, ದೇಹಲಿಯಿಂದ ಬಂದ ಶಂಕರನಿಗಂತು ಮುದ್ರಾಡಿಯ ಸುತ್ತುಮುತ್ತಲಿನ ನಿಸರ್ಗ ಸೌಂದರ್ಯ ಹುಚ್ಚುಹಿಡಿಸಿದೆ. ಶಿವಸಮುದ್ರವನ್ನು ಕಂಡೇನೆ ಆತ ಮಂಕುಗೊಂಡಿದ್ದ. 'ಅದಕ್ಕಿಂತಲೂ ಈ ಪ್ರದೇಶ ಮನೋಹರವಲ್ಲವೇ? ಇಲ್ಲಿನ ಗುಡ್ಡಬೆಟ್ಟಗಳ ಸೊಬಗು, ಬಯಲು ಕಾಡುಗಳ ಮೋಹಕತೆ, ಪಶ್ಚಿಮ ಘಟ್ಟದ ಲಾವಣ್ಯ. ಆಗಾಗ ಬೆಟ್ಟದ ಸೆರಗನ್ನು ಮುದ್ದಿಸಿ ಮಾಯವಾಗುವ ಮುಗಿಲಿನ ನಿಮಿಷನಿಮಿಷದ ಮಾಯಾಜಾಲ–ಇವೆಲ್ಲ ನಮ್ಮ ಊರಿನಲ್ಲಿ ಎಲ್ಲಿ ಕಾಣಸಿಗಬೇಕು!' ಎಂದೆನ್ನುತ್ತಾನೆ.

ದಿಲ್ಲಿಯನ್ನು ತನ್ನೂರೆಂದು ಕರೆಯುವುದಕ್ಕೆ ನಾಚುತ್ತಿದ್ದ ಅವನಿಗೆ ಇದೇ ತನ್ನೂರಾಗದೇ?–ಎಂಬ ಭ್ರಮೆಯಾಗುತ್ತದೆ. ಸುತ್ತಲಿನ ಅಪಾರ ನಿಸರ್ಗ ಸೌಂದರ್ಯ ಮನಸ್ಸನ್ನು ಮೋಹದಲ್ಲಿ ಸೆರೆ ಹಿಡಿಯುತ್ತದೆ. ಧುಮುಕುವ ನದಿಗಳು, ಎಂಜಿನಿಯರಿಂಗ್ ಕಲಿತ ಅವನ ಬುದ್ಧಿಶಕ್ತಿಯ ಎಣಿಕೆ ತಂದುಕೊಡುತ್ತವೆ. 'ಈ ಒನಕೆ ಅಬ್ಬಿಯಿಂದಲೇ ಎಷ್ಟೊಂದು ಶಕ್ತಿ ಉತ್ಪನ್ನವಾಗಲಾರದು. ಎಷ್ಟೆಲ್ಲ ದೂರದಿಂದ ಅದಕ್ಕೆ ಮಳೆನೀರು ಬರುತ್ತದೋ? ಅದು ಎಷ್ಟು ಚದರಮೈಲು ವಿಶಾಲವಾಗಿದೆಯೋ? ವರ್ಷದ ಮಳೆಯು ಎಷ್ಟು ಪ್ರಮಾಣವೋ! ನಿಶ್ಚಿತವಾದ ಜಲಪ್ರವಾಹ ಎಷ್ಟು ಗಾತ್ರದ್ದೋ' ಎಂದೆಲ್ಲ ಗೆಳೆಯನೊಡನೆ ತರ್ಕಿಸುತ್ತಾನೆ, ಇಬ್ಬರೂ ಸೇರಿ ಊಹಿಸುತ್ತಾರೆ; ಅಂದಾಜು ಹಾಕುತ್ತಾರೆ, ಬೆಟ್ಟದ ಎರಡು ಸಾವಿರ ಅಡಿಗಳಿಂದ ಗುಣಿಸುತ್ತಾರೆ. 'ಯಾಕೆ ಅಷ್ಟೊಂದು ಶಕ್ತಿ ವ್ಯರ್ಥವಾಗಬೇಕು' ಎಂದೆಂದುಕೊಳ್ಳುತ್ತಾರೆ. ಒಮ್ಮೊಮ್ಮೆ ಅದೂ ಒಂದು ಬಗೆಯ

ಕಾಲ್ಪನಿಕ ಪ್ರಪಂಚವಾಗಿ ತೋರುತ್ತದೆ. ಸುತ್ತಲಿನ ಹಳ್ಳಿಯ ಜೀವನ ನೋಡಿದರೆ—ಜಲಶಕ್ತಿಗೂ ಬೆಲೆಯಿಲ್ಲ, ಜನಶಕ್ತಿಗೂ ಮೌಲ್ಯವಿಲ್ಲ—ಎಂದು ಕಾಣಿಸುತ್ತದೆ. ಅವರೊ ಅವರ ಬೇಸಾಯದ ರೀತಿಯೊ! ಅವರ ಜಾನುವಾರಗಳೋ! ಹಸುರು ತುಂಬಿದ ನೆಲದಲ್ಲಿ ಮೇಯುವ ದನಕರುಗಳೊ ನಾಯಿಯ ಗಾತ್ರದವು, ಎಲುಬಿನ ಹಂದರಗಳು! ಅವನ್ನಟ್ಟಿಕೊಂಡು ಕಾಡಿಗೆ ಹೋಗುವ ಬಾಲಕರೂ ಅಷ್ಟೇ ಬಡಜೀವಿಗಳು. ಒಣಗಿದ ಮೈ! ಆದರೆ ಅದನ್ನೆಲ್ಲ ಕೂಡಿಕೊಡುವಂತೆ ಕಾಣಿಸುವ ಉಬ್ಬಿದ ಹೊಟ್ಟೆ. ಮಲೇರಿಯದ ಬಾಧೆಯಿಂದ ಎಲ್ಲರೂ ದಾಮೋದರರೇ. ಅದನ್ನು ನೋಡಿದಾಗಲಂತು ಶಂಕರನ ಮನಸ್ಸಿಗೆ ತುಂಬಾ ನೋವಾಗುತ್ತದೆ. ಆತ ಎಂದೂ ಈ ಬಗೆಯ ನೋಟವನ್ನು ಕಂಡಿಲ್ಲ. 'ಮಲೇರಿಯದಿಂದ ಹೀಗೂ ಹೊಟ್ಟೆ ಬೀಗುವುದುಂಟೆ? ಚಿಕಿತ್ಸೆ ಮಾಡಬಾರದೇ?' ಎಂದು ಕೇಳುತ್ತಾನೆ.

ಸೀತಾರಾಮ ಆಗ ಸಮೀಪವಿರುವ ಆಸ್ಪತ್ರೆಗೆ ಎಷ್ಟು ದೂರ ಎಂದು ಹೇಳಬೇಕಾಗುತ್ತದೆ. 'ಹರದಾರಿ ಹರದಾರಿ ದೂರ ನಡೆದು ಎಷ್ಟು ಜನ ಮದ್ದು ಮಾಟ ಮಾಡಿಸಬಲ್ಲರು. ಮದ್ದು ಮಾಡಿದರೆ ಸಾಕೇ? ಪಥ್ಯ ಮಾಡಲು ಹಣವೆಲ್ಲಿ? ಬಹುಜನರ ಪಾಲಿಗೆ, ಹೀಗೆ ದಿನಂದಿನ ಕಷ್ಟ ಅನುಭವಿಸಿ ಅಕಾಲದಲ್ಲಿ ಸಾಯುವುದೊಂದೇ ಗತಿ' ಎನ್ನುತ್ತಾನೆ. ಸೀತಾರಾಮ ಗೆಳೆಯನಿಗೆ ಆ ಗ್ರಾಮಾಂತರಗಳಲ್ಲಿ ನೆಲೆಸಿದ ಬಡತನದ ಚಿತ್ರವನ್ನು ವಿವರಿಸಿ ಹೇಳುತ್ತಾನೆ.

ಈ ಚಿತ್ರಕ್ಕಿಂತ ಎಷ್ಟೋ ಉತ್ತಮವಾದದ್ದು ಸೀತಾರಾಮನಿರುವ ಮನೆ. ಅವನ ಅಣ್ಣ, ತಾಯಿತಂದೆಯರು ಮನೆ ನಡೆಯಿಸಿಕೊಂಡು ಹೋಗುತ್ತಿದ್ದಾರೆ, ಹಿತವಾದ ಆದರಾತಿಥ್ಯವೂ ನಡೆಯುತ್ತದೆ. ಗೋಧಿ ಸಕ್ಕರೆ ತುಪ್ಪದ ತಿಂಡಿತಿನಸುಗಳನ್ನು ಅವನಿಗೆ ಬಡಿಸದೆ ಹೋದರೂ ಅಕ್ಕಿ ಧಾನ್ಯಗಳ ತಿನಸು ನಿತ್ಯವೂ ದೊರೆಯುತ್ತದೆ. ಆದರೆ ಮನೆಗೆಲಸದಲ್ಲಿ ದುಡಿಯುವ ಅವರಿಗೂ, ಬಿಳಿಬಟ್ಟೆಯುಟ್ಟು ಕೊಳೆಯೆಂದರೆ ಹೇಸುವ ಸೀತಾರಾಮನಿಗೂ ತುಂಬ ತಾರತಮ್ಯ. ಮನೆಯವರು ದಿನವೆಲ್ಲ ಅರೆಬಟ್ಟೆಯುಟ್ಟು ಒಂದಲ್ಲ ಒಂದು ಕೆಲಸ ಮಾಡುತ್ತಿರುತ್ತಾರೆ. ಅವರ ಕೈಮೈಗಳು ಆರೋಗ್ಯದಿಂದ ತುಂಬಿ ಹೊಳೆಯುವವುಗಳಲ್ಲ. ತಮಗಾಗಿ ಮಾಡುತ್ತಿರುವ

ಊಟ ಉಪಹಾರಗಳ ಸತ್ಕಾರ ಎಂದೂ ಮನೆಯ ನಿತ್ಯ ಜೀವನದ ಪರಿಪಾಠವಾಗಿರಲಾರದು. ಸೀತಾರಾಮನಿಗಿಂತ ಕಿರಿಯರಾದ ನಾಲ್ಕುಮಂದಿ ಮನೆಯಲ್ಲಿದ್ದಾರೆ, ಹುಡುಗರು ಹುಡುಗಿಯರು, ಶಾಲೆಗೆ ಹೋಗುವವರು ಹೋಗದವರು; ಮಕ್ಕಳು ದಿನಕ್ಕೆರಡು ಬಾರಿ ಮಳೆಯಲ್ಲಿ ನೆನೆದು, ದೂರದ ಶಾಲೆಗೆ ಎರಡೆರಡು ಬಾರಿ ಹೋಗಿ ಬರಬೇಕು. ಆರು ವಯಸ್ಸಿನ ಕಿರಿಯ ತಮ್ಮ ರಘುರಾಮ ಅಕ್ಕ ಅಣ್ಣಂದಿರೊಡನೆ ಬಯಲನ್ನಿಳಿದು, ತೋಡನ್ನು ದಾಟಿ, ಗುಡ್ಡಗಳನ್ನು ಹತ್ತಿ, ಇಳಿದು, ಕಾಡಿನ ಜಿಗಣೆಗಳಿಂದ ಕಚ್ಚಿಸಿಕೊಂಡು, ಮೈಯನ್ನು ತೊಯ್ಯಿಸಿಕೊಂಡು ಓಡಾಡುವ ನೋಟ ಮರುಕ ಹುಟ್ಟಿಸುತ್ತದೆ—ಶಂಕರನ ಮನಸ್ಸಿನಲ್ಲಿ. ಎಲ್ಲರೂ ತಮ್ಮ ಪಾಲಿನ ನಿಸ್ವಾರ್ಥ ತ್ಯಾಗದಿಂದ ಸೀತಾರಾಮನ ಉಚ್ಚ ಶಿಕ್ಷಣವನ್ನು ಸಾಧ್ಯವಾಗಿ ಮಾಡಿಕೊಟ್ಟಿದ್ದಾರೆ. ಅದನ್ನೆಲ್ಲ ನೆನೆದರೆ ಶಂಕರನ ಮನಸ್ಸಿನಲ್ಲಿ ಆದರ್ಶಗಳು ಹುಟ್ಟುತ್ತವೆ.

'ಸೀತಾರಾಮ, ಇಷ್ಟೆಲ್ಲ ಸೃಷ್ಟಿಯ ಅನುಕೂಲತೆಗಳು ಸುತ್ತಲಿರುವಾಗ ನಮ್ಮ ಜನ ಇದಕ್ಕಿಂತ ಸುಖವಾಗಿ ಬಾಳಲಾರರೇ? ನಟ್ಟಲ್ಲಿ ಗಿಡ ಚಿಗುರುತ್ತದೆ; ಎಲ್ಲಿ ಕಂಡರಲ್ಲಿ ತೊರೆಗಳು ಹರಿಯುತ್ತವೆ. ಬೇಕಷ್ಟು ಕಾಡಿದೆ. ಜನ ಜಾಗ್ರತಿಗೊಂಡರೆ ಇದನ್ನೇ ನಂದನವನವನ್ನಾಗಿ ಮಾಡಲು ಬರಲಾರದೇ ? ಇದು ಒಬ್ಬೊಬ್ಬರಿಂದಾಗಲಾರದ ಕೆಲಸ ನಿಜ. ಏನೂ ಅರಿಯದ ಜನಗಳು ಕೈಗೊಳ್ಳುವ ಕೆಲಸವಲ್ಲ. ಆದರೆ ನನ್ನ—ನಿನ್ನಂತಹ ಓದಿದವರು, ಬಲ್ಲವರು, ಕನಸುಗಾರರು ಇಂಥ ಸ್ಥಳಗಳನ್ನು ಬಿಟ್ಟು ಓಡಿಹೋದರೆ ನೌಕರಿಗಾಗಿ ಹಾತೊರೆದರೆ ಇವರ ಶ್ರೇಯಸ್ಸನ್ನೆಣಿಸುವವರಾರು? ನಿನಗೂ ಸಾಕಷ್ಟು ಜಮೀನಿದೆ, ಅದನ್ನು ಬಿಟ್ಟಿರುವುದರಲ್ಲೇನರ್ಥ?

ಗೆಳೆಯ ಸೀತಾರಾಮ ತನ್ನೂರಿನ ಜೀವನಸಂಗ್ರಾಮದ ಕಷ್ಟ ನಿಷ್ಠುರಗಳನ್ನು ವಿವರಿಸಿ ಶಂಕರನನ್ನು ಇದಿರಿಸಬೇಕಾಗುತ್ತದೆ. "ಭೂಮಿಗೇನೂ ಕಡಿಮೆಯಿಲ್ಲ. ನಮಗೂ ಸಾಕಷ್ಟಿದೆ. ಹೇಳಕೇಳುವವರಿಲ್ಲದ ಜಮೀನುಗಳೂ ಎಷ್ಟೋ ಇವೆ. ನೆಲದ ಒಡೆಯರಿಗೆ ಹೊರೆಯಾಗಿ ಕಾಣಿಸಿ, ಕಂದಾಯ ತೆರಲಾರದೆ ಕೈಬಿಟ್ಟ ನೆಲಗಳೂ ಇವೆ. ನಮಗೇನೇ ಸುಮಾರು ಇನ್ನೂರು ರೂಪಾಯಿ ಕಂದಾಯ ಕೊಡುವಷ್ಟು ಜಮೀನಿದೆ. ನಮ್ಮ ಮನೆ

ಯಲ್ಲಿ ಜಗುಲಿಯ ಮೇಲೆ ಇರಿಸಿದ ಅಕ್ಕಿಯ ಮೂಟೆಗಳನ್ನು ನೋಡಿದೆ ಯಲ್ಲ—ಅಂಥ ಒಂದೊಂದು ಹುಲ್ಲಿನ ಮೂಟೆಗೆ ಒಂದೊಂದು 'ಮುಡಿ' ಅನ್ನುತ್ತಾರೆ. ಎಲ್ಲ ಸಮನಾಗಿದ್ದರೆ, ಇನ್ನೂರು ರೂಪಾಯಿ ಕಂದಾಯ ತೆರುವ ಭೂಮಿಯಿಂದ ಇನ್ನೂರು ಮುಡಿ ಅಕ್ಕಿ ಸಿಗಬೇಕು. ಆದರೆ ಅದರ ಅರೆವಾಸಿ ಸಿಗುವುದು ಕಷ್ಟ. ಒಕ್ಕಲುಗಳಿಗೆ ಗೇಣಿಗೆ ಕೊಟ್ಟರೂ ಪೂರ್ಣ ಬರುವುದಿಲ್ಲ. ಅದರಲ್ಲೆ ಷ್ಟೋ ಭೂಮಿ ಬಂಜರು. ಕಾಡು ಬೆಳೆದು ಹೋದದ್ದು. ಕಾಣುವುದಕ್ಕೆ ಎಲ್ಲಿ ನೋಡಿದರಲ್ಲಿ ಹಸುರು ಕಾಣಿ ಸುತ್ತದೆ. ಗೊಬ್ಬರಕ್ಕೆ ಸೊಪ್ಪು ತರಲು ಹೋದರೆ ಅರಣ್ಯ ಇಲಾಖೆಯವರ ಅಡ್ಡಿ. ಅದಕ್ಕಾಗಿ ತೆರ ಕೊಡಬೇಕು, ಮಾಮೂಲು ಕೊಡಬೇಕು. ಇನ್ನೆಷ್ಟೋ ಉಪದ್ರವಗಳಿವೆ. ಜಾನುವಾರುಗಳ ಸ್ಥಿತಿ ಕಂಡಿದ್ದೀಯಾ? ಆರು ತಿಂಗಳ ಕಾಲ ಮೇಯುವಷ್ಟು ಹಸುರಿದೆ. ಮುಂದೆ ತರಗೆಲೆಗಳೇ ಗತಿ. ಕಾಡಿನ ಸಮೀಪಕ್ಕೆ ಹೋದರೆ, ಹುಲಿಗಳ ಕಾಟದಿಂದ ದನಕರುಗಳು ಮನೆಗೆ ಹಿಂತಿರುಗುವುದು ಕಷ್ಟ. ಮನೆಯ ಜನರೂ ಕೆಲಸದ ಆಳುಗಳೂ ಸೇರಿ ವರ್ಷವೆಲ್ಲ ದುಡಿದರೂ ಜೀವಿಸುವುದು ಕಷ್ಟವಾಗಿದೆ. ನನ್ನ ವಿದ್ಯೆಗಾಗಿ ಸಾಲಮಾಡಬೇಕಾಯಿತು. ಆ ಸಾಲ ತೀರಿ ಸುವವರಾರು? ನಾನೊಂದು ಉದ್ಯೋಗ ದೊರಕಿಸಿಕೊಂಡರೆ, ಮುನ್ನೂರು ನಾನ್ನೂರತನಕ ಸಿಕ್ಕೀತು. ಆಗ ನನ್ನ ಒಬ್ಬನ ತಿಂಗಳ ದುಡಿಮೆ ಇವರ ವರ್ಷದ ವರಮಾನವಾಗುತ್ತದೆ. ನೀನೆನ್ನುವಂತೆ ನಾನೂ ಮನೆಯಲ್ಲಿ ಕುಳಿತರೆ, ನನಗಾಗಿ ಮಾಡಿದ ಸಾಲದ ಗತಿಯೇನು?" ಎಂದು ಪ್ರತಿಯಾಗಿ ವಾದಿಸುತ್ತಾನೆ. 'ತಾನು ಬದುಕಿಕೊಂಡ ಮೇಲೆ ಊರಿನ ಉದ್ಧಾರದ ವಿಚಾರ' ಎಂಬುದು ಅವನ ವಾದದ ಸರಣಿ.

ಶಂಕರ ಅಲ್ಲಿಗೆ ಬಂದಮೇಲೆ ದಿಲ್ಲಿಯ ಕಾಗದಗಳಿಗಾಗಿ ಹಂಬಲಿಸು ತ್ತಾನೆ. ಒಮ್ಮೆಗೇ ವರಲಕ್ಷ್ಮಿಯಿಂದ ಬರುವ ಪತ್ರಗಳು ನಿಂತುವು. ಆಕೆ ಮುನಿಸಿಕೊಂಡು ಬರೆಯಲಿಲ್ಲ—ಎಂದು ಊಹಿಸಿದ. ತಾನು ಬರೆದ ಎರ ಡೆರಡು ಕಾಗದಗಳಿಗೂ ಉತ್ತರ ಬಾರದ್ದನ್ನು ನೋಡಿ, ಪ್ರಾಯಶಃ ತನ್ನ ಹಳ್ಳಿಗಾಡಿನ ಮಮತೆ ಅವಳಲ್ಲಿ ಅನುಮಾನ ಹುಟ್ಟಿಸಿರಬೇಕೆಂದೂ, ತಾನಾ ದರೂ ತನ್ನ ಮುಂದಿನ ಗುರಿ ನಿರ್ಧಾರವಾಗುವ ತನಕ ಅವಳ ಮನಸ್ಸಿನ

ಪರೀಕ್ಷೆಗೆ ಹೋಗುವುದು ಒಳಿತಲ್ಲವೆಂದೂ ಅಂದುಕೊಂಡ. ಅವನ ತಂದೆಯಿಂದ ಒಂದು ಪತ್ರವೇನೋ ಬಂದಿತ್ತು. 'ಏನು ಮಾಡುತ್ತೀಯಾ ಕನ್ನಡ ಜಿಲ್ಲೆಯಲ್ಲಿ ? ಏನು-ನಮ್ಮ ಪೂರ್ವಜರ ಹುಟ್ಟೂರು ಎಂಬ ಅಭಿಮಾನವಾಗಿ ಹೋದೆಯಾ ? ನೋಡಿಕೊಂಡು ಬಾ, ನನ್ನ ಅಕ್ಷೇಪವೇನಿಲ್ಲ. ನನ್ನ ಅಜ್ಜ, ಅಜ್ಜಿ ಎಲ್ಲರು ಹುಟ್ಟಿದ್ದು ಕನ್ನಡ ಜಿಲ್ಲೆಯ 'ಬಂಗಾಡಿ' ಎಂಬ ಒಂದು ಹಳ್ಳಿಯಲ್ಲಂತೆ. ನನ್ನ ತಂದೆಯೂ ಆ ಊರನ್ನು ನೋಡಿರಲಿಲ್ಲ. ನಿನಗೆ ನೋಡುವ ಆಸೆಯಾದರೆ ಹೋಗಿ ಬಾ. ಒಂದು ತಿಂಗಳಿಗಿಂತ ಹೆಚ್ಚಿಗೆ ಸಮಯ ಕಳೆಯಬೇಡ. ಪಂಜಾಬಿನಲ್ಲೊಂದು ಕೆಲಸವಿದೆ. ಆದನ್ನು ನಿನಗೆ ಕೊಡಿಸುವುದು ಸುಲಭಸಾಧ್ಯ. ಆ ಸಂದರ್ಭವನ್ನು ಮುಂದುವರಿಸುತ್ತ ಅವನ ತಮ್ಮನ ವಿಚಾರದಲ್ಲಿ ನಾಲ್ಕು ಮಾತುಗಳನ್ನು ಸೇರಿಸಿದ್ದರು. 'ವಿಠ್ಠಲನ ಭವಿಷ್ಯ ತುಂಬ ಆಶಾದಾಯಕವಾಗಿದೆ. ಈಗ ಆತ ಅಂಬಾಲದಲ್ಲಿದ್ದಾನೆ ಫ್ಲೈಟ್ ಆಫೀಸರನ್ನಾಗಿ ಮಾಡಿದ್ದಾರೆ ಅವನನ್ನು. ನನ್ನ ಹೆದರಿಕೆ ಒಂದೇನೆ. ಎಲ್ಲಾದರೂ ಪೂರ್ವಪ್ರದೇಶಕ್ಕೆ ಯುದ್ಧಕ್ಕೆ ಕಳುಹಿಸುತ್ತಾರೋ ಎಂಬ ಅಂಜಿಕೆ. ಅದನ್ನು ನೆನೆದರೆ ತುಂಬ ಭಯವಾಗುತ್ತದೆ. ಅವನ ಮತ್ತು ನಿನ್ನ ಸಲುವಾಗಿ ನಾಲ್ಕಾರು ನೆಂಟಸ್ತಿಕೆಗಳು ಬಂದಿವೆ. ನಿನಗಾಗದೆಯೆ ಅವನಿಗಾಗಲಾರದಷ್ಟೆ "-ಎಂದು ತಮ್ಮ ಪತ್ರವನ್ನು ಮುಗಿಸಿದ್ದರು. ಪತ್ರವನ್ನೋದಿ ಶಂಕರ ಯೋಚನಾಪರನಾದ-ಬಂಗಾಡಿಯ ನೆನಪು ಕೊಟ್ಟುದಕ್ಕೆ. ಅಂಥ ಒಂದು ಹಳ್ಳಿಯಿದೆ ಎಂದು ಸಂತೋಷವಾಯಿತು. ಅದು ಅಲ್ಲಿಯೇ ಇದ್ದ ಬಂಗಾಡಿ. ಹೀಗಾಗಿ ಹೊರಡುವುದರೊಳಗೆ ಆ ನೆಲೆಯನ್ನು ಶೋಧಿಸಿ ತಿಳಿಯಬೇಕು—ಎಂಬ ಆಸೆ ಬಲವಾಯಿತು. ಆದರೆ ಮದುವೆಯ ವಿಚಾರದ ಮಾತುಗಳು ಮಾತ್ರ ಅವನಲ್ಲಿ ಸಂತೋಷವನ್ನು ಹುಟ್ಟಿಸಲಿಲ್ಲ. ತಂದೆಯ ಕಾಗದಕ್ಕೆ ಪ್ರತಿಯಾಗಿ " ನನಗಾಗಿ ವಿಠ್ಠಲನ ಮದುವೆ ಮುಂದುವರಿಸುವುದು ಬೇಡ. ನಾನು ಮದುವೆಯ ಆತುರದಲ್ಲಿಲ್ಲ. ನನ್ನ ವಿಷಯದಲ್ಲಿ ಯಾರಿಗೂ ಭರವಸೆಯನ್ನು ಕೊಡಲು ಹೋಗಬೇಡಿ " ಎಂದು ಬರೆದ. ವಿಟ್ಠಲನನ್ನು ಕುರಿತು ತಂದೆಗೆ ಸಮಾಧಾನವನ್ನು ಹೇಳುವ ಮಾತಾಗಿ 'ಏನಿದ್ದರೂ ನೌಕರಿ ಆರಿಸುವ ಮೊದಲು ಯೋಚಿಸಬೇಕಾಗಿತ್ತು. ಒಮ್ಮೆ ಅದಕ್ಕೆ ಸೇರಿದಮೇಲೆ ಹಿಂದೆಗೆ

ಯುವ ಹಾಗಿಲ್ಲ. ಬರ್ಮಾ, ಮಲಯಾಗಳಲ್ಲಿ ಯುದ್ಧ ಭೀತಿ ಇದ್ದೇ ಇದೆ. ಥಕ್ಕನೆ ಎಲ್ಲಿಯೂ ಯುದ್ಧ ನಿಲ್ಲುವ ಭರವಸೆಯಿಲ್ಲ. ಸಾಯುವ ಯೋಗವಿದ್ದರೆ ಊರಿನಲ್ಲಿದ್ದರೂ ಸಾಯುವುದಿಲ್ಲವೇ ? ಹುಟ್ಟು ಸಾವುಗಳೆಲ್ಲ ನಮ್ಮ ಕೈಯಲ್ಲಿನ ಮಾತುಗಳೇ ? ಆ ವಿಷಯವಾದ ಚಿಂತೆ ವ್ಯರ್ಥವಲ್ಲವೇ " ಎಂದು ಬರೆದ. ತಾಯಿಯ ಕ್ಷೇಮಸಮಾಚಾರವನ್ನು ವಿಚಾರಿಸಿದ. ಜತೆಗೆ ವರಲಕ್ಷ್ಮಿಯ ಮನೆಯವರು ಹೇಗಿದ್ದಾರೆ.' ಅದರಲ್ಲಿಯೂ 'ಆಕೆ ಹೇಗಿದ್ದಾಳೆ ?' ಎಂದು ಕೇಳುವ ಕುತೂಹಲ ಅವನಿಗಾದರೂ, ಲೇಖನ ಆ ವಿಚಾರವಾಗಿ ಬರೆಯಲು ಅಳುಕಿ, ಅಲ್ಲಿಗೆ ನಿಲ್ಲಿಸಿದ.

ತಂದೆಯ ಪತ್ರವನ್ನೋದಿ ಸೀತಾರಾಮನನ್ನು ಕರೆದು "ನೋಡಯ್ಯ ತಂದೆಯು ಬರೆದಿದ್ದಾರೆ. ಬಂಗಾಡಿಯೆಂಬ ಹಳ್ಳಿ ಇದೆಯಂತೆ, ನಿನ್ನ ಜಿಲ್ಲೆಯಲ್ಲೇ ಇದೆಯಂತೆ. ನಾನೂ ನಿನ್ನೊಡನೆ ಬಂದಿದ್ದರೆ ಅಂಥ ಆಸೆಗೆ ಪ್ರೇರಣೆ ಕೊಟ್ಟದ್ದು—ಆ ಹಳ್ಳಿಯ ಹೆಸರೇ. ನನ್ನ ಅಜ್ಜ, ಮುತ್ತಜ್ಜ ಎಲ್ಲಿ ಹುಟ್ಟಿ ಬೆಳೆದವರು ಎಂದು ನೋಡುವ ಕುತೂಹಲವಾಗಿ. ಆ ಊರನ್ನಾದರೂ ಕಂಡು ಸಂತೋಷಪಡಬಹುದಲ್ಲ. ಕೊನೆಗೆ ಏನು ಆಗದೆ ಹೋದರೂ ಈ ಕಡೆ ಬಂದುದಕ್ಕೆ, ಮೈಸೂರು ಸೀಮೆಯನ್ನು ಕಂಡುದಕ್ಕೆ, ನಮ್ಮ ಹಿರಿಯರ ಊರಿನ ನಾಲ್ಕೆಂಟು ಕನ್ನಡ ಶಬ್ದಗಳನ್ನಾದರೂ ಕಲಿತ ಹಾಗಾಯಿತು" ಎಂದು ನಕ್ಕು ನುಡಿದ. "ಇನ್ನೂ ಹತ್ತು ಶಬ್ದಗಳನ್ನು ಕಲಿಯೋಣವೆಂದರೆ ನಿಮ್ಮೂರಲ್ಲಿ ಕನ್ನಡಕ್ಕಿಂತ ತುಳುವೇ ಹೆಚ್ಚು ಕೇಳಿಸುತ್ತದಲ್ಲ" ಎಂದ.

"ಕನ್ನಡ ನಮ್ಮ ಮನೆಯ ಎಲ್ಲರಿಗೂ ಬರುತ್ತದೆ. ನಮ್ಮ ಮನೆಮಾತು ತುಳು. ಇಲ್ಲಿಂದ ನಾಲ್ಕು ಮೈಲು ಉತ್ತರಕ್ಕೆ ಹೋದರೆ ಪ್ರತಿಯೊಬ್ಬರ ಮನೆ ಮಾತೂ ಕನ್ನಡ. ತುಳು ಕೇವಲ ಆಡು ಭಾಷೆ. ಬರೆಯುವ ಮಾತಲ್ಲ."

"ಅದಿರಲಿ, ನೀನು ಬಂಗಾಡಿ ಎಲ್ಲಿದೆಯೆಂದು ತಿಳಿದು ಹೇಳುವುದು ಯಾವಾಗ? ಅಲ್ಲಿಗೆ ನಾವು ಹೋಗುವುದು ಯಾವಾಗ?" ಎಂದು ಶಂಕರ ಅಪೇಕ್ಷಿಸಿದುದಕ್ಕೆ, ಸೀತಾರಾಮ ಆ ರಾತ್ರಿ, ತಂದೆ ಜಗಲಿಯಲ್ಲಿ ಕುಳಿತು ವೀಳೆಯದೆಲೆ ತಿನ್ನುತ್ತಿದ್ದಾಗ "ಅಪ್ಪಾ, ಇವರು ಮೂಲದಲ್ಲಿ ನಮ್ಮೂರವರು. ನಮ್ಮೂರೆಂದರೆ ಈ ಹಳ್ಳಿಯಲ್ಲ. ಈ ಜಿಲ್ಲೆಯವರು. ಇವರ ಹಿರಿಯರು ಬಂಗಾಡಿ ಎಂಬ ಹಳ್ಳಿಗೆ ಸೇರಿದವರಂತೆ. ಅಂಥ ಹೆಸರಿನ ಹಳ್ಳಿಯೊಂದು

ಇದೆಯೇ ? ಏನು, ಎಲ್ಲಿ ಎಂದು ತಿಳಿದಿದೆಯೇ ? " ಎಂದು ಕೇಳಿದ.

" ಏನು, ಬಂಗಾಡಿಯುವರೇ ಇವರು ? ದಿಲ್ಲಿಯುವರೆಂದೆಯಲ್ಲ ? "

" ದಿಲ್ಲಿಯುವರು—ಈಗ. ಇವನ ತಂದೆ ಹುಟ್ಟಿದವರು ಮುಂಬಯಿಯಲ್ಲಿ. ಅಲ್ಲೇ ದೊಡ್ಡದಾದುದು. ಅಲ್ಲಿಂದ ದಿಲ್ಲಿಗೆ ಹೋದುದು. ಆದರೆ ಅಜ್ಜ, ಮುತ್ತಜ್ಜ ಹುಟ್ಟಿದುದು ಬಂಗಾಡಿಯಲ್ಲಂತೆ. ಇವನಿಗೆ ಆ ಊರನ್ನು ನೋಡುವ ಅಪೇಕ್ಷೆಯಾಗಿದೆ. ಅರ್ಥ—ಆ ಆಸೆಯಿಂದಲೇ ನನ್ನ ಜತೆಗೆ ನಮ್ಮೂರಿಗೆ ಬರಲು ಒಪ್ಪಿದ. ನೀನು ನೋಡಿದ್ದೀಯೆ ಬಂಗಾಡಿಯನ್ನು ?"

" ನೋಡದೆ ಏನು ! ನೀನೊಬ್ಬ ಮರುಳ. ನಿನ್ನ ಅಜ್ಜಿ ಹುಟ್ಟಿದ ಊರು ಅದೇನೆ ? ನನಗೆ ಗೊತ್ತಿರುವುದು ಆ ಒಂದು ಬಂಗಾಡಿ ಮಾತ್ರ—ಯಾವುದೆಂದರೆ ಬೆಳ್ತಂಗಡಿಗೆ ಸಮೀಪವಾಗಿರುವ ಬಂಗಾಡಿ. ಬೇರೆಯೇ ಒಂದು ಬಂಗಾಡಿ ಇದ್ದಹಾಗಿಲ್ಲ. ತೀರ ಸಣ್ಣವನಿದ್ದಾಗ ನಾನು ಹೋಗಿದ್ದೆ. ಈಗ ನಿನ್ನ ಅಜ್ಜಿಯ ಕುಟುಂಬದವರು ಯಾರೂ ಅಲ್ಲಿಲ್ಲ. ಇಲ್ಲ ಅಂದರೆ ಇದ್ದಾರೆ; ದೂರದ ಸಂಬಂಧ; ಅಜ್ಜಿಯ ಚಿಕ್ಕಪ್ಪನಿಗೆ ಏನೋ ಆಗಬೇಕಾದವರು."

ಅಷ್ಟು ಮಾತು ನಡೆಯುವಾಗ ಸೀತಾರಾಮನ ತಾಯಿ ಮಾತಿಗೆ ಬಂದು ಕೂಡಿದರು. ತನ್ನ ತಾಯಿ ಮನೆಯ ಅಭಿಮಾನ, ಊರಿನ ಅಭಿಮಾನ ಅವಳಿಗೆ ಕಡಿಮೆಯಾಗಿರಲಿಲ್ಲ. ಗಂಡನನ್ನು ಟೀಕಿಸುತ್ತ " ಏನು, ನಿಮಗೆ ಅಷ್ಟೊ ಮರವೆಯೇ ? ಎಂಟು ವರ್ಷಗಳ ಹಿಂದೆ ಧರ್ಮಸ್ಥಳ ನೋಡಲಿಕ್ಕೆ ಹೋದವರು—ಉಜ್ರೆಗೆ ಹೋಗಲಿಲ್ಲವೇ? ಸುಬ್ರಾಯ ಎಳಚಿತ್ತಾಯರ ಮನೆಗೆ ಹೋಗಲಿಲ್ಲವೇ ? ಅವರಿರುವುದು ಬಂಗಾಡಿಯಲ್ಲೇ ಅಲ್ಲವೇ? ಸುಬ್ರಾಯ ನನ್ನ ಅಜ್ಜಿಯ ಅಣ್ಣನ ಮೊಮ್ಮಗ. ನಿಮಗೆ ದೂರವಾದರೆ ನನಗೆ ಸಮೀಪ. ತಮ್ಮನಾಗುವುದಿಲ್ಲವೇ ? " ಎಂದು ನುಡಿದಳು.

ಯಜಮಾನರಾದ ನಾರಾಯಣ ತೋಳ್ಪಾಡಿತ್ತಾಯರು ನಕ್ಕರು. " ಹೂಂ, ಈ ಹೆಂಗಸರ ನೆನಪು ಸಾಕು. ಎಲ್ಲೋ ಎಂಟು ವರ್ಷಗಳ ಹಿಂದೆ ಹೋಗಿ, ಒಂದು ಹೊತ್ತು ನಿಂತು, ಒಂದು ಊಟ ಉಂಡದ್ದು ನಿಜ. ನಿನಗೆ ಸರಿ—ಅಜ್ಜನ ಮನೆ. ತಾಯಿಯ ತಾಯಿಯ ಅಣ್ಣ ದೂರದವನಲ್ಲ. ಅವನ ಮೊಮ್ಮಗನೂ ಸಮೀಪವೇ. ಹೌದಹುದು. ಈಗ ಮನೆ, ಮುಖ ಕಂಡ ಎಲ್ಲ ನೆನಪಾಗುತ್ತದೆ. ಹಾಳು ಮರವೆ ನನ್ನದು. ಬಂಗಾಡಿಯಾದರೆ ಸಮನಾಗಿ

ಸಾಲದುದಕ್ಕೆ ಅಲ್ಲಿಂದ ನೇರಾಗಿ ಬಂಗಾಡಿಯ ಅವರ ಮಾವನ ಮನೆಯ ಮುಂದೆ ಹಳ್ಳಕ್ಕೇನೇ ಹಾರುವ 'ವಾಟರ್‌ಫೋಲ್' ಎಂಬ ಜಲಪಾತ ವನ್ನೂ ಬಣ್ಣಿಸಿದರು. ಒಂದಾವೃತ್ತಿಯಾದರೂ 'ಜಲಪಾತ,' 'ಅಬ್ಬಿ,' 'ತಡಸಲು' ಎಂದು ಅದರ ಮಾನಗೆಡಿಸದೆ 'ಒಟರ್‌ಫೋಲ್' ಅನ್ನುತ್ತಲೇ ಇದ್ದರು. ಮಾತಿನ ಎಡೆ ಎಡೆಯಲ್ಲಿ ಗಡಿಯಾರ ನೋಡುತ್ತ "ಮಕ್ಕಳೇ ಘಂಟೆ ಹೊಡೆಯಿರಿ" ಎಂದರು. ಮಕ್ಕಳ ಹಿಂಡನ್ನು ನಿವಾರಿಸಿಕೊಂಡು, ಆರಾಮವಾಗಿ ಕುಳಿತು ಹರಟೆಗೆ ಆರಂಭ. ಆ ಮೇಲಿನ ಮುಖ್ಯ ವಿಷಯ ವೆಂದರೆ—ಬಡ ಶಾಲಾ ಉಪಾಧ್ಯಾಯರ ಗೋಳು. ತೂತಾದ ಕಿಸೆ. ಕೈಗೆ ಸಿಕ್ಕುವ ಮೊದಲೇ ಕಣ್ಮರೆಯಾಗುವ ಸಂಬಳ. ಗತಿ ಗೋತ್ರ ಗೊತ್ತಿಲ್ಲದ ಊರಿಗೆ ವರ್ಗಾವರ್ಗಿ. ಐದು ಕ್ಲಾಸುಗಳಿಗೆ ಒಬ್ಬ ಮಾಸ್ತರನ ಗೋಳು. ಇಷ್ಟೆಲ್ಲ ಸಾಲವೆಂಬುದಕ್ಕೆ ಜಾತಿಯವರ ಮನೆಯಲ್ಲಿ ದಿನಕ್ಕೊಂದು ಹೊತ್ತು ಊಟ ಗಳಿಸುವ ಸಲುವಾಗಿ ಎಂಟೆಂಟು ಮೈಲು ನಿತ್ಯ ನಡೆಯ ಬೇಕಾದ ಪ್ರಸಂಗ. ಮಾತಿನ ಎಡೆಯಲ್ಲೇ ಠಣನೆ ಎದ್ದು ನಿಂತರು. "ಸ್ವಾಮಿ, ಮಾತಾಡುತ್ತ ಕುಳಿತರೆ ರಾತ್ರಿಯ ಗ್ರಾಸ ಮೋಸ; ನಾವು ಜೈನರು. ಕತ್ತಲೆಗೆ ಮುಂಚೆ ಊಟ; ನಾವು ಪಾಸದವರು. ಮಳೆ ಗಾಲದಲ್ಲಂತು ಐದು ಘಂಟೆಗೆ ಕತ್ತಲಾಗುತ್ತೆ. ಇನ್ನೆರಡು ಹರದಾರಿ ನಡೆದುಕೊಂಡು ಹೋಗಬೇಕು— ಒಂದು ಊಟ ಕಾಣುವುದಕ್ಕೆ" ಎಂದು ಅವಸರದಿಂದೆದ್ದರು, ಕಿಟಕಿ ಮುಚ್ಚಿದರು. ಬಂದವರನ್ನು ಆ ದಿನದ ಮಟ್ಟಿಗೆ ಹೊರಕ್ಕೆ ಹೊರಡಿಸಿ, ನಾಗಾಲೋಟದಿಂದ ಊಟದ ಮನೆಯ ಹಾದಿ ಹಿಡಿದರು.

ಉಪಾಧ್ಯಾಯರನ್ನು ಬೀಳ್ಕೊಟ್ಟ ಬಳಿಕ ಶಂಕರ, ಸೀತಾರಾಮರು ಗ್ರಾಮದ ತೀರ ಇನ್ನೊಂದು ತುದಿಯಲ್ಲಿರುವ ತಮ್ಮ ಮನೆಗೆ ಹೊರಟರು. ದಾರಿಯುದ್ದಕ್ಕೂ 'ಬಂಗಾಡಿಗೆ ಹೊರಡುವುದೆಂದು' ಎಂಬ ವಿಚಾರದಲ್ಲೇ ಮಾತುಕತೆ.

ಹೊರಡುವುದಾದರೆ ಮತ್ತೇತ್ತಕ್ಕೆ ತಡೆಮಾಡಬೇಕು? ಆದಷ್ಟು ಬೇಗ ಹೋಗಿ ಬರೋಣ. ಅಲ್ಲಿಂದ ನಾಲ್ಕೂರುಗಳನ್ನು ಸುತ್ತಿಕೊಂಡು ಮದ್ರಾಸು ಮಾರ್ಗವಾಗಿ ನಾನು ದಿಲ್ಲಿಗೆ ಹೋಗುತ್ತೇನೆ" ಎಂದು ಶಂಕರ ಹೇಳಿದ.

ಅಷ್ಟು ಬೇಗನೆ ಹೊರಡುವುದಕ್ಕೆ ಸೀತಾರಾಮನಿಗೆ ಅನುಕೂಲತೆ ಇರಲಿಲ್ಲ. ಆತ ನೌಕರಿಯ ನಿರೀಕ್ಷಣೆಯಿಂದ ದಕ್ಷಿಣ ಹಿಂದುಸ್ತಾನದ ಮೂರು ನಾಲ್ಕು ಕಂಪೆನಿಗಳಿಗೆ ಪತ್ರ ಬರೆದಿದ್ದ; ಅವರಿಂದ ಉತ್ತರ ಕಾಯುತ್ತಿದ್ದ. ಇನ್ನೊಂದೆಡೆ—ಮನೆಯವರ ಆಗ್ರಹದ ಮೇರೆಗೆ ಕುಂದಾಪುರದ ತನಕ ಸಂಚಾರಮಾಡಿಕೊಂಡು ಬರಬೇಕಿತ್ತು. ಅಲ್ಲಿಗೆ ಗೆಳೆಯನನ್ನು ಕಟ್ಟಿಕೊಂಡು ಹೋಗುವುದಕ್ಕೂ ಇಷ್ಟವಿಲ್ಲ; ಬಿಡುವುದಕ್ಕೂ ಅಳುಕು. ನಾಡನುಡಿ ಬಾರದ ಶಂಕರನೊಬ್ಬನನ್ನೇ ಬಿಟ್ಟು ತಾನು ಹೊರಡುವುದು ಉಚಿತವಲ್ಲ ವೆಂದು ತೋರುತ್ತದೆ. ಹೋಗಬೇಕಾದ ಕೆಲಸವನ್ನು ಕುರಿತು ಹೇಳುವು ದಕ್ಕೂ ಸಂಕೋಚವೇ. ಹಿರಿಯರು ಅವನಿಗಾಗಿ ಅಲ್ಲೊಂದು ನಂಟುತನ ಹೊಂಚುಹಾಕಿಟ್ಟಿದ್ದರು. ಹುಡುಗಿ ನೋಡದ ಲಗ್ನಕ್ಕೆ ಒಡಂಬಡಬಾರದು ಎಂದು ಅವನ ಮನಸ್ಸು ಹೇಳುತ್ತದೆ. ಉಪಾಯವಾಗಿ ಗೆಳೆಯನೊಡನೆ, ತೀವ್ರ ಹೊರಡಲು ತನಗಿರುವ ಅಡಚಣೆಗಳನ್ನು ಬಿಡಿಸಿ ಹೇಳಿದ. ಶಂಕರ ನಕ್ಕ. "ಈ ಹಿರಿಯರಂತು, ಹೇಳದೆ ಕೇಳದೆ ನಮ್ಮ ಕೊರಳಿಗೆ ಮದು ಮೆಯ ಭಾರ ಕಟ್ಟುವ ಸ್ವಭಾವದವರೆಂದು ಕಾಣುತ್ತದೆ. ನನಗೂ ಹಾಗಾ ಗಿದೆ. ತಂದೆಯು ತನ್ನ ಕಾಗದದಲ್ಲಿ ಮದುವೆಯ ಮಾತನ್ನು ಸೂಚಿಸಿದ್ದಾರೆ ನಾನಂತು 'ಅಂಥಾ ಅವಸರವೇನಿಲ್ಲ' ಎಂದು ಬರೆದು ಹಾಕಿದ್ದೇನೆ. ನನ್ನ ಭವಿಷ್ಯ ನನಗೆ ಸ್ಪಷ್ಟವಾಗಿ ಕಾಣಿಸುತ್ತಲಿಲ್ಲ. ಮದುವೆಗೆ ಅವಸರಮಾಡ ಬಾರದು–ಎಂದು ತೋರುತ್ತದೆ. ನಿನಗೆ ನಿನ್ನ ದೃಢ ಇದೆಯಲ್ಲ. ಕುಂದಾ ಪುರಕ್ಕೆ ಹೋಗಿ ಬಾ. ಏನು ದೂರದ ಊರೇ?"

"ದೂರವೇನಿಲ್ಲ. ಇಲ್ಲಿಂದ ಸೋಮೇಶ್ವರ. ಅಲ್ಲಿಂದ ಮೂರು ಘಂಟೆ ಬಸ್ಸಿನ ಹಾದಿ. ಹೋಗಿ ಬರಲು ಎರಡು ದಿನ ಬೇಕು. ನಿನ್ನೊಬ್ಬನನ್ನೇ ಇಲ್ಲಿ ಬಿಡಲಾರೆ. ನೀನೂ ಬರುತ್ತೀಯಾ ಜತೆಗೆ?" ಎಂದ. "ಆಗಲಿ, ನಿನ್ನ ಜತೆಗೆ ನನಗಿಷ್ಟೊ ಸನ್ಮಾನ—" ಎಂದ ಶಂಕರ.

ಈ ಮಾತು ನಡೆದ ಮರುದಿನ ಶಂಕರ, ಸೀತಾರಾಮು, ಅವನ ಸೋದ ರ ಶ್ರೀನಿವಾಸ ಮೂವರೂ ಸೇರಿ ಕುಂದಾಪುರಕ್ಕೆ ಹೋದರು. ನೇರಾಗಿ ವಕೀಲ ವೆಂಕಟರಾಯರ ಮನೆಗೆ ಕಾಲಿರಿಸಿದರು. ಸೀತಾರಾಮನಿಗೆ ಮನೆಗೆ ಕಾಲಿರಿಸಿದ ಮೊದಲ ಗಳಿಗೆಯಲ್ಲೇ ಅವರ ಮಗಳ ದರ್ಶನವಾಯಿತು.

ಬಂದವರನ್ನು ಕಂಡೇ ಅವಳು ಅದೃಶ್ಯಳಾದಳು. ವಕೀಲರು ಬಂದವರನ್ನು ಸ್ವಾಗತಿಸಿದರು. ಆ ದಿನವೆಲ್ಲ ಅವರನ್ನು ತಮ್ಮ ಮನೆಯಲ್ಲಿರಿಸಿಕೊಂಡು, ಆದರೋಪಚಾರಗಳಿಂದ ಸತ್ಕರಿಸಿದರು. ಸೀತಾರಾಮ ಬಂದಾಗ ಕಂಡ ಹುಡುಗಿಯೇ ಮದುವೆಗೆಕಾದಿದ್ದ ಹುಡುಗಿ. ನೋಟಕ್ಕೆ ತಕ್ಕ ರೂಪವಿದೆ. ಜತೆಗೆ ಸಾಕಷ್ಟು ಓದುಬರಹವೂ ಆಗದೆ. ಹುಡುಗಿ ಸೀತಾರಾಮನ ಮನಸ್ಸಿಗೆ ಬಂದರೂ, ಗೆಳೆಯನ ಅಭಿಪ್ರಾಯವನ್ನು ಕೇಳುವುದಕ್ಕೆ ಹಿಂಜರಿಯಲಿಲ್ಲ. ಆತನೆಂದ "ಮದುವೆ ಆಗುವವರ ಅಭಿಪ್ರಾಯ ಮುಖ್ಯ. ಹುಡುಗಿ ಕಾಣುವುದಕ್ಕೇನೋ ಚೆನ್ನಾಗಿದ್ದಾಳೆ. ಅಷ್ಟೊಂದು ಚಿಕ್ಕವಳೇನಲ್ಲ. ಆದರೆ ನಾಳೆ ನಿನ್ನ ಜೀವನಕ್ಕೆ ಹೊಂದಿಬರುತ್ತಾಳೋ ಇಲ್ಲವೋ—ಎಂಬುದನ್ನು ಮುಖ ನೋಡಿ ನಿರ್ಣಯಿಸಲು ಬಂದೀತೇ ? ಆ ದಿನ ಬೆಳಕವಾಡಿನಲ್ಲಿ ನೀನೆಂದ ಮಾತು ನೆನಪಿದೆಯೇ ? 'ಕನ್ಯೆಯರಲ್ಲಿ ಎರಡು ಜಾತಿ' ಎಂದು. ಗಂಡನ ಬೆನ್ನಿಗೆ ಅಂಟಿಬರುವ ಜಾತಿಯೊಂದು ; ಗಂಡನ ಮೇಲೆ ತನ್ನ ಅಭಿಪ್ರಾಯ ಹೊರಿಸುವ ಜಾತಿಯೊಂದು—ಎಂದಿದ್ದೆ. ಆ ಎರಡು ವರ್ಗಗಳಲ್ಲಿ ಇವಳೆಂಥವಳೆಂದು ನಿನಗೆ ತೋರುತ್ತಾಳೆ?"

"ಕುಂದಾಪುರ ದಿಲ್ಲಿಯಂತೆ ಸಿಟಿಯಲ್ಲ. ಶಹರೂ ಅಲ್ಲ, ಹಳ್ಳಿಯ ಊರು. ಎರಡನೆ ಜಾತಿಯ ಜನ ನಮ್ಮ ಊರುಗಳಲ್ಲಿ ಹೆಚ್ಚಾಗಿ ಇಲ್ಲ. ಅಲ್ಲದೆ ನನ್ನಂಥವರ ಮೇಲೆ ಅಧಿಕಾರ ನಡೆಸುವ ಕೆಲಸ ಸುಲಭವಾಗಲಾರದು" ಎಂದು ನಗುತ್ತ ಹೇಳಿದ. ಅಂತು ಹುಡುಗಿಯ ವಿಚಾರದಲ್ಲಿ ತನ್ನ ಸಮ್ಮತಿಯನ್ನು ಸೂಚಿಸಿ, ಉಳಿದ ವಿಷಯಗಳ ಚರ್ಚೆಗೆ ಅಣ್ಣನನ್ನು ಬಿಟ್ಟು, ಮರುದಿನ ಬೆಳಿಗ್ಗೇನೆ ಗೆಳೆಯರೊಡನೆ ಮೋಟರನ್ನು ಏರಿ ತನ್ನ ಊರನ್ನು ಸೇರಿದ. ಆ ದಿನ ಸಂಜೆಯೇ ಅಣ್ಣ ಶ್ರೀನಿವಾಸ ಮನೆಗೆ ಬಂದೂ ಆಯಿತು. ಆ ದಿನ ತೋಳ್ಪಾಡಿತ್ತಾಯರ ಮನೆಯ ಗೆಲವು ಹೇಳತೀರದು. ಹುಡುಗ ನಂಟುತನಕೊಪ್ಪಿದ್ದೇ ಆ ಹರ್ಷದ ಮೂಲ. ಬಂದ ನಂಟುತನ ಒಳ್ಳೆಯದು. ಅನುಕೂಲವಂತರ ಮನೆ. ಅಲ್ಲದೆ ಹುಡುಗಿಯ ತಂದೆ ವಕೀಲರು, ಗೌರವಸ್ಥರು. ಅಂಥ ಸಂಬಂಧದಿಂದ ತಮ್ಮ ತೂಕವೂ ಆಚೀಚೆ ಹೆಚ್ಚೀತೆಂಬ ಅಭಿಲಾಷೆ ಇದೆ. ಅಲ್ಲದೆ ಓದಿಕೊಂಡ ಹುಡುಗಿಯಾದರೂ ಮನೆಗೆಲಸ ಬಲ್ಲವಳೆಂಬುದನ್ನು ನೆರೆಕರೆಯವರಿಂದ ಕೇಳಿ ತಿಳಿದಿದ್ದಾರೆ. ಅದಕ್ಕೂ ಹೆಚ್ಚಿನ

ದೇನುಬೇಕು? ತಂದೆತಾಯರ ನಿರ್ಣಯವಾಯಿತು: "ಸೀತಾರಾಮ ಮುಂದಿನ ತಿಂಗಳಲ್ಲಿ ಲಗ್ನಕ್ಕೆ ಮುಹೂರ್ತಗಳಿವೆ. ಮಳೆಗಾಲ ಬಿಟ್ಟಿಲ್ಲ. ತುಸು ತೊಂದರೆ, ಅದೆಲ್ಲ ನಿಜವೆ. ಅಷ್ಟು ತೊಂದರೆಯಾದರೆ ಹೆಣ್ಣಿನ ಕಡೆಯವರು ಒಂದು ಮಳೆಮಾಡನ್ನು ಕಟ್ಟಿಸಲಾರರೇ? ನೀನು ಲಗ್ನವಾಗಿಯೇ ಚಾಕರಿಗೆ ಹೋಗು. ಚಾಕರಿ ಸಿಕ್ಕಿಯೇ ಸಿಗುತ್ತದೆ. ಹುಡುಗಿಯ ಜಾತಕ ಅಷ್ಟು ಚೆನ್ನಾಗಿ ಹೊಂದುತ್ತದೆ—ಎಂಬುದರಿಂದಲೇ ನಮಗೆ ಆತುರ" ಎಂದು ಎಷ್ಟೆಷ್ಟೋ ಉಪದೇಶಮಾಡಿದರು.

ಸೀತಾರಾಮ ಅಷ್ಟೊಂದು ಅವಸರ ತೋರಿಸಲಿಲ್ಲ. ಆತನ ನಿರೀಕ್ಷಣೆಯೆಲ್ಲ ಉದ್ಯೋಗದ ಕಡೆಗಿತ್ತು. ನಾಲ್ಕು ಕಡೆಗಳಿಗೆ ಅರ್ಜಿ ಹಾಕಿದ್ದ; ಒಂದು ಕಡೆಯಿಂದಲೂ ಉತ್ತರ ಬಂದಿಲ್ಲ. ಕಾದು ಬೇಸರವಾಗಿತ್ತು. ಬರಿದೆ ಕುಳಿತಿರಲಾರದ್ದಕ್ಕೆ 'ಇವರಿಗೆ ಬಂಗಾಡಿಯನ್ನಾದರೂ ತೋರಿಸಿಕೊಂಡು ಬರುತ್ತೇನೆ' ಎಂದ. ಹೊರಡುವುದು ನಿಶ್ಚಯವಾದ ಮೇಲೆ ಆತನ ತಾಯಿ ತನ್ನ ಮುತ್ತಜ್ಜಿ ಮನೆಯ ಅನೇಕ ವಿಚಾರಗಳನ್ನು ವಿವರಿಸಿ ಹೇಳಿದಳು. ದಾರಿಯ ಹಚ್ಚ ಹೊಸ ಮಾಹಿತಿಯನ್ನು ಶಾಲಾ ಮಾಸ್ತರರು ಹೇಳಿದರು. ಒಂದು ದಿನ ಗೆಳೆಯರಿಬ್ಬರೂ ಬಂಗಾಡಿಯ ಅನ್ವೇಷಣೆಗಾಗಿ ಹೊರಟೇ ಹೊರಟರು.

ಉದ್ದಕ್ಕೂ ಮಲೆನಾಡಿನಲ್ಲಿ ಸಂಚಾರ. ಸೀತಾರಾಮನ ಮನೆಯಿಂದ ಒಂದು ಮೈಲು ದೂರದಲ್ಲಿಯೆ ಮೋಟರು ಹಾದಿಯಿದೆ. ಆ ದಾರಿಯಾಗಿ ಹಾಯುತ್ತಿದ್ದ ಬಸ್ಸು ಒಂದರಲ್ಲಿ ಕುಳಿತು ಕಾರ್ಕಳಕ್ಕೆ ಹೋದರು. ಅಲ್ಲಿಂದ ಇನ್ನೊಂದು ಮೋಟರಿನಲ್ಲಿ ಕುಳಿತು ವೇಲೂರಿನ ಮಾರ್ಗವಾಗಿ ಬೆಳ್ತಂಗಡಿಯನ್ನು ಸೇರಿದರು. ಬಸ್ಸು ಆ ಊರನ್ನು ಸೇರುವಾಗ ಕತ್ತಲಾಗಿತ್ತು. ಜಡಿ ಮಳೆಯೂ ಪ್ರಾರಂಭಿಸಿತ್ತು. ಅವರ ಪಯಣ ಅಲ್ಲಿಗೇನೆ ನಿಂತು ರಾತ್ರಿಯನ್ನು ಊರಿನ ಹೋಟೇಲೊಂದರಲ್ಲಿ ಕಳೆಯಬೇಕಾಯಿತು. ಬಂಗಾಡಿಗೆ ಅಲ್ಲಿಂದ ಎಂಟು ಮೈಲಿನ ಹಾದಿಯಿದೆಯೆಂದೂ, ದಾರಿಯಲ್ಲಿ ಮನೆಮಠಗಳಿಲ್ಲವೆಂದೂ, ವಾಹನ ಸೌಕರ್ಯ ಇಲ್ಲವೆಂದೂ ಶಾಲಾ ಮಾಸ್ತರರು ತಿಳಿಸಿದ್ದರು. ಅದರಿಂದಾಗಿ ರಾತ್ರಿಯನ್ನು ಅಲ್ಲೇ ಕಳೆದು ಬೆಳಗ್ಗೆ ಪಯಣ ಮುಂದುವರಿಸಿದರು.

ಬೆಳಗಾಗುವಾಗ ಬಾನಿನಲ್ಲಿ ಮುಗಿಲುಗಳು ಚದರಿಹೋಗಿ, ಎಳೆ ಬಿಸಿಲು ಊರನ್ನೆಲ್ಲ ಬೆಳಗಿತ್ತು. ಪೇಟೆಯನ್ನು ದಾಟಿ ಮುಂದಕ್ಕೆ ಕವಲೊಡೆಯುವ ಹಾದಿಯನ್ನು ಹಿಡಿದು, ಘಟ್ಟದ ಸೆರಗಿಗೆ ಮುಖಮಾಡಿಕೊಂಡು ಪಯಣ ಹೊರಟರು. ಎದುರಿನ ಪರ್ವತಾವಳಿ ತೀರ ಸಮೀಪಕ್ಕೆ ಕಾಣಿಸಿದರೂ ಸಾಕಷ್ಟು ದೂರವಾಗಿತ್ತು. ಅದರ ಅನೇಕ ಗಿರಿಶಿಖರಗಳು ಉನ್ನತವಾಗಿ ತಲೆಯೆತ್ತಿಕೊಂಡು ಅವರನ್ನು ಸ್ವಾಗತಿಸುತ್ತಿದ್ದುವು. ಈಶಾನ್ಯ ದಿಕ್ಕಿನ ಬೆಟ್ಟದ ಶ್ರೇಣಿಯೊಂದರಿಂದ ಕೆಳಕ್ಕೆ ಧುಮುಕುವ ಸುಂದರ ಜಲಪಾತವೊಂದು ಕಾಣಿಸಿತು.

"ಓ ಅದನ್ನು ನೋಡು ಶಂಕರ, ನಮ್ಮ ನೇಮಿರಾಜ ಭಂಗರು ಹೇಳಿದ 'ಓಟರ್ ಫೋಲ್ಸ್' ಅದೇನೆ ಇರಬೇಕು. ಪ್ರಾಯಶಃ ನಾವು ಹೋಗಬೇಕಾದ ಹಳ್ಳಿಯು ಅಲ್ಲೆಲ್ಲೋ ಇರಬೇಕು. ಆ ಬೆಟ್ಟದ ಶ್ರೇಣಿಗೆ ಏನೋ ಒಂದು ಹೆಸರಿದೆ ಎಂದರು. ಮರವೆಯಾಗಿದೆ. ಇನ್ನೆಷ್ಟು ದೂರವಿದೆಯೊ! ಬರಿಯ ಎರಡು ಹರದಾರಿ ದೂರ ಎಂದಿದ್ದರು ಹೊಟೇಲಿನವರು. ಹಳ್ಳಿಯ ಮೈಲುಗಳಿಗೆ ಎಂಟೇ ಫರ್ಲಾಂಗುಗಳೆಂದು ಏನು ನಿಯಮ?" ಎಂದು ಗುಸುಗುಟ್ಟುತ್ತ ನುಡಿಯುತ್ತಾ ಸೀತಾರಾಮ ನಡೆದ. ನಾಲ್ಕನೆಯ ಮೈಲುಕಲ್ಲು ಬರುತ್ತಲೇ ಹಾದಿ ಕವಲೊಡೆಯಿತು. ಬಲಗಡೆಯ ಕವಲನ್ನು ಹಿಡಿದು ಇಬ್ಬರೂ ಮುಂದುವರಿದರು. ಅದು ಹೆಸರಿಗಷ್ಟೇ ಹಾದಿ. ದಾರಿ ತುಂಬ ಕೆಸರು, ಅಲ್ಲಲ್ಲಿ ಕುಣಿಗಳು. ನಡುನಡುವೆ ದಾಟಬೇಕಾದ ತೊರೆಗಳೂ ಇದ್ದುವು. ಊರಿನ ಸುದ್ದಿ ಸೂರು ಕೇಳುವುದಕ್ಕೆ ದಾರಿಯ ಬಳಿ ಮನೆಗಳೂ ಕಾಣಿಸಲಿಲ್ಲ; ದಾರಿಯಲ್ಲಿ ಜನರೂ ಇದಿರಾಗಲಿಲ್ಲ. ಆದರೂ ಜಾಮಹೊತ್ತಿಗೆ ಸಮನಾಗಿ ಅವರು ಬಯಸಿಬಂದ ಬಂಗಾಡಿ ಹಳ್ಳಿ ಇದಿರಾಯಿತು. ಹಾದಿಯ ಸಮೀಪವಾಗಿ ಒಂದೆರಡು ಮನೆಗಳು, ಒಂದು ಬಸದಿಯು ಕಾಣಸಿಕ್ಕಿತು. ಮನುಷ್ಯರ ಮುಖ ಕಂಡದ್ದು ಅಲ್ಲೀನೆ. ಆ ಊರಿನ ಒಬ್ಬ ಕರಿಯ ವ್ಯಕ್ತಿ ಮನೆ ಮುಂದೆ ನಿಂತು ಇವರನ್ನೇ ದಿಟ್ಟಿಸಿ ನೋಡುತ್ತಿದ್ದ. ಹೊಸಬರಂತೆ ಕಾಣಿಸುತ್ತಾರೆ ಅವರು. "ಇಂಥ ವೇಳೆಯಲ್ಲಿ ಕೆಸರು ದಾರಿಯಲ್ಲಿ ಉದ್ದ ಚಲ್ಲಣ ಹಾಕಿ ಹೊರಟಿದ್ದಾರಲ್ಲ ದೊರೆಗಳು" ಎಂದು ವಿಸ್ಮಯದಿಂದ ನೋಡು

ತ್ರಿದ್ದ. ವಿಸ್ಮಯದೊಡನೆ ಕುತೂಹಲ, ಬಾಯಿ ತೀಟೆಗಳು ಬೆರೆತು "ನಿಮಗೆಲ್ಲಿ ?" ಎಂದು ಕೇಳಿದ.

"ಮುದ್ರಾಡಿ" ಎಂದ ಸೀತಾರಾಮು.

"ಮುದ್ರಾಡಿಯವರೇ ನೀವು ? ಹಾಗಾದರೆ ನಮ್ಮ ಭಂಗ ಮಾಸ್ಟ್ರು ಗೊತ್ತೇ ನಿಮಗೆ ?"

ಹೂಂ, ಚೆನ್ನಾಗಿ ಗೊತ್ತು, ನಮ್ಮೂರ ಶಾಲೆಯ ಮಾಸ್ತರರಲ್ಲವೆ ? ಮೊನ್ನೆ ಮೊನ್ನೆ ಕಂಡಿದ್ದೆವು ಅವರನ್ನು.

ಸಂಭಾಷಣೆಗೆ ಧೈರ್ಯವಾಯಿತು, ಮಾತಿನ ಚಪಲ ಹೆಚ್ಚಿತು. ಸ್ನೇಹಕ್ಕೊಂದು ಅವಕಾಶವಾಯಿತು. "ಅವನು ನನಗೆ ಅಳಿಯನಾಗಬೇಕು. ನೋಡಿ, ಈ ಸರಕಾರಿ ಚಾಕರಿ ಎಂಬುದು ನಾಯಿಗೆ ಕೊಟ್ಟರೂ ಬೇಡ. ಈ ಬೆಳ್ತಂಗಡಿಯ ಆಸುಪಾಸಿನಲ್ಲೇ ಎಷ್ಟೆಲ್ಲ ಶಾಲೆಗಳಿಲ್ಲ. ಅವನನ್ನು ಅಂಥ ಯಾವ ಹಾಳು ಶಾಲೆಗೆ ಹಾಕಿದ್ದರೂ ನನಗೆ ಬೇಸರವಿಲ್ಲ. ಎಲ್ಲ ಬಿಟ್ಟು ಕಣ್ಣು ಕಾಣದ ಊರಿಗೆ ಕಳುಹಿಸಬೇಕೇ ಅವನನ್ನು."

"ಮುದ್ರಾಡಿ ಕಣ್ಣು ಕಾಣದ ಊರೇ ? ನಾವು ಬಂದೆವಲ್ಲ ಅಲ್ಲಿಂದಿಲ್ಲಿಗೆ" ಎಂದ ಸೀತಾರಾಮು.

"ಅಲ್ಲ, ನಿಮ್ಮ ಊರು ದೊಡ್ಡದಿರಬಹುದು, ಆದರೆ ಅವರು ಕೊಡುವ ಹದಿನೈದು ರೂಪಾಯಿ ಸಂಬಳಕ್ಕೆ ಯಾವಾವ ಊರಿನಲ್ಲಿ ಆತ ಭಿಕ್ಷೆ ಬೇಡಬೇಕೇ ? ಊಟಕ್ಕಿನ್ನೂ ಸಮನಾದ ಮನೆ ಸಿಕ್ಕಿಲ್ಲವಂತೆ ಅವನಿಗೆ, ಬಿಡಾರವನ್ನು ಕೊಂಡೊಯ್ಯುವ ಯೋಚನೆ ಮಾಡಿದ್ದ ; ನಾನು ಬೇಡವೆಂದೆ, ಎಂಥ ಊರೋ ಏನೋ. ಇವನೂ ಹೋಗಿ. ಜತೆಗೆ ಹೆಂಡತಿ ಮಕ್ಕಳನ್ನು ಕರೆದೊಯ್ದು, ಕಾಯಿಲೆ ಬಿದ್ದರೆ ನೋಡಿಕೊಳ್ಳುವವರು ಯಾರು" ಎಂದು ತಮ್ಮ, ಅವನ ತಾಪತ್ರಯಗಳನ್ನು ಬಣ್ಣಿಸಿದರು. "ಇಂಥ ಕೆಲಸಕ್ಕಿಂತ ಇದ್ದ ನಾಲ್ಕು ತುಂಡು ಗದ್ದೆಗಳನ್ನು ಬೇಸಾಯಮಾಡಿ, ತಣ್ಣಗೆ ಊರಲ್ಲಿ ಬಿದ್ದಿರಬಹುದಲ್ಲ. ದೇವರು ಕೊಟ್ಟ ಹೊಲ, ಮನೆಗಳಿವೆ. ಈ ಬೋರ್ಡು ಕೊಡುವ ಹದಿನೈದು ರೂಪಾಯಿಗಳಿಂದ ಆಗಬೇಕಾದುದೇನು?" ಎಂದು ತನ್ನ ಪುರಾಣ ಹೇಳಿದ. ಅಷ್ಟಕ್ಕೆ ಬಿಡಲಿಲ್ಲ. ಅಳಿಯನ ಮಿತ್ರರೆಂಬುದರಿಂದ ಅಳುಕಿಲ್ಲದ ಬಲವಂತದಿಂದ ಅವರಿಗೆ ಕಾಫಿ, ಬಾಳೆಹಣ್ಣುಗಳ ಉಪಚಾರ

ಸಲ್ಲಿಸಿ, ಆ ಮೇಲೆ "ನಿಮಗೆ ಬೇಸರವಾಯಿತೋ ಏನೋ–ನನ್ನ ಪುರಾಣ ಕೇಳಿ. ನಿಮಗೆ ಎಲ್ಲಿ ಹೋಗಬೇಕಿತ್ತು ? ಬಂಗಾಡಿಯಲ್ಲಿ ಯಾರದ್ದಾದರೂ ಗುರುತಿದೆಯೇ ? ನಿಮಗೇನು ಉದ್ಯೋಗ ? ಸರಕಾರಿ ನೌಕರಿಯೇ? ನನ್ನಿಂದೇನು ಆಗಬೇಕಾಗಿದೆ" ಎಂದು ವಿಶ್ವಾಸಪೂರ್ವಕವಾಗಿ ಕೇಳಿದ. ಆತನ ತಲೆಹರಟೆಗೆ ಬೇಸರಗೊಂಡಿದ್ದ ಸೀತಾರಾಮನ ಬೇಸರ ಮಾಯವಾಯಿತು. ಈ ಹಳ್ಳಿಯ ಜನ ಶುದ್ಧ ಅಧಿಕಪ್ರಸಂಗಿಗಳು–ಎಂದು ತೀರ್ಮಾನಿಸುತ್ತಿದ್ದಾಗಲೇ, ತಾನು ನೋಡಿದ ಒಳ್ಳೆಯ ಗುಣಗಳು ಹರ್ಷ ಉಂಟುಮಾಡಿದುವು. ಆತ ಎಂಥವನೇ ಇರಲಿ, ಅಂಥ ಪ್ರದೇಶದಲ್ಲಿ ಅನ್ಯರ ಸಹಾಯವಿಲ್ಲದೆ ತನ್ನ ಪಿಜ್ಜನ ಮನೆಯನ್ನೂ ಕಂಡು ಹಿಡಿಯಲಾರ. ಮೇಲ್ಲಾಗಿ ಹಸಿದ ಹೊಟ್ಟೆಯನ್ನು ಉಪಚರಿಸಿ ಸಮಾಧಾನ ತಂದುಕೊಟ್ಟ ಅನ್ನದಾತ ಹಾಗಾಗಿ ನಗುತ್ತ ಸೀತಾರಾಮ ನುಡಿದ "ನನ್ನ ಅಜ್ಜಿಯ ಹಿರಿಯರು ನಿಮ್ಮ ಈ ಊರಿನವರಂತೆ. ನಾನಾಗಲಿ, ಇವರಾಗಲಿ ಈ ತನಕ ಇಲ್ಲಿಗೆ ಬಂದವರಲ್ಲ. ಬಂದುದೇ ಇದು ಮೊದಲು."

"ಯಾರು, ಯಾವ ಮನೆ ? ಹೆಸರು ಗೊತ್ತಿರಬೇಕಲ್ಲ."

"ಸುಬ್ರಾಯ ಎಳಚಿತ್ತಾಯರ ಮನೆ. ಇಲ್ಲಿಂದ ಎಷ್ಟು ದೂರದಲ್ಲಿದೆ? ದಾರಿ ಯಾವುದೆಂದು ಹೇಳಿದರೆ ನಾವೇ ಹುಡುಕಿಕೊಂಡು ಹೋಗುತ್ತೇವೆ"

"ನೀವು ಹುಡುಕಿಕೊಂಡು ಹೋಗುವುದೇ ? ಯಾಕೆ—ನಾವಿಲ್ಲವೇ ? ಅಷ್ಟು ಕೆಲಸಮಾಡಲಾರೆನೇ ? ಎಳಚಿತ್ತಾಯರು ನನಗೆ ತೀರಗೊತ್ತು. ಇನ್ನು ಎರಡು ಮೈಲು ನಡೆಯಬೇಕು–ಅವರ ಮನೆಗೆ. ನಮ್ಮ ಗ್ರಾಮ ದೊಡ್ಡದು; ಗುಡ್ಡಗಾಡಿನ ಊರು. ದಾರಿ ಹೇಳಿದರೂ ತಿಳಿಯುವಂತಿಲ್ಲ" ಎಂದುದಲ್ಲದೆ ತಲೆಗೊಂದು ರುಮಾಲನ್ನು ಸುತ್ತಿಕೊಂಡು, ಮೈಗೊಂದು ಮಾಸಲು ಅಂಗಿ ಹಾಕಿಕೊಂಡು "ಬನ್ನಿ ಹೋಗುವ" ಎಂದು ಹೊರಟೂ ಆಯಿತು. ದಾರಿ ಉದ್ದಕ್ಕೂ ಆತ ಬಾಯಿ ಮುಚ್ಚಿದ್ದೆಂಬುದಿಲ್ಲ. ತನ್ನೂರಿನ ಗತವೈಭವಗಳನ್ನು ಬಣ್ಣಿಸುತ್ತಲಿದ್ದ. ಹಿಂದೆ ಎಂಥೆಂಥ ಅರಸರು ಆ ಊರಿನಲ್ಲಿ ಆಳಿದ್ದರಂತೆ. ಬಂಗಾಡಿ ಭಂಗ ಅರಸರ ರಾಜಧಾನಿಯಾಗಿತ್ತಂತೆ. ಆಗಿನ ಭಂಗವಾಡಿ ಈಗಿನ ಬಂಗಾಡಿಯಂತೆ ! ಅಷ್ಟೆಲ್ಲ ಅಂದು 'ಈಗ ಮಾತ್ರ ದೇವರು ಕೈಬಿಟ್ಟ ಊರು" ಎಂದು ತನ್ನೂರನ್ನು ತಾನೇ ಟೀಕಿಸಿದ. ಕಿವಿ

ಬಾಯಿಗಳ ಸಂಪರ್ಕ ಸಾಗುತ್ತಿದ್ದಂತೆ ಕಾಲುಗಳೂ ತುಳಿಯುತ್ತಿದ್ದುವು. ಗುಡ್ಡ ಹತ್ತಿದರು. ಇಳಿದರು ; ಹಳ್ಳದಾಟಿದರು, ಇಳಿದರು. ಗದ್ದೆ ಬಯಲುಗಳ ಸೆರಗು ತುಳಿದರು. ಕಾನು ಹೊಕ್ಕರು; ಹೊರಟರು. ಕೊನೆಗೆ ಯಾವುದೋ ಒಂದು ಮನೆಯ ಮುಂಗಡೆ ಬಂದು ತಂಗಿದರು. "ಇದೇನೆ ಮನೆ ?" ಎಂದು ಕೇಳುವುದರೊಳಗಾಗಿ "ಓ ಶ್ಯಾನುಭಾಗರೇ" ಎಂದು ಆತ ಕೂಗಿ ಕರೆದೂ ಆಯಿತು. ಆ ಮನೆಯಿಂದ ಹೆಂಗುಸೊಬ್ಬಳು ಹೊರಗೆ ಬಂದು "ಅವರಿಲ್ಲ, ಬೆಳ್ತಂಗಡಿಗೆ ಹೋಗಿದ್ದಾರೆ" ಎಂದು ನುಡಿದಳು. ತಮ್ಮೂರಿಗೆ ಹೊಸಬರಾಗಿ ಕಾಣಿಸಿದವರನ್ನು ಆಕೆಯೂ ಇಣಿಕಿ ನೋಡಿದಳು.

ಅಲ್ಲಿಂದ ಪಯಣ ಮುಂದುವರಿಯಿತು. ದಾರಿಯಲ್ಲಿ ಆ ಜೈನಮಿತ್ರ, ತಾವು ವಿಚಾರಿಸಿದವರ ಮನೆಯನ್ನು ಕುರಿತು ಹೇಳುತ್ತ "ಆ ಮನೆ ನೋಡಿ, ಪುರಾತನಕಾಲದ ಮನೆ. ಎಂಥ ದೊಡ್ಡ ಮನೆ ಎನ್ನುತ್ತೀರಿ ! ನಮ್ಮ ಶ್ಯಾನುಭಾಗರ ಕುಟುಂಬದವರು. ನೂರಾರು ವರ್ಷಗಳಿಂದ ಅಲ್ಲಿ ವಾಸವಾಗಿದ್ದಾರೆ.. ಆ ಮನೆ ತೋರಿಸುವಾ—ಎಂದಿತ್ತು. ಆದರೆ ಅವರೇ ಇಲ್ಲವಲ್ಲ–" ಎಂದು ಹೇಳಿದರು. ಗುಡ್ಡ ಕಳೆದು ಇನ್ನೊಂದು ಬಯಲು ಬಂದಿತು. ಬಯಲಿನಾಚೆಗೆ ಇನ್ನೊಂದು ಮನೆ; ಹಿಂದುಗಡೆ ಅಡಿಕೆತೋಟ; ಎದುರಿಗೆ ಸಾಕಷ್ಟು ದೊಡ್ಡ ಅಂಗಣ. ಅದನು ತೋರಿಸುತ್ತ ಆತನೆಂದ "ಅದು ಎಳಚಿತ್ತಾಯರ ಮನೆ" ಎಂದು ಹೇಳಿ, ಮುಂದೆ ಸಾಗಿದ. ಮನೆಯ ಮುಂದಿನ ಗದ್ದೆಯ ಏರಿಯಿಂದಲೇ "ಎಳಚಿತ್ತಾಯರೇ" ಎಂದು ಕೂಗಿ ಕರೆದ. ಎಳಚಿತ್ತಾಯರು ಅಂಗಳಕ್ಕೆ ಇಳಿದರು. ಹಣೆಗೆ ಕೈಯಿಕ್ಕಿ "ಯಾರವರು" ಎಂದು ಯೋಚಿಸುವುದರೊಳಗೆ, ಬಂದವರ ಭೇಟಿಯೂ ಆಯಿತು. ಕರೆತಂದಾತ "ನೋಡಿ, ಇವರು ನಿಮ್ಮ ಮನೆಯನ್ನು ಕೇಳಿಬಂದರು, ಮುದ್ರಾಡಿಯವರಂತೆ. ಕರೆದು ತಂದಿದ್ದೇನೆ" ಎಂದ.

"ಮುದ್ರಾಡಿಯೇ ! ನಮ್ಮ ತೋಳ್ಪಾಡಿತ್ತಾಯರ ಸಂಬಂಧವೇ ?"

"ನಾನು ನಾರಾಯಣ ತೋಳ್ಪಾಡಿತ್ತಾಯರ ಮಗ. ಇವರು ನನ್ನ ಸ್ನೇಹಿತರು. ನನ್ನ ತಾಯಿಯ ಅಜ್ಜಿಯ ಮನೆ ಇದೆಂದು ಕೇಳಿ ನೋಡುವ ಆಸೆಯಾಗಿ ಬಂದೆವು" ಎಂದ ಸೀತಾರಾಮ.

"ಏನಯ್ಯಾ ಹಾಗೆಂದರೆ? ನಿನ್ನ ಅಪ್ಪ, ಅಮ್ಮ ಬರಿಯ ಎಂಟು ವರ್ಷಗಳ ಹಿಂದೆ ಇಲ್ಲಿಗೆ ಬಂದಿದ್ದರು. ನೀವು ದೂರ ಇದ್ದೀರಿ ಎಂದ ಮಾತ್ರಕ್ಕೆ ನಿಮ್ಮ ಮರವೆಯಾದೀತೆ? ನೀನು ಅವರ ಮಗನೋ, ಏನು ಹೆಸರು? ಸೀತಾರಾಮು ಎಂದಲ್ಲವೆ? ಕೇಳಿ ಗೊತ್ತು. ಅವರ ಮಕ್ಕಳಲ್ಲಿ ಒಬ್ಬ ಕಾಶಿಯಲ್ಲಿ ಓದುತ್ತಿದ್ದಾನೆ—ಎಂಬುದನ್ನು ಕೇಳಿದ್ದೆ. ಏನು ಓದುತ್ತಾ ಇದ್ದೀಯಾ? ಪರೀಕ್ಷೆ ಆಯಿತೇ? ಈಗೇನು ಕೆಲಸ? ಮದುವೆಗಿದುವೆ ಆಗಿದೆಯೇ ನಿನಗೆ? ಅಪ್ಪ, ಅಮ್ಮ ಹೇಗಿದ್ದಾರೆ? ಬರುವುದಿಲ್ಲವೇ ಈ ಕಡೆಗೆ?" ಎಂದು ಪ್ರಶ್ನೆಗಳ ಮೇಲೆ ಪ್ರಶ್ನೆಗಳ ಸುರಿಮಳೆ ಹಾಕಿ ಮನೆಗೆ ಕರೆದೊಯ್ದರು. ಅಷ್ಟರಲ್ಲಿ ಅವನ ಮಾರ್ಗದರ್ಶಿ ಅವರನ್ನು ಬೀಳ್ಕೊಡುತ್ತ "ಇನ್ನಾಯ್ತು ನನ್ನ ಕೆಲಸ. ಇರುತ್ತೀರಲ್ಲ ನಾಲ್ಕು ದಿನ. ಇನ್ನೊಮ್ಮೆ ಬಂದು ಕಾಣುತ್ತೇನೆ. ನಮ್ಮ ಊರನ್ನೆಲ್ಲ ತೋರಿಸಿಬಿಡುತ್ತೇನೆ"—ಎಂದು ನುಡಿದು ಬೀಳ್ಕೊಟ್ಟೂ ಆಯಿತು.

ಎಳಚಿತ್ತಾಯರು ತಮ್ಮ ಬಂಧುವನ್ನೂ ಅವನ ಗೆಳೆಯನನ್ನೂ, ಕಂಡುದು ಅದೇ ಮೊದಲ ಬಾರಿಯಾದರೂ ಆತ್ಮೀಯತೆಗೆ ಕಡಿಮೆಯಾಗಲಿಲ್ಲ. ಊಟಉಪಚಾರಗಳಾದವು, ಸಂಕೋಚವಿಲ್ಲದ ಸರಸ ಸಂಭಾಷಣೆಗಳಾದವು. ಸೀತಾರಾಮು ವಿರಾಮದಲ್ಲಿ ಅವರಿಗೆ ತಾನು ಬಂದ ಉದ್ದೇಶವನ್ನು ವಿವರಿಸಿ ಹೇಳಿದ. ತನ್ನ ಮಿತ್ರನ ಪರಿಚಯ ಮಾಡಿಕೊಟ್ಟ. 'ಇವರ ಹಿರಿಯರು ಸಹ ಇದೇ ಊರಿನವರಂತೆ. ಆದರೆ ಊರು ಬಿಟ್ಟು ಎಷ್ಟೋ ಕಾಲವಾಯಿತು. ಈಗ ಆತನಿರುವುದು ದಿಲ್ಲಿಯಲ್ಲಿ. "ನಿನ್ನ ಹಿರಿಯರ ಊರು ತೋರಿಸುತ್ತೇನೆ' ಎಂದು ಕರೆದುಕೊಂಡು ಬಂದೆ. ಆ ನೆಪದಿಂದ ನನಗೂ ನಿಮ್ಮನ್ನು ನೋಡುವ ಅವಕಾಶವಾಯಿತು. ನಿಮ್ಮೂರಲ್ಲಿ ನೋಡುವಂಥ ವಿಶೇಷ ಏನೇನು ಇದೆ? ನಮ್ಮ ಶಂಕರನ ಪೂರ್ವಜರ ಕತೆ ತಿಳಿಯುವ ಹಾಗಿದೆಯೋ?" ಎಂದು ಪ್ರಸ್ತಾಪ ತೊಡಗಿದ.

ಶಂಕರನ ಜಾತಿ, ಕುಲ, ಗೋತ್ರ ಕೇಳಿದರು ಎಳಚಿತ್ತಾಯರು. ಆ ವಿಚಾರ ಅವನಿಗೆ ತಿಳಿದಿದ್ದುದು-ಅರ್ಧಮರ್ಧವೇ. ಅದರ ಮೇಲಿಂದ ಆತನೆಂದ "ಅವರದ್ದು ಬ್ರಾಹ್ಮಣರಲ್ಲೇ ಒಂದು ಪಂಗಡ. ಕರಾಡರೋ. ದೇಶಸ್ಥರೋ ಅಂಥ ಒಂದು ಬಳಗ. ಈಗ ಅವರಲ್ಲಿ ಮಿಶ್ರವಿವಾಹ ನಡೆದು

ಹಿಂದಿನ ಕುಲ ಗೋತ್ರಗಳ ಮರವೆಯಾಗುವ ಸ್ಥಿತಿ ಬಂದಿದೆ. ಅವರ ಜನ ನಿಮ್ಮೂರಲ್ಲಿದ್ದರೆ ಅವರಿಗೆ ಗೊತ್ತಿರಬಹುದು—ಎಲ್ಲ ಸಂಗತಿ. ಅಥವಾ ತೀರ ತೀರ ಮುದುಕರ್‍ಯಾರಾದರೂ ಬದುಕಿ ಇದ್ದರೆ, ಅವರನ್ನು ವಿಚಾರಿಸಿದಲ್ಲಿ ಏನಾದರೂ ಹಳೆಯ ಕಾಲದ ಸುದ್ದಿ ಸಮಾಚಾರ ತಿಳಿಯಬಹುದು. ಸುಮ್ಮನೆ ಊರುಎಂಬುದರಿಂದ ತಿಳಿಯುವ ಕುತೂಹಲ ಅವನಿಗೆ. ಹಾಗೆ ಏನೂ ತಿಳಿಯಲಿಲ್ಲ. ಆಗ ನಿಮ್ಮಲ್ಲಿ ನೀರು ಬೀಳುವ ಅಬ್ಬಿಯೊಂದಿದೆಯಲ್ಲ—ಅದನ್ನು ಕಂಡು ಹೊರಟರಾಯಿತು."

"ಕರಾಡರೂ, ದೇಶಸ್ಥರೂ" ಎಂದು ನಿಧಾನವಾಗಿ ಉಸಿರುಬಿಟ್ಟರು ಎಳ್ಳಚಿತ್ತಾಯರು. ನಂಟನೊಡನೆ ಬಂದ ಶಂಕರನಿಗೆ ಆ ದಿನ ಮಧ್ಯಾಹ್ನ ಸಹ ಪರಿಕ್ತಿ ಊಟ ಕೊಟ್ಟುದಕ್ಕೆ ಅವರ ಅಂತರಾತ್ಮ ಚುಚ್ಚತೊಡಗಿತು. ತುಸು ಹೊತ್ತು ನಿಧಾನಿಸಿದರು, ತಮ್ಮ ಬಂಧುವಿನೊಂದಿಗೆ ಬಂದವನನ್ನು ಬೇರೆ ಕುಳ್ಳಿರಿಸಿದರೂ ತಪ್ಪಾಗುತ್ತದೆ—ಎಂದು ಯೋಚಿಸಿದರು. ಕೊನೆಗೆ 'ಆದರೂ ಬ್ರಾಹ್ಮಣರೇ' ಎಂದು ಸಮಾಧಾನ ತಂದುಕೊಂಡು ಮಾತು ಮುಂದುವರಿಸಿದರು.

"ದೇಶಸ್ಥರ ಮನೆ ಇದ್ದ ಹಾಗೆ ಇಲ್ಲ. ಇಲ್ಲ, ಯಾರೂ ಇಲ್ಲ. ಕರಾಡರ ಮನೆ ಇದೆ. ಒಂದೇ; ಒಂದು ಬೀಜಕ್ಕೆ ಮಾತ್ರ. ಅದು ಮಾತ್ರ ಪುರಾತನ ಕಾಲದ ಮನೆ. ಅದೇ ಶ್ಯಾನುಭಾಗರ ಮನೆ. ಅವರು ಇವತ್ತು ಊರಲ್ಲಿ ಇದ್ದಾರೋ ಇಲ್ಲವೋ. ಇದ್ದರೂ ಅವರಿಗೆ ಸಾಮಾನ್ಯ ವಯಸ್ಸು. ಆದರೆ ಅವರ ಮನೆಯಲ್ಲಿ ಅವರ ಅಜ್ಜಿ ಇದ್ದಾರೆ. ತುಂಬ ಮುದುಕಿ, ಹಣ್ಣು ಹಣ್ಣು ಮುದುಕಿ. ಬಹಳ ವಯಸ್ಸಾಗಿರಬೇಕು. ಬಾಯಲ್ಲಿ ಹಲ್ಲಿನ ಚೂರಿಲ್ಲ. ಆದರೂ ಕಣ್ಣುಗಳು ನೋಡು ಇನ್ನೂ ಶುಭ್ರವಾಗಿವೆ. ಇವತ್ತಿಗೂ ತಮ್ಮ ಕೆಲಸ ತಾವೇ ಮಾಡಿಕೊಂಡು ಓಡಾಡುತ್ತಾರೆ. ಗೊತ್ತಿದ್ದರೆ ಅವರಿಗೆ ಗೊತ್ತಿರಬೇಕು. ಇನ್ನು ಅವರನ್ನು ಬಿಟ್ಟುಹೋದರೆ—ಒಂದೇ ಒಂದು ಹಳೆಯ ಕೊರಡು ಉಳಿದಿದೆ ನಮ್ಮ ಊರಲ್ಲಿ. ಅದು ನಮ್ಮ ಮುತ್ತಯ್ಯಗೌಡ. ಗೌಡನ ಮನೆ ಈ ಬಯಲಿನ ಆಚೆಗೇನೆ ಇದೆ. ಜೀವ ಎಂದರೆ ಅವನದ್ದು! ಕಡಿಮೆ ಕಡಿಮೆ ನೂರು ವರ್ಷವಾಗಿರಬೇಕು. ಹೇಗೆ ಬದುಕಿದ್ದಾನೋ, ಯಾಕೆ ಬದುಕಿದ್ದಾನೋ—ಎಂದೂ ಹೇಳಲಾರೆ. ನಾವು

ಅವನ ಸ್ಥಿತಿಯಲ್ಲಿದ್ದರೆ ಬಾವಿಯನ್ನು ಹಾರಬೇಕಿತ್ತು. ಮಕ್ಕಳಿಲ್ಲ, ಮರಿಯಿಲ್ಲ, ಮೊಮ್ಮಗನ ಮಗನೊಬ್ಬ ಇದ್ದಾನೆ, ಅನ್ನುತ್ತಾರೆ—ಅದು ಎಲ್ಲಿದೆಯೋ. ಪಾಪ. ಒಬ್ಬೊಬ್ಬರೇ ಆ ಮುದುಕನ ಕಣ್ಣಮುಂದೆ ತೇಲಿ ಹೋದರು. ಆದರೂ ಜೀವಹಿಡಿದು ಬದುಕಿದ್ದಾನೆ. ಎಷ್ಟು ಸುಖ ಅನುಭವಿಸಿದ್ದಾನೋ ಮಹಾರಾಯ. ಆದರೆ ಒಬ್ಬರ ಮುಂದೆಯೂ ಆ ವಿಚಾರದ ಒಂದು ಮಾತು ಹೇಳಿದವನಲ್ಲ. ಒಬ್ಬರ ಮನೆಗೆ ಒಂದು ದಿನ ಬೇಡಲಿಕ್ಕೆ ಹೋದವನಲ್ಲ. ನೆಪಕ್ಕೆ ಒಂದು ಮುಡಿಗದ್ದೆ ಬೇಸಾಯವಿದೆ. ಅದನ್ನು ಹೇಗೆ ಮಾಡುತ್ತಾನೋ, ಅದೂ ಒಂದು ಆಶ್ಚರ್ಯವೇ. ಪ್ರಾಚೀನ ಕಥೆ ತಿಳಿದಿದ್ದರೆ ಅವನೊಬ್ಬನಿಗೆ ತಿಳಿದಿರಬೇಕು" ಎಂದು ಎಳಚಿತ್ತಾಯರು ಪ್ರಾಚೀನ ಇತಿಹಾಸದ ಶೋಧನೆಗೆ ಆಸೆಯ ಬೆಳಕನ್ನು ಬೀರಿದರು.

ಮಧ್ಯಾಹ್ನದ ಊಟ ಕಳೆದಿತ್ತು ; ಹರಟೆಯೂ ಮುಗಿಯಿತು ; ಪುಟ್ಟ ಒಂದು ನಿದ್ರೆಯೂ ಆಯಿತು. ಆ ಹುಡುಗರಿಬ್ಬರನ್ನು ಕರೆದುಕೊಂಡು ತಮ್ಮ ಬಯಲು, ತೋಟಗಳನ್ನು ತೋರಿಸುವುದಕ್ಕೆ ನಡೆದರು. ದಾರಿಯಲ್ಲಿ "ಸೀತಾರಾಮ, ಅವಸರ ಏನಿಲ್ಲವಲ್ಲ ನಿನಗೆ? ನೀವೆಲ್ಲ ಬರುವುದು ಯುಗಕ್ಕೊಮ್ಮೆ. ಈಗ ಬಂದಿದ್ದೀಯಾ; ಇನ್ನು ಬರುತ್ತೀಯೆಂಬ ಧೈರ್ಯ ನನಗಿಲ್ಲ. ಬಂದಾಗ ಎಂಟುದಿನ ನಿಲ್ಲುತ್ತೀ ಎಂದು ಮಾತುಕೊಟ್ಟರೆ ನಿನ್ನ ಕೆಲಸ ಮಾಡಿಕೊಡುತ್ತೇನೆ. ಶ್ಯಾನುಭಾಗರ ಮನೆಗೆ ಹೋಗಿ ಆ ಮುದುಕಿಯನ್ನು ಮಾತನಾಡಿಸುವ, ಮುತ್ತಯ್ಯ ಗೌಡನನ್ನೂ ಮಾತನಾಡಿಸುವ" ಎಂದು ನಕ್ಕು ನುಡಿದರು.

ಸುಬ್ರಾಯ ಎಳಚಿತ್ತಾಯರು ಕಿರಿಯರಲ್ಲ. ೫೦ ದಾಟಿದ ವಯಸ್ಸು. ಅವರ ಹೆಂಡತಿಯೂ ಮುದುಕಿಯಾಗಿ ಕಾಣಿಸುತ್ತಾಳೆ. ಕಡಿದು ಬಹು ದೂರ ಸರಿದುಹೋದ ಸಂಬಂಧವನ್ನು ಸೀತಾರಾಮನ ಆಗಮನದಿಂದ ಕ್ಷಣದಲ್ಲಿ ಹತ್ತಿರಕ್ಕೆ ತಂದುಕೊಂಡು, ಅವರು ತೋರಿಸಿದ ಆದರ, ಪ್ರೀತಿ, ಆಡಿದ ಮಾತುಕತೆಗಳು ಸೀತಾರಾಮನನ್ನು ಋಣಿಯಾಗಿ ಮಾಡಿದುವು. ಆತನಿಗೆ ತಿಳಿದಿತ್ತು-ಇನ್ನೊಮ್ಮೆ ತಾನಂಥ ತಾವಿಗೆ ಬರುವ ಅವಕಾಶ ಎಂದೋ ಏನೋ ಎಂದು. ಶಂಕರನಿಗೆ ಅದಕ್ಕೂ ಕಡಿಮೆ ಸಂದರ್ಭ. ಅಲ್ಲದೆ ಆ ಗೆಳೆಯನಿಗೆ ತನ್ನ ನಾಡಿನ ಸೌಂದರ್ಯವನ್ನು ತೋರಿಸುವ ಹವಣಿಕೆ.

ಕಾಲಿರಿಸಿದ ಗಳಿಗೆಯಿಂದ ಬಂಗಾಡಿಯ ಊರು ಮುದ್ರಾಡಿಗಿಂತ ಸುಂದರವಾದದ್ದು ಎಂದೂ ಅನಿಸಿತು. ಇಲ್ಲಿನ ಕಾಡುಗಳು ಇನ್ನಷ್ಟು ದಟ್ಟವಾದುವು ಹಳ್ಳಕೊಳ್ಳಗಳು, ಬಿದಿರು ಮೆಳೆಗಳು ನಯನ ಮನೋಹರವಾಗಿದ್ದುವು. ಪಶ್ಚಿಮ ಘಟ್ಟ ಇನ್ನಷ್ಟು ಉನ್ನತವಾಗಿತ್ತು. ಇಲ್ಲಿನ ಪರ್ವತ ಶ್ರೇಣಿಗಳೂ, ಶಿಖರಗಳೂ ಮತ್ತಷ್ಟು ಗಂಭೀರವಾಗಿ ಕಾಣಿಸುತ್ತಿದ್ದುವು. ಎಳಚಿತ್ತಾಯರ ಮನೆಯ ಅಂಗಳದಿಂದಲೇ ಕಾಣಿಸುವ ಬಲ್ಲಾಳ ರಾಜನ ದುರ್ಗವಿರುವ ಪರ್ವತಶ್ರೇಣಿ, ಅಲ್ಲಿಂದ ಧುಮುಕುವ ಬಂಗಾಡಿಯ ಜಲಪಾತ ಆಗುಂಬೆಯ ಒನಕೆ ಅಬ್ಬಿಗಿಂತ ಚೆಲುವಿನ ಕಲ್ಪನೆ ಹುಟ್ಟಿಸುತ್ತಿತ್ತು. ಆದರೂ ನಂಟರ ದಾಕ್ಷಿಣ್ಯಕ್ಕೆ ಕಟ್ಟುಬೀಳುವ ಮುನ್ನ, ಮಾತುಕೊಡುವ ಮುನ್ನ, ಶಂಕರನ ಕಿವಿಯಲ್ಲಿ ಹೇಳಿದ "ಶಂಕರ, ನಮ್ಮ ನಂಟರು ಎಂಟು ದಿನ ಇರಬೇಕೆಂದು ಒತ್ತಾಯಿಸುತ್ತಿದ್ದಾರಲ್ಲ. ನನ್ನ ಜೀವವೆಲ್ಲ ಟಪಾಲನ್ನು ಕಾದಿದೆ, ಒಂದೆರಡು ದಿನ ಇರಬಹುದು. ಎಂಟು ದಿನ ಇಲ್ಲೇನಿದೆ" ಎಂದ. "ಈ ಹುಚ್ಚು ಸೌಂದರ್ಯವನ್ನು ಕಂಡರೆ ಎಂಟು ತಿಂಗಳ ಕಾಲ ಕಳೆದೇನು ಅನಿಸುತ್ತದೆ ನನಗೆ-ಅನ್ನ ಹಾಕುವವರೊಬ್ಬರಿದ್ದರೆ" ಎಂದ ಶಂಕರ.

"ಆದರಲ್ಲಿ ಆರು ತಿಂಗಳ ಕಾಲ ಜ್ವರದಿಂದ ಹಾಸಿಗೆ ಹಿಡಿದಿರಬೇಕಾದೀತು. ಈ ಊರನ್ನು ನೋಡುವಾಗಲೇ ಹಾಗೆನಿಸುತ್ತದೆ. ಇದು ನಮ್ಮೂರಿಗಿಂತ ಹೆಚ್ಚಿನ ಜ್ವರದ ಕೊಂಪೆಯಾಗಿರಬೇಕೆಂದು, ನಾವು ಬಂದ ಸಮಯವೇನೋ ಒಳ್ಳೆಯದು. ಮಳೆಗಾಲ, ಮಲೇರಿಯದ ವೇಳೆಯಲ್ಲ. ಹಳ್ಳ, ಕೊಳ್ಳಗಳು ಹರಿಯುವುದರಿಂದ ಸೊಳ್ಳೆಗಳ ಕಾಟವೂ ಕಡಿಮೆ. ಅದರಿಂದ ಮಲೇರಿಯವೂ ಕಡಿಮೆ. ನಿನಗೆ ನಿಲ್ಲುವ ಆಸೆಯಿದ್ದರೆ ನಿಲ್ಲೋಣ. ನಾನಾದರೂ ಇನ್ನೊಮ್ಮೆ ಇಲ್ಲಿಗೆ ಬಂದೇನು, ನಿನಗೆ ಹಾಗಲ್ಲವಷ್ಟೆ. ಸ್ವಂತ ಊರನ್ನು ಕಂಡು ಪಡುವಷ್ಟು ಸಂತೋಷ ಪಟ್ಟುಬಿಡು."

"ಊಟ ಉಪಚಾರಗಳ ಬಗ್ಗೆ ಅವರಿಗೇನಾದರೂ ಕೊಡುವ."

ನಕ್ಕನು ಸೀತಾರಾಮ. "ದುಡ್ಡು ಕೊಟ್ಟರೆ ಅನ್ನ ಹಾಕುವವರು ಈ ಊರಿನಲ್ಲಿ ಸಿಗಲಾರರು, ಇದು ಪೇಟೆಯಲ್ಲ. ಪ್ರೀತಿಯಿಂದ ಎಷ್ಟು ದಿನವೂ ಸಾಕಿಯಾರು. ಆ ಯೋಚನೆ ಬೇಡ."

**ಹೀಗೆ ತಮ್ಮಲ್ಲಿ ಚರ್ಚಿಸಿ, ನಿರ್ಣಯಕ್ಕೆ ಬಂದ ಮೇಲೆ, ಬಂಧುಗಳ**

ಮುಖನೋಡಿ ಸೀ ತಾ ರಾ ಮ ನೆಂದ "ಆಗಲಂತೆ, ನೀವು ಹೇಳುವುದು ದೊಡ್ಡದೇ, ನಾವು ಇರುವುದು ದೊಡ್ಡದೇ? ನನಗೀಗ ಇಷ್ಟು ವಯಸ್ಸಾದರೂ ಈ ತನಕ ಬಂದವನಲ್ಲ. ಮುಂದೆ ಬಂದೇನು ಅನ್ನುವ ಹಾಗಿಲ್ಲ. ಯಾವ ಊರಲ್ಲಿ ನನ್ನ ಕೆಲಸವೋ, ಏನು ಪಾಡೋ. ಬಂದಾಗ ಇದ್ದುದೇ ಬಂತು" ಎಂದು ಅವರನ್ನು ಒಲಿಸಿದ. ಆ ದಿನ ತೋಟ, ಬಯಲುಗಳ ಸುತ್ತಾಟ, ಶಂಕರನ ಕೃಷಿಯ ವಿಚಾರದ ಚರ್ಚೆಗಳಲ್ಲಿ ಸಮಯ ಹೋದುದರಿಂದ ಮುತ್ತಯ್ಯ ಗೌಡನನ್ನು ಕಾಣಲಿಕ್ಕೂ ಆಗಲಿಲ್ಲ; ಶ್ಯಾನುಭಾಗರ ಮನೆಯನ್ನು ಕಾಣಲು ಹೋಗಲಿಕ್ಕೂ ಆಗಲಿಲ್ಲ.

## ಅಧ್ಯಾಯ ೪

ಬೆಳಕು ಹರಿಯುವಾಗ ಎಳಚಿತ್ತಾಯರ ಮನೆಯ ಮುಂದಿನ ಅಂಗಳದಲ್ಲಿ, ಬಯಲಿನಲ್ಲಿ, ತೆಳ್ಳಗಿನ ಮಬ್ಬು ಎಲ್ಲೆಲ್ಲೂ ಹರಡಿತ್ತು. ನೇಸರು ಬೀಳುತ್ತಲೇ ಮಬ್ಬು ಚದರಿ ಪೂರ್ವದಿಗಂತವು ಕಾಣಿಸತೊಡಗಿತು. ಬಲ್ಲಾಳ ರಾಜನ ದುರ್ಗದ ಉನ್ನತ ಪರ್ವತಾವಳಿ ಕೆನ್ನೀಲ ವರ್ಣದ ಕ್ಷೋಟಿಯಾಯಿತು. ಇನ್ನರೆಗಳಿಗೆಯಲ್ಲಿ ಹೊತ್ತು ಮೂಡುತ್ತದೆ. ಅದಕ್ಕು ಮೊದಲೇನೆ - ಎಳಚಿತ್ತಾಯರೂ, ಅವರ ಮಡದಿಯೂ ಎದ್ದಾಯಿತು. ಕೋಳಿ ಕೂಗುವಾಗ ಎದ್ದು ಮನೆಗೆಲಸಕ್ಕೆ ತೊಡಗುವುದು ಅವರ ರೂಢಿ. ಮನೆಯಾಕೆ ಮುಸುರೆಯನ್ನು ಸಾಗಿಸಿ, ಮನೆ ಮುಂದಿನ ತೋಡಿನ ಬಳಿ ಕುಳಿತು, ಪಾತ್ರೆ ತಿಕ್ಕತೊಡಗಿದಳು. ಎಳಚಿತ್ತಾಯರು ನಿತ್ಯ ನಿಯಮದಂತೆ ಸೊಂಟಕ್ಕೊಂದು ಬಟ್ಟೆ ಸುತ್ತಿಕೊಂಡು. ಕೈಯಲ್ಲೊಂದು ಕತ್ತಿ ಹಿಡಿದು, ಮನೆಯಿಂದ ಹೊರಬಿದ್ದರು. ಬೆಳಕು ಹರಿದ ಒಂದು ಜಾವದೊಳಗೆ, ಆಚೀಚಿನ ಗುಡ್ಡಗಳಿಗೆ ಹೋಗಿ ಎರಡೆರಡು ಹೊರೆ ಸೊಪ್ಪು ಹೆರೆದು, ಹೊತ್ತು ತರುವುದು ಅವರ ಮೊದಲ ಕೆಲಸ. ದಿನದಿನವೂ ಆ ಕೆಲಸ ತಪ್ಪದೆ ನಡೆಯತಕ್ಕುದು. ಶಂಕರ, ಸೀತಾರಾಮರು ಏಳುವಾಗ, ತುಸು ದೂರದಲ್ಲಿ ಮಲಗಿದ್ದ ಎಳಚಿತ್ತಾಯರ ಚಾಪೆಯ ಸುರುಳಿ ಮಾತ್ರ ಕಾಣಿಸುತ್ತಿತ್ತು. ಎಲೆ ಅಡಿಕೆಯ ತಾಂಬಾಣ ಮಗ್ಗುಲಲ್ಲಿಯೇ ಇತ್ತು. ಇಬ್ಬರೂ ಎದ್ದರು. "ಮುಖ ತೊಳೆಯಬೇಡವೇ" ಎಂದನು ಶಂಕರ.

ಅದಕ್ಕೆ ಸೀತಾರಾಮ ನಗುತ್ತ "ಹಳ್ಳಿಯವರೂ ಅದೇ ಕೆಲಸಮಾಡುತ್ತಾರೆ;. ದಿಲ್ಲಿಯವರೂ ಅದನ್ನೇ ಮಾಡುವುದೇ ?" ಎಂದು ನುಡಿದ. ಇಬ್ಬರೂ ಎದ್ದು ಹಾಸಿಗೆಯನ್ನು ಮಡಚಿದರು. ಅಂಗಳಕ್ಕಿಳಿದು, ತೋಡನ್ನು ದಾಟಿ, ಗದ್ದೆಯ ಏರಿಗಳ ಮೇಲೆ ಮುಂದೆ ಸಾಗಿದರು. ಅಂಕುಡೊಂಕಾದ ಗದ್ದೆಯ ಅಂಚಿನಲ್ಲಿ ನಟ್ಟಿದ್ದ ತೆಂಗಿನ ಮರಗಳ ಕಾಂಡಗಳನ್ನು ಕೈಗಳಿಂದ ಸವರುತ್ತ ನಡೆದರು. ಒಂದು ಏರಿಯಿಂದ ಇನ್ನೊಂದು ಏರಿಗೆ ಇಳಿದರು. ತೋಡಿನ ಮಗ್ಗುಲನ್ನು ಹಿಡಿದು ಮುಂದೆ ಸಾಗುವಾಗ, ಅಲ್ಲಿ ಕುಲುಕುಲು ನಗುತ್ತ ಸುತ್ತಿ ಸುಳಿದು ಓಡುವ ನದಿ ಕಣ್ಣಿಗೆ ಕಾಣಿಸಿತು. ಅಷ್ಟೊಂದು

ದೊಡ್ಡ ನದಿಯೇನಲ್ಲ, ಬರಿಯ ಐವತ್ತಡಿ ಅಗಲದ ಹಳ್ಳ. ಆಚೀಚೆಗೆ ಕಡಿದಾದ ದಂಡೆಗಳು. ನದಿಯ ಪೂರ್ವದಿಕ್ಕಿನಲ್ಲಿ ವಿಶಾಲವಾದೊಂದು ಮೈದಾನು ಭೂಮಿ ಕಾಣುತ್ತಲಿತ್ತು. ಅದರ ತುಂಬೆಲ್ಲ ಬೆಳೆದ ಗಿಡ, ಪೊದೆಗಳು. ಅಲ್ಲಿಗೆ ಹೋಗುವ ಆಸೆಯಾಯಿತು. ನದಿಯನ್ನಿಳಿದು ಹೋಗಲು ಯೋಚಿಸಿದರು. ನದಿಯ ದಂಡೆಯಲ್ಲಿ ಉಸುಬು, ಉರುಟು ಕಲ್ಲುಗಳು ಹಾಸಿದ್ದುವು. ಅವುಗಳ ಮೇಲೆ ತಿಳಿಯಾಗಿ ಓಡುವ ನೀರಿನ ಓಟ ಮೋಹಕವಾಗಿತ್ತು. ಸೀತಾರಾಮು ನೀರು ನೇರಳೆ ಗಿಡದ ಕಡ್ಡಿಯೊಂದನ್ನು ಮುರಿದು ಹಲ್ಲಿಂದ ಕಚ್ಚಿ, ಕುಂಚದಂತೆ ಮಾಡಿ, ಹಲ್ಲುಜ್ಜುವ ವಿಧಾನ ಗೆಳೆಯನಿಗೆ ತೋರಿಸಿಕೊಟ್ಟ. ಇಬ್ಬರೂ ಹಲ್ಲುಜ್ಜಿದರು ; ಮೋರೆ ತೊಳೆದುಕೊಂಡರು. "ಸೀತಾರಾಮು, ನದಿಯ ಆಚೆಗೆ ಹೋಗಿ ಬರುವ, ಇದು ವಿಶೇಷ ಆಳವಿರಲಾರದಷ್ಟೆ" ಎಂದು ಶಂಕರ ಹೇಳಿದ, ಆಗಲೇ ಸೂರ್ಯರಶ್ಮಿ ನದಿಯನ್ನೂ ಅವರನ್ನೂ ಬೆಳಗಿಸಿತು. ಬೆಟ್ಟಗಳ ಸಾಲಿನಿಂದ ಸೂರ್ಯೋದಯದ ಅನುಪಮ ನೋಟ ಕಾಣಿಸಿತು. ಸೂರ್ಯನ ಬಿಂಬವನ್ನು ದಿಟ್ಟಿಸಿ ನೋಡಿದಾಗ ಹಿರಿದಾದ, ಹೊಳೆವ ಬಟ್ಟಲೊಂದನ್ನು ಯಾರೋ ಸುದರ್ಶನ ಚಕ್ರದಂತೆ ತಿರುಗಿಸುತ್ತಿದ್ದಾರೆ—ಎಂದನಿಸಿತು, ಕೆಂಪು, ಕೇಸರಿ, ಕಿತ್ತಳೆ, ಬೆಳ್ಳಿ,ಗುಲಾಲಿ ಹೀಗೆ ಕ್ಷಣಕ್ಕೊಂದು ಬಣ್ಣದ ತಟ್ಟೆಯಂತೆ ಅಪೂರ್ವವೇಗದಿಂದ ತನ್ನ ಅಚ್ಚಿನಲ್ಲಿ ತಿರುಗುವ ಚಕ್ರದಂತೆ ಕಾಣಿಸುತ್ತಿದ್ದ ಆ ಬಿಂಬ ಎಷ್ಟು ಸಂತೋಷವನ್ನು ಕೊಟ್ಟಿತೋ ಏನೋ. ಸೂರ್ಯೋದಯದ ಚೆಲುವಿನಿಂದುಂಟಾದ ನಗು ಹಿಗ್ಗುಗಳು ಸುತ್ತಣ ಪ್ರಕೃತಿಯಲ್ಲಿ ಮೂಡಿ ಮಿರುಗಿದಂತೆ ಅವರಲ್ಲಿಯೂ ಮಿಂಚಿ ಮೆರೆಯಿತು. ಬಿಸಿಲು ಬೀಳುತ್ತಲೆ, ನದಿಯ ನೀರು ಪಾರದರ್ಶಕವಾಗಿ, ತಳದ ಹರಳುಗಳೆಲ್ಲ ಕಾಣಿಸತೊಡಗಿದವು. ನದಿಯಲ್ಲೋಡುತ್ತಿದ್ದ ಮೀನುಗಳಿಗೆ ಒಂದು ಹೊಸ ಚೆಲುವುಬಂದಿತು. ನೀರೊಳಗೆ ಬೆಳಕು ಹರಿದಾಗ ಆಳದ ಅಳತೆ ಸಿಗುವುದಿಲ್ಲ. "ಏನು, ಒಂದಡಿ ನೀರಿರಬಹುದು-" ಎಂದಿಬ್ಬರೂ ದಾಟಲು ಯತ್ನಿಸಲು, ಉಟ್ಟ ಬಟ್ಟೆಯನ್ನು ತೊಯ್ಯುವಷ್ಟು ನೀರಿತ್ತು. ಮುಖಕ್ಕೆ ಬಿಸಿಲು ಬೆಚ್ಚಗೆ ಬಡಿಯುವಾಗ, ಕಾಲುಗಳನ್ನು ಶೀತ ಕೊರೆಯುತ್ತಿತ್ತು. ಹಳ್ಳ ದಾಟಿದ ಮೇಲೆ ಕಿರುದಾರಿಯೊಂದು, ದಂಡೆಯನ್ನು ಸೀಳಿ ಮೇಲೆ ಸಾಗುವುದು ಕಾಣಿಸಿತು. ಇಬ್ಬನಿಯಿಂದ ಒದ್ದೆಯಾದ ಆ

ನೆಲವನ್ನೇರ ಹೋದರೆ ಕಾಲು ಜಾರುತ್ತಲಿತ್ತು. ಅಂತು ತುಸು ದೂರ ನಡೆದು ಮೂಡಣದ ಬಯಲಿಗೇನೆ ಬಂದು ನಿಂತರು. ವಿಶಾಲವಾದ ಬಯಲು! ಹುಲ್ಲುಪೊದೆಗಳಿಂದ ಹಸುರು ತುಂಬಿದ್ದರೂ, ಮೇಲೆ ಬಿದ್ದ ಇಬ್ಬನಿಯ ಫಲವಾಗಿ ಬೆಳ್ಳಿಯ ಬಣ್ಣ ಬಂದಿತ್ತು. ಅವುಗಳ ಮೇಲೆ ಕವಿದಿದ್ದ ಮಂಜು ಆಗಲೇ ಮುಗಿಲಾಗಿ ಏರುವುದಕ್ಕೆ ತೊಡಗಿತ್ತು. ಈ ಮುಗಿಲ ಪರೆಯು ಸರಿಯುತ್ತ ಹೋದಂತೆ ಆ ಬೆಟ್ಟು ಬಹು ನೀಳವಾಗಿಯೂ, ಇನ್ನೂರು ಗಜ ಗಳಷ್ಟು ಅಗಲವಾಗಿಯೂ ಇದ್ದಂತೆ ಕಾಣಿಸಿತು. ದಕ್ಷಿಣೋತ್ತರಕ್ಕೆ ಒಂದೇ ಮಟ್ಟದ ಹಾಸು ನೆಲ; ಮೂಡಣದಲ್ಲಿ ಏರುತ್ತ ಹೋಗುವ ಕಾಡಿಂದ ತುಂಬಿದ ಒಂದು ಬೆಟ್ಟದ ಗೋಡೆ, ಪಡುವಣದಲ್ಲಿದೆ ನದಿ. ಮೇಲೆ ಹೋಗಿ ನಿಂತವರಿಗೆ ಎಲ್ಲಿಗೆ ಹೋಗಬೇಕೆಂದು ತೋಚಲಿಲ್ಲ. ನಾಲ್ಕೂ ಕಡೆಗಳನ್ನು ನೋಡಿದರು. ಕಡೆಗೆ ಉತ್ತರಾಭಿಮುಖವಾಗಿ ನಿಂತರು. ಎದುರಾಗಿ ಕಾಣುವ ಪರ್ವತಶ್ರೇಣಿಯಿಂದ ಮಳೆನೀರಿನಿಂದ ಕೊಬ್ಬಿದ್ದ ಸುಂದರ ಜಲಪಾತವೊಂದು ಬೀಳುತ್ತಿತ್ತು. ನೀರಿನ ತುಂತುರುಗಳನ್ನೂ ಕಾಣಬಹುದೆಂಬಷ್ಟು ಸಮೀಪದ ನೋಟ. ಈಗಾಗಲೇ ಮೇಲೇರುತ್ತ ಸೂರ್ಯನ ರಶ್ಮಿ ಜಲಪಾತದ ಒಂದು ಮೈಯನ್ನು ಬೆಳಗುತ್ತಿತ್ತು. ಮಾತು ಮರೆತ ಮೂಕರಂತೆ ಇಬ್ಬರೂ ಆ ಕಡೆಗೆ ಹೊರಟರು. ಅಂಕುಡೊಂಕಾದ ಕಾಲುನಡೆ ಆಚೀಚೆ ಮಾಲಿದ ಹುಲ್ಲಿನಲ್ಲಿ ಕಾಣಿಸಿತು. ಬಯಲು ಸಮತರ ವಾಗಿದ್ದರೂ ದಾರಿ ಮಾತ್ರ ಅಂಕುಡೊಂಕು. ಅಲ್ಲಿನ ಪೊದೆಗಳನ್ನು ಸವರಿ ದರೆ, ನೂಲು ಹಿಡಿಯುವಷ್ಟು ನೇರಾದ ದಾರಿಯನ್ನು ಮಾಡಬಹುದು. ಹಳ್ಳಿಯ ಜನ ಆ ತಂಟೆಗೆ ಹೋಗುತ್ತಾರೆಯೇ? ಗಿಡಪೊದೆಗಳನ್ನು ತೀಲಿ, ಸರಿದು, ಹಾವಿನಂತಹ ಹಾದಿ ಕಲ್ಪಿಸಿದ್ದಾರೆ. ಈ ದಾರಿ ಹಿಡಿದು, ತುಸು ದೂರ ಹೋದ ಬಳಿಕ, ಬಂಜರು ಬಿದ್ದ ಹಲವಾರು ಹೊಲಗಳು ಕಾಣಿಸಿ ದುವು. ಮತ್ತೂ ಮುಂದುವರಿದರೆ ಅಲ್ಲಲ್ಲಿ ತೆಂಗಿನ ಮರದ ಸಾಲುಗಳು, ಅವುಗಳ ಎತ್ತರವೋ—ಬಹು ಹೆಚ್ಚು. ಸೊಂಪಾಗಿ ಬೆಳೆದ ಮರಗಳಲ್ಲಿ ಕಾಯಿ, ಹೀಚುಗಳಿರಲಿಲ್ಲ. ಊರ ಕವಿಗಳ ಒಡೆತನಕ್ಕೆ ಅವು ಸೇರಿದುವು ಎಂಬುದು ಸ್ಪಷ್ಟ. ಈಗ ಬಯಲು ಕೊನೆಗಾಣುತ್ತ ಬಂದಿತು. ಹೊಲ ಗಳ ಸಂಸ್ಕಾರಗಳೂ ಮುಗಿದುವು. ಪೊದೆಗಳು ಹೆಚ್ಚಿ, ಕಾಡೇ ರೂಪು

ಗೊಂಡಿತು. ಆದರೆ ದಾರಿಯು ತೆಂಗು, ಕಂಗುಗಳ ನೋಟ ಪ್ರಾಚೀನ ಕಾಲದ ಜನ ನಿವಾಸದ ನೆನಪನ್ನು ತಂದುಕೊಟ್ಟುದರಿಂದ ಸೀತಾರಾಮ ನೆಂದ—

"ನೋಡು ಶಂಕರ, ಹೀಗೆ ತೆಂಗಿನ ಮರಗಳಾಗಲೀ ಅಡಿಕೆಯ ಮರಗಳಾಗಲೀ ಸಾಲಾಗಿ ತನ್ನಂತೆ ಬಿದ್ದು ಹುಟ್ಟಿರಲಾರವು. ನಾವು ದಾಟಬಂದ ಗದ್ದೆಗಳಲ್ಲಿ ತರ, ತರೆ ಕಾಣುವಾಗ ಇದು ಒಂದು ಕಾಲದಲ್ಲಿ ಸಾಗುವಾದ ಭೂಮಿಯೇ ಎಂದು ಕಾಣುತ್ತದೆ. ಈ ಹೊಲಗಳು ನೇಗಿಲನ್ನು ಕಾಣದೆ ಎಷ್ಟು ವರ್ಷಗಳಾದುವೋ! ನಡುನಡುವೆ ಬೆಳೆದ ಪೊದೆ ಮರಗಳನ್ನು ನೋಡಿದರೆ—ಇಲ್ಲಿ ಬೇಸಾಯವಾಗದೆ ನಾಲ್ವತ್ತು, ಐವತ್ತು ವರ್ಷಗಳಾಗಿರಬಹುದು. ಈ ತೆಂಗಿನಮರಗಳ ಎತ್ತರವನ್ನು ನೋಡುವಾಗ–ಅವಕ್ಕೆ ಅರವತ್ತು ಎಪ್ಪತ್ತು ವರ್ಷವಾದರೂ ಸಂದಿರಬೇಕು. ಒಂದು ಕಾಲದಲ್ಲಿ, ಜಲಸಮೃದ್ಧಿಯಿಂದ ತುಂಬಿದ ಈ ಭೂಮಿ, ಜನರಿಂದಲೂ ತುಂಬಿದ್ದಿರಬೇಕು. ನಿಮ್ಮ ಊರಿನ ಬಳಿ ಸೋಮೇಶ್ವರವಿದೆಯಲ್ಲ. ಅದರ ಆಚೀಚೆಗೆ ಇಂಥ ಎಷ್ಟೋ ಜಮೀನಿದೆ. ತೆಂಗುಗಳಿವೆ; ಹಿಂದೆ ಬೇಸಾಯ ಮಾಡಿ ಈಗ ಬಂಜರು ಬಿದ್ದ ಹೊಲ ಗದ್ದೆಗಳಿವೆ. ಬರಿಯ ಕಂದಾಯದ ಹಣಕ್ಕೆ ಹರಾಜು ಮಾಡಿದರೂ ಕೊಳ್ಳುವವರಿಲ್ಲ. ಕೊಂಡವರು, ಅಗ್ಗಕ್ಕೆ ಸಿಕ್ಕಿ ತೆಂದುಕೊಂಡು, ಕೊನೆಗೇನೂ ಮಾಡಲಾರದೆ ಕೈಬಿಟ್ಟುಹೋದರು."

"ಯಾಕೆ ಹಾಗಾಗಬೇಕು? ಮಲೇರಿಯದ ಬಾಧೆಯೇ? ಈ ಹೊತ್ತು ಡಿ. ಡಿ. ಟಿ. ಯಂಥ ಸಾಧನವಿದೆ. ಕ್ವೀನಿನು ಎಟಾಬ್ರಿನುಗಳಂಥ ಮದ್ದುಗಳಿವೆ. ಜನರು ಹೆದರಬೇಕೇಕೆ? ಪ್ರಾಯಶಃ ನಿಮ್ಮೂರ ಜನಕ್ಕೆ ಕಷ್ಟ ಸಹಿಸುವುದಿಲ್ಲವೆಂದು ಕಾಣುತ್ತದೆ. ಇಲ್ಲದೆ ಹೋದರೆ ಇದನ್ನು ನಂದನವನವನ್ನಾಗಿ ಮಾಡಬಹುದಾಗಿತ್ತು. ಎಲ್ಲೆಲ್ಲಿಯೂ ನೀರಿನ ಒರತೆ ಕಾಣಿಸುತ್ತಿದೆ. ಅಂಥಲ್ಲಿ ಕೃಷಿಗೆ ತೊಂದರೆ ಏನು?" "ನೀನು ಶಂಕರ, ನಗರಗಳಲ್ಲಿ ಹುಟ್ಟಿ ಬೆಳೆದವ. ಕೃಷಿಯ ಕಷ್ಟಗಳನ್ನು ತಿಳಿದವನಲ್ಲ. ಡಿ.ಡಿ.ಟಿ. ಬಂದದ್ದು ನಿನ್ನೆ, ಮೊನ್ನೆ; ಜನಕ್ಕೆ ಅದು ದೊರೆಯಬೇಕಾದರೆ ಇನ್ನೂ ಕಾಲ ಬೇಕು. ಹಿಂದಿನ ಕಾಲದಲ್ಲಿ ಕ್ವೀನಿನೂ ಇದ್ದಿಲ್ಲ, ಎಟಾಬ್ರಿನೂ ಇದ್ದಿಲ್ಲ, ಕ್ವೀನಿನು ಬಂದ ಮೇಲೆಯೇ, ಸೋಮೇಶ್ವರದ ಆ ಭೂಮಿಯ ವಿಚಾರ

ಹೇಳಿದೆನಲ್ಲ, ಅದು ಮೂರು ಮೂರು ಬಾರಿ ಹರಾಜಾಗಿಹೋದದ್ದು. ಹಣವಂತರೇ ಅದನ್ನು ಕೊಂಡರು; ಆಳುಗಳನ್ನೂ ಕರೆದುತಂದರು. ಊರಿನ ಕೆಲಸಕ್ಕೆ ಊರಿನ ಆಳು ಸಾಲದು. ಸುಮ್ಮನೆ ಇಲ್ಲಿಂದ ಜನ ಮಾಯವಾಗುತ್ತಾರೆ? ಜ್ವರ ಗಡ್ಡೆಯಿಂದ ಜನ ಸತ್ತರು; ಹುಲಿ ಚಿರತೆಗಳ ಉಪದ್ರದಿಂದ ಜಾನುವಾರು ಹೋಯಿತು. ಕಾಟ ಉಪದ್ರದಿಂದ ಬೆಳೆ ಹೋಯಿತು. ಅವನ್ನೆಲ್ಲ ಹೊಡೆದೋಡಿಸುವುದಕ್ಕೆ ಎಲ್ಲಿನ ಜನರು ಬರಬೇಕು?ಎಷ್ಟು ಜನ ಬರಬೇಕು? ಕೊನೆಗೆ ಒಬ್ಬರು ಬಂದವರು ಮಲಬಾರಿನಿಂದ ಕೂಲಿಗಳ ಪಡೆಯನ್ನೇ ತಂದರು. ಮೂರು ತಿಂಗಳಲ್ಲಿ ಒಂದೇ ಒಂದು ಬಿಡಾರ ಉಳಿಯಲಿಲ್ಲ. ಜ್ವರಕ್ಕೆ ಹೆದರಿ ಸುದ್ದಿ ಹೇಳದೆ ಹೋದರು."

ಹೀಗೆ ತನ್ನ ಊರಿನಲ್ಲಿ ನಡೆದ ಸಂಗತಿಗಳನ್ನು ಹೇಳುವಾಗ, ಶಂಕರ ವಿಚಾರ ಮಾಡಲೇಬೇಕಾಯಿತು. ಇಂಥ ಪ್ರದೇಶಗಳ ನಿವಾಸಿಗಳನ್ನು ಕಾಡುವ ಪ್ರಶ್ನೆಗಳಿಗೆ ನಿವಾರಣೋಪಾಯವೇನು?—ಎಂದು ತನ್ನಲ್ಲೇ ಮನನ ಮಾಡತೊಡಗಿದ. ಬಿಸಿಲಿನ ಕಾವು ಹೆಚ್ಚಿರಲಿಲ್ಲ, ಹಸಿವು ಆಗಿರಲಿಲ್ಲ. ಹುಚ್ಚು ಕಟ್ಟಿಸಿದ ನೆಲ 'ಬಾ ನೋಡು' ಎಂದು ಕರೆಯುತ್ತಿತ್ತು ಅವನನ್ನು. ಆದರೂ ಅನುಮಾನದಿಂದ "ಎಳಚಿತ್ತಾಯರು ನಮಗಾಗಿ ಕಾದಾರೆಯೇ? ಎಂದು ಕೇಳಿದ.

"ಏನು ಮಾಡುತ್ತಾರೋ! ಆದರೆ ಬಂದುದಕ್ಕೆ ಈ ಸೆರಗನ್ನು ಪೂರ್ಣ ನೋಡಿಕೊಂಡೇ ಮರಳುವ" ಎಂದು ಮುಂದುವರಿಯಲು ಪ್ರೋತ್ಸಾಹಕೊಟ್ಟ. ಪೊದೆ, ಕೇದಗೆಯ ಬನ, ಬಿದಿರಿನ ಮೆಳೆ, ಕಾಡಿನ ಬಲ್ಲೆಗಳು ತುಂಬಿದ ಕಾನನದಲ್ಲಿ ಅಲ್ಲಲ್ಲಿ ದನಕರುಗಳ ಹೆಜ್ಜೆ ಕಾಣಿಸಿದುದರಿಂದ ಅದು ಸಮನಾದ ಕಾಡೇನಲ್ಲ—ಎಂಬ ಧೈರ್ಯ ತಾಳಿದರು. ನುಸುಳಿ ನುಣುಚಿ, ಮೈಸವರಿಕೊಂಡು ಮುಂದುವರಿದರು.

ಎಳಚಿತ್ತಾಯರು ನಿತ್ಯದ ಕೆಲಸಗಳನ್ನು ಮುಗಿಸಿಕೊಂಡು, ಅಂದರೆ ಸೊಪ್ಪಿನ ಹೊರೆಗಳನ್ನು ಮನೆಯ ಅಂಗಳದಲ್ಲಿ ಹೊತ್ತು ಹಾಕಿ, ಅಲ್ಲಿಯೇ ಮೈನಿಡಿದು ನಿಂತರು. ತುರುಚಿ ಗಿಡಗಳ ಸಂಪರ್ಕದಿಂದ ತುರಿಸುತ್ತಿದ್ದ ಕಾಲಿನ ಮೊನಕಾಂಡಗಳನ್ನು ಕೈಯ ಬೊಡ್ಡು ಕತ್ತಿಯಿಂದ ಹೆರೆದುಕೊಂಡರು. ಅಷ್ಟಕ್ಕೆ, ಮನೆಗೆ ಬಂದ ನೆಂಟರ ನೆನಪಾಯಿತು. "ಲಕ್ಷ್ಮೀ,

ಏನು ಮಾಡಿದೆ ? ಅವಲಕ್ಕಿ ಒಗ್ಗರಿಸಿದೆಯೋ, ಅವರು ಪೇಟೆಯಲ್ಲಿ ಬೆಳೆದವರು, ಕಾಫಿ ಕುಡಿಯುವವರು. ಕಶಾಯವನ್ನಾದರೂ ಮಾಡಬೇಡವೇ ? ನಿನ್ನೆಯೇ ಶ್ಯಾನುಭಾಗರ ಮನೆಗೆ ಹೋಗಿ, ಒಂದಿಷ್ಟು ಕಾಫಿ ಹುಡಿ ಬೇಡಿ ತರಬಹುದಿತ್ತು. ಇವತ್ತು ಮಧ್ಯಾಹ್ನವಾದರೆ ಮುಂಡಾಜೆಯ ಪೇಟೆಗೆ ಹೋಗಿ ತರಬಹುದೋ ಏನೋ " ಎಂದು ಬಿರಿದ ಗಂಟಲ ಸಂಭಾಷಣೆಗೆ ತೊಡಗಿದರು.

ಒಳಗಿಂದ ಪ್ರತ್ಯುತ್ತರ ಬಂತು " ಅವಲಕ್ಕಿಯೂ ಆಗಿದೆ, ಕಾಫಿಯೂ ಆಗಿದೆ. ಆದರೆ ಬಂದ ನಂಟರೇ ಕಾಣಿಸುವುದಿಲ್ಲ. ಸೀತಾರಾಮ ಎಲ್ಲಿಗೆ ಹೋದ !" ಎಂದು.

" ಕಾಫಿ ಮಾಡಿದ್ದೀಯಾ ? "

" ಕಾಫಿಯ ಹಾಗೆ ಏನೋ ಮಾಡಿದೆ. ಅಂದರೆ ಕಳೆದಸಾರಿ ಮಜೇಗಾರ್ರರು ಬಂದಿದ್ದರಲ್ಲ ; ಆಗ ತಂದ ಹುಡಿಯಲ್ಲಿ ಸ್ವಲ್ಪ ಉಳಿದಿತ್ತು. ಆ ಇಷ್ಟು ಹುಡಿ ಹಾಕಿ ಕಾಯಿಸಿದೆ. ಪುಡಿ ಸಾಕೋ ಸಾಲದೋ ಎಂಬ ಅನುಮಾನವಾಯಿತು. ಕಾಫಿ ತೆಳ್ಳಗಾಗಬಾರದೆಂದು ಹೆದರಿ ಒಂದಿಷ್ಟು ಕೊತ್ತಂಬರಿ ಪುಡಿಯನ್ನೂ ಹಾಕಿದ್ದೇನೆ."

" ಮಹಾರಾಯತಿ, ಕಾಫಿ ಪುಡಿಯ ಒಟ್ಟಿಗೆ ಕೊತ್ತಂಬರಿ ಸೇರಿಸುತ್ತಾರೆಯೆ ? "

" ಹಾಕಬಾರದೇ ? ಆದರೆ ಬೆಲ್ಲ ತುಂಬ ಹಾಕಿದ್ದೇನೆ. ಒಂದು ನಮೂನೆಯಾಯಿತು. "

" ಆಯ್ತು ಮಹಾರಾಯಿತಿ. ಸೀತಾರಾಮ ಮುದ್ರಾಡಿಗೆ ಹೋದವನು ಅಜ್ಜಿಮನೆಯವರು ಇಂಥಾ ಕಾಫಿ ಕೊಟ್ಟರು—ಎಂದು ಹೇಳಲಿ "

" ಹೌದು, ಮುದ್ರಾಡಿ ಅಂದರೆ ಸ್ವರ್ಗದ ಊರು. ನಮ್ಮೂರಿನ ಹಾಗೆ ಮೂಡಿನ ಊರಲ್ಲವೇ ? ಕಾಫಿ ಗೀಫಿ ಎಲ್ಲಿಂದ ಬರಬೇಕು ? "

" ಕಾಫಿ ಬಂದರೂ ನಿನ್ನಂಥ ಬುದ್ಧಿವಂತರು ಸಿಗಲಿಕ್ಕಿಲ್ಲ. "

ಈ ಮಾತಾಡುವುದರಲ್ಲಿ " ಹಾಯ್, ಎಳಚಿತ್ತಾಯರೇ " ಎಂಬ ಶಂಖನಾದ ಕೇಳಿಸಿತು. ಕೂಗಿದ ಕಂಠ ರಣಕಹಳೆಯಂತಿತ್ತು. ಕೇಳಿದ ಸ್ವರದಿಂದಲೇ ಅದು ಯಾರದ್ದೆಂದು ಗೊತ್ತು. " ಲಕ್ಷ್ಮೀ, ಶ್ಯಾನುಭಾಗರ ಧ್ವನಿ

ಕೇಳಿಸುತ್ತಿದೆ. ಅವನಿಗೆ ಪ್ರತ್ಯೇಕವಾಗಿ ಒಂದಿಷ್ಟು ಕೊತ್ತಂಬರಿ ಕಷಾಯ ಮಾಡು. ನಿನ್ನ ಕಾಫಿಯನ್ನು ಅವರಿಗೂ ಕೊಟ್ಟರೆ ಅದರ ಕೀರ್ತಿಯನ್ನು ಬೆಳ್ತಂಗಡಿ ಫಿರ್ಕಾದಲ್ಲೆಲ್ಲಾ ಹಬ್ಬಿಸಿಯಾರು." ಅಷ್ಟರಲ್ಲಿ ಬೇರೆ ಯೋಚನೆ ಹೊಳೆಯಿತು. ಅವರ ಉಗ್ರಾಣಿಯೂ ಬಂದಿದ್ದರೆ ಅವನನ್ನು ಅವರ ಮನೆಗೆ ಕಳುಹಿಸಿ ಒಂದಿಷ್ಟು ಕಾಫಿಪುಡಿ ತರಿಸಬಹುದೋ ಏನೋ" ಎಂದು ತೋರಿತು.

ಅಂಗಳವನ್ನೇರುತ್ತಲೇ ಶ್ಯಾನುಭಾಗರು ಉತ್ಸಾಹದಿಂದ ನುಡಿದರು- "ಎಳಚಿತ್ತಾಯರೇ, ಒಂದು ಸಾರಿಗೆ ನಾನು ಬದುಕಿಕೊಂಡೆ. ಯೋಚಿಸಿ, ಯೋಚಿಸಿ ಸಾಕಾಗಿತ್ತು. ಕಂಡವರಿಗೆಲ್ಲ ಕಾಗದ ಬರೆದು ಕಂಗಾಲಾಗಿದ್ದೆ."

ಎಳಚಿತ್ತಾಯರು ಮುಂದುವರಿದು ಸ್ವಾಗತ ಮಾಡಿದರು "ಶ್ಯಾನುಭಾಗರೇ, ನೀವು ಬಂದದ್ದಂತು ಬಹಳ ಒಳ್ಳೆಯದಾಯಿತು. ಉಗ್ರಾಣಿ ಬರಲಿಲ್ಲವೇ ?"

ಆ ಮಾತಿಗೆ ಶ್ಯಾನುಭಾಗರ ಉತ್ತರವೇ ಬೇರೆ—"ನಾನು ಬಂದದ್ದು ನಿಮಗೊಂದು ಒಳ್ಳೆಯ ಸುದ್ದಿ ತಿಳಿಸಿ ಹೋಗುವ—ಎಂದು. ನಿನ್ನೆ ಬೆಳ್ತಂಗಡಿಗೆ ಹೋಗಿದ್ದೆನಲ್ಲ. ದಾರಿಯಲ್ಲಿ ಟಪ್ಪಾಲಿನವ ಸಿಕ್ಕಿದ. ಕೈಗೊಂದು ಲಕೋಟೆ ಕೊಟ್ಟ. ಮೇಲೆ 'ದಿಲ್ಲಿ' ಅಂತ ಮುದ್ರೆ ಒತ್ತಿತ್ತು. ಯಾರಪ್ಪ ದಿಲ್ಲಿಯಿಂದ ಕಾಗದ ಬರೆದವರು—ಎಂದು ಯೋಚಿಸಿ, ಒಡೆದು ನೋಡಿದರೆ, ಮಂಜುವಿನ ಕಾಗದ! ಓದಿ ಜೀವ ಬಂತು ನೋಡಿ."

"ಹೋ, ನಿಮ್ಮ ಮಂಜು ಈಗ ಅಲ್ಲಿದ್ದಾನೋ."

"ಅಲ್ಲಿದ್ದಾನೆಂದು ಗೊತ್ತಾದದ್ದು ನನಗೆ ಈಗಲೇ. ಈಗ ಅಲ್ಲಿಯೂ ಇರಲಿಕ್ಕಿಲ್ಲ. ಪುಣ್ಯಾತ್ಮ—ಅಪ್ಪ ಅಮ್ಮ ಬದುಕಿದ್ದಾರೆಂದು ಮೂರು ವರ್ಷಗಳ ಬಳಿಕಾದರೂ ಒಂದು ಕಾಗದ ಹಾಕಿದನಲ್ಲ. ಮಗನ ಯೋಚನೆಯಿಂದ ಅವಳಂತೂ ಸೋತು ಸುಣ್ಣವಾದಳು. ನಾನು ಖಂಡಿತ ಮಾಡಿಕೊಂಡಿದ್ದೆ—ಅದು ತೀರ ಕಾಟು. ಕಾಟು ಎಂದರೆ ಕಾಟು. ಬೆಳ್ತಂಗಡಿಯಲ್ಲಿ ಪೋಲಿಯಾಗಿ ತಿರುಗಿ, ನಮ್ಮ ಮನೆತನದ ಹೆಸರನ್ನೇ ಹಾಳುಮಾಡುತ್ತದೆ. ಅಂಥವ ಎಲ್ಲಿಗೆ ಹೋದರೂ ಒಂದೇ. ಇದ್ದರೂ ಒಂದೇ; ಇಲ್ಲದಿದ್ದರೂ ಒಂದೇ ಎಂದು. ಅವನ ಬಾಬ್ತು ಚಿಂತೆಯನ್ನೇ ಬಿಟ್ಟಿದ್ದೆ."

" ಶ್ಯಾನುಭಾಗರೆ, ಈಗೆಲ್ಲಿದ್ದಾನೆ ಹೇಳಿಬಿಡಿ ! ಏನುಮಾಡುತ್ತಿದ್ದಾನೆ? ನಾನು ಹೇಳಿದ ಜಾತಕದ ಫಲ ಏನಾಯಿತು ನೋಡುವ. ಅವನಿಗೆ ಪ್ರಾಯವೆಷ್ಟೀಗ ? ೨೦-೨೧ ಕಳೆದ ಮೇಲೆ ಅವನ ದಶೆ ಬದಲಿಸುತ್ತದೆ, ಒಳ್ಳೆ ಬುದ್ಧಿ ಬಂದೀತು ಅಂದಿದ್ದೆನಲ್ಲ."

" ಅಷ್ಟಾಗುವ ನಮೂನೆ ಕಾಣುತ್ತದಪ್ಪ. ಈ ಮೂರು ವರ್ಷ ಏನು ಮಾಡಿಕೊಂಡಿದ್ದ ಎಂದು ಸುದ್ದಿಯಿಲ್ಲ. ಆದರೆ ಈಗ—ತಾನು ವಿಮಾನ ತರಬೇತಿ ಹೊಂದುತ್ತಿದ್ದೇನೆ—ಸರಕಾರದ ಖರ್ಚಿನಲ್ಲಿ. ಕಲಿತಾದ ಮೇಲೆ ಒಳ್ಳೇ ಚಾಕರಿ ಸಿಕ್ಕೀತು. ೩೦೦-೫೦೦ ರೂಪಾಯಿಗಳ ತನಕವೂ ಸಂಬಳ ಸಿಕ್ಕೀತು. ತರಬೇತಿ ಆದಮೇಲೆ ಊರಿಗೆ ಬಂದುಹೋಗಲು ರಜೆ ಸಿಗುತ್ತದೆ. ಬರುತ್ತೇನೆ ಎಂದು ಬರೆದಿದ್ದಾನೆ."

" ವಿಮಾನದ ಕೆಲಸ–ಅಂದರೆ ಯುದ್ಧದ ಬಾಬತ್ತಿನಲ್ಲೋ. ಅದಕ್ಕೆ ಯಾಕೆ ಸೇರಿದ ಮಹಾರಾಯ—ಎಲ್ಲವನ್ನು ಬಿಟ್ಟು !"

ಈಗಿನ ಕಾಲದ ಮಕ್ಕಳಿಗೆ ಹೇಳುವವರು ಯಾರು ? ಕೇಳುವವರು ಯಾರು ? ಸೇರಿಯಾಯಿತು. ಸೇರಿದ ಮೇಲೆ ಬೇಡ, ಬಿಡು—ಅಂದರೆ ಬಿಡುವವರಿದ್ದಾರೆಯೇ ? ನಾನು ಮೇಲಿನ ಆಫೀಸರ ಮಾತು ಕೇಳಿ, ಹಳ್ಳಿಯ ಹುಡುಗರನ್ನು ವಕ್ರಿಸಿ ನಿಂತ ಹಾಗೆ ಕಾಣುತ್ತದೆ." ಎನ್ನುವಾಗ ಅವರ ಮುಖ ತೀರ ಪೆಚ್ಚಾಗಿತ್ತು; ಎಷ್ಟೆಂದರೂ ತಂದೆಯ ಕರುಳು ! ಇತರರ ವಿಚಾರದಲ್ಲಿ ' ಬರಿದೇ ತಿರುಗುವ ಬದಲಿಗೆ ಯುದ್ಧಕ್ಕೆ ಹೋಗಲಿ ' ಎಂದು ಹೇಳುವುದು ಸುಲಭವಾದರೂ, ಹೊಟ್ಟೆಯ ಮಗನ ವಿಚಾರದಲ್ಲಿ ಹಾಗೆ ಎಣಿಸಲಿಕ್ಕಾಗುತ್ತದೆಯೇ ? ಸಂಬಳ, ಸಾವಿನೊಂದಿಗೆ ಸೇರಿಕೊಂಡದ್ದು ಯುದ್ಧದಲ್ಲಿ. ' ಮಿಲಿಟರಿ ' ಅಂದರೆ ಮರೆಯಲಾರದ ನೆನಪು ಹುಟ್ಟಿಸುತ್ತದೆ. ವರ್ತಮಾನ ಪತ್ರ ಓದುವುದಿಲ್ಲವೇ ಅವರು. ' ಬರ್ಮಾದಲ್ಲಿ ಹೀಗಾಯಿತು. ಇಷ್ಟು ವಿಮಾನ ಉರುಳಿದುವು. ಜಪಾನಿ ಸೈನ್ಯ ಇಂಫಾಲಿನ ತನಕ ಬಂತು ' ಎಂದು ಪತ್ರಿಕೆಗಳಲ್ಲಿ ಆಗಾಗ ಓದುತ್ತಿದ್ದ ಶ್ಯಾನುಭಾಗರು, ತಮ್ಮ ಮಗನ ವಿಚಾರದಲ್ಲಿ ತಳಮಳಗೊಳ್ಳದಿರುವುದು ಸಾಧ್ಯವೇ ?

" ಎಳಚಿತ್ತಾಯರೇ, ನಾನೀಗ ಬಂದುದು—ಅವನ ಜಾತಕವನ್ನು

ತೋರಿಸಲಿಕ್ಕೆ. ಇನ್ನೊಂದು ಸಾರಿ ಚೆನ್ನಾಗಿ ನೋಡಿ ಹೇಳಿ. ಮುಖಕ್ಕೆ ತಕ್ಕ ಹಾಗೆ ಹೇಳಬಾರದು. ಹೆದರಿಕೆಯ ಅಂಶವಿದ್ದರೆ ಅಡಗಿಸಿಡಬಾರದು. ಈ ಕಾಗದವನ್ನು ಕಂಡ ಮೇಲೆ ನಮ್ಮ ಶಾಂತು ಅನ್ನ, ನೀರು ಮುಟ್ಟಿಲ್ಲ. ಮುಖ್ಯವಾಗಿ ಅವನ ಆಯುರ್ಬಲ ಹೇಗಿದೆ ಎಂದು ನೋಡಿ ಹೇಳಿ. ಅವ ಗಳಿಸಬೇಕಾಗಿಲ್ಲ, ಅವ ಕಳುಹಿಸಬೇಕಾಗಿಲ್ಲ. ನನ್ನ ಕೈಕಾಲುಗಳು ಗಟ್ಟಿಯಾಗಿರುವಷ್ಟು ದಿನ, ಏನಾದರೂ ತಾರಾತಿಕಡಿ ಮಾಡಿ ಬದುಕಿಯೇನು" ಎಂದು ಜಾತಕದ ಪ್ರತಿಯನ್ನು ಅವರ ಕೈಗೆ ಕೊಟ್ಟುದಲ್ಲದೆ, ಕನ್ನಡಕವಿಲ್ಲದ ಅವರಿಗೆ ತಮ್ಮ ಕನ್ನಡಕವನ್ನು ತೆಗೆದುಕೊಟ್ಟರು.

ಚಾವಡಿಯ ಮೇಲೆ ಹೋಗಿ ಇಬ್ಬರೂ ಪಟ್ಟಾಗಿ ಕುಳಿತರು. ಎಳಚಿತ್ತಾಯರು ಕನ್ನಡಕವನ್ನು ಮೂಗಿಗೇರಿಸಿ, ಮೊನಚುಗಣ್ಣುಗಳನ್ನು ಮಾಡಿಕೊಂಡು, ಜಾತಕವನ್ನೇ ನೋಡಿದರು ಒಂದು ಕ್ಷಣ. ಅವರು ಮೊದಲಿಗೆ ನುಡಿದ ಮಾತು. "ಅವನ ಆಯುಷ್ಯದ ವಿಷಯದಲ್ಲಿ ಯಾವ ಕಂಟಕವೂ ಇಲ್ಲ, ನಿಮಗೆ ಯಾವ ಬೆದರಿಕೆಯೂ ಬೇಡ." ಅನಂತರ ತದೇಕಚಿತ್ತರಾಗಿ ಮನಸ್ಸಿನಲ್ಲಿ ಗ್ರಹಗಳ ಗುಣಿತ ಹಾಕತೊಡಗಿದರು. ಹುಬ್ಬು ಗಂಟಿಕ್ಕಿ ನೋಡಿಯೇ ನೋಡಿದರು, ಗುಣಿಸಿಯೇ ಗುಣಿಸಿದರು. ಅವರಿಗೆ ಸಮಾನವಾಗಿ ಏಕಾಗ್ರಚಿತ್ತತೆಯಿಂದ ಕುಳಿತರು ಶ್ಯಾನುಭಾಗರು. ಕೊನೆಗೂ ಉಸ್ಸೆನ್ನುವ ಗಳಿಗೆ ಬಂತು. ಧೈರ್ಯದಿಂದ ಎಳಚಿತ್ತಾಯರೆಂದರು : "ಅವನ ಆಯುಷ್ಯಕ್ಕೆ ಯಾವ ಧಾಡಿಯೂ ಇಲ್ಲ; ಐವತ್ತು ವರ್ಷದ ತನಕ ಯಮ ಬಂದರೂ ಸಾಧ್ಯವಿಲ್ಲ–ಬ್ರಹ್ಮ ಬರೆದ ಆಯುಷ್ಯ ತಗ್ಗಿಸಲು. ಆಮೇಲೆ ಏನೋ ಕೆಡಕು ಕಾಣುತ್ತದೆ. ಈಗಿಂದಲೇ ಹುಡುಗನಿಗೆ ಬುಧನ ದೆಸೆ ತೊಡಗಿದೆ. ಒಳ್ಳೆಯದಾಗಲೇ ಬೇಕು. ಧನ ಲಾಭವಾಗಲಿ, ಆಗದಿರಲಿ, ಕೀರ್ತಿ ಗಳಿಸುತ್ತಾನೆ" ಎಂದರು. ಶ್ಯಾನುಭಾಗ ರಂಗರಾಯರಿಗೆ ಸದ್ಯದ ಸ್ಥಿತಿಯಲ್ಲಿ ಧನವೂ ಬೇಕಿರಲಿಲ್ಲ, ಕೀರ್ತಿಯೂ ಬೇಕಿರಲಿಲ್ಲ. ಮಗನ ಆಯುಷ್ಯ ಗಟ್ಟಿಯಾಗಿದೆ ಎಂದು ತಿಳಿದಿದ್ದರೆ ಸಾಕು. ಅಷ್ಟು ಕೇಳಿ ಎದ್ದೇ ಬಿಟ್ಟರು; "ನಿಮ್ಮ ಮಾತು ನನಗೆ ವೇದವಾಕ್ಯ. ಅವಳಿಗಷ್ಟು ಹೇಳಿ ಬರುತ್ತೇನೆ. ಪಾಪ, ಅವಳ ಚಿಂತೆ ಹೇಳಿತೀರದು." ಎನ್ನುವಾಗಲೇ ಅಂಗಳದಲ್ಲಿ ನಮ್ಮ ಮಿತ್ರರಿಬ್ಬರೂ ಕಾಲಿರಿಸಿದರು. ಎಳಚಿತ್ತಾಯರು "ನೀವೂ ಬಂದಿದ್ದೀರಿ : ನಮ್ಮ ಮನೆಗೆ

ಹೊಸ ನಂಟರೂ ಬಂದಿದ್ದಾರೆ. ನೋಡಿ—ಅವರೇನೆ. ಆ ಎಡಗಡೆಯವ ಮುದ್ರಾಡಿಯ ಹುಡುಗ. ನಮಗೆ ಸಂಬಂಧ; ಆ ಇನ್ನೊಬ್ಬ ಹುಡುಗ ದಿಲ್ಲಿ ಯವನಂತೆ. ನಿಮ್ಮವರ ಪೈಕಿ ಎಂದು ಕಾಣುತ್ತದೆ. ಅವನ ಬಹಳ ಹಿಂದಿನ ಹಿರಿಯರು ಇದೇ ಬಂಗಾಡಿಗೆ ಸೇರಿದವರಂತೆ. ಮಾತನಾಡಿಸಿ. ನಿಮಗೆ ಗೊತ್ತಿರದಿದ್ದರೂ ನಿಮ್ಮ ಅಜ್ಜಿಗೆ ನಮ್ಮೂರಿನ ಪ್ರಾಕಿನ ಕಥೆಗಳೆಲ್ಲ ಗೊತ್ತಿರ ಬೇಕಲ್ಲ. ಮೊದಲು ಕಾಫಿಯಾಗಲಿ"–ಎಂದು ಬಂದವರ ಪರಿಚಯ ಮಾಡಿ ಕೊಟ್ಟರು; ರಂಗರಾಯರ ವಿಚಾರವನ್ನು ಅವರಿಗೂ ಹೇಳಿದರು.

"ಸೀತಾರಾಮ, ಇವರು–ರಂಗರಾಯರು. ನಮ್ಮೂರಿನ ಶ್ಯಾನುಭಾಗರು, ಶ್ಯಾನುಭಾಗರಾದರೇನು? ಯೋಗ್ಯತೆಯಲ್ಲಿ ತಹಶೀಲ್ದಾರರಿಗೆ ಸಮ."

"ನಿನ್ನೆ ನೀವೆಂದವರೇ? ಅವರ ಮನೆಯ ಮುಂದಿನಿಂದಲೇ ಹಾಯ್ದು ಬಂದೆವಲ್ಲ. ಆ ಜೈನರು ಅವರನ್ನೇ ಕರೆದದ್ದು. ಅದಕ್ಕೆ ಮನೆಯವರು 'ಬೆಳ್ತಂಗಡಿಗೆ ಹೋಗಿದ್ದಾರೆ' ಎಂದರು."

ಅಷ್ಟರಲ್ಲಿ ಗೃಹಲಕ್ಷ್ಮಿ ನಾಲ್ವರ ಮುಂದೆಯೂ ನಾಲ್ಕು ಎಲೆಗಳನ್ನು ತಂದಿರಿಸಿ,ಅವುಗಳ ಮೇಲೆ ಬೊಗಸೆ ಬೊಗಸೆ ಒಗ್ಗರಿಸಿದ ಅವಲಕ್ಕಿ ತೋಡಿ ದಳು. ಕಂಚಿನ ಗಿಂಡಿಯಲ್ಲಿ ಕಾಫಿ ಎಂಬ ಕಷಾಯವನ್ನು ತಂದಿರಿಸಿದಳು. ತಿಂಡಿ ಮೆಲ್ಲುತ್ತ ಮಾತುಕತೆಗಳು ಮುಂದುವರಿದುವು. ಶ್ಯಾನುಭಾಗರು ಕೇಳಿದರು "ನಿಮ್ಮ ತಂದೆತಾಯಿಯರು ದಿಲ್ಲಿಯಲ್ಲಿದ್ದಾರೆಯೆ?"

"ದಿಲ್ಲಿಗೆ ನಾವು ಹೋಗಿ ಸುಮಾರು ಇಪ್ಪತ್ತು ವರ್ಷಗಳಾಗಿರಬಹುದು ಅದಕ್ಕೂ ಮೊದಲು ಮುಂಬಯಿಯಲ್ಲಿದ್ದೆವು. ನಮ್ಮ ಅಜ್ಜನೋ, ಮುತ್ತ ಜ್ಜನೋ ಬಂಗಾಡಿಯಲ್ಲಿ ಹುಟ್ಟಿದ್ದು–ಎಂದರು ನಮ್ಮಪ್ಪ."

"ಅಜ್ಜನ ಹೆಸರು?"

"ಹೇಳುತ್ತೇನೆ" ಎಂದು ಶಂಕರ ತನ್ನ ನೆನಪನ್ನು ಕೆದಕಿ ಕೆದಕಿ "ದತ್ತ ಮೂರ್ತಿ ಎಂದು ಕಾಣುತ್ತದೆ. ಅಷ್ಟೊಂದು ಖಂಡಿತ ಹೇಳಲಾರೆ" ಎಂದ.

ರಂಗರಾಯರು "ನನ್ನ ನೆನಪಿಗೂ ಆ ಹೆಸರು ಹೊಳೆಯದಲ್ಲ. ನಮ್ಮ ಅಜ್ಜಿಗೆ ಗೊತ್ತಿದ್ದರೆ ಗೊತ್ತಿರಬಹುದು. ನನಗಿಷ್ಟು ಗೊತ್ತು-ನಾನು ಹುಟ್ಟುವ ಮೊದಲು, ಅಂದರೆ ಐವತ್ತು ವರ್ಷಕ್ಕೂ ಹಿಂದಿನ ಮಾತು, ನಮ್ಮ ಕುಟುಂಬದ ಯಾರೋ ಈ ಊರನ್ನು ಬಿಟ್ಟು ಮುಂಬಯಿಗೋ ಇನ್ನೆಲ್ಲಿಗೋ

ಹೋದರಂತೆ. ಯಾರು ಹೋದದ್ದು, ಏನು ಸಂಗತಿ ಎಂಬುದನ್ನು ತಿಳಿದು ಕೊಳ್ಳುವ ಪ್ರಾಯ ಆಗ ಆಗಿರಲಿಲ್ಲ. ಅನಂತರ ಹೋದವರಿಗೂ ನಮಗೂ ಯಾವ ಸಂಬಂಧವೂ ಉಳಿಯಲಿಲ್ಲ, ಅಲ್ಲದೆ–ನಮ್ಮವರ ಬಳಗ ಈ ಕಡೆ ಇಲ್ಲವೇ ಇಲ್ಲ. ಹತ್ತೆಂಟು ಮನೆಗಳೂ ಇಲ್ಲ. ಹಿಂದೆ ಇಲ್ಲಿ ಜೈನ ಅರಸು ಗಳು ರಾಜ್ಯವಾಳುತ್ತಿದ್ದಾಗ ನಮ್ಮ ಮೂಲದವರನ್ನು ಎಲ್ಲಿಂದಲೋ ಇಲ್ಲಿಗೆ ಕರೆಯಿಸಿಕೊಂಡರಂತೆ. ಆ ಅರಸುಗಳಿಗೆ ನಮ್ಮವರು ಮಂತ್ರಿಗಳಾಗಿದ್ದ ರಂತೆ. ಅದೆಲ್ಲ ನಮ್ಮ ಅಜ್ಜಿಯ ಬಾಯಿಯಿಂದ ಕೇಳಿದ ಹಳೆ ಕತೆಗಳು. ಎಷ್ಟು ಸತ್ಯವೋ, ಎಷ್ಟು ಸುಳ್ಳೋ. ನೀವು ದಿಲ್ಲಿಯಲ್ಲಿ ಏನು ಮಾಡಿ ಕೊಂಡಿದ್ದೀರಿ? ನನ್ನ ಒಬ್ಬ ಹುಡುಗನೂ ಮೂರು ವರ್ಷಗಳ ಹಿಂದೆ ದಿಲ್ಲಿಗೋ, ಎಲ್ಲಿಗೋ ಓಡಿ ಹೋಗಿದ್ದ. ನಿನ್ನೆ ದಿನವಷ್ಟೆ, ಮೊದಲ ಬಾರಿಗೆ ಅವನ ಕಾಗದ ಬಂದಿದೆ. 'ಅಂಬಾಲಾ' ಎಂಬಲ್ಲಿದ್ದಾನಂತೆ. ಅದು ಎಲ್ಲಿದೆ?"

"ಪಂಜಾಬಿನಲ್ಲಿ. ಏನು ಮಾಡಿಕೊಂಡಿದ್ದಾನೆ?"

"ವಿಮಾನ ದಳಕ್ಕೆ ಸೇರಿದ್ದಾನಂತೆ. ಇನ್ನೂ ಪ್ರಾರಂಭ."

"ನನ್ನ ಒತ್ತಿನ ತಮ್ಮ ವಿಟ್ಠಲನು ಸಹ ವಿಮಾನ ದಳಕ್ಕೆ ಸೇರಿದ್ದಾನೆ. ಅವನು ಸೇರಿ ಎರಡು ವರ್ಷಗಳಾದುವು. ಈಗ ಪೈಲಟ್ ಆಫೀಸರನಾಗಿ ದ್ದಾನೆ. ನಾನು ಎಂಜನಿಯರಿಂಗ್ ವಿದ್ಯಾಭ್ಯಾಸ ಮುಗಿಸಿ ಬಂದಿದ್ದೇನಷ್ಟೆ. ಈ ಸೀತಾರಾಮ ನನ್ನ ಕಾಲೇಜಿನ ಸಹಪಾಠಿ."

ಶ್ಯಾನುಭಾಗರು ಹಳೆಯ ಕಾಲದವರಾದರೂ, ತುಣುಕು ಇಂಗ್ಲಿಷ್ ಕಲಿತವರು. ಶಂಕರ ಆಡಿದ ಮಾತುಗಳಲ್ಲಿ ಹತ್ತರಲ್ಲಿ ಐದರಷ್ಟು ಅರ್ಥ ಮಾಡಿಕೊಂಡರು. ಕಾಫಿ ಆಯಿತು. ಬರಿದೆ ಕುಳಿತು ಏನು ಮಾಡು ವುದು ಎಂದು ತೋರಿತು. ಹಾಗಾಗಿ ತಾವೂ ಎದ್ದರು. ಆ ಹುಡುಗರನ್ನು "ಬನ್ನಿ, ನಮ್ಮ ಮನೆಗೆ ಹೋಗೋಣ" ಎಂದು ಕರೆದರು. ಎಳಚಿತ್ತಾ ಯರು ಆಕ್ಷೇಪವೆತ್ತಿದರು. "ಶ್ಯಾನುಭಾಗರೇ ಅವರಿಗಿನ್ನೂ ಸ್ನಾನ, ಊಟ ಎಲ್ಲಾ ಆಗಬೇಕು" ಎಂದರು.

"ಸ್ನಾನಕ್ಕೆ ನಮ್ಮಲ್ಲಿ ನೀರಿಲ್ಲವೇ?"

ಬೇಡ ಮಧ್ಯಾಹ್ನ ಊಟ ಮುಗಿಸಿ, ಒಂದು ನಿದ್ರೆಮಾಡಿ ನಿಮ್ಮಲ್ಲಿಗೆ ಕರೆದುಕೊಂಡು ಬರುತ್ತೇನೆ. ನಿಮ್ಮ ಅಜ್ಜಿಯನ್ನು ಮಾತನಾಡಿಸಿ

ನೋಡುವ. ಆದಿರಲಿ, ಈ ನಿಮ್ಮ ಅಜ್ಜಿ ಎಂಬುವರು ಥೇಟು ನಿಮ್ಮ ಅಜ್ಜಿಯೇ? ಅಥವಾ ವಯಸ್ಸಾದುದರಿಂದ ಅಜ್ಜಿಯೆಂದು ಕರೆಯುವುದೇ?"

"ನೇರಾದ ಸಂಬಂಧವಲ್ಲ. ಸುತ್ತಿ ಬಳಸಿದ ಬಾಂಧವ್ಯ. ನಮ್ಮ ಅಜ್ಜನಿಗೆ ತಂಗಿಯೋ ಏನೋ ಆಗಬೇಕಂತೆ. ಅವರಿಗೆ ಸಣ್ಣಂದಿನಲ್ಲೇ ಗಂಡ ತೀರಿಹೋದರು. ಆಗ ಬಂದು ನಮ್ಮ ಮನೆ ಸೇರಿದರು. ಅಂದಿನಿಂದ ಇದ್ದಾರೆ—ಇದ್ದಾರೆ ಮನೆಗೊಂದು ದೀಪವಿದ್ದ ಹಾಗೆ, ಹಿರಿಯರಾಗಿ ಎಲ್ಲವನ್ನು ನಡೆಯಿಸಿಕೊಂಡು ಹೋಗುತ್ತಿದ್ದಾರೆ. ಅವರಿಲ್ಲದಿದ್ದರೊ—ದೇವರೇ ಗತಿ. ನಮ್ಮ ಶಾಂತುವಿನ ಹಣೆಬರಹ ಗೊತ್ತಿದೆಯಲ್ಲ. ಅವಳಿಗೆ ಏಳು ದಿನ ಕೆಲಸವಾದರೆ ತಿಂಗಳು ರಜೆ. ಮಲೇರಿಯಾ ಎಂಬುದು ಅವಳನ್ನು ಎಂದುಬಿಡುತ್ತದೋ! ಆಯುಷ್ಯವೆಲ್ಲ ಮದ್ದು ಕುಡಿಯುವುದರಲ್ಲೇ ಕಳೆಯಿತು. ನಮ್ಮ ಅಜ್ಜಿಗಿಷ್ಟು ವಯಸ್ಸಾಯಿತಲ್ಲ—ಆಕೆ ಒಂದು ದಿನವಾದರೂ ಜ್ವರದಿಂದ ಮಲಗಿದ್ದೆಂಬುದನ್ನು ನಾನು ಕಂಡಿಲ್ಲ. ಎಷ್ಟೆಂದರೂ, ಹಳೆಯ ಕಾಲದ ಜನಗಳ ಜೀವ ನಮಗಿಂತ ಎಷ್ಟೋ ಎಷ್ಟೋ ಗಟ್ಟಿ. ಅವರಿಗೀಗ ಎಪ್ಪತ್ತೋ, ಎಂಬತ್ತೋ ವರ್ಷ ವಯಸ್ಸು."

"ಹಾಗೆ ನಮ್ಮ ಮುತ್ತಯ್ಯ ಗೌಡನಿಲ್ಲವೇ? ಅವನದ್ದು ಅದೇ ಜಾತಿ. ಈ ಬಂಗಾಡಿ ಊರಿಗಾಗಿ ಚಳಿಜ್ವರದ ಕಾಟ ತಪ್ಪಿಸಿಕೊಂಡ ಜನಗಳೆಂದರೆ ಇವರಿಬ್ಬರೆ. ವಯಸ್ಸಾದರೂ ಜೀವ ಏಸು ಗಟ್ಟಿ ಮುಟ್ಟು! ಮನೆಗೆ ಹಾಕಿದ ಹಲಸಿನ ಮರದ ಮುಂಡಿಗೆಯಂತೆ ಗಟ್ಟಿ ಅಂದರೆ ಗಟ್ಟಿ" ಎನ್ನುತ್ತ, ಮಾತು ಮುಗಿಸಿ, ಮಧ್ಯಾಹ್ನ ಬರುವ ಭರವಸೆ ಕೊಟ್ಟು, ಶ್ಯಾನುಭಾಗರನ್ನು ಬೀಳ್ಕೊಟ್ಟರು.

ಶಂಕರ ನಡೆದು ಬಂದು ಬೆವರಿದ್ದ. ಅಂಗಿಯನ್ನು ಕಳಚಿದ. ಅದರ ಕಿಸೆಯೊಳಗಿಂದ ಒಂದು ಸೀಸೆಯನ್ನು ತೆಗೆದು, ಅದರೊಳಗಿಂದ ಒಂದು ಕ್ವೀನಿನು ಗುಳಿಗೆ ತೆಗೆದು ಅಲ್ಲಿಯೇ ನುಂಗಿದ.

"ಏನು ಪೆಪ್ಪರ್‌ಮಿಂಟು ತಿನ್ನುತ್ತಿಯೋ?" ಎಂದು ಕೇಳಿದ ಸೀತಾರಾಮ.

"ಹೂಂ ಅದನ್ನೇ, ನಿಮ್ಮೂರಿನಲ್ಲಿ ಇದನ್ನು ನಾನು ತಿಂದಿರಲಿಲ್ಲ. ಬೆಂಗಳೂರಿನಿಂದ ಬರುವಾಗಲೇ ಈ ಕ್ವೀನಿನು ಸೀಸೆ ತಂದಿದ್ದೆ—ಬಳಿಯಲ್ಲಿರ

ಲೆಂದು. ನಿನ್ನ ಬಾಯಿಂದ ನಿಮ್ಮೂರಿನ ವರ್ಣನೆ ಕೇಳಿದಾಗಲೇ ಅದು ಬೇಕಾದೀತು ಎಂದು ಕ್ರಯಕ್ಕೆ ಕೊಂಡೆ. ಆದರೆ ಮುದ್ರಾಡಿಯಲ್ಲಿ ಸೊಳ್ಳೆಗಳ ಕಾಟ ಕಾಣಿಸಲಿಲ್ಲ. ಆಗ ಹೋದಾಗ ಜವುಗು ನೆಲದಲ್ಲಿ ಕಾಲಿರಿ ಸಿದೆವಲ್ಲ—ಅಲ್ಲಿ ಒಂದೆರಡು ಸೊಳ್ಳೆಗಳು ಕಡಿದುವು. ಅದಕ್ಕಾಗಿ ತೆಗೆದು ಕೊಂಡೆ" ಎಂದು ಹೇಳಿ ಅವನಿಗೂ ಒಂದು ಗುಳಿಗೆಯನ್ನು ಕೊಟ್ಟ.

"ಎಲ್ಲಿಗೆ ಹೋಗಿದ್ದಿರಿ? ಬೆಳಗ್ಗಿನಿಂದ ಕಾಣಿಸಲೇ ಇಲ್ಲ. ಬಟ್ಟೆಯು ಲ್ಲೆಲ್ಲ ಹುಲ್ಲು ಮುಳ್ಳುಗಳ ಜುಂಗು ನಾಟಿದೆ. ತುಂಬ ದೂರ ನಡೆದಿರೇನು?" ಎಂದು ಕೇಳಿದರು ಎಳಚಿತ್ತಾಯರು. ಸೀತಾರಾಮ ಆ ಬೆಳಗಿನ ತಮ್ಮ ಸಾಹಸವನ್ನೆಲ್ಲ ಬಣ್ಣಿಸಿದ. ಅನಂತರ ಪರ್ಯಾಯವಾಗಿ "ಅಜ್ಜ, ಈ ಊರಲ್ಲಿ ಬೇಸಾಯಕ್ಕೆ ಬೇಕಾದ ಆಳುಗಳು ಸಿಗುತ್ತಾರೆಯೇ?" ಎಂದೂ ಪ್ರಶ್ನಿಸಿದ.

"ಸಿಕ್ಕಿದರೆ ನಮ್ಮಂಥ ದೊಡ್ಡ ದೊರೆಗಳಿಲ್ಲ. ದುಡಿಯಲಿಕ್ಕೆ ಬೇಕಾದ ಆಳುಗಳಿದ್ದರೆ, ನೀವು ನೋಡಿ ಬಂದಿರಲ್ಲ – ಆ ಭೂಮಿ, ಎಂದಾ ದರೂ ಹಾಳುಬೀಳುತ್ತಿತ್ತೇ? ಹೊರಗಿನ ಜನ ಇಲ್ಲಿಗೆ ಬರುವುದಿಲ್ಲ. ಇಲ್ಲಿನ ಚಳಿಜ್ವರಕ್ಕೆ ಹೆದರುತ್ತಾರೆ. ನ್ಯಾಯವಾಗಿ ಅಷ್ಟು ಹೆದರಬೇಕಾದುದಿಲ್ಲ. ಘಟ್ಟದ ಮೇಲಿನ ತೋಟಕ್ಕೆ ಹೋಗುತ್ತಾರೆ ಸಾವಿರಾರು ಜನ. ಅಲ್ಲಿಗೆ ಹೋಗುತ್ತಾರೆಂದು ಇಲ್ಲಿಗೆ ಬರುವುದಿಲ್ಲ. ಘಟ್ಟದಲ್ಲಿ ಚಳಿಜ್ವರ ಕಡಿ ಮೆಯೇ? ಪ್ರಾಯಶಃ ಅವರಿಗೆ ಬೇಕಾದ—ಕಾಫಿ ಹೊಟೇಲು, ಜುಗಾರಿ ಮಂಡ, ಹೆಂಡದಂಗಡಿಗಳು ಯಾವುವೂ ನಮ್ಮೂರಲಿಲ್ಲ. ನನಗನಿಸುತ್ತದೆ ಇಲ್ಲೊಂದು ಹೆಂಡದಂಗಡಿ ಕಾಯಂ ಆಗಿ ತೆರೆದರೆ, ಒಂದಿಷ್ಟು ಆಳುಗಳು ಬಂದು ನಿಂತಾರು. ಅದೂ ಕಷ್ಟವೇ. ಅಂದರೆ ಹೆಂಡ ಇಳಿಸುವ ಜನ ಈ ಊರಲ್ಲಿಲ್ಲ. ನಮ್ಮೂರ ಗೌಡರಿಗೆ, ಬೇರೆಯವರಿಗೆ, ಕುಡಿಯುವ ಆಸೆಯಾ ದರೆ ಮುಂಡಾಜೆಗೋ, ನಿಡಿಗಲ್ಲಿಗೋ ಹೋಗಬೇಕು, ಅಷ್ಟು ಯಾರು ನಡೆಯುತ್ತಾರೆ."

ಅಲ್ಲಿಂದ ಮುಂದೆ ಗೆಳೆಯರೊಬ್ಬೊಬ್ಬರಾಗಿ ಸ್ನಾನ ಗೃಹವನ್ನು ಹೊಕ್ಕರು. ಬಟ್ಟೆ ತೊಳೆಯತೊಡಗಿದರು. ಶಂಕರನಿಗೆ ಆ ಕೆಲಸ ಚೆನ್ನಾಗಿ ಬಾರದ್ದನ್ನು ಕಂಡು, ಸೀತಾರಾಮ ಅವನ ಕೈಗಳಿಂದ ಬಟ್ಟೆಗಳನ್ನು ಕಿತ್ತು

ಕೊಂಡು ಒಗೆದು ಕೊಟ್ಟ. ಅನಂತರ ಸ್ನಾನವಾಯಿತು. ಆ ಕುದಿವ ನೀರನ್ನು
ಗೆಳೆಯನಿಗೆ ತಣಿಸಿಕೊಟ್ಟು, ಅವನ ಸ್ನಾನವಾದ ಮೇಲೆ ತಾನೂ ಮಿಂದು
ಬಂದ. ಬೆಳಿಗ್ಗೆ ಮಾಡಿದ ತಿರುಗಾಟದ ಆಯಾಸದ ಜತೆಗೆ, ಬಿಸಿನೀರಿನ
ಸ್ನಾನದ ದಣಿವೂ ಸೇರಿಕೊಂಡಿತು ಇಬ್ಬರೂ ಚಾವಡಿಯಲ್ಲಿ ಮೈಚಾಚಿ
ಮಲಗಿಕೊಂಡರು. ದಣಿವಿನಿಂದ ನಿದ್ರೆಯೂ ಬಂದಿತು. ನಿದ್ರೆ ಬಿಟ್ಟು ಏಳು
ವಾಗ ಒಳಗೆ ಎಲೆ ಹಾಕಿತ್ತು ; ಊಟಕ್ಕೆ ಸಿದ್ಧವಾಗಿತ್ತು. ದೇವರ ಕೋಣೆ
ಯಿಂದ ಎಳಚಿತ್ತಾಯರ ಮಂತ್ರಗಳ ಆರ್ಭಟೆ ಕೇಳಿಸುತಿತ್ತು. ಪೂಜೆ
ಮುಗಿಸಿ ಬಂದವರು. ಅವರನ್ನು ಊಟಕ್ಕೆ ಕರೆದರು. ಊಟದ ವೇಳೆಯ
ಲ್ಲಿಯೂ ಇಬ್ಬರೂ ಬಂಗಾಡಿಯ ವನಸೌಂದರ್ಯವನ್ನು ಕುರಿತು ಚರ್ಚಿ
ಸುತ್ತಿದ್ದರು, ಶಂಕರನಂತು ಆ ಊರಿನ ನಿಸರ್ಗವನ್ನು, ಜಲಸಮೃದ್ಧಿ
ಯನ್ನು, ನೆಲದಲ್ಲಿ ತುಂಬಿದ ಸಸ್ಯಸಾರದ ಕಣಜವನ್ನು ಕಂಡು ಮಂಕು
ಗೊಂಡಿದ್ದ. ಆ ಬೆಳಗ್ಗೆ ಕಂಡುಬಂದ ವಿಶಾಲ ಪ್ರದೇಶದಲ್ಲಿ ಅವನ ಮನ
ನಟ್ಟುಹೋಗಿತ್ತು. ಅಂಥ ಭೂಮಿ ಕೈಗೆ ಬಂದುದಾದರೆ ಸುಂದರ ಸ್ವರ್ಗ
ವನ್ನೇ ಕಟ್ಟಬಹುದಲ್ಲ—ಎಂಬ ಆಸೆ ಮೂಡುತಿತ್ತು, ಮುದ್ರಾಡಿಗೆ
ಬಂದಂದಿನಿಂದ ಅಂಥ ಆಸೆ ಗಳಿಗೆ ಗಳಿಗೆಗೂ ಅವನನ್ನು ಕಾಡುತ್ತಿತ್ತು.
ಬಂಗಾಡಿಯನ್ನು ಕಂಡ ಮೇಲಂತು, ಅದು ತನ್ನ ಊರು—ಎಂಬ ಮೋಹ
ಕ್ಕಿಂತ ಅಧಿಕವಾಗಿ, ನೆಲ ಅವನನ್ನು ಬೆರಗುಗೊಳಿಸಿತು. "ಇಷ್ಟೊಂದು
ಒಳ್ಳೆಯ ಭೂಮಿಗಳು ಪಡು ಬೀಳಬೇಕೆ ! ದೇಶದಲ್ಲಿ ವಿದ್ಯಾವಂತರು,
ವಿಜ್ಞಾನಿಗಳು, ಸಾಹಸಿಗಳು ಸಾಕಷ್ಟು ಇಲ್ಲ ಎನ್ನುವುದಕ್ಕೆ ಇದೊಂದೇ
ಸಾಕ್ಷಿಯಲ್ಲವೇ " ಎಂದು ಹೇಳುತ್ತಿತ್ತು ಅವನ ಮನಸ್ಸು. ಎಲೆಯ ಮೇಲೆ
ಬಡಿಸಿದ ಸಾರು, ಹುಳಿ, ಗೊಜ್ಜು, ಪಾಯಸ ಯಾವುದನ್ನೂ ಅವನು
ಗುರುತಿಸಲಿಲ್ಲ. ಯಾಂತ್ರಿಕವಾಗಿ ಅವನ್ನು ಕೈ ಯಿಂ ದ ಬಾಯಿಗೆಸೆದು
ನುಂಗುತ್ತಿದ್ದ. ಊಟವಾಗಿ ಹೊರಕ್ಕೆ ಬಂದು, ಕೈತೊಳೆದರು. ಅಂಗಳದಲ್ಲಿ
ನಿಂತರೆ ಎದುರಿನ ಪರ್ವತ, ಬೆಟ್ಟ, ಬಯಲು. ನದಿಗಳು ಅವನನ್ನೆ ಕರೆದು
ಮಾತನಾಡಿಸುವಂತಿದ್ದುವು.

ಇಬ್ಬರೂ ಚಾವಡಿಗೆ ಬಂದು ಚಾಪೆ ಬಿಡಿಸಿ, ಇನ್ನೊಮ್ಮೆ ವಿಶ್ರಾಂತಿ
ಗೆಂದು ಮಲಗಿಕೊಂಡರು. ನಿದ್ದೆಯೂ ಬಂದಿತು. ಕಣ್ಮುಚ್ಚಿ ಕನಸು ಕಾಣ

ತೊಡಗಿದ ಶಂಕರ. ಸೀತಾರಾಮ ಭಾವೀ ಸಂಸಾರದ ಚಿತ್ರ ಕಟ್ಟುತ್ತಿದ್ದಿರಬಹುದು ಮನಸ್ಸಿನಲ್ಲಿ. ಆದರೆ ಶಂಕರನ ಕಣ್ಮುಂದೆ–ನದಿ, ಬೆಟ್ಟ, ಅರಣ್ಯ, ಪೊದೆ, ಜವುಗು ನೆಲ, ಪಡುಬಿದ್ದ ನೆಲ, ದಾತಾರಿಲ್ಲದ ತೆಂಗು, ಕಂಗಿನ ಮರಗಳು—ಇವೆಲ್ಲ ಆವೃತ್ತಿಯಿಂದ ಕಾಣಿಸಿಕೊಂಡು ಅವನ ಮನವನ್ನು ಸೂರೆ ಮಾಡಿದುವು.

ಚಾವಡಿಯ ಇನ್ನೊಂದು ತುದಿಯಲ್ಲಿ ಎಳಚಿತ್ತಾಯರು ಮೆಟ್ಟುಕತ್ತಿಯ ಮೇಲೆ ಕುಳಿತಿದ್ದರು. ತೆಂಗಿನ ಸೋಗೆಗಳನ್ನು ಮಗ್ಗುಲಲ್ಲಿರಿಸಿಕೊಂಡು, ಒಂದೊಂದೇ ಗರಿಯನ್ನು ಹಿಡಿದು ಎಲೆಯಿಂದ ಕಡ್ಡಿಗಳನ್ನು ಬೇರೆ ಮಾಡುತ್ತಿದ್ದರು, ಮೂರು ನಾಲ್ಕು ಕಸಬರಿಗೆಗಳಿಗೆ ಸಾಕಾಗುವಷ್ಟು ಕಡ್ಡಿಗಳು ಜಮೆಯಾಗುತ್ತಲೇ ಅವುಗಳನ್ನೆಲ್ಲ ಕಟ್ಟ ಮಾಡಿಗೆ ಸಿಕ್ಕಿಸಿದರು. ಬರಿಯ ಗರಿಗಳನ್ನು ಒಟ್ಟುಮಾಡಿ ಬಚ್ಚಲಿಗೆ ಕೊಂಡುಹೋಗಿ ಎಸೆದು ಬಂದರು. ಅವರು ಹಿಂದಿರುಗಿ ಬರುವಾಗ ಸೀತಾರಾಮ, ಶಂಕರರು ಮುಖ ತೊಳೆಯಲು ಹೊರಟದ್ದರು. ಅವರನ್ನು ಕಾಣುತ್ತಲೇ "ಸೀತಾರಾಮ, ರಂಗರಾಯರಲ್ಲಿಗೆ ಬರುತ್ತೇವೆ ಎಂದಿದ್ದೆವಲ್ಲ. ಹೋಗುವ, ಆಗದೇ?" ಎಂದರು.

ಆಯಿತೆಂದು ಇಬ್ಬರೂ ಮೋರೆ ತೊಳೆದುಕೊಂಡು ಉಡಿಗೆ ತೊಡಿಗೆ ಹಾಕಿಕೊಂಡು ಸಜ್ಜಾಗಿ ಎದ್ದು ನಿಂತರು. ಎಳಚಿತ್ತಾಯರು ಸಜ್ಜಾಗಬೇಕಾದದ್ದೇನಿಲ್ಲ. ಸೊಂಟಕ್ಕೆ ಬಿಗಿದ ಪಂಚೆ ಹಾಗೆಯೇ ಇತ್ತು. ತಲೆಗೆ ಸುತ್ತಿದ ರುಮಾಲನ್ನು ಕಿತ್ತು, ಕೊಡವಿ, ಮೈಮೇಲೆ ಶಲ್ಲೆಯಾಗಿ ಹೊದೆದರು. ಕಂಕುಳಲ್ಲಿ ತೆಂಗಿನ ಗರಿಯ ಗೊರಬನ್ನು ಚಚ್ಚಿಕೊಂಡರು. ಬಲಗೈಯಲ್ಲಿ ಕತ್ತಿಯೊಂದಿರಲಿ–ಎಂದು ಹಿಡಿದುಕೊಂಡರು. ಹುಡುಗರಿಗಿಂತ ಮುಂದಾಗಿ ನಡೆದು ಅಂಗಣವನ್ನಿಳಿದರು, ಗದ್ದೆಯ ಹರಿಯಮೇಲೆ ತುಸು ದೂರಹೋಗಿ ಮಗ್ಗುಲ ಗುಡ್ಡವನ್ನೇರಿದರು. ತುಸು ವೇಳೆಯಲ್ಲಿ ಶ್ಯಾನುಭಾಗರ ಮನೆಯೇ ಕಾಣಿಸಿತು.

ಶ್ಯಾನುಭಾಗರ ಮನೆಗೆ ಹೋಗುವಾಗ ಮನೆಯವರೆಲ್ಲ ಚಾವಡಿಯಲ್ಲಿ ಕುಳಿತಿದ್ದರು. ಚಾವಡಿಯ ಹೊರಮಗ್ಗುಲಿಗೆ ಮಡಲಿನ ತಟ್ಟಿಗಳನ್ನು ಮಳೆಯ ನಿವಾರಣೆಗಾಗಿ ಬಿಗಿದಿದ್ದರು. ಅಂಗಳದಲ್ಲಿ ಉಗ್ರಾಣಿ ದೇವರು ಸುಲಿದ ಹಸಿ ಅಡಕೆಗಳನ್ನು ಕೆರೆದು, ಹೋಳು ಮಾಡುತ್ತಿದ್ದ. ಬರುವವರಿಗೆ

ತಾಂಬೂಲ ಸಮ್ಮಾನವಾಗಬೇಕಲ್ಲ. ಇವರ ಮಾತಿನ ಧ್ವನಿ ಕೇಳುತ್ತಲೆ. ರಂಗರಾಯರು ಮನೆ ಮೆಟ್ಟಿಲು ಇಳಿದು, ಅಂಗಳಕ್ಕೆ ಬಂದು, ಅವರನ್ನು ಸ್ವಾಗತಿಸಿ ಚಾವಡಿಗೆ ಕರೆದೊಯ್ದರು. ಚಾವಡಿಯ ದಪ್ಪನಾದ ಕಂಬವೊಂದಕ್ಕೆ ಒರಗಿ ಕುಳಿತಿದ್ದ, ಕೈಯಲ್ಲಿ ಜಪಸರ ಹಿಡಿದಿದ್ದ ಮುದುಕಿಯನ್ನು ತೋರಿಸಿ ಅವರೆಂದರು "ಅವರೇ ನಮ್ಮಜ್ಜಿ." ಚಾವಡಿ ಏರಿದ ಜನಗಳನ್ನು ಕಾಣುತ್ತ ಮದುಕಿ ಮೆಲ್ಲನೆ ಎದ್ದುನಿಂತಳು. ಹಣೆಗೆ ಕೈಯಿಟ್ಟು ಕಣ್ಣುಗಳನ್ನು ಅರಳಿಸಿ ನೋಡತೊಡಗಿದಳು. ಶ್ಯಾನುಭಾಗರು ತಮ್ಮ ಮನೆಯ ಮಾತಿನಲ್ಲಿ ಅಜ್ಜಿಯೊಡನೆ "ಎಳಚಿತ್ತಾಯರು ನಿನಗೆಷ್ಟು ಪ್ರಾಯ ಎಂದು ಕೇಳಿದರು. ನಾನು ಎಪ್ಪತ್ತೋ ಎಂಭತ್ತೋ ಎಂದೆ."

"ಪ್ರಾಯಕ್ಕೇನಾಗಬೇಕು ಹೇಳು. ಎಣಿಸುವುದರೊಳಗೆ ಯುಗಾದಿ ಸರಿದು ಯುಗಾದಿ ಬರುತ್ತದೆ, ಮಳೆಗಾಲ ಕಳೆದು ಮಳೆಗಾಲ ಬರುತ್ತದೆ. ಬೇಡವೆಂದರೂ ಪ್ರಾಯ ನಿಲ್ಲುತ್ತದೆಯೇ?" ಎಂದರು. ಅನಂತರ ಎಳಚಿತ್ತಾಯರ ಕಡೆಗೆ ಮುಖ ತಿರುಗಿಸಿ "ಪ್ರಾಯ ಆಗಲಿಲ್ಲವೇ ನನಗೆ–ತೊಂಬತ್ತರ ಹತ್ತಿರ ಹತ್ತಿರ. ನಿಮ್ಮ ತಂದೆಯವರು ತೀರಿಹೋಗಿ ಎಷ್ಟು ವರ್ಷವಾಯಿತು? ಆಗ ನನಗೆ ಅರವತ್ತೋ, ಅಥವಾ ಸ್ವಲ್ಪ ಹೆಚ್ಚೋ. ಯಾವ ಸಂವತ್ಸರವೆಂದು ಹೇಳಿದರೆ ಲೆಕ್ಕ ಮಾಡಿ ಹೇಳುತ್ತೇನೆ. ಆಯುಷ್ಯ ಎಣಿಸಿ ಮಾಡುವುದೇನಿದೆ? ಅವ ಕರೆಯಿಸಿಕೊಳ್ಳುವ ವರೆಗೆ ಬದುಕುವುದು ಎಂದಳು.

ಎಳಚಿತ್ತಾಯರು ವರ್ಷಗಳನ್ನು ಎಣಿಕೆ ಹಾಕಿದರು. ತಮ್ಮ ತಂದೆ ಸತ್ತು ಎಷ್ಟು ವರ್ಷಗಳಾದುವೆಂದು ಯೋಚಿಸಿ ಹಾಗಿದ್ದರೆ ತೊಂಬತ್ತು ಹೇಗೂ ಆಗಿರಬೇಕು" ಎಂದರು.

ಶಾಂತುವಿಗೆ ಶ್ಯಾನುಭಾಗರಿಂದ ಕಾಫಿ ಸಮ್ಮಾನಕ್ಕೆ ಹುಕುಂ ಆಯಿತು. ಅಲ್ಲಿ ನೆರೆದ ಮನೆಯ ಮಕ್ಕಳು-ಒಂದೆರಡಲ್ಲ, ಆರೋ ಏಳೋ ತಂತಮ್ಮೊಳಗೆ ಏನೇನೋ ಪಿಸು ಮಾತನಾಡುತ್ತಿದ್ದರು. ಆ ಮಾತುಗಳನ್ನು ಕೇಳಿ ಶಂಕರನ ಕಿವಿ ನೆಟ್ಟಗಾಯಿತು. ಮರಾಠಿಯ ಒಂದು ರೂಪಾಂತರವದು ಎಂದನಿಸಿತು. ಮರಾಠಿಬಲ್ಲ ಅವನಿಗೆ ಅದು ಅರ್ಥ ತಿಳಿಯಬಹುದಾದ ರೂಪವಾಗಿ ಕಾಣಿಸಿತು. ಆತ ನಗುತ್ತ "ಕಾಯ್, ತುಮಿ ಫಾರಿ ಮರಾಠಿ

ಬೊಲ್ತಾಕಾ" ಎಂದು ಸಂಭಾಷಿಸತೊಡಗಿದ. ಅವನ ಬಾಯಿಂದ ಬರುತ್ತಿದ್ದ ಚೆನ್ನಾದ ಪುಣೆಯ ಮರಾಠಿಯನ್ನು ಕೇಳಿ ರಂಗರಾಯರಿಗೆ ಆಶ್ಚರ್ಯವೂ ಆಯಿತು, ಸಂತೋಷವೂ ಆಯಿತು. ಮಾತಿನ ಸರಣಿಯಿಂದ ತಮ್ಮ, ಆವನ ನಂಟುತನ ಸಮೀಪದ್ದೆಂಬ ಭ್ರಮೆಯುಂಟಾಯಿತು. ಸಂಭಾಷಣೆ ಮುಂದುವರಿಯಿತು. ಅಜ್ಜಿಯೂ ಮಾತಿನಲ್ಲಿ ಸೇರಿಕೊಂಡಳು. ಶಂಕರನಿಗೆ ಇಷ್ಟೇ ತೊಡಕು–ಶ್ಯಾನುಭಾಗರ ಮನೆಯವರು ಬಳಸುತ್ತಿದ್ದ ಮರಾಠಿ ಭಾಷೆಯ ಗ್ರಾಮ್ಯಸ್ವರೂಪ ತಿಳಿಯಬಹುದಾದರೂ, ಎಡೆ ಎಡೆಯಲ್ಲಿ ಬರುತ್ತಿದ್ದ ಕನ್ನಡ, ತುಳು ಪದಗಳನ್ನು ಅರ್ಥ ಮಾಡಿಕೊಳ್ಳಲು 'ಅದೇನು ? ಅದೇನು ?' ಎಂದು ಪ್ರಶ್ನೆ ಮಾಡಬೇಕಾಗುತ್ತಿತ್ತು.

ಅಷ್ಟರಲ್ಲಿ ಉಪಹಾರಕ್ಕೆ ಸಿದ್ಧವಾಯಿತು. ಕುಳಿತವರ ಮುಂದೆ ಎಲೆ ಹಾಕಿದರು. ಅದರ ತುಂಬ ಅವಲಕ್ಕಿ ಉಸುಳಿ, ಕರಿದ ಹಲಸಿನ ಹಪ್ಪಳ, ಚಕ್ಕುಲಿ, ಹೆಸರು ಹಿಟ್ಟಿನ ಉಂಡೆಗಳು ಬಂದುವು; ಜತೆಗೆ ಬಾಳೆಯ ಹಣ್ಣೂ ಇತ್ತು. ಚಾ ತಂದಿಟ್ಟರು. ಎಳಚಿತ್ತಾಯರು ಅದಾವುದನ್ನೂ ಮುಟ್ಟದೆ ಬಾಳೆಯ ಹಣ್ಣನ್ನಷ್ಟೇ ಮೆಲ್ಲುತ್ತಿದ್ದರು. ಅವರಿಗೆ ಅಂತರಂಗದಲ್ಲಿ ಶ್ಯಾನುಭಾಗರ ಮನೆಯ ತಿಂಡಿ ತಿನ್ನುವ ಇಷ್ಟವಿಲ್ಲ. ಶುದ್ಧ ಶಿವಳ್ಳಿ ಬ್ರಾಹ್ಮಣರವರು. ಜಾತಿ ಕುಲಗಳ ಕಟ್ಟು ಬಹಳ. ಈಗ ಉಭಯ ಸಂಕಟಕ್ಕೆ ಗುರಿಯಾಗಿದ್ದಾರೆ. ಶ್ಯಾನುಭಾಗರಿಗೂ ಅದು ಗೊತ್ತಿದ್ದುದರಿಂದ ಅವರು ಬಲವಂತ ಮಾಡಲಿಲ್ಲ. ಉಪಾಹಾರ ಮುಗಿದ ಮೇಲೆ ರಂಗರಾಯರು ಅವರಿಗೆಲ್ಲ ತಮ್ಮ ಹಳೆಯ ಮನೆ ತೋರಿಸಲು ಹೊರಟರು. ವಿಶಾಲವಾದ ಚೌಕಿಯ ಮನೆ. ನಾಲ್ಕು ಸುತ್ತ ತಟ್ಟಿ ಕಟ್ಟಿದ್ದುದರಿಂದ ಕತ್ತಲು ತುಂಬಿತ್ತು. ಅನಾದಿ ಕಾಲದ ಮನೆ; ಕೋಲುದಪ್ಪದ ಮಣ್ಣಿನ ಗೋಡೆಗಳು, ಹಲಸಿನ ಮರದ ಮುಂಡಿಗೆ, ಬೋದಿಗೆ, ಮುಚ್ಚಿಗೆಗಳು, ಕೆತ್ತನೆಯ ಕೆಲಸದಿಂದ ಚಿತ್ರರಂಜಿತವಾದ ಭಾರಿ ಕಿಟಕಿ ಬಾಗಿಲುಗಳು—ಅವೆಲ್ಲವನ್ನು ತೋರಿಸಿದರು. "ನೀವು ಮೊದಲು ಕುಳಿತ ಹೊರಗಿನ ಚಾವಡಿ ಇದೆಯಲ್ಲ–ಅದು ಒಂದನ್ನೇ ನಮ್ಮ ಅಪ್ಪ ಸೇರಿಸಿದ್ದು. ಅದೂ ಬಹು ವರ್ಷಗಳ ಹಿಂದೆ. ಉಳಿದುವೆಲ್ಲ ತೀರ ಪ್ರಾಕಿನವು. ನೂರಿನ್ನೂರು ವರ್ಷದ ಹಿಂದೆ ಕಟ್ಟಿದ್ದು. ಒಳಗಿನ ಕಟ್ಟಡ ಮೊದಲು ಹೇಗಿತ್ತೋ,

ಈಗಲೂ ಹಾಗೆಯೇ ಇದೆ. ಕಟ್ಟದಮೇಲೆ ಎರಡು ಮೂರಾವರ್ತಿ ಮಾಡು ಅಳಿದು, ಹೊಸ ಬಿದಿರು, ಮಡಲುಹಾಕಿ ಛಾವಣಿ ಮಾಡಿರ ಬಹುದು ನಾವಾಗಿ. ಬೆಳಕು ಸಾಲದು. ಆದರೆ ಅದಕ್ಕೆ ಗೋಡೆ ಒಡೆದು ಒಂದೆರಡು ಕಿಟಕಿ ಬಾಗಿಲು ಹೆಚ್ಚಿಸುವ ಎಂದರೆ ನಮ್ಮ ಅಜ್ಜಿ ಕೇಳುವು ದಿಲ್ಲ. ಒಂದು ಮೂಲೆಯಲ್ಲಿ ದೊಡ್ಡ ಹುತ್ತವೇ ಬೆಳೆದಿದೆ. ಅದನ್ನು ತೆಗೆ ಯುವುದಕ್ಕೂ ಅಜ್ಜಿಗೆ ಇಷ್ಟವಿಲ್ಲ. ಅವರೆನ್ನುತ್ತಾರೆ: " ಹಿರಿಯರು ಮಾಡಿ ದ್ದನ್ನು ಮುಟ್ಟಬಾರದು. ಅವರ ನೆನಪಿಗಾಗಿ ಅದು ಹಾಗೆಯೇ ಇರಲಿ. ನಿನಗೆ ಅದೆಲ್ಲ ಚಂದ ಕಾಣಿಸದಿದ್ದರೆ ನಿನ್ನ ಅಪ್ಪ ಮಾಡಿದ ಹಾಗೆ, ನೀನೊಂದು ಕೋಣೆಯನ್ನೋ ಚಾವಡಿಯನ್ನೋ ಸೇರಿಸು ಎನ್ನುತ್ತಾರೆ. ಪಾಪ, ಅವರಿಗೇಕೆ ಅಸಮಾಧಾನವಾಗಬೇಕೆಂದು ನಾನು ಸುಮ್ಮನಿದ್ದೇನೆ " ಎಂದು ಮನೆಯ ಇತಿಹಾಸ ಬಣ್ಣಿಸಿ ಹೇಳಿದರು.

ರಂಗರಾಯರು ಮನೆ ತೋರಿಸುವಾಗಲೆಲ್ಲ ಮುದುಕಿ ಅವರನ್ನು ಹಿಂಬಾಲಿಸುತ್ತಿದ್ದಳು. ಅವಳ ದೃಷ್ಟಿಯೆಲ್ಲ ಶಂಕರನಮೇಲೆ. ಎಷ್ಟು ಅವನನ್ನು ಕಂಡರೂ ತೃಪ್ತಿ ಬಾರದವಳಂತೆ ಅವನನ್ನೇ ನೋಡುತ್ತಿದ್ದಳು. ಅವಳನ್ನು ಕಂಡು—ಆ ನೀಲ ಕಣ್ಣುಗಳು, ವಿಶಾಲವಾದ ಹಣೆ, ಮೊನಚು ಮೂಗು–ಇವೆಲ್ಲ ಶಂಕರನಲ್ಲೂ ಏನೋ ನೆನಪು ಹುಟ್ಟಿಸುತ್ತಿದ್ದುವು. ಮನೆ ಯನ್ನು ತೋರಿಸಿ ರಂಗರಾಯರು ಹೊರ ಚಾವಡಿಗೆ ಬಂದಾಗ ಶಂಕರ ಹಿಂದೆ ನಿಂತ. ಮುದುಕಿ ಅವನನ್ನು ಸಮೀಪಿಸಿದಳು. ಮೈ ಸವರಿದಳು. ' ಕೂತುಕೋ ಮಗು ' ಎಂದಳು. ಎಳಚಿತ್ತಾಯರ ಮನೆಯಲ್ಲಿ ಶಂಕರನ ವಿಚಾರ ತಿಳಿದು ಬಂದ ರಂಗರಾಯರು ಅಜ್ಜಿಗೆ ಅವನ ಸುದ್ದಿಯನ್ನು ಹೇಳಿ ದ್ದುದರಿಂದ, ಅಪೂರ್ವವಾದ ಮಾತಿನ ತೃಷೆ ಅವಳಲ್ಲಿ ಮೂಡಿತ್ತು. ಅವ ನನ್ನೇ ದಿಟ್ಟಿಸಿ ನೋಡಿದ ಆ ಮುದುಕಿಯು ಕೇಳಿದ ಮೊದಲನೇ ಪ್ರಶ್ನೆ ಯೆಂದರೆ " ದತ್ತು ಮೊಮ್ಮಗನೇ ನೀನು ? " ಎಂಬುದು.

" ಹೌದು " ಎಂದ ಶಂಕರ. ಆತ ತುಸು ಹೊತ್ತು ತಡೆದು, ನಿಂತು, ಮಾತು ಮುಂದುವರಿಸಿದ. " ನನ್ನ ಅಜ್ಜನನ್ನು ಕಂಡ ನೆನಪು ನನಗಿಲ್ಲ. ಅವರು ತೀರಿಕೊಂಡಾಗ ನಾನು ಸಣ್ಣವನಿದ್ದೆ. ನಾವು ಆಗ ಮುಂಬಯಿ ಯಲ್ಲಿದ್ದೆವು. ನನಗೆ ಆಗ ಎರಡು ವರ್ಷವೋ ಏನೋ. ನಿಮಗೆ ಗೊತ್ತೇ

ಅವರದ್ದು ? ನಮಗೆ ಈಗ ಊರೆಂಬುದಿಲ್ಲ. ಮೊದಲು ಮುಂಬಯಿಯಲ್ಲಿದ್ದೆವು. ಈಗ ದಿಲ್ಲಿಯಲ್ಲಿದ್ದೇವೆ. ಇನ್ನು ಎಲ್ಲಿಯೋ ಏನೋ. ನನಗೊಂದು ಆಸೆಯಾಯಿತು—ನಮ್ಮ ಕುಲದ ಊರು, ಜನ ಇದ್ದಾರೆಯೇ, ಇದ್ದರೆ ಕಾಣಬೇಡವೇ–ಎಂದು. ಅದು ಬಂಗಾಡಿ ಎಂದು ತಿಳಿದ ಮೇಲೆ, ಅದನ್ನು ನೋಡುವ ಎಂಬ ಆಸೆಯಿಂದ ಇಲ್ಲಿಗೆ ಬಂದೆ. ನಮ್ಮ ಮನೆ ಮಾತು ಮರಾಠಿ. ಹಿಂದೆ ಏನಿತ್ತೋ ಗೊತ್ತಿಲ್ಲ. ಇಲ್ಲಿಗೆ ಬಂದ ಮೇಲೆ, ನಿಮ್ಮ ಮಾತನ್ನು ಕೇಳಿದ ಮೇಲೆ, ಅದೂ ಇಂಥ ಒಂದು ತರಹದ ಮರಾಠಿ ಇರಬೇಕು ಎಂದನಿಸಿತು. ಏನೂ ಆಗಲಿ, ಹಿರಿಯರ ಊರನ್ನು ಕಂಡೆನಲ್ಲ ಅದರಿಂದ ಎಷ್ಟೋ ಸಂತೋಷ ನನಗೆ " ಎಂಬ ಭಕ್ತಿಯನ್ನು ಮಾತಿನಲ್ಲಿ ಸುರಿಸಿದ.

ಮುದುಕಿ ಅವನನ್ನೇ ದಿಟ್ಟಿಸುತ್ತ ಮಾತಿಲ್ಲದೆ ಕುಳಿತಳು. ಏನು ಹೇಳಬೇಕೆಂದು ತೋಚುತ್ತಿತ್ತೋ ಅವಳ ಮನಸ್ಸಿಗೆ–ಅವಳೇ ಬಲ್ಲಳು. ವಾಕ್ಸರಣಿ ಗಂಟಲಲ್ಲಿ ತಡೆದು ನಿಂತಿತು. ಎಳೆತನದ ಸ್ಮರಣೆಗಳು ಹಚ್ಚ ಹಸುರಾಗಿ ಅವಳ ಕಣ್ಮುಂದೆ ನಲಿದಾಡತೊಡಗಿದುವು. ಅದರ ಮಗ್ಗುಲಲ್ಲೇ ಶಂಕರನ ಎಳೆಯ ಮುಖ ಬಿಂಬಿಸಿತು. ತನ್ನ ಹಿರಿಯಣ್ಣನ ಎಳೆತನದ ರೂಪ, ಬಹು ಹಿಂದೆ ಕಂಡು ವಿಸ್ಮೃತಿಗೊಂಡದ್ದು, ಈಗ ಜಾಗೃತವಾಗಿ ಶಂಕರನ ಬಿಂಬವನ್ನೇ ಹೋಲುತ್ತಿದೆಯಲ್ಲ–ಎಂಬ ಭಾವನೆ, ಅವಳ ಎದೆಯಲ್ಲಿ ತುಂಬಿತು. ಅವಳೆಂದ ದತ್ತು ಈ ದತ್ತಮೂರ್ತಿ. ಅವಳ ಕಳೆದುಕೊಂಡ ಅಣ್ಣ. ಅಣ್ಣನ ನೆರವಿನಿಂದ ತನ್ನ ಬಾಳಿನ ಹಲವು ದುಃಖಾನುಭವಗಳು ಚಿಮ್ಮಿ ಹರಿಯತೊಡಗಿದವು. ಎಂದೋ ಕಳೆದುಕೊಂಡ ನೆನಪಿನ ಉಗ್ರಾಣದಿಂದ, ಕಣ್ಮರೆಯಾದ ಕುಲದ ಸೆರಗನ್ನು ಇಷ್ಟು ದೀರ್ಘಕಾಲದ ಬಳಿಕ ತಾನು ಕಂಡೇನು—ಕಾಣಲು ಶಕ್ಯ ಎಂಬ ಊಹೆಯೂ ಅವಳಿಗಿರಲಿಲ್ಲ. ಈಗ ಆ ಸತ್ಯ ಕಾಣಿಸುತ್ತಿದೆ—ಎಂದೆನಿಸಿತು. ಅವಳು ಒಂದೇ ಮನೆಯಲ್ಲಿ ಹುಟ್ಟಿ ಬೆಳೆದವಳು; ಅವಳ ಅಣ್ಣನೂ ಅಲ್ಲಿಯೇ ಅಂಬೆಗಾಲಿಕ್ಕಿದವನು. ಅವರಿಬ್ಬರೊಳಗೆ ಹತ್ತಿಪ್ಪತ್ತು ವರ್ಷಗಳ ಅಂತರ. ಅಣ್ಣನ ಹೆಗಲನ್ನೇರಿ ಕುಳಿತು ನಲಿದಾಡಿದ ನೆನಪೂ ಹುಟ್ಟುತ್ತಿದೆ. ಅವರಿಬ್ಬರ ಎಡೆಯಲ್ಲಿ ಇನ್ನಿಬ್ಬರು ಅಕ್ಕಂದಿರೂ ಇದ್ದರು. ಅವರು ಲಗ್ನವಾಗಿ ಹೋದರು.

ವಿಧಿ ವಿಲಾಸದಿಂದಾಗಿ ಎಂದೋ ತೀರಿಕೊಂಡರು.

ಅವಳ ಸೋದರ ಮಾವ ರಂಗರಾಯರ ಅಜ್ಜ. ಅವಳ ಮನೆ ಅವಳದ್ದಲ್ಲದೇ ಹೋಯಿತು. ದತ್ತಮೂರ್ತಿ ಎಳೆಯನಾಗಿರುವಾಗ ಊರು ಬಿಟ್ಟು ಹೋದ. ಯಾಕೆ ಹೊರಟ–ಏನು–ಎಂಬುದರ ಅರಿವು ಅವಳಿಗೆ ಮಸಕು ಮಸಕು. ಆದರೆ ಅವೆಲ್ಲ ತೀರ ಕಹಿ ನೆನಪುಗಳೆಂದು ಬಲ್ಲಳು. ಈಗ ನೆನೆದರೂ ಏನೊಂದೂ ಹೊಳೆಯುವುದಿಲ್ಲ.

ಅವಳಿಗೆ ಮದುವೆಯಾಯಿತು. ಆಗ ಅವಳಿಗೆ ಹತ್ತು ವರ್ಷವಿತ್ತು. ಕಾರ್ಕಳದ ಕುಟುಂಬವೊಂದನ್ನು ಸೇರಿದಳು; ಗಂಡ ತೀರಿಕೊಂಡುದರಿಂದ ಸೌಭಾಗ್ಯ ಕಳೆದುಕೊಂಡು ತಿರುಗಿ ತವರನ್ನು ಸೇರಬೇಕಾಯಿತು. ಈ ಅತ್ಯಲ್ಪ ಕಾಲದಲ್ಲಿ ತಾಯಿ, ತಂದೆ ತೀರಿಕೊಂಡರು. ಅಣ್ಣನಿಗೂ ಮಾವನಿಗೂ ಆಣೆ ಭಾಷೆಗಳಾಗಿ ಅಣ್ಣ ಊರು ಬಿಟ್ಟನೆಂದು ಅವಳು ಕೇಳಿದ ಒಂದು ಸುದ್ದಿ. ಹಾಗಲ್ಲ, ಉದ್ಯೋಗವನ್ನರಸಿ ಎಲ್ಲಿಯೋ ಹೋದನೆಂಬುದು ಇನ್ನೊಂದು ಸುದ್ದಿ. ಎಳೆಯಳಾಗಿದ್ದ ಅವಳಿಗೆ, ಅದರ ಸಂಪೂರ್ಣ ವಿಚಾರ ಗೊತ್ತಿಲ್ಲ. ಅವಳಿಗೆ ತಿಳಿದುದಿಷ್ಟು–ಅಣ್ಣ ಊರು ಬಿಟ್ಟು ಹೋದನು, ಅವನಿಂದ ಯಾವ ಸುದ್ದಿಯೂ ಊರಿಗೆ ಬರಲಿಲ್ಲ. ಹೋದವನು ಹೋದನೇ—ಎಂದು. ಗಂಡ ತೀರಿಕೊಂಡ ಕಾಲಕ್ಕೆ ಬರೆಸಿದ ಕಾಗದವೂ ಅವನಿಗೆ ಮುಟ್ಟಲಿಲ್ಲ. ಆ ಕಾಗದ ಅವನಿಗೆ ಸೇರಿದ್ದರೆ ತನ್ನನ್ನು ಕರೆದೊಯ್ಯುತ್ತಿದ್ದ—ಎಂದು ಅವಳ ನೆನಪು. ಮುಂದೆ ಅವಳಿಗೆ ತವರು ಮನೆಯ ಋಣ ಸಿಗಲಿಲ್ಲ. ಸೋದರಮಾವನ ಆಶ್ರಯದಲ್ಲಿ ಅವಳು ಬೆಳೆದಳು. ಅವಳ ಮನೆ ಸೋದರಮಾವನ ಮನೆಯೇ ಆಗಿದೆ. ಆದರೆ ಅವಳ ಪಾಲಿಗೆ, ಅಂದಿನಿಂದ ಇಂದಿನ ತನಕ ಮನೆ ಅವಳದ್ದೇ ಆಗಿದೆ. ಆ ನೆಲದ ಋಣ ಅವಳ ಹಣೆಯಲ್ಲಿ ಬರೆದಂತೆ ಅವಳ ಅಣ್ಣನ ಹಣೆಯಲ್ಲಂತು ಬರೆದಿರಲಿಲ್ಲ. ಮನದಲ್ಲಿ–ತಾನು ಇಷ್ಟು ಕಾಲ ಬದುಕಿದ್ದೇನೇಕೆ—ಎಂದು ನೆನೆದರೆ ಅವಳಿಗೇನೇ ಸೋಜಿಗವಾಗುತ್ತದೆ. ಹೆತ್ತವರ ಅಕ್ಕರೆಯನ್ನು ಅವಳು ಕಾಣದೆ ಹೋದರೂ, ಅವಳ ಭಾಗ್ಯದಿಂದ ಕುಲದ ಅಕ್ಕರೆ ದೊರೆಯಿತು. ಆದರೂ ದೀರ್ಘವಾದ ಅವಳ ನಿಸ್ಸಾರ ಬಾಳಿನಲ್ಲಿ ತಾನು ಬದುಕಿರಬೇಕೇಕೆ ?–ಎಂದು ಹೊಳೆಯದಿರಲಿಲ್ಲ.

ದೇವರು ತನ್ನನ್ನು ಏತಕ್ಕೆ ಸೃಷ್ಟಿಮಾಡಿಸಿದ್ದಾನೋ ಎಂದು, ತನಗೆ ತಾನೇ ಪ್ರಶ್ನೆಮಾಡಿಸಿಕೊಳ್ಳುತ್ತಿದ್ದ ಅವಳಿಗೆ ಉತ್ತರ ದೊರೆತಿರಲಿಲ್ಲ. ಈಗ ದೊರೆತಿದೆ. ಆದರೆ ಅದನ್ನು ನಂಬುವುದಕ್ಕೆ ಬರಲಾರದು. ಕಣ್ಣುಮುಂದೆಯೇ ಆ ಪ್ರತ್ಯುತ್ತರವಿದೆ. ಮಾತು ಮೀರಿದ ಆ ಗಳಿಗೆಯಲ್ಲಿ, ಮುದುಕಿಯ ಕಣ್ಣುಗಳಿಂದ, ಕಟ್ಟೊಡೆದ ನದಿಯಂತೆ ಕಂಬನಿ ಸುರಿಯತೊಡಗಿತು! ಅದನ್ನು ಕಾಣುತ್ತಿದ್ದ ಶಂಕರ ವಿಸ್ಮಯಕ್ಕೊಳಗಾದ. ಇಷ್ಟು ಕಾಲದ ಬಳಿಕವೂ ಆ ಹಿರಿಯ ಜೀವಕ್ಕೆ ತನ್ನ ಕುಲದ ಪ್ರಾಚೀನ ಸ್ಮರಣೆಗಳು ಮರೆತುಹೋಗಿಲ್ಲ—ಎಂದನಿಸಿತು. 'ದತ್ತುವಿನ ಮೊಮ್ಮಗ' ಎಂಬ ಒಂದೇ ಮಾತಿನ ಸೆರಗನ್ನು ಹಿಡಿದುಕೊಂಡು ಏನೇನು ಕನಸು ಕಟ್ಟುತ್ತಿದ್ದಳೋ ಎಂಬುದನ್ನು ನೆನೆಯದಾದ. ಅವನ ಮನದಲ್ಲಿ ತನ್ನ ತಂದೆ ತಾಯಿಯರನ್ನು ಕುರಿತು ಉಂಟಾಗದ ಅಭಿಮಾನ ಆಕೆಯ ವಿಷಯದಲ್ಲಿ ಉಕ್ಕತೊಡಗಿತು. ಅವಳಾರೆಂಬುದು ಇನ್ನೂ ಅವನಿಗೆ ತಿಳಿಯದ ಸಂಗತಿ. ಆದರೆ ತನ್ನ ಮನದ ಬಯಕೆಗೊಂದು ಆರಾಧ್ಯದೇವತೆಯಾಗಿ ಕಾಣಿಸಿದಳು ಅವಳು. "ಯಾಕೆ ಅಳುತ್ತೀರಿ?" ಎಂದು ಕೇಳಿದ ಶಂಕರ.

"ಅತ್ತೆನೇ?" ಎಂದು ತನ್ನ ಕಪೋಲಕ್ಕೆ ಕೈಬೆರಳುಗಳನ್ನು ಸವರಿದರೆ, ತನಗೆ ಅರಿವಿಲ್ಲದಂತೆ ಸುರಿಯುತ್ತಿದ್ದ ಕಂಬನಿ ತಾಗಿತು. ಅಳುವಿನ ಧ್ವನಿಯಲ್ಲೇ ನಕ್ಕಳು. "ಮಗು, ಇನ್ನೊಂದು ಕ್ಷಣಕ್ಕೆ ನನ್ನ ಜೀವ ಹಾರಿಹೋದರೆ ನನಗಿಷ್ಟೂ ಬೇಸರವಾಗದು. ಈ ಗಳಿಗೆಗಾಗಿಯೇ ದೇವರು ನನ್ನನ್ನು ಉಳಿಸಿಕೊಂಡು ಬಂದ ಎಂದು ತೋರುತ್ತಿದೆ. ಯಾಕೆ—ಎಲೆ ಉದುರಿದ ಮರದ ಕೊರಡಿನಂತೆ ಇಷ್ಟುಕಾಲ ಬದುಕಿದ್ದೇನೆ—ಎಂದೆನಿಸುತ್ತಿತ್ತು ಈ ತನಕ. ತಿಳಿಯಿತು. ನಾನು ಬದುಕಿದ್ದೇ ದತ್ತಣ್ಣನ ಮೊಮ್ಮಗುವಾದ ನಿನ್ನನ್ನು ಕಾಣುವಂಥ ಯೋಗವಿದ್ದುದಕ್ಕೆ" ಎಂದಳು. ಶಂಕರನೂ ಗದ್ಗದಿತನಾದ. ಅರಿವಿಲ್ಲದೆ ಮುದುಕಿಯ ಬಳಿಗೆ ಸರಿದು ಹೋಗಿ ಕುಳಿತ. ತನ್ನ ಕೋಮಲ ಕರಗಳಿಂದ ವಯಸ್ಸಿನಿಂದ ಇನ್ನೂ ಕೋಮಲವಾಗಿದ್ದ ಅವಳ ಪಾದಗಳನ್ನು ಸವರಿದ. ಮೈ ಕಾವು ಪಡೆಯಿತು; ಶರೀರದಲ್ಲಿ ವಿದ್ಯುತ್ ಸಂಚಾರವಾದಂತಾಯಿತು! ನೆಟ್ಟ ದೃಷ್ಟಿಯಿಂದ ಅವಳನ್ನೇ ನೋಡಿದ. ಆ ಒಂದು ಗಳಿಗೆ ದೇವತೆಗಳೂ ಅಸೂಯೆ ಪಡಬೇ

ಕಾದ ಗಳಿಗೆ ಎನಿಸುವಂತಿತ್ತು. ಶಂಕರನ ಮನಸ್ಸಿನಲ್ಲಿ ತನ್ನ ಯಾವತ್ತು ಚಂಚಲಭವಿಷ್ಯಕ್ಕೆ, ಅದು ಸ್ಥಿರವಾದ ದಾರಿಯನ್ನೂ, ದಿಕ್ಕನ್ನೂ ತೋರಿಸು ವಂತೆ ಕಂಡಿತು.

## ಅಧ್ಯಾಯ ೫

ಶಂಕರನ ಅಜ್ಜಿಗೆ ಅವನನ್ನು ನಾಲ್ಕು ದಿನಕಾಲ ಮನೆಯಲ್ಲಿ ನಿಲ್ಲಿಸಿ ಕೊಳ್ಳಬೇಕೆಂಬ ಹಂಬಲವಿತ್ತು. ಸೀತಾರಾಮು ಜತೆಗಿದ್ದುದರಿಂದ ಆತ ಅದಕ್ಕೆ ಒಡಂಬಡಲಾರ. ಆದುದರಿಂದ "ನಾಳೆ ಖಂಡಿತ ಬರುತ್ತೇನೆ; ಒಂದೆರಡು ದಿನವಾದರೂ ನಿಮ್ಮಲ್ಲಿದ್ದು ಹೋಗುತ್ತೇನೆ" ಎಂದು ಭರವಸೆ ಕೊಟ್ಟು, ಹೊರಟು ಹೋದ. ಹೋದ ಮರುದಿನ, ಬೆಳಗಾಗುತ್ತಲೇ, ಗೆಳೆಯರಿಬ್ಬರೂ ಇನ್ನೊಮ್ಮೆ ನದಿಯನ್ನು ದಾಟಿ, ಮೊದಲ ದಿನ ತುಳಿದ ಜಾಗವನ್ನು ತಿರುಗಿ ನೋಡಲು ಹೋದರು. ಶಂಕರನ ಮನ ಆ ತಾವನ್ನೆಲ್ಲ ಇನ್ನೊಮ್ಮೆ ನಿರೀಕ್ಷಿಸಿಕೊಂಡು ಬರಬೇಕೆಂಬುದರಲ್ಲಿತ್ತು. ಅವನ ಮನಸ್ಸಿನಲ್ಲಿ–'ಆ ತಾವು ಇಂದು ಯಾರ ವಶದಲ್ಲಿದೆ? ಯಾರು ಅದಕ್ಕೆ ಒಡೆಯರು? ಎಂದು ತಿಳಿಯುವ ಕುತೂಹಲ ತಾಳಿತ್ತು. ಅಂಥ ಕುತೂಹಲ ಸೀತಾರಾಮನ ಮನಸ್ಸಿನಲ್ಲಿಲ್ಲ "ನೋಡಿದ್ದನ್ನೇ ತಿರುತಿರುಗಿ ಏನನ್ನು ನೋಡುವುದು? ನಾಳೆ ಬೇಕಾದರೆ ಹೋಗುವ. ಈ ಹೊತ್ತು ದಕ್ಷಿಣ ದಿಕ್ಕಿಗೆ ಹೋಗುವ. ದಕ್ಷಿಣದಲ್ಲೂ ಆ ಬೆಟ್ಟು ಒಂದೆರಡು ಫರ್ಲಾಂಗು ದೂರ ಚಾಚಿದೆಯಲ್ಲ. ಅದನ್ನು ನಾವು ಕಂಡಿಲ್ಲ" ಎಂದುದರಿಂದ, ಪ್ರಯಾಣದ ದಿಕ್ಕನ್ನು ಬದಲಿಸಿ ಹೊರಟರು. ತುಸು ಮುಂದುವರಿದು ಹೋದರೆ, ಆ ಬೆಟ್ಟಿಗೆ ಅಡ್ಡವಾಗಿ ಒಂದು ಗುಡ್ಡದ ಸೆರಗು ಬಂದಿತು. ನದಿಯೂ ತನ್ನ ಮುಖ ತಿರುಗಿಸಿಕೊಂಡು, ಗುಡ್ಡದ ಮಗ್ಗುಲನ್ನು ಅನುಸರಿಸಿ ಮುಂದುವರಿಯುತ್ತದೆ. ಹೀಗಾಗಿ ಅವರಿಬ್ಬರು–ಗುಡ್ಡ ಬರುತ್ತಲೇ, ತಿರುಗಿ ನದಿಯನ್ನಿಳಿದರು. ಅದರ ಮರಳನ್ನೂ, ಕಲ್ಲುಗಳನ್ನೂ ತುಳಿಯುತ್ತ ತುಸು ದೂರ ಸಾಗಿದರು. ಮಳೆ ಬಂದು, ಹಳ್ಳ ತುಂಬಿದಾಗಲಾದರೆ, ಇಂಥ ಆಟಗಳಾವುವೂ ಸಾಗವು. ಆಗ ನದಿಯ ನೀರು ಉಕ್ಕಿ ಹರಿಯುತ್ತದೆ. ಆ ಒಂದು ವಾರದಿಂದ ಊರಲ್ಲಿ ಅಷ್ಟೊಂದು ಮಳೆ ಬಿದ್ದಿರಲಿಲ್ಲ. ಹೀಗಾಗಿ ನದಿಯ ದಂಡೆಯಲ್ಲಿ ಪಯಣ ಸಾಧ್ಯವಾಯಿತು. ಹಾಗೆಯೇ ಮುಂದುವರಿದು, ಆ ಗುಡ್ಡದ ಸೆರಗನ್ನು ದಾಟದ ಬಳಿಕ, ತಿರುಗಿ ನದಿಯ ಪೂರ್ವ

ದಂಡೆಯನ್ನು ಏರಿದರು. ಅಲ್ಲಿನ ನೋಟ ಬೇರೆಯೇ ಆಗಿತ್ತು. ರಾಡಿ ತುಂಬಿದ ಗಾಡಿಯ ಹಾದಿಯೊಂದು, ಆ ಪ್ರದೇಶದಲ್ಲಿ ದಕ್ಷಿಣಾಭಿಮುಖ ವಾಗಿ ಹೋಗುತಿತ್ತು. ಅದನ್ನು ಹಿಡಿದು ಇವರು ಸಾಗಿದರು ; ಆ ದಾರಿಯ ಇಕ್ಕಡೆಗಳಲ್ಲೂ ಗುಡ್ಡದ ಸಾಲುಗಳಿದ್ದುವು. ಎಲ್ಲಿ ನೋಡಿದರಲ್ಲಿ ಹೊಸ ತಾಗಿ ಚಿಗುರಿದ ಪೊದೆಗಳು ತುಂಬಿದ್ದುವು. ದೊಡ್ಡ ದೊಡ್ಡ ಮರಮಟ್ಟು ಗಳಿರಲಿಲ್ಲ. ಅವುಗಳನ್ನು ಕಡಿದು, ನಿರ್ಮೂಲಮಾಡಿ. ಉಳಿದ ದಿಂಡು ಗಳು ಅಲ್ಲಿ ನೂರಾರು ಕಾಣಿಸುತ್ತಿದ್ದುವು. ಒಂದೆರಡು ವರ್ಷಗಳ ಹಿಂದೆ, ಅದು ಹಿರಿಯ ಅರಣ್ಯವಾಗಿರಬೇಕು. ಈಗ ಬರಿಯ ಕುರುಹಷ್ಟೇ ಕಾಣಿ ಸುತ್ತದೆ. ಮೂಡಣಕ್ಕೆ ಆ ಗುಡ್ಡಗಳು, ಬಲು ದೂರದ ತನಕ, ಬೋಳಾಗಿ ಕಾಣಿಸುತ್ತಿದ್ದುವು. ಇನ್ನೂ ಮೂಡಣಕ್ಕೆ ಕಡಿಯದಂಥ ದಟ್ಟನಾದ ಕಾಡು ಕಾಣಿಸುತ್ತಿತ್ತು.

ಶಂಕರ, ಸೀತಾರಾಮರು ಕುತೂಹಲದಿಂದ. ಗುಡ್ಡದ ಬೆನ್ನೊಂದನ್ನು ಏರಿ, ದನಕರುಗಳು ಓಡಾಡಿದ ಹೆಜ್ಜೆಯ ಜಾಡನ್ನು ಅನುಸರಿಸಿ, ಮೇಲ ಮೇಲಕ್ಕೇರಿದರು, ಪಯಣವು ನಿಧಾನವಾಗಿ ಸಾಗಿತು. ಆಚೀಚಿನ ಪೊದೆ ಗಳು ಮೈ ಸವರುತ್ತಿದ್ದುವು. ದಾರಿ ತೀರ ಅಂಕುಡೊಂಕಾಗಿತ್ತು, ಊರಿದ ಕಾಲು ಮೇಲಿಂದ ಮೇಲೆ ಜಾರುತಿತ್ತು. ಆದರೂ ಹಟ ಸಾಧಿಸುತ್ತ ಬೆಟ್ಟದ ಮೇಲೆ ಹೋಗಿ ನಿಂತರೆ, ಆಚೀಚೆ ನೋಡಿದರೆ, ಬಂಗಾಡಿಯ ವಿಶಾಲವಾದ ನೋಟ ಕಾಣಿಸುತ್ತಲಿತ್ತು. ಕೆಳಗಡೆ ಹರಿಯುವ ಹಳ್ಳ, ಹಳ್ಳಕ್ಕೆ ತಾಗಿ ರುವ ಬಯಲು, ಇವರು ಮೆಟ್ಟಿ ಬಂದ ಮೈದಾನು, ಹಳ್ಳದಾಚೆಗಿನ ಬಯಲು, ಅಲ್ಲಿನ ತೆಂಗಿನ ಮರಗಳು, ಅದಕ್ಕೂ ದೂರದಲ್ಲಿ ಎಳಚಿತ್ತಾಯರ ಮನೆ–ಇಷ್ಟೆಲ್ಲ ಒಂದು ಮಗ್ಗುಲಿನಲ್ಲಿ ಕಾಣಿಸಿದುವು ; ಇನ್ನೊಂದು ಕಡೆ ಕಾಡು ಕಡಿದು ಬರಿದಾದ ಗುಡ್ಡಗಳು ; ಪೊದೆ ತುಂಬಿದ ಗುಡ್ಡಗಳು. ಮತ್ತೊಂದು ಕಡೆ, ಇವರ ಕಾಲು ಬುಡದಿಂದಲೇ ಕೆಳಗಿಳಿಯುವ ಬರಿ ದಾದ ಕಣಿವೆ. ಅಲ್ಲೂ ಒಮ್ಮೆ ದಟ್ಟನಾದ ಕಾಡು ಬೆಳೆದಿದ್ದ ಕುರುಹು ಕಾಣಿ ಸುತ್ತಿತ್ತು. ಹೊಸ ಪೊದೆಗಳು ಚಿಗುರಿಕೊಂಡಿದ್ದುವು. ಕಣಿವೆಯು ತಳ ನೂರಾರು ಎಕ್ರೆಗಳಷ್ಟು ವಿಶಾಲವಾಗಿ ಹರಡಿತ್ತು, ಮೇಲಿನ ಎತ್ತರದ ಪರ್ವತಾವಳಿಯಿಂದ, ನೀರಿನ ಸಾಲುಗಳು ಹರಿದು, ಆರ್ಭಟಿಸುತ್ತ ನಕ್ಕು

ನೊರೆಯಾಗುತ್ತ, ಅಲ್ಲಲ್ಲಿ ಕಲೆತು ಹರಿಯುತ್ತಿದ್ದ ನೋಟ ಅತಿ ಸುಂದರ ವಾಗಿತ್ತು. "ಕೃಷಿ ಮಾಡುವವರಿದ್ದರೆ ಇದು ಎಷ್ಟು ಚೆನ್ನಾದ ತಾವು" ಎನಿಸುತ್ತಿತ್ತು ಶಂಕರನಿಗೆ. "ಸೀತಾರಾಮ, ಇಲ್ಲಿ ಮನುಷ್ಯರ ಸುಳಿವೇ ಇಲ್ಲ ವೆನ್ನುತ್ತೀಯಾ? ಕೃಷಿಗಾಗಿಯೇ ಯಾರೋ, ಇಷ್ಟೆಲ್ಲ ಕಾಡು ಸವರಿರಬೇಕು. ಈ ಕೆಳಗಿನ ಕಣಿವೆಯೊಂದೇ, ಬಹು ಸುಂದರವಾದ ಕೃಷೀ ವಲಯವಾಗ ಬಹುದು" ಎಂದು ಉದ್ಗರಿಸಿದ ಆತ.

"ಕೃಷಿಗಾಗಿ ಯಾರು ಇಲ್ಲಿ ಕಾಡನ್ನು ಸವರುತ್ತಾರೆ? ಸವರಿ ಮಾಡಿದ, ಒಮ್ಮೆ ಉತ್ತು ಬಿತ್ತಿದ, ಹೊಲಗದ್ದೆಗಳೇ ಹಾಳುಬಿದ್ದಿರುವಂಥ ಊರಿನಲ್ಲಿ! ಪ್ರಾಯಶಃ ಯುದ್ಧ ಪ್ರಯತ್ನಕ್ಕಾಗಿ ಸರಕಾರಕ್ಕೆ ಮರ ಬೇಕಾ ಗಿತ್ತು. ಅದಕ್ಕಾಗಿ ಕಾಡುಗಳನ್ನು ಕಡಿದಿರಬೇಕು. ಸಮೀಪದಲ್ಲೆಲ್ಲಿ ಯಾದರೂ ರಾಜಮಾರ್ಗ ಇರಬಹುದು. ಅದರಿಂದ ಈ ಕಾಡುಗಳನ್ನು ಬೋಳಿಸಿದರು. ಇನ್ನು ಎರಡು ಮೂರು ವರ್ಷ ಹೋದರೆ, ಈ ಸ್ಥಳ ಹೀಗಿರುವುದಿಲ್ಲ. ಮನುಷ್ಯ ಕಾಲಿಡುವುದಕ್ಕೆ ಅಸಾಧ್ಯವಾದಂಥ ಕಾಡಾ ಗುತ್ತದೆ—ತಿರುಗಿ. ಅಲ್ಲದೆ ನೋಡು, ಇಂಥಲ್ಲಿ ಕಾಡು ಕಡಿದು, ಬೇರೇ ನಾದರೂ ಕೂಡಲೆ ನಡದೆಹೋದರೆ, ದಟ್ಟನಾದ ಪೊದೆಗಳು ತುಂಬಿ ಕೊಳ್ಳುತ್ತವೆ. ಹುಲಿ, ಚಿರತೆಗಳಿಗೆ ಇದು ಬಹು ಒಳ್ಳೆಯ ಬಿಡಾರವಾಗು ತ್ತದೆ. ಇದೆಲ್ಲ ಸರಕಾರಿ ಕಾಡುಗಳಿರಬೇಕು. ಇಂಥಲ್ಲಿ ಹುಲಿಗಳ ಸಂಖ್ಯೆ ಹೆಚ್ಚಿದ್ದರೆ, ಆಚಿನ ಬಯಲಿನ ನಿವಾಸಿಗಳು ದೇವರಿಗೆ ಮೊರೆಯಿಟ್ಟ ರಾಯಿತು. ಹುಲಿಗಳು ಬಂದು, ಹಗಲಿಗೇನೆ ಮೇಯಲು ಬಿಟ್ಟ ದನಕರು ಗಳನ್ನು ಎತ್ತಿಕೊಂಡು ಹೋಗುತ್ತವೆ. ಆದರೆ ರೈತರ ಗೋಳನ್ನು ಕೇಳ ಬೇಕು ಯಾರು?"

ಶಂಕರ ಈ ಎಲ್ಲ ದೃಷ್ಟಿಗಳಿಂದ ಯೋಚನೆಮಾಡಿದವನಲ್ಲ. ನಿಸರ್ಗದ ಬೆಡಗು ಅವನನ್ನು ಮಂಕುಗೊಳಿಸಿತ್ತು. ನೆಲದ ಆಸೆ ಅವನನ್ನು ಸೆರೆ ಹಿಡಿದಿತ್ತು. ಆದರೆ ಅವುಗಳ ಜತೆಗೇ ಕಟ್ಟಿಟ್ಟ, ಗುಡ್ಡಗಾಡಿನ ನಿಜವಾದ ಭವಣೆ, ಅವನಿಗೇನು ತಿಳಿಯಬೇಕು?

ನಡೆದು ಬಂದು ಬಹು ಹೊತ್ತಾಗಿತ್ತು; ಸೀತಾರಾಮ ಕೈಗಡಿಯಾರ ನೋಡಿದ. ಗಂಟೆ ಹತ್ತಾಗಿತ್ತು. ಇನ್ನು ಮನೆಗೆ ಹೋಗಲು ಒಂದು

ತಾಸಾದರೂ ಬೇಕು. "ಹೊತ್ತಾಯಿತು, ಪುಣ್ಯಕ್ಕೆ ಈ ಹೊತ್ತು ಕಾಫಿ ಕುಡಿದೇನೆ ಹೊರಟದ್ದೇವೆ. ಇಲ್ಲದೆ ಹೋಗಿದ್ದರೆ ಎಳಚಿತ್ತಾಯರು ನಮ್ಮನ್ನು ಹುಲಿ ಹಿಡಿಯಿತೆಂದು ತಿಳಿದಾರು" ಎಂದ ಮೇಲೆ, ಶಂಕರ ಮನಸ್ಸನ್ನು ಹಿಂದೆಗೆಯಲಾರನಾದರೂ, ಮೈಯನ್ನು ಹಿಂದೆಗೆಯಬೇಕಾಯಿತು. ಇಬ್ಬರೂ ಏರಿದ ಬೆಟ್ಟವನ್ನು ತಿರುಗಿ ಇಳಿಯತೊಡಗಿದರು. "ಬಂದ ದಾರಿಯಲ್ಲೇ ಹೋಗುವುದಲ್ಲವೇ" ಎಂದು ವಿಶ್ವಾಸಪಟ್ಟು ಇಳಿದರು—ಮಾತನಾಡುತ್ತ. ಮುಂದೆ ಮುಂದೆ ಮಾತಿನಲ್ಲೇ ತಲ್ಲೀನರಾದುದರಿಂದ, ನಡುವೆ ದಾರಿ ತಪ್ಪಿದುದರ ಪರವೆ ಉಂಟಾಗಲಿಲ್ಲ. ತುಸು ದೂರ ಇಳಿದ ಮೇಲೆ ಎಚ್ಚರವಾಯಿತು. ಸಾಕಷ್ಟು ಗುಡ್ಡ ಇಳಿದಿದ್ದಾರೆ, ಆಗ ಅಚೀಚಿನ ಭೂಮಿಯನ್ನು ಗುರುತಿಸುವುದು ಕಷ್ಟವಾಯಿತು. ಸೀತಾರಾಮನೆಂದ "ದಾರಿ ತಪ್ಪಿತೆಂದು ಕಾಣುತ್ತದೆ. ಆಗಲಿ—ನೆಟ್ಟಗೆ ಇಳಿದು ಹೋದರೆ ಹೊಳೆ ಸಿಗಲೇಬೇಕಲ್ಲ. ಆ ಬಳಿಕ ನದಿಯ ಸೆರಗು ಹಿಡಿದು ಮೇಲೇರುವ" ಎಂದು ನಿರ್ಧರಿಸಿ, ಹಾಗೆಯೇ ಹೊರಟರು. ಬಲ್ಲೆಗಳಿಂದ ಪರಚಿಸಿಕೊಂಡು, ಅವುಗಳ ಎಡೆಯಲ್ಲಿ ಹಾದು, ಎಡೆಮಾಡಿಕೊಂಡು, ನದಿಯ ಮಗ್ಗುಲನ್ನು ಸೇರಬೇಕಾದರೆ ಬಹು ವೇಳೆ ಹಿಡಿಯಿತು; ನದಿಯ ಸೆರಗೂ ಬಂದಿತು. ಅದನ್ನು ದಾಟಿ ಈಚೆಯ ದಡಕ್ಕೆ ಬಂದರು. ಅಲ್ಲೊಂದು ಬೆಟ್ಟೂ ಕಾಣಿಸಿತು. ಏರಿ ಮೇಲಕ್ಕೆ ಬರುತ್ತಲೇ, ಬೆಟ್ಟದ ಮೂಲೆಯಲ್ಲಿ ಒಂದು ಬಯಲಿನ ಸೆರಗು ಚಾಚಿರುವುದೂ ಕಾಣಿಸಿತು. ಅಲ್ಲಿಗೂ ಹೋದರು. ನಾಲ್ಕಾರು ತೆಂಗಿನ ಮರಗಳು, ಸಣ್ಣದೊಂದು ಅಂಗಣವೂ ಇತ್ತು. ಅದಕ್ಕೆದುರಾಗಿ ಒಂದು ಗುಡಿಸಲೂ ಇತ್ತು. ದೀರ್ಘಕಾಯನಾದ ಮುದುಕನೊಬ್ಬ ಪಿಕ್ಕಾಸು ಹಿಡಿದು, ತೆಂಗಿನ ಮರಗಳ ಸುತ್ತು ಅಗತೆಯನ್ನು ಮಾಡುತ್ತಿದ್ದ. ಹತ್ತಿರ ನಾಲ್ಕಾರು ಹೊರೆ ಕಾಸರಕನ ಸೊಪ್ಪು ಬಿದ್ದಿತ್ತು. ಇಬ್ಬರೂ ಆ ಮುದುಕನನ್ನು ನೋಡಿದರು. ಆತನ ವಯಸ್ಸು ಎಪ್ಪತ್ತು-ಎಂಬತ್ತಕ್ಕೆ ಮೀರಿತ್ತು. ಅವನ ಕೈಯ ಪಿಕ್ಕಾಸು ಮೆಲ್ಲನೆ ಬೀಳುತ್ತಿತ್ತು. ಯೌವನದ ಭರ ಅವನ ಕೆಲಸದಲ್ಲಿ ಕಾಣುತ್ತಿರಲಿಲ್ಲ. ಅವನನ್ನು ಕಂಡು ಸೀತಾರಾಮ "ಎಳಚಿತ್ತಾಯರ ಮನೆಗೆ ಎಲ್ಲಿಂದ ಹೋಗಬೇಕು?" ಎಂದು ಆ ಮುದುಕನನ್ನು ಕೇಳಿದ.

ಆತ ಇವರ ಮುಖವನ್ನು ನೋಡುವಾಗಲೇ, ಶಂಕರ "ಅವರು ಹೇಳಿದ ಗೌಡ ಇವನೇ ಇರಬಹುದೇ?" ಎಂಬ ಅನುಮಾನ ಸೂಚಿಸಿದ. ಸೀತಾ ರಾಮನಿಗೂ ಹಾಗಿರಬಹುದೆಂದು ಹೊಳೆಯಿತು. ಅವನ ಉತ್ತರ ನಿರೀಕ್ಷಿಸದೆಯೆ "ನೀನು ಮುತ್ತಯ್ಯ ಗೌಡನೇ?" ಎಂದು ಅವನನ್ನು ಕೇಳಿದ.

"ಹೌದು ಬುದ್ಧಿ. ಯಾರು ತಾವು? ಯಾರ ಮನೆ ಬೇಕೆಂದಿರಿ? ನೀವು ಸರಕಾರದವರೇ?" ಎಂದು ಕೇಳಿದ ಗೌಡ. ಚನ್ನಾದ ಅಂಗಿ ಬಟ್ಟೆ ತೊಡುವವರೆಲ್ಲರೂ ಗೌಡನ ಪಾಲಿಗೆ ಸರಕಾರದವರೆಂದು ಕಾಣುತ್ತಿತ್ತು. ತನ್ನ ಊರಿನ ಜನಗಳ ವೇಷವನ್ನು ಅವನು ಅರಿಯದವನೇ! ಉಳಿದವರು ಯಾಕೆ ಹೀಗೆ 'ಪೂರ್ಣ ವೇಷ' ದಲ್ಲಿ ಹೊರಡುತ್ತಾರೆ—ಎಂಬುದು ಅವನ ತರ್ಕಸರಣಿ.

ಸೀತಾರಾಮನೆಂದ "ನಾವು ಖಾಸಗಿ ಜನ; ಬಂಗಾಡಿ ಊರು ನೋಡಲಿಕ್ಕೆ ಬಂದಿದ್ದೇವೆ. ಎಳಚಿತ್ತಾಯರಲ್ಲಿ ಉಳಿದುಕೊಂಡಿದ್ದೇವೆ. ನನ್ನ ಈ ಸ್ನೇಹಿತರು ದಿಲ್ಲಿಯವರು. ಒಂದು ಕಾಲದಲ್ಲಿ ಅವರ ಹಿರಿಯರು ಇದೇ ಊರಲ್ಲಿ ಇದ್ದರಂತೆ" ಎಂದು ಮಾತಿಗೆ ಪೀಠಿಕೆ ಹಾಕಿದ.

"ಅಯ್ಯಾ, ಅಪೂರ್ವದವರು ಬಂದಿದ್ದೀರಿ. ಎಳನೀರು ಕೊಡುವಯೆಂದರೆ, ನನಗೆ ಮರಹತ್ತಲಿಕ್ಕೆ ಆಗುವುದಿಲ್ಲ; ವಯಸ್ಸಾಯಿತು. ಆಚೀಚೆ ಯಾವ ಹುಡುಗರೂ ಕಾಣಿಸುವುದಿಲ್ಲವಲ್ಲ. ಬನ್ನಿ, ಒಂದು ಕ್ಷಣ ಕುಳಿತುಕೊಳ್ಳಿ. ಒಳಗೆ ನಾಲ್ಕು ಬಾಳೆಹಣ್ಣು ಇರಬೇಕು. ಅದನ್ನಾದರೂ ತಿಂದುಕೊಂಡು ಹೋಗಿ, ಆಮೇಲೆ ಎಳಚಿತ್ತಾಯರ ಮನೆಯ ದಾರಿ ತೋರಿಸುತ್ತೇನೆ" ಎಂದ.

"ಹಾಗೇನಿಲ್ಲ ಗೌಡ. ನಮಗೆ ಬೆಳಿಗಿನ ಕಾಫಿ, ಗೀಫಿ ಎಲ್ಲ ಆಗಿದೆ. ನೆಟ್ಟಗೆ ಮನೆಗೇ ಹೋಗುತ್ತೇವೆ. ನೀನು ಉಪದ್ರವಪಟ್ಟುಕೊಳ್ಳಬೇಡ. ನಿನ್ನ ಹೆಸರು ಮುತ್ತಯ್ಯ ಗೌಡನಾದರೆ. ಮಧ್ಯಾಹ್ನ ಬಂದು ನೋಡುತ್ತೇವೆ. ಅಂದರೆ ನಮ್ಮ ಎಳಚಿತ್ತಾಯರು ಹೇಳಿದರು—ನೀನು ಈ ಊರಿಗೇನೆ ಪ್ರಾಕಿನವನೆಂದು; ವಯಸ್ಸಾದವನೆಂದು. ನಮ್ಮ ಈ ಸ್ನೇಹಿತರ ಅಜ್ಜನೋ ಮುತ್ತಜ್ಜನೋ ಈ ಬಂಗಾಡಿಯಲ್ಲೇ ಹುಟ್ಟಿ ಬೆಳೆದವರು. ಆದುದರಿಂದ ನಿನಗೆ ಕತೆಗಳೇನಾದರೂ ನೆನಪಿದ್ದರೆ ಕೇಳುವ ಎಂದಿದೆ."

"ಮುತ್ತಯ್ಯಗೌಡನೇನೋ ನಾನೇ. ಊರಿಗೆ ತೀರ ಹಳಬನೂ ಹೌದು. ಸಾಯಲಾರದುದಕ್ಕೆ ಹೀಗೆ ಬದುಕಿದ್ದೇನೆ. ಊರಿನ ಕತೆ ನನಗೇನೂ ನೆನಪಿದ್ದೀತು? ಈಗ ಬಂದಿದ್ದೀರಿ ಬನ್ನಿ. ಕುಳಿತು ಎರಡು ಹಣ್ಣು ತಿಂದು ಹೋಗಿ. ಬೇಕಾದರೆ ನಿಮ್ಮನ್ನು ಮನೆಯವರೆಗೆ ಮುಟ್ಟಿಸಿಕೊಡುತ್ತೇನೆ" ಎಂದು ಮಾತಿಗೆ ನಿಲ್ಲದೆ, ನೆಟ್ಟಗೆ ಒಳಕ್ಕೆ ಹೋದ. ಅಂಗಣದಲ್ಲೇ ಎರಡು ಮಣೆಗಳನ್ನು ತಂದಿರಿಸಿದ. ಅನಂತರ ಒಂದು ತಾಮ್ರದ ಹರಿವಾಣದಲ್ಲಿ ಎರಡು ಹಣತೆ ಗಾಳಿ ಬಾಳೆಹಣ್ಣುಗಳನ್ನಿರಿಸಿದ. "ಮಧ್ಯಾಹ್ನದ ಸಮಯಕ್ಕೆ ಬಂದಿದ್ದೀರಿ—ಬಡವನ ಮನೆಗೆ' ತಿನ್ನಿ, ಮತ್ತೇನು ನನ್ನಲ್ಲಿ ಕೊಡಲಿಕ್ಕಿದೆ?" ಎಂದು ಉಪಚರಿಸಿದ. ಗೌಡನನ್ನು ಮಾತನಾಡಿಸುವುದಕ್ಕೆ ತಮ್ಮ ಜತೆಗೆ ಎಳಚಿತ್ತಾಯರಿದ್ದರೆ ಅನುಕೂಲವಿತ್ತು—ಎಂದೆನಿಸಿತು ಅವರಿಬ್ಬರಿಗೆ. ಗುರುತು, ಪರಿಚಯ ಇಲ್ಲದ ಮುದುಕನ ಆದರ ಸತ್ಕಾರಗಳನ್ನು ನೋಡಿ ಅವರ ಮನಸ್ಸು ಉಕ್ಕಿತು. ಆ ಸತ್ಕಾರವನ್ನು ನಿರಾಕರಿಸಲಾರದೆ, ಮಣೆಯ ಮೇಲೆ ಹೋಗಿ ಕುಳಿತುಕೊಂಡು ಹಣ್ಣನ್ನು ತಿನ್ನತೊಡಗಿದರು. ಶಂಕರನಿಗೆ ಇಂಥ ಸೌಜನ್ಯದ, ಅರ್ಥವೇ ಆಗಲೊಲ್ಲದು. ಮುದುಕನ ವಯಸ್ಸು, ರೀತಿಗಳು, ದುಡಿಮೆ, ಹಣ್ಣಿಗಿಂತ ಪಕ್ವವಾದ ಜೀವನದ ಫಲ—ಎಂದೆನಿಸದೆ ಹೋಗಲಿಲ್ಲ. ಮುದುಕ ಆ ಇಬ್ಬರು ಯುವಕರನ್ನು ಮಿಕಿ ಮಿಕಿ ನೋಡುತ್ತಲೇ ಇದ್ದ. ಶಂಕರನ ಹಿರಿಯರೂ ಬಂಗಾಡಿಯವರು—ಎಂದುದರ ನೆನಪಾಯಿತು! ಅದೂ ಅವನ ಅಜ್ಜ ಮುತ್ತಜ್ಜರಂತೆ! ಆದುದರಿಂದಲೇ ಅವರ ಮುಖ ನೋಡುತ್ತಲಿದ್ದ. ಹಳೆಯ ಸ್ಮರಣೆಗಳ ಭಂಡಾರವೇ ಅವನ ಜೀವನ. ಅವುಗಳಲ್ಲಿ ಮರವೆಯೂದ ವಿಚಾರಗಳೆಷ್ಟೇ ಇದ್ದರೂ, ಉಳಿದವುಗಳ ಸಂಗ್ರಹವನ್ನು ಬರೆದಿಡುವಂತಿದ್ದರೆ ಹಿರಿಯ ಗ್ರಂಥವಾಗುವಷ್ಟಿದೆ. ಅವರ ಮುಖ ನೋಡಿ, ನೋಡಿ—"ಅಯ್ಯಾ ನೀವು ಬ್ರಾಹ್ಮಣರಲ್ಲವೇ?" ಎಂದು ಕೇಳಿದ ಮುದುಕ ಗೌಡ.

"ಹೂಂ" ಎಂಬ ಉತ್ತರ ಬಂದಿತು.

"ಈ ಊರಿಗೆ ಬಂದವರೇ ಅಲ್ಲವೇ?"

"ಇಲ್ಲಿ ಇದೇ ಮೊದಲು ಬಂದದ್ದು"

" ಅವರು ? " ಎಂದು ಆತ ಶಂಕರನನ್ನು ತೋರಿಸಿದ.

" ಅವರೂ ಸಹ "

" ಎಲ್ಲೋ, ಎಂದೋ ಕಂಡ ನೆನಪಾಗುತ್ತದಲ್ಲ—ನನಗೆ ಮರುಳೇ? "

" ಯಾರೋ ಏನೋ. ಇವರು ದಿಲ್ಲಿಯವರು, ಈ ಕಡೆಗೇನೇ ಬಂದವರಲ್ಲ."

" ದಿಲ್ಲಿಯಂದರೆ ಎಲ್ಲಿ ? "

" ಕಾಶಿಯೆಂತ ಕೇಳಿದ್ದಿಯಾ ? ಅದಕ್ಕೂ ದೂರ."

" ಅಷ್ಟು ದೂರವೇ ? ಇಲ್ಲಿಗೆ ಬಂದೇ ಇಲ್ಲವೆ—ಅಲ್ಲ ಚೇಷ್ಟೆಗೆ ಹೇಳುತ್ತೀರಾ ? "

ಆವನಿಂದ ಮಾತು ಹೆಚ್ಚಿಗೆ ಮುಂದುವರಿಯಲಿಲ್ಲ. ತನ್ನ ಜ್ಞಾನ ವನ್ನು ತಾನೇ ಅನುಮಾನಿಸಬೇಕಾದ ಸಂದಿಗ್ಧ ಆತನಿಗೆ ಬಂದೊದಗಿತು. ಗೆಳೆಯರು ಉಪಹಾರ ಮುಗಿಸಿ ಎದ್ದರು. ಗೌಡ ಮರುಮಾತಿಲ್ಲದೆ ಬಯಲ ಕಡೆಗೆ ಅವರ ಜತೆಗೆ ಹೊರಟ. "ನೀನು ಬರುವುದು ಬೇಡ. ನಾವೇ ಇನ್ನೊಮ್ಮೆ ಬರುತ್ತೇವೆ—ಎಳಚಿತ್ತಾಯರನ್ನು ಕರೆದುಕೊಂಡು" ಎಂದು ಹೊರಟರು. ಗೌಡ ಬಯಲನ್ನು ಕಳೆದು, ಮುಂದಿನ ಗುಡ್ಡದ ತನಕ ದಾರಿ ತೋರಿಸಿ "ಈ ಗುಡ್ಡ ಇಳಿದರೆ, ನೆಟ್ಟಗೆ ಅವರ ಮನೆಯೇ ಸಿಗುತ್ತದೆ ನಾನೂ ಬರುತ್ತೇನೆ" ಎಂದು ಮತ್ತೂ ಮುಂದಕ್ಕೆ ನಡೆದು ಬಂದ ಸೀತಾ ರಾಮ ಅವನನ್ನು ತಡೆದು ನಿಲ್ಲಿಸಿ "ಬೇಡ, ವಯಸ್ಸಾದ ನಿನ್ನನ್ನು ದಣಿಸ ಬಾರದು. ನಾವು ಹುಡುಗರು. ಎಷ್ಟೊ ಗುಡ್ಡಗಳನ್ನು ಹತ್ತಿಯೇವು, ಇಳಿ ದೇವು" ಎಂದು ಬಲವಂತ ಮಾಡಿದ. ಗೌಡ ನಿಂತುಕೊಂಡ. ಹುಡುಗರು ಗುಡ್ಡ ಏರಿದರು; ಏರಿ ತಿರುಗಿ ನೋಡುವಾಗ ಗೌಡ ನಿಂತಲ್ಲಿಯೇ ಇನ್ನೂ ನಿಂತಿದ್ದ. "ಯಾಕೆ ನಿಂತಿದ್ದಾನೋ" ಎಂದು ಅನುಮಾನಿಸಿ ಅಲ್ಲಿಂದಲೇ "ಅವರ ಮನೆ ಕಾಣುತ್ತಿದೆಯಲ್ಲ ನಾವು ಹೋಗುತ್ತೇವೆ; ನೀನೂ ಹೋಗ ಬಹುದು" ಎಂದು ಹೇಳಿ ಗುಡ್ಡ ಇಳಿದರು. ಅವರು ಕಣ್ಮರೆಯಾದರೂ ಮುತ್ತಯ್ಯಗೌಡ ನಿಂತಲ್ಲಿಂದ ಕದಲಲಿಲ್ಲ. ಅವನಿಗೆ ಮನಸ್ಸಿನಲ್ಲಿ ಏನೋ ಅನುಮಾನ ಬಂದಿದೆ. ಎಷ್ಟು ನೆನೆದರೂ, ಆ ಹುಡುಗನನ್ನು ತಾನು ನೋಡಿದ್ದೇನೆಂಬ ಭ್ರಮೆ—ಅಚ್ಚಳಿಯದೆ ಕಾಣುತ್ತಿದೆ ಮನದಲ್ಲಿ. ಅವ

ರೆಂದುದನ್ನು ಕೇಳಿದರೆ–ಅದು ಸಾಧ್ಯವೇ ಇಲ್ಲ. ಹಾಗಾದರೆ ತನ್ನ ಮುದಿ ಮಿದುಳು ಇಷ್ಟು ಜೊಳ್ಳಾಯಿತೇ–ಎಂಬ ಅನುಮಾನವಾಯಿತು. ನೆನೆದಷ್ಟು, ಅವನ ನೆನಪೇ ಗಟ್ಟಿಯಾಗುತ್ತಿತ್ತು. 'ಒಂದಲ್ಲ, ನೂರು ಸಾರಿ ಕಂಡಿದ್ದೇನೆ' ಎಂದು ಮನಸ್ಸು ಹೇಳತೊಡಗಿತು. ಆತುರ ತಡೆಯಲಿಲ್ಲ; ಅಲ್ಲಿಯೇ ನಿಂತ ಕೊನೆಗೆ ಮನಸ್ಸು ತಡೆಯಲಾರದೆ, ಮೆಲ್ಲಗೆ ಹೆಜ್ಜೆ ಹಾಕುತ್ತಾ ಎಳಚಿತ್ತಾಯರ ಮನೆಯ ಕಡೆಗೇನೆ ಹೊರಟ. ಹುಡುಗರು ಮನೆಗೆ ಹೋಗಿ–ಕಾಲು ತೊಳೆದು, ಊಟಮಾಡಿ ಹೊರಕ್ಕೆ ಬರುವಾಗ ಗೌಡ ಅವರ ಮನೆಯ ಚಾವಡಿಯಲ್ಲಿ ಕುಳಿತಿದ್ದ. ಎಳಚಿತ್ತಾಯರೊಡನೆ ಗೌಡನೆಂದ ಮೊದಲ' ಮಾತೆಂದರೆ 'ಅಯ್ಯಾ, ಅವರು ಶ್ಯಾನುಭಾಗರ ಮನೆಯವರೇ? ನನ್ನ ಹಳೆಯ ಕಾಲದ ಧನಿಗಳ ಕುಂಟುಂಬದವರೇ? ದತ್ತಪ್ಪರಾಯರ ಮನೆಯವರೇ?' ಎಂದು ದೀನ ಮುಖದಿಂದ ಕೇಳಿಯೇ ಬಿಟ್ಟ. ಮುದುಕನ ಆ ಸ್ಮರಣೆಗಳನ್ನು ಕಂಡು ಎಳಚಿತ್ತಾಯರಿಗಂತೂ ಹಿಡಿಸಲಾರದ ಆಶ್ಚರ್ಯವಾಯಿತು. "ಕೂತುಕೋ ಮುತ್ತಯ್ಯ, ನೀನು ಬಂದದ್ದು ಒಳ್ಳೆಯದಾಯಿತು. ನಾವೇ ನಿನ್ನಲ್ಲಿಗೆ ಬರಬೇಕೆಂದಿದ್ದೆವು" ಎಂದು. ಊಟಮಾಡಿದ ಕೈಗಳನ್ನು ತೊಳೆದುಕೊಂಡು ಚಾವಡಿಗೆ ಬಂದರು.

ಎಲ್ಲರೂ ಬಂದು ಚಾವಡಿಯಲ್ಲಿ ಕುಳಿತರು. "ಮುತ್ತಯ್ಯ, ನೀನೂ ಒಂದು ಮುಷ್ಟಿ ಊಟ ಮಾಡು. ಆ ಮೇಲೆ ಎಲ್ಲ ನಿಧಾನವಾಗಿ ಮಾತನಾಡುವ. ನಿನ್ನನ್ನು ಕೇಳುವ ಸಂಗತಿ ಬಹಳ ಇದೆ" ಎಂದು ಎಳಚಿತ್ತಾಯರು ನುಡಿದರು. ಶಂಕರನ ವಿಚಾರವಾಗಿ ರಂಗರಾಯರ ಮನೆಯವರಿಗೆ ಇರುವ ಸಂಬಂಧವನ್ನು ತಿಳಿಸಿದರು. ರಂಗರಾಯರ ಮನೆಯ ಅಜ್ಜಿಗೆ ಶಂಕರನನ್ನು ನೋಡಿ ಆದ ಸಂತೋಷವನ್ನು ಬಣ್ಣಿಸಿ ಹೇಳಿದರು, ಅನಂತರ ಮುತ್ತಯ್ಯ ನನ್ನ ಊಟಕ್ಕೆ ಒತ್ತಾಯಿಸಿದರು. "ನನಗೋ–ಬೆಳಿಗ್ಗೆ ಒಂದಿಷ್ಟು ತಂಗಳು; ರಾತ್ರಿ ಗಂಜಿ ಉಂಡರೆ ಮುಗಿಯಿತು. ಮಧ್ಯಾಹ್ನ ಊಟಮಾಡಿಯೂ ಇಲ್ಲ. ಮಾಡುವುದೂ ಇಲ್ಲ" ಎಂದು ಆತ ಮಾತಿಗೆ ಕುಳಿತ. 'ಒಂದಿಷ್ಟು ಊಟಮಾಡು' ಎಂಬ ಅವರ ಒತ್ತಾಯ ಸಾಧಿಸಲಿಲ್ಲ. ಅವರ ಮನಸ್ಸು ಸಮಾಧಾನವಾಗದ್ದಕ್ಕೆ-ಒಂದಿಷ್ಟು ಮಜ್ಜಿಗೆ ನೀರನ್ನು ಕೊಂಡು ಕುಡಿದ. ಅನಂತರ ಒಂದೇಸವನೆ ತನ್ನ ಬಾಲ್ಯದ ನೆನಹುಗಳನ್ನೆಲ್ಲ

ಹೇಳತೊಡಗಿದ. "ಅಯ್ಯಾ, ಎಲ್ಲವೂ ದೇವರ ಆಟ. ಕಾಲಗತಿ ಏನೇನು ಮಾಡುತ್ತದೆ ಎಂಬುದನ್ನು ಹೇಳಲು ಯಾರಿಂದಾದರೂ ಸಾಧ್ಯವೇ! ಅಲ್ಲವಾದರೆ ಮೂಡೋಡಿಯ ಆ ಚಿನ್ನದಂಥಾ ಭೂಮಿ, ಹಾಳುಬಿದ್ದು ದಾತಾರರಿಲ್ಲದೆ ಹೀಗೆ ಕಾಡು ಬೆಳೆಯುತ್ತಿತ್ತೇ? ನನ್ನ ಅಜ್ಜ, ಮತ್ತಜ್ಜ ಹೊಳೆಯಾಚೆಗಿನ ಆ ಮೈದಾನಿನಲ್ಲಿ ಗುಡಿಸಲು ಕಟ್ಟಿಕೊಂಡು ತಲೆತಲಾಂತರದಿಂದ ಬಾಳಿ ಬಂದರು, ಮೊನ್ನೆ ಮೊನ್ನೆಯ ವರೆಗೆ ಅಂದರೆ ಐವತ್ತು ವರ್ಷವಾದರೂ ಆಗಿರಬೇಕು, ನನ್ನ ಹಿರಿಯರು ಕಟ್ಟಿದ ಗುಡಿಯಲ್ಲಿ ನಾನೂ ಬದುಕಿದ್ದೆ. ಆ ಮೇಲೆ ಭೂಮಿ ಹಾಳಾಯಿತು; ನನ್ನ ಬದುಕೂ ಕೆಡುತ್ತ ಬಂತು. ದೇವರು ಕೊಟ್ಟ ಮಕ್ಕಳು ತೀರಿಕೊಂಡರು. ಎಲ್ಲವನ್ನು ಕಳೆದು ಕೊಂಡ ಮೇಲೆ, ಮಗ ತೀರಿಕೊಂಡ ಮೇಲೆ, ಅಲ್ಲಿರಲು ಮನಸ್ಸು ಬಾರದೆ ಮನೆಕಿತ್ತುಕೊಂಡು, ಈಗಿರುವಲ್ಲಿಗೆ ಬಂದೆ. ಇಲ್ಲಾದರೂ ನಾನು ಪಟ್ಟ ಸುಖ ಅಷ್ಟೇನೆ. ಯಾವ ದೈವದ ಕಣ್ಣು ತಗಲಿತೋ, ಏನು ಪಾಪದ ಫಲ ತಟ್ಟಿತೋ! ಈಗ ಉಳಿದುಕೊಂಡುವ ನಾನೊಬ್ಬ. ಇನ್ನು ಹೆಸರಿಗೊಂದು ಕೂಸಿದೆ — ಮೊಮ್ಮಗಳ ಮಗು. ಊರಿಗೊಂದು ಬಂಡೆಯ ಹಾಗೆ ಗತಿ ಗೋತ್ರವಿಲ್ಲದೆ ಇದ್ದೇನೆ. ದೇವರು ಆಯುಷ್ಯ ಕೊಟ್ಟಷ್ಟು ಕಾಲ ಇರುವುದು. ನನ್ನ ಕಣ್ಣ ಮುಂದೆಯೇ ಸಾಕಿ ಬೆಳೆಸಿದ ಕೂಸುಗಳೆಲ್ಲ ಸತ್ತು ಹೋದಮೇಲೆ, ನಾನೊಬ್ಬ ಬದುಕಿಕೊಂಡಿರಬೇಕು ಏತಕ್ಕೆ—ಎಂಬುದು ನನಗೆ ಅರ್ಥವಾಗುವುದಿಲ್ಲ. ಯಾರನ್ನೂ ದೂರಲಾರೆ ಅದಕ್ಕೆ. ದೇವರು ಕೊಟ್ಟ ಆಯುಷ್ಯದ ವಿಚಾರದಲ್ಲಿ 'ಕಡಿಮೆ ಆಯಿತು' ಎಂದು ಲೋಕ ಆಡುತ್ತಿರುವಾಗ, ನಾನು ಹೆಚ್ಚಾಯಿತೆಂದು ಅಳಬೇಕೆ? ನಾನು ಮಾಡಿಕೊಂಡಿದ್ದ ಆಸೆ, ಸಂಸಾರದ ನೆಚ್ಚಿಗೆ—ಅದೇ ತಪ್ಪೋ ಏನೋ ಅದೀಗ ತಪ್ಪಿಹೋಯಿತಲ್ಲ. ಈಗ ಯಾವ ಆಸೆಯೂ ಇಲ್ಲ. ನನಗೆ ಮುದಿಯಾದೆ. ಹಲ್ಲುಗಳೆಲ್ಲ ಉದುರಿಹೋದವು. ಕಣ್ಣು ಕಾಣಿಸುತ್ತದೆ. ಪೂರಾ ಅಲ್ಲದಿದ್ದರೂ ಕುರುಡನಾಗಿಲ್ಲ. ಕೈಹಿಡಿದು ಕರೆದುಕೊಂಡು ಹೋಗಬೇಕಾಗಿಲ್ಲ. ನನ್ನ ದಿನ ಇನ್ನೊಬ್ಬರ ಸಹಾಯವಿಲ್ಲದೆ ಹೀಗೆ ಹೋದೀತು 'ಸಹಾಯವಿಲ್ಲದೆ' ಎಂಬುದು ಹೆಚ್ಚಿನ ಮಾತು. ನೀವು ಹತ್ತು ದಿನಕ್ಕೊಮ್ಮೆ ಬಂದು 'ಮುತ್ತಯ್ಯಾ ಹೇಗಿದ್ದೀ' ಎಂದು ಕೇಳು

ತ್ತೀರಿ. ನನಗೆ ಬೇಸರವಾದರೆ ನಾನೂ ಇಲ್ಲಿಗೆ ಬರುತ್ತೇನೆ. ಕೇರಿಯ ಮಕ್ಕಳು, ಒಬ್ಬರಿಲ್ಲದಿದ್ದರೊಬ್ಬರು ನನ್ನ ಹೊಟ್ಟೆಯಲ್ಲಿ ಹುಟ್ಟಿದ ಮಕ್ಕಳೆಂಬಂತೆ 'ಅಜ್ಜ ಅಜ್ಜ' ಎಂದು ಮಾತನಾಡಿಸಿಕೊಂಡು ಹೋಗುತ್ತವೆ. ನನ್ನಿಂದ ಆಗದ ಕಜ್ಜವನ್ನು ಮಾಡಿಕೊಟ್ಟು ಹೋಗುತ್ತವೆ. ತೆಂಗಿನಕಾಯಿ ಇಳಿಸಿ ಕೊಡುತ್ತಾರೆ, ಮಾಡು ಹೊದೆಯಿಸಿ ಕೊಡುತ್ತಾರೆ. ನಾಟಿಯ ವೇಳೆಗೆ ಬರುತ್ತಾರೆ, ಕೊಯ್ಲಿನ ವೇಳೆಗೆ ಬರುತ್ತಾರೆ. ನನ್ನ ಕೈಯಿಂದ ಒಂದು ಮುಷ್ಟಿ ಅಕ್ಕಿ ಕೇಳಲಿಲ್ಲ, ಕೊಂಡಿಲ್ಲ. ನನ್ನ ಮಕ್ಕಳಾದರೂ ಬದುಕಿದ್ದರೆ ಇದಕ್ಕೂ ಹೆಚ್ಚೇನು ಮಾಡುತ್ತಿದ್ದರು? ಏನೋ ಒಂದು ಋಣಾನುಬಂಧ—ಈ ಊರಿಗೂ ನನಗೂ ಇದ್ದ ಹಾಗೆ ಕಾಣುತ್ತದೆ. ಅದೇನೆ ನನ್ನನ್ನು ಸಾಗಿಸಿಕೊಂಡು ಹೋಗುತ್ತಾ ಇದೆ" ನಡುವೆ ಎಳಚಿತ್ತಾಯರು ಪ್ರಶ್ನೆ ಮಾಡಿದರು "ಮುತ್ತಯ್ಯ, ಆಯುಷ್ಯ ಕೊಡುವವ ಬಿಡುವವ ದೇವರಲ್ಲವೇ? ನೀನೆನ್ನುವ ಹಾಗೆ ಅವನು ಕೊಟ್ಟಿದ್ದನ್ನು ಉಣ್ಣುವ ಕೆಲಸ ನಮಗೆ; ಕೊಟ್ಟದ್ದಕ್ಕಾಗಿ ಅಳಬಾರದು. ಅದಿರಲಿ, ಆ ಮೂಡೋಡಿ ಆಸ್ತಿ ಸುದ್ದಿಯನ್ನು ಹೇಳಿದೆಯಲ್ಲ. ಸೀತಾರಾಮ, ಮೂಡೋಡಿ ಅಂದರೆ ನಿನ್ನೆ ಬೆಳಿಗ್ಗೆ ನೋಡಿಕೊಂಡು ಬಂದಿರಲಿಲ್ಲ, ಆ ಭೂಮಿ ಈಗ ಸರಕಾರಕ್ಕಾಗಿದೆ. ಮೊದಲು ಶ್ಯಾನುಭಾಗರ ಮನೆಯವರಿಗೆ ಸೇರಿತ್ತು ಎಂದು ಕೇಳಿದ ನೆನಪು ನನಗೆ. ಈಗಲೂ ನಮ್ಮ ಶ್ಯಾನುಭಾಗರಿಗೆ ಸಾವಿರ ತಾಪತ್ರಯಗಳು. ಅಲ್ಲದೆಹೋದರೆ, ಬರಿಯ ತೀರ್ವೆಗೆ ಸಿಗಬಹುದಾದ ಭೂಮಿಯನ್ನು ಅವರೇನೆ ತಮ್ಮ ಹೆಸರಿಗೆ ಮಾಡುಕೊಳ್ಳಬಹುದಿತ್ತು. ಯಾಕೆ ಮಾಡಿಕೊಳ್ಳುವುದಿಲ್ಲವೊ" ಎಂದು ಉದ್ಗರಿಸಿದರು.

"ಅಯ್ಯಾ, ಅದೆಲ್ಲ ಒಂದೊಂದು ಕಾಲ. ಆ ಕಾಲ ತಿರುಗಿ ಬಂದೀತೆಂದು ನನಗೆ ಅನಿಸುವುದಿಲ್ಲ. ಕೃತಯುಗ ಇದ್ದ ಹಾಗೆ ಅದು. ಆ ಭೂಮಿಯ ಚಂದ ಏನೆನ್ನುತ್ತೀರಿ? ನಮ್ಮ ಅಪ್ಪ ಅನ್ನುತ್ತಿದ್ದ ಐವತ್ತು ಮುಡಿ ಬೀಜವರಿ ಜಾಗವೇ ಅಲ್ಲಿದೆಯಂತೆ. ಮಂಗ ಹೊತ್ತ ಮೇಲೆಯೂ ವರ್ಷಕ್ಕೆ ನಾಲ್ಕಾರು ಸಾವಿರ ತೆಂಗಿನ ಕಾಯಿ ಸಿಕ್ಕುತ್ತದಂತೆ. ನನ್ನ ಅಪ್ಪನಿದ್ದಾಗಲೇ, ನನ್ನ ನೆನಪು—ಮೂರು ಜೋಡು ಕೋಣ ನಮ್ಮ ಮನೆಯಲ್ಲೇ ಇತ್ತು. ನಾವೇ ಐದು ಮುಡಿ ಭೂಮಿಯನ್ನು ಗೇಣಿಗೆ ಕೊಂಡು ಸಾಗು

ವಳಿ ಮಾಡುತ್ತಿದ್ದೆವು. ಇನ್ನು ನಮ್ಮ ಹಾಗಿನ ಒಕ್ಕಲು ಎಂಟು ಹತ್ತು ಮಂದಿಯಾದರೂ ಇದ್ದಿರಬೇಕು. ಅಲ್ಲಿ ಆಗಿನ ದಿನಗಳಲ್ಲಿ ಬೆಳೆಯದ್ದಿಲ್ಲ."

"ಸಮೀಪ ಇಷ್ಟು ಕಾಡಿದ್ದೂ ಅಷ್ಟೆಲ್ಲ ಆಗುತ್ತಿತ್ತೆನ್ನುತ್ತೀಯಾ? ಚಳಿ ಜ್ವರದ ಭಾದೆ ಆಗಿನ ದಿನದಲ್ಲಿ ಇಲ್ಲ ಅನ್ನುತ್ತೀಯಾ?"

"ಇಲ್ಲ, ಅಂದರೇನು ಇತ್ತು; ಈಗ ಕಾಣಿಸುವಷ್ಟಿರಲಿಲ್ಲ. ಎಲ್ಲೋ ವರ್ಷಕ್ಕೆ ನಾಲ್ಕು ದಿನ ಮಲಗಿರುತ್ತಿದ್ದೆವು—ಜ್ವರದಿಂದ ಕಾಡು ಮಾತ್ರ ಈಚೀಚೆಗೆ ಬೆಳೆದುಕೊಂಡ ಹಾಗೆ ಬೆಳೆದಿರಲಿಲ್ಲ. ನಾನು ದನಕರು ಅಟ್ಟಿ ಕೊಂಡು ಆ ಬೆಟ್ಟದಲ್ಲಿ ಬಹುದೂರ ಹೋಗುತ್ತಿದ್ದೆ. ಸಮೀಪ ಕಾಡು ಕಂಡ ನೆನಪಿಲ್ಲ ನನಗೆ. ಒಂದು ದಿನ ಶಾಂತಮೂರ್ತಿ ಒಡೆಯರ ಮಗ ದತ್ತಪ್ಪನವರೊಟ್ಟಿಗೆ ತಮಾಷೆಗೆಂದು, ಎಲ್ಲೆಲ್ಲೋ ಸುತ್ತಿ, ಗುಡ್ಡ ಅಲೆದು ದಾರಿ ತಪ್ಪಿ ಕಂಗಾಲಾಗಿ ಬಂದಿದ್ದೆ. ಆಗಲೂ ಕಾಡು ಇಷ್ಟು ವಿಪರೀತ ವಾಗಿತ್ತು—ಎಂದು ಅನಿಸುವುದಿಲ್ಲ. ಇಲ್ಲಿಗೂ ಮುಂದೆ. ಬಹುದೂರದ ತನಕವೂ ಘಟ್ಟದ ಬರೆಯ ತನಕವೂ ಊರು, ಕೇರಿ ಇತ್ತು—ಬಹು ಪ್ರಾಕಿನಲ್ಲಿ ಅಂದರೆ-ನಾನೂ ಹುಟ್ಟುವ ಮುಂಚೆ–ಅಂತೆ-ಹೆರೆತ್ತುಗಳ ಮೂಲಕ ಈ ಘಟ್ಟದ ಸಂದಿನಿಂದ, ಈ ಊರಿಂದಲೇ ಮೇಲಕ್ಕೆ ಹೋಗಿ ಬರುವ ದಾರಿಯೂ ಇತ್ತಂತೆ. ನನ್ನ ಸಣ್ಣಪ್ರಾಯದಲ್ಲೇ ಅದೆಲ್ಲ ಬರಿಯ ಕೇಳಿಕೆಯ ಮಾತಾಗಿತ್ತು."

"ದತ್ತಪ್ಪನವರ ಗುರುತೇ ನಿನಗೆ?"

"ಗುರುತು ಎಂದರೆ—ನನಗೂ ಅವರಿಗೂ ಸಮಪ್ರಾಯವೋ, ಅಥವಾ ಒಂದೆರಡು ವರ್ಷ ಹೆಚ್ಚು ಕಡಿಮೆ ಇರಬಹುದು. ನಾನೆಂದರೆ ಅವರಿಗೆ ಜೀವ. ಮೂಡೋಡಿಯಲ್ಲೇ ಅವರ ದೊಡ್ಡ ಮನೆಯಿತ್ತು. ದತ್ತಪ್ಪನವರ ತಂದೆ ತಮ್ಮ ಭಾವನಿಗೊಂದು ಕಟ್ಟಿಸಿದ ಮನೆಯೇ ಈಗ ನಮ್ಮ ಶ್ಯಾನುಭಾಗರಿರುವ ಮನೆ. ಎರಡೂ ಪ್ರಾಕಿನವುಗಳೇ. ಆದರೆ ಆ ಮನೆಯ ಮುಂದೆ ಇದಲ್ಲ. ನೀವು ನೋಡಿರಲಾರಿರಿ—ಈಗಲೂ ಅವರ ಹಳೆಯ ಮನೆಯ ನೆಲಗಟ್ಟು, ಅದೇ ಮೂಡೋಡಿ ಬೆಣದ ಒಂದು ಮೂಲೆಯಲ್ಲಿದೆ. ಅದರ ನಾಲ್ಕು ಸುತ್ತಿನ ತೆಂಗಿನ ಮರಗಳಲ್ಲಿ ಒಂದೋ, ಎರಡೋ ಮುದಿ ಮರಗಳನ್ನು ಹತ್ತೆಂಟು ವರ್ಷದ ಹಿಂದೆ ನೋಡಿದ

ನೆನಪು ನನಗೆ. ಆದರೆ ಏನು ಫಲ! ಶಾಂತಮೂರ್ತಪ್ಪನವರ ಪುಣ್ಯ, ದತ್ತಪ್ಪನವರ ಅದೃಷ್ಟದಲ್ಲಿ ಬರೆಯಲಿಲ್ಲ. ದತ್ತಪ್ಪ ಊರು ಬಿಡುವಾಗ ಎಷ್ಟು ಪ್ರಾಯ ಅನ್ನುತ್ತೀರಿ? ಏನು ಇಪ್ಪತ್ತು ವರ್ಷ ಆಗಿದೆಯೋ ಇಲ್ಲವೋ. ಅವರು ಬಿಡುವಾಗ ನನಗೆ ಗೊತ್ತಿತ್ತು.

' ಅವರು ಒಂದು ದಿನ ನನ್ನನ್ನು ಕರೆದು, ತಮ್ಮ ಮನಸ್ಸಿನ ದುಃಖ ವನ್ನೆಲ್ಲ ತೋಡಿಕೊಂಡರು. ಆ ಗಳಿಗೆಯನ್ನು ನೆನೆದರೆ ನನಗೆ ಈಗಲೂ ಕಣ್ಣೀರು ಬರುತ್ತದೆ. ನನ್ನ ಹತ್ತಿರವೇ ಏತಕ್ಕೆ ಹೇಳಿದರೋ ನನಗೇ ತಿಳಿಯದು—ನಾನು ಅವರ ಒಕ್ಕಲುಮಗ. ಅವರ ಯೋಗ್ಯತೆ ಏನು, ನನ್ನ ಯೋಗ್ಯತೆ ಏನು? ಆದರೆ ಏನೋ, ನನ್ನಲ್ಲಿ ತುಂಬ ವಿಶ್ವಾಸ. ಹುಡುಗಾಟಿಕೆಯಲ್ಲಿ ನಾವು ಎಷ್ಟೋ ಬಾರಿ ಜತೆಗೆ ಆಡಿದವರು. ಅದರಿಂದಾಗಿ ಹೇಳಬೇಕೆನಿಸಿತೋ ಏನೋ— ಹೇಳಿದರು. ಅವರಿಗೆ ಪ್ರಾಯ ಬಂದಿತ್ತಷ್ಟೆ. ಶಾಂತಮೂರ್ತಿ ದನಿಗಳು ತೀರಿಕೊಂಡಿದ್ದರು. ತೀರಿಕೊಂಡ ಮೇಲೆ ಮನೆಯ ಪಾರುಪತ್ಯವೆಲ್ಲ ಅವರ ಭಾವನದ್ದಾಯಿತು. ಯಾಕೋ ಏನೋ, ದತ್ತಪ್ಪನವರಿಗೆ ತಮ್ಮ ಸೋದರಮಾವನನ್ನು ನೋಡಿದರೆ ಹಿತವಿರಲಿಲ್ಲ. ಮಾವನಿಗೆ ಒಬ್ಬಳು ಹೆಣ್ಣುಮಗಳಿದ್ದಳು. ಮದುವೆ ಪ್ರಾಯ. ಅವಳನ್ನು ಈ ಸೋದರಳಿಯನಿಗೆ ಕೊಡಬೇಕೆಂಬ ಇಚ್ಛೆ. ನನಗೆ ಈಗ ಚೆನ್ನಾಗಿ ನೆನಪಾಗುವುದಿಲ್ಲ, ಅವಳಿಗೆ ಸ್ವಲ್ಪ ದೃಷ್ಟಿ ದೋಷ ಎಂದು ಕಾಣುತ್ತೆ. ಬೆಳಕು ಕಾಣುವುದಕ್ಕಾಗುತ್ತಿರಲಿಲ್ಲ. ಆ ಸಂಬಂಧ ದತ್ತಪ್ಪನವರಿಗೆ ಇಷ್ಟವಾಗಲಿಲ್ಲ.

' ಅದು ಒಂದೇನೇ ಅಲ್ಲ. ಆ ಸೋದರ ಮಾವ ಭಾರಿ ಕಾರುಭಾರಿ. ಶಾಂತಮೂರ್ತಪ್ಪನವರಿಗೆ ಮೊದಲಿನಿಂದಲೂ ಅವರು ಏನುಮಾಡಿದ್ದಾರೆ, ಏನು ಮಾಡಿಲ್ಲ ಅನ್ನುವ ಹಾಗಿಲ್ಲ. ಅವರು ತಿಂದು ಹಾಕಿದ ಹಣ ಸ್ವಲ್ಪವಲ್ಲ. ಕದ್ದದ್ದೆಷ್ಟೋ, ಕೇಳಿ ತೆಗೆದುಕೊಂಡದ್ದೆಷ್ಟೋ. ಹಿರಿ ಧನಿಗಳು ತೀರಿಹೋದ ಮೇಲೆ ಈ ಮದುವೆ ವಿಚಾರ ಎತ್ತಿದರು. ದತ್ತಪ್ಪನವರಿಗೆ, ಸಣ್ಣವರಾದರೇನು; ಮಾವನ ಹಣೆ ಬರಹ ಚೆನ್ನಾಗಿ ತಿಳಿದಿತ್ತು. ಹುಡುಗಿ ಕಾಣದವಳಲ್ಲ. ಅರ್ಧ ಕುರುಡಿಯೆಂದೂ ಗೊತ್ತು. ಮಾವನ ರೀತಿ ಇಷ್ಟುಷ್ಟು ಸರಿಹೋಗುತ್ತಿರಲಿಲ್ಲ. ದತ್ತಪ್ಪನವರ ತಾಯಿಯ ಅಣ್ಣನ

ಮಾತಿಗೆ ತಲೆದೂಗಿದಹಾಗಿದೆ. ಹೀಗಾಗಿ ಉಭಯಸಂಕಟ ಪ್ರಾಪ್ತಿಸಿತು. ಒಂದು ದಿನ ಇದ್ದಕ್ಕಿದ್ದ ಹಾಗೆ 'ಮುತ್ತಾ' ಎಂದು ಕರೆದರು ನನ್ನನ್ನು. ಕರೆದು 'ಮುತ್ತಾ, ನನಗೆ ಈ ಊರು, ಮನೆಗಳ ಋಣ ಇಲ್ಲ ಎಂದು ಕಾಣುತ್ತದೆ. ನಮ್ಮ ಮಾವ ಇರುವ ತನಕ ನಾನು ಊರಿನಲ್ಲಿರಲಾರೆ" ಎಂದು ಹೇಳಿದರು. ಅಂದು ಎಂಟು ದಿನಗಳಾಗಿರಲಿಲ್ಲ.—ಹೋಗಿಯೇ ಬಿಟ್ಟರು—ಎಲ್ಲಿಗೋ ಏನೋ. ಹಾಗೆ ಹೋದ ಮೇಲೆ ಎಲ್ಲೆಲ್ಲಿಗೆ ಜನ ಕಳು ಹಿಸಿದರು, ಹುಡುಕಿಸಿದರು. ಪ್ರಯೋಜನವಾಗಲಿಲ್ಲ.

"ಬಂಗಾರದಂತಹ ಆ ಸಣ್ಣ ಧನಿಗಳ ಮುಖ ಇಂದಿಗೂ ಕನ್ನಡಿಯ ಹಾಗೆ ಕಾಣುತ್ತದೆ ನನಗೆ. ಅದೇ ನೆನಪೇ ಈ ಅಯ್ಯನನ್ನು ನೋಡಿ ಹುಚ್ಚು ಗಟ್ಟಿಸಿತು ನನಗೆ" ಎಂದು ನುಡಿದು' ತುಸು ಹೊತ್ತು ಮಂಕನಂತೆ ಕುಳಿತ. ಅನಂತರ ಮಾತುಗಳನ್ನು ಮುಂದುವರಿಸಿದ. "ಆ ಮೇಲೆ ಆ ಸೋದರ ಮಾವನದ್ದೇ ಕಾರುಭಾರ ಸುರುವಾಯಿತಯ್ಯ. ಒಕ್ಕಲು ಮಕ್ಕಳನ್ನು ಹೆದರಿಸುವುದು, ಬೆದರಿಸುವುದು, ಅಂದಾ ದರ್ಬಾರು ನಡೆಯಿಸುವುದು. ಸ್ವಂತ ಅವರಿಗೆ ಹುಟ್ಟುವಳಿ ಗಿಟ್ಟುವಳಿ ಏನೂ ಇದ್ದಿರಲಿಲ್ಲವಂತೆ. ತುಂಬ ಬಡವರಂತೆ. ದೊಡ್ಡ ಧನಿಗಳು ತಮ್ಮ ಸಹಾಯಕ್ಕಾದೀತೆಂದು ಕರೆಯಿಸಿ ಕೊಂಡರು. ಅವರ ಹೆಸರು ರಂಗಪ್ಪಯ್ಯ ಎಂದಿರಬೇಕು. ಚೆನ್ನಾಗಿ ನೆನ ಪಾಗದು. ಧನಿಗಳ ಬಾವ ಅನ್ನುತ್ತಿದ್ದೆವು ನಾವು. ನೋಡಿ, ಅವರು ಬಂದದ್ದೇ ಬಂದದ್ದು—ಆ ಮನೆಗೆ ಕಲಿ ಹೊಕ್ಕ ಹಾಗಾಯಿತು. ಕಡೆಗೆ ದೊಡ್ಡ ಧನಿಗಳಿಗೂ ಅದೆಲ್ಲ ತಿಳಿಯಿತೋ ಏನೋ. ನನ್ನ ಅಪ್ಪ ಹೇಳುತ್ತಿದ್ದರು, ಅವ ರಿಗೆ ಲಗ್ನ ಮಾಡಿಸಿದರಂತೆ. ಈಗ ನಮ್ಮ ಶ್ಯಾನುಭಾಗರಿದ್ದಾರಲ್ಲ, ಆ ಮನೆ ಕಟ್ಟಿಸಿಕೊಟ್ಟರಂತೆ. ಎಷ್ಟೆಲ್ಲ ಉಪಕಾರ ಮಾಡಿದರಂತೆ. ನನಗೆ ಬುದ್ಧಿ ಬರು ವಾಗ ರಂಗಪ್ಪಯ್ಯನವರದ್ದೇ ಕಾರುಭಾರ ನಡೆಯುತ್ತಿತ್ತು. ಮಾಡಿದರೂ ಚಿಂತೆಯಿಲ್ಲ. ಭಾವನಂಟನ ಹಿತದ ಸಲುವಾಗಿ ಮಾಡಿದ್ದರೆ ಅದು ಒಂದು ರೀತಿ. ಶಾಂತಮೂರ್ತಿ ಧನಿಗಳು ಎಂದು ತೀರಿದರೋ, ಆ ಮೇಲೆ ಅವರ ಬಣ್ಣ ಊರಿಗೇ ಗೊತ್ತಾಯಿತು. ದತ್ತಪ್ಪ ಸಣ್ಣ ಹುಡುಗ. ಅವನ ಮಾತನ್ನು ಕೇಳಬೇಕು ಯಾರು? ಆ ಮೇಲೆ ಅವರ ತಾಯಿಯೂ ಕಾಯಿಲೆ ಯಿಂದ ತೀರಿದರು. ಅವರನ್ನು ಬೇಕೆಂದೇ ಕೊಂದರು ಅನ್ನುತಾರೆ. ಅದೆಷ್ಟು

ಸತ್ಯವೋ, ಎಷ್ಟು ಸುಳ್ಳೋ, ಅಪ್ಪ, ಅಮ್ಮ ಇಬ್ಬರನ್ನೂ ಕಳೆದುಕೊಂಡ ಮೇಲೆ, ಸಣ್ಣ ಧನಿಗಳ ಗೋಳು ಕೇಳಬೇಕೇ? ಅಂತು ಕೈಯಾರೆ ಓಡಿಸಿದರು. ಆ ಮೇಲೆ ಏನೇನಾಯಿತೋ—ನನಗೆ ಗೊತ್ತಾಗಲಿಲ್ಲ. ಒಕ್ಕಲುಗಳನ್ನು ತಮ್ಮ ಪಕ್ಷಕ್ಕೆ ತೆಗೆದುಕೊಂಡರು ಅನ್ನುತ್ತಾರೆ, ಕಾಗದ ಪತ್ರ ಮಾಡಿಸಿಕೊಂಡರು ಅನ್ನುತ್ತಾರೆ. ಅಂತು ಮುಂದೆ ಮನೆ, ಮಾರು ಎಲ್ಲವೂ ರಂಗಪ್ಪನವರದ್ದಾಯಿತು—ಎಂದು ಕಾಣುತ್ತೆ.

'ನಾನು ಕೇಳಿ ತಿಳಿದ ಹಾಗೆ ಹಿರಿಯ ಧನಿಗಳ ಕಡೆಯ ದಿವಸಗಳೂ ತುಂಬ ಕಷ್ಟದವುಗಳಂತೆ. ಕೊನೆ ಕೊನೆಗೆ ಪ್ರಪಂಚದ ಮೇಲೆಯೇ ಅವರಿಗೆ ವೈರಾಗ್ಯ ಬಂದಿತ್ತಂತೆ. ಅಂದರೆ ನೋಡಿ, ಅವರಿಗೆ ನಾಲ್ಕು ಮಂದಿ ಮಕ್ಕಳು. ಮೂರು ಹೆಣ್ಣು, ಒಂದು ಗಂಡು. ಇಬ್ಬರು ಹೆಣ್ಣು ಮಕ್ಕಳು ಮದುವೆಯಾಗಿ ತೀರಿಕೊಂಡರು. ಕಿರಿಯ ಹುಡುಗಿ—ಗೊತ್ತಲ್ಲ ನಿಮಗೆ—ಶ್ಯಾನುಭಾಗರ ಮನೆಯ ಆ ಮುದುಕಿ ಅಮ್ಮ. ಅವರಿಗೆ ಲಗ್ನವಾದ ಸ್ವಲ್ಪ ಸಮಯದಲ್ಲೇ, ಧನಿಗಳೂ ತೀರಿಕೊಂಡರು. ಮಕ್ಕಳು ತೀರಿಕೊಂಡ ಬೇಸರದ ಜೊತೆಗೆ, ಚಿಂತೆಯಿಂದ ವೈರಾಗ್ಯ ತಾಳಿ ಸುಮ್ಮನೆ ಕುಳಿತುದಕ್ಕೂ, ಈ ಭಾವ ರಾಯರಿಗೆ ಯಜಮಾನಿಕೆ ಕೊಟ್ಟುದಕ್ಕೂ ಒಳ್ಳೆಯ ಗಂಟುಬಿತ್ತು.

'ಆ ಮೇಲಿನ ಕತೆಗಳನ್ನೆಲ್ಲ ನೆನೆದುಕೊಂಡರೆ ಎಲ್ಲವೂ ದಶಾವತಾರ ಆಟದ ಹಾಗೆ ಒಂದು ರಾತ್ರಿಯ ಆಟವಾಗಿ ಕಾಣುತ್ತದೆ. ಎಷ್ಟೆಲ್ಲ ಆಸ್ತಿಯಿತ್ತು, ನಗದಿಯಿತ್ತು-ಅನ್ನುತ್ತಾರೆ. ಬರಿಯ ಎಂಟು, ಹತ್ತು ವರ್ಷಗಳೊಳಗಾಗಿ ಸಾಲವಾಯಿತು, ಭೂಮಿ, ಅಡವಾಯಿತು, ಕೊನೆಗೆ ಪರಾಧೀನವಾಯಿತು. ಆ ಮೂಡೋಡಿಯ ಮನೆಗೆ, ಭೂಮಿಯನ್ನು ಕೊಂಡವರು ಬಂದು ಕೂತರು. ರಂಗಪ್ಪಯ್ಯನವರ ಹೊಟ್ಟೆ ಸಂಕಟ ಹೆಚ್ಚಿತು. ಒಕ್ಕಲುಗಳನ್ನು ಅವರೆದುರಿಗೆ ತಿರುಗಿಸಿ ಕಟ್ಟಿದರು. ಏನೇನೋ ಅನ್ಯಾಯ ಮಾಡಿಸಿದರು. ಆಸ್ತಿಕೊಂಡವರು ಒಕ್ಕಲು ಬಿಟ್ಟು ಹೋದರು. ಒಕ್ಕಲುಗಳೂ ಕ್ರಮೇಣ ಜಾಗಬಿಟ್ಟು ಹೋದರು. ರಂಗಪ್ಪಯ್ಯನವರ ತಂಟೆ ಯಾರೊಬ್ಬರಿಗೂ ಬೇಡವಾಯಿತು.

'ಇಷ್ಟು ಮಾಡಿ, ಅವರಾದರೂ ಸುಖಪಟ್ಟರೋ? ಪಡಬೇಕು ಹೇಗೆ? ಮಾಡಿದ ಪಾಪ, ಕರ್ಮ ಬೆನ್ನು ಬಿಟ್ಟೀತೇ? ಕಾಯಿಲೆ, ಸಾಲ, ಸಾವು

ಒಂದಲ್ಲ ನೂರು ಬಗೆಗಳಿಂದ ಹಿಂಸೆಪಟ್ಟರು. ದತ್ತಪ್ಪನವರಿಗೆ ಕೊಡಬೇಕೆಂದಿದ್ದ ಆ ಹುಡುಗಿಯೂ ತೀರಿಕೊಂಡಿತು. ಅವರ ಕಣ್ಣೆದುರಿಗೇ ಅವರ ಗಂಡು ಮಕ್ಕಳು ನರಳಿದರು. ಅವರೂ ರೋಗದಿಂದ ಕಾಯಿಲೆ ಹಿಡಿದರು; ಮನೆಯೆಂಬುದು ಒಂದು ನರಕವಾಯಿತು. ಪುಣ್ಯಕ್ಕೆ ದತ್ತಪ್ಪನವರ ತಂಗಿ ಆ ವೇಳೆಗೆ ಮನೆಯನ್ನು ಬಂದು ಸೇರಿದರು. ಗಂಡ ತೀರಿಕೊಂಡು ತನಗೆ ಗತಿಯಿಲ್ಲದ್ದಕ್ಕೆ ಬಂದಿರಬೇಕು, ಬಂದರು; ಆ ಮನೆಯ ದುಃಖವನ್ನು ಕಂಡರು. ತನ್ನ ಕುಟುಂಬಕ್ಕೆ ಮಾಡಿದ ಅನ್ಯಾಯವೊಂದನ್ನೂ ಎಣಿಸದೆ ಅಲ್ಲಿನ ಚಾಕರಿಮಾಡಿ, ಎಷ್ಟಾದರೂ ತಮ್ಮ ಬಳಗ, ಎಂದುಕೊಂಡು, ತಮ್ಮಿಂದಾಗುವ ಸೇವೆ ಮಾಡಿದರು. ಎಷ್ಟೋ ವರ್ಷಗಳ ಹಿಂದೆ ಆ ಮುದುಕ ಅಮ್ಮನನ್ನು ಕಾಣಲಿಕ್ಕೆ ಹೋದಾಗ ಅವರೆಂದ ಮಾತು ನೆನಪಿಗೆ ಬರುತ್ತದೆ–'ಮುತ್ತಾ, ಎಷ್ಟೆಂದರೂ ಕುಲದವರು. ನನ್ನ ಅಪ್ಪನಿಗೆ ಅನ್ಯಾಯ ಮಾಡಿದ್ದರೂ ನನಗೆ ಆಶ್ರಯ ಕೊಟ್ಟಿದ್ದಾರೆ. ಮಾವ ಅನ್ಯಾಯ ಮಾಡಿದನೆಂದು ಅವನ ಈ ಮಕ್ಕಳು ಗತಿಗೋತ್ರವಿಲ್ಲದೆ ನರಳುವಾಗ ನಾನಲ್ಲದೆ ಇನ್ಯಾರು ನೋಡಬೇಕು ಅವನ್ನು ? ನನಗೂ ಒಂದು ಆಸೆಯಿದೆ– ಇವುಗಳಲ್ಲಿ ಒಂದಾದರೂ ಬದುಕಿ, ಉಳಿದು, ಬೆಳೆದು, ಮೂಡೋಡಿ ಭೂಮಿಯನ್ನು ಉಳಿಸಿಕೊಂಡೀತೋ–ಎಂಬ ಆಸೆ' ಎಂಬ ನೆನಪು ನನಗೆ ಚೆನ್ನಾಗಿದೆ. ನಾನು ಅಲ್ಲಿಗೆ ಹೋಗಿಬರುವುದು ಈಗ ಕಡಿಮೆ. ಆ ಅಮ್ಮನನ್ನು ನೋಡುವುದಕ್ಕೆ ಆಸೆಯಾದರೂ ಹೋಗಿಬರುವುದಿಲ್ಲ. ಹಳೆಯ ನೆನಪುಗಳೆಲ್ಲ ಬರುತ್ತವೆ. ಅವರಿಗೂ ಕಣ್ಣೀರು ತಡೆಯುವುದಕ್ಕಾಗುವುದಿಲ್ಲ ನನಗಂತೂ ಅದಕ್ಕಿಂತ ಮೊದಲೇ ಆಗುವುದಿಲ್ಲ.

"ಬಹುಕಾಲದ ತನಕ ಆ ಮುದುಕಿ ಆ ಆಸೆ ಇಟ್ಟುಕೊಂಡಿದ್ದರು. ಮಾವ ಸತ್ತ ಮೇಲಾದರೂ ಆ ವರ್ತಮಾನ ಕೇಳಿ, ಅಣ್ಣ ಬಂದಾರು, ಅವರ ಪಾಲಿನ ನೆಲ ಅವರಿಗೆ ಸಿಕ್ಕೀತು–ಎಂಬ ಆಸೆ ಹಿಡಿದಿದ್ದರು. ಆದರೆ ಅದು ಬರಿಯ ಕನಸಾಯಿತು. ಅದು ಬಿಡಿ–ರಂಗಪ್ಪಯ್ಯ ಮಾಡಿದ ಕಾರುಭಾರಕ್ಕೆ ಅವರ ಸ್ವಂತ ಮನೆ ಅಡಿ ಸಹ ಉಳಿದದ್ದು ಆಶ್ಚರ್ಯವೇ.

" ದೇವರು ಆ ಮುದುಕಿಯ ಪಾಪ ನೋಡಿ ಆ ಮನೆ ಉಳಿಸಿದನೇ ಹೊರತು ಇನ್ನೊಬ್ಬರ ಪುಣ್ಯದಿಂದಲ್ಲ. ಈಗ ಸರಿ, ಶ್ಯಾನುಭಾಗರಿದ್ದಾರೆ,

ಎಲ್ಲವನ್ನು ನೋಡಿಕೊಳ್ಳುತ್ತಿದ್ದಾರೆ. ಆದರೆ ನೋಡಿ, ಒಬ್ಬರಿಂದಲಾದರೂ ಮೂಡೋಡಿಯ ಭೂಮಿಯನ್ನು ಊರ್ಜಿತಕ್ಕೆ ತರಲಿಕ್ಕಾಯಿತೇ ? ಅದ ರಂಥ, ಸ್ವರ್ಗದಂಥ ಭೂಮಿ ಹೀಗೆ ಕಾಡುಪಾಲಾಯಿತಲ್ಲ. ಯಾರಿಗೂ ಇಲ್ಲದೆ ಹಾಳಾಯಿತಲ್ಲ. ಆದನ್ನೆಲ್ಲ ನೆನೆದರೆ–ದೇವರ ಆಟದ ಮುಂದೆ ಗೇಣು ದ್ದದ ಮನುಷ್ಯನ ಆಟ ಏನು ! ಎಂದು ಕಾಣುತ್ತದೆ " ಎಂದು ದುಃಖದಿಂದ ಮಾತನಾಡಿದ. ಮಾತಿನ ಸರಣಿಯಲ್ಲಿ ಹೇಳಿದ ಸಂಗತಿಯಲ್ಲಿ, ಸಂದು ಗುಣಿಸುಗಳು ತಪ್ಪಿರಬಹುದಾದರೆ, ಅದಕ್ಕೆ ಅವನ ನೆನಪನ್ನು ದೂರಬೇಕು. ಮೂಡೋಡಿಯ ಮನೆಯನ್ನು ಕುರಿತು, ಸಣ್ಣ ಧನಿಗಳನ್ನು ಕುರಿತು, ಅವರ ತಂಗಿಯನ್ನು ಕುರಿತು, ಮುತ್ತಯ್ಯ ಗೌಡನ ಎದೆಯಲ್ಲಿ ತುಂಬಿದ್ದ ಭಕ್ತಿ, ಅಭಿಮಾನಗಳು ಮಾತ್ರ ಅಚ್ಚಳಿಯದೆ ಯಾರಿಗೂ ಕಾಣಿಸಬೇಕು. ಅದನ್ನು ಕೇಳುತ್ತಿದ್ದ ಶಂಕರನಿಗೆ ತನ್ನ ಕುಲದ ಪೂರ್ವದ ಬಾಂಧವ್ಯ, ಸಂಬಂಧ ಇವುಗಳ ಸೆರಗು ಸ್ಪಷ್ಟವಾಗಿ ತಿಳಿಯಲಿಲ್ಲ. ಆದರೂ ತನ್ನ ಕುಲದ ಕೀರ್ತಿಗೆ ಯಾವುದೋ ಒಂದು ರಾಹು ಆವರಿಸಿ, ಅದನ್ನು ಮಸುಕುಗೊಳಿಸಿತೆಂದೂ, ತನ್ನ ಅಜ್ಜ ಅತಿ ಹೆಚ್ಚಿನ ಅನ್ಯಾಯಕ್ಕೆ ಗುರಿಯಾದ ನಿರಪರಾಧಿಯೆಂದೂ ತಾನು ಹೆಮ್ಮೆ ಪಡಬಹುದಾದ ಶೀಲ, ಹಿರಿಮೆಗಳು ಆ ಮುತ್ತಜ್ಜನಲ್ಲಿ ಇದ್ದುವೆಂದೂ ಅವನ ಮನಸ್ಸಿಗೆ ಹೊಳೆಯಿತು. ಮೈಮುಖವೆಲ್ಲ ಗೌಡನ ಮಾತುಗಳನ್ನು ಕೇಳಿ, ಬೆಚ್ಚಗೆ ಬೇಯತೊಡಗಿತು.

ಮುದಿ ಮುತ್ತಯ್ಯ ಗೌಡ ಹಲವಾರು ಸಂಗತಿಗಳನ್ನು ಹೇಳಿದರೂ ಎಳಚಿತ್ತಾಯರ ಗಮನ ಹೋದುದು–ಅಲ್ಲಿನ ಮಾನವೀ ಸಂಬಂಧಗಳಿಗಲ್ಲ. ಮೂಡೋಡಿ ಭೂಮಿಯ ಕಡೆಗೆ ಮಾತ್ರ. ಆದುದರಿಂದ ಅವರೆಂದರು " ಈಗ ಮೂಡೋಡಿ ಭೂಮಿಯ ಕಥೆ ಹಾಗೋ ? ಅದು ರಂಗರಾಯರ ಕುಟುಂಬಕ್ಕೇನೇ ಸಂಬಂಧಪಟ್ಟದ್ದೋ ? ರಂಗರಾಯರಿಗೆ ಅದನ್ನು ಮಾಡಿ ಕೊಳ್ಳಬಹುದಿತ್ತು. ಅವರೇ ಎಷ್ಟೋಸಾರಿ ಅಂದದ್ದುಂಟು–ಬರಿಯ ಕಂದಾಯಕ್ಕೇ ಆ ಜಮೀನು ಯಾರಿಗೂ ಸಿಗಬಹುದೆಂದು. ನಾನೂ ಅಂದಿದ್ದೆ–ರಂಗರಾಯರೇ ನೀವೇ ಮಾಡಿಕೊಳ್ಳಿ " ಎಂದು.

" ಕೊಳ್ಳಬಾರದೇ ಅದನ್ನು " ಎಂದರೆ, ಅವರ ಅಭಿಪ್ರಾಯ ಬೇರೆಯೆ. ಯಾರು ಮಾಡಿಕೊಂಡರೂ ಫಲವಿಲ್ಲ ಎನ್ನುತ್ತಾರೆ ಅವರು. ' ನಿಮಗೆ

ಮರುಳು ! ವರ್ಷ ವರ್ಷವೂ ತೀರ್ವೆ ದಂಡತೆರಬೇಕಾದೀತು ಅದಕ್ಕೆ. ಹಿಂದಿನ ಕಾಲದ ಸಂಗತಿ ಬೇರೆ. ಆಗ ಭೂಮಿ ಹೇಗೂ ಇದ್ದಿರಲಿ. ಈಗ ಅದು ಕೆಲಸಕ್ಕೆ ಬಾರದ ಕಾಡು ಬಂಜರು. ಅದರ ಅರ್ಧಾಂಶವಂತು ರಿಸರ್ವ ಕಾಡಿಗೆ ಸೇರಿಹೋಗಿದೆ. ತೋಟಕ್ಕಾಗುವ ಜಾಗ ಹಾಗೆ ಹೋದರೆ, ಗದ್ದೆ ಗಾಗುವ ಜಾಗ ಜವುಗು ನೆಲವಾಗಿದೆ. ತೆಗೆದುಕೊಂಡವ ಒಕ್ಕಲುಗಳನ್ನು ಎಲ್ಲಿಂದ ತರಬೇಕು ; ಹಣ ಎಲ್ಲಿಂದ ಸುರಿಯಬೇಕು ? ಅಲ್ಲದೆ ಅಕ್ಕಿ ಮುಡಿಗೆ ನಾಲ್ಕು ರೂಪಾಯಿ ಸಿಗದ ಈ ಕಾಲದಲ್ಲಿ ಸುರಿದ ಹಣದ ಮೇಲೆ ಬಡ್ಡಿಯೇ ಹುಟ್ಟಲಾರದು " ಎಂದಿದ್ದರು. ಇದೂ ಹಳೆಯ ಕಥೆಯೇ. ಆಗ ಅಕ್ಕಿ ಮಾನಿಗೆಗೆ ಮೂರು ರೂಪಾಯಿಯಿತ್ತು ದರ. ನೀನು ಹೇಳಿದ ಈ ಎಲ್ಲ ಹಳೆಯ ಕಥೆಗಳನ್ನು ನೆನೆದರೆ–ಹಿರಿಯರ ಬದುಕು ಉಳಿಸಿಕೊಳ್ಳ ಬೇಕು ಎನ್ನುತ್ತಿದ್ದೆನೋ—ಏನೋ ನಾನು."

ಅದಕ್ಕೆ ಮುತ್ತಯ್ಯನೆಂದ " ರಂಗರಾಯರು ಮಾಡುವ ಬೇಸಾಯ ಕಾಣುವುದಿಲ್ಲವೇ? ಅವರಿಗೆ ಹೇಗೆ ಧೈರ್ಯಬರಬೇಕು? ಅವರ ಅಜ್ಜನಿಂದ ಹಾಳಾದ ಬದುಕನ್ನು ಅವರ ಅಪ್ಪ ಉಳಿಸಿಕೊಂಡರಲ್ಲವೇ ಇವರು ಉಳಿಸು ವುದು ! ಆ ಮುದುಕಿ ಅಮ್ಮ, ಅವರ ಅಪ್ಪನಿಗೆ ಹೇಳಿಲ್ಲ ಅನ್ನುತ್ತೀರಾ ? ಅಲ್ಲದೆ ಅವರ ಅಪ್ಪನಿಗೆ ಒಂದು ಹೆದರಿಕೆಯಿತ್ತು. ತಾನೇನಾದರೂ ಬಹಳ ಹೇಳಿ ನೋಡಿದರು. ಎಲ್ಲವೂ ಕೆಟ್ಟಮೇಲೆ ಮಾಡುವುದೇನುಂಟು ? ಮಾಡಿ ಅದನ್ನು ಸರಿಪಡಿಸಿದರೆ, ಓಡಿ ಹೋದ ಆ ಹುಡುಗ ' ನನ್ನದು ನನಗೆ ಕೊಡಿ '–ಅಂದರೆ ! ಅವರಿರುವ ಮನೆಯೇನೆ ಅವರದ್ದಲ್ಲ. ದತ್ತಪ್ಪ ನವರ ತಂದೆ ಕಟ್ಟಿಸಿದ ಮನೆಯಲ್ಲವೇ ? "

" ಅದೆಲ್ಲ ಏನು ಹೇಳುವುದು ! ಕೆಟ್ಟ ಕಾಲಗತಿ ಬಂತು ; ಹಾಗಾ ಯಿತು. ಅದೆಲ್ಲ ಕಣ್ಣೀರಿನ ಕಥೆಯೆ. ಶಾಂತಮೂರ್ತಪ್ಪಯ್ಯನವರ ಮಕ್ಕಳಿ ಗಾದ ಅನ್ಯಾಯವನ್ನು ನೆನೆದರೆ ನನಗೆ ಈಗಲೂ ಕಣ್ಣೀರು ಬರುತ್ತದೆ. ಅವರ ಕಷ್ಟದ ಮುಂದೆ ನನಗಾದ ದುಃಖ ಕಡಿಮೆಯೆಂದು ಕಾಣುತ್ತದೆ. ಅಂಥ ಒಳ್ಳೆಯವರ ಬದುಕೇ, ಪುಣ್ಯಾತ್ಮರ ಬದುಕೇ ನಿಲ್ಲಲಿಲ್ಲ ಅಂದರೆ ! ಅವರು ಮಾಡಿದ ಅನ್ನ ಅವರ ಮಕ್ಕಳಿಗೆ ಸಿಗಲಿಲ್ಲ ಅಂದರೆ ! ನಾನು ದುಡಿದದ್ದು ನನ್ನ ಮರಿಮಕ್ಕಳಿಗೆ ಸಿಗಲಿಲ್ಲವೆಂದು ಚಿಂತೆಪಟ್ಟು ಫಲವಿದೆಯೇ ? "

ಶಂಕರ ಎಲ್ಲವನ್ನೂ ಕಿವಿನಿಮಿರಿಸಿಕೊಂಡು ಕೇಳುತ್ತಿದ್ದ. ನಡುನಡುವೆ ಏನು ಏನು-ಎಂದು ಸೀತಾರಾಮನಿಂದ ತಿಳಿದುಕೊಳ್ಳುತ್ತಿದ್ದ. ಅವನ ಮುಖ ಮನಗಳೆಲ್ಲ ದುಃಖದ ಆವೇಗದಿಂದ ತುಂಬಿತ್ತು. ಹಿಂದಿನ ಇತಿಹಾಸ ನೆನಪು ಸಜೀವವಾಗಿ ಕಣ್ಮುಂದೆ ನಲಿದಾಡುತಿತ್ತು. ತನ್ನ ಅಜ್ಜಿಯು ಹೇಳಿದ ಅರ್ಧಮರ್ಧ ಇತಿಹಾಸದೊಡನೆ, ಮುತ್ತಯ್ಯ ಹೇಳಿದ ಕತೆ ಗಳನ್ನು ಹೊಂದಿಸಿಕೊಳ್ಳುವಾಗ ದಾರುಣ ವೇದನೆಯುಂಟಾಯಿತು. ಬದು ಕಿರುವ ಅಜ್ಜಿಯ ನೆನಪೊಡೆದು, ಪೂಜೆಯಿಲ್ಲದ ದೇಗುಲದ ನೆನಪಾಯಿತು. ತನ್ನ ಅಜ್ಜ ಅಂದು ಓಡಿಹೋಗದಿರುತ್ತಿದ್ದರೆ ಆ ನೆಲಕ್ಕೂ, ತನ್ನ ಬದು ಕಿಗೂ ಎಂಥ ಮಧುರಬಾಂಧವ್ಯ ಬೆಳೆದುಬರುತ್ತಿತ್ತೋ ಎಂಬ ಆಸೆ ಯಾಯಿತು. ತನ್ನ ಪೂರ್ವ ಸಂಬಂಧದ ನೆನವರಿಕೆಯನ್ನು ಹುಟ್ಟಿಸುವ ಸಲುವಾಗಿಯೇ ಆ ಬಡ ಮುದುಕಿಯೂ, ಈ ಮುದಿ ಗೌಡನೂ ಬದುಕಿ ದ್ದಾರೆ—ಎಂದು ತೋರಿತು. ಆ ಎರಡು ಹಳೆಯ ಜೀವಗಳಲ್ಲಿ, ಸೆರಗು ಕಡಿದು ಹೋದ ಪುರಾತನ ಬಾಳಿನ ವಿಚಾರದಲ್ಲಿ ಉಳಿದಿರುವ ಭಕ್ತಿ, ಆದರಗಳು, ತನ್ನಲ್ಲಿ ಬಾರದಿರುವುದಕ್ಕೆ ತನ್ನ ಹಿರಿಯರ ಚರಜೀವನ ಕಾರಣವಲ್ಲವೇ—ಎಂದನಿಸಿತು. ತಂದೆಯ ನೌಕರಿಯ ಜೀವನವನ್ನೂ, ಬಾಡಿಗೆಯ ಮನೆಯನ್ನೂ, ಆ ಹಿನ್ನೆಲೆಯೊಡನೆ ನೆನೆದುದಾದರೆ, ಅವುಗಳ ಬಣ್ಣ, ಬೆಡಗುಗಳೆಲ್ಲ ಕೃತಕವಾಗಿ ಕಾಣುತ್ತವೆ. ಹಿಂದಿನ ನೆಲೆಯಿಲ್ಲದ ನಾಟಕವಾಗಿ ಕಾಣಿಸುತ್ತದೆ. ಎಣಿಸಿದಷ್ಟೂ ಭ್ರಮೆಗೊಳ್ಳುತ್ತದೆ ಮನಸ್ಸು.

ದುಃಖ ತುಂಬಿದ ಅವನ ಮನಸ್ಸಿನಲ್ಲಿ ಅಪೂರ್ವ ಆಸೆ ಉದಯಿಸು ತ್ತದೆ. ಹಿರಿಯರು ನಲಿದು, ಬಾಳು ಸಾಗಿಸಿದ ಆ ನೆಲದಲ್ಲಿ, ತಾನು ತನ್ನ ಬಾಳನ್ನು ಬೆರೆಯಿಸಲು ಬಂದೀತೇ—ಎಂಬ ಆಸೆ ಹುಟ್ಟುತ್ತದೆ. ಆ ಹಂಬಲ ಪುಟ್ಟ ಒರತೆಯಾಗಿದ್ದುದು ಇಂದೀಗ ಭಾವಸಾಗರವಾಗಿದೆ; ಕಲ್ಲೋಲವನ್ನೆಬ್ಬಿಸುತ್ತಿದೆ! ಅದರಲ್ಲಿಯೇ ತಲ್ಲೀನವಾದ, ಧ್ಯಾನ ಸಮಾಧಿ ಗೊಂಡ ಶಂಕರನ ಮನಸ್ಸು, ಸೀತಾರಾಮನ ಪ್ರಶ್ನೆಯೊಂದರಿಂದ ಚಕಿತ ವಾಗಿ ಎಚ್ಚರ ತಳೆಯಿತು.

ಈ ತನಕ 'ಗೌಡ, ಮುತ್ತಯ್ಯ' ಎಂದು ಏಕವಚನದಿಂದ ಸಂಬೋಧಿಸುತ್ತಿದ್ದ ಆತನ ನಾಲಗೆ, ಹೊಸತಾಗಿ ಉಂಟಾದ ಮಮತೆಯಿಂದ

ವ್ಯಾಕರಣ ತಿದ್ದಿಕೊಂಡು ನುಡಿಯಿತು ; " ಮುತ್ತಯ್ಯ ಗೌಡರೇ, ನನ್ನ ಈ ಸ್ನೇಹಿತನನ್ನು ಕಂಡಾಗ ದತ್ತಪ್ಪರಾಯರ ನೆನಪಾಯಿತೆನ್ನುತ್ತೀರಾ ? ಅವರ ಮಗನ ಮಗ ಇವರು—ಗೊತ್ತಾಯಿತೇ ! ಅಜ್ಜ, ಮೊಮ್ಮಕ್ಕಳಲ್ಲಿ ಅಂಥ ಹೋಲಿಕೆಯಿದೆಯೇ ? " ಎಂದು ಕೇಳಿದರು.

ಬೇಸರದ ಕಥೆಯನ್ನೆಲ್ಲ ಹೇಳಿ, ತಾನೂ ಬೇಸರಗೊಂಡಿದ್ದ ಗೌಡ, ಆ ಕಥೆ ಹೇಳುವುದಕ್ಕೆ ಕಾರಣವಾದ ಮುಖವನ್ನೇ ದಿಟ್ಟಿಸಿ, ನೋಡಿಹೇಳಿದ– " ಸುಳ್ಳೆನ್ನುತ್ತೇನೆಯೇ ನಾನು ? ಅದೇ ಮುಖ, ಅದೇ ಮುಖ. ನಾನು ಕೊನೆಯ ಬಾರಿಗೆ ಕಂಡಾಗ ಹೇಗಿದ್ದರೋ ಹಾಗೆಯೇ ಇದ್ದ ಹಾಗೆ ಅನಿಸುತ್ತದೆ " ಎಂದು ನುಡಿದು ಗದ್ಗದ ತಾಳಿ, ಥಟ್ಟನೆ ಕುಳಿತುಬಿಟ್ಟ ಒಂದು ಕ್ಷಣ. ತನ್ನ ಎಳೆಯ ಧನಿಯ ನೆನಪಾಯಿತು. ಆ ಧನಿ ತನ್ನಲ್ಲಿ ತೋರಿಸಿದ ವಿಶ್ವಾಸ, ಪ್ರೀತಿಗಳ ನೆನಪಾಯಿತು. ಆದರಿಂದ ಗೌಡನೆಂದ, " ನನ್ನ ಸಣ್ಣ ಧನಿಗಳು ಎಷ್ಟುಸಾರಿ ಚಿಕ್ಕವನಾಗಿದ್ದಾಗ ನನ್ನ ಬೆನ್ನು ತಟ್ಟಿ, ತಿರುಗಾಟಕ್ಕೆ ಜತೆಗೆ ಕೊಂಡುಹೋಗಲಿಲ್ಲ ಹೊಳೆಯಲ್ಲಿ ನೀರು ತುಂಬಿದಾಗ ಅವರ ತೋಳನ್ನು ಒಂದು ಕೈಯಲ್ಲಿ ಹಿಡಿದು, ಅವರ ಜೋಡುಗಳನ್ನು ಇನ್ನೊಂದು ಕೈಯಲ್ಲಿ ಹಿಡಿದು, ನದಿ ದಾಟಿಸಿದ ನೆನಪು ಮರೆಯದೆ ನಿಂತಿದೆ ಮನಸ್ಸಿನಲ್ಲಿ. ಹೊಳೆಯೆಂದರೆ ಏಕೋ ಅವರಿಗೆ ಭಯ. ನೀರಿನಲ್ಲಿ ಮೀಯುವ ಆಸೆಯಾದರೂ ಇಳಿಯುವುದಕ್ಕೆ ಹೆದರಿಕೆ. ನಾನಿದ್ದೇನೆ ಜತೆಗೆ—ಎಂದರೆ ಇಳಿಯುತ್ತಿದ್ದರು. ಸತ್ಯಕ್ಕೊ ಒಡೆಯ—ಇವರು ಆಗ ಅಂಗಿ ಹಾಕಿಕೊಂಡಿದ್ದರು. ಇವರ ಮುಖ ಮಾತ್ರ ಕಂಡು, ನನ್ನ ಧನಿಗಳ ಭ್ರಮೆ ಉಂಟಾಯಿತು. ಈಗಂತೂ ಅಂಗಿ ಇಲ್ಲದೆ ಕೂತಿದ್ದಾರಲ್ಲ— ಅದೇ ಎದೆ, ಮೈಕಟ್ಟು, ಮುಖ ; ಅವೇ ಕಣ್ಣು, ಮೂಗುಗಳು. ನನ್ನ ಗುಡಿಸಲಿಗೆ ಬಂದು ನೀವು ಹಣ್ಣು ತಿನ್ನಲು ಕುಳಿತಿರಲ್ಲ. ಆಗ ಮುಖ ನೋಡಿದ ನನಗೆ, ನನ್ನ ಧನಿಗಳು ಕನಸಿನಲ್ಲಿ ಬಂದು ಭೇಟಿ ಕೊಟ್ಟಂತಾಯಿತು " ಎಂದು ನುಡಿದ ಮುತ್ತಯ್ಯ. ತನ್ನ ಭಕ್ತಿ, ಒಲವುಗಳನ್ನು ತಡೆಯಲಾರದೆ ಶಂಕರನ ಬಳಿಗೆ ಹೋದ. ಮುಪ್ಪಿನ ಸಲಿಗೆಯಿಂದ ತನಗೆ ಪ್ರಿಯವಾದ ಆ ಮುಖವನ್ನು ಸವರಿದ. ಆ ಮುದಿ ಕೈಗಳು ಕಪೋಲದಿಂದ ಶಂಕರನ ಗಲ್ಲಕ್ಕೆ ಬರುವುದರೊಳಗಾಗಿ, ಶಂಕರನ ಕಪೋಲಗಳ

ಮೇಲೆ ಕಂಬನಿಯ ಪ್ರಳಯವಾಯಿತು. ಅವನ ಜೀವನದಲ್ಲೆ–ಅಷ್ಟೊಂದು ಹೃದಯ ಸ್ಪರ್ಶಿಯಾದ, ಆಳವಾದ, ಮಾರ್ಮಿಕವಾದ ಅನುಭವ ಉಂಟಾಗಿರಲಿಲ್ಲ. ಇದಕ್ಕೆ ಸಮನಾದುದು, ಅಥವಾ ತುಸು ಕಡಿಮೆಯದು ಎಂದರೂ ಅಡ್ಡಿಯಿಲ್ಲ. ಆ ಮುದುಕಿ ಅವನ ಮೈಸವರಿದಾಗ ಉಂಟಾದ ಅನುಭವ. ಈ ಎರಡು ಸ್ಪರ್ಶಗಳಿಂದಲೇ, ಸತ್ಯಾನುಭವದ ಸ್ವರ್ಗವನ್ನು ಹೊಕ್ಕಂತಾಗಿತ್ತು ಅವನಿಗೆ. ಹಿಂದಣ ರಾತ್ರಿ ಶಂಕರ ಮಲಗಿಕೊಂಡಿದ್ದರೆ ಅವನ ಚೇತನಮಯ ನಿದ್ರೆಯಲ್ಲಿ—ಆ ಮುದುಕಿಯ ಬಿಂಬವಲ್ಲದೆ ಇನ್ನೊಂದು ಕಾಣಿಸಿರಲಿಲ್ಲ.

ಶಂಕರ ಅತ್ತುದನ್ನು ನೋಡಿ ಗೌಡನೆಂದ "ಅಯ್ಯಾ, ಮುಟ್ಟಿದ್ದಕ್ಕೆ ಬೇಸರವಾಯಿತೇ? ನಾನು ಗೌಡ, "ಮುಟ್ಟಾಳು" ಎಂದುದಕ್ಕೆ ಸೀತಾರಾಮ "ಹಾಗಲ್ಲ ಗೌಡರೇ, ಪಾಪ–ಅವರಿಗೆ ನೀವು ಹೇಳಿದ ಹಳೆಯ ಕಾಲದ ಕಥೆಗಳನ್ನು ಕೇಳಿ ತುಂಬ ದುಃಖವಾಗಿದೆ. ಏನೇನೂ ಸಂಬಂಧವಿಲ್ಲದ ನಮಗೇನೆ ಹೀಗಾಗುತ್ತದೆ. ಅಷ್ಟೊಂದು ಒಳ್ಳೆಯ ಮನೆಯ ಬದುಕು, ಬರಿಯ ಒಂದು ತಲೆಮಾರುಗಳಲ್ಲಿ, ಹೀಗೆಲ್ಲಾ ಆಗುವುದೆಂದರೆ ದುಃಖವಾಗದಿದ್ದೀತೇ."

ಗೌಡನಿಗೆ ದತ್ತಪ್ಪನವರ ಮೊಮ್ಮಗನ ಸಂಗತಿಗಳನ್ನು ಕೇಳುವ ಕುತೂಹಲವಾಯಿತು. ತಾನು ಅವರನ್ನು ಕಂಡ ಗಳಿಗೆಯಿಂದ, ಅಂದಿನ ತನಕ ಎಲ್ಲ ಸಂಗತಿಗಳನ್ನು ಹೇಳುವವರಿದ್ದರೆ—ದಿನ, ತಿಂಗಳುಗಳ ಕಾಲ ಕೇಳುವುದಕ್ಕೆ ಅವನು ಸಿದ್ಧ. ತನ್ನ ಧನಿಗಳ ಮೊಮ್ಮಗ ಎಂಬುದರಿಂದ "ನಿಮ್ಮ ಅಪ್ಪ, ಅಮ್ಮ ಎಲ್ಲಿದ್ದಾರೆ ? ಏನು ಮಾಡಿಕೊಂಡಿದ್ದಾರೆ?" ಎನ್ನುವ ಕುತೂಹಲ ತಾಳಿದ. ಸೀತಾರಾಮ ಶಂಕರನ ಮಾತಿನ ಹೊಣೆಯನ್ನು ಹೊತ್ತು, ಒಂದೊಂದಾಗಿ ಹೇಳಿದ–ತನಗೆ ತಿಳಿದಷ್ಟನ್ನು. ತಂದೆ ತಾಯಿಗಳ ವಿಚಾರ ಹೇಳಿದ; ದಿಲ್ಲಿ ನಗರದ ವೈಭವ ಬಣ್ಣಿಸಿದ. 'ನಿನ್ನ ಧನಿಗಳ ಮಗಂದಿರು ಅಂದರೆ ಇವರ ತಂದೆ ಸರಕಾರದಲ್ಲಿ ದೊಡ್ಡ ನೌಕರಿಯಲ್ಲಿದ್ದಾರೆ' ಎನ್ನುವಾಗ, ಶಂಕರ ನಡುವೆ ಬಂದು 'ಸೀತಾರಾಮು, ಅದನ್ನೆಲ್ಲ ಏನು ಹೇಳುವುದು ? ಏನು ನೌಕರಿ ! ಏನು ವೈಭವ ! ಮುತ್ತಯ್ಯ ಹೇಳಿದ ಆ ಹಳೆಗಾಲದ ಬಾಳೆಲ್ಲಿ ? ನಮ್ಮ ಬಾಳೆಲ್ಲಿ ? ಅವನ ಒಂದು ಶತಮಾನ

ಕಾಲದ ಜೀವನವೆಲ್ಲಿ? ನಮ್ಮದೆಲ್ಲಿ! ಅವನ ಬಾಳಿನ ಮುಂದೆ ನಮ್ಮದು ನಾಟಕ; ಮಕ್ಕಳಾಟ! ಇಂದು ಕಟ್ಟಿ ನಾಳೆ ಅಳಿಯುವ, ಇಂದು ಅಡಿ ನಾಳೆ ಮರೆಯುವ, ಎಳೆಯರ ಆಟ. ಇಷ್ಟೇ-ಮೀಸೆ ಬಂದವರು ಆಡುತ್ತಿದ್ದಾರೆ ಆ ಆಟವನ್ನು. ಆಡುವ ಮನೋವೃತ್ತಿ, ವಸ್ತುಗಳು ಎರಡೂ ಮಕ್ಕಳದ್ದೇ' ಎಂದು ಗೌಡನ ಕಡೆಗೊಮ್ಮೆ, ಎಳಚಿತ್ತಾಯರ ಕಡೆಗೊಮ್ಮೆ ಮುಖ ತಿರುಗಿಸಿ ತನಗಾದ ಸಂತೋಷ ವ್ಯಕ್ತಮಾಡಿದ. ಸೀತಾರಾಮನಿಂದಾಗಿ ಬಂಗಾಡಿಯನ್ನೂ, ಮುದಿ ಅಜ್ಜಿಯನ್ನೂ, ಮುದಿಗೌಡನನ್ನೂ ಕಂಡು ಉಂಟಾದ ಆನಂದಕ್ಕೆ ಕೃತಜ್ಞತೆ ವ್ಯಕ್ತಮಾಡಿದ ಅನಂತರ ತನಗೆ ತಿಳಿದಷ್ಟು ಪೂರ್ವಕತೆ ಹೇಳಿದ–ಅಜ್ಜ ಎಲ್ಲಿಂದಲೋ ಬಂದು, ಅಲೆದಾಡಿ ಅಲೆದಾಡಿ, ಬೇಸತ್ತು ಮುಂಬಯಿಯನ್ನು ಸೇರಿದ್ದು; ಅವರಿಗೆ ಅಲ್ಲೆಲ್ಲಿಯೋ ಲಗ್ನವಾದದ್ದು. ಮಕ್ಕಳು ಹುಟ್ಟಿದ್ದು, ತೀರಿದ್ದು. ಉಳಿದವರ ಸಂಸಾರ ದೊಡ್ಡದಾದದ್ದು. ತಾವು ಹುಟ್ಟಿದ್ದು, ಬೆಳೆದದ್ದು–ಅವನ್ನೆಲ್ಲ ಹೇಳಿದ. ಮನಸ್ಸು ತಡೆಯದ್ದಕ್ಕೆ ತನ್ನ ಜೀವನದಲ್ಲಿ ಅತೃಪ್ತಿ ಮೂಡಿದ್ದು, ಆದರ ಫಲವಾಗಿಯೆಂಬಂತೆ ಬಂಗಾಡಿಗೆ ಬಂದದ್ದು–ಎಲ್ಲವನ್ನೂ ಹೇಳಿದ. ತಡೆಯಲಾರದ್ದಕ್ಕೆ "ಗೌಡರೇ ಹಿರಿಯರು ಹುಟ್ಟಿ ಬೆಳೆದ ಈ ನೆಲವನ್ನು ಕಂಡ ಮೇಲೆ ಈ ನೆಲದ ಋಣ ನನಗೇಕೆ ಬರಬಾರದೆಂಬ ಆಸೆಯಾಗುತ್ತದೆ" ಎಂದೂ ಅಂದ.

ಸೀತಾರಾಮ ಅದಕ್ಕೆ ಪರಿಹಾಸ್ಯ ಮಾಡುತ್ತ–"ನನ್ನ ಈ ಸ್ನೇಹಿತರಿಗೆ ಅಜ್ಜನ ಊರನ್ನು ನೋಡಿ ಹುಚ್ಚೇ ಹಿಡಿದಿದೆ. ಇಲ್ಲಿ ಬಂದಿರಬೇಕೆಂಬ ಆಸೆಯಂತೆ. ಅವರು ಎಷ್ಟೆಲ್ಲ ಕಲಿತಿದ್ದಾರೆ, ಏನು ಕತೆ? ಕಲಿತ ವಿದ್ಯೆ ಬೇರೆ. ಈ ಕಾಡು ಕೊಂಪೆಯಲ್ಲಿದ್ದು ಏನು ಮಾಡಬಹುದು? ಅಂಥ ಹುಚ್ಚಿಗೆ ಕೈಹಾಕಬೇಡಿ ಎಂದಿದ್ದೇನೆ" ಎಂದು ನಕ್ಕು ಹೇಳಿದ.

"ಹಾಗಂದಿರಾ, ಅನ್ನಬಾರದಪ್ಪ, ಅನ್ನಬಾರದು. ಹಿರಿಯರು ಹುಟ್ಟಿ ಬೆಳೆದ ನೆಲ-ಅದನ್ನು ಕಾಣಬೇಕು, ಅಲ್ಲಿ ಬದುಕಬೇಕು-ಎಂಬುದು ಭೂಮಿ ತಾಯಿಯ ಮಕ್ಕಳಿಗಿರಬೇಕಾದ ಆಸೆ. ಅದು ಬರಿಯ ನೆಲವಲ್ಲ. ಅದು ಒಂದು ದೇವಸ್ಥಾನ. ನಾನು ಹುಟ್ಟಿ ಬೆಳೆದ ನೆಲ, ನನ್ನ ತಾಯಿಯೆಂದೇ ಕಾಣುತ್ತಿದೆ ನನಗೆ. ಆ ತಾಯ ಆಶೀರ್ವಾದದಿಂದ ನಾನು ಇಷ್ಟುದಿನ ಬದುಕಿದ್ದೇನೆ. ಅದರಿಂದಲೇ ಜೀವನ ಸಹನವಾಗಿದೆ. ಅಲ್ಲವಾದರೆ ನನ್ನ

ಮೊಮ್ಮಗು ತೀರಿಕೊಂಡ ಕೂಡಲೆ...." ಎನ್ನುತ್ತಲೇ ಗೌಡನ ನೆನಪು, ದುಃಖಗಳೆಲ್ಲ ಉಕ್ಕಿ ಬಂದು, ಮಾತುಗಳನ್ನು ತಡೆದುವು.

ಮುದಿ ಗೌಡನ ಮಾತುಗಳನ್ನು ಕೇಳಿ, ಅವನ ಜೀವನವನ್ನು ಬಲ್ಲ ಎಳಚಿತ್ತಾಯರೆಂದರು "ಸೀತಾರಾಮು, ನೀವೆಲ್ಲ ಈಗಿನ ಕಾಲದ ಹುಡುಗರು, ನಿಮಗೆ ಮನೆ, ಮಠಗಳ ಮೇಲಿನ ಪ್ರೀತಿ, ಅಕ್ಕರೆ ಒಂದೂ ಇರಲಾರದು. ಪ್ರೀತಿ ಹುಟ್ಟುವ ಮೊದಲೇ, ಶಾಲೆಯ ಬಾಲ ಹಿಡಿದು ಯಾವುದ್ಯಾವುದೋ ಊರಿಗೋ, ದೇಶಕ್ಕೋ ಹೋದೆ. ಹೋಗಿ ನಿನ್ನ ಅಪ್ಪನನ್ನು ಕೇಳು–ಮನೆ ಬಿಟ್ಟು ಒಂದು ತಿಂಗಳು ಎಲ್ಲಿಯಾದರೂ ತಿರುಗಾಡಿಕೊಂಡು ಬರುವಾ— ಅನ್ನು. ಬರುತ್ತಾರೋ ನೋಡು" ಎಂದು ಹೇಳುತ್ತಲೇ, ಶಂಕರನಿಗೆ ನಗು ಬಂದಿತು.

ಆತನೆಂದ "ಸೀತಾರಾಮು, ಒಂದು ಕಡೆ ಹುಟ್ಟಿ, ಅಲ್ಲೇ ಬೆಳೆದು, ಅಲ್ಲಿನ ಗಾಳಿ ನೀರುಗಳಿಂದ ಜೀವ ತುಂಬಿಸಿಕೊಂಡ ಗೌಡರಂಥವರ ಮಾತು ನಮಗೆ ನಗು ಹುಟ್ಟಿಸೀತು ; ಹಗುರವಾಗಿ ಕಂಡೀತು. ಆದರೆ ನೋಡು— ಇವತ್ತಿನ ದಿನ ನಾವೇ–ವೇದಿಕೆಗಳ ಮೇಲೆ ನಿಂತು ಉದ್ದುದ್ದ ಮಾತನಾಡು ತ್ತೇವೆ. 'ದೇಶಪ್ರೇಮ' ಅನ್ನುತ್ತೇವೆ. ದೇಶಕ್ಕಾಗಿ ದುಡಿಯುವುದು ಅನ್ನು ತ್ತೇವೆ 'ಹೆಚ್ಚು ಬೆಳೆಯಿರಿ' ಅನ್ನುತ್ತೇವೆ. ಇಂಥ ನೆಲದ ತುಣುಕುಗಳನ್ನು ಬಿಟ್ಟು, ಉಳಿಯುವ ದೇಶ ಯಾವುದೊ? ನಕ್ಷೆಗಳಲ್ಲಿ ಕಾಣುವ ಭರತಖಂಡ ಆ ದೇಶವೇ? ನಾವು ಓಡಾಡುತ್ತಿರುವ ನೆಲ, ಹೊಲ, ನದಿ ಆ ದೇಶವೇ? ಪ್ರೇಮ ಯಾವುದು-ಮಣ್ಣಿನ ಈ ಮೋಹವೇ? ಸಭೆಯ ಆ ಉಪನ್ಯಾಸವೆ? ತಾನು ಹುಟ್ಟಿದ ಆ ನೆಲವನ್ನೂ, ತನ್ನವರ ನೆಲವನ್ನೂ ಪ್ರೀತಿಸಲಾರದವ, ಅದರ ಸಂಬಂಧ ಕಡಿದಾಗ ದುಃಖಪಡಲಾರದವ, ದೇಶಪ್ರೇಮ ತೋರು ತ್ತಾನೆಂದರೆ–ನನಗೇಕೋ ನಂಬುಗೆಯಿಲ್ಲ." ಅಷ್ಟೇ ಅಲ್ಲ, ಶಂಕರಗೆ ಮಾತೇ ಬೇಡವೆನಿಸಿತು. ತನ್ನ ಗೆಳೆಯನ ಲಘುವಾದ ಸಂಭಾಷಣೆಯ ಸರಣಿಗೆ ಅವನು ಸಲ್ಲಿಸಿದ ಕಟುವಾದ ಉತ್ತರ ಅಷ್ಟೇನೆ.

* * * *

ಮತ್ತೂ ನಾಲ್ಕು ದಿನಕಾಲ, ಶಂಕರ ಸೀತಾರಾಮರು ಬಂಗಾಡಿಯಲ್ಲಿ ಕಳೆದರು. ಮುತ್ತಯ್ಯ ಗೌಡನ ಮನೆಗೆ ನಾಲ್ಕು ಬಾರಿ ಹೋಗಿ ಅವನನ್ನು

ಮಾತನಾಡಿಸಿ ಬಂದರು. ಮೂಡೋಡಿಯ ಬೆಟ್ಟು, ಕಾಡುಗಳನ್ನು ಶಂಕರ ಗೆಳೆಯನ ಜತೆಯಲ್ಲಿ, ಒಂಟಿಯಾಗಿ ತುಳಿದು ಬಂದ. ದಿನಕ್ಕೊಮ್ಮೆ ಶ್ಯಾನುಭಾಗರ ಮನೆಗೆ ಹೋಗಿ ಅಜ್ಜಿಯ ದರ್ಶನ ಪಡೆದು ಬಂದ. ಹೊರಡುವ ಮುಂಚಿನ ದಿನ ತುಂಬ ವ್ಯಥೆಯಿಂದ ಆಕೆಯನ್ನು ಬೀಳ್ಕೊಳ್ಳುತ್ತ "ಅಜ್ಜಿ, ನಾಳೆ ನಾನು ಊರಿಗೆ ಹೊರಡಬೇಕು. ಬೇಸರಪಡಬಾರದು. ಆದರೆ ಬಹು ಬೇಗ ಬಂದು ನಿಮ್ಮನ್ನು ಕಾಣುತ್ತೇನೆ. ಈ ಸಾರಿ ಬಂದಾಗ ಅಪ್ಪ, ಅಮ್ಮನಿಗೆ ನಾನು ಯಾವ ವಿಚಾರವನ್ನೂ ಹೇಳಿ ಬಂದಿರಲಿಲ್ಲ, ನಿಮ್ಮಲ್ಲಿಯೇ ಇರಲಿ ಒಂದು ಸಂಗತಿ-ನನಗೆ ಇಲ್ಲಿ ಬಂದಿರುವ ಆಸೆಯಾಗಿದೆ, ಬಂದೇನು, ಇದ್ದೇನು ನಾಲ್ಕು ದಿನ ನಿಮ್ಮ ಸೇವೆ ಮಾಡಿಯೇನು–ಎಂದು ಅನಿಸುತ್ತಿದೆ" ಎಂದು ಮುದುಕಿಯ ಆಶೀರ್ವಾದವನ್ನು ಪಡೆದು ಹೊರಟ.

ಹೋಗುವ ಮುಂಚಿನ ದಿನ, ಬಂಗಾಡಿಯ ಪ್ರಥಮ ಪರಿಚಿತರಾದ ಆ ಜೈನ ಗೃಹಸ್ಥರ ಮನೆಗೂ ಹೋಗಿ ಹೇಳಿ ಬಂದರು.

ಮರುದಿನ ಎಳಚಿತ್ತಾಯರನ್ನು ಬೀಳ್ಕೊಟ್ಟು, ಇಬ್ಬರೂ ಮುದ್ರಾಡಿಗೆ ಹೊರಟರು. ಮುದ್ರಾಡಿಯಲ್ಲಿ ಶಂಕರ ಬಹು ದಿನ ಕಳೆಯಲಿಲ್ಲ. ಒಂದು ದಿನ ಗೆಳೆಯನನ್ನು ಕರೆದುಕೊಂಡು ಕಾರ್ಕಳಕ್ಕೆ ಹೋದ, ತಂದೆಗೆ ಹಣ ಬೇಕೆಂದು ತಂತಿಕೊಟ್ಟ. ಐನೂರು ರೂಪಾಯಿಗಳನ್ನು ತರಿಸಿಕೊಂಡ. ಆ ಹಣದಲ್ಲಿ ನೂರನ್ನು ತಾನಿರಿಸಿಕೊಂಡು, ಉಳಿದುದನ್ನು ಸೀತಾರಾಮನ ಕೈಗೊಪ್ಪಿಸುತ್ತಲೇ ಆತ 'ಇದೇನು !' ಎಂದು ಗಾಬರಿಯಾಗಿ ಕೇಳಿದ.

"ಅದು ಇರಲಿ-ನಿನ್ನಲ್ಲಿ, ಒಂದು ಕೆಲಸಕ್ಕಾಗಿರಲಿ. ನೀನು ಎರಡನೆಯ ಮಾತಾಡಬಾರದು; ನನ್ನನ್ನು ಉದ್ದೇಶ ವಿಮುಖನಾಗಿ ಮಾಡುವ ಪ್ರಯತ್ನ ಮಾಡಬಾರದು. ನಾನೇನೋ ನಿಶ್ಚಯಮಾಡಿಕೊಂಡಿದ್ದೇನೆ. ನಾನು ನಾಳೆಯೇ ಹೊರಟು ದಿಲ್ಲಿಗೆ ಹೋಗುತ್ತೇನೆ."

"ಇಷ್ಟು ಹಣ ಏಕೆ ತರಿಸಿದೆ !"

"ಅದನ್ನೇ ಹೇಳುತ್ತಿದ್ದೇನೆ ನೋಡು, ನಿನಗೂ ನೌಕರಿ ವಿಚಾರದಲ್ಲಿ ಕಾಗದ ಬಂದಿಲ್ಲ. ಉತ್ತರ ಹಿಂದೂಸ್ತಾನಕ್ಕೆ ಬರಲು ಸಿದ್ಧನಿದ್ದರೆ ನನ್ನ ತಂದೆಗೆ ಹೇಳಿ, ಏನಾದರೂ ಕೆಲಸ ನಿನಗೂ ದೊರಕಿಸಿಕೊಡಲು ಬಂದೀತು. ನನ್ನ ತಂದೆ ನನಗಾಗಿ ಒಂದು ಕೆಲಸ ಸಿದ್ಧವಿದೆ–ಎಂದು ಬರೆದಿದ್ದರಲ್ಲ—

ಅದನ್ನೇ ನಿನಗೆ ಸಿಗುವಂತೆ ಮಾಡುತ್ತೇನೆ. ನಾನು ಮಾತ್ರ ಖಂಡಿತಕ್ಕೂ ಕೆಲಸಕ್ಕೆ ಸೇರುವವನಲ್ಲ. ಇನ್ನು ನನ್ನ ಭವಿಷ್ಯ ಹಳ್ಳಿಯಲ್ಲಿ ಅದೂ ನನ್ನ ಹಿರಿಯರ ಬಂಗಾಡಿಯಲ್ಲಿ.

" ನೀನು ಕೇಳಿದೆಯಲ್ಲ ಎಳಚಿತ್ತಾಯರು ಹೇಳಿದ್ದನ್ನು. ನಮ್ಮ ಹಿರಿಯರ ಭೂಮಿ ಬರಿಯ ಕಂದಾಯಕ್ಕಾಗಿ ಹರಾಜಾಯಿತೆಂದು, ಅದನ್ನು ಕೊಳ್ಳುವರಿಲ್ಲವೆಂದು. ಅದಕ್ಕಾಗಿಯೇ ಈ ಹಣ ತರಿಸಿದ್ದು. ಇಲ್ಲಿಂದ ಹೋಗುತ್ತ ಒಂದೆರಡು ಊರು ನೋಡಿಕೊಂಡು ಹೋಗಬೇಕೆಂದಿತ್ತು. ಆ ಆಸೆಯನ್ನು ಬಿಟ್ಟಿದ್ದೇನೆ. ನೀನು ಸ್ಥಳವಂದಿಗ. ನನ್ನ ಈ ಕೆಲಸ ಮಾಡಿಸಿಕೊಡಬೇಕು. ಶ್ಯಾನುಭಾಗ ರಂಗರಾಯರು ನನ್ನ ಕುಟುಂಬದವರಾದರೂ ಅವರಲ್ಲಿ ನನಗೆ ವಿಶ್ವಾಸವುಂಟಾಗಿಲ್ಲ; ಗೌಡನೆಂದ ಮಾತುಗಳಿಂದ ನಾನು ವಿಶ್ವಾಸ ಇರಿಸುವ ಹಾಗೂ ಇಲ್ಲ. ನೀನು ಇನ್ನೊಮ್ಮೆ ಬಂಗಾಡಿಗೆ ಹೋಗಿ ಎಳಚಿತ್ತಾಯರನ್ನು ಹಿಡಿದಾದರೂ ಸರಿಯೆ. ಬೇರೆ ಯಾರನ್ನಾದರೂ ಗುರುತು ಮಾಡಿಕೊಂಡಾದರೂ ಸರಿಯೆ— ಆ ಭೂಮಿ ನನಗೆ ಸಿಗುವಂತೆ ಮಾಡಬೇಕು. ಅದಕ್ಕೇನು ಮಾಡಬೇಕು, ಏನಾಗಬೇಕು—ಯಾವುದೂ ನನಗೆ ತಿಳಿಯದು. ಅದನ್ನೆಲ್ಲ ನೀನೇ ತಿಳಿದುಕೊಂಡು ಪ್ರಯತ್ನ ಮಾಡಿ, ದೊರಕಿಸಬೇಕು ಆ ಸ್ಥಳವನ್ನು. ಹಣ ಕಡಿಮೆಬಿದ್ದರೆ ಬರೆ; ನಾನು ಕೂಡಲೆ ಬರಬೇಕಾದರೆ ತಿಳಿಸು. ನಿನಗೆಷ್ಟು ಕಷ್ಟವಾದರೂ ಚಿಂತೆಯಿಲ್ಲ ನೀನು ಕೆಲಸಕ್ಕೆ ಸೇರುವ ಮೊದಲು ನನಗಾಗಿ ಇಷ್ಟು ಉಪಕಾರ ಮಾಡಬೇಕು" ಎಂದ. ಅನ್ನುವಾಗ ಅವನ ಮುಖ ಚರ್ಯೆ ಹೃದಯದಲ್ಲಿ ತುಂಬಿದ್ದ ಯಾವುದೇ ಆಸೆ, ಕೃತಜ್ಞತೆಗಳನ್ನು ಸೂಚಿಸುತ್ತಿತ್ತು. ತನ್ನ ಗೆಳೆಯ ಅಷ್ಟೊಂದು ಭಾವಜೀವಿ, ನಿರ್ಧಾರದ ಮನಸ್ಸಿನವ—ಎಂದು ಸೀತಾರಾಮನಿಗೆ ತಿಳಿದದ್ದು ಆಗಲೇನೆ.

" ನನ್ನಿಂದಾದಷ್ಟು ಪ್ರಯತ್ನ ಮಾಡುತ್ತೇನಪ್ಪ " ಎಂದು ಸ್ನೇಹಕ್ಕೆ ಕಟ್ಟುಬಿದ್ದು, ಆತ ನುಡಿಯಲೇಬೇಕಾಯಿತು. ಇನ್ನು ಮುಂದೆ ತನ್ನ ಗೆಳೆಯನ ಆಸೆ, ಅನುರಾಗಗಳಿಗೆ ತಾನು ವಿರೋಧ ತರುವುದು ಸಮನಲ್ಲವೆಂದು ಆತನಿಗೂ ಹೊಳೆಯಿತು.

## ಅಧ್ಯಾಯ ೬

ಶಂಕರ ದಿಲ್ಲಿಯನ್ನು ಸೇರುವಾಗ, ಅವನ ತಾಯಿ ಪ್ರತಿಮೆ, ಕಿರಿಯ ಮಗ ವಿಟ್ಠಲನ ಮದುವೆಯ ಏರ್ಪಾಡುಗಳನ್ನು ಮಾಡುವುದರಲ್ಲಿ ತೀರ ಮುಳುಗಿಹೋಗಿದ್ದಳು. ಅವಳ ಮನಸ್ಸೆಲ್ಲ ಮನೆಗೆ ಬರುವ ಸೊಸೆಯು ಮತ್ತು ತನ್ನ ಚಿನ್ನ, ಆಭರಣ, ಸೀರೆ ಅಲಂಕಾರಗಳ ವಿಚಾರದಲ್ಲಿ ನಿರತವಾಗಿತ್ತು. ಸುಂದರರಾಯರಿಗೆ ಸೆಕ್ರೆಟರಿಯಟ್‌ನ ಕೆಲಸವೇ ಬಹಳವಾಗಿದೆ. ಮಗನ ಮದುವೆ ಬಂದರೂ ನಾಲ್ಕು ದಿನ ರಜೆ ತೆಗೆದುಕೊಂಡು ಇದಕ್ಕಾಗಿ ಕುಳಿತಿರುವ ಸ್ವಭಾವವಲ್ಲ. ಅಷ್ಟೊಂದು ತಾಳ್ಮೆಯೂ ಇಲ್ಲ. ತಮ್ಮ ಸರಕಾರೀ ಪ್ರಪಂಚದಲ್ಲಿ ಜೀವಮಾನವನ್ನು ಸವೆದು, ಶ್ರೇಯಸ್ಸನ್ನು ಗಳಿಸಬೇಕೆಂಬ ಅವರ ಹಂಬಲ ಸಂಪೂರ್ಣ ತೃಪ್ತಿಪಡೆದಿಲ್ಲ. ಹಾಗೆ ಪಡೆಯುವುದೂ ಅಷ್ಟೊಂದು ಸುಲಭದ ಕೆಲಸವಲ್ಲ. ಅವರ ಮನೋವೇಗಕ್ಕೆ ಸಮನಾಗಿ ಸಂಬಳ ಏರಲಿಲ್ಲವಾದರೂ, ಇಂದು ಸಾವಿರಕ್ಕೆ ಮಿಕ್ಕಿಯೇ ವೇತನ ಬರುತ್ತದೆ. ನಾಲ್ಕಾರು ಹೆಸರುಗಳಲ್ಲಿ ಭತ್ತೆಗಳಿವೆ. ಉಪಸಂಪಾದನೆಗಳೂ ಇರಬಹುದು. ನಿವೃತ್ತರಾಗುವುದಕ್ಕೆ ಎರಡು ವರ್ಷದ ಅವಧಿಯಿದೆ. ನಿವೃತ್ತಿಗೊಳ್ಳುವ ಮೊದಲು ಹಣಕಾಸಿನ ಕಾರ್ಯದರ್ಶಿಯೇ ತಾನಾಗಬೇಕು. ನಿವೃತ್ತಿ ವೇತನಕ್ಕೆ ಮೊದಲು ಹೆಚ್ಚಿನ ಸ್ಥಾನ ಗಳಿಸಬೇಕು, ಸ್ವಾಮಿ ಸೇವೆ ಅಷ್ಟೊಂದು ದೀರ್ಘಕಾಲ ಮಾಡಿದುದಕ್ಕೆ ಒಂದು ಬಿರುದನ್ನಾದರೂ ಗಳಿಸಬೇಕು—ಎಂಬುದು ಅವರ ಆಸೆ. ಯುದ್ಧದ ಕಾಲವಾದುದರಿಂದ ಹೊಸ ಹುದ್ದೆಗಳು ನಿರ್ಮಾಣವಾಗುತ್ತಲೇ ಇವೆ. ಸರಕಾರಕ್ಕೆ ಅನುಭವಿಗಳು ಬೇಕು. ಹೀಗಿದ್ದುದರಿಂದ, ತಮ್ಮ ಉದ್ಯೋಗದ ಅವಧಿ ನಾಲ್ಕೆಂಟು ವರ್ಷ ಬೆಳೆಯಬಾರದೇಕೆ ?—ಎಂಬ ಆಸೆಯೂ ಇತ್ತು. ತಮ್ಮ ಈ ಆಸೆಗಳ ಜತೆಗೆ ಮಕ್ಕಳ ವಿಷಯದ ಹಂಬಲವಿದೆ. ಅವರಿಗೆ ಅನುಕೂಲವಾದ ಉದ್ಯೋಗ, ಪ್ರಭಾವಶಾಲಿ ಕುಟುಂಬಗಳೊಡನೆ ನಂಟುತನ—ಇವೆರಡೂ ದೊರೆಯಬೇಕು. ತಾನೇನು ಮಾಡುವುದಿದ್ದರೂ ಲೇಖನಿ ಸನ್ಯಾಸ ಮಾಡುವ ಮೊದಲೇ ಮಾಡತಕ್ಕದ್ದು—ಎಂದು ಗೊತ್ತು.

ಮಗ ವಿಟ್ಠಲನಿಗೆ ಒಳ್ಳೆಯ ಉದ್ಯೋಗ ದೊರೆತಿದೆ. ಅದರ ಬೆನ್ನಿಗೆ

ನಂಟುತನವೂ ದೊರತಿದೆ. ಸರಕಾರದ ವಾಣಿಜ್ಯಶಾಖೆಯ ಕಾರ್ಯದರ್ಶಿಯಾದ ವಿದ್ಯಾಸಾಗರಮಿಸ್ರರ ಮಗಳನ್ನು ತಂದುಕೊಳ್ಳುವ ನಿಶ್ಚಯ ಮಾಡಿದ್ದಾರೆ. ಶ್ರೀಮಂತ ಮನೆತನ; ಗೌರವಸ್ಥ ಕುಟುಂಬ. ಹುಡುಗಿ ಬಿ. ಎ. ಆದವಳು. ಮೊದಲು ಆಕೆಯನ್ನೇ ಹಿರಿಯ ಹುಡುಗ ಶಂಕರನಿಗೆ ತರುವುದೆಂದು ನಿಶ್ಚಯಿಸಿದ್ದರು. ಶಂಕರನ ಉದಾಸೀನ ಪತ್ರವನ್ನು ಕಂಡು ದೊರೆತ ಸಂಬಂಧ ತಪ್ಪಿಸಿಕೊಳ್ಳಬಾರದೆಂದು, ವಿಟ್ಠಲನಿಗಾಗಿ ಆ ಹುಡುಗಿಯನ್ನು ಗೊತ್ತು ಮಾಡಿದರು. ಮಿಸ್ರರ ಮನೆಯುವರು ಅವರ ಮನೆಗೆ ಬಂದು ಹೋಗುವ ಸಂಪ್ರದಾಯದವರು. ಆ ಹುಡುಗಿ ವಿಟ್ಠಲನನ್ನು ನೋಡದ ಕನ್ಯೆಯೂ ಅಲ್ಲ. ಆತನಿರುವುದು ಮಾತ್ರ ಎಲ್ಲೆಲ್ಲೊ. ಪತ್ರ ಮುಖೇನ ಒಪ್ಪಿಗೆ ತರಿಸಿಕೊಂಡು, ಸಂಬಂಧ ನಿಶ್ಚಯಿಸಿ, ವಿವಾಹ ಮುಹೂರ್ತ ಗೊತ್ತು ಪಡಿಸಲು ಆತನ ರಜೆಯನ್ನು ಇದಿರು ಕಾಯುತ್ತಿದ್ದರು. ಅದೇನೆ ಕಷ್ಟದ್ದು. ಅವನಿಗೆ ನಾಲ್ಕು ದಿನ ರಜೆ ಸಿಕ್ಕುವುದೆಂದರೆ ದೊಡ್ಡ ಮಾತು. ಬರ್ಮಾಯುದ್ಧ ಭರದಿಂದ ಸಾಗುತ್ತಿದೆ. ಆತ ವಿಮಾನದಳದಲ್ಲಿ ಜವಾಬ್ದಾರಿಯ ನಾಯಕನಾಗಿದ್ದಾನೆ. ಇಂದೊಂದು ಕಡೆಯಿದ್ದರೆ ನಾಳೆ ಮತ್ತೊಂದು ಕಡೆ ಇರಬೇಕಾಗುತ್ತದೆ. ರಜೆ ಸಿಕ್ಕಿದ ಮೇಲೆ ಲಗ್ನದ ತಯಾರಿ ನಡೆಸುವ ಅವಕಾಶವಿಲ್ಲ. ಆದುದರಿಂದ ಪ್ರತಿಮೆ ಭಾವೀ ಬೀಗಿತ್ತಿಯನ್ನು, ಸೊಸೆ ವನಮಾಲೆಯನ್ನು ಕರೆದುಕೊಂಡು, ದಿನನಿತ್ಯ ಎಂಬಂತೆ ಕನಾಟ್ ಸರ್ಕಸ್ಸಿನ ಅಂಗಡಿಗಳನ್ನು ನೋಡಲು ಹೊರಡುತ್ತಾಳೆ. ಅಂಥ ಒಂದು ದಿನವೇ, ಶಂಕರ ತನ್ನ ಪ್ರವಾಸ ಮುಗಿಸಿ ಮನೆಗೆ ಕಾಲಿರಿಸಿದ್ದು. ತಾಯಿ ಮನೆಯಲ್ಲಿದ್ದಳು. ಮಗ ಬಂದುದಕ್ಕೆ ಸಂತೋಷವಾಯಿತು. ಆಕೆಯ ಹೆಚ್ಚಿನ ಪ್ರೇಮ ವಿಟ್ಠಲನ ಮೇಲೆಯೇ ಇದ್ದುದರಿಂದ, ಶಂಕರ ಈ ನಂಟುತನ ತಳ್ಳಿದ ಬಗ್ಗೆ ಅವಳಿಗೆ ಯಾವ ಅಸಮಾಧಾನವೂ ಇರಲಿಲ್ಲ.

ಮಧ್ಯಾಹ್ನ ಊಟವಾದ ಬಳಿಕ, ಪ್ರತಿಮೆ ಮಗನೊಡನೆ ಮಾತನಾಡುತ್ತ ಕುಳಿತಳು. ಭಾವೀ ಸೊಸೆಯನ್ನು ಗುಣಗಾನ ಮಾಡಿದಳು. ಪರ್ಯಾಯವಾಗಿ—ಶಂಕರನ ಮನಸ್ಸಿನಲ್ಲಿ ಏನಿದೆ ಎಂದು ತಿಳಿಯುವುದಕ್ಕೆ ಪ್ರಯತ್ನಿಸಿದಳು. ಜಯರಾಮನ ಮನೆಯಲ್ಲಿ ನಡೆದ ಪ್ರಕರಣಗಳೆಲ್ಲ ಅವಳಿಗೆ ತಿಳಿದಿದ್ದುವು. ವರಲಕ್ಷ್ಮಿ ಅಲ್ಲಿಗೆ ಬರುವುದನ್ನು ನಿಲ್ಲಿಸಿದ್ದು ಸ್ವತೇವ ಕಾಣು

ತ್ತಿತ್ತು. ಹೀಗಾಗಿ ಪ್ರತಿಮೆ ಪ್ರಶ್ನೆ ಮಾಡಿದಳು, ಮಗು, ನೀವೇಕೆ ಲಗ್ನ ಬೇಡ ಎಂದದ್ದು ? ನಿನ್ನ ಓದು ಮುಗಿದಾಯಿತು. ಈ ಯುದ್ಧದ ವೇಳೆಯಲ್ಲಿ ಕೆಲಸಕ್ಕೊಂದು ಬರಗಾಲವಿಲ್ಲ-ಕೆಲಸ ದೊರೆಯದೆ ಲಗ್ನವಾಗ ಬಾರದೆಂದರೆ ಅದೊಂದು ಕಷ್ಟದ ಮಾತಲ್ಲ " ಎಂದಳು.

" ಯಾಕಷ್ಟು ಅವಸರ ? ನಾಳೆ ನಾನು ಎಲ್ಲಿರುತ್ತೇನೆ, ಯಾವ ಉದ್ಯೋಗ ಕೈಗೊಳ್ಳುತ್ತೇನೆ ಎಂಬುದೆಲ್ಲ ನಿರ್ಧಾರವಾದಮೇಲೆ, ನನ್ನ ಜೀವನಕ್ಕೆ ಸರಿಹೋಗುವವರನ್ನು ಆರಿಸಿ ಲಗ್ನವಾಗಬಹುದಲ್ಲ. "

ಅಷ್ಟು ಸುಲಭದಲ್ಲಿ ನಿವಾರಿಸಿಕೊಳ್ಳಬಹುದಾದ ವ್ಯಕ್ತಿ ಪ್ರತಿಮೆ ಯಲ್ಲ. ಕೂಡಲೆ ಅವಳೆಂದಳು " ವರಲಕ್ಷ್ಮಿಗೇನಾದರೂ ಕಾಗದ ಬರೆದಿ ದಿದ್ದೆಯಾ ನೀನು ? " ಎಂದು.

ಶಂಕರ ತುಸು ತಬ್ಬಿಬ್ಬಾಗಲೇ ಬೇಕಾಯಿತು. ಪೂರ್ವ ಸೂಚನೆಯಿ ಲ್ಲದೆ ಆ ಮಾತು ಬಂದುದಕ್ಕೆ. ಆದರೆ ಬಚ್ಚಿಡಬೇಕಾದ ಪ್ರಸಂಗವೇನೂ ಇದ್ದಂತೆ ಅವನಿಗನಿಸಲಿಲ್ಲ. ಆದುದರಿಂದ ಆತ ನುಡಿದ " ಹೌದು, ಬರೆ ದಿದ್ದೆ. ಆಕೆಗೆ ನನ್ನಲ್ಲಿ ಆಸಕ್ತಿಯಿದ್ದ ಹಾಗೆ ಅನಿಸಿತು. ಅವಳ ನಡತೆಯೂ ಚೆನ್ನಾಗಿ ಕಂಡಿತು. ಆದರೆ ಇತ್ತೀಚೆಗೆ ಅವಳಿಂದ ನನಗೆ ಪತ್ರಗಳಿಲ್ಲ. ಪ್ರತ್ಯಕ್ಷವಾಗಿ ನಾನು ಅವಳನ್ನು ಮಾತನಾಡಿಸಿ ಕೇಳಿಲ್ಲ. ವಿರಾಮವಾಗಿ ಕೇಳಬಹುದಲ್ಲ. ಅದಕ್ಕೂ ಅವಸರವಿಲ್ಲ "

" ಅವಳ ವಿಚಾರ ಮರೆತು ಬಿಡುವುದೇ ಒಳ್ಳೆಯದು. "

" ಏಕೆ, ಅವಳಲ್ಲೇನು ಕೊರತೆ ? "

" ಕೊರತೆಯಿದೆ ಎಂದು ಹೇಳಿದ್ದಲ್ಲ. ಅವಳು ಸ್ವತಂತ್ರಳಲ್ಲ. ಅವರ ಮನೆಯವರು ಹೊರಗಿನ ನೋಟಕ್ಕೆ ಕೊಸ್ಮೊಪಾಲಿಟನ್ ಆಗಿ ಕಂಡರೂ ಮನೆಯ ಒಳಗೆ ಹಳೆಯ ಸಂಪ್ರದಾಯಗಳಿಗೆ ಕಟ್ಟುಬಿದ್ದವರು. ನಿನ್ನ ಕಾಗದ ಅವರ ಕೈಗೆ ಸಿಕ್ಕಿ ಕೋಲಾಹಲವೇ ಆಯಿತಂತೆ. ಮನೆಯವರಿಗೆ ಸ್ವಜಾತಿಯ ಹೊರಗಿನ ಸಂಬಂಧ ಏನೇನೂ ಇಷ್ಟವಿಲ್ಲ."

" ಅದೆಲ್ಲ ಅವಳ ಮನಸ್ಸನ್ನು ಹೊಂದಿಕೊಂಡಿದೆ. ಅವಳಿಗೆ ಅದು ಇಷ್ಟವಾದರೆ ಇವರೇನು ತಡೆಯುತ್ತಾರೆ ? "

" ವರಲಕ್ಷ್ಮಿ ಅಷ್ಟು ಸ್ವತಂತ್ರಳಲ್ಲ. ಅವಳ ವಿಚಾರ ಮರೆಯುವುದು

ಒಳ್ಳೆಯದು "

" ನಾನು ಅವಳಿಗೆ ಕಾಗದ ಬರೆದಿದ್ದೆ. ಅವಳದನ್ನು ಉತ್ತರಿಸಿದ್ದಾಳೆ. ಮನೆಯ ಸಂಗತಿಯನ್ನೂ ಸೂಚಿಸಿದ್ದಾಳೆ. ಸ್ವಂತ ನಿರ್ಧಾರಮಾಡುವ ಶಕ್ತಿ ಅವಳಲ್ಲಿ ಇದ್ದ ಹಾಗೆ ಕಾಣುತ್ತದೆ." "ಹಾಗೆಲ್ಲಾದರೂ ವರಲಕ್ಷ್ಮಿ ನುಡಿದರೆ ನಮಗೂ ಅವರಿಗೂ ತುಂಬಾ ನಿಷ್ಠುರ ಬಂದೀತು. ಎಲ್ಲರ ಹಾಗಲ್ಲ– ಜಯರಾಮರು. ಬಹಳ ಚಾಣಾಕ್ಷ ಮನುಷ್ಯ. ನಿನ್ನ ತಂದೆಗೂ ಅವರಿಗೂ ತುಂಬ ಸ್ನೇಹ, ಸಲಿಗೆ ಇರುವುದೆಲ್ಲ ಸರಿಯೆ. ಆದರೂ ಒಳಗಿಂದೊಳಗೆ ನಿನ್ನ ತಂದೆಯನ್ನು ಹಿಂದೆ ತಳ್ಳಿ, ತಾನು ಮೇಲಕ್ಕೆ ಬರಬೇಕೆಂಬ ಪ್ರಯತ್ನ ಮಾಡುತ್ತಲಿದ್ದಾರೆ. ಅದು ನಮಗೂ ಗೊತ್ತು. ಹೀಗಾಗಿ ಅವರ ನಿಷ್ಠುರ ಬೇಡವೇ ಬೇಡ."

ಶಂಕರನ ಮನಸ್ಸು ಇದರಿಂದ ಇನ್ನಷ್ಟು ಪೇಚಿನಲ್ಲಿ ಬಿದ್ದಿತು. ತಾಯಿಗೆ ಏನು ಉತ್ತರ ಹೇಳಬೇಕೆಂದೂ ತೋರಲಿಲ್ಲ. ಅವನ ಮನಸ್ಸಿನ ಒಲವೇನೋ ವರಲಕ್ಷ್ಮಿಯ ಕಡೆಗಿದೆ. ಆದರೆ ತಾನು ನಾಳೆಗೆ ಧುಮುಕಲಿರುವ ಕೆಲಸಕ್ಕೆ, ಅವಳ ಸಮ್ಮತಿ ದೊರಕೀತೆಂಬ ಧೈರ್ಯವಿಲ್ಲ. ಆದರೂ ಸ್ನೇಹವಿದ್ದೂ, ಇಷ್ಟೆಲ್ಲ ಪತ್ರವ್ಯವಹಾರ ಮಾಡಿಯೂ, ಮುಖತಃ ಚರ್ಚಿಸದೆ ವಿಷಯವನ್ನು ಕೊನೆಗಾಣಿಸುವುದು ಸಮನೆಂದು ತೋರಲಿಲ್ಲ. "ಆಗಲಿ, ವಿಚಾರ ಮಾಡುತ್ತೇನೆ" ಎಂದಿಷ್ಟೇ ತಾಯಿಗೆ ಹೇಳಿದ.

ತುಸು ಹೊತ್ತಿನಲ್ಲಿ ಮಿಸ್ರರ ಮನೆಯವರು ಬಂದರು. ಶಂಕರನ ಪರಿಚಯವನ್ನು ಪ್ರತಿಮೆ ಅವರಿಗೆ ಮಾಡಿಕೊಟ್ಟಳು. ಪ್ರತಿಮೆಗೆ ಬೆಡಗುಗಾತಿ ವನಮಾಲೆಯನ್ನು ಕಂಡು ಅಭಿಮಾನ ಉಕ್ಕೇರುತ್ತಿದ್ದರೂ, ಆಕೆಯ ವಿಚಿತ್ರವಾದ ಅಂಗ ವಿನ್ಯಾಸ, ಕೃತಕ ನಗು, ಅಭಿನಯ, ಉಡಿಗೆತೊಡಿಗೆಗಳಲ್ಲಿನ ತೀಕ್ಷ್ಣ ಆಡಂಬರ—ಇವುಗಳೊಂದೂ ಶಂಕರನಿಗೆ ಹಿಡಿಸದೆ ಹೋದುವು. ಅವನೆಂದೂ ಅಂಥ ಸಂಬಂಧಕ್ಕೆ ಒಪ್ಪುತ್ತಿರಲಿಲ್ಲ. ಆದರೆ ತಮ್ಮ ವಿಟ್ಠಲನ ಸ್ವಭಾವ ಆಡಂಬರ ಪ್ರಿಯವಾದದ್ದು, ಲಘುವಾದದ್ದು ಎಂದು ಬಲ್ಲ. 'ವಿವಾಹವೆಂಬುದು ಅವರವರ ಇಷ್ಟವಲ್ಲವೇ' ಎಂದುಕೊಂಡನು ಶಂಕರ. ಉಪಾಹಾರವನ್ನು ಮುಗಿಸಿ, ಮನೆಯವರೆಲ್ಲರು ಕರ್ನಾಟ್ ಸರ್ಕಸಿಗೆ ಹೊರಟರು. ಶಂಕರನೊಬ್ಬನೇ ಐದು ಘಂಟೆಯ

ತನಕ ಕಾದು ಕುಳಿತ. ಅನಂತರ ತನಗೆ ಪ್ರಿಯವಾದ ಕುತುಬ್ ರಸ್ತೆಯಲ್ಲಿ ಸಂಚಾರಕ್ಕೆ ಹೊರಟ. ಕಾಲುಹಾದಿಯಲ್ಲಿ ತಲೆತಗ್ಗಿಸಿಕೊಂಡು, ತುಸು ದೂರ ಹೋಗಿದ್ದನಷ್ಟೆ—' ಶಂಕರ್ ' ಎಂದು ಯಾರೋ ಕರೆದರು. ಮುಖ ತಿರುಗಿಸಿ ನೋಡುತ್ತಾನೆ—ಕರೆದವಳು ವರಲಕ್ಷ್ಮಿ. ಕೈಯಲ್ಲಿ ಪುಸ್ತಕಗಳ ಕಟ್ಟಿತ್ತು. ಕಾಲೇಜಿನಿಂದ ಮರಳುತ್ತಿದ್ದಳೆಂದು ಕಾಣುತ್ತದೆ.

ವರ, ನಿನಗೆ ತಂತಿ ಕಳುಹಿಸಬೇಕೆಂದಿತ್ತು. ಆದರೆ ಏಕೋ ಸುಮ್ಮನಾದೆ. ನಾನು ಇಂದು ಬೆಳಗ್ಗೆ ಬಂದೆ."

" ಬಂದಿರಿ ಕೊನೆಗೂ. ಶಿವಸಮುದ್ರದಲ್ಲಿ ಇಷ್ಟು ದಿನ ಇದ್ದಿರಾ ?"

" ಅಲ್ಲಿಂದ ನಮ್ಮೂರಿಗೆ ಹೋಗಿ ಬಂದೆ."

" ನಿಮ್ಮೂರೇ ?"

" ಹೂಂ. ನನ್ನ ಕಾಗದದಲ್ಲಿ ತಿಳಿಸಿದ್ದೆನಲ್ಲ. ನಮ್ಮ ಹಿರಿಯರು ಹುಟ್ಟಿ ಬೆಳೆದ ಹಳ್ಳಿಯನ್ನು ನೋಡಿಕೊಂಡು ಬರುತ್ತೇನೆಂದು. ನನ್ನ ವಿಳಾಸವನ್ನು ಕೊಟ್ಟಿದ್ದೆ. ದಿನ ದಿನ ನಿನ್ನ ಪ್ರತ್ಯುತ್ತರ ನಿರೀಕ್ಷಿಸುತ್ತಿದ್ದೆ. ಉತ್ತರ ಬಾರದ್ದನ್ನು ನೋಡಿ ಸುಮ್ಮನಾದೆ."

" ಕಾಗದ ಬರೆದಿದ್ದಿರಾ ? ವಿಳಾಸ ತಿಳಿಸಿದ್ದಿರಾ ?"

" ಎರಡೆರಡು ಕಾಗದಗಳನ್ನು ಬರೆದಿದ್ದೆ. ಉತ್ತರ ಬರಲಿಲ್ಲ."

ಆ ಮಾತನ್ನು ಕೇಳುತ್ತಲೆ, ವರಲಕ್ಷ್ಮಿ ತಲೆ ತಗ್ಗಿಸಿ ನಿಟ್ಟುಸಿರು ಬಿಟ್ಟಳು. " ನಮ್ಮ ಮನೆಯಲ್ಲೀಗ ನಮ್ಮ ತಾಯಿಯೇ ಸಿ. ಐ. ಡಿ. ಕೆಲಸ ಮಾಡತೊಡಗಿದ್ದಾರೆ. ನೀವು ಬರೆದ ಕಾಗದಗಳನ್ನು ಕೊಡದೆ ಅಡಗಿಸಿಟ್ಟಿರಬೇಕು. ಅಡಗಿಸಿಡಲಿ. ಮತ್ತೇನು ಮಾಡುತ್ತಾರಂತೆ ! ನಮ್ಮ ಮನಸ್ಸು ಗಟ್ಟಿಯಾಗಿದ್ದರೆ ಯಾರೂ ಏನೂ ಮಾಡಲಾರರು. ಇರಲಿ. ನಿಂತೇನು ಮಾತನಾಡುವುದು. ಬನ್ನಿ, ಹೋಗುವ."

" ಎಲ್ಲಿಗೆ ?"

" ನಮ್ಮ ಮನೆಗೆ."

" ನಿಮ್ಮ ಮನೆಗೆ ! ಬೇಡ, ಹೀಗೆಯೇ ತುಸು ಮುಂದಕ್ಕೆ ಹೋಗಿ ಮುಂದಿನ ವರ್ತುಲದಲ್ಲೆಲ್ಲಾದರೂ ಕುಳಿತುಕೊಳ್ಳುವ."

ವರಲಕ್ಷ್ಮಿ " ಹೂಂ " ಎಂದು ಅವನ ಜತೆಯಲ್ಲೇ ವಿಹಾರಕ್ಕೆ ಹೊರ

ಟಳು. ಆಕೆಯ ಮುಖ ನಗು, ಉತ್ಸಾಹಗಳಿಂದ ತುಂಬಿತ್ತು. ಶಂಕರನದೇ ಅಷ್ಟೊಂದು ಉತ್ಸಾಹಪೂರ್ಣವಾಗಿರಲಿಲ್ಲ. ಇಬ್ಬರೂ ನಡೆದು, ತುಸು ದೂರ ಹೋದರು. ಮುಂದಿನ ವರ್ತುಲವೊಂದರಲ್ಲಿ ಹಾಕಿದ್ದ ಶಿಲೆಯ ಆಸನದ ಮೇಲೆ ಕುಳಿತುಕೊಂಡರು. ಮಾತು ತೊಡಗುವುದಕ್ಕೆ ಶಂಕರ ನಿಗೆ ತುಂಬ ಸಂಕೋಚ. ವರಲಕ್ಷ್ಮಿಯೇ ಸಂಭಾಷಣೆಗೆ ಪ್ರಾರಂಭಿಸಿದಳು. "ಯಾವ ಊರದು? ಎಂದು ಹೋದಿರಿ, ಏನು ಮಾಡಿದಿರಿ?" ಎಂದು ಕೇಳಿದಳು.

ಶಂಕರ ಶಿವಸಮುದ್ರವನ್ನು ಬಿಟ್ಟು, ತಾನು ಕನ್ನಡ ಜಿಲ್ಲೆಗೆ ಹೋದ ಮೇಲೆ ನಡೆದ ಸಮಾಚಾರಗಳನ್ನೆಲ್ಲ ತಿಳಿಸಿದ. ಅಲ್ಲಿನ ಸೃಷ್ಟಿ ಸೌಂದರ್ಯವ ನ್ನೆಲ್ಲ ಬಣ್ಣಿಸಿದ. ಆದರೆ ಅದಕ್ಕೆಲ್ಲ ವರಲಕ್ಷ್ಮಿ ಕಿವುಡಾಗಿದ್ದಂತೆ ಅನಿಸಿತು ಆಕೆ ಆಶ್ಚರ್ಯದಿಂದ "ಏನು! ಒಂದು ತಿಂಗಳು ಅಂಥ ಹಳ್ಳಿಯಲ್ಲಿ ಕಳೆದಿರೇ! ಇರುವುದಕ್ಕೆ, ಸಂಚಾರಕ್ಕೆ ಏನೂ ಅನುಕೂಲತೆ ಇಲ್ಲದಲ್ಲಿ ಬದುಕುವುದು ಹೇಗೆ? ಗುಡ್ಡ, ಬೆಟ್ಟ, ನದಿಗಳ ಸೌಂದರ್ಯಗಳನ್ನೆಲ್ಲ ಒಂದೆರಡು ದಿನ ನೋಡ ಬಹುದು, ಆಮೇಲೆ ಬೇಸರ ಬರುವುದಿಲ್ಲವೇ?" ಎಂದು ಹೇಳುತ್ತಲೇ ಶಂಕರನ ಉತ್ಸಾಹ ತಗ್ಗಿತು, ಮೆಲ್ಲಗೆ ಅವಳ ಮುಖವನ್ನು ನೋಡಿ, ಸಪ್ಪಗಿನ ನಗುವೊಂದನ್ನು ನಕ್ಕ. ವರಾ, ನಾನೇನೋ ಮನಸ್ಸಿನಲ್ಲಿ ತಪ್ಪು ತಿಳಿದು ಕೊಂಡಿದ್ದೆ. ಈಗ ಅದು ತಪ್ಪೆಂದು ನನಗೂ ಕಂಡು ಬರುತ್ತಿದೆ. ನಾನು ಮುಂದಿನ ಆಯುಷ್ಯವನ್ನು ಅಂಥ ಹಳ್ಳಿಯಲ್ಲೇ ಕಳೆಯಬೇಕೆಂದಿದ್ದೇನೆ" ಎಂದ.

ವರಲಕ್ಷ್ಮಿಗೆ ಹಿಡಿಸಲಾರದ ಆಶ್ಚರ್ಯವಾಯಿತು. "ಏನು, ಅಲ್ಲಿ ಕೆಲಸಕ್ಕೆ ಸೇರಿಕೊಂಡಿರಾ?" ಎಂದು ಕೇಳಿದಳು.

"ಸೇರಿಕೊಂಡು ಕೆಲಸ ಕಲಿಯಬೇಕಾಗಿಲ್ಲ. ನಮ್ಮ ಹಿರಿಯರ ಊರಾದ ಬಂಗಾಡಿಯಲ್ಲಿ, ನಮಗೆ ಪೂರ್ವದಲ್ಲಿ ತುಂಬ ಭೂಮಿ ಕಾಣಿಕೆಗಳು ಇದ್ದುವಂತೆ. ಒಂದು ಕಾಲದಲ್ಲಿ ಬಹು ಫಲವತ್ತಾದ ಭೂಮಿಯಾಗಿದ್ದಿರ ಬೇಕು. ಈಗ ಅದು ಕಾಡುಪಾಲಾಗಿದೆ. ಅದನ್ನು ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತಿದ್ದೇನೆ. ಸಿಕ್ಕೀತು, ಕಷ್ಟವಾದರೂ ಸಿಕ್ಕೀತು ಅನ್ನು ತ್ತಾರೆ. ಸಿಕ್ಕಿದ್ದಾದರೆ ನನ್ನ ಮುಂದಿನ ಆಯುಷ್ಯವನ್ನೆಲ್ಲ ಅಲ್ಲಿ ಕಳೆಯು

ವುದೇ ನಿಜ. ಮಣ್ಣಿನ ರೈತನಾಗಿ, ಬಾಳ್ವೆ ಮಾಡಬೇಕೆಂಬುದು ನನ್ನ ಆಸೆ."

" ಚೇಷ್ಟೆ ಮಾಡುತ್ತೀರಾ ? ನನ್ನಿಂದ ತಪ್ಪಿಸಿಕೊಳ್ಳಬೇಕೆಂದು ನೆಪ ಹುಡುಕುತ್ತೀರಾ ? "

ಶಂಕರನಿಗೆ ಪ್ರತ್ಯುತ್ತರ ಹೇಳುವುದು ಕಷ್ಟದ ಸಂಗತಿಯಾಯಿತು. ಒಂದೆರಡು ಮಾತುಗಳಲ್ಲಿ ಹೇಳಬಹುದಾದ ಉತ್ತರ ಅದಲ್ಲ. ಆದುದರಿಂದ ಮೆಲ್ಲಮೆಲ್ಲನೆ ತನ್ನ ಯಾವತ್ತು ಮನದ ಆಕಾಂಕ್ಷೆಗಳನ್ನು ವಿವರಿಸಿದನು. ತನ್ನಲ್ಲಿ ತೊಡಗಿದ ನೆಲದ ಹಂಬಲ, ಬಂಗಾಡಿಯನ್ನು ಕಂಡು ಉಂಟಾದ ಆಸೆ, ಅಲ್ಲಿ ಬದುಕಿ ಉಳಿದ ಕುಲದ ಸಂಬಂಧ, ಅವೆಲ್ಲವುಗಳಿಂದ ರೂಪುಗೊಂಡ ಆದರ್ಶ, ಅದನ್ನು ಸಾಧಿಸುವ ನಿರ್ಧಾರ–ಪ್ರತಿಯೊಂದನ್ನೂ ಬಿಡಿಸಿ ಹೇಳಿದ. ಕೊನೆಗೆ "ವರ, ನಿನ್ನಿಂದ ತಪ್ಪಿಸಿಕೊಳ್ಳಬೇಕೆಂಬ ಆಸೆ ನನಗೇಕೆ ಬರಬೇಕು? ನಾನೇ ನಿನ್ನ ಸ್ನೇಹಕ್ಕಾಗಿ ಬಯಸಿದವನು; ನೀನು ನನ್ನ ಜತೆಯಲ್ಲಿದ್ದು ನೆರವಾಗುವುದು ಶಕ್ಯವಿದ್ದರೆ ನನ್ನಷ್ಟು ಭಾಗ್ಯಶಾಲಿ ಯಾರೂ ಇಲ್ಲ. ನಮ್ಮ ಮನೆಯವರಿಂದ ಈ ಕೆಲಸಕ್ಕೆ ಯಾವ ಪ್ರೋತ್ಸಾಹವೂ ಸಿಗಲಾರದೆಂದು ನನಗೆ ಗೊತ್ತು. ಆದರೆ ನೀನು ಚಿಕ್ಕವಳು, ಮನೆಯವರ ಮಾತಿಗೆ ಕಟ್ಟುಬೀಳಲಾರೆ–ಎಂಬ ಧೈರ್ಯ ನನಗಿದೆ. ನಾನು ನನ್ನ ಮುಂದಿರಿಸಿಕೊಂಡ ಆದರ್ಶ ಹೊಸತು. ನಿನ್ನ ಎಳೆಯ ಮನಸ್ಸು ಅಂಥ ಕನಸಿನಲ್ಲೊಂದಾಗುವುದಕ್ಕೆ ಕಷ್ಟವಾಗಲಾರದು " ಎಂದು ನುಡಿದು, ಅವಳಿಂದ ಪ್ರತ್ಯುತ್ತರವನ್ನು ನಿರೀಕ್ಷಿಸಿದ. ಆಕೆಯೂ ತುಂಬ ವಿಚಾರಕ್ಕೊಳಗಾದಳು. ನಿರಾಶೆಯ ಕಂಬನಿ ಉದುರಿತು. ನಗರೋದ್ಯಾನಗಳಲ್ಲಿ ನಲಿಯುವ ಆಸೆ ಅವಳಿಗೆ, ಅರಣ್ಯರಾಜ್ಯದಲ್ಲಿ ಶ್ರಮಿಸಲು ಇಷ್ಟವಿದ್ದಿಲ್ಲ. ತಾನು ಕಟ್ಟಿದ ಕನಸುಗಳೆಲ್ಲ ವ್ಯರ್ಥವಾದುವೆಂದು ಅವಳಿಗೂ ಅನಿಸದಿರಲಿಲ್ಲ. ತೊದಲುವ ತುಟಿಗಳಿಂದ " ನಾನು ತಂದೆತಾಯರ ನಿಷ್ಠುರವನ್ನು ವ್ಯರ್ಥವಾಗಿ ಕಟ್ಟಿಕೊಂಡೆ " ಎಂದಳು.

" ಯಾಕೆ ಹಾಗೆನ್ನುತ್ತೀಯಾ ? "

" ನೀವು ಕ್ರಿಯಾಜೀವಿಗಳು; ಎಂಜಿನಿಯರು. ದೊಡ್ಡ ಕೆಲಸಕ್ಕೆ ಸೇರಿಕೊಳ್ಳುತ್ತೀರಿ, ನಾಳೆ ವಿದೇಶಕ್ಕೂ ಹೋಗಿ ಅಭ್ಯಾಸಮಾಡಬಹುದು, ಕೀರ್ತಿಗಳಿಸಬಹುದು—ಎಂಬ ಏನೇನೋ ಆಸೆ ಕಟ್ಟಿಕೊಂಡಿದ್ದೆ."

ನಾನು ಕ್ರಿಯಾಜೀವಿಯಾದುದರಿಂದಲೇ ಈ ಆಸೆ ಹಿಡಿದೆ. ಆದರೆ ನನಗಿದು ಕೀರ್ತಿಯನ್ನೂ ತರಲಾರದು, ಸಂಪತ್ತನ್ನೂ ತರಲಾರದು. ನನ್ನ ಜೀವನಕ್ಕೆ ಬೇಕಾದ ತೃಪ್ತಿಯನ್ನು ತಂದೀತೆಂಬ ಆಸೆಯಿದೆ. ತೃಪ್ತಿಯಿಲ್ಲದ ಬಾಳ್ವೆ ಏನಿದ್ದರೂ ಬಾಳ್ವೆಯಲ್ಲ."

ವರಲಕ್ಷ್ಮಿ ಮುಂದೆ ಮಾತನಾಡಲಿಲ್ಲ. ಅವಳ ಹೃದಯದಲ್ಲಿ ನಿರಾಶೆಯು ಕುದಿ ತುಂಬಿತ್ತು. ಶಂಕರ ಅಷ್ಟು ಸುಲಭದಲ್ಲಿ ಕೈಯಿಂದ ಸರಿದು ಹೋಗುತ್ತಾನೆ-ಎಂದು ಅವಳು ತಿಳಿದಿರಲಿಲ್ಲ. ಕೇವಲ ಅವನನ್ನು ಪಡೆಯುವುದರ ಸಲುವಾಗಿ ಎಂಥ ಜೀವನಕ್ಕೂ ಎದೆಯೊಡ್ಡುವ ಸಾಹಸ ಅವಳಿಗಿರಲಿಲ್ಲ. ಕೃಷಿಕ ಜೀವನ ಏನೆಂಬುದೇ ಅವಳಿಗೆ ತಿಳಿಯದು. ಅದರ ಕಷ್ಟಸುಖಗಳ ಅರಿವೂ ಅವಳಿಗಿಲ್ಲ. ಅದರಲ್ಲಿ ಒಂದು ಸುಖವಿದ್ದೀತು ಎಂದೂ ಅವಳು ತಿಳಿದಿರಲಿಲ್ಲ. ತನ್ನ ಎಳೆಯ ಮನದ ವಿಲಾಸದ ಬಯಕೆಗಳನ್ನು ಶೃಂಗಾರ ಜೀವನದ ಕನಸುಗಳನ್ನು, ಸ್ವರ್ಗಮಯ ಸ್ವಪ್ನಗಳನ್ನು ಶಂಕರನ ಆದರ್ಶ ಕೈಗೂಡಿಸಲಾರದು–ಎಂಬುದು ಸ್ಪಷ್ಟವಾಗಿತ್ತು. ಅವನ ಸಲುವಾಗಿ ತನ್ನ ಆಸೆಗಳ ತ್ಯಾಗಕ್ಕೆ ಅವಳು ಸಿದ್ಧಳಿಲ್ಲ. ಅಂತು ತಾನು–ಅದೃಷ್ಟಶಾಲಿಯಲ್ಲ–ಎಂದು ತೀರ್ಮಾನಿಸಿ ಸುಮ್ಮನಾದಳು. ಇಬ್ಬರೂ ಬಹಳ ಹೊತ್ತು ಮಾತನಾಡದೆ ಕುಳಿತರು. ಇನ್ನೊಂದು ವಿಚಾರಕ್ಕೆ ಮನಸ್ಸು ಹೋಗುವಂತಿರಲಿಲ್ಲ ; ಬಂದಿದ್ದ ವಿಚಾರದಲ್ಲಿ ತೃಪ್ತಿಯ ದಾರಿಯೂ ಕಾಣಿಸುವಂತಿರಲಿಲ್ಲ, ವರ ಹೆಚ್ಚು ಹೊತ್ತು ಕುಳಿತಿರಲಾರದೆ ನಿರಾಶೆಯಿಂದ 'ಹೊರಡುತ್ತೇನೆ' ಎಂದು ಹೇಳಿ ಎದ್ದಳು. ಶಂಕರ ಅವಳನ್ನು ಹಿಂಬಾಲಿಸಿದ. ಅವರ ಮನೆಯ ತನಕವೂ ಹೋದ. ಅವಳನ್ನು ಬೀಳ್ಕೊಡುತ್ತ "ವರಾ, ಕ್ಷಮಿಸು. ನಾನೇ ಅಪರಾಧಿ. ನಿನ್ನಲ್ಲಿ ಇಲ್ಲದ ಆಸೆಯನ್ನು ಹುಟ್ಟಿಸಿದೆ. ಈಗಲೇ ತಪ್ಪು ತಿಳಿದುಕೊಂಡು ತಿದ್ದುವ ಅವಕಾಶವಾಯಿತಲ್ಲ. ನಾಳೆ ಒಬ್ಬರ ದಾರಿ ಒಬ್ಬರಿಗೆ ಹೊಂದದೆ, ಜೀವನವೇ ಯುದ್ಧ ರಂಗವಾಗುತ್ತಿತ್ತು" ಎಂದ. ಆಕೆ ಮುಖವನ್ನು ತಗ್ಗಿಸಿದಳು. ಶಂಕರನ ಸ್ನೇಹದ ಆಸೆ ಅವಳಲ್ಲಿ ಅತಿಯಾಗಿತ್ತು, ಆದರೆ ಅದು ಕೈಗೂಡುವ ದಾರಿ ಇಷ್ಟು ಸುಲಭದಲ್ಲಿ ಕಡಿದೀತೆಂದು ಎಣಿಸಿರಲಿಲ್ಲ. "ಮುಂದೆ ನಿನ್ನ ನಿರ್ಧಾರ ಬದಲಾದರೆ ತಿಳಿಸುತ್ತೀಯಾ?" ಎಂದು ಕೇಳಿದಳು, ಅವನ ಮೇಲಿನ ಮೋಹದಿಂದ.

ತನ್ನ ಹೃದಯದಲ್ಲಿ ಬೇರೂರಿದ ಆ ವಿಚಿತ್ರ ಬಾಯಾರಿಕೆಯನ್ನು ಶಂಕರ ಅದುಮಿ ಹಿಡಿಯುವವನಲ್ಲ, ಅವಳನ್ನು ಶೀರ ನೋಯಿಸಲಾರದೆ "ಆಗಲಿ" ಎಂದ. ಅದು ಅಸಾಧ್ಯದ ಮಾತೆಂದು ಅವಳಿಗೂ ಗೊತ್ತು, ಅವನಿಗೂ ಗೊತ್ತು. ದೀನವದನರಾಗಿ ಒಬ್ಬರು ಇನ್ನೊಬ್ಬರನ್ನು ನೋಡುತ್ತ ಆಗಲಿದರು,

ಶಂಕರ ಮರಳಿದ್ದು ಈಗಷ್ಟೆ. ಹೊರಟು ಬಂದ ವರ್ತುಲಕ್ಕೆ. ತಿರುಗಿ ಅಲ್ಲಿಗೇ ಹೋಗಿ ಕುಳಿತ. ಖಿನ್ನನಾಗಿ ವರಲಕ್ಷ್ಮಿಯ ಚಿಂತನೆಯನ್ನೇ ಮಾಡ ತೊಡಗಿದ, ವಿದ್ಯಾರ್ಥಿಯಾಗಿದ್ದಾಗ ಹಲವಾರು ಕತೆ, ಕಾದಂಬರಿಗಳನ್ನು ಆತ ಓದಿದ್ದ. ಕಾವ್ಯಗಳಲ್ಲಿ–ಪ್ರಣಯಿಗಳ ಮಿಲನ, ಪ್ರೇಮದ ವರ್ಚಸ್ಸು ಅದರಿಂದಾಗಿ ಪ್ರೇಮಿಗಳು ತೋರುವ ಶೌರ್ಯತ್ಯಾಗಗಳನ್ನೆಲ್ಲ ಕುರಿತು ಓದಿದ್ದ. ನಿರ್ದುಷ್ಟವಾದ, ತಮ್ಮದೇ ಅಲ್ಪ ಕಾಲದ ಪ್ರಣಯ ಜೀವನ ವನ್ನು ನೆನೆದಾಗ ತ್ಯಾಗದ ಮಾತು ದಪ್ಪ ಅಕ್ಷರಗಳಲ್ಲಿ ಕಾಣಿಸಿತು, ತಾನು ಪ್ರೀತಿಸುತ್ತಿದ್ದ ವರಲಕ್ಷ್ಮಿಗಾಗಿ ಜೀವನದ ಹುಚ್ಚು ಕನಸೊಂದನ್ನು ಬಿಡ ಲಾರದವನಾದೆನಲ್ಲ–ಎಂದನಿಸಿತು. ಪ್ರೇಮಕ್ಕಾಗಿ ಅರಸೊತ್ತಿಗೆಯನ್ನು ತ್ಯಜಿಸಿದ ಎಡ್ವರ್ಡ್ ದೊರೆಯ ನೆನಪಾಯಿತು. "ತಾನು!" ಎಂದನಿಸಿತು. ಇತ್ತ ತನ್ನ ಪ್ರೆಯಸಿಯೂ-ಪ್ರೇಮಿಗಾಗಿ ಬೆಡಗಿನ ಬಾಳ್ವೆ ಬಿಡದಾದಳು– ಎಂದೆನಿಸಿತು. ಅದೇ ಶುಭ ಎನಿಸಿತು ಒಮ್ಮೆ. ನಾಳಿನ ಜೀವನದಲ್ಲಿ ಗಂಡ ಹೆಂಡಿರು ಒಬ್ಬರ ಸಲುವಾಗಿ ಇನ್ನೊಬ್ಬರು ತ್ಯಾಗಮಾಡಬೇಕಾದ ಪ್ರಸಂಗ ಎಷ್ಟೆಲ್ಲ ಬರಬಹುದೋ. ಸಂಸಾರ ಸುಗಮವಾಗಿ ಸಾಗಬೇಕಾದರೆ ಆ ಗುಣ ಇಬ್ಬರಲ್ಲಿಯೂ ಇರಬೇಕು. ಆದರ್ಶಕ್ಕಾಗಿ, ತನ್ನವರಿಗಾಗಿ, ' ಜನಕ್ಕಾಗಿ ವ್ಯಕ್ತಿ ಸುಖವನ್ನು ಒಬ್ಬ ಮರೆಯಲಾರದೆ ಹೋದರ, ಬಾಳ್ವೆಗೆ ಚೆಲುವು ಬರಲಾರದೆನಿಸಿತು. ಇದರಲ್ಲಿ ತನ್ನ ತಪ್ಪೇನಿಲ್ಲ. ತಾನು ಸ್ವಸುಖವನ್ನು ಮುಂದಕ್ಕಿರಿಸಿಕೊಂಡಿಲ್ಲ. ಯಾವುದೋ ಒಂದು ಆದರ್ಶ ಇರಿಸಿಕೊಂಡಿ ದ್ದೇನೆ. ಅದಕ್ಕಾಗಿ ಉದ್ಯೋಗ, ಸ್ವಲಾಭ, ಕೀರ್ತಿಗಳನ್ನು ಮರೆಯುವುದಕ್ಕೆ ಸಿದ್ಧನಾಗಿದ್ದೇನೆ. ಅವನ್ನು ತಾನು ಮರೆಯುವುದಕ್ಕಿಂತ, ಲಘು ಜೀವನದ ಬಯಕೆಯನ್ನು ವರಲಕ್ಷ್ಮಿ ಮರೆಯುವುದು ಇನ್ನೂ ಸುಲಭವಲ್ಲವೇ ? ಆ ಕೆಲಸ ಅವಳಿಂದಾಗದಿದ್ದರೆ ತನ್ನ ತಪ್ಪೇನು?-ಎಂದನಿಸಿತು. ಎಷ್ಟು ಯೋಚಿ

ಸಿದರೂ ನಿಟ್ಟುಸಿರೇ ಪ್ರತಿಫಲ ! ಸಂಜೆಯಾಯಿತು, ಮನೆಗೆ ಹೊರಟ.

ಶಂಕರನು ಬಂದ ವಾರ್ತೆಯನ್ನು ಪ್ರತಿಮೆ ಗಂಡನಿಗೆ ಫೋನಿನ ಮೂಲಕ ತಿಳಿಸಿದ್ದಳು. ಬೆಳಿಗ್ಗೆ ಅವರು ಹೊರಟು ಹೋದ ಮೇಲೆ, ಶಂಕರ ಬಂದುದು, ಮಗನನ್ನು ನೋಡುವ ಆತುರದಿಂದ ಸಂಜೆ ಬೇಗನೆ ಮನೆಗೆ ಬಂದರು. ಯಾರೂ ಇಲ್ಲದೆ, ಮನೆಯಲ್ಲಿ ಕಾದು ಕುಳಿತರು. ಶಂಕರ ಬರುತ್ತಲೇ "ಬಾ, ಕುಳಿತುಕೋ" ಎಂದು ಅವನ ಮುಂದೆ ವಿಟ್ಠಲನ ಮದುವೆಯ ಕಥೆಯನ್ನು ಹೇಳಿದರು. ಮುಂದಿನ ವಿಚಾರ-ಪಂಜಾಬಿನ ವಿದ್ಯುತ್ ಇಲಾಖೆಯಲ್ಲಿ ಆತಗೆ ನೌಕರಿ ಸಿಗುವ ಸಂಭವ ತಿಳಿಸಿದರು. ಆದುದರಿಂದ ಅವನೂ ಸಹ ಬೇಗನೇ ಲಗ್ನವಾಗಿ ಸಂಸಾರದೊಡಗೂಡಿ ಸುಖವಾಗಿರಬೇಕೆಂಬ ಆಸೆಯನ್ನು ತೋಡಿಕೊಂಡರು.

ಆ ಮಾತುಗಳನ್ನು ಕೇಳಿದ ಶಂಕರನಿಗೆ, ತಾನು ಒಂದು ನಿರಾಶೆಯ ರಾಜ್ಯದಿಂದ ಇನ್ನೊಂದು ನಿರಾಶೆಯ ರಾಜ್ಯಕ್ಕೆ ಕಾಲಿರಿಸುತಿದ್ದೇನೆ— ಎಂದು ತೋರಿತು. ತಂದೆಗೆ ತನ್ನ ಮನೋಗತವನ್ನು ಉಪಾಯಾಂತರವಾಗಿ ಹೇಳಬೇಕು—ಎಂದು ಊರಿಗೆ ಬರುವಾಗ ಯೋಚಿಸಿದ್ದ. ಆದರೆ, ವರಲಕ್ಷ್ಮಿಯಿಂದ ಪ್ರಾಪ್ತವಾದ ನಿರಾಶೆಯನ್ನು ಕಂಡ ಮೇಲೆ, ಎಲ್ಲ ಬಂಧನಗಳನ್ನು ಬೇಗ ಬೇಗನೆ ಹರಿದು, ತನ್ನ ನೆಲೆಯನ್ನು ನಿರ್ಣಯಿಸುವುದು ಒಳಿತೆಂದು ತೋರಿತು. ಈಗ ಬಂದ ಪ್ರಶ್ನೆಯನ್ನು ನೇರಾಗಿ ಇದಿರಿಸುವ ಧೈರ್ಯ ಮಾಡಿದ. ಮೆಲ್ಲಗೆ ಹೇಳಿದ " ಅಪ್ಪಾ ನಿನಗೆ ಹೇಗೆ ಅನಿಸುತ್ತದೋ ನನಗೆ ತಿಳಿಯದು. ನನಗೆ ಯಾವ ನೌಕರಿಯನ್ನು ಸೇರುವ ಇಚ್ಛೆಯೂ ಇಲ್ಲ. ಬಹುದಿನದಿಂದ ನನ್ನ ಮನಸ್ಸಿನಲ್ಲಿ—ನೌಕರಿಯ ಹಂಗು ಬಿಟ್ಟು, ಕೃಷಿಕನಾಗಬೇಕೆಂಬ ಆಸೆ ಮೂಡಿದೆ " ಎಂದ.

ವಾಕ್ಯ ಮುಗಿಯುವುದರೊಳಗಾಗಿ ಸುಂದರರಾಯರು ಚಕಿತರಾಗಿ ಮಗನ ಮುಖವನ್ನೇ ನೋಡಿ ಅಂದರು " ಏನು ಕೃಷಿಕನಾಗುವುದೇ ? ಗದ್ದೆ ಉಳುವ ಕೆಲಸವೇ ? ' ಹೆಚ್ಚಿಗೆ ಬೆಳೆಯಿರಿ ' ಎಂಬ ಸರಕಾರದ ಪೋಸ್ಟರುಗಳನ್ನು ನೋಡಿ ಈ ಹುಚ್ಚು ಹಿಡಿಯಿತೇ ನಿನಗೆ ? "

ಶಂಕರ ನಕ್ಕ. " ನನ್ನಂಥವನನ್ನು ಯಾವ ಪೋಸ್ಟರೂ ಮರುಳು ಮಾಡಲಾರದು. ನೀನು ಏನು ತಿಳಿದರೂ ಸರಿಯೆ ; ಅನುಮತಿ ಕೊಟ್ಟರೂ

ಸರಿಯೆ. ನಿನಗೆ ಹೇಳಬಾರದ ಸಂಗತಿಯಲ್ಲ. ನಿನಗೆ ಹೇಳದೆ ಇನ್ನಾರಿಗೆ ಹೇಳಬೇಕು ? ನಾನು ನಮ್ಮೂರಾದ ಬಂಗಾಡಿಗೆ ಹೋಗಿ ಬಂದೆ. ಕನ್ನಡ ಜಿಲ್ಲೆಯ ಒಂದು ಮೂಲೆಯಲ್ಲಿದೆ ಆ ಹಳ್ಳಿ.........ನಾನು ಕಾಶಿಯಲ್ಲಿರುವಾಗಲೇ ರೈತರ ಜೀವನವನ್ನು ಕಂಡು ಅಂಥ ಜೀವನವನ್ನು ಮಾಡಬೇಕೆಂದಾಸೆಯಾಗಿತ್ತು. ವಿದ್ಯಾವಂತರಾದ ನಾವು, ಅವರಿಗೆ ಮಾರ್ಗದರ್ಶಕರಾಗಬೇಕೆಂದನಿಸಿತು. ಆದರೆ ಬಂಗಾಡಿಗೆ ಹೋಗಿ, ಹಿರಿಯರು ಬಾಳಿ ಬದುಕಿದ ಭೂಮಿಯನ್ನು ಕಂಡಂತು ಅಸ್ಪಷ್ಟವಾದ ಆ ಆಸೆ ಬಲವಾದ ನಿರ್ಧಾರವಾಗಿದೆ.

" ಅಪ್ಪಾ, ನಮಗೆ ಯಾರೂ ಇಲ್ಲ ಅಂದಿದ್ದೆ ನೀನು. ಬಂಗಾಡಿಯಲ್ಲಿ ನನ್ನ ಅಜ್ಜನ ತಂಗಿಯೊಬ್ಬಳು ಇನ್ನೂ ಬದುಕಿದ್ದಾಳೆ. ನಿನ್ನ ತಂದೆಯ ತಂಗಿ. ತೊಂಬತ್ತು ವರ್ಷ ಮಿಕ್ಕಿದ ಮುದುಕಿ. ನನ್ನನ್ನು ಕಂಡಾದ ಸಂತೋಷ ಅವಳಿಗೆ ಅಷ್ಟಿಷ್ಟಲ್ಲ. ನನ್ನನ್ನು ಕಂಡಳು; ಕಂಡ ಕ್ಷಣವೇ " ದತ್ತಣ್ಣನ ಮೊಮ್ಮಗನೇ ? " ಎಂದು ಕೇಳಿದಳು. ಆಮೇಲೆ ನಾನೂ ಅವರಿಗೆ ನಮ್ಮೆಲ್ಲರ ಸುದ್ದಿ ಹೇಳಿದೆ "–ಎಂದು ವಿಸ್ಮಯ ತಾಳಿದ್ದ ಸುಂದರರಾಯರಿಗೆ ಅಜ್ಜಿಯ ಮನೆಯ ಕಥಾನಕಗಳನ್ನೆಲ್ಲ ವಿವರವಾಗಿ ಬಣ್ಣಿಸಿದ. ಅವರಿಗೂ ಕೇಳುವ ಆತುರವಾಯಿತು. ತಮ್ಮ ಪೂರ್ವಜರು ಕುಲ, ಶೀಲ, ಕೀರ್ತಿ, ಸಂಪಾದಿಸಿದವರು ಎಂದು ಕೇಳುವಾಗ ಹಿಗ್ಗೂ ಆಯಿತು. ತಂದೆಯ ತಂಗಿಯಂಥ ನಿಕಟ ಬಂಧುವೂ, ಹಿರಿಯ ವ್ಯಕ್ತಿಯೂ ಬದುಕಿದ್ದಾರೆ ಎಂದು ಕೇಳಿದಾಗ ಆಶ್ಚರ್ಯ ಆಸೆ ಎರಡೂ ಆದುವು. ಪೆನ್ಶನ್ ದೊರೆತು, ವಿರಾಮವಾದ ಮೇಲೆ ಹೋಗಿ ನೋಡುವ ಹಂಬಲವೂ ಮೂಡಿತು. ಆದರೆ ಆ ಎಲ್ಲ ಹಿಗ್ಗಿನಲ್ಲಿ ಮಗನ ಮೂರ್ಖ ಆಸೆಯ ಮರವೆ ಮಾತ್ರ ಆಗಲಿಲ್ಲ.

" ಮಗು, ನೀನು ಕನ್ನಡ ಜಿಲ್ಲೆಗೆ ಹೋದದ್ದು, ಬಂಗಾಡಿಯನ್ನು ಹುಡುಕಿ ತೆಗೆದದ್ದು, ಹಿರಿಯರನ್ನು ಕಂಡದ್ದು ನಮ್ಮ ಪುಣ್ಯಕ್ಕೆ ಒಬ್ಬಳಾದರೂ ಬದುಕಿ ಉಳಿದದ್ದು–ಎಲ್ಲವೂ ಸಂತೋಷದ ಸಂಗತಿಗಳೇ. ಮಾಡಬೇಕಾದ ಕೆಲಸವೇ ಅದು. ಆದರೆ ಆ ಊರಿಗೆ ಹೋಗಿ, ನಾನು ಕೃಷಿಕನಾಗುತ್ತೇನೆ ; ಭೂಮಿಯನ್ನು ಕೊಳ್ಳುತ್ತೇನೆ-ಎಂಬುದೆಲ್ಲ ಆಗದ ಹೋಗದ

ಮಾತು. ಗಾಂಧೀಜಿಯವರು ಪುರಾತನಕಾಲದ ಆದರ್ಶ ಹೇಳಿದ ಹಾಗೆ. ಈ ಬದಲಿಸಿದ ಯುಗಕ್ಕೆ ಸಮನಾಗಿ ನಾವು ಬಾಳಬೇಕೇ ಹೊರತು, ಓದು ಕಲಿತವರು ತಿರುಗಿ ಆದಿವಾಸಿಗಳಂತ ಬದುಕುತ್ತೇವೆ ಎಂದರೆ ನಡೆಯದ ಮಾತು. ನಮ್ಮ ಜೀವನ ತೀರ ಬೇರೆಯಾಗಿದೆ. ಪ್ರಪಂಚದ ಸ್ಥಿತಿಗತಿಗಳು ಬದಲಿಸಿವೆ. ಹಳ್ಳಿಯ ಕೊಂಪೆಯನ್ನು ಬಿಟ್ಟು, ನಗರವನ್ನು ಸೇರಿದ ನಾವು ತಿರುಗಿ, ಆ ಜೀವನ ಮಾಡುವುದು ಸಾಧ್ಯವಿಲ್ಲ. ನೀನು ಇಷ್ಟೆಲ್ಲ ಓದಿ, ತಿಳಿದು, ಕಲಿತು ಅವುಗಳೆಲ್ಲ ಇದ್ದೂ ಇಲ್ಲದಂತೆ ವರ್ತಿಸುವುದು ಏನು ಚಂದ? ಕನಸಿನ ಅರಮನೆ ಕಟ್ಟುವುದಕ್ಕೆ ಹೋಗಿ ಇದ್ದ ಬದುಕನ್ನು ಕೆಡಿಸಿಕೊಳ್ಳಬಾರದು."

ಶಂಕರನಿಗೆ ತನಗೆ ಹಿಡಿದ ಹುಚ್ಚಿನ ಪರವೆ ಚೆನ್ನಾಗಿತ್ತು. ಅದು ಮೆಲ್ಲಗೆ ಬೆಳೆದು ಬಂದ ಹುಚ್ಚೇ ಹೊರತು. ಒಂದೆರಡು ಕ್ಷಣಗಳಲ್ಲಿ ಹುಟ್ಟಿ ಬೆಳೆದ ಆವೇಶವಲ್ಲ, ಅನುರಕ್ತಿಯಲ್ಲ. ಅದು ತಪ್ಪು, ಅವಾಸ್ತವ, ಅಸಾಧ್ಯ ಎಂದು ಅವನಿಗನಿಸುತ್ತಿರಲಿಲ್ಲ. ಆತ ಹಲವು ಪಾಶ್ಚಾತ್ಯ ಪತ್ರಿಕೆಗಳನ್ನೂ, ಲೇಖನಗಳನ್ನೂ ಓದಿದ್ದಾನೆ. ಪಾಶ್ಚಾತ್ಯ ದೇಶಗಳಲ್ಲಿ ಕೃಷಿ ಒಂದು ವಿಜ್ಞಾನವಾಗಿದೆ—ಎಂಬುದನ್ನು ತಿಳಿದುಕೊಂಡಿದ್ದಾನೆ. ತಮ್ಮ ದೇಶದ ಬೇಸಾಯ ಆದಿವಾಸಿಗಳ ಬೇಸಾಯದಂತೆ-ಎಂಬುದು ನಿಜ; ಆ ದೃಷ್ಟಿ ಬದಲಿಸಿ, ವೈಜ್ಞಾನಿಕ ದೃಷ್ಟಿ ತಮ್ಮ ಜನಗಳಲ್ಲಿ ಮೂಡದೆ ಹೋದರೆ ಕಾಲಕ್ಕೆ ತಕ್ಕ ಸುಧಾರಣೆ ಆಗಲಾರದೆಂದು ತಿಳಿದುಕೊಂಡಿದ್ದಾನೆ. ಅದೇನಿದ್ದರೂ ತನ್ನ ತಂದೆ ತನ್ನ ವಿಚಾರ ಸರಣಿಯನ್ನು ಒಪ್ಪಿಕೊಳ್ಳುತ್ತಾನೆ—ಎಂಬುದನ್ನು ಅವನು ಮೊದಲಿನಿಂದಲೂ ತಿಳಿದುಕೊಂಡಿರಲಿಲ್ಲ. ಅವರು ಒಪ್ಪಿದ್ದರೆ ತನ್ನ ಕೆಲಸ ಸುಲಭವಾಗಬಹುದು; ತಂದೆಯಿಂದ ಸ್ವಲ್ಪ ಸಹಾಯ ಧನ ದೊರಕುತ್ತಿತ್ತು. ಇಲ್ಲದೆ ಹೋದರೆ, ತಾನು ಹಣಕ್ಕಾಗಿ ನಾಲ್ಕು ದಿನ ಕಷ್ಟಪಡಬೇಕಾದೀತು. ತಾನೇ ದುಡಿದು, ಆ ಹಣವನ್ನು ಗಳಿಸಿ, ಅನಂತರ ತನ್ನ ಕನಸನ್ನು ಸತ್ಯವಾಗಿ ಮಾಡಿಕೊಳ್ಳುವುದಕ್ಕೆ ಧುಮುಕಬೇಕಾದೀತು ಅವನ್ನೆಲ್ಲ ಮೊದಲೇ ಎಣಿಸಿದ್ದ—ಇಂಥ ವಿಚಾರಗಳಲ್ಲಿ ವಾಗ್ವಾದ ಪ್ರಯೋಜನವಿಲ್ಲವೆಂದು, "ಏನೋ, ನನ್ನ ಮನಸ್ಸಿನಲ್ಲಿ ಇದನ್ನೇ ಗಟ್ಟಿಮಾಡಿಕೊಂಡಿದ್ದೇನೆ" ಎಂದು ಮಾತನ್ನು ನಿಲ್ಲಿಸಿಬಿಟ್ಟ.

ಸುಂದರರಾಯರಿಗೆ ಮಗನ ಸ್ವಭಾವ ತಿಳಿಯದ್ದೂ ಅಲ್ಲ. ಆತನಿಗೆ ಮಾತು ಕಡಿಮೆ, ಆದರೆ ತನ್ನ ಮಾತಿಗೆ ಅಂಟಿಕೊಳ್ಳುವವನು–ಎಂಬುದನ್ನು ಚೆನ್ನಾಗಿ ಬಲ್ಲರು. ಶಂಕರನ ಮೇಲೆ ತಾಯಿಗೂ ಈ ವಿಷಯದಲ್ಲಿ ವರ್ಚಸ್ಸು ಸಾಲದು ಎಂಬುದನ್ನರಿತವರು. ಅವರಿಗೂ ಬೇಸರವಾಯಿತು. "ನಿನ್ನದು ಎಷ್ಟೆಂದರೂ ಕಾರ್ಯಕ್ಕೆ ಬರುವ ಮಾತಲ್ಲ" ಎಂದು ಹೇಳಿ ತಮ್ಮ ಕೊಟಡಿಗೆ ಹೋಗಿ ಕುಳಿತರು. ಇಬ್ಬರ ಅಂತಃಕರಣಗಳಲ್ಲೂ ಹೊಡೆದಾಟ ಪ್ರಾರಂಭವಾಯಿತು. ಶಂಕರ ಈಗಾಗಲೇ ಒಂದು ನಿರಾಶೆಯನ್ನು ಇದಿರಿಸಿದ್ದ. ಜತೆಗೆ ಮೊದಲೇ ಕಟ್ಟಿಟ್ಟದ್ದು ಎಂಬ ಇನ್ನೊಂದು ನಿರಾಶೆಯನ್ನೂ ಇದಿರಿಸಲು ಸಿದ್ಧನಾದ. ಸುಂದರರಾಯರು ಮಾತ್ರ ಅಂಥವುಗಳಿಗೆ ತಕ್ಕ ಆಳಲ್ಲ.

ಕತ್ತಲು ಕವಿಯಿತು, ಮನೆಯ ದೀಪಗಳು ಬೆಳಗಿದುವು, ರಾಯರ ಮನದ ಕಗ್ಗವಿಯಲ್ಲಿ ಬೆಳಕು ಮೂಡದೆ ಹೋಯಿತು. ಅಷ್ಟಕ್ಕೆ ಪ್ರತಿಮೆ ಮನೆಗೆ ಬಂದಳು. ಅವಳೊಡನೆ ರಾಯರು ಮಗನ ಮೂರ್ಖತನದ ವರ್ಣನೆ ಮಾಡಿದರು. ಕೊನೆಗೆ ತೀರ್ಮಾನವಾಗಿ ನುಡಿದರು "ಏನೇ ಮಾಡಿಕೊಳ್ಳಲಿ. ನಾನು ಅವನಿಗಾಗಿ ಮಾಡುವುದನ್ನೆಲ್ಲ ಮಾಡಿದ್ದೇನೆ. ಪುಣ್ಯಕ್ಕೆ ನಂಟುತನವನ್ನು ಗೊತ್ತುಮಾಡಲಿಲ್ಲ. ಮಾಡಿದ್ದರೆ ಹೆರವರೆದುರಿಗೆ ಆಭಾಸಕ್ಕೆ ಗುರಿಯಾಗಬೇಕಿತ್ತು. ನಮ್ಮ ಇಷ್ಟದಂತೇ ಇರಬೇಕು—ಎಂದು ಅನಿಸಿದರೆ ಇರುತ್ತಾನೆ; ಇಲ್ಲದಿದ್ದರೆ ತಿಳಿದಂತೆ ಮಾಡುತ್ತಾನೆ. ತನ್ನ ಮಕ್ಕಳಾಟಿಕೆಯಿಂದ ನಾಳೆ ಅವನೇ ಪಾಠ ಕಲಿತಾನು."

ಊಟ ಮುಗಿಯಿತು, ಶಂಕರ ಸುಖವಾಗಿ ನಿದ್ದೆಮಾಡಬಾರದೆಂದೋ ಏನೋ, ಪ್ರತಿಮೆ ತಾಯ್ತನದ ಅಧಿಕಾರ ನಡೆಯಿಸಬಹುದೆಂದು ಅಲ್ಲಿಗೆ ಬಂದಳು. ಬಂದು "ಅದೇನು ನಿನ್ನ ಹೊಸ ಯೋಚನೆ?" ಎಂದಳು. ಆತ ಪ್ರತ್ಯುತ್ತರ ಕೊಡುವ ಮೊದಲೇ "ನೀನಿಷ್ಟು ತಿಳಿಗೇಡಿಯೆಂದು ನಾನು ತಿಳಿದಿರಲಿಲ್ಲ. ವಿಟ್ಠಲನನ್ನು ನೋಡು. ನಿನಗಿಂತ ಎರಡು ವರ್ಷಕ್ಕೆ ಚಿಕ್ಕವ. ಈಗಾಗಲೇ ನೌಕರಿಯಲ್ಲಿ ಹೆಸರು ಗಳಿಸಿದ್ದಾನೆ. ಅವನು ಪೈಲಟ್ ಆಫೀಸರ್ ಎಂದು ಕೇಳುವುದಕ್ಕೂ ಹೇಳುವುದಕ್ಕೂ ನಮಗೆಷ್ಟು ಹೆಮ್ಮೆ. ಮಕ್ಕಳಿದ್ದರೆ ಹಾಗಿರಬೇಕು" ಎಂದಳು.

ತಂದೆಯ ನೇರಾದ, ಚುಟುಕಾದ ನಿರಾಶೆಯ ಮಾತುಗಳಿಗಿಂತಲೂ ತಾಯಿಯ ನಂಜಿನ ಮಾತು ಶಂಕರನನ್ನು ತುಂಬ ನೋಯಿಸಿತು. "ನಿಜ, ಅಮ್ಮ ಮಕ್ಕಳಿರಬೇಕಾದದ್ದೇ ತಾಯ್ತಂದೆಯರ ಪ್ರತಿಷ್ಠೆ ಬೆಳೆಸುವುದಕ್ಕೆ. ಅವರಿಗೆ ಸ್ವಂತ ಅತ್ಮಗಳಿಲ್ಲ. ಹೋಗಲಿ, ಆ ಅದೃಷ್ಟ ನನಗಿಲ್ಲ. ಅಪ್ಪ, ಅಮ್ಮನನ್ನು ಸಂತೋಷಗೊಳಿಸದೇ ಹೋದರೂ, ಒಂದಲ್ಲ ಒಂದು ದಿನ ಅಜ್ಜ, ಮುತ್ತಜ್ಜಂದಿರ ಪ್ರೇತಗಳಿಗಾದರೂ ತೃಪ್ತಿ ಕೊಟ್ಟೇನು" ಎಂದು ನುಡಿದು, ಮುಖ ತಿರುಗಿಸಿಕೊಂಡು ಮಲಗಿಬಿಟ್ಟ. ಶಂಕರನ ಮಾತು ಆಕೆಗೆ ಅರ್ಥವಾಗಲಿಲ್ಲ, ಆಗುವಂತೆಯೂ ಇರಲಿಲ್ಲ. ಆಕೆ ತಿರುಗಿ ಬಂದಳು.

ಮರುದಿನವೇ ವಿಟ್ಠಲನ ತಂತಿ ಬಂದಿತು. ಅವನಿಗೆ ಎಂಟು ದಿನಗಳ ರಜೆ ದೊರಕಿದೆಯೆಂದೂ, ಆ ಸಂಜೆಯೇ ಅವನು ವಿಮಾನದಲ್ಲಿ ಬರುವ ನೆಂದೂ. ಅಲ್ಲಿಂದಲೇ ಅವಸರಕ್ಕೆ ಆರಂಭ. ಕಚೇರಿಗೆ ಹೋಗಿದ್ದ ಗಂಡ ನಿಗೆ ಫೋನ್ ಮೂಲಕ ಸುದ್ದಿ ತಿಳಿಸಿದಳು, ಮಿಸ್ತ್ರರ ಮನೆಗೆ ವಾರ್ತೆ ಕೊಟ್ಟಳು. ಆಮಂತ್ರಣ ಪತ್ರಿಕೆ ಬರೆಸಿದಳು. ಅಚ್ಚುಹಾಕಿಸಲು ಕೊಟ್ಟಳು. ಉಳಿದ ಹಲವಾರು ಏರ್ಪಾಟುಗಳ ಸಲುವಾಗಿ ಓಡಾಡಿದಳು. ಆ ಸಂಜೆ ಪ್ರತಿಮೆ, ಸುಂದರರಾಯರಿಬ್ಬರೂ 'ಪಲ್ಲಮ್' ವಿಮಾನ ನಿಲ್ದಾಣಕ್ಕೆ ಮಗ ನನ್ನು ಸ್ವಾಗತಿಸಲು ಹೋದರು. ಮನೆಗೆ ಮಗನನ್ನು ಕರೆದುಕೊಂಡು ಬಂದುದೇ ತಡ, ಶಂಕರ ಮನೆಯಲ್ಲಿಲ್ಲದುದನ್ನು ಕಂಡು, ಅದೇ ತಕ್ಕ ವೇಳೆಯೆಂದು ಅರಿತು, ಅಣ್ಣನ ಮೂರ್ಖತನವನ್ನೆಲ್ಲ ವಿಟ್ಠಲನ ಮುಂದೆ ಬಣ್ಣಿಸಿ, ತಮ್ಮ ನಿರಾಶೆಯನ್ನು ವ್ಯಕ್ತಮಾಡಿದರು. "ನೀನಾದರೂ ಅವ ನನ್ನು ಒಲಿಸಿ ಹೇಳು" ಎಂದೂ ಬೇಡಿದರು.

ವಿಟ್ಠಲನಿಗೆ ಅಣ್ಣ ಹೊಸಬನಲ್ಲ. ಎಳೆತನದಲ್ಲಿ ಹಲವು ಬಾರಿ ಅವ ನೊಡನೆ ಜಗಳಾಡಿದವನು. ಮುಂದೆ ಬೆಳೆದು ತರುಣನಾದಂತೆ ಅವನ ವಿಷ ಯದಲ್ಲಿ ಗೌರವ, ಆದರಭಾವಗಳನ್ನಿರಿಸಿಕೊಂಡವನು. ಅಣ್ಣ ಮಿತ ಭಾಷಿ ಎಂಬುದನ್ನು ಬಲ್ಲ. ಅವನ ಮನಸ್ಸು ಚಂಚಲ ಸ್ವಭಾವದ್ದಲ್ಲ—ಎಂಬು ದನ್ನೂ ತಿಳಿದಿದ್ದ. ಆದುದರಿಂದ ವಿಟ್ಠಲ ನಗುತ್ತ ನುಡಿದ "ನಾನು ಹೇಳು ವುದೇ ಶಂಕರನಿಗೆ! ನನಗಿಂತ ಹೆಚ್ಚು ತಿಳಿದಿಲ್ಲವೇ ಅವನಿಗೆ? ಅಪ್ಪಾ,

ಸೈನಿಕರಾದ ನಮಗೆ ಜೀವನದ ದೃಷ್ಟಿಯೇ ಬೇರೆ. Life is an adventure. ಪ್ರತಿಯೊಂದು ಸಂಗತಿಯಲ್ಲೂ ಬಾಳ್ವೆಯೆಂಬುದು ಒಂದು ಸಾಹಸವೇ. ನನ್ನದೂ ಒಂದು ಬಗೆಯ ಸಾಹಸದ ಜೀವನ, ಅಡಿಗಡಿಗೆ ಮೃತ್ಯುವಿನೊಡನೆ ಕಾದಾಡುವ ಸಾಹಸ. ಅಣ್ಣನಿಗೆ ಇನ್ನೊಂದು ಬಗೆಯ ಸಾಹಸದಲ್ಲಿ ನಂಬಿಕೆ ಹುಟ್ಟಿರಬೇಕು, ಏನಂತೆ–ಅದರಿಂದ? ನೌಕರಿಯೇ ಬೇಕೆಂದೇನು? ಎಷ್ಟೋ ಬಾರಿ ನನಗೂ ಅನಿಸುತ್ತದೆ–ಮೇಲಿನವರನ್ನು ಕಂಡಾಗಲೆಲ್ಲ ಸಲಾಂ ಹಾಕುವ ನೌಕರಿಗಿಂತ ಸ್ವತಂತ್ರ ಬಾಳ್ವೆಯೇ ಒಳ್ಳೆಯದೆಂದು ಅವನಿಷ್ಟದಂತೆ ಮಾಡಬಹುದಲ್ಲ. ಕೃಷಿಯಲ್ಲೂ ಸಾಹಸಕ್ಕೆ ಎಡೆಯುಂಟು ಹಣ ಸಂಪತ್ತುಗಳನ್ನು ಅದು ತಂದುಕೊಟ್ಟೀತೋ ಇಲ್ಲವೋ–ನಾನು ಹೇಳಲಾರೆ, ಆದರೆ ಜೀವನದಲ್ಲಿ ಅವೆಲ್ಲ ಪರ್ಯಾಯ ವಸ್ತುಗಳು, ಜೀವನದ ತಡೆ ತೊಡಕುಗಳನ್ನು ಗೆಲ್ಲುವುದು ಸಾಹಸಿಯ ಮುಖ್ಯ ಹಂಬಲ, ಅದೂ ಒಂದು ಯುದ್ಧವೇ, ಯಾಕೆ ಅಂಜಬೇಕು? ಅವನನ್ನೇಕೆ ನಿರಾಶೆಗೊಳಿಸಬೇಕು? ಅವನಿಗೆ ಬೇಕಾದ ಸಹಾಯ ಕೊಡಬಹುದಲ್ಲ?

"ನಾನು ಐದಾರು ತಿಂಗಳು ಕಾಲ ಅಮೇರಿಕಕ್ಕೆ ಹೋಗಿದ್ದೆನಲ್ಲ. ಅಲ್ಲಿನ ಜನ ಕೃಷಿಯನ್ನೂ, ರೈತರನ್ನೂ ಕಡಿಮೆಯಾಗಿ ತಿಳಿಯುವುದಿಲ್ಲ. ಸಮಾಜ ಜೀವನಕ್ಕೆ ನಾವೆಷ್ಟು ಬೇಕೋ ಅವರು ಅಷ್ಟೇ ಬೇಕು. ಅಮೆರಿಕನ್ ಸೆನೆಟ್ ಸದಸ್ಯರಲ್ಲಿ ಎಷ್ಟೋ ಮಂದಿ ರೈತರಾಗಿದ್ದವರು. ಈಗಲೂ ರೈತರಾಗಿಯೇ ಇರುವವರೂ ಇದ್ದಾರೆ. ಅವರನ್ನು ಕಡಿಮೆಯೆಂದು ಯಾರೂ ತಿಳಿಯುತ್ತಲಿಲ್ಲ. ನಮ್ಮ ಹಿಂದುಸ್ಥಾನದಲ್ಲೇ ಈ ವಿಷಯದಲ್ಲಿ ವಿಚಿತ್ರ ಮನೋವೃತ್ತಿ ಬಂದಿದೆ. ಮೈಗೆಲಸವೆಂದರೆ ನಮ್ಮ ಜನಕ್ಕೆ ಅಳುಕು, ಅಸಹ್ಯ. ಗುಮಾಸ್ತಿಕೆಯೆಂದರೆ ಗೌರವ. ಬರಿಯ ಹುಚ್ಚಲ್ಲವೇ ಅದು" ಎಂದುಬಿಟ್ಟ. ಸುಂದರರಾಯರು ತಾವು ತಮ್ಮ ಹಿರಿಯ ಮಗನಿಗೆ, ಅರ್ಪಿಸಿದ ಬಿರುದನ್ನು ಕಿರಿಯ ಮಗ ವಿಟ್ಠಲ ತಮಗೇ ಒಪ್ಪಿಸಿಯಾನು–ಎಂದು ಊಹಿಸಿರಲಿಲ್ಲ, ವಿಟ್ಠಲನ ವಿಷಯದಲ್ಲಿ ಅವರಿಗೆ ಹೆಚ್ಚಿನ ಹೆಮ್ಮೆ, ಆದರಗಳು ತುಂಬಿದ್ದರೂ ಅವನ ಈ ಉಪನ್ಯಾಸ ಇಷ್ಟುಷ್ಟೂ ಹಿಡಿಸಲಿಲ್ಲ, ಆದರೆ ಪ್ರೀತಿಯ ಮಗನನ್ನು ಇದಿರಿಸಿ, ಬೇಸರ ಉಂಟುಮಾಡಲು ಇಷ್ಟಪಡಲಿಲ್ಲ. ಮಾತುಗಳನ್ನು ಬೇರೆ ಕಡೆಗೆ ಹರಿಯಿಸಿದರು. ಮಿತ್ರರ ಮನೆಯ ಸುದ್ದಿ

ತೆಗೆದರು. ಅಷ್ಟರಲ್ಲಿ ಮೋಟರಿನ ಧ್ವನಿ ಕೇಳಿತು. ವಿದ್ಯಾಸಾಗರರು, ಅವರ ಪತ್ನಿ ಇಬ್ಬರೂ ಅವಸರದಿಂದ ಕಾಲಿರಿಸಿದರು. "ನಾವು ಹಲ್ಲಮಿಗೆ ಹೋಗುವಾಗ ತುಸು ತಡವಾಯಿತು. ನೀವು ಬಂದು ಹೋಗಿದ್ದೀರೆಂದು ಕೇಳಿದೆ" ಎಂದಳು ಶ್ರೀಮತಿ ಮಿಸ್ರ. ಬಂದವರಲ್ಲಿ ವನಮಾಲೆಯನ್ನು, ಕಾಣದೆ ಪ್ರತಿಮೆ ನಗುತ್ತ "ಏನು, ವನಮಾಲಿಯನ್ನು ಬಿಟ್ಟೇ ಬಂದಿರಾ?" ಎಂದಳು. ಅಲ್ಲಿಂದ ಎಲ್ಲರೂ ವಿರಾಮವಾಗಿ ಕುಳಿತು ಹರಟೆಗೆ ಪ್ರಾರಂಭವಾಯಿತು,

* * * *

ಮುಂದಿನ ಎಂಟು ದಿನಗಳ ಕಾಲ-ಅವರ ಮನೆ ಅವಸರ, ಗದ್ದಲ, ನಗು ಉತ್ಸಾಹಗಳಿಂದ ತುಂಬಿ ತುಳುಕಾಡಿತು. ಎಲ್ಲರೂ ನಕ್ಕು ನಲಿದಾಡಿದರು. ಹೆಚ್ಚಿನ ಕೆಲಸವಿಲ್ಲದಿದ್ದರೂ ಬಹು ಕೆಲಸ ಹೊತ್ತವರಂತೆ ಅವಸರ ನಟಿಸುವವರೇ ಎಲ್ಲರೂ. ಮದುವೆಯೆಂದರೆ ಹಾಗೆಯೇ. ಅದೂ ದಿಲ್ಲಿಯಲ್ಲಿ ಸಮಾಜ ಗಣ್ಯರಾದ ಸುಂದರರಾಯ-ವಿದ್ಯಾಸಾಗರರ ಮನೆಯಲ್ಲಿ ಕೇಳಬೇಕಾದುದಿಲ್ಲ. ಮದುವೆಯ ದಿನ ಅವರ ಮನೆಯ ಮುಂದೆ ನಿಲ್ಲಿಸದಂಥ ಮೋಟಾರು ವಾಹನವಿಲ್ಲ. ಆ ಬೆಳಿಗ್ಗೆಯೂ ಅಷ್ಟೇ ಜನಸಂದಣಿ ವಧುವಿನ ಮನೆಯಲ್ಲಿ ಕೂಡಿತ್ತು. ಸಂಜೆ ರಾಯರ ಮನೆಯ ಉಪಹಾರಕ್ಕೂ ನೆರೆದಿತ್ತು. ವಧೂವರರನ್ನು ಬಂದು, ಕಂಡು ಮಾತನಾಡಿಸದವರಿಲ್ಲ. ಆ ಸಂಜೆ ಸುಂದರರಾಯರ ಮನೆಯ ಸ್ವಾಗತ ಸಮಾರಂಭದಲ್ಲಿ ಶಂಕರನೊಬ್ಬನೇ ಜಡನಾಗಿದ್ದವನು, ಮೂಕನಾಗಿದ್ದವನು. ಅಣ್ಣನ ನಿರುತ್ಸಾಹಕ್ಕೆ ಕಾರಣವೇನೆಂದು ತಿಳಿದ ವಿಟ್ಠಲ, ಅವನನ್ನು ನಾಲ್ಕಾರು ಬಾರಿ ಕರೆದ; ಗದ್ದಲಕ್ಕೆ ಸೆಳೆಯುವ ಪ್ರಯತ್ನ ಮಾಡಿದ. "ನನ್ನನ್ನೇನು ಕರೆದು ಮಾಡುತ್ತೀಯಾ ?" ಎನ್ನುತ್ತಿದ್ದ ಶಂಕರ. ಮದುವೆಯ ಮುಂಚಿನ ಮತ್ತ ನಂತರದ ದಿನಗಳಲ್ಲಿ, ಆತ ತುಂಬ ವಿಚಾರ ಮಗ್ನನಾಗಿದ್ದಾನೆ. ಮಾತು ಗದ್ದಲಗಳು ಬೇಡವಾಗಿವೆ ಅವನಿಗೆ. ಸಂಜೆ ಮುಂಜಾನೆಗಳಲ್ಲಿ ಕುತುಬಿನ ಕಡೆಗೆ ಹೋಗುವ ರಸ್ತೆಯನ್ನು ಹಿಡಿದು, ಬಹು ದೂರ ನಡೆದು ಹೋಗುತ್ತಾನೆ. ಜನ ಕಡಿಮೆಯಾಗಿ ಕಾಣಿಸುವ ಯಾವುದಾದರೊಂದು ವರ್ತುಲದಲ್ಲಿ ಆಸನವನ್ನು ಹಿಡಿದು, ಕುಳಿತು ವಿಚಾರಮಗ್ನ

ನಾಗುತ್ತಾನೆ. ಎರಡೆರಡು ಕಡೆಗಳಿಗೆ ಅವನ ಮನಸ್ಸು ಓಡಾಡುತ್ತದೆ. ಸೀತಾರಾಮನಿಗೆ ಒಪ್ಪಿಸಿ ಬಂದ ಕೆಲಸ ಅವನಿಂದಾದೀತೇ—ಇಲ್ಲವೇ ಎಂಬು ದೊಂದು. ತನ್ನ ಭವಿಷ್ಯದ ಕನಸು ಸಾಧ್ಯವಾಗಲು ಬೇಕಾದ ಹಣವನ್ನು ಎಲ್ಲಿಂದ ತರಲಿ? ಎಂಬ ಚಿಂತೆ ಮತ್ತೊಂದು. ತಂದೆಯನ್ನಂತು ಕೇಳು ವುದಕ್ಕೆ ಮನಸ್ಸುಬಾರದು. ಕೇಳಿದರೂ ಆ ಸಹಾಯ ದೊರೆಯುವುದು ಅನುಮಾನ. ಒಂದು ಸಂಜೆ ಹಾಗೆಯೇ ವಿಚಾರಮಗ್ನನಾಗಿ ಕುಳಿತಾಗ, ದಾರಿಯಲ್ಲಿ ವೇಗವಾಗಿ ಹೋಗುತ್ತಿದ್ದ ಮೋಟರ್ ಗಾಡಿಯೊಂದು ಥಟ್ಟನೆ ಬಿರಿದು ನಿಂತಿತು. ನಿಂತುದು ಅವನ ಸಲುವಾಗಿಯೇ. ನಿಂತ ಧ್ವನಿಯನ್ನು ಕೇಳಿಯೇ ಏನಾದರೂ ಅಪಾಯ ಸಂಭವಿಸಿತೇ—ಎಂದು ಬೆದರಿ, ಆ ಕಡೆಗೆ ತಿರುಗಿ ನೋಡುವಾಗ ಕಾರಿನಿಂದ ವಿಟ್ಠಲ—ವನಮಾಲಿಯರು ಇಳಿಯು ವುದು ಕಾಣಿಸಿತು. ವಿಟ್ಠಲ ಹೆಂಡತಿಯನ್ನು ಬಂಡಿಯಲ್ಲೇ ಕುಳಿತಿರೆಂದು ಹೇಳಿ ತಾನೊಬ್ಬನೇ ಅಣ್ಣನ ಬಳಿಗೆ ಹೋಗಲು ಮುಂದುವರಿದ. ಅಣ್ಣ ಕುಳಿತ ಸ್ಥಳವನ್ನು ದಾಟದ ಮೇಲೆ ಗಮನ ಸೆಳೆದು ಕಾರನ್ನು ಅವಸರ ನಿಲ್ಲಿಸಿದ. ಅವನೊಡನೆ ವಿರಾಮವಾಗಿ ಮಾತನಾಡಬೇಕು—ಎಂಬ ಹಂಬಲ ವಿಟ್ಠಲನಿಗಿದ್ದರೂ, ಮನೆಯಲ್ಲಿ ಅಂಥ ಅವಕಾಶ ದೊರೆಯಲಿಲ್ಲ. ಗೆಳೆ ಯರ ಆತಿಥ್ಯವನ್ನು ಸ್ವೀಕರಿಸುವ ಭರದಲ್ಲಿ ಸಾಕಷ್ಟು ವಿರಾಮವೂ ದೊರೆ ಯಲಿಲ್ಲ. ಈಗ ನೋಡಿ, ಅವಸರದಿಂದ ಬಂದು ಅವನ ಮಗ್ಗುಲಲ್ಲಿಯೇ ಕುಳಿತ.

"ಇದು ನಿನ್ನ ಪ್ರೀತಿಯ ತಾವೋ?" ಎಂದು ಕೇಳಿದ ವಿಟ್ಠಲ.

"ಕಾರಿನಲ್ಲಿ ಇನ್ನಾರೂ ಇಲ್ಲವೇ?"

"ಇದ್ದಾಳೆ, ವನಮಾಲಿ, ಕುಳಿತಿರಲಿ. ಮನೆಯಲ್ಲಿ ನಿನ್ನೊಡನೆ ಮಾತನಾಡಲಿಕ್ಕೆ ಅವಕಾಶವೇ ಸಿಗಲಿಲ್ಲ. ಅನಾವಶ್ಯಕದ ಗದ್ದಲದಲ್ಲೇ ಸಮಯ ಹೋಯಿತು............ತುಂಬ ಬೇಸರವಾದ ಹಾಗಿದೆ ನಿನಗೆ, ಅಲ್ಲವೇ?"

ಶಂಕರ ಮಾತನಾಡಲಿಲ್ಲ. ವಿಟ್ಠಲ ಅಣ್ಣನ ಮುಖವನ್ನು ನೋಡುತ್ತ ನುಡಿದ "ಅಪ್ಪ, ಅಮ್ಮ ನನಗೆ ಎಲ್ಲ ಸಂಗತಿಗಳನ್ನೂ ಹೇಳಿದರು. ಅವರ ಮಾತಿಗಾಗಿ ನೀನು ಬೇಸರಗೊಂಡಿರಬೇಕಲ್ಲವೇ? ಅವರು ಅವರ ದಾರಿ

ಯಲ್ಲೇ ಯೋಚಿಸುವವರು. ನಿನ್ನ ಆಸೆ, ಆಕಾಂಕ್ಷೆಗಳನ್ನು ತಿಳಿಯಲಾರದವರು. ಪ್ರಾಯಶಃ ಎಲ್ಲ ಹಿರಿಯರ ಪಾಡೂ ಹೀಗೆಯೇ ಏನೋ. ನನ್ನನ್ನು ಕಂಡು ಅವರು ಅಷ್ಟು ಹಿಗ್ಗಬೇಕಾಗಿಯೂ ಇಲ್ಲ, ನಿನಗಾಗಿ ಮುನಿಸಿಗೊಳ್ಳಬೇಕಾಗಿಯೂ ಇಲ್ಲ. ಅವರಿಗೆ ಈ ಆಫೀಸರ್ ಪಟ್ಟ, ಈ ನೌಕರಿ ಎಂಬುದೆಲ್ಲಾ ಒಂದು ಸ್ವರ್ಗ ಎಂಬಂತೆ ಕಾಣಿಸುತ್ತಿದೆ. ನನಗೇನೋ ವೈಮಾನಿಕನಾಗುವ ಇಷ್ಟವಾಯಿತು; ಆದೆ. ಆದರೆ ಅದರಲ್ಲೊಂದೇನು ಹೆಚ್ಚು? ಯುದ್ಧದ ಈಗಿನ ವೇಳೆಯಲ್ಲಿ ಈ ಬಾಳ್ವೆಗೆ ಮೂರೇ ಮುಖಗಳು—ಸೋಲು, ಗೆಲವು, ಸಾವು. ಪ್ರತಿ ಗಳಿಗೆಗೂ ಅದು ನಮ್ಮೆದುರು ನಿಲ್ಲುತ್ತದೆ. ಅದೊಂದೂ ಪ್ರಾಯಶಃ ಅವರಿಗೆ ಕಾಣಿಸುವುದಿಲ್ಲ. ಕೀರ್ತಿಯ ಆಚೆಗಿನ ನೋಟ ಸಾವು ಎಂಬುದು ಅವರಿಗೆ ಕಾಣಿಸುವುದೇ ಇಲ್ಲ. ಅಂಥ ಮಿತ ದೃಷ್ಟಿಯ ಅವರಿಗೆ, ಕೃಷಿ ಎಂಬುದು ಹೇಗೆ ಪ್ರಿಯವಾದೀತು?"

"ನಿಜ."

"ನೀನು ತೀರ ನಿರಾಶೆಗೊಂಡ ಹಾಗೆ ಕಾಣುತ್ತದೆ."

"ಅಂಥ ನಿರಾಶೆಯೇನಿಲ್ಲ. ಒಂದಲ್ಲ ಒಂದುದಿನ ಕೆಲಸ ಸಾಧಿಸಿಯೇನು ಅನಿಸುತ್ತದೆ. ಮೊದಲು ಮೊದಲು ಕನಸಿನಂತೆ ಆ ವಿಚಾರ ಅಸ್ಪಷ್ಟವಾಗಿದ್ದರೂ, ನಮ್ಮ ಪೂರ್ವಜರು ಹುಟ್ಟಿ ಬೆಳೆದ ನೆಲವನ್ನು ಕಂಡು ಬಂದ ಮೇಲೆ, ಅದರ ಸ್ಪಷ್ಟ ಚಿತ್ರವೇ ನನಗೆ ಕಾಣುತ್ತದೆ. ಆದರೆ ತುಂಬ ಕಷ್ಟದ ಕೆಲಸ. ಒಮ್ಮೆ ನಾಡಾಗಿದ್ದರೂ ಇಂದು ಆ ಭೂಮಿಯೆಲ್ಲ ಕಾಡು. ತಿರುಗಿ ಅದನ್ನು ನಾಡನ್ನಾಗಿ ಮಾಡಬೇಕಾದರೆ ಸಾಕಷ್ಟು ಹಣ ಬೇಕು. ಅದು ದೊರೆತರೆ ಕೆಲಸ ಸುಲಭವಾಗಬಹುದು. ಈಗ ನಾನು ಹಣಕ್ಕಾಗಿಯೇ ಪೇಚಾಡಬೇಕಾಗುತ್ತದೆ" ಎಂದು ಬಂಗಾಡಿಯ ವಿಚಾರಗಳನ್ನೆಲ್ಲ ತಮ್ಮನ ಮುಂದೆ ಬಣ್ಣಿಸಿದ. ಸೀತಾರಾಮನಿಗೆ ತಾನು ವಹಿಸಿಕೊಟ್ಟು ಬಂದ ಕೆಲಸದ ಹೊರೆಯನ್ನೂ ಹೇಳಿದ. ಮಾತು ಅಲ್ಲಿಗೆ ನಿಂತಿತು. ಮುಂದೇನೆಂದು ಅವನಿಗೆ ಹೊಳೆಯಲಿಲ್ಲ.

ವಿಟ್ಠಲ ಅವನನ್ನೇ ದಿಟ್ಟಿಸುತ್ತ ನಸುನಕ್ಕು ನುಡಿದ. "ನೀನು ಹಣದ ವಿಚಾರ ಯೋಚಿಸುತ್ತೀಯೆಂದು ಕಾಣುತ್ತದೆ. ಏನೂ ಯೋಚಿಸ

ಬೇಡ. ತಿಂಗಳಿಗೆ ಇನ್ನೂರು, ಮುನ್ನೂರು ನಾನು ಕಳುಹಿಸಿಯೇನು. ನೀನೇನೂ ಚಿಂತಿಸಬೇಡ. ಅದಕ್ಕಾಗಿ ಅಪ್ಪನನ್ನು ಕೇಳುವುದೂ ಬೇಡ, ಅದನ್ನೇ ನಿನಗೆ ತಿಳಿಸಬೇಕೆಂದು ಈ ಎರಡು ಮೂರು ದಿನಗಳಿಂದ ಹೊಂಚುಹಾಕಿದರೂ ಬಿಡುವು ಸಿಗಲಿಲ್ಲ ; ಅವಕಾಶವಾಗಲಿಲ್ಲ" ಎಂದು ಅಲ್ಲಿಯೇ ದೀರ್ಘ ಸಂಭಾಷಣೆಗೆ ಕುಳಿತ. ವನಮಾಲಿಯ ನೆನಪಾಯಿತು. ಅಣ್ಣನನ್ನು ಬಲವಂತಮಾಡಿ ಕಾರಿನಲ್ಲಿ ಕುಳ್ಳಿರಿಸಿಕೊಂಡು ಕುತುಬ್ ಮಿನಾರಿಗೆ ಅಲೆದಾಡಲು ಹೊರಟ. ದಾರಿಯುದ್ದಕ್ಕೂ ವಿಟ್ಠಲ, ವನಮಾಲಿಯರು ನಗುತ್ತ ಹರಟೆ ಕೊಚ್ಚುತ್ತಿದ್ದರು. ತಮ್ಮನು ತೋರಿದ ಅಪೂರ್ವ ವಿಶ್ವಾಸದ ಮಾತುಗಳಿಂದ ಶಂಕರನ ಮುಖದ ಮೇಲೆ ಆಸೆ, ನಗುಗಳು ಪ್ರಕಟವಾಗಿದ್ದವು. ಅವನೂ ಆ ಹರಟೆಯಲ್ಲಿ ಭಾಗಿಯಾದ.

ವಿಟ್ಠಲನ ರಜೆ ಕೊನೆಗಾಣುವಲ್ಲಾಯಿತು. ಆತ ಮಡದಿಯನ್ನು ಬಿಟ್ಟು ಕಲ್ಕತ್ತಕ್ಕೆ ಹೋಗುವ ದಿನವೂ ಬಂದಿತು. ವಿಮಾನ ನಿಲ್ದಾಣಕ್ಕೆ ಹೊರಡುವ ಮುನ್ನ ಅಣ್ಣನಿರುವಲ್ಲಿಗೆ ಹೋದ. ಹೋಗಿ " ಶಂಕರ್, ಹೋಗಿಬರುತ್ತೇನೆ, ಕಾಗದ ಬರೆಯಲು ಮರೆಯ ಬೇಡ" ಎಂದು ಏನನ್ನೋ ಅವನ ಕೈಗೆ ತುರುಕಿದ. ಶಂಕರ ಅವನ ಬೆನ್ನು ಚಪ್ಪರಿಸುತ್ತ ಮೋಟಾರಿನ ತನಕ ಬಂದ. ನಂಟರಿಷ್ಟರ ಗದ್ದಲವಿಲ್ಲದಿದ್ದರೆ, ವಿಮಾನ ನಿಲ್ದಾಣದ ತನಕವೂ ಹೋಗುತ್ತಿದ್ದ. ವಿಟ್ಠಲ " ನೀನ್ಯಾಕೆ ಬರುತ್ತೀಯಾ ? ಇಷ್ಟೆಲ್ಲ ಜನ ಇಲ್ಲವೇ ಜತೆಗೆ " ಎಂದುದರಿಂದ, ನಕ್ಕು ಮನೆಗೆ ಮರಳಿದ. ತನ್ನ ಕೊಠಡಿಗೆ ಮರಳಿ, ತಮ್ಮ ಕೊಟ್ಟುದೇನಿರಬಹುದು. ? ವಿಳಾಸ ಕೊಡುತ್ತೇನೆಂದಿದ್ದನಲ್ಲ. ಅದೇ ?–ಎಂದು ಯೋಚಿಸಿ ತೆಗೆದು ನೋಡುತ್ತಲೇ ಆತ ಕೊಟ್ಟ ಲಕೋಟೆಯಲ್ಲಿ ಅವನ ವಿಳಾಸವೂ ಇತ್ತು. ಜತೆಗೆ ಸಾವಿರ ರೂಪಾಯಿಗಳ ಒಂದು ಚೆಕ್ಕೂ ಇತ್ತು. ತಮ್ಮನ ಮುಖದ ಬಿಂಬ ಕಣ್ಣೆದುರಿಗೆ ಚೆನ್ನಾಗಿ ಹಾಯ್ದಿತು. ಎಳೆತನದ ನೋಟಗಳೆಲ್ಲ ಮರುಕಳಿಸಿದವು. ಕಿರಿಯರಾಗಿದ್ದಾಗ ಮಾಡಿದ ಜಗಳಗಳ ನೆನಪೂ ಆಯಿತು. ತನ್ನ ಕಿರಿಯನಲ್ಲಿ ಆ ಬಗೆಯ ಉದಾರತೆ ಇದ್ದೀತೆಂದು ತಿಳಿಯುವುದಕ್ಕೂ ಅವಕಾಶ ದೊರೆತಿರಲಿಲ್ಲ. ಈಗ ಅದನ್ನು ಕಂಡು ತನ್ನ ಕೆಲಸ ಒಳ್ಳೆಯದಾದುದರಿಂದಲೇ ಹೀಗೆ ಅನಿರೀಕ್ಷಿತ ಕಡೆಗಳಿಂದ ತನಗೆ ಸಹಾಯ ಸಿಗುತ್ತಿದೆ ಎಂದೆನಿಸಿತು.

ಬಂದ ತಮ್ಮನು ಹೊರಟುಹೋದಮೇಲೆ ಶಂಕರನ ಪಾಲಿಗೆ ಮನೆ ತಿರುಗಿ ಬರಿದಾಯಿತು. ಸೀತಾರಾಮನಿಂದ ಕಾಗದ ಬರುವ ತನಕ ಆತ ಏನೂ ಮಾಡಲಾರ. ಅವನ ಕಾಗದವು ಬರಲು ಒಂದು ತಿಂಗಳೇ ಹಿಡಿಯಿತು. ಅವನಿಗೊಪ್ಪಿಸಿದ ಕೆಲಸ ಸುಲಭವಾಗಿರಲಿಲ್ಲ. ತಾಲ್ಲೂಕು, ಹುಜೂರು ಕಚೇರಿಗಳಲ್ಲಿ ಸೇರಿಕೊಂಡ ಕಾಗದ ಪತ್ರಗಳು, ಸುಖವಾಗಿ, ಸಲೀಸಾಗಿ ಹೊರಗೆ ಬರುವುದಕ್ಕೆ ಇರುವ ತೊಡಕುಗಳು ಅವನಿಗೂ ತಿಳಿದಿರಲಿಲ್ಲ.

ಶಂಕರನ ಹೆಸರು ಬರೆದು, ಜತೆಗೆ ದಿಲ್ಲಿ ಸೆಕ್ರೆಟೇರಿಯಟ್‌ನ ಅಧಿಕಾರಿಗಳ ಮಗ ಎಂಬ ಸೂಚನೆ ಮಾಡಿ, ಅರ್ಜಿಯನ್ನು ಹಿಡಿದುಕೊಂಡು, ಸ್ವತಃ ಅವನೇ ಓಡಾಡಿದುದರಿಂದ ಕೆಲಸ ಸಾಧ್ಯವಾಯಿತು. "ಶಂಕರ, ನಿನ್ನ ಕೆಲಸ ಮಾಡಿದ್ದೇನೆ, ಎಲ್ಲವೂ ನಿರ್ವಿಘ್ನವಾಗಿ ಕೈಗೂಡಿತು. ಇದು ನನ್ನ ಶ್ರಮದ ಫಲ ಅನ್ನುವುದಕ್ಕಿಂತ ನಿನ್ನ ತಂದೆಯ ಹೆಸರಿನ ಹಿಂದಿರುವ ಬಿರುದಿನ ಕೆಲಸ ಅನ್ನಬಹುದು. ಹಣವನ್ನು ಕಟ್ಟಿದ್ದೇನೆ. ವಿವರಗಳನ್ನು ಕೊಟ್ಟಿದ್ದೇನೆ. ಹುಕುಮಿಗೆ ಸಹಿ ಬಿದ್ದುದನ್ನೂ ನೋಡಿಬಂದಿದ್ದೇನೆ. ನಿನಗೇನೆ ನೇರಾಗಿ ಉತ್ತರ ಬರುತ್ತದೆ.

"ನೀನು ಬರುವ ತನಕ ಪ್ರಾಯಶಃ ನಾನು ಊರಲ್ಲಿಯೇ ಇರುತ್ತೇನೆ. ನನಗೆ ಇನ್ನೂ ಎಲ್ಲಿಂದಲೂ ಕರೆ ಬಂದಿಲ್ಲ. ನೀನು ಬರುವ ಮುಂಚೆ ದಿನ, ವೇಳೆ ತಿಳಿಸು. ಸೋಮೇಶ್ವರದಲ್ಲೇ ಭೇಟಿಯಾಗುತ್ತೇನೆ"–ಎಂದು ದೀರ್ಘ ಪತ್ರ ಬರೆದಿದ್ದ.

ಮಬ್ಬು ಚದುರಿದಂತೆ ಕಂಡಿತು. ಶೀತಳತೆ ಮಾಯವಾಗಿ, ಮಂಜು ಕರಗಿ, ಎಳೆಯ ಹಸುರಿನ ಚೆಲುವು ಕಣ್ಣುಮುಂದೆ ಕಾಣಿಸತೊಡಗಿತು. ತಮ್ಮ, ಗೆಳೆಯರಿಂದಾಗಿ ಶಂಕರನ ಭಾವಿ ಜೀವನದ ಕನಸು ಸಾಧ್ಯವಾಗುವ ಶುಭ ಚಿಹ್ನೆ ಅಲ್ಲಿಂದಲೇ ಕಾಣಿಸತೊಡಗಿತು. ದಿಲ್ಲಿಯನ್ನು ಬಿಟ್ಟೇಳುವುದಕ್ಕೆ ಶಂಕರ ಎಂದು ಹೊರಡುವುದಕ್ಕೂ ಸಿದ್ಧನೇ.

## ಅಧ್ಯಾಯ ೭

ಶ್ಯಾನುಭಾಗ ರಂಗರಾಯರ ಸಂಸಾರವು ಮನೆ ತುಂಬಿ ತುಳುಕುವ ಸಂಸಾರ. ಎಂಟು ಮಕ್ಕಳು ಅವರಿಗೆ. ಅವರಲ್ಲಿ ಹಿರಿಯ ಹುಡುಗನೇ ಮಂಜುನಾಥ. ಊರ ಸಮೀಪದಲ್ಲಿಯೇ, ಪ್ರಾಥಮಿಕ ಶಾಲೆಯ ವಿದ್ಯಾಭ್ಯಾಸ ಮುಗಿಸಿ, ಮುಂದೆ ಅದನ್ನು ಮುಂದುವರಿಸಲು ಬೆಳ್ತಂಗಡಿಗೆ ಹೋದ. ಆಗಲೇ ಮನೆಯ ಅಂಕೆ ತಪ್ಪಿತು. ಓದಿಗಿಂತ ತುಂಟತನ, ತಿರುಗಾಟಗಳಲ್ಲಿ ಮನಸ್ಸು ಹೆಚ್ಚು ಹೆಚ್ಚು ಹರಿಯತೊಡಗಿತು. ಓದನ್ನು ಮುಂದುವರಿಸುವ ನೆಪದಿಂದ ಬೆಳ್ತಂಗಡಿಯಿಂದ ಹೈಸ್ಕೂಲ್ ವಿದ್ಯಾಭ್ಯಾಸಕ್ಕೆಂದು ಮಂಗಳೂರಿಗೆ ಹೋದ. ಆಗ ವಾರಕ್ಕೊಮ್ಮೆಯಾದರೂ ಕೇಳಸಿಗುತ್ತಿದ್ದ ತಂದೆಯ ಮಾತು, ಹತೋಟಿ ಸಂಪೂರ್ಣ ತಪ್ಪಿತು. ಶಾಲೆಗಿಂತ ಅಲೆದಾಟವೇ ಹೆಚ್ಚಾಯಿತು. ತಂದೆ ಹಣ ಕೊಡುವುದನ್ನು ನಿಲ್ಲಿಸಿದರು. ಹುಡುಗ ಉಂಡಾಡಿಯಾಗಿ ಮನೆಯ ಹಂಗನ್ನೇ ಕಳೆದುಬಿಟ್ಟು ಮಂಗಳೂರಿನಲ್ಲಿಯೆ ಕುಳಿತ. ಕೊನೆಗೆ ಅವನಿಗೇನು ಕಂಡಿತೋ ಏನೋ, ಆ ಊರನ್ನೂ ತ್ಯಜಿಸಿ ಓಡಿಹೋದ, ತಂದೆಗೆ ಅವನಿಂದ ಪತ್ರ ಬಂದುದು, ಅವನ ಸುದ್ದಿ ತಿಳಿದುದು, ಮೊನ್ನೆ ಮೊನ್ನೆ–ಮೂರು ವರ್ಷಗಳ ದೀರ್ಘ ಅವಧಿಯ ಬಳಿಕ,

ಮಂಜುನಾಥನ ಒತ್ತಿನ ಹುಡುಗಿ ಶ್ರೀಮತಿ. ಅವಳಿಗೀಗ ಹದಿನೆಂಟು ವಯಸ್ಸು ತುಂಬಿರಬೇಕು. ಊರಿನ ಶಾಲೆಯಲ್ಲಿ ಹರಕು ಮುರುಕು ಕನ್ನಡವನ್ನಿಟ್ಟು ಓದಿಕೊಂಡಿದ್ದಾಳೆ. ಆಕೆಯ ವಿದ್ಯಾಭ್ಯಾಸಕ್ಕಾಗಿ ಬೆಳ್ತಂಗಡಿಯಲ್ಲಿ ಇನ್ನೊಂದು ಬಿಡಾರ ಹೂಡುವುದು ಸಾಧ್ಯವಲ್ಲವೆಂದು ರಂಗರಾಯರಿಗೆ ಕಾಣಿಸಿತು. ಹಾಗಾಗಿ ಅವಳು ಕೆಲಸಮಾಡುತ್ತ ಮನೆಯಲ್ಲೇ ದಿನ ಕಳೆಯಲು ತೊಡಗಿದಳು. ಇನ್ನುಳಿದ ಮಕ್ಕಳೆಲ್ಲ ಕಿರಿಯರು.

ಶ್ರೀಮತಿಗಾಗಿ ಗಂಡನನ್ನು ಹುಡುಕುವ ಕೆಲಸವು ರಂಗರಾಯರಿಗೆ ಸುಲಭಸಾಧ್ಯವಾಗಲಿಲ್ಲ. ಅಳಿಯನ ಬೇಟೆ ಏನೇನೂ ಸುಲಭವಾಗಲಿಲ್ಲ. ಇದು ಅವರ ದುರ್ದೈವ! ಹುಡುಗಿ ನೋಟಕ್ಕೆ ಚೆನ್ನಾಗಿದ್ದಳು. ಮನೆಗೆಲಸದಲ್ಲಿ ನುರಿತಿದ್ದಳು. ಇಂದು ಮನೆಗೆಲಸಗಳ ಬಹುಮಟ್ಟಿನ ಹೊರೆ ಅವಳ

ತಲೆಯ ಮೇಲೆಯೇ. ತಾಯಿ ಶಾಂತು, ದೃಢಕಾಯಳಲ್ಲ. ಆಗಾಗ ಬೇನೆ ಬೀಳುತ್ತಿರುವವಳು. ಹೀಗಾಗಿ ಶ್ರೀಮತಿಗೆ ತಾಯ ಸೇವೆಯ ಜತೆಗೆ, ತನ್ನ ಬಳಿಕ ನಾಲ್ಕು ವರ್ಷಗಳ ಅನಂತರ, ಹುಟ್ಟಿದ ಆರು ಮಂದಿ ತಮ್ಮಂದಿರ ಸೇವೆಯ ಭಾಗ್ಯವೂ ದೊರಕಿದೆ. ತೀರ ಹಿರಿಯ ಮಗುವಿಗೆ ಹದಿನೆರಡು ವರ್ಷ ಪ್ರಾಯ ; ತೀರ ಕಿರಿಯದೆಂದರೆ ಮೂರು ವರ್ಷದ್ದು. ಒಂದೊಂದರ ಸ್ವಭಾವ ಒಂದೊಂದು ತರ, ಅವುಗಳನ್ನೆಲ್ಲ ನೋಡಿಕೊಳ್ಳುವುದೆಂದರೆ ಆಕೆಗೆ ಸಾಕುಬೇಕಾಗುತ್ತಿತ್ತು. ಮುತ್ತಜ್ಜಿಯ ನೆರವೊಂದಿಲ್ಲದಿದ್ದರೆ ಆಕೆ ಇನ್ನಷ್ಟು ಕಂಗಾಲಾಗಬೇಕಿತ್ತು. ಸಂಸಾರದ ಈ ಕಂಗಾಲು ಸ್ಥಿತಿಯಲ್ಲಿ, ರಂಗರಾಯರು, ಆರಂಭದಲ್ಲಿ ಮಗಳ ಮದುವೆಯ ವಿಚಾರವನ್ನು ತಾವಾಗಿ ಮುಂದೆ ದೂಡಿದರು. ಎರಡು ಮೂರು ವರ್ಷಗಳ ಹಿಂದೆ, ಬೇಡಿ ಬಂದ ಒಂದು ನೆಂಟುತನವನ್ನು ಉದಾಸೀನತೆಯಿಂದ ತಳ್ಳಿದರು. ಆ ಕಾಲ ಕಳೆದ ಮೇಲೆ ಅವರು ಮಾಡಿದ ಪ್ರಯತ್ನ ವಿಫಲವಾಯಿತು. ಅದಕ್ಕೊಂದು ಕಾರಣವೂ ಉಂಟು.ಶ್ರೀಮತಿಗೆ ಹನ್ನೆರಡು ವಯಸ್ಸಾದಾಗ ಸನ್ನಿಪಾತ ಬೇನೆಯುಂಟಾಯಿತು. ಅದರಿಂದ ಅವಳು ಚೇತರಿಸಿದರೂ, ಶ್ರವಣ ಶಕ್ತಿಯೇ ಕಳೆದು ಹೋಯಿತು. ಈಗ ಗಟ್ಟಿಯಾಗಿ ಕೂಗಿದರೆ ಮಾತ್ರ, ತುಟಿಯ ಚಲನೆ ಸ್ಪಷ್ಟವಾಗಿ ಕಂಡರೆ ಮಾತ್ರ, ಹೇಳಿದ್ದು ತಿಳಿಯುತ್ತದೆ. ಇದು ಅವಳ ಭವಿಷ್ಯಕ್ಕೆ ಒಂದು ತೊಡಕಾಗಿ ನಿಂತಿತು. 'ಶುದ್ಧ ಕಿವುಡಿ' ಎಂಬ ಪ್ರತೀತಿ ಸುತ್ತಮುತ್ತ ಹಬ್ಬಿತು. ಮೊದಲೇನೇ ವಿಶಾಲವಾದ ಕುಲ ರಂಗರಾಯರದ್ದಲ್ಲ. ಅಲ್ಲೊಂದು ಇಲ್ಲೊಂದು ಊರಿನಲ್ಲಿ ಅವರ ಜಾತಿಯ ಜನ ವಾಸವಾಗಿದ್ದರು. ಹೀಗಾಗಿ ನೆಂಟುತನ ಹುಡುಕುವ ಕೆಲಸ ಇನ್ನಷ್ಟು ಕಷ್ಟವಾಯಿತು. ಆಕೆಯ ನಡತೆ, ಕಾರ್ಯಪಟುತ್ವ, ತಾಳ್ಮೆ, ರೂಪ–ಎಲ್ಲವೂ ಅನುಕೂಲವಾಗಿದ್ದರೂ ರೂಪವೊಂದನ್ನು ಬಿಟ್ಟರೆ, ಉಳಿದ ಗುಣಗಳ ಪರಿಚಯವಾಗಬೇಕು ಎಂದು?–ಮದುವೆಯಾದ ಬಳಿಕ, ಅದಕ್ಕೆ ಮೊದಲೇ ಆಕೆ ಕಿವುಡಿ ಎಂದು ಕನ್ಯಾನ್ವೇಷಿಗಳಿಗೆ ತಿಳಿದುದು ಅವಳ ದುರ್ದೈವ. ಇದರಿಂದ ಶ್ರೀಮತಿಗೂ ತನ್ನ ಭವಿಷ್ಯದಲ್ಲಿ ನಿರಾಶೆಯುಂಟಾಗಿತ್ತು. ತನ್ನ ಬಾಳು ಮಂಗಳ ಹೀನವಾದ ಬಾಳು–ಎಂಬ ಭೀತಿ ಬಂದಿತ್ತು.

ಇಂಥ ವೇಳೆಯಲ್ಲಿಯೇ ಶಂಕರ ಬಂಗಾಡಿಗೆ ಬಂದುದೂ, ತಮಗೂ,

ಅವರಿಗೂ ಪೂರ್ವಬಾಂಧವ್ಯವಿತ್ತೆಂದು ತಿಳಿದುದೂ. ಮನೆಯ ಮುದುಕಿ ಶಂಕರನನ್ನು ಬಿಗಿದಪ್ಪಿದುದೂ-ರಂಗರಾಯರಲ್ಲಿ ವಿಶೇಷವಾದ ಒಂದು ಆಸೆಯನ್ನು ಹುಟ್ಟಿಸುವುದಕ್ಕೆ ಕಾರಣವಾಯಿತು. ಶಂಕರನ ತಂದೆ ತುಂಬ ದೊಡ್ಡ ನೌಕರಿಯಲ್ಲಿದ್ದಾರೆಂದು ಕೇಳಿದ ಮೇಲೆ, ಈ ಆಸೆ ತನ್ನಂತೆ ಚಿಗುರಿತು. ಅಜ್ಜಿಯ ವರ್ಚಸ್ಸನ್ನು ಉಪಯೋಗಿಸಿಕೊಂಡಲ್ಲಿ, ಶಂಕರನನ್ನು ಅಳಿಯನನ್ನಾಗಿ ಮಾಡಿಕೊಳ್ಳಬಹುದೆಂಬ ಆಸೆ ಮನದಲ್ಲಿ ನಟ್ಟಿತು. ಆತ ತಮ್ಮ ಮನೆಗೆ ಬಂದುಹೋದ ಮರುದಿನವೇ, ಈ ಬಯಕೆಯನ್ನು ಅಜ್ಜಿಯ ಮುಂದೆ ಊದಿ ಹೇಳಿದರು : "ಅಜ್ಜಿ, ದೇವರೇ ಅವನನ್ನು ನಮ್ಮಲ್ಲಿಗೆ ಕಳುಹಿಸಿದ ಹಾಗೆ ಕಾಣುತ್ತದೆ. ನೀನೆನ್ನುವ ಹಾಗೆ ಹತ್ತಿರದ ಬಾಂಧವ್ಯ. ಅವನಿಗೂ ಹಿರಿಯರ ಮೇಲೆ ಅಷ್ಟು ಅಭಿಮಾನ. ನಿನ್ನ ಮಾತನ್ನೆಂದೂ ತೆಗೆದು ಹಾಕಲಾರ. ಶ್ರೀಮತಿಯನ್ನು ನೋಡಿದ್ದಾನೆ; ನೋಡಿದರೆ 'ಬೇಡ ಅನಿಸುವ ಹುಡಿಗಿಯಲ್ಲ. ಅವಳ ಕಿವಿ ದೂರ ನಿಜ. ಆದರೆ ಆ ಸುದ್ದಿಯನ್ನು ಅವನ ಮುಂದೆ ಡಂಗುರ ಸಾರುವವರಿಲ್ಲ. ಮದುವೆಯಾಗಿ ಒಲಿದ ಮೇಲೆ ಅವಳ ಯೋಗ್ಯತೆ ಕಂಡು, ಈ ಕೊರತೆಯನ್ನು ಮರೆತಾನು" ಎಂದು ಬಹುವಾಗಿ ಹೇಳಿದರು. ಆ ಮುದುಕಿಗೆ ತನ್ನ ಮರಿ ಮಗಳ ಸುಖ, ಹಿತ ಬೇಡವಾದಗಳಿಗೆಯುಂಟೇ? ಆದರೆ ಎಲ್ಲಿಂದಲೋ ಗಾಳಿಗೆ ಬಂದಂತೆ ಬೀಸಿ ಬಂದ ಹುಡುಗ ತನ್ನ ವಿಷಯದಲ್ಲಿ ಅಷ್ಟೆಲ್ಲ ಭಕ್ತಿ, ಗೌರವ ತೋರಿದ್ದಾನೆ-ಎಂದ ಮಾತ್ರಕ್ಕೆ, ಮದುವೆಯ ಸುದ್ದಿಯನ್ನು ಒಮ್ಮಿಂದೊಮ್ಮೆ ಸೂಚಿಸುವ ಧೈರ್ಯ ಅವಳಿಗಾಗಲಿಲ್ಲ. ತಾಳುವುದು ಒಳ್ಳೆಯದು—ಎಂದು ಕಂಡಿತು.

ಅದನ್ನೇ ಇನ್ನೂ, ಯೋಚಿಸಿದಾಗ ಬೇರೊಂದು ಭೀತಿಯೂ ತಲೆದೋರಿತು. ಈಗ ಆ ವಿಚಾರವನ್ನು ಎತ್ತುವುದೇ ಮೂರ್ಖತನವಾದೀತು—ಎಂದೂ ತೋರಿತು. ಹಳೆಯ ನೆನಪೇ ಅದಕ್ಕೆ ಕಾರಣ. ತನ್ನ ಅಣ್ಣನಿಗೆ ಬಲವಂತದಿಂದ ಸೋದರಿಕೆ ಸಂಬಂಧವನ್ನು ಮಾಡಬೇಕೆಂದು ಪ್ರಯತ್ನಿಸಿದುದರ ಪರಿಣಾಮ ಕಣ್ಣೆದುರಿಗೆ ಕಟ್ಟಿತು. ಅದರಿಂದ ಒಡಹುಟ್ಟಿದ ಅವನು ದೇಶಭ್ರಷ್ಟನಾದ. ಈ ಹೆದರಿಕೆ ಉಂಟಾಗುತ್ತಲೇ ಆಕೆ "ಈಗ ಬೇಡ, ಮುಂದೆ ನೋಡುವ. ಮದುವೆ ನಾವೆಣಿಸಿದ ಹಾಗೆ ಆಗುವುದಿಲ್ಲ.

ಹುಡುಗಿಯ ಅದೃಷ್ಟದಲ್ಲಿ ಏನು ಬರೆದಿದೆಯೋ ಅದರಂತೆ ಆದೀತು" ಎಂದಂದಳು. ರಂಗರಾಯರಿಗೆ ಅಜ್ಜಿಯ ಮಾತು ಕೇಳಿ ಬೇಸರವಾಯಿತು. ಕೈಗೆ ಸಿಕ್ಕಿದ ಬೇಟೆಯನ್ನು ಬಿಟ್ಟು ಕೊಡುವುದು ಮೂರ್ಖತನವೆಂದು ಕಂಡಿತು. ಏನೇ ಆಗಲಿ, ತಾವು ಮಾಡುವ ಪ್ರಯತ್ನ ಮಾಡಬೇಕು ಎಂದೆನಿಸಿತು. ಉಪಾಯವಾಗಿ ಶಂಕರನನ್ನು ಮಾತನಾಡಿಸಿ ಅವನಿಂದ ಮನೆಯ ವಿಳಾಸವನ್ನು ಪಡೆದರು. ಶಂಕರ ಬಂಗಾಡಿಯಿಂದ ಹೊರಟು ಹೋದ ಮೇಲೆ ಒಳ್ಳೆಯ ಮುಹೂರ್ತ ನೋಡಿ, ಅವನ ತಂದೆಗೆ ಒಂದು ಕಾಗದ ಬರೆದರು.

ಶಂಕರ ಮಂಗಳೂರಿನಿಂದ ಗೆಳೆಯ ಸೀತಾರಾಮನ ಕಾಗದವನ್ನು ನಿರೀಕ್ಷೆಮಾಡುತ್ತ ವೇಳೆ ಕಳೆಯುತ್ತಿದ್ದಾಗಲೇ ಶ್ಯಾನುಭಾಗ ರಂಗರಾಯರು ಬರೆದ ಪತ್ರ, ನೇರಾಗಿ ಸುಂದರರಾಯರಿಗೆ ಬಂದಿತು. ದೀರ್ಘವಾದ, ಅಭಿಮಾನಪೂರ್ವಕವಾದ ಕಾಗದ ಅದು. ಶಂಕರನ ಆಗಮನದಿಂದ ತಮ್ಮ ಅವರೊಳಗಣ ಪ್ರಾಚೀನ ಸಂಬಂಧದ ನೆನಪು ಹುಟ್ಟಿ, ಬರೆದ ಆ ಕಾಗದದಲ್ಲಿ, ಅಜ್ಜಿಯಿಂದ ತಿಳಿದುಕೊಂಡ ಗತವೈಭವದ ಸುದ್ದಿಗಳನ್ನು ತುಂಬಿದ್ದರು. ಅನಂತರ ಬಿನ್ನಹ ಹೀಗಿತ್ತು : "ನಾವು ದೂರದಲ್ಲಿರುವ ಬಡ ಬಂಧುಗಳೆಂದು ಅನಾದರಿಸಬಾರದು. ಈ ತನಕ ನಿಮ್ಮ ಠಾವು ಠಿಕಾಣೆಗಳನ್ನು ತಿಳಿಯದೆ ಈ ಹತ್ತಿರದ ಸಂಬಂಧವನ್ನು ಮರೆತುದಕ್ಕೆ ವ್ಯಸನವಾಗುತ್ತದೆ. ನೀವೆಲ್ಲರೂ ಒಮ್ಮೆ ನಿಮ್ಮ ಹಿರಿಯರ ಊರಾದ ಬಂಗಾಡಿಗೂ, ನಮ್ಮ ಮನೆಗೂ ಬರಬೇಕು. ನಿಮ್ಮ ಅತ್ತೆಯ ದರ್ಶನ ಮಾಡಿಕೊಂಡು ಹೋಗಬೇಕು" ಎಂದು ಕೇಳಿ, ಅದರ ಜತೆಗೆ "ನಿಮ್ಮ ಹುಡುಗ ಶಂಕರನ ಜಾತಕದ ನಕಲನ್ನು ಕಳುಹಿಸಬೇಕಾಗಿ ಅಪೇಕ್ಷಿಸುತ್ತೇನೆ" ಎಂದು ಒಂದು ಕುಂಟು ಪಂಕ್ತಿಯನ್ನು ಸೇರಿಸಿದ್ದರು, ಮಗನ ವಿಚಾರ ಸರಣಿಗಾಗಿ ಮೊದಲೇ ನೊಂದಿದ್ದ ರಾಯರು ಈ ಪತ್ರಕ್ಕೆ ಉತ್ತರ ಬರೆಯಲು ಹೋಗಲಿಲ್ಲ. ಬರೆಯಬೇಕಾದುದು ಕರ್ತವ್ಯವೆಂದು ಅವರಿಗೆ ಅನಿಸಲಿಲ್ಲ. ಕಾಣದ ಬಂಧುಗಳು; ಯಾವುದೋ ಹಳ್ಳಿಯಲ್ಲಿ ನೆಲೆಸಿದವರು, ನಂಟುತನದ ಸೆರಗನ್ನು ಕಟ್ಟಿ ಉಳಿಸುವುದಕ್ಕೆ ಒಬ್ಬಳು ಮುದುಕಿಯಷ್ಟೇ ಉಳಿದಿದ್ದಾಳೆ, ಸ್ಥಾನಮಾನಗಳಿಲ್ಲದ ಜನಗಳನ್ನು ಆದರಿಸಿ ತಮ್ಮವರೆಂದು ತಿಳಿವ ನೋಟ ಅವರ

ಕಣ್ಣಿಗೆ ಈ ತನಕ ಬಂದುದಲ್ಲ. ಕೊನೆಗೆ ಏನು ಅನಿಸಿತ್ತೋ—ಎರಡು ದಿನ ಕಳೆದ ಮೇಲೆ ಆ ಕಾಗದವನ್ನು ತೆಗೆದು ಶಂಕರನಿಗೆ ಕೊಟ್ಟರು. "ಏನಾದ ರೊಂದು ಉತ್ತರ ಬರೆದು ಹಾಕು" ಎಂದು ತಮ್ಮ ಕರ್ತವ್ಯದ ಹೊರೆ ಯನ್ನು ಅವನ ತಲೆಯ ಮೇಲೆ ತುರುಕಿದರು.

ಶಂಕರ ಕಾಗದವನ್ನು ನೋಡಿದ ; ಓದಿದ. ತಂದೆ ತಮ್ಮ ಪೂರ್ವದ ಬಂಧುಗಳಿಗೆ ಇಂಥ ಸಂದರ್ಭದಲ್ಲಿ ಒಂದೆರಡು ಪಂಕ್ತಿಗಳನ್ನು ಬರೆ ದಿದ್ದರೆ ಚೆನ್ನ—ಎಂದು ಅವನಿಗನಿಸಿತು. ಆದರೆ ತನ್ನ ತಂದೆಯ ಒಡ ನಾಡಿಗಳಾರು, ಸ್ನೇಹಿತರಾರು ಎಂಥ ಜನಗಳಲ್ಲಿ ಅವರ ಮಾತುಕತೆ— ಎಂಬುದನ್ನೆಣಿಸಿದ. ಆದರೂ ಅನಿಸಿತು–'ಏನಿಲ್ಲವಾದರೂ ತಮ್ಮ ತಂದೆಯ ತಂಗಿ ಬದುಕಿದ್ದಾರೆಂದ ಮೇಲೆ ಅವಳ ಸಲುವಾಗಿಯಾದರೂ ಪತ್ರ ಬರೆಯ ಯಬೇಕಿತ್ತು' ಎಂದು ತೋರಿತು. ಪತ್ರವನ್ನು ಎಷ್ಟು ಬಾರಿ ತಿರುವಿ ದರೂ, ಶ್ಯಾನುಭಾಗರು ತಮ್ಮ ಅರ್ಧಮರ್ಧ ಇಂಗ್ಲಿಷಿನಲ್ಲಿ ಬರೆದ ಆ ಕಾಗದದಲ್ಲಿ ಬೇಸರಗೊಳ್ಳಬೇಕಾದುದೇನೂ ಅವನಿಗೆ ಕಾಣಿಸಲಿಲ್ಲ. ಕೊನೆಗೆ ಜಾತಕದ ಸಲುವಾಗಿ ಬೆಳೆದ ಕುಂಟು ಪಂಕ್ತಿಯನ್ನು ಕಂಡು 'ಓ ಇದ ಕ್ಕಾಗಿ ನೊಂದಿರಬೇಕು. ಅಥವಾ ಕಾಗದ ನನ್ನ ಕೈಗೆ ಕೊಟ್ಟಿರಬೇಕು. ಅವರು ಬರಿಯ ನಾಲ್ಕು ದಿನಗಳ ಗುರುತಿನಿಂದ ಇಂಥ ಆಸೆ ಮಾಡಬಾರ ದಿತ್ತು' ಎಂದು ಉದ್ಗರಿಸಿದ.

ಆತ ಮೂರು ನಾಲ್ಕಾವರ್ತಿ ಅವರ ಮನೆಗೆ ಹೋಗಿದ್ದ. ಅವರ ಮನೆಯ ಮಕ್ಕಳ ಸಮುದಾಯವನ್ನೆಲ್ಲ ಕಂಡಿದ್ದ. ಆ ಎಲ್ಲರೂ ಚಿಕ್ಕವ ರಾಗಿ ಕಾಣಿಸಿದ್ದರು. ಯಾರ ಸಲುವಾಗಿ ಈ ಜಾತಕ ಕೇಳಿದರು-ಎಂಬ ಊಹೆಯೇ ಅವನಿಗಾಗಲಿಲ್ಲ. ಅದಕ್ಕೆ ಕಾರಣವೂ ಇತ್ತು. ಶಂಕರ ಅವರ ಮನೆಗೆ ಮೊದಲು ಹೋದಾಗ, ಚಾವಡಿಯಲ್ಲಿ ಕಾದು ನಿಂತವರಲ್ಲಿ ಶ್ರೀಮ ತಿಯೂ ಒಬ್ಬಳು. ಆಕೆ ಅವನನ್ನು ಕಂಡು ಒಳಕ್ಕೆ ಹೋದವಳು ತಿರುಗಿ ಹೊರಕ್ಕೆ ಬರಲಿಲ್ಲ. ಅನಂತರ ಒಳಗಿನಿಂದ ಅವನನ್ನಿಣಿಕಿ ನೋಡಿದ್ದು. ಅವನ ಕಣ್ಣಿಗೆ ಗೋಚರಿಸುವಂತೆ ಎಲ್ಲೂ ನಿಂತಿರಲಿಲ್ಲ. ಶಂಕರ ಹೆಚ್ಚಾಗಿ ಹೊತ್ತನ್ನು ಕಳೆದದ್ದು ಅಜ್ಜಿಯೊಡನೆ. ಅವಳೊಡನೆ ಮಾತನಾಡುವಾ ಗಲೂ ಅವರಿಬ್ಬರೇ ಇರುತ್ತಿದ್ದರು. ಆಕೆ ಗುಟ್ಟು ಮಾತನಾಡುವಂತೆ

ಮೆಲ್ಲಗೆ ಮಾತನಾಡುತ್ತಿದ್ದಳು. ಆ ಮನೆಯಲ್ಲಿ ಊಟಮಾಡಿದ್ದ ; ಉಪಹಾರಕೊಂಡಿದ್ದ. ಬಡಿಸುವುದಕ್ಕೆ ಶಾಂತು ಮುಂದಾಗುತ್ತಿದ್ದಳೇ ಹೊರತು, ಶ್ರೀಮತಿ ಹೊರಗೆ ಬರುತ್ತಿರಲಿಲ್ಲ. ಅವಳ ಹೃದಯದಲ್ಲಿ ಅಂಥ ಆಕಾಂಕ್ಷೆಯೂ ಹುಟ್ಟಿರಲಿಲ್ಲ.

ಶಂಕರ ಹೊರಟು ಹೋದಮೇಲೆ, ರಂಗರಾಯರಿಗೆ ದಿಲ್ಲಿಗೆ ಪತ್ರ ಹಾಕಿದರು. ವಾರ ಸರಿಯಿತು, ಪಕ್ಷ ಸರಿಯಿತು. ಪ್ರತ್ಯುತ್ತರದ ನಿರೀಕ್ಷೆ ವ್ಯರ್ಥವಾಯಿತು. ಮನಸ್ಸು ತಡೆಯಲಾರದ್ದಕ್ಕೆ, ಮೊದಲ ಕಾಗದದ ನೆನಪು ಹುಟ್ಟಿಸಿ, ಇನ್ನೊಮ್ಮೆ ಪತ್ರ ಬರೆದರು. ಆ ಬಾಣವೂ ಹುಸಿಯಾಯಿತು. ಅವರು ನಿರಾಶೆ ತಾಳಬೇಕಾಯಿತು. ಶಂಕರ ಹೊರಡುವಾಗ ಅಜ್ಜಿಯ ಬಳಿಗೆ ಹೋಗಿ " ಇನ್ನೊಮ್ಮೆ ಬರುತ್ತೇನೆ " ಅಂದಿದ್ದ. ಅದು ಉಪಚಾರಕ್ಕೆ ಆಡಿದ ಮಾತು—ಎಂದು ಅನಿಸಿತು.

ಇದು ಒಂದನ್ನೇ ತಲೆಗೆ ಹಚ್ಚಿಕೊಳ್ಳಲು ಬರುತ್ತದೆಯೇ ? ಶ್ಯಾನುಭಾಗರು ಆ ಸಂಗತಿಯನ್ನೇ ಮರೆತರು. ನಿತ್ಯಕರ್ತವ್ಯದಲ್ಲಿ ನಿರತರಾದರು. ಊರಲ್ಲಿ ಸುತ್ತಾಡುತ್ತಾರೆ, ಆಗಾಗ ಬೆಳ್ತಂಗಡಿಗೆ ಹೋಗಿಬರುತ್ತಾರೆ. ಅವರಿಗೆ ಸ್ವಂತ ಮನೆಗೆಲಸಗಳ ಆಸಕ್ತಿಗಿಂತ, ಊರಿನ ಕೆಲಸ ಅಂದರೆ, ಕಿರುಕುಳ ಅವಾಂತರಗಳಲ್ಲೇ ಆಸಕ್ತಿ ಹೆಚ್ಚು. ಶ್ಯಾನುಭೋಗಿಕೆಯ ಜತೆಗೆ ಹಿರಿಯರಿಂದ ಉಳಿದುಬಂದ ವರಮಾನ ೪೦ ಮುಡಿ ಹುಟ್ಟುವಳಿ ತರುತ್ತಿತ್ತು. ಸರಕಾರ ಕೊಡುವ ವೇತನ ಅವರ ವೀಳೆಯದ ಖರ್ಚಿಗೆ ಸಾಲದು. ಹೀಗಾಗಿ ತಮ್ಮ ನೌಕರಿಗಿರುವ ದರ್ಪ, ಉಪದ್ರಕಾರಕ ಶಕ್ತಿಗಳಿಂದ ವರ್ಚಸ್ಸುಗಳಿಸಿದ್ದಾರೆ. ಬಂಗಾಡಿಯ ಜನಗಳಲ್ಲಿ–ಶ್ಯಾನುಭಾಗರು ಒಲಿಯದಿದ್ದರೂ ಚಿಂತೆಯಿಲ್ಲ, ಮುನಿಯಬಾರದಲ್ಲ–ಎಂಬ ಅಭಿಪ್ರಾಯ ಮೂಡಿಸಿದ್ದಾರೆ. ಹೀಗಾಗಿ ಊರಜನ–ತಾವು ಏನು ಕೆಲಸ ಮಾಡುವುದೇ ಇರಲಿ ಶ್ಯಾನುಭಾಗ ದೈವಕ್ಕೆ ಹರಕೆ ಹೊತ್ತೇ ಮುಂದುವರಿಸುತ್ತಾರೆ. ಅವರ ಇಂಥ ಭಕ್ತರಲ್ಲಿ ನಮ್ಮ ಶಾಂತಿರಾಜ ಅರಿಗರೂ ಒಬ್ಬರು. ಶಾಂತಿರಾಜ ಅರಿಗರೆಂದರೆ ಆ ದಿನ ಸೀತಾರಾಮ, ಶಂಕರರಿಗೆ ಭೇಟಿಯಾಗಿ ಮಾರ್ಗದರ್ಶಿಗಳಾದವರು. ಅಲ್ಲದೆ ಹೋದರೂ-ಶಾಂತಿರಾಜರಿಗೆ ಶ್ಯಾನುಭಾಗರು ತುಂಬ ಬೇಕಾದ ಜನ. ಸ್ವಲ್ಪ ಆಸ್ತಿವಂದಿಗರು, ನೂರೈವತ್ತು ರೂಪಾಯಿಗಳ ತನಕ ಕಂದಾಯ

ಕೊಡುವ ಭೂಮಿಯಿದೆ ಎಂದಮೇಲೆ, ಬೆಂಗಾಡಾದರೂ ಭೂಮಿಗೆ ಅಂಟಿಕೊಂಡ ಭವಣೆ ಇರಲೇಬೇಕಲ್ಲ. ಒಂದು ಕುಮುಕಿ ಹಕ್ಕು, ಒಂದು ನೀರಿನ ಹಕ್ಕು ಒಂದು ಗೋಚರಾವಿನ ಹಕ್ಕು, ಏನಾದರೂ ಒಂದು ಹಕ್ಕಿಗಾಗಿ ಹೊಡೆದಾಡಬೇಕಾಗುತ್ತದೆ. ಶ್ಯಾನುಭಾಗರು ಬೆಂಬಲಕ್ಕಿದ್ದರೇನೆ ಆ ಕೆಲಸ ಸುಲಭ. ಅದಕ್ಕಾಗಿ ಅವರನ್ನು ಕಟ್ಟಿಕೊಂಡು ಪುತ್ತೂರಿಗೋ ಬೆಳ್ತಂಗಡಿಗೋ ಆಗಾಗ ಹೋಗಿಬರುತ್ತಾರೆ. ಒಂದು ದಿನ ಇಬ್ಬರೂ ಇಂಥ ಒಂದು ನೆಪ ಹಿಡಿದು ಪುತ್ತೂರಿಗೆ ಪಯಣ ಬೆಳಸಿದ್ದರು. ಊರಿಗೆ ಶ್ಯಾನುಭಾಗರು ಬಂದ ಸುದ್ದಿ ತಾಲ್ಲೂಕು ಕಚೇರಿಗೆ ಹೇಗೆ ಮುಟ್ಟಿತೊ! ತಹಶಿಲ್ದಾರರಿಂದ ಕರೆ ನೇರಾಗಿ ಅವರು ಕುಳಿತಲ್ಲಿಗೇ ಬಂದಿತು. ಗ್ರಾಮದ ಶ್ಯಾನುಭಾಗರು ಗ್ರಾಮ ಬಿಟ್ಟು ರಾಜಧಾನಿಗಳಲ್ಲಿದ್ದರೆ ಸರಕಾರಿ ಕೆಲಸಕ್ಕೆ ಎಷ್ಟೋ ಅನುಕೂಲ. ಮೇಲಿನವರಿಗೆ ತಂತಿಮೂಲಕ ಬರುವ ಅರ್ಜೆಂಟು ಹುಕುಂಗಳನ್ನು ಥಕ್ಕನೆ ತಿಳಿಸಲು ಬರುತ್ತದೆ. ಇಲ್ಲವಾದರೆ ಹಳ್ಳಿಯ ಟಪಾಲು ಕಾಗದಗಳಿಗೆ ದಿನ ಎಂಟು ಹಿಡಿಯುತ್ತದೆ. ಅದಕ್ಕೆಂದೇ ಅವರಿಗೆ ಹೇಳಿಕಳುಹಿಸಿದ್ದು. ಅವರೂ ಹೋದರು. ತಹಶಿಲ್ದಾರ ದೊರೆಗಳ ಮುಂದೆ ನಗುತ್ತ "ಏನು ಮಹಾಸ್ವಾಮಿ?" ಎಂದಾ ಕೈಜೋಡಿಸಿದರು. ಅವರೆಂದರು "ನೋಡಿ ಶ್ಯಾನುಭಾಗರೆ, ನಮ್ಮ ಸರಕಾರದ ಅರ್ಜೆಂಟು ಕಾಗದಗಳಿಗೆ ಉತ್ತರಹಾಕುವುದರಲ್ಲಿ ನಮ್ಮ ನಿತ್ಯದ ಕೆಲಸ ನರಿನಾಯಿ ತಿನ್ನುತ್ತದೆ. ಈ ರೆವಿನ್ಯೂ ಇಲಾಖೆಯೂ ಸಮ, ಮುನ್ಸಿಪಾಲಿಟಿಯ ಡಸ್ಟ್‌ಬಿನ್ನೂ ಸಮ, ಯಾವ ಯಾವ ಇಲಾಖೆಗಳ ಕೆಲಸವನ್ನೆಲ್ಲ ನಮ್ಮ ಇಲಾಖೆಯ ಮೇಲೆಯೇ ಹೊರಿಸುತ್ತಾರೆ. ನೋಡಿ, ಇದೊಂದು ಅರ್ಜೆಂಟು ರಿಕಾರ್ಡು ಬಂದಿದೆ. ಅದರಲ್ಲಿ ತರಾತುರಿ ಏನೂ ನನಗೆ ಕಾಣುವುದಿಲ್ಲ. ನಾಲ್ಕು ವರ್ಷದ ಕುಮುಕಿ ಅರ್ಜಿಗಳು ನಮ್ಮ ಬೂಸು ಕರಡಿನಲ್ಲಿ ಬಿದ್ದಿವೆ. ಆದರೆ ಮಾಡುವುದೇನು? ಕಲೆಕ್ಟರರವರೇ ಖುದ್ದಾಗಿ ಬರೆದಿದ್ದಾರೆ. ಇದು 'ಗ್ರೋ ಮೋರ್ ಫುಡ್' ಅವಸರ. ಈ ಅರ್ಜಿದಾರರಿಗೆ ಅವರು ಕಾಣಿಸಿದ ಭೂಮಿಯನ್ನು ಗುರುತು ಮಾಡಿ ಬಾಂದಕಲ್ಲು ಇಲ್ಲದಲ್ಲಿ, ಅವರ ಖರ್ಚಿನಲ್ಲಿ ಅದನ್ನು ಹಾಕಿಸಿಕೊಟ್ಟು ವರದಿಮಾಡಬೇಕಂತೆ. ನಾನೇ ಹೋಗಿ ನೋಡಬೇಕಾದದ್ದು. ಆದರೆ ಥಟ್ಟನೆ ಬಂದು ನಾನೇನು ಮಾಡುವುದು? ಬರುತ್ತೇನೆ, ಒಂದೆರಡು ದಿನ

ಗಳಲ್ಲಿ. ನೀವು ಮಣಿಗಾರರನ್ನು ಕರೆದುಕೊಂಡು ಹೋಗಿ ಅದನ್ನು ತೋರಿಸಿ, ಮಾಡಬೇಕಾದುದನ್ನು ಮಾಡಿ. ಅದು ರೆವಿನ್ಯೂ ಸ್ಥಳ. ಯಾರ ಕುಮ್ಮಕಿಗೂ ಸಂಬಂಧಪಟ್ಟದ್ದಲ್ಲ. ಯಾರಿಗೇ ಕೊಡಲಿ ನಮಗೇನು" ಎಂದು ಉಪದೇಶ ಮಾಡಿ, ಕೆಲಸದ ತೀವ್ರತೆಯನ್ನು ಒತ್ತಿಹೇಳಿ ಮಣಿಗಾರರಿಗೆ ಬರೆದ ಪತ್ರವನ್ನು ಅದರೊಡನೆ ಸೇರಿಸಿ, ಒಟ್ಟು ರಿಕಾರ್ಡನ್ನು ಅವರ ತಲೆಯ ಮೇಲೆ ಹೇರಿದರು.

ಊರವರ ಮಟ್ಟಿಗೆ ರಂಗರಾಯರು ಹೇಗೆಯೇ ಇರಲಿ, ಸರಕಾರದ ಮಟ್ಟಿಗೆ, ಅವರು ಅತ್ಯಂತ ವಿಧೇಯ ಸೇವಕರು. ಕೂಡಲೇ ಹೊರಟರು. ರಿಕಾರ್ಡು ಬಿಡಿಸಿ ನೋಡುವ ಕುತೂಹಲ ತಡೆದರು. ಅದೇ ದಿನ ಬಸ್ಸನ್ನೇರಿ ಬೆಳ್ತಂಗಡಿಗೆ ಹೋಗಿ, ಮಣಿಗಾರರ ದರ್ಶನ ಪಡೆದರು. ಅವರು ಅದನ್ನು ಬಿಡಿಸಿ, ಏನೆಂದು ನೋಡಿದರೆ, ಅದು ಶಂಕರ ಬರೆದ ಅರ್ಜಿಯ ಫಲ! ಮೂಡೋಡಿಯ ಯಾವತ್ತು ಕಾಡುಪಾಲಾದ ಭೂಮಿ, ಅದರ ನಕ್ಷೆ, ಕಂದಾಯ ಕೊಟ್ಟ ದಾಖಲೆ—ಇವುಗಳೆಲ್ಲ ಸೇರಿಕೊಂಡೇ ಬಂದಿದ್ದವು. ಅಷ್ಟು ವೇಗದಲ್ಲಿ ಸಂಚರಿಸಿ ಬಂದ ರೆವಿನ್ಯೂ ರಿಕಾರ್ಡನ್ನು ನೋಡಿ ಮಣಿಗಾರರಿಗೂ ಭಕ್ತಿ, ಶ್ರದ್ಧೆಗಳು ಉತ್ಪನ್ನವಾಗಲೇಬೇಕಾಯಿತು.

ಮಣಿಗಾರರು "ಇವರು ಯಾರೆಂದು ಗೊತ್ತೇ? ಏನು ಸಂಗತಿ? ದಿಲ್ಲಿಯುವರಾಗಿ ಕಾಣುತ್ತಾರೆ, ಹೋ, ದೊಡ್ಡವರ ಮನೆಯ ವಿಳಾಸವಿದೆ. ಹಾಗಾಗಿ ಅರ್ಜೆಂಟ್ ಹುಕುಂ ಆಗಿದೆ. ಆದರೆ ದಿಲ್ಲಿ ಎಲ್ಲಿ? ನಿಮ್ಮ ಬಂಗಾಡಿಯೆಲ್ಲಿ? ಬೆಳ್ತಂಗಡಿಯುವರೇ ಬಂಗಾಡಿಯ ಹೆಸರು ಕೇಳಿ ಡೊಗ್ಗಾಲು ಸಲಾಂ ಹಾಕುವಾಗ, ಈ ಮಹಾರಾಯರು ಕಂದಾಯ ತೆತ್ತು, ಈ ಕೊಂಪೆಯನ್ನು ವೃದ್ಧಿ ಮಾಡುತ್ತಾರೆಯೇ?" ಎಂದು ತಮ್ಮ ಆಶ್ಚರ್ಯ ವ್ಯಕ್ತಪಡಿಸಿದರು, ಶ್ಯಾನುಭಾಗರು ಕನ್ನಡಕವಿಟ್ಟರು. ರಿಕಾರ್ಡನ್ನು ಪರಾಂಬರಿಸಿದರು. ಅವರಿಗೆ ದಿಗಿಲಾಯಿತು. ಅರ್ಜಿದಾರ ಯಾರೆಂದು ಹೇಳಲಿಕ್ಕೂ ಇಲ್ಲ, ಹೇಳದಿರುವುದಕ್ಕೂ ಇಲ್ಲ. ಯೋಚಿಸಿ, ಯೋಚಿಸಿ ಅಂದರು "ಯಾರೇ ಇರಲಿ, ನಮಗೇನು, ನಿಮಗೇನು? ಸರಕಾರಕ್ಕೆ ಆ ಭೂಮಿಯಿಂದ ಕಂದಾಯ ಸಿಗದೆ ಐವತ್ತು ವರ್ಷಗಳ ಮೇಲಾಯಿತು. ಈ ಒಬ್ಬ ಹುಚ್ಚಪ್ಪ ಅದಕ್ಕೆ ಅರ್ಜಿ ಹಾಕಿದ್ದಾನೋ! ಜಾಗ ವಿಶಾಲವಾಗಿದೆ. ಹುಲಿ,

ಚಿರತೆಗಳಿಗೆ ಒಳ್ಳೆ ಬಿಡಾರ. ಅಳೆದು ತೋರಿಸುವ. ಆದರೆ ಗಡಿಕಲ್ಲುಗಳ ಗತಿ ಏನಾಗಿದೆಯೋ! ಕಾಡು ಬೆಳೆದುಹೋಗಿದೆ ಆ ಜಾಗದಲ್ಲಿ. ಒಂದು ತಿಂಗಳು ತಿರುಗಾಡಿ ಒದ್ದಾಡಿದರೂ ಗುರುತಿಸುವುದು ಕಷ್ಟ" ಎಂದರು. ಮಣಿಗಾರರಿಂದ, ರಿಕಾರ್ಡು ಶ್ಯಾನುಭಾಗರ ಪಾಲಿಗೆ ಬಂದಿತು. ಕಲೆಕ್ಟರ್ ರವರಿಂದ. ಒತ್ತಾಯದ ಬರಹ ಬಾರದೆಹೋಗಿದ್ದರೆ ಇವರು ಅದನ್ನು ಮೂಸಿಯೂ ನೋಡುತ್ತಿರಲಿಲ್ಲ. ಸಾಲದುದಕ್ಕೆ ಶಂಕರನಿಂದ ಬಂದ ಅರ್ಜಿಗೆ, ಕುಂಟು ಪಂಕ್ತಿ ಸೇರಿಸಿ, ಕಿರುಕುಳ ಕೊಡುವಹಾಗಿಲ್ಲ. ಆದರೆ ನಿಜಕ್ಕೂ ಅವರೆಂದ ಹಾಗೆ–ಗಡಿಕಲ್ಲುಗಳನ್ನು ಗುರುತಿಸಿ, ಸ್ಥಾಪಿಸಿಕೊಡ ಬೇಕಾದರೆ ಹತ್ತು ಜನರು ಬೆಂಬಲಕ್ಕೆ ಬೇಕು. ಅವರಿಗೆ ಈ ಕುತ್ತಿನಿಂದ ಹೇಗೆ ಪಾರಾಗುವುದೆಂದು ತೋರಲಿಲ್ಲ.

ಮನೆಗೆ ಬರುತ್ತ ಯೋಚಿಸಿದರು; ತುಂಬ ಯೋಚಿಸಿದರು. ಶಂಕರ ಊರು ಬಿಡುವಾಗ ಅಜ್ಜಿಯೊಡನೆ 'ಬೇಗ ಬರುತ್ತೇನೆ' ಎಂದಿದ್ದ ಮಾತು ನಿಜಕ್ಕೂ ಉಪಚಾರಕ್ಕೆಂದುದಲ್ಲ; ಬರುವ ಇಷ್ಟದಿಂದಲೇ ಅಂದುದು ಎಂಬುದು ಸ್ಪಷ್ಟವಾಯಿತು. ಆದರಿಂದ ಸಂತೋಷವಾಗುವ ಬದಲು ಬೇಸರ ಉಂಟಾಯಿತು.

ಅವರ ಬೇಸರಕ್ಕೆ ಮೊದಲನೆಯ ಕಾರಣವೆಂದರೆ–ಶಂಕರ ಈ ಒಂದು ವಿಚಾರದಲ್ಲಿ, ತನಗೆ ಯಾವೊಂದು ಸುದ್ದಿಯನ್ನೂ ತಿಳಿಸದೆ, ಆದ್ಯಂತವಾಗಿ ಕೆಲಸವನ್ನೆಲ್ಲ ಇತರರ ಮೂಲಕ ಸಾಧಿಸಿದ ಎಂಬುದು. ತನ್ನಲ್ಲಿ ಅವನಿಗಿರುವ ಸಂಶಯ ಆದಕ್ಕೆ ಕಾರಣವಿರಬಹುದೆಂಬ ಊಹೆಯೂ ಆಯಿತು. ಎರಡನೆಯ ಬೇಸರ ಅವನ ಮೂರ್ಖ ವಿಚಾರಕ್ಕಾಗಿಯೇ. ಎಂಜಿನಿಯರಿಂಗ್ ಕಲಿತು ಒಳ್ಳೆಯ ನೌಕರಿ ದೊರಕಿಸಿಕೊಳ್ಳುವ ಯೋಗ್ಯತೆಯಿರುವಾಗ, ವಿದ್ಯಾವಂತನಾದ ಹುಡುಗ ಇಂಥ ಕಾಡು ಕೊಂಪೆಗೆ ಬಂದು, ಬೀಡು ಬೀಡುವ ಯೋಚನೆಮಾಡಿದುದಕ್ಕೆ ಬೇಸರ. ಇದರಿಂದ ಆತ ಪ್ರಪಂಚದ ವ್ಯವಹಾರ ತಿಳಿದವನಲ್ಲ ಎಂದು ಅವರಿಗನಿಸಿತು. ಆ ಸ್ಥಳಕ್ಕೆ ಬಂದು ಕಂಗೆಟ್ಟು ಪಲಾಯನ ಮಾಡುವ ಸ್ಥಿತಿ—ಅವರ ಎಣಿಕೆಯಂತೆ ಕಟ್ಟಿಟ್ಟ ತೀರ್ಮಾನ. ಆದರಲ್ಲಿಯೇ ಒಂದು ಸಮಾಧಾನವೆಂದರೆ ನಾಳೆ ತನ್ನ ಅಳಿಯನನ್ನಾಗಿ ಮಾಡಿಕೊಳ್ಳಬೇಕೆಂದು ಹಂಬಲಿಸಿದ ಮೂರ್ಖತನ ಮೊದಲಿಗೇ

ತಿಳಿದದ್ದು. ಅಂತು ಶಂಕರನ ಪ್ರಯತ್ನ, ಅವರ ವಿರಾಮವನ್ನು ಕೆಡಿಸುವುದ ಕ್ಕೊಂದು ಕಾರಣವಾಯಿತು.

ಊರಿಗೆ ಹೋದ ಬಳಿಕ, ಈ ಕೆಲಸದ ಹೊರೆಯೊಂದು ಅವರ ತಲೆಯ ಮೇಲೆ ಕುಳಿತಿತ್ತು. ಹೋದದಿನವೇ ಮೂಡೋಡಿಯ ಬೆಟ್ಟು, ಕಾಡು ಗಳನ್ನು ಸಂಚರಿಸಿ ಬಂದರು. ಎಷ್ಟು ತಿರುಗಿದರೂ ಒಂದೇ ಒಂದು ಬಾಂದು ಕಲ್ಲು ಅವರ ಕಣ್ಣಿಗೆ ಕಾಣಿಸಲಿಲ್ಲ. ಕಾಣಿಸುವುದು ಶಕ್ಯವೂ ಇದ್ದಿಲ್ಲ. ಬಹು ದೂರದಿಂದ ಅಳತೆ ತೊಡಗಿ, ಒಂದೊಂದೇ ಕಲ್ಲಿನ ಗುರುತು ಹಾಕಿ, ಸಂಕಲೆ ಹಿಡಿಯುವುದಕ್ಕೆ ಕಾಡು ಕಡಿದು, ಇಲ್ಲದ ಪ್ರಯತ್ನ ಮಾಡುವ ಪಾಡು ಬಂದಿತಲ್ಲ ಎಂದನಿಸಿತು. ಅವರು ಮನೆಯನ್ನು ಸೇರಿದ ಮರುದಿನವೇ, ಸೀತಾರಾಮ ಅವರನ್ನು ಕಾಣಲು ಅವರ ಮನೆಗೇನೆ ಹೋದ. ತನ್ನ ಗೆಳೆಯನ ಸಲುವಾಗಿ ರಿಕಾರ್ಡುಗಳನ್ನು ಹಿಂಬಾಲಿಸಿ ಪುತ್ತೂರಿಗೆ ಬಂದು, ಅಲ್ಲಿಂದ ಬೆಳ್ತಂಗಡಿಗೆ ಹೋಗಿ, ಬಂಗಾಡಿಯ ತನಕ ಸಾಗಿದ. ಶ್ಯಾನುಭಾಗರನ್ನು ಕಂಡು, ಶಂಕರನ ಅರ್ಜಿಯ ಪ್ರಸ್ತಾಪವನ್ನು ಎತ್ತಿ "ನನ್ನ ಸ್ನೇಹಿತನ ಸಲುವಾಗಿ ನೀವಷ್ಟು ಕೆಲಸ ಮಾಡಿ ಕೊಡಬೇಕು. ಅದಕ್ಕೇನು ಖರ್ಚು ಬಿದ್ದರೂ ನಾನು ಕೊಡುತ್ತೇನೆ. ಬಿಟ್ಟಿ ಕೆಲಸ ಮಾಡಬೇಕಾಗಿಲ್ಲ. ನಿಮ್ಮ ಮೆಹನತ್ತಿಗೆ ತಕ್ಕ ಕಾಣಿಕೆಯನ್ನೂ ಸಲ್ಲಿಸುತ್ತೇನೆ" ಎಂದೂ ಹೇಳಿದ.

ಶ್ಯಾನುಭಾಗರು "ಸಂಕಲೆ ಹಿಡಿಯಬೇಕಾದರೆ ಎಷ್ಟು ಕಾಡು ಸವರ ಬೇಕೋ, ಬಲ್ಲೆ ಕಡಿಯಬೇಕೋ ನನಗೇ ಗೊತ್ತಿಲ್ಲ. ಹತ್ತೆಂಟು ಆಳುಗ ಳಾದರೂ ಬೇಕು" ಎಂದರು.

"ಆಗಲಿ, ಅದಕ್ಕೇನು. ಖರ್ಚಿಗೆ ನಾನಿದ್ದೇನೆ. ಹಣ ಕೊಡುತ್ತೇನೆ, ನೀವಷ್ಟು ಕೆಲಸ ಮಾಡಿಕೊಟ್ಟರೆ. ಅನಂತರ ಅವನಿಗೆ ಬರುವುದಕ್ಕೆ ತಂತಿ ಕೊಡುತ್ತೇನೆ. ಮೊದಲೇ ಅವನಿಗೆ ತೊಂದರೆ ಕೊಡಬಾರದು" ಎಂದ.

"ಈಗಿನ ಕಾಲದ ಹುಡುಗರು ಇಷ್ಟು ಅವ್ಯವಹಾರಿಗಳು ಎಂದು ನನಗೆ ತಿಳಿದಿರಲಿಲ್ಲ. ಅದೂ ಇರುಳು ಕಂಡ ಬಾವಿಯಲ್ಲಿ ಹಗಲು ಬಿದ್ದ ಹಾಗೆ ಮಾಡುತ್ತಾರೆಯೇ? ಕೃಷಿ ಮಾಡಬೇಕು—ಎಂದಾಸೆಯಾದರೆ ಇಂಥಾ ಕಾಟು ಸ್ಥಳವನ್ನು ಯಾರಾದರೂ ಹುಡುಕುತ್ತಾರೆಯೇ? ಧರ್ಮಕ್ಕೆ ಸಿಕ್ಕಿತು ಎಂದು ಮುದಿ ಎಮ್ಮೆ ದಾನ ಹಿಡಿದ ಹಾಗೆ ಇದು. ಅವನಿಗೆ ಸಾಗುವಳಿ

ಮಾಡುವ ಇಷ್ಟವಿದ್ದರೆ, ನನಗೆ ಒಂದು ಮಾತು ಹೇಳಿದರೆ, ಬೆಳ್ತಂಗಡಿಗೆ ಸಮೀಪದಲ್ಲಿ ಇದಕ್ಕೂ ಒಳ್ಳೆಯ ಜಮೀನು ತೆಗಿಸಿಕೊಡುತ್ತಿದ್ದೆ. ಇವತ್ತು ಹಣದ ಮುಗ್ಗಟ್ಟಿನಿಂದ ದುಡ್ಡು ದುಗ್ಗಾಣಿಗೆ ಜಮೀನು ಮಾರುತ್ತಾ ಇದೆ. ಪೇಟೆಗೆ ಸಮೀಪದ ಭೂಮಿಯಿದೆ. ತೋಟವಾದರೆ ತೋಟ, ಗದ್ದೆಯಾದರೆ ಗದ್ದೆ. ಅದನ್ನೆಲ್ಲ ಬಿಟ್ಟು ಇಂಥ ಸ್ಥಳ ಹುಡುಕುವುದೇ ? ಇದಕ್ಕೆ ಕೊಟ್ಟ ಕಂದಾಯದ ಹಣವನ್ನು ಬಾವಿಗೆ ಹಾಕಿದ ಹಾಗೆಯೆ ! ಏನೊ ಬುದ್ಧಿಯಿಲ್ಲದ ಕೆಲಸ " ಎಂದರು.

ಅಂತರಂಗದಲ್ಲಿ ಸೀತಾರಾಮನಿಗಾದರೂ ಅಂತಹ ಭಯ ಇದ್ದೇ ಇತ್ತು. ಆದರೆ ಗೆಳೆಯ ತೊಡಗಬೇಕೆಂದಿದ್ದ ಕೆಲಸ, ಹಿಡಿದ ಆಸೆ ಅಯೋಗ್ಯವಾದದ್ದಲ್ಲ—ಎಂದು ಬಲ್ಲ ರಂಗರಾಯರ ಮುಂದೆ ಮಿತ್ರನನ್ನು ಕುರಿತು ಅವನ ಅಭಿಮಾನಕ್ಕೆ ಕುಂದು ತರುವ ಯಾವ ಮಾತನ್ನೂ ಆಡಲಾರ. ಆದುದರಿಂದಲೇ ಆತನೆಂದ "ಹಾಗಲ್ಲ ಶ್ಯಾನುಭಾಗರೇ, ಶಂಕರ ತುಂಬ ವಿಚಾರಶಾಲಿ. ಹೆಚ್ಚಿಗೆ ಮಾತನಾಡುವವನಲ್ಲ, ದುಡುಕುವವನು ಮೊದಲೇ ಅಲ್ಲ. ಆತ ನನ್ನ ಸಹಪಾಠಿಯಾಗಿದ್ದನಲ್ಲ. ಅವನಂಥ ಸಮಾಧಾನಿಗಳನ್ನು ನಾನು ಕಾಣಲಿಲ್ಲ."

"ಶಾಲೆಯ ಸಂಗತಿ ಹೇಳುತ್ತೀರಿ ನೀವು. ಶಾಲೆ ಬೇರೆ, ಜೀವನ ಬೇರೆ. ಅಲ್ಲಿ ಹೆಡ್ಡರೆನಿಸಿದವರು ಜೀವನದಲ್ಲಿ ಯಶಸ್ಸು ಗಳಿಸುವುದುಂಟು. ಅಲ್ಲಿ ಬುದ್ಧಿವಂತರೆನಿಸಿಕೊಂಡವರು ಬದುಕಿನಲ್ಲಿ ಅವ್ಯವಹಾರಿಗಳೆನಿಸಿ ನಿರಾಶರಾಗುವುದುಂಟು. ನನಗಂತು ಅವನ ಈ ಕೆಲಸದಲ್ಲಿ ವಿಶ್ವಾಸವಿಲ್ಲ. ನೀವು ಹೇಳುತ್ತಿದ್ದೀರಿ ; ನಮ್ಮ ಬಳಗದ ಹುಡುಗ ; ನಾನೂ ಕೆಲಸವನ್ನು ಮೆಹನತ್ತಿನಿಂದ ಮಾಡುತ್ತೇನೆ. ಆದರಲ್ಲಿ ಪ್ರತಿಫಲ ನನಗೆ ಬೇಕಿಲ್ಲ, ಈಗ ನನ್ನನ್ನೇ ನೋಡಿ–ನನಗೆ ಸ್ವಂತ ಸಾಗುವಳಿ ಇಲ್ಲವೇ ? ಗದ್ದೆ ಬೇಸಾಯ ಮಾಡುತ್ತಿದ್ದೇನಲ್ಲ. ಬೆಳೆದದ್ದು ಮನೆಗೆ ಬರುವುದಕ್ಕೆ ತಪಸ್ಸು ಮಾಡಬೇಕಾಗುತ್ತದೆ. ಒಂದು ಕಡೆ ಮಲೇರಿಯದ ಹಾವಳಿ ; ಇನ್ನೊಂದು ಕಡೆ ಕಾಡು ಪ್ರಾಣಿಗಳ ಉಪದ್ರ. ಹತ್ತಿರ ಕಾಡಿದ್ದರೂ ಸೊಪ್ಪು ತರಬೇಕಾದರೆ ಸ್ವಂತ ಹಾಡಿಯಿಂದ ಬೇಕು. ಹಿಂದಿನ ಕಾಲದ ಜನ ಇಲ್ಲೆಲ್ಲ ಸಾಗುವಳಿ ಮಾಡಿ ಬಚಾಯಿಸಿದರೆಂದು ಈ ಹಸಿ ಹುಡುಗರು ಬದುಕಲಿಕ್ಕುಂಟೇ ?"

"ಆ ಕಷ್ಟಗಳೆಲ್ಲ ನಿಜ. ಆದರೂ ನೋಡಿ, ಶಂಕರ ಬಹು ಹಿಂದಿನಿಂದ

ಕೃಷಿಯಲ್ಲಿ ಆಸೆ ತಳೆದವನು; ಎಂಜಿನಿಯರಿಂಗ್ ಓದುತ್ತಿದ್ದಾಗಲೂ ಸಮೀಪದ ಕೃಷಿ ಕೇಂದ್ರಕ್ಕೆ ಹೋಗಿ ಬರುತ್ತಿದ್ದ. ನನಗೇಕೆಂದು ಆಗ ಗೊತ್ತಾಗಲಿಲ್ಲ. ಶಿವಸಮುದ್ರಕ್ಕೆ ನಾವಿಬ್ಬರೂ ಹೋಗಿ ಮೂರು ತಿಂಗಳಿದ್ದೆವಲ್ಲ. ಆಗಾಗ ಅಲ್ಲಿನ ಹಳ್ಳಿಯವರೊಡನೆ ಅಲ್ಲಿಯ ಕಷ್ಟ ಸುಖ ವಿಚಾರಿಸಿ ತಿಳಿಯುತ್ತಿದ್ದ. ನಮ್ಮ ಮುದ್ರಾಡಿಯೂ ಬಂಗಾಡಿಯಂಥ ಊರೇ, ನಮ್ಮೂರಿನ ಬೇಸಾಯಗಾರರ ಕಷ್ಟ ಸುಖಗಳನ್ನೆಲ್ಲ ಹತ್ತು ಹತ್ತು ಸಾರಿ ಹೇಳಿದ್ದೇನೆ."

"ಹಾಗಿದ್ದರೆ ನೀವೇ ಯೋಚನೆ ಮಾಡಿ–ಅವನಂತೆ ನೀವೂ ಎಂಜಿನಿಯರಿಂಗ್ ಪಾಸು ಮಾಡಿದ್ದೀರಿ. ನಿಮಗೆ ಹೇಗೆ ಕಾಣುತ್ತಿದೆ? ನಿಮಗೂ ಮನೆ ಇದೆ, ಜಮೀನಿದೆ. ಮನೆಯಲ್ಲಿ ಕುಳಿತುಕೊಂಡು ಸಾಗುವಳಿ ಮಾಡುತ್ತೀರಾ? ಹಾಗಿದ್ದರೆ ಓದುವುದಕ್ಕೆ ಇಷ್ಟೆಲ್ಲ ಖರ್ಚು ಮಾಡಬೇಕಿರಲಿಲ್ಲ. ಮುದ್ರಾಡಿಯ ವಿಚಾರ ಕೇಳಿ ಗೊತ್ತು, ಕಂಡು ಗೊತ್ತಿಲ್ಲ. ಅದೂ ಘಟ್ಟಕ್ಕೆ ಸಮೀಪದ ಊರು. ಹೆಚ್ಚು ಕಡಿಮೆ ಈ ಎರಡೂ ಊರಿನ ಸ್ಥಿತಿಗಳೂ ಒಂದೇ. ಸ್ವಂತಕ್ಕೆ ನೀವು ಇಂಥಾ ಧೈರ್ಯ ಮಾಡುತ್ತಿದ್ದಿರಾ? ಅಥವಾ ನಿಮ್ಮ ಅಪ್ಪ ಅಮ್ಮ ನೀವು ಮಾಡುತ್ತೇನೆ–ಎಂದರೆ ಒಪ್ಪಿಗೆ ಕೊಟ್ಟಾರೆಯೆ? ಅವನು ಕೃಷಿಯ ವಿಷಯ ಓದಿರಬಹುದು. ಅದು ಪುಸ್ತಕದ ಬದನೆಕಾಯಿ. ಕಾಗದದ ಮೇಲೆ ಕೃಷಿ ಮಾಡುವ ಕ್ರಮ. ನಮ್ಮ ಸರಕಾರವೂ ಈ ಕೆಲಸ ತೊಡಗಿದೆ. ತಾಲೂಕು ಕಚೇರಿಯ ಹೊರಗೆ, ಕುಡಿಯಲಿಕ್ಕೆ ನೀರಿಲ್ಲದಲ್ಲಿ ಅನನಾಸು, ಬಾಳೆಗಳನ್ನು ನಟ್ಟರು, ಬೇಲಿಹಾಕಿದರು. ನಟ್ಟದ್ದು ಆಡಿನ ಹೊಟ್ಟೆಗಾಯಿತು; ಬೇಲಿಯ ಖರ್ಚು ದಂಡ. ಈ ಊರಿನಲ್ಲಿ ಆಡಿಲ್ಲ. ಆದರೆ ಕಾಡು ಹಂದಿ ಎಷ್ಟು ಬೇಕು ನಿಮಗೆ? ನಾಳೆ ಮೂಡೋಡಿಯಲ್ಲಿ ಕೃಷಿಯಾದರೆ ಕಾಡು ಹಂದಿಗೆ ಸಂತರ್ಪಣೆ ಮಾಡಿದ ಹಾಗೆ."

ಅಂತು ಶ್ಯಾನುಭಾಗರ ಆಕ್ಷೇಪಗಳಿಗೆ ಸೀತಾರಾಮು ಪ್ರತ್ಯುತ್ತರ ಹೇಳುವುದು ಕಷ್ಟ. ಸ್ವತಃ ಅವನೇ ಆಶಾವಾದಿಯಾಗಿಲ್ಲ. ಅವನೆಂದ "ಏನೂ ಇರಲಿ. ನಮಗೇನು? ನಿಮಗೇನು? ನಾಳೆ ಅವನೇ ಬುದ್ಧಿ ಕಲಿಯಲಿ" ಎಂದು ಅವರನ್ನು ಸಮಾಧಾನ ಪಡಿಸಿದ; ಒಲಿಸಿದ. ಆಳುಗಳನ್ನು ಜಮಾಯಿಸಿದ. ಶ್ಯಾನುಭಾಗರನ್ನು ಸ್ಥಳಕ್ಕೆ ಕರೆದೊಯ್ದು, ಶಂಕರನ ಹೊಸ ಕನ

ಸಿನ ಸುದ್ದಿಯು ಊರಲ್ಲೆಲ್ಲ ಹಬ್ಬಿತು. ಎಳಚಿತ್ತಾಯರು, ಶಾಂತಿರಾಜರು, ಮುತ್ತಯ್ಯ ಗೌಡ—ಎಲ್ಲರೂ ಬೆಂಬಲವಾದರು. ಮುದಿ ಗೌಡ ಇನ್ನಿಲ್ಲದ ಉತ್ಸಾಹ ತಾಳಿದ. ಅವನ ಜೀವನದ ಬಹು ಕಾಲ ಮೂಡೋಡಿಯಲ್ಲಿ ಕಳೆದಿತ್ತು. ಆದರಿಂದಾಗಿ ಪ್ರತಿಯೊಂದು ಸಂದು ಮೂಲೆಯನ್ನೂ ಆತ ತಿಳಿದವ. ಭೂಮಿಯ ಗಡಿಗಳನ್ನು ಸುಲಭದಲ್ಲಿ ತೋರಿಸಿಕೊಟ್ಟ. ಕೂಲಿಗಳು ದಾರಿ ಸವರಿದರು: ಸಂಕಲೆಯನ್ನು ಎಳೆಯುವುದಕ್ಕೆ ಅನುಕೂಲ ಮಾಡಿಕೊಟ್ಟರು. ಮುತ್ತಯ್ಯ ಗೌಡ ತೋರಿಸಿಕೊಟ್ಟ ಹಳೆಯ ಜಾಡುಗಳನ್ನೆಲ್ಲ ಶೋಧಿಸುವಾಗ. ಮೂಡೋಡಿಯ ಪೂರ್ವದಲ್ಲಿದ್ದ ಒಂದು ಆಳವಾದ ಕಂದಕ ಹಿಂದಿನ ಗಡಿಗೆ ಸಾಕ್ಷಿಯಾಗಿದ್ದುದು ಕಾಣಿಸಿತು. ಆದರಿಂದ ಶ್ಯಾನುಭಾಗರ ಕೆಲಸ ಎಷ್ಟೋ ಸುಲಭವಾಯಿತು. ಕಂದಕ ಬಹುಮಟ್ಟಿಗೆ ಮುಚ್ಚಿದ್ದರೂ, ಅದರ ಸೆರಗನ್ನು ಹಿಡಿದು, ಹಳೆಯ ಕಾಲದ ತೋಟ. ಗದ್ದೆ, ಬೆಟ್ಟುಗಳನ್ನು ಗುರುತಿಸಿದರು. ಆದರಿಂದ ಹೊರಕ್ಕೆ ಈಶಾನ್ಯದ ಗುಡ್ಡಗಳ ಸಂದಿನಲ್ಲಿ ಭೂಮಿಗೆ ಕುಮುಕಿಯಾದ ಜಾಗವೂ ಕಾಣಿಸಿತು. ಎರಡು ಬೆಟ್ಟಗಳ ನಡುವಣ ವಿಶಾಲವಾದ ಒಂದು ಒಳಬೆ; ಅದೀಗ ಸಂಪೂರ್ಣ ಅರಣ್ಯಮಯವಾಗಿದೆ. ರೆವಿನ್ಯೂಗೆ ಸೇರಿದ ಆ ಭೂಮಿಯಲ್ಲಿ ಅರಣ್ಯ ಇಲಾಖೆಯವರ ಕಲ್ಲುಗುಪ್ಪೆಗಳು ಕಾಣಿಸಿದುವು, ಕುಮುಕಿ ಹಕ್ಕಿನ ಭೂಮಿ ಕಾಡಿನ ಗಡಿಗಿಂತ ಮತ್ತೂ ಪೂರ್ವಕ್ಕೆ ಚಾಚಿತ್ತು. ಅದನ್ನೆಲ್ಲ ಗುರುತಿಸಿ ಕೊಡುವುದಕ್ಕೆ ರಂಗರಾಯರಿಗೆ ಸಾಕೋಬೇಕಾಯಿತು. ಅವರೆಂದರು "ನಕ್ಷೆಯಲ್ಲಿ ವರ್ಗಸ್ಥಳ, ಕುಮುಕಿ ಸ್ಥಳ ಎಲ್ಲ ಕಾಣುತ್ತಿದೆ ನಿಜ. ಆದರೆ ನಾನು ಗುರುತನ್ನೇನೋ ಹಾಕಿಕೊಡುತ್ತೇನೆ. ಆದರೆ ಆ ಭೂಮಿಯನ್ನು ಪಡೆಯುವುದಕ್ಕೆ ಫೋರೆಸ್ಟ್ ಇಲಾಖೆಯವರೊಡನೆ ಯುದ್ಧ ಹೂಡಬೇಕಾದೀತು. ನಿಮಗೆ ಗೊತ್ತಿಲ್ಲ. ಹಿಂದಿನ ಕತೆಯೊಂದು ಹೇಳುತ್ತೇನೆ. ಮನ್ರೋ ದೊರೆಗಳೆಂಬ ಒಬ್ಬ ಕಲೆಕ್ಟರರಿದ್ದರು. ಅವರು ವರ್ಗದಾರರಿಂದ ಅವರ ಪಟ್ಟೆಗಳನ್ನು ತರಿಸಿಕೊಂಡರು. ಕಚೇರಿಯಲ್ಲಿ ಬೇಕೆಂದೇ ಅವನ್ನು ಸುಟ್ಟುಹಾಕಿಸಿದರಂತೆ. ಅನಂತರ ಜನಗಳಿಗೆ 'ನಿಮ್ಮ ನಿಮ್ಮ ಹಕ್ಕನ್ನು ಸ್ಥಾಪನೆಮಾಡಿ, ಭೂಮಿ ಕೊಡುವ' ಅಂದರಂತೆ. ಹೀಗಾಗಿ ಸರಕಾರದವರೇ ಸಾವಿರಾರು ಎಕ್ರೆ ಜಮೀನನ್ನು ಒಳಗೆಹಾಕಿ, ಅರಣ್ಯ

ಇಲಾಖೆಗೆ ಒದಗಿಸಿಕೊಟ್ಟರು. ಇದು ಅಂಥದೇ ಒಂದು ವ್ಯಾಪಾರ. ನಮ್ಮ ಆಡಂಗಳದಲ್ಲಿ ನಕ್ಷೆ ಚೆನ್ನಾಗಿದೆ- ನಾನು ಗಡಿ ಹಾಕಿ ಕೊಡುತ್ತೇನೆ. ಆದರೆ ಫೋರೆಸ್ಟಿಗೆ ಹೋದ ಭೂಮಿಯು ಖಂಡಿತಕ್ಕೂ ಸಿಗಲಾರದು " ಎಂದರು.

ಎಷ್ಟೇ ಕಷ್ಟವಾದರೂ ಸೀತಾರಾಮು ಬಂದ ಕೆಲಸ ಬಿಡಲಿಲ್ಲ. ರಂಗರಾಯರಿಗೆ ಬಿಡುವನ್ನು ಕೊಡಲಿಲ್ಲ. ಅವರಿಂದ ಕೆಲಸಮಾಡಿಸಿಕೊಂಡ. ಅವರು ಬೇಡವೆಂದರೂ, ಅವರ ಮೆಹನತ್ತಿಗೆ ಸಮನಾಗಿ ಸಂಭಾವನೆ ಸಲ್ಲಿಸಿದ. ಅವರೆಷ್ಟು ತೃಪ್ತಿಗೊಂಡರೋ ಆ ಮಾತು ಬೇರೆ. ತೃಪ್ತಿಪಟ್ಟವರಲ್ಲಿ ಒಬ್ಬನಾದರೂ ಇದ್ದ; ಅವನೆಂದರೆ ಮುದಿ ಮುತ್ತಯ್ಯಗೌಡ. ತನ್ನ ಧನಿಗಳ ಮೊಮ್ಮಗ ತಿರುಗಿ ಮೂಡೋಡಿಗೆ ಬರುತ್ತಾರೆ— ಎಂದು ಕೇಳಿದ ಮೇಲೆ ಇನ್ನು ಹತ್ತು ವರ್ಷವಾದರೂ ತಾನು ಬದುಕಬೇಕೆಂಬ ಆಸೆ ಆ ಮುಪ್ಪಿನ ದೇಹದಲ್ಲಿ ಹುಟ್ಟಿತು.

ಸೀತಾರಾಮು ಸ್ವಗ್ರಾಮಕ್ಕೆ ತೆರಳಿದ. ಅಲ್ಲಿಂದ ಶಂಕರನಿಗೊಂದು ಪತ್ರ ಬರೆದ. ಅಷ್ಟಕ್ಕೆ ಕೊಯಮತ್ತೂರಿನ ಕಂಪೆನಿಯೊಂದರಿಂದ ಅವನಿಗೆ ಕರೆ ಬಂದಿತು. ಗೆಳೆಯನಿಗೆ ಇನ್ನೊಂದು ಕಾಗದ ಬರೆದ—" ನನ್ನ ಕೆಲಸ ಮಾಡಿಕೊಟ್ಟಿದ್ದೇನೆ. ನನಗೆ ಕೆಲಸದ ಕರೆ ಬಂದಿದೆ. ಇತ್ತ ಮದುವೆಯೂ ಅವಸರದಲ್ಲಿ ನಡೆಯಬೇಕು. ಅದಕ್ಕೆ ನೀನು ಬರಲೇ ಬೇಕು, ಅಲ್ಲದೆ ನಾನು ಊರು ಬಿಡುವ ಮುಂಚೆ ನೀನು ಬರುವುದು ಅವಶ್ಯ. ನಿನ್ನ ಭೂಮಿಯ ನಿಕಟ ಪರಿಚಯ ಮಾಡಿಕೊಟ್ಟ ಹಾಗೆ ಆಗುತ್ತದೆ" ಎಂದು ಬರೆದ. ಶ್ಯಾನುಭಾಗರ ವಿಚಾರದಲ್ಲಿ ಹೆಚ್ಚಿನ ಆಸೆ, ಭರವಸೆ ಇರಿಸಿಕೊಳ್ಳಬಾರದೆಂದು ಎಚ್ಚರಿಸಿದ. "ಅವರು ನಿನ್ನ ಬಂಧುಗಳಾದರೂ ಅಳುಕಿ, ಅಂಜಿ, ಅಸಮಾಧಾನದಿಂದಲೇ ಅಷ್ಟು ಕೆಲಸ ಮಾಡಿಕೊಟ್ಟರು. ಅವರಿಂದ ನಿನಗೆ ಯಾವ ಹೆಚ್ಚಿನ ಸಹಾಯವೂ ದೊರೆಯಲಾರದು. ಆದರೆ ನಮ್ಮ ಎಳಚಿತ್ತಾಯರಿಗೂ, ಮುತ್ತಯ್ಯನಿಗೂ ಹೇಳಿ ಬಂದಿದ್ದೇನೆ. ಇಬ್ಬರೂ ತಮ್ಮಿಂದಾದ ಸಹಾಯ ಖಂಡಿತವಾಗಿ ಮಾಡಬಹುದು " ಎಂದು ತಿಳಿಸಿದ.

ಇಷ್ಟೆಲ್ಲ ಕೆಲಸಗಳಾಗುವಾಗ ಮೂರು ತಿಂಗಳ ಕಾಲವೇ ಸರಿದು ಹೋಗಿತ್ತು. ಈ ಸಮಯವನ್ನು ಶಂಕರನಾದರೂ ವ್ಯರ್ಥವಾಗಿ ಹಾಳು ಮಾಡಲಿಲ್ಲ. ಪುಸ್ತಕಪ್ರಿಯನಾದ ಆತ ಪುಸ್ತಕಾಲಯ, ವಾಚನಾಲಯ

ಗಳಿಗೆ ಹೋಗಿ ಕೃಷಿ ಸಂಬಂಧದ ಬರಹಗಳನ್ನೋದುತ್ತಿದ್ದ. ಹೊಸಕೃಷಿಕ ಪ್ರಯೋಗಗಳನ್ನು ಕುರಿತು ಜ್ಞಾನ ಸಂಗ್ರಹಿಸುತ್ತಿದ್ದ. ದಿಲ್ಲಿಗೆ ಸಮೀಪ ವಾಗಿದ್ದ ಒಂದೆರಡು ಪ್ರಯೋಗ ಕ್ಷೇತ್ರಗಳಿಗೂ ಹೋಗಿಬಂದ. ಯುರೋಪು ಅಮೇರಿಕಾ ದೇಶಗಳಲ್ಲಿ ದಿನಂದಿನ ನಡೆಯುತ್ತಿರುವ ಸಂಶೋಧನೆಗಳನ್ನು ಕಂಡು ಆಶ್ಚರ್ಯ, ಕುತೂಹಲಭರಿತನಾದ. ಜನರು ಪ್ರತಿಯೊಂದು ಬಗೆಯ ಅಭಿವೃದ್ಧಿಗೂ ಸರಕಾರದ ಮುಖವನ್ನೇ ನೋಡುತ್ತಿರುವ ದೃಷ್ಟಿ ಅವನಿಗೆ ಸಮವೆನಿಸಲಿಲ್ಲ. ತಮ್ಮ ತಮ್ಮ ಜೀವನವನ್ನು ಸುಧಾರಿಸುವ ವಿಷ ಯದಲ್ಲಿ, ನಮ್ಮ ಉದ್ಯೋಗ ಕೃಷಿಗಳ ಬೆಳವಣಿಗೆಗಳ ವಿಷಯದಲ್ಲಿ ಜನರು ಪ್ರಯತ್ನ, ಸಾಹಸಗಳನ್ನು ಮಾಡದೆಹೋದರೆ, ದೇಶ ಮುಂದುವರಿಯ ಲಾರದೆಂದು ಮನಗಂಡ. ತನ್ನ ಮುಂದಿನ ಜೀವನ–ಜೀವಾವಧಿಯ ಒಂದು ದೀರ್ಘ ಪ್ರಯತ್ನವಾದರೂ, ತಾನು ಅದನ್ನು ಬಿಡಬಾರದು–ಎಂಬ ಹಟ ವನ್ನು ಮನಸ್ಸಿನಲ್ಲಿ ಹಿಡಿದ. ಅಷ್ಟಕ್ಕೆ ಸೀತಾರಾಮನಿಂದ ಕರೆ ಬಂದಿತು. ಬಂಗಾಡಿಗೆ ಹೊರಡಲು ಉದ್ಯುಕ್ತನಾದ. ಹೋಗಿಬರುತ್ತೇನೆಂದು ತಂದೆ ತಾಯರಿಗೆ ಹೇಳಲು ನಿಂತರೆ–ಅವರಿಂದ ಹರಕೆಯ ಮಾತುಗಳು ಬರುವ ಬದಲು, ನಿರಾಶಾಜನಕವಾದ ಹಿರಿತನದ ಅಧಿಕಾರದ ಮೂದಲಿಕೆಬಂದಿತು. ಕೇಳಿ ಸುಮ್ಮನಾದ. “ಪ್ರಾಯಶಃ ಅವರ ದೃಷ್ಟಿಯಲ್ಲಿ ನಾನೊಬ್ಬ ಹುಚ್ಚ ನಾಗಿ ಕಾಣಿಸುತ್ತಿದ್ದೇನೆ” ಎಂದೆನಿಸಿತು. ಹೋಗುವ ಮೊದಲು ವರಲಕ್ಷ್ಮಿ ಯನ್ನು ಕಂಡುಬರಬೇಕೆಂದು ಅನಿಸಿದರೂ ಹೋಗುವ ಧೈರ್ಯವಾಗಲಿಲ್ಲ. ಇದ್ದ ನೆನಪನ್ನು ಮರೆಯುವುದೊಳಿತೆಂದು ಕಂಡಿತು. ದಿಲ್ಲಿಯಿಂದ ಹೊರಟು ಮುಂಬಯಿಗೆ ಬಂದ. ತನ್ನ ಮುಂದಿನಕ್ಷೇತ್ರಕ್ಕೆ ಬೇಕಾಗಬಹುದಾದ ಡಿ.ಡಿ. ಟಿ. ಯಂಥ ಮದ್ದು, ಮುಳ್ಳುಬೇಲಿ–ಮೊದಲಾದುವುಗಳ ಮಾಹಿತಿ ಸಂಗ್ರ ಹಿಸಿದ. ಅಲ್ಲಿಂದ ಪುಣೆಗೆ. ಪುಣೆಯಲ್ಲಿ ಒಂದು ಸರಕಾರಿ ಕೃಷಿಕ ಕೇಂದ್ರ ವಿದೆ ಎಂದು ಕೇಳಿದ್ದ. ಅಲ್ಲಿಗೆ ಹೋಗಿ, ಅಲ್ಲಿನ ಪ್ರಯೋಗಗಳನ್ನು ಕಂಡು, ಮುಂದೆ ಹೊರಟುದೇ ಆಗುಂಬೆಗೆ. ಆಗುಂಬೆಯ ಬೆಟ್ಟವನ್ನಿಳಿದ; ಸೋಮೇಶ್ವರಕ್ಕೆ ಬಂದ. ನೇರಾಗಿ ಸೀತಾರಾಮನ ಮನೆಗೇ ಹೋದ. ಅವನಿಗೆ ತಂತಿಯನ್ನೂ ಕೊಟ್ಟಿರಲಿಲ್ಲ, ಪತ್ರವನ್ನೂ ಬರೆದಿರಲಿಲ್ಲ. ಅವನ ಮನಸ್ಸು ತೆರತೆರನ ಯೋಚನೆಗಳಿಂದ ತನ್ನ ಮುಂದಿನ ಸಮಸ್ಯೆಗಳನ್ನು

ತರ್ಕಿಸುವುದರಲ್ಲೇ ಅಶಾಂತವಾಗಿತ್ತು. ಪರಿಚಿತವಾದ ಸ್ಥಳಕ್ಕೆ ಹೋಗು ವಾಗ ತಂತಿ, ಕಾಗದಗಳ ಸಂಭ್ರಮವೇಕೆ?–ಎಂದು ಎಣಿಸಿದ. ಮುದ್ರಾಡಿಗೆ ಹೋಗುತ್ತಲೇ ಸೀತಾರಾಮನ ನಗುವಿನ ಸ್ವಾಗತ ದೊರೆಯಿತು. ಆತನಿಂದ ಹಿರಿಯ ತೋಳ್ಪಾಡಿತ್ತಾಯರಿಗೂ ಶಂಕರನ ಯೋಚನೆ ತಿಳಿದಿತ್ತು. ಅದ ರಿಂದೊಂದು ಅಂಜಿಕೆಯೂ ಆಗಿತ್ತು. ಶಂಕರನ ಹುಚ್ಚು ತಮ್ಮ ಮಗನಿಗೂ ಹಿಡಿದೀತೋ-ಎಂಬ ಬೆದರಿಕೆ. ಆದುದರಿಂದಲೇ ಏನೋ, ಅವರು ಶಂಕರನ ಉದ್ದೇಶವನ್ನು ಕುರಿತು ಹೆಚ್ಚಿನ ಆದರ ತೋರಿಸಲಿಲ್ಲ. ಕೃಷಿಯನ್ನು ಕುರಿತು ನಿರಾಶೆಯ ಮಾತುಗಳನ್ನೇ ಆಡಿದರು. ಸ್ವತಃ ಕೃಷಿಕರಾದ ಅವರೇ ಕೃಷಿಯನ್ನು ಕುರಿತು ಆ ತೆರನಾಗಿ ಮಾತನಾಡಿದ್ದು ಶಂಕರನಿಗೆ ಏನೊಂದೂ ಉತ್ಸಾಹವನ್ನು ಕೊಡಲಿಲ್ಲ.

ಮುಂದಿನ ಹದಿನೈದು ದಿನಗಳ ಕಾಲ ಗೆಳೆಯರಿಬ್ಬರಿಗೂ ಬಿಡುವಿರ ಲಿಲ್ಲ. ಕೃಷಿಯ ವಿಚಾರಕ್ಕೆ ಅದು ತಕ್ಕ ವೇಳೆಯಲ್ಲ. ಸೀತಾರಾಮನ ಮದು ವೆಯ ಅವಸರದ ದಿನಗಳವು. ಅವುಗಳಲ್ಲೊಂದು ದಿನ ಶಂಕರ ಶಾಲೆಗೆ ಹೋಗಿ ಉಪಾಧ್ಯಾಯ ಭಂಗರ ದರ್ಶನಮಾಡಿಕೊಂಡು ಬಂದ. ಬಂಗಾಡಿ ಯನ್ನು ಕುರಿತು ಇಬ್ಬರೂ ಬಹು ಹೊತ್ತು ಸಂಭಾಷಿಸಿದರು. ಶಂಕರನಿಗೆ ಕನ್ನಡ ನುಡಿಯುವುದಕ್ಕೆ ತೊಡಕಾಗಿತ್ತು ; ಭಂಗರಿಗೆ ಇಂಗ್ಲಿಷ್ ತೊಡ ಕಾಗಿತ್ತು. ಇಬ್ಬರೂ ಸೋಲನ್ನೊಪ್ಪಿಕೊಳ್ಳದೆ ಸಂಭಾಷಣೆ ನಡೆಸಿದರು. ಸೀತಾರಾಮನಿಗೆ ಸಾಕಷ್ಟು ಓಡಾಟವಿತ್ತು. ಹೀಗಾಗಿ ವಿರಾಮದ ವೇಳೆ ಕಳೆಯುವುದಕ್ಕೆ ಜತೆಗಾರನೊಬ್ಬ ಬೇಕು. ಭಂಗರು ಅಂಥ ಸ್ನೇಹಿತ ರಾದರು. ನಿತ್ಯ ಸಂಜೆ ಅವರು ಮನೆಗೆ ಹೋಗುವಾಗ ಶಂಕರ ತುಸು ದೂರ ಹೋಗಿ ಬರುತ್ತಿದ್ದ. ಆತನ ಸಹವಾಸದಿಂದ ಉಪಾಧ್ಯಾಯರಲ್ಲಿ ಒಂದು ಆಶೆಯ ಕನಸು ಹುಟ್ಟಿತು. ಅವರೆಂದರು "ಎಲ್ಲಿಯಾದರೂ ನೀವು ತೆಗೆದು ಕೊಂಡ ಕೆಲಸ ಯಶಸ್ವಿಯಾಗಬೇಕು—ಆ ಮೇಲೆ ನಿಮ್ಮ ಬೆನ್ನಿಗೆ ನಾನು. ಆಮೇಲೋ—ಹಾಳು ಮಾಸ್ತರಿಕೆಗೆ ರಾಜಿಕೊಟ್ಟು ಬಂಗಾಡಿಗೇನೆ ಬಂದು ಬಿಡುತ್ತೇನೆ. ನನಗೂ ಒಂದಿಷ್ಟು ಚೂರು ಪಾರು ಭೂಮಿ ಇದೆ. ನೀವು ಬಂಜರು ಭೂಮಿಯನ್ನು ಸಾಗುವಳಿ ಮಾಡುವುದಾದರೆ, ನಾನು ಗೇಣಿಗೆ ಕೊಟ್ಟ ಆಸ್ತಿಯಿಂದ ಹೆಚ್ಚಿನ ಹುಟ್ಟುವಳಿ ಏಕೆ ಗಳಿಸಬಾರದು" ಎಂದು

ನಗುತ್ತ ಹೇಳಿದರು. ಅದಕ್ಕೆ ಶಂಕರ "ಈ ನಿಮ್ಮ ಕೆಲಸಕ್ಕಿಂತ ಅದೆಷ್ಟೋ ಲೇಸಲ್ಲ! ನಾನಾಗಿದ್ದರೆ ಎಂದೋ ಆ ಕೆಲಸ ಮಾಡುತ್ತಿದ್ದೆ" ಎಂದು ಉತ್ತರಿಸಿದ.

* * * *

ಸೀತಾರಾಮನ ಲಗ್ನದ ಸಮಾರಂಭ ಸಂತೋಷದಿಂದಲೇ ನಡೆಯಿತು. ಮದುವೆಯ ಕೆಲಸಗಳೆಲ್ಲ ಮುಗಿದ ಮೇಲೆ, ಮದುವೆಗೆ ಬಂದಿದ್ದ ಎಳಚಿತ್ತಾಯರನ್ನು ಕರೆದುಕೊಂಡು ಶಂಕರನೊಂದಿಗೆ ಆತ ಬಂಗಾಡಿಗೆ ಮೂರನೆಯ ಪಯಣ ಬೆಳೆಸಿದ. ಈ ಬಾರಿ ಅವರಿಬ್ಬರೂ ಎಳಚಿತ್ತಾಯರ ಅತಿಥಿಗಳಾಗಿಯೇ ಉಳಿದರು. ಸೀತಾರಾಮ ಅವರೊಡನೆ ಶಂಕರನಿಗೆ ಮುಂದಿನ ಸಹಾಯವನ್ನೆಲ್ಲ ಮಾಡಬೇಕೆಂದು ಕೇಳಿದಾಗ "ಯಾಕೆ, ಅವರ ನಂಟರೇ ಇದ್ದಾರಲ್ಲ, ಶ್ಯಾನುಭಾಗರು" ಎಂದುದಕ್ಕೆ "ನೆಂಟರಿದ್ದರೆ ಇರಲಿ. ಅವರು ಸಹಾಯಮಾಡಿದರೆ ಆಗಬಹುದು. ಆದರೆ ಮಾಡುವ ಹಾಗಿಲ್ಲ. ಆದುದರಿಂದಲೇ ನಿಮ್ಮ ಸಹಾಯವನ್ನು ಕೇಳುತ್ತಿದ್ದೇನೆ" ಎನ್ನಬೇಕಾಯಿತು. ಅದಕ್ಕೆ ಎಳಚಿತ್ತಾಯರು ಒಪ್ಪಬೇಕಾಯಿತು. ತಮ್ಮ ಊರು ಹಳೆಯ ವೈಭವವನ್ನು ತಿರುಗಿ ಪಡೆಯುವುದು ಸಾಧ್ಯವಾದರೆ, ಅದನ್ನೆಂದಾದರೂ ಅವರು ಬಯಸದಿದ್ದಾರೆಯೇ ?

ಬಂದ ದಿನವೇ ಶಂಕರ ತಾನೊಬ್ಬನೇ ರಂಗರಾಯರ ಮನೆಗೆ ಹೋದ. ರಂಗರಾಯರು ಮನೆಯಲ್ಲಿರಲಿಲ್ಲವಾದುದರಿಂದ ಮಾತುಕತೆಗೆ ಅನುಕೂಲವೆ ಆಯಿತು. ಅವನ ಅಜ್ಜಿಗಂತೂ ಆದ ಸಂತೋಷ ಅಷ್ಟಿಷ್ಟಲ್ಲ. "ಮಗು, ನೀನು ಇನ್ನೊಮ್ಮೆ ಬರುತ್ತೀ ಎಂದಾಗ ನಾನೇ ನಂಬಿರಲಿಲ್ಲ. ರಂಗ ಏನೋ ಜಾಗ ಅಳೆಯುವುದಕ್ಕೆ ಗೊಣಗುಟ್ಟುವುದನ್ನು ಕಂಡು, ನೀನು ಬರುತ್ತೀ ಎಂಬುದನ್ನು ಕೇಳಿ, ನನಗೆ ತುಂಬ ಸಂತೋಷವಾಯಿತು. ಅಪ್ಪ, ಅಮ್ಮ ಎಲ್ಲರೂ ಚನ್ನಾಗಿದ್ದಾರೆಯೇ? ಎಂದು ಬಂದೆ?" ಎಂದು ಕೇಳಿದಳು. ಅವರ ವಿಚಾರವನ್ನು ತಿಳಿದುಕೊಂಡು, ಮುದುಕಿ ತನಗಾದ ಸಂತೋಷವನ್ನು ಇನ್ನಷ್ಟು ಬಿಚ್ಚಿಹೇಳಿದಳು. "ನಮ್ಮ ರಂಗನಿಗೆ ನೀನು ನಿನ್ನ ಹಿರಿಯರ ಭೂಮಿ ಮಾಡಿಕೊಂಡದ್ದು ಏನೇನೂ ಸಮಾಧಾನವಿಲ್ಲ. ಬೈಯುತ್ತಿದ್ದಾನೆ ಅದಕ್ಕೆಲ್ಲ. ನಿನಗೆ ಮರುಳು ಅನ್ನುತ್ತಿದ್ದಾನೆ. ಅವನೆನ್ನಲಿ; ನೀನದನ್ನಾವುದನ್ನೂ

ಕಿವಿಗೆ ಹಾಕಿಕೊಳ್ಳಬೇಡ. ಒಳ್ಳೆಯ ಕೆಲಸಮಾಡುತ್ತಿದ್ದೀಯೆ. ಹಿರಿಯರ ಪುಣ್ಯದಿಂದ ನಿನಗೇನೂ ಹಾನಿಯಾಗಲಾರದು. ಆ ಸ್ಥಳ ಖಂಡಿತಕ್ಕೂ ಊರ್ಜಿತಕ್ಕೆ ಬಂದೀತು, ಬರಬೇಕು" ಎಂದು ಮನದಣಿಯೆ ಹರಸಿದಳು. ಆ ದಿನ ಶಾಂತು ಜ್ವರದಿಂದ ಹಾಸುಗೆ ಹಿಡಿದಿದ್ದಳು. ಅವಳನ್ನು ನೋಡಲು ಶಂಕರ ಹೋದಾಗ, ಮುದುಕಿ ಒಳಕ್ಕೆ ಹೋಗಿ, ಶ್ರೀಮತಿಯ ಕಿವಿಯಲ್ಲಿ "ಶಂಕರ ಬಂದಿದ್ದಾನೆ. ಒಂದಿಷ್ಟೇನಾದರೂ ಮಾಡು" ಎಂದು ಹೇಳಿ ಬಂದಳು. ಆಕೆ ಅವಸರದಲ್ಲಿ ಒಂದಿಷ್ಟು ಅವಲಕ್ಕಿ ಒಗ್ಗರಿಸಿ, ಕಾಫಿ ಮಾಡಿಕೊಂಡು ಅವನ ಮುಂದೆ ತಂದಿರಿಸಿದಳು. ದಿಲ್ಲಿಗೆ ಬಂದ ಕಾಗದದ ನೆನಪಿನಿಂದ ಶಂಕರನ ಗಮನ ಶ್ರೀಮತಿಯ ಕಡೆಗೆ ಹೋಯಿತು. ಆಕೆ ತಲೆ ತಗ್ಗಿಸಿಕೊಂಡು ತನ್ನ ಕೆಲಸಕ್ಕೆ ಹೊರಟುಹೋದಳು.

ಉಪಹಾರ ಸ್ವೀಕರಿಸುತ್ತ ಶಂಕರ ಅಜ್ಜಿಯ ಮುಂದೆ ತನ್ನ ಆಸೆಗಳನ್ನು ತೋಡಿಕೊಂಡ. "ಅಜ್ಜಿ, ಏನೂ ಆಗಲಿ, ನನ್ನ ಮನಸ್ಸಿನ ಆಸೆ ತಡೆಯದ್ದಕ್ಕೆ ಈ ಊರಿಗೆ ಬಂದಿದ್ದೇನೆ. ಈ ನೆಲದಿಂದಲೇ ನಾನು ಒಳ್ಳೆಯವನಾಗಬೇಕು. ಇಲ್ಲವೆ ಹಾಳಾಗಬೇಕು. ನನ್ನ ತಂದೆ ತಾಯಿಗಳಿಗೆ ನಾನು ಬರುವುದು, ಇಲ್ಲಿ ಕುಳಿತಿರುವುದು, ಏನೇನೂ ಸಮಾಧಾನವಿಲ್ಲ. ಆದರೆ ನಮ್ಮ ಕುಟುಂಬಕ್ಕೆ ಹಿರಿಯಳಾದ ನಿನ್ನೊಬ್ಬಳ ಕೃಪೆ ನನ್ನ ಮೇಲಿದ್ದರೆ ಸಾಕು" ಎಂದು ಉಪಹಾರದ ಎಡೆಯಲ್ಲೇ ಆಕೆಗೆ ವಂದಿಸಿದ. ಉಪಹಾರ ಮುಗಿಯಿತು. ಹೊರಡಲು ಎದ್ದ. "ಊಟಕ್ಕೆ ಬರುತ್ತೀಯಲ್ಲ" ಎಂದಳು ಆಕೆ.

"ಊಟಕ್ಕೆ ಎಳಚಿತ್ತಾಯರಲ್ಲೇ ಏರ್ಪಾಡುಮಾಡಿದ್ದೇನೆ. ಅದೂ ಸ್ವಲ್ಪ ದಿನಗಳಿಗೆ ಮಾತ್ರ. ಅನಂತರ ಜಾಗಕ್ಕೇನೆ ಹೋಗಿ ಒಂದು ಗುಡಿ ಕಟ್ಟಿಕೊಂಡಿರಬೇಕೆಂಬ ಇಚ್ಛೆ ನನಗೆ. ನನಗೊಂದು ಗುಡಿಸಲು, ಹಾಗೆಯೇ ಕೆಲಸದವರಿಗೆ ಒಂದೆರಡು ಗುಡಿಸಲು ಕಟ್ಟಿಕೊಳ್ಳಬೇಕು. ಆಗಾಗ ಬಂದು ಹೋಗುತ್ತೇನೆ—ಆಗದೆ?"

ಮುದುಕಿ ತುಸು ಹೊತ್ತು ಯೋಚಿಸಿದಳು: "ಅದೇ ಒಳ್ಳೆಯದೆಂದು ಕಾಣುತ್ತದೆ. ರಂಗನ ಕರಕರೆಯನ್ನು ಕೇಳಿ ನಾಳೆ ನಿನಗೆ ಬೇಸರ ಬರಬಾರದಲ್ಲ. ದೂರವಿರುವುದೇ ಒಳ್ಳೆಯದು, ಶಾಂತು ಹುಷಾರಾದರೆ,

ನಾನೂ ಅಲ್ಲಿಗೆ ಬಂದರೂ ಬಂದೇನೆ. ಅಂತು ದಿನ ಬಿಟ್ಟು ದಿನವಾದರೂ ಬಂದು ನೋಡಿಕೊಂಡು ಹೋಗು " ಅಂದಳು.

ಅದಕೊಪ್ಪಿಗೆಯಿತ್ತು ಶಂಕರ ಅಲ್ಲಿಂದ ಹೊರಟ. ಅಲ್ಲಿಂದ ಗೆಳೆಯನನ್ನೂ, ಎಳಚಿತ್ತಾಯರನ್ನೂ ಕರೆದುಕೊಂಡು ಮುತ್ತಯ್ಯಗೌಡನ ಭೇಟಿಗೆ ಹೋದ. ಮುದುಕ ಮನೆಯ ಅಂಗಳದಲ್ಲಿ ಕುಳಿತು ತೆಂಗಿನ ಸೋಗೆಯೊಂದನ್ನು ಚಾಪೆಯಾಗಿ ಹೆಣೆಯುತ್ತಿದ್ದ. ಕಿರಿಯ ಹುಡುಗನೊಬ್ಬ ಅವನಿಗೆ ಸಹಾಯಕನಾಗಿದ್ದ. ಎಳಚಿತ್ತಾಯರು ಅವನನ್ನು ಕಂಡು "ಮುತ್ತಾ, ನಿನ್ನ ಹಳೆಯ ಧನಿಗಳು ಬಂದೇ ಬಂದರಲ್ಲ. ಮೂಡೋಡಿಯಲ್ಲಿರುವುದಕ್ಕೇ ಬಂದಿದ್ದಾರೆ" ಎನ್ನುವಾಗ ಅವರ ದೃಷ್ಟಿ ಚಿಕ್ಕ ಹುಡುಗನ ಕಡೆಗೆ ಹರಿದು "ಇದು ಯಾರು? ನಿನ್ನ ಮರಿಮಗುವೋ?" ಎಂದು ಕೇಳಿದರು.

ಮುತ್ತಯ್ಯ ಎದ್ದು ನಿಂತ. ಧನಿಗಳನ್ನು ಕಂಡು ತುಂಬ ಪ್ರಸನ್ನನಾದ. ಅವರೆಲ್ಲರಿಗೂ ವಂದಿಸಿದ. ಮರಿಮಗನ ವಿಚಾರ ಹೇಳತೊಡಗಿದ: "ಇಲ್ಲ ಅನ್ನುವುದಕ್ಕೆ ಇದೊಂದು ಉಳಿದುಕೊಂಡಿದೆ. ಮೊಮ್ಮಗಳ ಮಗು, ಅದರ ಮಾವನ ಮನೆಯಲ್ಲಿತ್ತು. ನೋಡಲಿಕ್ಕೆ ಆಸೆಯಾಗಿ ಹೋಗಿದ್ದೆ. ನಾಲ್ಕು ದಿನಗಳ ಮಾತಿಗೆಂದು ಕರೆದುಕೊಂಡು ಬಂದಿದ್ದೇನೆ" ಎಂದ. ಅನಂತರ ಧನಿಗಳ ಕಡೆಗೆ ಮೋರೆಮಾಡಿದ. "ನನ್ನಿಂದೇನಾಗಬೇಕು ಹೇಳಿ. ಆ ದಿನ ಶ್ಯಾನುಭಾಗರಿಗೆ ಜಾಗವನ್ನು ಸಮನಾಗಿ ತೋರಿಸಿಕೊಟ್ಟಿದ್ದೇನೆ. ನೀವು ಮೂಡೋಡಿಗೆ ಬರುವುದನ್ನು ಕೇಳಿ ಹುಚ್ಚಾಗಿದೆ ನನ್ನ ಮನಸ್ಸು. ಮುದುಕನಾದೆ, ಪ್ರಾಯವಾಯಿತು. ಇನ್ನು ತಿಂಗಳಲ್ಲಿ ಸತ್ತರೂ ಸಾಯಬಹುದು, ವರ್ಷದಲ್ಲಿ ಸತ್ತರೂ ಸಾಯಬಹುದು. ಆದರೆ ಸಾಯುವ ಮೊದಲು ನಿಮ್ಮ ಹಿರಿಯರ ಉತ್ಪನ್ನವನ್ನುಂಡ ಋಣ, ನಿಮ್ಮ ಸೇವೆಮಾಡಿ ಸಲ್ಲಿಸಿದರೆ, ನನಗೊಂದು ಸಮಾಧಾನ" ಎಂದ.

ಆ ಮುಪ್ಪಿನ ಮುದುಕ ತನ್ನ ಹಿರಿಯರ ಕಡೆಗೆ ಇರಿಸಿಕೊಂಡ ಭಕ್ತಿ ಆದರಗಳಿಗಿಂತ ಹೆಚ್ಚಿಗೆ ಸಲ್ಲಿಸುವ ಋಣವೇನಿದೆ—ಎಂದು ತೋರಿತು ಶಂಕರನಿಗೆ.

ಅಷ್ಟಕ್ಕೆ ಎಳಚಿತ್ತಾಯರು ಮುತ್ತಯ್ಯಗೌಡನಿಗೆ ಧನಿಗಳ ಮುಂದಿನ

ಯೋಚನೆಗಳನ್ನೆಲ್ಲ ವಿಸ್ತರಿಸಿ ಹೇಳಿದರು. "ಆ ಸ್ಥಳದಲ್ಲಿ—ಕೂಡಲೇ ಅವರು ಇರುವುದಕ್ಕೆ ಒಂದು ಸಣ್ಣ ಮನೆ ಆಗಬೇಕಂತೆ, ಮಳೆ ಬೀಳುವುದಕ್ಕಿಂತ ಮೊದಲು ನಾಲ್ಕು ಮಂದಿ ಒಕ್ಕಲುಗಳು ಬಂದು ನಿಲ್ಲುವುದಕ್ಕೆ ಉದ್ದವಾದ ಒಂದು ಕೊಟ್ಟಿಗೆಯಾಗಬೇಕಂತೆ. ಅಲ್ಲದೆ ನಾಲ್ಕೆಂಟು ಮಂದಿ ಕೆಲಸದ ಆಳುಗಳನ್ನು ಹುಡುಕಿಕೊಡಿ ಅನ್ನುತ್ತಿದ್ದಾರೆ. ಸಂಬಳವನ್ನೇನೋ ಅವರು ಕೊಡುತ್ತಾರೆ. ಆದರೆ ಜನರನ್ನು ಒಟ್ಟುಮಾಡಲು ಸುಲಭವೇ? ನನ್ನಿಂದಾದ ಪ್ರಯತ್ನ ಮಾಡುತ್ತೇನೆ–ಅಂದಿದ್ದೇನೆ. ನಿನ್ನ ಕೆಲಸ ಎಂದರೆ ಮೊದಲು ನೀನು ರಾಯರು ಬಂದು ನಿಲ್ಲಲಿಕ್ಕೆ ಪಸಂದವಾದ ಒಂದು ಸ್ಥಳ ತೋರಿಸು. ಸಣ್ಣ ಗುಡಿಸಲು ಸಾಕು ಅನ್ನುತ್ತಾರೆ ಅವರು–ಮಣ್ಣಿನ ಪಾಯ ಮಣ್ಣಿನದೇ ಗೋಡೆ; ಮೇಲೆ ಹುಲ್ಲಿನ ಮಾಡು. ಫಕ್ಕನೆ ಆಚಾರಿಗಳು ಕೆಲಸಕ್ಕೆ ಸಿಗುತ್ತಾರೆಂಬ ಧೈರ್ಯವಿಲ್ಲ. ಸಿಕ್ಕಿದರೆ ಸಮನಾದ ಮನೆಯ ಕೆಲಸ ತೊಡಗಬಹುದು" ಎಂದು ಅನ್ನುವಾಗ, ಮುತ್ತಯ್ಯ ಎಳಚಿತ್ತಾಯರ ಮುಖವನ್ನೇ ನೋಡಿ ಹೇಳಿದ: "ಧನಿಗಳೇ, ಒಂದು ದೇವಸ್ಥಾನವನ್ನು ಕಟ್ಟಿಸಿದಷ್ಟೇ ಪುಣ್ಯದ ಕೆಲಸ ಇದು. ಯಾರೂ ಧೈರ್ಯ ಮಾಡದ ಕೆಲಸ; ಮಾಡಲಾರದ ಕೆಲಸ. ಅದನ್ನು ನೀವು ಯೋಚಿಸಿದ್ದೀರಿ. ಈ ಊರಿಗೇನೆ ಒಳ್ಳೆಯದಾಗುವ ದಿನ ಬಂದಿದೆ ಎಂದು ನನಗೆ ಕಾಣುತ್ತದೆ. ಇದನ್ನೆಲ್ಲ ಕಂಡು ಇಂದೋ ನಾಳೆಯೋ ಸಾಯುವ ಮುದುಕನಾದ ನನಗೆ ಎರಡು ದಿನ ಬದುಕಬೇಕೆಂಬ ಆಸೆಯಾಗಿದೆ. ಜಾಗ ಹೆಜ್ಜೆಹೆಜ್ಜೆಯೂ ಗೊತ್ತಿದ್ದದ್ದೆ. ನೀವು ಒಳ್ಳೆಯ ನಕ್ಷತ್ರ ದಿನ ಗೊತ್ತುಮಾಡಿ. ಆ ದಿನ ಮನೆಯ ಪಾಯ ಹಾಕುವ" ಎಂದು ಉಪದೇಶ ಮಾಡಿದ. ದಿನ, ನಕ್ಷತ್ರಗಳ ವಿಚಾರದಲ್ಲಿ ನಗರದಲ್ಲಿ ಬೆಳೆದ ಶಂಕರ ತೀರ ಅನಭಿಜ್ಞ, ಆದರೆ ಮುತ್ತಯ್ಯ ಗೌಡನ ಪ್ರತಿಯೊಂದು ಅಪೇಕ್ಷೆಯಂತೆಯೂ ವರ್ತಿಸಲು ಆತ ಸಿದ್ಧನಾಗಿದ್ದ.

ಮೂರು ದಿವಸಗಳಲ್ಲಿಯೇ ಒಳ್ಳೆಯ ಲಗ್ನವಿತ್ತು. ಆದುದರಿಂದ ಸೀತಾರಾಮನೂ ಅಲ್ಲಿಯ ತನಕ ಬಂಗಾಡಿಯಲ್ಲಿ ಉಳಿದ. ಮುತ್ತಯ್ಯ ಗೌಡನನ್ನು ಮೂಡೋಡಿಗೆ ಕರೆದುಕೊಂಡು ಹೋದರು. ಆತ ಅವರನ್ನು ಆ ಬೆಟ್ಟವನ್ನೆಲ್ಲ ಸುತ್ತಿಸಿ, ಹಳೆಯ ಮನೆಯಿದ್ದ ತಾವನ್ನು ತೋರಿಸಿ

ಕೊಂಡು ಬಂದ. ಅಲ್ಲಿಯೇ ಎಳಚಿತ್ತಾಯರು ಸೂಚಿಸಿದ ಮುಹೂರ್ತದಲ್ಲಿ ಎಲ್ಲರೂ ಸೇರಿ ಒಂದು ಕಂಬವನ್ನು ನಟ್ಟರು. ಅದಕ್ಕೆ ಸಿಂಗಾರ ಹೂವನ್ನೂ, ಮಾವಿನ ಸೊಪ್ಪನ್ನೂ ಬಿಗಿದು ಅಲಂಕರಿಸಿದರು. ಎಳಚಿತ್ತಾಯರು ಭಕ್ತಿಪೂರ್ವಕವಾಗಿ ಆ ಸ್ಥಳದಲ್ಲಿ ಗಣಹೋಮ ಮಾಡಿದರು. ಪೂಜೆ ಆರತಿಗಳು ನಡೆದು ಸೇರಿದ ನಾಲ್ಕು ಮಂದಿಯಲ್ಲಿ ಪಂಚಕಜ್ಜಾಯ ಹಂಚಿದರು. ಮುತ್ತಗೌಡ ಸ್ವಲ್ಪ ಕಜ್ಜಾಯ ಬಾಯಿಗೆ ಹಾಕಿಕೊಂಡು, ಉಳಿದುದನ್ನು ಮರಿಗೌಡನಿಗೆ ಕಟ್ಟಿಕೊಂಡು, ಹಳೆಯ ಕಥೆಯೊಂದನ್ನು ಹೇಳಿದ : "ಅಯ್ಯಾ ಇದೇ ಜಾಗ ಆಗಲೆಂದು ಯಾಕೆ ಗೊತ್ತಾಯಿತೇ? ನನಗೆ ಎಷ್ಟೆಂದರೂ ಶಾಂತಮೂರ್ತಿ ಧನಿಗಳ ನೆನಪು ಮರವೆಯಾಗದು. ನಾನಾಗ ಹುಡುಗ. ಬಹಳ ಸಣ್ಣವ. ಆವರಿಗೆ ೫೦ ವಯಸ್ಸಾಗ ಬಹುದು. ಈ ಕಂಬ ನಟ್ಟತಾವು, ಅವರು ಕುಳಿತುಕೊಳ್ಳುವ ಹೆಬ್ಬಾಗಿಲಿನ ತಾವಾಗಿತ್ತು. ಇಲ್ಲಿಯೇ ಹೆಬ್ಬಾಗಿಲಿನ ಕಂಬಕ್ಕೊರಗಿಕೊಂಡು ಮಾತನಾಡಿಸುತ್ತಿದ್ದ ಸ್ಥಳ. ಎಂಥ ದೊಡ್ಡ ಹೆಬ್ಬಾಗಿಲಿತ್ತು ಬಲ್ಲಿರಾ ಇಲ್ಲಿ? ಹರಡಿದರೆ ಈಗಲೂ ಇಲ್ಲಿ ಹಳೆಯ ಕಲ್ಲುಗಳು ಸಿಕ್ಕಿಯಾವು. ಮರ, ಮೋಪು ಮಾಯವಾಯಿತು. ಮಾಯ ಅಂದರೇನು ? ಭೂಮಿ ಎರಡೆರಡು ಸಾರಿ ಕೈ ತಪ್ಪಿತು. ಕೊಂಡವರು ಅಲ್ಲಿ ಬಂದಿರಬಾರದು—ಎಂಬ ಹೊಟ್ಟೆಯುರಿಯಿಂದ ಆವರ ಭಾವನೇ ಅದನ್ನು ಸುಡಿಸಿದರು. ಮಧ್ಯರಾತ್ರಿಯಲ್ಲಿ ಬೆಂಕಿ ಹಾಕಿಸಿದರು, ಊರವರಿಗೆ 'ಕಲ್ಲುರ್ಟಿ ಭೂತದ ಕೆಲಸ' ಎಂದು ಹೇಳಿದರು. ಭೂತ ಅವರೇನೆ—ರಂಗಪ್ಪಯ್ಯ. ತಾವು ನುಂಗಬೇಕೆಂದು ಮಾಡಿದ್ದ ಭೂಮಿ, ಮನೆಗಳು ತನಗೆ ದಕ್ಕದೆ ಹೋಯಿತಲ್ಲ—ಎಂಬ ಸಂಕಟ. ದಕ್ಕಬೇಕು ಹೇಗೆ? ಅನ್ಯಾಯದ ದುಡ್ಡು, ಆಗ್ಗದ ದುಡ್ಡು, ಊರ್ಜಿತಕ್ಕೆ ಬಂದೀತೇ ಎಲ್ಲಾದರೂ ? ಇಷ್ಟು ವರ್ಷ ಉಳಿಯಿತು ಆ ಪಾಪದ ಕೊಳೆ. ಏನು ಶಾಪವಿತ್ತೋ ಅದೆಲ್ಲ ಇಂದು ಹೋಯಿತು. ಹಿಂದೇ ಇದೇ ತಾವಿನಲ್ಲಿ ಎಷ್ಟು ಪುಣ್ಯದ ಕೆಲಸಗಳಾಗಿರಲಿಲ್ಲ. ನೂರಾರು ಮಂದಿ ಬಂದು, ಉಂಡು ತೃಪ್ತಿ ಪಟ್ಟಂಥ ಮನೆ ಇದು. ಆ ಸತ್ತವರ ಕೃಪೆಯಿಂದ ಇನ್ನಾದರೂ ಈ ನೆಲ, ಈ ಮನೆ ನಾಲ್ಕು ಜನಗಳಿಗೆ ತುತ್ತು ಅನ್ನ ಕೊಡುವ ನೆಲವಾದೀತು,

ಮನೆಯಾದೀತು' ಎಂದ. ತೀರ ನಿರಾಶಾವಾದಿಯಾದ ಸೀತಾರಾಮನ ಮನಸ್ಸು ಸಹ ಗೌಡನ ಮಾತುಗಳಿಂದ ಮುಗ್ಧವಾಯಿತು. ಆ ಮಾತುಗಳನ್ನು ನಡೆಯಿಸುವುದೇ ಜೀವನಕ್ಕೆ ದೊಡ್ಡ ಆದರ್ಶ ಎಂದು ಅನಿಸಿತು. ಅಂಥ ಕೆಲಸವಾದರೆ ಅವನಿಗೂ ಸಂತೋಷವಾಗಲಾರದೆ ? ಆತ ತನ್ನ ನಿರಾಶೆಯನ್ನು ಮರೆತು " ಶಂಕರ, ನಿನ್ನ ಆಸೆ ಕೈಗೂಡಲಿ. ಮುತ್ತಯ್ಯನ ಮಾತು ಸತ್ಯವಾಗಲಿ " ಎಂದು ಆತನ ಭುಜವನ್ನು ತಟ್ಟಿದ. ಶಂಕರನ ಮನಸ್ಸಿನಲ್ಲಿ ತಾನೊಂದು ಪವಿತ್ರ ದೀಕ್ಷೆ ಹಿಡಿದಿದ್ದೇನೆ-ಎಂದು ತೋರಿತು,

## ಅಧ್ಯಾಯ ೮

ಬರಿಯ ಹದಿನೈದು ದಿನಗಳಲ್ಲಿ ಶಂಕರನ ಪರ್ಣಕುಟೀರ ಸಿದ್ಧವಾಯಿತು. ಎಳಚಿತ್ತಾಯರು ತಮ್ಮ ಒಕ್ಕಲುಗಳನ್ನು ಕೆಲಸಕ್ಕೆ ಕಳುಹಿಸಿ ಕೊಟ್ಟರು. ಕಟ್ಟಡಕ್ಕೆ ಬೇಕಾದ ಮರ, ಬೀಳಲು, ಸೋಗೆಗಳು ಎಲ್ಲ ಸಮೀಪದಲ್ಲಿದ್ದುದರಿಂದ ಕೆಲಸ ಚುರುಕಿನಲ್ಲಿ ಸಾಗಿತು. ನೆಲದ ಪಾಯವನ್ನು ಕೊಚ್ಚಿ, ಕಲಸಿ, ಗಟ್ಟಿಮಾಡಿದರು. ಕಂಬ ನಟ್ಟರು. ಬಿದಿರನ್ನೇ ಒಡೆದು ಹಾಳೆಗಳಾಗಿ ಮಾಡಿ ಕಿಟಿಕಿ ಗೋಡೆಗಳ ನಿರ್ಮಾಣವಾಯಿತು. ಮೇಲೆ ತೆಂಗಿನ ಸೋಗೆ, ಹುಲ್ಲುಗಳಿಂದ ಮಾಡು ಸಿದ್ಧವಾಯಿತು. ಕುಟೀರ ಸಂಪೂರ್ಣಗೊಂಡ ದಿವಸದಿಂದಲೇ ಶಂಕರ ಅದರಲ್ಲಿ ಒಕ್ಕಲು ಹೂಡಿದ. ಬೇಡವೆಂದರೂ ದಿನ, ರಾತ್ರಿಗಳನ್ನು ಆತ ಅಲ್ಲಿಯೇ ಕಳೆಯತೊಡಗಿದ. ಅಷ್ಟರಲ್ಲಿ ಸೀತಾರಾಮು ತನ್ನ ಊರಿಗೆ ಹೋಗಿ ಕಿರಿಯ ತಮ್ಮ ಕೃಷ್ಣನನ್ನು ಅವನ ಬೆಂಬಲಕ್ಕೆ ಕಳುಹಿಸಿದ. ಕೃಷ್ಣ ಹದಿನಾರು ವಯಸ್ಸಿನ ಚುರುಕಿನ ಹುಡುಗ. ಐದನೆಯ ಫಾರ್ಮಿನ ತನಿಕ ಓದಿದ್ದ. ಮುಂದೆ ಓದಿನಲ್ಲಿ ಆಸಕ್ತಿ ಉಂಟಾಗದೆ ಮನೆಗೆ ಮರಳಿದ. ಶಂಕರನ ಜತೆಗೆ ಯಾರಾದರೊಬ್ಬರು ಬೇಕು. ಆತನಿನ್ನೂ ಕನ್ನಡವನ್ನಾಗಲೀ ತುಳುವನ್ನಾಗಲೀ ಚೆನ್ನಾಗಿ ಮಾತನಾಡಲಾರ. ಆದುದರಿಂದ ಒಬ್ಬರಲ್ಲ ಒಬ್ಬರ ಸಹಾಯ ಅವನಿಗವಶ್ಯ— ಹೀಗೆಂದು ಯೋಚಿಸಿ, ತನ್ನ ತಮ್ಮನನ್ನೇ ಕಳುಹಿಸಿದ. ಹೇಗೂ ಆ ಹುಡುಗ ನಾಳೆ ಮನೆಯಲ್ಲಿ ಬೇಸಾಯಮಾಡಿಕೊಂಡಿರುವವ. ಶಂಕರನ ಪ್ರಯೋಗಗಳಲ್ಲಿ ಭಾಗಿಯಾದರೆ, ಅವನ ಜ್ಞಾನವು ಹೆಚ್ಚೀತು. ಆತ ಬಂದಂದಿನಿಂದ ಶಂಕರನಿಗೂ ಒಂದು ಸಂತೋಷವಾಯಿತು. ಎಷ್ಟೆಂದರೂ ಒಂಟಿ ಜೀವನ, ಬರಡು ಬಾಳು.

ಈಗ ದಿನ ನಿತ್ಯ ಶಂಕರ, ಕೃಷ್ಣ, ಮುತ್ತಯ್ಯ ಕೂಡಿಯೇ ಸಭೆ ಸೇರುತ್ತಾರೆ. ಗೌಡ ಒಂದೊಂದಾಗಿ ಆಲೋಚನೆಗಳನ್ನು ಹೇಳುತ್ತಾನೆ. ಹಿಂದಣ ಕಾಲದ ಅನುಭವ ಕೊಡುತ್ತಾನೆ. ಯಾವುದು ಎಲ್ಲಿತ್ತು ಹೇಗಿತ್ತು ಎಲ್ಲಿ ಯಾವುದು ಬೆಳೆಯುವುದು ಸಾಧ್ಯ. ಕಾಡು ಮೃಗಗಳಿಗೆ ಏನು ಮಾಡಬಹುದು—ಎಂದೆಲ್ಲ ಹೇಳುವುದಕ್ಕೆ ಜೀವಂತ ಸಾಕ್ಷಿಯಾದ ಅವನೊಬ್ಬನೇ

ಯೋಗ್ಯ. ಅವನಿಗೂ ಹೇಳುವುದಕ್ಕೆ ಬೇಸರವಿಲ್ಲ. ಶಂಕರನಿಗೂ ಕೇಳುವುದಕ್ಕೆ ಉದಾಸೀನತೆಯಿಲ್ಲ.

"ಅಯ್ಯಾ, ಮೊದಲಿನ ಕಾಲದಲ್ಲಿ ಜ್ವರದ ಪೀಡೆ ಇಷ್ಟೊಂದಿರಲಿಲ್ಲ. ಅಲ್ಲ-ನನ್ನ ಹಳೆಯಗಾಲದ ನೆನಪೇ ಕೆಟ್ಟಿದೆಯೋ ಏನೋ. ಇಷ್ಟಿರಲಾರದು ಎಂದೆನಿಸುತ್ತದೆ. ಈಗ ನೋಡಿ, ನನ್ನ ಮರಿ ಮಗು ಕುಕ್ಕಪ್ಪನಿಗೂ ಆಗಾಗ ಜ್ವರದ ಉಪದ್ರ."

"ಮುತ್ತಯ್ಯ, ಜ್ವರದ ವಿಚಾರ ಅಷ್ಟೊಂದು ಹೆದರಿಕೆಯದಲ್ಲ. ಔಷಧವಿದೆಯಲ್ಲ.".

"ಔಷಧವೇನು ? ತಣ್ಣೀರನ್ನು ಕುಡಿಯಬಾರದು, ಕಾಯಿಸಿದ ನೀರು ಕುಡಿಯಬೇಕು. ಅಲ್ಲದೆ ಹೋದರೂ—ನಮ್ಮೂರಿನ ನೀರು ಅಷ್ಟು ಒಳ್ಳೆಯದಲ್ಲ. ಜ್ವರ ಬಂದರೆ ಆಸ್ಪತ್ರೆಯಲ್ಲಿ ಕೊಯಿನು ಗುಳಿಗೆ ಕೊಡುತ್ತಾರೆ. ಅದನ್ನು ತಿನ್ನುವುದು ಅನ್ನುತ್ತೀರಾ ?"

"ತಿನ್ನಬೇಕು. ನಾವಿಬ್ಬರೂ ಆಗಾಗ ಅರ್ಧ ಕಾಲು ಮಾತ್ರೆಯನ್ನು ತಿನ್ನುತ್ತಿದ್ದೇವೆ."

"ಮೊದಲಿಗೇ ತಿಂದರೆ ಜ್ವರ ಬರುವುದಿಲ್ಲವೇ ?"

"ಬರುವ ಸಂಭವ ಕಡಿಮೆ. ಆದರೆ ಇಲ್ಲಿಂದ ಆ ಜ್ವರವನ್ನೇ ಓಡಿಸುವ ತನಕ ಆಳುಗಳನ್ನು ತಂದು ನಿಲ್ಲಿಸುವುದು ಕಷ್ಟ—ಎಂಬುದು ನನಗೆ ಗೊತ್ತು. ಅದನ್ನೂ ಯೋಚಿಸಿದ್ದೇನೆ. ನಮ್ಮ ಜಾಗದ ಸುತ್ತಲೆಲ್ಲ ನೋಡಿಕೊಂಡು ಬಂದಿದ್ದೇನೆ. ಸೊಳ್ಳೆ ಹೆಚ್ಚಿದ್ದರೆ ಜ್ವರ ಹೆಚ್ಚುತ್ತದೆ" ಎಂದು ಮಲೇರಿಯದ ಕತೆ ಹೇಳಿದ. ಡಿ. ಡಿ. ಟಿ. ಪ್ರಯೋಗದ ವಿಚಾರ ಹೇಳಿದ. ಯುದ್ಧ ಪ್ರದೇಶಗಳಲ್ಲಿ ಅದರಿಂದ ದೊರೆತ ಪ್ರಯೋಜನ ತಿಳಿಸಿದ. ಅದನ್ನು ಅಲ್ಲಿಗೂ ತರಿಸಿಕೊಂಡು ಉಪಯೋಗಿಸಬೇಕೆಂದು ಮಾಡಿದ. ನಿಶ್ಚಯವನ್ನೂ ಹೇಳಿದ. ಮುತ್ತಯ್ಯನಿಗೆ ತಿಳಿದವರು ಹೇಳಿದ ಈ ಮಾತು ಸುಳ್ಳು ಎಂದನಿಸಲಿಲ್ಲ. ಅಂಥ ಮದ್ದು ಬರಲಿ, ಅದರ ಪ್ರಯೋಜನವಾಗಲಿ—ಎಂಬ ಆಸೆಯನ್ನು ಅವನೂ ತಳೆದ.

ಆ ನೆಲದಲ್ಲಿ ಬಂದು ವಾಸಿಸುವ ಒಕ್ಕಲುಗಳಿಲ್ಲದೆ ಏನೂ ಕೆಲಸ ಮುಂದುವರಿಯದು—ಎಂಬುದನ್ನು ಬಲ್ಲ ಮುತ್ತಯ್ಯ ತನ್ನ ಮರಿಮಗನ

ಸಂಬಂಧಿಕರಿಗೆ ಹೇಳಿ ಕಳುಹಿಸಿದ. ಅವನ ಮೊಮ್ಮಗಳ ಮಗ ಕುಕ್ಕಪ್ಪ. ಕುಕ್ಕಪ್ಪ ತಂದೆತಾಯಂದಿರನ್ನು ಕಳಕೊಂಡ ಹುಡುಗ. ತಂದೆಯ ಇಬ್ಬರು ಸೋದರರು ಬದುಕಿ ಉಳಿದಿದ್ದಾರೆ, ಕುಕ್ಕಪ್ಪನನ್ನು ನೋಡಿಕೊಳ್ಳುವವರು ಅವರೇನೆ. ಮುತ್ತನ ಕರೆಗೆ ಕಿವಿಗೊಟ್ಟು, ಅವರಲ್ಲಿನ ಒಬ್ಬ ಸೋದರ, ಅವನ ಹೆಂಡತಿ ಬಂದರು. ಜತೆಗೆ ಅವರೊಬ್ಬ ಬಂಧುವೂ ಬಂದಳು. ಹೀಗಾಗಿ ಮೂವರು ಆಳುಗಳು ಅಜ್ಜನ ಮೇಲಿನ ವಿಶ್ವಾಸದಿಂದ ಅಲ್ಲಿಗೆ ಬಂದರು. ಅವರಿಗೆ ಜಾಗವನ್ನು ನೋಡಿ ಧೈರ್ಯವಾಗಲಿಲ್ಲ. ಗಂಡಾಳು ರಾಮಯ್ಯ, ಅಂದರೆ ಕುಕ್ಕನ ಚಿಕ್ಕಪ್ಪ. ಅವನು ಸ್ಪಷ್ಟವಾಗಿಯೇ ಹೇಳಿದ "ಅಜ್ಜ, ನನಗೇನು ಸ್ವಾರಸ್ಯಕಾಣುವುದಿಲ್ಲ. ಇದು ನಮ್ಮ ಊರಿಗಿಂತ ದರಿದ್ರ ಊರು. ಈ ಭೂಮಿಯಲ್ಲಿ ಏನಾದೀತು? ಇದನ್ನು ನಂಬಿ ಅಲ್ಲಿನ ಸಾಗುವಳಿ ಬಿಟ್ಟುಬಂದರೆ ನಾಳೆ ನಮ್ಮ ಗತಿಯೇನು? ಜ್ವರದ ವಿಚಾರ ದೊಡ್ಡದಲ್ಲ. ಅಲ್ಲೂ ಇದೆ, ಇಲ್ಲೂ ಇದ್ದೀತು. ಆದರೆ ಇದು ಬೆಳೆಯುವ ನೆಲವಾಗಿಯೇ ಕಾಣುವುದಿಲ್ಲ. ಈ ಬೆಟ್ಟು ಸಾಗುವಳಿಯಾಗುವುದಕ್ಕೆ ಹತ್ತು ವರ್ಷ ಬೇಕು. ಮೇಲಿನ ಗದ್ದೆಗಳೋ! ಕೆಸರಿಂದ ಕಾಲು ಹುಗಿಯುವ ಕಂಪ. ನಿನಗೆ ಮರಿ ಮಗನನ್ನು ಸಾಯುವ ಕಾಲಕೆ ಹತ್ತಿರ ಇರಿಸಿಕೊಳ್ಳಬೇಕೆಂಬ ಆಸೆಯಾಗಿ ಹೂಡಿದ ಉಪಾಯ ಇದು" ಎಂದು ತನ್ನ ಅಭಿಪ್ರಾಯವನ್ನು ವ್ಯಕ್ತಮಾಡಿದ.

"ನೋಡು ರಾಮಯ್ಯ, ಎರಡು ಮೂರು ವರ್ಷಗಳ ತನಕ ಇಲ್ಲಿ ಏನೂ ಆಗದೆಂದು ನನಗೂ ಗೊತ್ತು, ಧನಿಗಳಿಗೂ ಗೊತ್ತು. ನಾನು ಅವರಿಗೆ ಇಲ್ಲದ ಆಸೆ ಹುಟ್ಟಿಸಿಲ್ಲ. ಐದು ವರ್ಷ ಕಣ್ಮುಚ್ಚಿ ಹಣ ಸುರಿಯಬೇಕು ಅಂದಿದ್ದೇನೆ. ಅವರೂ ಒಪ್ಪಿದ್ದಾರೆ. ಅವರಿಗೂ ಕಷ್ಟ ಗೊತ್ತು. ಹೊರಗೆ ಬೇಲಿಯಾಗಬೇಕು, ದರೆಯಾಗಬೇಕು, ಕಂದಕವಾಗಬೇಕು, ಗದ್ದೆಗಳಿಗೆ ಹುಣಿಯಾಗಬೇಕು, ಕಂಪದಲ್ಲಿ ನೀರು ನಿಲ್ಲದ ಹಾಗೆ ನೀರ ಕಣಿ ತೋಡಬೇಕು. ಅವೇ ಕೆಲಸಗಳು ತಿಂಗಳುಗಟ್ಲೆ ಇದೆ—ಹೊರತು ಇವತ್ತು ಬಿತ್ತಿ ನಾಳೆಗೆ ಬೆಳೆ ಬರುತ್ತದೆ ಎಂಬ ಭ್ರಮೆಯನ್ನು ಅವರೂ ಇಟ್ಟುಕೊಂಡಿಲ್ಲ."

"ಅಲ್ಲಿಯ ತನಕ ಬದುಕುವುದು ಹೇಗೆ?"

" ದುಡಿಯಲಿಕ್ಕೆ ನೀವು ಮೂವರು ಗಟ್ಟಿಮುಟ್ಟಾಗಿದ್ದೀರಿ. ಗಂಡಾಳಿಗೆ ಹನ್ನೆರಡಾಣೆ, ಹೆಣ್ಣಾಳಿಗೆ ಹತ್ತಾಣೆಯಂತೆ ತೆಗೆದುಕೊಂಡು ದುಡಿಯಿರಿ. ಎರಡು ವರ್ಷ ದಿನ ಬಿಡದೆ ಕೂಲಿ ಸಿಕ್ಕೀತು. ಆ ಮೇಲೆಯೂ ಏನೂ ಆಗಲಾರದು ಎಂದು ನಿಮಗೆ ಕಂಡರೆ, ನನ್ನ ಮನೆ ಇದೆ, ಗೇಣಿಯ ಗದ್ದೆ ಇದೆ. ಅದರಲ್ಲೇ ಇದ್ದು ದುಡಿಯುವಿರಂತೆ"–ಎಂದು ಸಮಾಧಾನ ಹೇಳಿದ.

" ನೀನು ಅಷ್ಟು ಧೈರ್ಯ ಹೇಳುವುದಾದರೆ ಇರುತ್ತೇವಪ್ಪ."

ಬಂದ ಅವರು ಮೊದಲು ಮುತ್ತಯ್ಯನ ಮನೆಯಲ್ಲೇ ಬಿಡಾರ ಹೂಡಿದರು, ಗೌಡನಿಗೆ ಅಷ್ಟೊಂದು ವರ್ಷಗಳ ಮೇಲೆ ಅಡುಗೆ ಕೆಲಸ ತಪ್ಪಿತು. ಧನಿಗಳ ಹಿಂದೆ ಓಡಾಡುವುದಕ್ಕೂ, ಮರಿಮಗನನ್ನು ನಿತ್ಯ ಕಾಣುವುದಕ್ಕೂ ಅನುಕೂಲವಾಯಿತು. ಅವನ ಅಂತರಂಗಕ್ಕೆ ಗೊತ್ತು–ಬರಿಯ ಮೂವರು ಆಳುಗಳಿಂದ ನೀಗಿಸಲಾರದ ಕೆಲಸ ಅದೆಂದು. ಕನಿಷ್ಠ ಹತ್ತು ಹದಿನೈದು ಆಳುಗಳು ಎರಡು ವರ್ಷಗಳ ಕಾಲ ದುಡಿದರೆ, ಆ ಭೂಮಿಗೊಂದು ರೂಪ ಬಂದೀತು-ಎಂದು ಬಲ್ಲ. ಆದರೆ ಅಷ್ಟೆಲ್ಲ ಆಳುಗಳನ್ನು ಅವನೆಲ್ಲಿಂದ ತರಬೇಕು? ಆತ ತನ್ನ ಧನಿಗೆ ಹೇಳಿದ "ಧನಿಗಳೇ, ನೀವು ಇದಕ್ಕೆ ನಮ್ಮ ಆರಿಗರನ್ನು ಹಿಡಿಯಬೇಕು. ಅವರಿಗೆ ಸ್ವಲ್ಪ ಆಸೆಯನ್ನು ತೋರಿಸಬೇಕು. ಅವರಿಂದ ಆಳು ಒದಗಿಸುವ ಕೆಲಸ ಆದೀತು, ನೋಡಿ–ಅವರ ಮನೆ ಇರುವುದು ರಸ್ತೆಗೆ ಸಮೀಪವಾಗಿ. ಆ ಹಾದಿಯಿಂದಲೇ ದಿನ ನಿತ್ಯ ಘಟ್ಟಕ್ಕೆ ಹೋಗುವ ಜನ ಸಾಲುಗಟ್ಟಿ ಹೋಗುತ್ತಾರೆ. ಮಲವಂತಿಗೆ, ಕಳಸ–ಎಲ್ಲೆಲ್ಲಿಗೂ ಜನ ಹೋಗುತ್ತಾರೆ. ಘಟ್ಟದಲ್ಲಿ ಕೊಡುವ ಕೂಲಿಯನ್ನು ಇಲ್ಲಿಯೇ ಕೊಡುತ್ತೇವೆ ಎಂದರೆ ಯಾಕೆ ಜನ ಬರಲಾರದು ? ಅವರ ಊರಿಗೂ ಸಮೀಪವಾಗುತ್ತದೆಯಲ್ಲ. ನೀವು ಆರಿಗರಿಗೇನೆ ಆ ಪಟ್ಟವನ್ನು ಕಟ್ಟಿ. ಒಂದು ಉಪಾಯ ಮಾಡಿ–ಇಲ್ಲಿಗೆ ಬರುವ ಕೂಲಿಗಳಿಗೆ ತಲಾವೊಂದರ ದಿನಕ್ಕೆ ಒಂದಾಣೆಯ ಹಾಗೆ ಅವರಿಗೆ ಕೊಡುತ್ತೇನೆ ಅನ್ನಿ. ಅವರಿಗೆ ಅಷ್ಟು ಮಟ್ಟಿನ ಲಾಭ ನಿಮ್ಮಿಂದ ಆಗುವಾಗ ಮನಸ್ಸು ಮಾಡಿಯಾರು. ಈ ಕೆಲಸ ಅವರಿಂದಲೇ ಆಗಬೇಕು. ಅಲ್ಲದೆ ಬಾಯಿಯೂ ಚೆನ್ನಾಗಿದೆ, ಅಲ್ಲದೆ ಮನುಷ್ಯರೂ ಒಳ್ಳೆಯವರು" ಎಂದು ಉಪದೇಶಿಸಿದ. ಶಂಕರನಿಗೆ ಈ ಉಪಾಯ ತೀರ ಸಮ್ಮತವಾಗಿ ಕಂಡಿತು.

ತಮ್ಮ ಊರಿಗೆ ಬಂದು ನೆಲೆಸಲು ಸಿದ್ಧತೆ ಮಾಡುತ್ತಿದ್ದ ಶಂಕರನ ವಿಚಾರವು, ಊರಿನವರೇ ಆದ ಆರಿಗರಿಗೆ ತಿಳಿಯದೆ ಹೋಗುತ್ತದೆಯೆ? ಅಲ್ಲದೆ ಅವರು ರಂಗಪ್ಪಯ್ಯನವರ ಸ್ನೇಹಿತರು. ಶ್ಯಾನುಭಾಗರ ತಲೆಯ ಮೇಲೆ, ಜಾಗ ಗುರುತು ಮಾಡಿಕೊಡುವ ಹೊಣೆ ಬಂದಂದಿನಿಂದ, ಅವರಿಂದಲೇ ಎಲ್ಲವನ್ನು ಕೇಳಿ ಬಲ್ಲರು ಈ ವಿಷಯದಲ್ಲಿ ಶ್ಯಾನುಭಾಗರ ಒಲ ಹೇಗಿತ್ತೆಂದೂ ಬಲ್ಲರು. ಹೀಗಾಗಿ ಶಂಕರ ಅವರೊಡನೆ ತೆಗೆದ ಪ್ರಸ್ತಾಪಕ್ಕೆ ಹೆಚ್ಚಿನ ಪೀಠಿಕೆ ಬೇಕಾಗಿರಲಿಲ್ಲ. ಅಂತ್ಯದಲ್ಲಿ ಶಂಕರನಿಗೆ ನಷ್ಟವಾಗುವುದು ಸಹಜ–ಎಂಬುದು ಅವರ ಒಳಗಿನ ಭಾವನೆ. ಆದರೆ ಆತ ಹೇಳುವ ಕೆಲಸ ತಮಗೆ ಲಾಭದಾಯಕವಾದುದು, ಸುಲಭದ್ದು. ಆದುದರಿಂದ ಆಡಂಬರವಿಲ್ಲದೆ "ನೀವು ದುಡ್ಡು ಕೊಡುವುದಾದರೆ ನಾನು ಮಾಡುತ್ತೇನೆ ಆ ಕೆಲಸ" ಎಂದು ಎದೆ ತಟ್ಟಿ ಒಪ್ಪಿಕೊಂಡರು. ಮಲವಂತಿಗೆ ಹೋಗುವ ದಾರಿಯು ಅಂಗಳ ಇಳಿದರೆ ಕಾಲಿಗೆ ತಾಗುತ್ತದೆ. ಅಂಗಳದಲ್ಲಿ ನಿಂತು ನೋಡಿದರೆ, ಪ್ರತಿಯೊಬ್ಬ ದಾರಿಗನೂ ಕಾಣಿಸುತ್ತಾನೆ. ಕುಳಿತಲ್ಲಿ ನಡೆಯಬಹುದಾದ ಕೆಲಸ ಅದು. ಘಟ್ಟದಲ್ಲಿ ಕಾಫಿಯ ಕುಯ್ಲು ಮುಗಿದು, ಆಳುಗಳು ಸಾಲುಗಟ್ಟಿ ಕುಟುಂಬಯಾತ್ರೆ ಮಾಡುವ ಸಮಯ. ಈ ಆಳುಗಳೆಲ್ಲ ಹೆಚ್ಚಾಗಿ ಹೊಲೆಯರು. ಊರಿಗೆ ಮರಳುವ ಅವರನ್ನು ಫಕ್ಕನೆ ಹಿಂದಿರಿಗಿಸುವ ಕೆಲಸ ಮಾತ್ರ ಸುಲಭದ್ದಲ್ಲ. ಹೋಗುವ ಜನಗಳಾದರೆ ಏನಾದರೂ ಮಂಕು ಬೂದಿ ಎರಚಬಹುದು. "ಈ ವರ್ಷ ಕಳಸದ ಸುತ್ತುಮುತ್ತ ಪ್ಲೇಗು, ಕೊಲೆರಾ, ಮೈಲಿಗೆ-ಏನೇನೋ ಕಾಯಿಲೆಗಳಿವೆ" ಎಂದು ಬೆದರಿಸಿಯಾದರೂ ತಡೆಯಬಹುದಿತ್ತು. ಊರಿಗೆ ಆಸೆ ಆತುರಗಳಿಂದ ಹೊರಟ ಜನವನ್ನು ಬರಿಯ ಎರಡು ದಿನಕ್ಕೂ ತಡೆಯುವ ಕೆಲಸ ಸುಲಭದ್ದಲ್ಲ. ತುಂಬ ಯೋಚಿಸಬೇಕಾಯಿತು. ನೆಟ್ಟಗಿನ ದಾರಿ ಕಾಣಿಸಲಿಲ್ಲ. ಅವರು ತುಂಬ ಬುದ್ಧಿ ಖರ್ಚುಮಾಡಿ ಕೊನೆಗೂ ಒಂದು ಉಪಾಯ ಕಂಡು ಹಿಡಿದರು.

ಇಬ್ಬರು ಗುರುತಿನ ಬ್ಯಾರಿಗಳನ್ನು ಕರೆಯಿಸಿಕೊಂಡರು. ಇನ್ನೊಬ್ಬ ಸ್ವಜಾತಿಯ ಬಂಧುವನ್ನೂ ಕರೆದು ತಂದರು. ಎರಡು ದಿನಗಳಲ್ಲಿ ಮನೆಯ ಎದುರು ಒಂದು ಚಪ್ಪರ ಹಾಕಿಸಿ, ಒಂದು ಕಾಫಿ ಹೊಟೇಲನ್ನು ತೆರೆದರು,

ಘಟ್ಟದಿಂದ ಇಳಿದ ಜನಕ್ಕೆ ಆ ದಾರಿಯಲ್ಲಿ ಒಂದಿಷ್ಟು ಕಷಾಯವೋ, ಕಾಫಿಯೋ, ಅವಲಕ್ಕಿಯೋ ದೊರೆಯಬೇಕಾದರೆ ಇನ್ನೂ ಎಂಟು ಮೈಲು ದೂರವಿರುವ ಬೆಳ್ತಂಗಡಿಯನ್ನು ಕಾಣಬೇಕು. ನಡುವೆ ಬಂಗಾಡಿಯಲ್ಲಿ ತೆರೆದ ಈ ಕಾಫಿ ಅರವಟ್ಟಿಗೆ ಕೂಲಿಗಳಿಗೆ ಒಂದು ಆಕರ್ಷಣೆಯಾಯಿತು. ಸಂಜೆ ಬಂದವರು ಅಲ್ಲಿ ತಂಗಿದರು. ಅವರು ಕೊಟ್ಟ ನೀರನ್ನು ಕಾಫಿಯೆಂದೇ ನಂಬಿ ಕುಡಿದರು. ಆಳುಗಳೊಡನೆ ಮಾತನಾಡುವುದಕ್ಕೆ ಒಂದು ಅವಕಾಶವಾಯಿತು. ಆರಿಗರ ಬಂಧು ಆ ಕೆಲಸ ಮಾಡಿದರೆ, ಇನ್ನಿಬ್ಬರು ಜತೆಗಾರರು ಅಲ್ಲಿ ಸಮೀಪ ಒಂದು ಜುಗಾರಿಯ ಮಂಡ ತೆರೆದರು. ಅಲ್ಲೇ ಬಳಿಯಲ್ಲಿ ಹೆಂಡವನ್ನು ಕದ್ದು ಮಾರುವ ಏರ್ಪಾಟೂ ನಡೆಯಿತು. ಆ ಕೊಂಪೆಯಲ್ಲಿ ಏನೂ ಅರಿಯದ ದಾರಿಗರಿಗೆ, ಇದೊಂದು ಆಕರ್ಷಣೆಯ ಕೇಂದ್ರವಾಯಿತು. ಘಟ್ಟದಲ್ಲಿ ದುಡಿದು ತಂದ ಹತ್ತೆಂಟು ರೂಪಾಯಿಗಳನ್ನು ಅಲ್ಲೇ ಜೂಜಾಡಿ ಕಳೆದುಕೊಳ್ಳುವುದಕ್ಕೆ ಒಂದು ದಾರಿಯಾಯಿತು. ಇದು ನಮ್ಮ ಆರಿಗರ ಸ್ವಬುದ್ಧಿಯ ಜಾಣ್ಮೆಯಲ್ಲ. ಘಟ್ಟದಲ್ಲೇ ಹೀಗಾಗುತ್ತದೆಂದು ಅವರಿಗೆ ಕೇಳಿಗೊತ್ತು. ಕೂಲಿಗಳು ಘಟ್ಟ ಬಿಡುವ ವೇಳೆಗೆ ಜಾತ್ರೆ, ಸಂತೆ, ಕೋಳಿ ಅಂಕಗಳ ಏರ್ಪಾಟುಗಳಾಗುತ್ತವೆ. ಮುಖ್ಯ ಉದ್ಯಮವಾದ ಜುಗಾರಿಯ ಆಟಕ್ಕೆ ಅವೆಲ್ಲ ಒಂದು ರಕ್ಷೆ. ಎಷ್ಟೋ ಜನ ತೋಟಬಿಟ್ಟು ಹೊರಡುವ ಮೊದಲು, ತಮಗೆ ಬರಬೇಕಾದ ಹಣವನ್ನು ಕೊಂಡು, ಇಂತಹ ಸಂತೆಗಳಿಗೆ ಹೋಗುತ್ತಾರೆ. ಜುಗಾರಿ ಆಡಿ ಎಲ್ಲವನ್ನೂ ಕಳೆದುಕೊಳ್ಳುತ್ತಾರೆ. ತಿರುಗಿ ಹಣವಿಲ್ಲದೆ, ಊರಿಗೆ ಮರಳಲಾರದೆ, ತೋಟದಲ್ಲೇ ಉಳಿದುಬಿಡುತ್ತಾರೆ.

ಬಂಗಾಡಿಯ ಹೊಸ ವ್ಯಾಪಾರ—ಅಂಥ ಒಂದು ಕೇಂದ್ರವಾಯಿತು. ಬಂದವರು ಎಷ್ಟೋ ಮಂದಿ ರಾತ್ರೆ ಅಲ್ಲೇ ಉಳಿದು, ಜೂಜಾಡಿ ಬರಿಗೈಯ ಭೂಪತಿಗಳಾದರು. ಮರುದಿನ ಅವರ ಜೋಲು ಬಿದ್ದ ಮೋರೆಗಳನ್ನು ಕಂಡು ಆರಿಗರು ಕನಿಕರ ತೋರಿಸಿದರು; ಸಹಾನುಭೂತಿ ತೋರಿಸಿದರು; "ಏನೂ ಬೇಸರಪಡಬೇಡಿ. ತಿಂಗಳು ಎರಡು ತಿಂಗಳಿಗೆ ಈ ಊರಲ್ಲೇ ಒಳ್ಳೆ ಕೆಲಸ ಕೊಡಿಸುವ. ಕೈತುಂಬ ಕೂಲಿಯೂ ಸಿಕ್ಕೀತು" ಎಂದರು. ಬರಿಗೈಯಿಂದ ಮನೆಗೆ ಹೋಗಲಾರದವರು ಮತ್ತೇನು ಮಾಡಬೇಕು?

ಆರಿಗರು ಬೀಸಿದ ಬಲೆಯು ಸಾರ್ಥಕವಾಯಿತು. ಇಪ್ಪತ್ತು ಮಂದಿ ಕೂಲಿಗಳು ದೊರೆತರು. ಕುಳಿತಲ್ಲಿಯೇ ಆರಿಗರಿಗೆ ದಿನ ಒಂದರ ಒಂದೂ ಕಾಲು ರೂಪಾಯಿ ವರಮಾನವಾಯಿತು.

ಇಪ್ಪತ್ತು ಮಂದಿ ದೊರಕಿದ್ದೆಂಬುದು ಶಂಕರನಿಗೆ ತುಂಬಾ ಆನಂದದ ಸಂಗತಿಯಾಯಿತು. ಬಂಗಾಡಿಯ ಶಾಂತಿರಾಜ ಆರಿಗರ ಮಾತನ್ನು ಕೇಳಿ, ಯಾವಾವ ಊರಿನ ಕೂಲಿಗಳು ತಲೆ ತಗ್ಗಿಸುತ್ತಾರೆ–ಎಂಬ ಅಭಿಪ್ರಾಯ ಉಂಟಾಯಿತು. ಅಂತು ದೊರೆತ ಆಳುಗಳಿಂದ ಕೆಲಸವೇನೋ ಬಿರುಸಿನಿಂದ ತೊಡಗಿತು. ಮುತ್ತಯ್ಯನ ಹೇಳಿಕೆಯಂತೆ, ಭೂಮಿಯ ಮೂಡಣದ ಗಡಿಯಲ್ಲಿದ್ದ ಮುಚ್ಚಿಹೋದ ಕಂದಕದಂತಹ ತೋಡನ್ನು ಇನ್ನಷ್ಟು ಆಳ ಮಾಡಿಸಿದರು. ಆ ಮಣ್ಣನ್ನೇ ಈಕಡೆ ಸುರುವಿ ಎತ್ತರದ ದಂಡೆಯನ್ನು ಹಾಕಿದರು. ಭೂಮಿಯ ದಕ್ಷಿಣ, ಉತ್ತರಗಳಲ್ಲಿ ಬಲವಾದ ಮುಳ್ಳು ಬೇಲಿಯನ್ನು ನಟ್ಟರು. ಪಡುವಣಕ್ಕೆ ಹೇಗೂ ಹೊಳೆಯೇ ಮೇರೆ. ಇತ್ತ ದಿನಂದಿನ ಜನ ಹೆಚ್ಚುತ್ತ ಬಂದರು. ಎರಡುಮೂರು ತಿಂಗಳ ಕಾಲ ಕೆಲಸ ನಡೆದೆ, ನಡೆಯಿತು. ಕೂಲಿಗಳಿಗೆ ನಿವಾಸದ ಗುಡಿಗಳನ್ನು ಕಟ್ಟಿದರು. ಜವುಗುನೆಲದ ನೀರು ಇಂಗಿ ಹರಿಯಲು ಕಾಲುವೆ ಹೊಡೆದರು, ಬೆಟ್ಟನಲ್ಲೂ ಹೊಲಗದ್ದೆಗಳಲ್ಲೂ ಕವಿದಿದ್ದ ಮರಮಟ್ಟುಗಳನ್ನು ಕಡಿದು ಹಾಕಿದರು. ಮನುಷ್ಯ ವಾಸಕ್ಕೆ ಆ ಜಾಗವನ್ನು ಸಮಮಾಡಿಕೊಟ್ಟರು.

ಇಷ್ಟೆಲ್ಲ ಕೆಲಸಗಳಾಗುವಾಗ ಮಾರ್ಚ್ ತಿಂಗಳು ಕಳೆಯಿತು. ಅದೇನೇ ಚಳಿಜ್ವರದ ಹೆಚ್ಚಳವು ಕಾಣಿಸಿಕೊಳ್ಳುವ ಸಮಯ. ಅವನ ಸುದೈವಕ್ಕೆ ಸಾಕಷ್ಟು ಡಿ. ಡಿ. ಟಿ. ಮದ್ದು ಮುಂಬಯಿಂದ ಬಂದಿತು. ಅದನ್ನು-ನೀರು ನಿಲ್ಲುವ ಕುಣಿ, ಹೊಂಡ ಜವುಗು ನೆಲ ಮೊದಲಾದಲ್ಲೆಲ್ಲ ಪ್ರಯೋಗ ಮಾಡಲು ಸಾಧ್ಯವಾಯಿತು.

ಇಷ್ಟೊಂದು ದಿನ ಕೆಲಸ ಮಾಡುವಾಗಲೂ, ಒಂದು ಸಮಸ್ಯೆ ಮಾತ್ರ ಶಂಕರನನ್ನು ಕಾಡುತ್ತಲೇ ಇತ್ತು. ಎಲ್ಲರೂ–'ಕೂಲಿಗಳಿಗೆ ಅಭಾವ, ಕೂಲಿಗಳಿಗೆ ಅಭಾವ' ಅನ್ನುತ್ತಿರುವ ಕಾಲದಲ್ಲಿ ತನಗಿಷ್ಟು ಜನ ಹೇಗೆ ದೊರೆತರು–ಎಂಬ ಸೋಜಿಗ. ಈ ಸೋಜಿಗದ ಜತೆಗೆ-ಅಲ್ಲಿಯೇ ಕೆಲಸವಾಡಿ ಚಪ್ಪರದ ಕೆಳಗೋ, ಮರದ ಕೆಳಗೋ ಅಡಿಗೆಮಾಡಿ, ಉಂಡು ಮಲಗುವ

ಜನಗಳಲ್ಲಿ ಎಷ್ಟೋ ಮಂದಿ ಗಂಡಸರು, ಕತ್ತಲಾಗುತ್ತಲೇ ಹೊರಟು ಹೋಗುವುದೂ, ಬೆಳಗಿನ ನಸುಕಿಗೆ ಹಿಂದೆ ಬರುವುದೂ ಕಂಡಿತು. ಜನಗಳ ಕೆಲಸದಲ್ಲಿ ಮೊದಲಿನ ಚುರುಕುತನ ಅವನಿಗೆ ಕಾಣಿಸುತ್ತಿರಲಿಲ್ಲ. ಈ ಪ್ರಶ್ನೆಗಳು ಅವನನ್ನು ಕಾಡಿದುದರ ಫಲವಾಗಿ ಆತ ಕೂಲಿಗಳಿಗೆ "ರಾತ್ರಿಯೆಲ್ಲ ಎಲ್ಲಿಯೋ ಹೋಗಿ ನಿದ್ದೆ ಬಿಡುತ್ತಿದ್ದೀರಿ. ಹಗಲಿನ ಕೆಲಸ-ಒಂದಕ್ಕೆ ಅರ್ಧದಷ್ಟು ಆಗುವುದಿಲ್ಲ" ಎಂದು ಬೆದರಿಸಿದ. ಆ ಸಂಗತಿ ಅವನಿಂದ ಎಳಚಿತ್ತಾಯರ ಕಿವಿಗೂ ಮುಟ್ಟಿತು. ಎಳಚಿತ್ತಾಯರು ಸುಲಭದಲ್ಲಿ ಗುಟ್ಟು ಕಂಡುಹಿಡಿದರು. ಜನ ಹೋಗುತ್ತಿರುವುದು ರಾತ್ರಿ ಜುಗಾರಿ ಆಡಲು—ಎಂಬುದು ತಿಳಿದು ಬಂದಿತು. ಅದರ ಬೆಂಗಡೆಯಲ್ಲಿದ್ದ ಆರಿಗರ ವಿಚಾರದಲ್ಲಿ ಅಸಮಾಧಾನವೂ ಆಯಿತು. ಎಳಚಿತ್ತಾಯರೇ ನಡುವೆ ಪ್ರವೇಶಿಸಿ, ಆರಿಗರಿಗೆ ಹೇಳಿ, ಆ ಆಟ ನಿಲ್ಲಿಸಿದರು. ಅವರ ಆದಾಯ ಕಡಿಮೆಯಾಯಿತಾದರೂ ಊರವರೊಡನೆ ಹಣಕ್ಕಾಗಿ ಜಿದ್ದು ಕಟ್ಟಿಕೊಳ್ಳುವ ಸ್ವಭಾವ ಅವರದ್ದಲ್ಲ, ಎಳಚಿತ್ತಾಯರು "ನೋಡಿ ಆರಿಗರೇ, ಶಂಕರರಾಯರ ಕೆಲಸಕ್ಕೆ ನಾವು ವಿಘ್ನ ತರಬಾರದು. ಅದರಿಂದ ನಾಳೆ ನಮಗೂ ಪ್ರಯೋಜನವಿದೆ. ಈಗ ನೋಡಿ. ಸೊಳ್ಳೆಯ ಬಾಧೆ ಕಡಿಮೆಯಾಗಲೆಂದು ಎಲ್ಲೆಲ್ಲಿಯೂ ಮದ್ದು ಚಲ್ಲಿಸಿದ್ದಾರೆ. ನಮ್ಮ ಮನೆಗೂ ಹಾಕಿಸಿದರು, ನಿಮ್ಮ ಮನೆಗೂ ಹಾಕಿಸಿದರು. ಇದರಿಂದ ನುಸಿಯ ಉಪದ್ರ ಕಡಿಮೆ ಆದದ್ದು ನಿಜವಷ್ಟೆ, ಅವರು ಮಾಡಿದ ಕೆಲಸದಿಂದ ಜ್ವರದ ಉಪದ್ರ ಸ್ವಲ್ಪವಾದರೂ ಕಡಿಮೆಯಾದರೆ, ನಾಲ್ಕು ಮಂದಿ ಇಲ್ಲಿ ಬಂದು ನಿಂತಾರು : ನಮ್ಮ ಬೇಸಾಯಕ್ಕೂ ಅನುಕೂಲವಾಯಿತು" ಎಂದು ಉಪದೇಶಿಸಿದರು, ಉಪದೇಶ ಅವರಿಗೆ ನಾಟಿತು.

ಬಾನಿನಲ್ಲಿ ಬಿಳಿಯ ಮುಗಿಲುಗಳು ಓಡಾಡತೊಡಗಿದವು. ಸೆಕೆ ಹೆಚ್ಚಾದಂತೆ, ಉರುಳುವ ಮುಗಿಲುಗಳ ಮಂದೆಯೂ ಹೆಚ್ಚಿತು. ನಾಲ್ಕಾರು ಹನಿಮಳೆಯೂ ಬಿದ್ದಿತು, ಮಳೆಯ ಹನಿಯೊಡನೆ ಮನೆಯ ಯೋಚನೆ ತೊಡಗಿತು-ಕೂಲಿಗಳಿಗೆ. ಹಾಗೆ ಬಂದ ಆಳುಗಳಲ್ಲಿ ಮೂರು ಕುಟುಂಬಗಳನ್ನು ಶಂಕರ ಒಲಿಸಿಕೊಂಡು, ಕಾಯಂ ಕೂಲಿಕೊಡುವ ಭರವಸೆ ಕೊಟ್ಟು, ಸ್ವಲ್ಪ ಮುಂಗಡ ಹಣವನ್ನೂ ಕೊಟ್ಟು, ಊರಿಗೆ ಕಳುಹಿಸಿದ.

"ಊರಿಗೆ ಬೇಗನೆ ಹೋಗಿ ಬನ್ನಿ. ಘಟ್ಟಕ್ಕಿಂತ ಇದು ಕೆಡುಕಿನ ಸ್ಥಳವಲ್ಲ. ಮುಂದಿನ ವರ್ಷ ಇಲ್ಲಿ ಚಳಿಜ್ವರ ಬರಲಾರದು. ಬಂದರೂ ಕಡಿಮೆ, ನಿಮಗೆ ಮದ್ದು ಕೊಡುವ ಭಾರ, ಜ್ವರದಿಂದ ಮಲಗಿದ ದಿನ ಅರ್ಧ ಸಂಬಳ ಕೊಡುವ ಭಾರ ನನ್ನದು." ಎಂದು ಉಪದೇಶಿಸಿದ, ಧೈರ್ಯ ಹೇಳಿದ. ಕೂಲಿಗಳ ಮನಸ್ಸಿನಲ್ಲೂ ದುಡಿಯುವ ತಮಗೆ ಎಲ್ಲಾದರೇನು ? ಊರಿಗೆ ಸಮೀಪವಾದರೆ ಇನ್ನಷ್ಟು ಲೇಸಲ್ಲವೇ—ಎಂದನಿಸಿತು. ಅವರು ಮರಳಿ ಬರುವ ಭರವಸೆ ಕೊಟ್ಟು ಹೊರಟುಹೋದರು.

* * * *

ನಮ್ಮ ಎಳಚಿತ್ತಾಯರು ತಮ್ಮ ತೋಟ, ಮನೆಗಳ ಕಾರುಭಾರದಲ್ಲಿ ಮೂಡೋಡಿಗೆ ಹೋಗದೆ ಬಹಳ ದಿನವಾಗಿತ್ತು. ಒಂದು ದಿನ ಹೋದರು ಅಲ್ಲಿ ನಡೆದ ಕೆಲಸಗಳನ್ನು ಕಂಡು ಅವರಿಗೆ ಆಶ್ಚರ್ಯವಾಯಿತು. ವಿಸ್ಮಯ ಪಟ್ಟು ಕೇಳಿದರು."ಹಳೆಯ ಗುರುತೇ ಸಿಗುವುದಿಲ್ಲ. ಭಾರೀ ಕೆಲಸ ಆಗುತ್ತಾ ಇದೆ-ಎಂದು ಕೇಳಿದ್ದೆ. ಆದರೆ ಇಷ್ಟು ಅದ್ಭುತಕ್ಕೆ ಮುಟ್ಟಿದೆಯೆಂದು ಯಾರಿಗೆ ಗೊತ್ತು ! ಇದನ್ನು ಕಂಡರೆ ನೀವು ಹಿಂದೆ ಬೇಸಾಯ ಮಾಡಿಸಿದ ವರಲ್ಲ-ಎಂದು ಯಾರೂ ಅನ್ನಲಾರರು" ಎಂದರು. ಅಲ್ಲದೆ ತಿಂಗಳ ಹಿಂದೆ ಅವರ ಮನೆಗೆ ಡಿ. ಡಿ. ಟಿ. ಮದ್ದು ಹೊಡೆಯಿಸಿದುದರ ನೆನಪು ಅವರಿಗೆ ಚೆನ್ನಾಗಿತ್ತು. ಅದರಿಂದ ಪ್ರಯೋಜನ ಉಂಟು ಎಂಬ ವಿಶ್ವಾಸವಾಗಿತ್ತು. ಮೊದಲು ಮೊದಲು ಈ ಮದ್ದಿನ ವಿಚಾರದಲ್ಲಿ ಅವರು ನಕ್ಕರು ; ಆರಿಗರೂ ನಕ್ಕದುಂಟು. ಈಗ ಶಂಕರ ಅಗೆಯಿಸಿದ ಕಣಿ, ಕಾಲುವೆ, ಕಂದಕಗಳನ್ನು ಕಂಡು ಇದು ಚೆನ್ನಾಗಿ ಯೋಚಿಸಿಯೇ ಮಾಡಿಸಿದ ಕೆಲಸವೆನಿಸಿತು. ಆದರೆ ಒಂದು ಅನುಮಾನವನ್ನು ಶಂಕರನ ಮುಂದೆ ಮರೆಮಾಚದೆ ಹೋದರು. "ಜವುಗು ನೀರು ಹೋಗಲು, ಕಾಲುವೆ ಹೊಡೆಸಿದ್ದು ಸಮನೆ. ಆದರೆ ಕೆಲಸ ಮಾಡುವಾಗ ನೀವು ಇರಲಿಲ್ಲವೇ ? ಕಾಲುವೆಗಳೆಲ್ಲ ಅಂಕುಡೊಂಕಾಗಿದ್ದಾ ವಲ್ಲ. ನೆಟ್ಟಗೆ ಹೊಡೆದಿದ್ದರೆ ಅರ್ಧಕ್ಕರ್ಧ ಕೆಲಸವಾಗುತ್ತಿತ್ತು" ಎಂದರು ಅನ್ನುವಾಗ ಮುತ್ತಗೌಡನೂ ಬಳಿಯಲ್ಲಿದ್ದ. ಅವನೆಂದ "ತಿಳಿಯದೆ ಹಾಗೆ ಮಾಡಿದ್ದಲ್ಲ. ನಾನೂ ನಿಮ್ಮ ಹಾಗೆಯೇ ಅಂದಿದ್ದೆ. ಆದರೆ ಧನಿಗಳ ಮನಸ್ಸಿ ನಲ್ಲಿ ಏನೇನೋ ಇದೆ. ಅವರೇ ಗೆರೆ ಹಾಕಿ ಕೊಟ್ಟರು ; ಕೆಲಸದವರು ಕಚಿ

ಯನ್ನು ಅಗೆದರು."

ಶಂಕರ ಆ ಮಾತುಗಳನ್ನು ಕೇಳಿ, ನಕ್ಕು ಸಮಾಧಾನ ಹೇಳಬೇಕಾ ಯಿತು ಅವರಿಗೆ–'ಹೀಗಿರಬೇಕೆಂದು ನನ್ನ ಅಂದಾಜು. ನಾನು ಓದಿ ಊಹಿ ಸಿದವ. ಕಂಡು ಮಾಡಿದವನಲ್ಲ. ಆದರೆ ಕಳೆದ ಮಳೆಗಾಲದಲ್ಲಲ್ಲವೇ ನಾನು ಬಂದದ್ದು. ನಿಮ್ಮೂರಿನ ಮಳೆಯ ಅಬ್ಬರ ಕಂಡ ಮೇಲೆ, ನನಗನಿ ಸಿತು—ಇಲ್ಲಿನ ಇಳುಕಲು ಗುಡ್ಡಗಳಲ್ಲಿ ನೆಟ್ಟಗೆ ಕಣಿ ಹೊಡೆಯಿಸಿದರೆ, ಕಣಿ ಹೋಗಿ ಕಂದಕವಾಗುತ್ತದೆ. ಆಚೀಚೆ ಗುಡ್ಡಗಳಲ್ಲಿ ಅಗೆದ ಅಗಳು, ಕಣಿ ಗಳನ್ನು ನೋಡುವಾಗ ನಿಮಗೆ ಕಾಣಿಸುವುದಿಲ್ಲವೇ? ನೀರು ಹೋಗುವುದರ ಜತೆಗೆ ಮಣ್ಣನ್ನೂ ಕೊಚ್ಚಿಕೊಂಡು ಹೋದರೆ ಏನು ಮಾಡಿದ-ಹಾಗಾ ಯಿತು ? ನೆಲ ಸಮತಟ್ಟಾಗಿಲ್ಲದಲ್ಲಿ, ಕಣಿ ಮಟ್ಟವಾಗಿಯೇ ಹೋಗಬೇಕು. ನೀರು ಆಗ ವೇಗವಾಗಿ ಹರಿಯುವುದಿಲ್ಲ. ಮಣ್ಣನ್ನು ಕೊಚ್ಚಿಕೊಂಡು ಹೋಗುವುದಿಲ್ಲ" ಎಂದು ನೆಲದ ರಕ್ಷಣೆಯನ್ನು ಕುರಿತು, ತಾನು ತಿಳಿದು ಕೊಂಡ ಜ್ಞಾನವನ್ನು ಹೇಳಿದ.

ಎಳಚಿತ್ತಾಯರು ಈ ವಿಷಯದಲ್ಲಿ ಅನುಭವಿಗಳು. 'ಹೌದು' ಎನ್ನಲೂ ಇಲ್ಲ; ಅಲ್ಲ ಎನ್ನಲೂ ಇಲ್ಲ. ಇನ್ನೊಂದು ಅನುಮಾನ ತೆಗೆದರು. "ಮೂಡಣದಲ್ಲಿ ದೊಡ್ಡದಾದ ಕಂದಕ ತೆಗೆಸಿದ್ದೀರಿ. ಅದು ಸಮನೆ, ತೆಂಕು ಬಡಗಿನ ನಿಮ್ಮಬೇಲಿ, ದರೆಗಳ ಬಲ ಸಾಲದಲ್ಲ. ಆಚೆ, ಈಚೆ ಎರಡೂ ಕಡೆ ಕಾಡುಗಳಿವೆ. ಕಾಡುಹಂದಿ ಮೊದಲಾದುವಕ್ಕೆ ಆ ಬೇಲಿ ಏನೇನೂ ಈಡಿಲ್ಲ."

"ಮುತ್ತಯ್ಯನೂ ಹಾಗೆನ್ನುತ್ತಾನೆ, ಆದರೆ ನೋಡಿ, ಅವು ನಮ್ಮ ಗಡಿಯ ಮೇರೆಗಳು, ಎರಡೂ ಬಹು ಇಳಿಜಾರಾಗಿರುವ ಜಾಗ. ಗುರುತಿ ಗಷ್ಟೇ ಕಣಿ ತೆಗೆದೆ ; ಬೇಲಿ ಹಾಕಿಸಿದೆ. ಆಳವಾಗಿ ಕಣಿ ತೆಗೆಯುವ ಧೈರ್ಯ ನನಗಿಲ್ಲ. ಮಳೆಯ ನೀರಿಗೆ ಕಣಿ ಕೊರಕಲಾದರೆ ! ಕಾಡು ಪ್ರಾಣಿಗಳಿಗೆ ಈ ಬೇಲಿ ಈಡಲ್ಲ, ಆದರೂ ಅವಸರ ಬೇಡ. ಮುಂದಿನ ವರ್ಷ ನೋಡುವ. ನನ್ನ ಮನಸ್ಸಿನಲ್ಲಿ ಬೇರೆ ಏನೇನೋ ಯೋಚನೆಯೂ ಇದೆ. ಅದಕ್ಕೆಲ್ಲ ಸಮನಾದ ಸಾಮಾನು ಸಿಗಬೇಕು. ಸೀತಾರಾಮನಿಗೆ ಹುಡುಕಿ ಕಳುಹಿಸಲು ಬರೆದಿದ್ದೇನೆ. ಮಾಡಬೇಕಾದ ಕೆಲಸ ಬಹಳ ಇದೆ. ಸರಿಗೆಯ ಬೇಲಿ ಹಾಕಿ ಅದರ ಮೂಲಕ ವಿದ್ಯುತ್‌ಶಕ್ತಿ ಹರಿಯಿಸಿದರೆ, ಆಗ ಪ್ರಾಣಿಗಳು ಸಮೊಪ

ಸದಂತಹ ಬೇಲಿಯಾಗುತ್ತದೆ" ಎಂದೇನೇನೋ ವಿಸ್ತರಿಸಿ ಹೇಳಿದ. ಎಳ ಚಿತ್ತಾಯರ ತಲೆಗೆ ಅದೊಂದೂ ಹೋಗಲಿಲ್ಲ,

ಅಷ್ಟೆಲ್ಲ ಕೆಲಸ ಮಾಡಿಸಿ, ಸುಮ್ಮನೆ ಕುಳಿತಿರಬಾರದೆಂದು ನಾಲ್ಕೈದು ಎಕ್ರೆ ಸ್ಥಳವನ್ನು ಚೆನ್ನಾಗಿ ಉತ್ತು ಬಿತ್ತಬೇಕೆಂದು ಮುತ್ತನ ಯೋಚನೆ. ಅವನೆಂದ "ಎರಡು ಮೂರು ವರ್ಷ ಒಳ್ಳೆಯ ಬೆಳೆ ಬರಲಾರದು. ಬೆಳೆ ಬೆಳೆದರೂ ಮಂಗ ಕಾಡುಹಂದಿಗಳು ಬಿಡಲಾರವು. ಆದರೆ ತುಂಬಾ ಕಳೆ ಬೆಳೆದ ಈ ಜಾಗ, ಪ್ರಯೋಜನಕ್ಕೆ ಬರಬೇಕಾದರೆ ಅಂಚು ಹಾಕಿ, ಉತ್ತು, ನೀರು ನಿಲ್ಲಿಸಿ, ನೆಲದ ಕಳೆಗಳು ಕೊಳೆಯುವ ಹಾಗೆ ಮಾಡಬೇಕು. ಮುಂದಿನ ವರ್ಷಕ್ಕಾದರೂ ಬೆಳೆ ಸಿಕ್ಕೀತು, ಪ್ರಯೋಜನವಾದೀತು" ಎಂದು ಹೇಳಿದ. ಎಳಚಿತ್ತಾಯರು ಯೋಚಿಸಿ "ಹಾಗೆ ಮಾಡಿದರಾಗಬಹುದು ಎಂದು ಕಾಣುತ್ತದೆ" ಎಂದು ತಲೆದೂಗಿದರು,

"ಮಾಡಬೇಕೆನ್ನುತ್ತಾರೆ ಧನಿಗಳು. ಬೀಜ ಬಿತ್ತಿ ಅಗೆ ಮಾಡುವುದು ಒಳ್ಳೆಯದೇ, ಅಥವಾ ಅನಂತರ ಯಾರಿಂದಲಾದರೂ ಅದನ್ನು ಕೊಂಡು ನಡುವುದು ಒಳ್ಳೆದೇ ?"

"ಮುತ್ತಯ್ಯ, ಬೀಜ ಹಾಕಿದರೆ ಈ ಹೊಸ ನೆಲದಲ್ಲಿ ಹುಟ್ಟುತ್ತದೆಯೋ ಇಲ್ಲವೊ ? ಅಲ್ಲದೆ ಈಗಿರುವವರಲ್ಲಿ ನಿನ್ನ ರಾಮಯ್ಯನೊಬ್ಬನೇ ಗಟ್ಟಿ ಆಳು. ಅವನೊಬ್ಬನಿಂದಲೇ ಎಲ್ಲ ಕೆಲಸವಾಗಲಾರದು. ರಾಯರು ಮೂರು ನಾಲ್ಕು ಕುಟುಂಬಗಳಿಗೆ ಮುಂಗಡ ಕೊಟ್ಟುಬಿಟ್ಟಿದ್ದಾರೆ, ಅವರು ಹಣವನ್ನು ತಿಂದು, ತಮ್ಮ ಊರಿನಲ್ಲಿಯೇ ಕುಳಿತು ಬಿಟ್ಟರೆ, ಮುಗಿಯಿತು ಕೆಲಸ. ಅವರು ಬಂದಮೇಲೆಯೇ ಬೇಸಾಯದ ಯೋಚನೆ ಮಾಡಬೇಕು. ಮಳೆಗಾಲ ತೊಡಗಿದ ಮೇಲೆ ಅವರು ಬಂದರೆ, ಹೆಚ್ಚೇನೂ ಸಾಧ್ಯವಾಗಲಾರದು" ಎಂದು ವಾದಿಸುತ್ತ, ಕೊನೆಗೆ ಯೋಚಿಸಿ ಹೇಳಿದರು : "ಅಗೆಯ ಮಟ್ಟಿಗೆ ನಾನೇ ತಯಾರಿಸಿಕೊಡುತ್ತೇನೆ. ಆಳುಗಳು ಸಕಾಲದಲ್ಲಿ ಬಂದು ಬಿಟ್ಟರೆ ಉಳಬಹುದು ; ಅದನ್ನೇ ನಡಬಹುದು."

ಒಂದು ವಿಷಯ ಮುಗಿದಮೇಲೆ ಮುತ್ತಯ್ಯ ಇನ್ನೊಂದು ಪ್ರಸ್ತಾಪ ತೆಗೆದ– "ಬೇಸಾಯ ಎಂದಮೇಲೆ, ಎರಡು ಜತೆ ಕೋಣಗಳನ್ನಾದರೂ ಖರೀದಿ ಮಾಡಬೇಕು. ಮಳೆ ಬಂದು, ಹಳ್ಳ ತುಂಬಿದರೆ, ನಿತ್ಯ ನಿಮ್ಮಲ್ಲಿಗೆ

ರಾಯರು ಊಟಕ್ಕೆ ಹೋಗಿಬರುವುದು ಕಷ್ಟ. ಆಗ ಕೈಯಡಿಗೆ ಮಾಡಿಕೊಳ್ಳಬೇಕಾದೀತು. ಹಾಲು, ಹಯನು ಇಲ್ಲದೆ ಧನಿಗಳು ಒಣಗಿದ ಹಾಗೆ ಕಾಣುತ್ತದೆ. ಒಳ್ಳೆಯ ಒಂದು ಎಮ್ಮೆ ತೆಗಿಸಿಕೊಡಿ ನೋಡುವ. ಕರೆಯುವ ಕೆಲಸ ಯಾರೂ ಮಾಡಬಹುದು."

ಶಂಕರ ಅವರಾಡುವ ಮಾತುಗಳನ್ನೆಲ್ಲ ಕೇಳುತ್ತಿದ್ದ. ಅದೆಲ್ಲ ಅವನಿಗೆ ಸಮ್ಮತವಾಗಿತ್ತು. ಜಾನುವಾರುಗಳಿಗೆ ಕೊಟ್ಟಿಗೆಯೂ ಸಿದ್ಧವಾಗಿತ್ತು. ಆದರೆ ಉಳಿದ ಜನ ಬಂದಮೇಲೆ ಅವನ್ನು ಕೊಳ್ಳುವುದೇ ? ಮೊದಲೇ ?–ಎಂದು ಯೋಚನೆ ಮಾಡಿ, ಮೊದಲೇ ಕೊಂಡರೆ ಗೊಬ್ಬರಕ್ಕೆ ಅನುಕೂಲವಾದೀತಲ್ಲ–ಎಂಬುದರಿಂದ ಹಾಗೆ ನಿರ್ಣಯಿಸಿದ. ಕೆಲಸ ಅವಸರದಿಂದ ಸಾಗಿತು. ಐನೂರು ರೂಪಾಯಿಗಳನ್ನು ವ್ಯಯಿಸಿ ಎರಡು ಜತೆ ಸಾಮಾನ್ಯ ಕೋಣಗಳೂ, ಒಂದು ಕರೆಯುವ ಎಮ್ಮೆಯೂ ಬಂದಿತು. ಅವನ್ನು ನೋಡಿಕೊಳ್ಳುವುದಕ್ಕೆ ಮುತ್ತಯ್ಯನ ಬಂಧು ರಾಮಯ್ಯನಿದ್ದಾನೆ. ಮೇಯಿಗೆ ಅಟ್ಟಲು ಎಳೆಯ ಕುಕ್ಕಪ್ಪನೇ ಸಾಕು. ಅಷ್ಟರಲ್ಲಿ ಮುಂಗಡ ಕೊಂಡು ಹೋದ ಆ ನಾಲ್ಕು ಹೊಲೆಯರ ಕುಟುಂಬಗಳೂ ಬಂದುವು. ಅವರು ಬಂದಾರೆಂಬ ಧೈರ್ಯ ಯಾರಿಗೂ ಇದ್ದಿರಲಿಲ್ಲ. ಆದರೆ ಶಂಕರ ದಿನದಿನದ ಕೂಲಿಯನ್ನು ನಗದಾಗಿ ಕೊಡುತ್ತಿದ್ದುದನ್ನು ಕಂಡು ಜೀವನ ಸುಖವಾಗಿ ಹೋಗುವುದಾದರೆ ಎಲ್ಲಾದರೇನು–ಎಂಬ ತೀರ್ಮಾನಕ್ಕೆ ಅವರು ಬಂದಿದ್ದರು. ಹಣದ ವಿಚಾರದಲ್ಲಿ ಶಂಕರನ ಕೈ ಕಟ್ಟಲಿಲ್ಲ. ಹೊರಡುವಾಗ ತಮ್ಮ ಹಣವನ್ನು ಕೊಟ್ಟಿದ್ದ. ಅದು ಬಹುಮಟ್ಟಿಗೆ ಖರ್ಚಾಗಿದ್ದರೂ ಪ್ರತಿ ತಿಂಗಳು ಇನ್ನೂರು ರೂಪಾಯಿಗಳಂತೆ ಕಳುಹಿಸುತ್ತಿದ್ದ. ಅಲ್ಲದೆ ತಾನು ಯುದ್ಧಾವಸರದಲ್ಲಿ ಇದ್ದರೂ ಅಣ್ಣನಿಗೆ ಉತ್ಸಾಹದ ಮಾತುಗಳನ್ನೇ ಬರೆಯುತ್ತಿದ್ದ. ಅದರಂತೆಯೆ ನೌಕರಿ ಹಿಂಬಾಲಿಸಿ ಕೊಯಮತ್ತೂರಿಗೆ ಹೋದ ಸೀತಾರಾಮು, ಗೆಳೆಯನಿಗೆ ವಾರಕ್ಕೊಮ್ಮೆಯಾದರೂ ಪತ್ರವನ್ನು ಬರೆಯುತ್ತಿದ್ದ. ಶಂಕರನ ಕೆಲಸಗಳಲ್ಲಿ ಹುಡುಗ ಕೃಷ್ಣನ ನೆರವು ಇದ್ದೇ ಇತ್ತು. ಏನಿದ್ದರೂ ಶಂಕರನಿಗೆ ಕೆಲಸದ ಚಿಂತೆಯಲ್ಲದೆ, ಬೇರೆ ಚಿಂತೆಗಳಿಲ್ಲ.

ಉಳುಮೆ ತೊಡಗಿತು. ಮೊದಲ ಹೆಜ್ಜೆಗೆ ಸುಮಾರು ಹತ್ತು ಎಕ್ರೆ ವಿಶಾಲವಾದ ತಾವನ್ನು, ಕಂಪವಾಗಿದ್ದ ಭೂಮಿಯನ್ನು, ಮೇಲಿಂದ ಮೇಲೆ

ಉತ್ತರು, ಅಂಚು ಹಾಕಿದರು. ಕಬ್ಬಿಣದ ಪೊರಕೆಗಳಿಂದ ನೆಲವನ್ನು ಪರಚಿ ಪರಚಿ ಹುಲ್ಲು ಗಿಡಗಳ ಬೇರುಗಳನ್ನು ಕಿತ್ತು ಸುಟ್ಟರು. ಮಳೆಗಾಲಕ್ಕೆ ಕೂಲಿಗೆ ಬೇಕಾಗುವ ಅಕ್ಕಿಯನ್ನು ಅರಿಗರು ನಿಶ್ಚಿತಬೆಲೆಗೆ ಕೊಡುವೆನೆಂದು ನುಡಿದುದರಿಂದ, ಆ ಚಿಂತೆ ಬರಲಿಲ್ಲ. ಅವನ ಒಂದು ಮುಖ್ಯ ಯೋಚನೆ —ಮಳೆ ಬಲವಾಗಿ ಬೀಳತೊಡಗಿದರೆ, ತನ್ನ ಭೂಮಿ ಪಡುವಣದಿಂದ ಬೇರೆ ಯಾಗುತ್ತದೆ. ಹಳ್ಳ ತುಂಬುತ್ತದೆ. ಶ್ಯಾನುಭಾಗರ ಮನೆಗೋ, ಎಳಚಿತ್ತಾ ಯರ ಮನೆಗೋ ಹೋಗಿ ಬರುವುದು ಕಷ್ಟ. ಅಚೆಂದೀಚೆಗೆ ಆಳುಗಳು ಓಡಾಡುವುದೂ ಕಷ್ಟ—ಎಂದು. ಅಲ್ಲದೆ ತಮ್ಮ ಜನಗಳಿಗೇನಾದರೂ ಬೇನೆಗಳಾದರೆ ಬೆಳ್ತಂಗಡಿಯ ವರೆಗೂ ಓಡಾಡಬೇಕಾಗುತ್ತದೆ—ಏನು ಮಾಡಲಿ—ಎಂಬ ಯೋಚನೆಗೀಡಾದ. ಕೃಷ್ಣನನ್ನು ಕರೆದುಕೊಂಡು ಹಳ್ಳದ ದಡದಲ್ಲಿ ನಾಲ್ಕೆಂಟು ಬಾರಿ ಸುತ್ತಾಡಿ, ಪರಿಶೀಲಿಸಿ ಬಂದ. ಹಳ್ಳದ ದಂಡೆಯಲ್ಲಿ ಉದ್ದವಾದ ಒಂದು ಮರ ಇದ್ದುದನ್ನು ಕಂಡು, ಅದನ್ನು ಕೆಡವಿ ಎರಡೂ ದಂಡೆಗಳಿಗೆ ಸೇತುವೆ ಹಾಕುತ್ತೇನೆಂದು ಯೋಚಿಸಿದ. ಕಡಿದ ಮೇಲೆ ಮರ ಗಿಡ್ಡವಾಯಿತೆಂದು ತಿಳಿಯಿತು. ಮುತ್ತಯ್ಯನ ಉಪದೇಶದಂತೆ, ಹೊಲೆಯರು ಕಾಡಿಗೆ ಹೋಗಿ ಉದ್ದವಾದ ಬೆತ್ತದ ಬೀಳಲನ್ನು ಹೊತ್ತು ತಂದರು. ಅದರಿಂದ ತೂಗು ಸೇತುವೆಯೊಂದು ನಿರ್ಮಾಣವಾಯಿತು ; ಶಂಕರನ ಆ ವಿಷಯದ ಚಿಂತೆಯೊಂದು ಮುಗಿಯಿತು.

ಶಂಕರ ಇಷ್ಟೆಲ್ಲ ಕೆಲಸಗಳನ್ನು ಸಾಗಿಸಿದರೂ ಶ್ಯಾನುಭಾಗ ರಂಗರಾ ಯರು ಮಾತ್ರ ಒಮ್ಮೆಯೂ ಆ ತಾವಿಗೆ ಬಂದು ಹೋದವರಲ್ಲ. " ಆ ಹುಡುಗ ಅವ್ಯವಹಾರಿ. ಹುಚ್ಚ" ಎಂಬ ಅಭಿಪ್ರಾಯವನ್ನು ತಮ್ಮ ಮನಸ್ಸಿ ನಲ್ಲೂ ಗಟ್ಟಿಮಾಡಿಕೊಂಡಿದ್ದರು ; ಕೇಳಿದವರ ತಲೆಯಲ್ಲೂ ಅದನ್ನೇ ತುರು ಕಿಸುತ್ತಿದ್ದರು. ಅರಿಗರು ಮನೆಗೆ ಬಂದರೆ, ಅವರೊಡನೆ ನಂಜುಮಾತ ನಾಡುತ್ತಿದ್ದರು. " ಹೌದಯ್ಯ, ನಮ್ಮ ಕುಲದ ಒಂದು ಪಿಳ್ಳೆ ಬಂದುದಕ್ಕೆ ನಿಮಗೆಲ್ಲ ಒಳ್ಳೆಯದಾಯಿತು–ದುಡ್ಡು ಸುಲಿಯಲಿಕ್ಕೆ. ಅವನಿಗೆ ಯಾವ ಅಂದಾಜೂ ಇಲ್ಲ. ಅವನ ಹುಚ್ಚು ಯೋಚನೆಗಳಿಗೆಲ್ಲ ಸೈಗುಟ್ಟುವವರು ನೀವು. ಕಂದಕ ತೋಡಿಸಿದ್ದಾನಂತೆ, ಕಣಿವೆ ಅಗೆಸಿದ್ದಾನಂತೆ, ಬೇಲಿ ಮಾಡಿ

ಸಿದ್ದಾನಂತೆ. ಈ ಒಂದು ಉಪಾಯವೂ ನಮ್ಮ ಹಿಂದಿನವರಿಗೆ ಗೊತ್ತಿಲ್ಲದೆಯೆ, ನಮಗೆ ಗೊತ್ತಿಲ್ಲದೆಯೆ, ಆ ಭೂಮಿ ಪಡುಬಿತ್ತು ಎಂದು ಯೋಚಿಸಿದ್ದೀರಾ ?" ಎಂದರು. ಇನ್ನೊಮ್ಮೆ "ಮಂಗ್ಳೂರು ಪೇಟೆಯವರು ನುಸಿ ಹೊಡೆಯಲು ಫ್ಲೀಟ್ ಅಂತ ಏನೋ ಹಾರಿಸುತ್ತಾರೆ. ನಾನೂ ನೋಡಿದ್ದೇನೆ. ಆದರಿಂದ ನುಸಿಸಾಯುವ ಬದಲು ದಿನೇ ದಿನೇ ಪುಷ್ಟಿಯಾದರೂ ಆದೀತು. ಶಂಕರ ಅಂಥ ಪೊಳ್ಳು ಕೆಲಸ ಮಾಡಿಸುವಾಗಲೂ ನಿಮ್ಮಂಥವರು ತಲೆದೂಗುವುದೆಂದರೆ ಆಶ್ಚರ್ಯ. ಮನೆಗೂ ಹೊಡೆದಿರಬಹುದು. ಏನಾಯಿತು ಅದರಿಂದ ? ಬಂಗಾಡಿಯ ಸೊಳ್ಳೆಗಳೆಲ್ಲ ಹೆದರಿ, ಮೊಕ್ಕಾಂ ಬದಲಿಸಿ, ಮುಂಡಾಜೆಗೋ ಚಾರ್ಮಾಡಿಗೋ ಹೋಗಿರಬೇಕಲ್ಲವೆ ? ಅಂಥ ಒಬ್ಬ ಹುಚ್ಚ ಸಿಕ್ಕಿದರೆ ಬೇಕಾದ ಹಾಗೆ ಕುಣಿಸುವವರು ನೀವು. ಅವನಿಗೇನು ? ಅವನ ಅಪ್ಪನಿಗೆ ಸಾವಿರವೋ ಸಾವಿರದ ಐನೂರೋ ಸಂಬಳ ಸಿಗುತ್ತದೆ. ದೊಡ್ಡ ಆಫೀಸರರು. ಬಡವರನ್ನು ಕಂಡರೆ ಮಾತ್ರ ಕಣ್ಣು ಕಾಣಿಸುವುದಿಲ್ಲ. ನಾನು ಒಂದು ಕಾಗದ ಹಾಕಿದ್ದಕ್ಕೆ ಉತ್ತರ ಹಾಕಲು ಅಹಂಕಾರ ಬಿಡಲಿಲ್ಲ. ಆ ವಿಚಾರ ಬೇರೆ........ಈ ಮಗನ ಹುಚ್ಚು ತಾಳಕ್ಕೆ ಸರಿಯಾಗಿ ಅಪ್ಪ ಇನ್ನೂರೋ, ಮುನ್ನೂರೋ ರೂಪಾಯಿ ಕಳುಹಿಸುತ್ತಾರೆಂದರೆ ಮಕ್ಕಳನ್ನು ಹಾಳುಮಾಡಲು, ಬೇರೆ ದಾರಿಯೇ ಬೇಡ" ಎಂದರು.

ನಡುವೆ ಅವರ ಮನದ ನಿರಾಶೆ ಕುದಿಯುತ್ತಲಿತ್ತು. ಅದನ್ನೂ ಅರಿಗರ ಮುಂದೆ ತೋಡಿಕೊಂಡರು. "ನಮ್ಮ ಅಜ್ಜಿಗೆ ನಾನೀಗ ಹಳಸಲು ಆಗಿದ್ದೇನೆ. ಮೊಮ್ಮಗ ಬಂದಿದ್ದಾನಲ್ಲ—ಅವನೇ ದೇವರು. ಅವಳೆದುರಿಗೆ ನಿನ್ನ ಶಂಕರ ಹೀಗೆ ಹುಚ್ಚರಂತೆ ಹಣ ಹಾಳುಮಾಡುತ್ತಿದ್ದಾನೆಂದರೆ 'ಹಾಗೆನ್ನಬೇಡ ಮಗು' ಅನ್ನುತ್ತಾರೆ. ಪುಣ್ಯಕ್ಕೆ ನಾನೇನೋ ಒಂದರಿಂದ ಬಚಾವಾದೆ. ಮೊದಲ ಸಾರಿ ಅವನು ಮನೆಗೆ ಬಂದಾಗ, ನನ್ನ ಕಿವಿಯೂ ಒಮ್ಮೆ ನೆಟ್ಟಗಾಗಿತ್ತು. ನಮ್ಮ ಶ್ರೀಮತಿಯನ್ನು ಅವನಿಗೆ ಕೊಟ್ಟರೂ ಕೊಡುವ—ಎಂದು ಯೋಜನೆಮಾಡಿದ್ದೆ. ಆದರೆ ಎಂದು–ಅವನು ಒಂದೇ ಒಂದು ಸುದ್ದಿಯನ್ನೂ ನನಗೆ ತಿಳಿಸದೆ, ಕಲೆಕ್ಟರರಿಗೆ ಬರೆದು ತೀರ್ವೆ–ದಂಡ ಕಟ್ಟಿ, ಈ ಭೂಮಿಯನ್ನು ತಲೆಗೆ ಸುತ್ತಿಕೊಂಡನೋ—ಆಗ ಅನಿಸಿತು—ಇದು ಅರೆಹುಚ್ಚಲ್ಲ ; ಥೇಟು ಹುಚ್ಚೆಂದು. ನಂಟುತನ ಮಾತನಾಡುವುದ

ರೊಳಗೆ ಅವನ ಹಣೆಯ ಬರಹ ಗೊತ್ತಾದುದರಿಂದ ನಾನು ಪಾರಾದೆ" ಎಂದರು.

ಬೇರೊಂದು ದಿವಸ ಎಳಚಿತ್ತಾಯರು ಅವರ ಮನೆಗೆ ಬಂದಿದ್ದರು. ಶ್ಯಾನಭಾಗರು ಅವರನ್ನು ಉಳಿಸಲಿಲ್ಲ. "ಏನು ಸ್ವಾಮಿ, ಎಮ್ಮೆ ಕೋಣಗಳ ವ್ಯಾಪಾರದಲ್ಲಿ ನಿಮಗೆ ಎಷ್ಟು ದಲಾಲಿ ಸಿಕ್ಕಿತು"—ಎಂದು ಕೇಳಿಯೇ ಕೇಳಿದರು. ಅವರಿಗೆ ಬೇಸರವೂ ಆಯಿತು, ಗಾಬರಿಯೂ ಆಯಿತು.

"ನಾನು ಅಂಥದೇನು ಮಾಡಲಿಲ್ಲವಲ್ಲ" ಎಂದು ಹೇಳಿದರು.

"ಬೆಳ್ತಂಗಡಿಗೋ, ನಡಕ್ಕೋ ಹೋಗಿ, ನಾಲ್ಕೈದು ಅಶ್ವಮೇಧದ ಕುದುರೆಗಳನ್ನು ತಂದಿದ್ದೀರಂತಲ್ಲ. ಪರಮಾಸಿಯಾದ ಒಂದು ಎಮ್ಮೆಯೂ ಬಂದಿದೆಯಂತೆ. ನೀವೇ ಹೋಗಿ ತಂದದ್ದೆಂದ ಮೇಲೆ, ಕಡಿಮೆ ಕಡಿಮೆ ನಾಲ್ಕು ಕುತ್ತಿ ಹಾಲನ್ನಾದರೂ ಕೊಟ್ಟೀತು. ಅರಿಗರ ಹಣೆಯ ಬರಹ ನನಗೆ ಚೆನ್ನಾಗಿ ಗೊತ್ತು. ಅವರಂತೆ ನೀವೂ ನಮ್ಮ ಹುಡುಗನನ್ನು ಮುಣುಗಿಸುವುದಕ್ಕೆ ಸೇರುತ್ತೀರಿ—ಎಂದು ನಾನು ಯೋಚಿಸಿರಲಿಲ್ಲ. ಆಗಲಿ, ಸಹಾಯಮಾಡಿ. ಮಂಜುನಾಥ ದೇವರ ಕೃಪೆಯಿಂದ ನಮ್ಮೂರಲ್ಲಿ ಒಂದು ಗ್ರಾಮಸುಧಾರಣಾ ಕೇಂದ್ರವಾದರೆ, ತಹಶಿಲ್ದಾರರಿಗೆ ನಾನೂ ಒಂದು ರಿಪೋರ್ಟ್‌ಮಾಡಿಬಿಡಬಹುದಲ್ಲ" ಎಂದರು. ಆ ಮಾತಿಗೆ ಎಳಚಿತ್ತಾಯರ ಮುಖ ಅಡಿಕೆಯಷ್ಟು ಚಿಕ್ಕದಾಯಿತು. ಅವರು ತುಂಬ ನೊಂದುಕೊಂಡರು. ಯಾವ ಲಾಭದ ಎಣಿಕೆಯನ್ನೂ ಅವರು ಮಾಡಿದವರಲ್ಲ. ಅವರ ತಪ್ಪೆಂದರೆ —ಜಾನುವಾರಗಳ ಖರೀದಿಗೆ ಶಂಕರನ ಜತೆಯಲ್ಲಿ ಹೋದದ್ದು. ಶ್ಯಾನುಭಾಗರೂ ಅವರಿಗೆ ನಿತ್ಯ ಬೇಕಾಗುವ ವ್ಯಕ್ತಿ. ಅವರೇ ಅಂಥ ನಂಜಿನ ಮಾತನ್ನಾಡುವಾಗ, ಉತ್ತರ ಕೊಡುವುದು ಸಮವಲ್ಲವೆಂದು ಯೋಚಿಸಿ, ಕೆಲಸದ ನೆಪ ಹೇಳಿ ಹೊರಟುಹೋದರು. ರಂಗರಾಯರಿಗೆ ದಿಗ್ವಿಜಯವಾದಂತಾಯಿತು. ಉಗ್ರಾಣಿಯನ್ನು ಕರೆದರು; ಎಲೆ ಅಡಿಕೆ ಕೊಟ್ಟರು. "ಹೌದೋ ತಿಮ್ಮ, ನೋಡಿದೆಯಾ—ಉಸಿರಿಲ್ಲದೆ ಓಡಿದರು ಎಳಚಿತ್ತಾಯರು, ಅಲ್ಲಿ ಬುದ್ಧಿ ಇದ್ದವರು ಎಂದಾದರೂ ಜಾನುವಾರುಗಳನ್ನು ಕಟ್ಟಿಯಾರೆ? ಇಲ್ಲಿ ಹಟ್ಟಿಯ ಹಿಂದಕ್ಕೇನೆ ಬರುತ್ತದೆ ಹುಲಿ. ನೋಡು, ಮಳೆಗಾಲ ಕಳೆಯುವುದರೊಳಗೆ ಅವನ ಒಂದೇ ಒಂದು ಒಕ್ಕಲು

ಉಳಿಯುವುದಿಲ್ಲ. ಅಲ್ಲದೆ ಇವನ ಎಮ್ಮೆ ಕೋಣಗಳು ಉಳಿದರೆ ನನ್ನ ಹೆಸರನ್ನು ಬದಲಿಸಿಕೊಳ್ಳುತ್ತೇನೆ" ಎಂದು ವೀರವಾಕ್ಯಗಳನ್ನು ನುಡಿದರು.

ಇದು ಶ್ಯಾನುಭಾಗರ ಸ್ವಭಾವ. ಈಗೀಗ ಅವರ ಮಾತುಗಳಿಗೆ ಲಂಗು ಲಗಾಮು ಕಡಿಮೆಯಾಗಿದೆ. ಮಗು ಮಂಜುನಾಥನಿಂದ ತಿಂಗಳಿಗೆ ಐವತ್ತು ರೂಪಾಯಿಗಳಂತೆ ಬರತೊಡಗಿದೆ. ಆತ ವಿಮಾನ ಹಾರಿಸುವವನೆಂಬ ಹೆಮ್ಮೆ ಇವರ ತಲೆಗೂ ಅಡರಿದೆ. ಬರಿಯ ವರ್ಷದ ಮುಂಚೆ, ಮಗನನ್ನು ಶಪಿಸಿದ ಅವರೇನೆ. ಅವನ ನಡತೆಯನ್ನು ಅಟ್ಟಕ್ಕೇರಿಸಿ ಮಾತನಾಡುತ್ತಾರೆ. ಅವರ ಮನಸ್ಸೇ ಈಗ ವಿಮಾನದಲ್ಲಿ ಓಡಾಡುತ್ತಿದೆ. ಅಷ್ಟಿದ್ದರೂ ಚಿಂತೆಯಿಲ್ಲ, ಲೋಕವನ್ನು ಸಣ್ಣದಾಗಿ ಕಾಣಬೇಕಾಗಿರಲಿಲ್ಲ. ಯಾರೇನು ಮಾಡಬಲ್ಲರು ? ಅವರ ಸ್ವಭಾವ ಅಂತಹುದು.

ಅವರೆಂದ ಮಾತುಗಳನ್ನು ಜನರು ಶಂಕರನಿಗೂ ಹೇಳುತ್ತಾರೆ. ಅದನ್ನೆಲ್ಲ ಕೇಳಿದ ಆತ ಅವರಮನೆಗೆ ಹೋಗುವುದಕ್ಕೆ ಅಂಜುತ್ತಾನೆ. ಅಜ್ಜಿಯ ಮೇಲಿನ ಮಮತೆಯಿಂದ ಹೋಗದೆ ಉಪಾಯವಿಲ್ಲ. ಎಂದು ಮಳೆಗಾಲ ಬಂದೀತು, ಹೊಳೆ ತುಂಬೀತು. ಆ ನೆಪದಿಂದ ಹೋಗುವುದನ್ನೇ ನಿಲ್ಲಿಸಿ ಬಿಡಬಹುದಲ್ಲ. ಅಜ್ಜಿ ಬರುವಂತಿದ್ದರೆ ಅವಳನ್ನು ತನ್ನ ಗುಡಿಸಲಿಗಾದರೂ ತಂದುಕೊಳ್ಳುತ್ತಿದ್ದೆ–ಎಂಬ ಉದ್ವೇಗ ಅವನ ಮನಸ್ಸಿನಲ್ಲಿ ಕುದಿಯುತ್ತಿತ್ತು. ತನ್ನ ಕೆಲಸಗಳಿಂದ ತಾನು ದೊರಕಿಸಿಕೊಳ್ಳುತ್ತಿದ್ದ ಶಾಂತಿ, ಸಂತಸಗಳನ್ನು ರಂಗರಾಯರ ವಾಗ್ಬಾಣಗಳು ಕೆಡಿಸುತ್ತಿರುವಾಗ, ಅವನೇನು ಮಾಡಿಯಾನು ? ಒಮ್ಮೊಮ್ಮೆ ಆ ದುಃಖವನ್ನು ಮುತ್ತಯ್ಯನೊಡನೆ ತೋಡಿಕೊಳ್ಳುವುದೂ ಉಂಟು,

ಮುತ್ತಯ್ಯ "ಅಜ್ಜನ ಗುಣ ಮೊಮ್ಮಗನಿಗೂ ಬಂದಿದೆಯೊ ಏನೋ ಯಾರೇನು ಮಾಡಲಿಕ್ಕಾಗುತ್ತದೆ?" ಎಂದು ತನ್ನ ಪ್ರೀತಿಯ ಧನಿಗೆ ಸಮಾಧಾನ ಹೇಳುತ್ತಾನೆ. ಜತೆಗೆ 'ಕೆಟ್ಟವರ ಮಾತುಗಳು ಸತ್ಯವಾಗದಿರಲಿ', ಎಂದು ದೇವರನ್ನು ಹಂಬಲಿಸಿ ಮನದೊಳಗೆ ಬೇಡಿಯೂ ಬೇಡುತ್ತಾನೆ.

# ಅಧ್ಯಾಯ ೯

ಮಳೆಗಾಲವು ತೊಡಗುತ್ತಲೇ ಮೂಡೋಡಿಯು ಹಸುರಿನ ಒಂದು ಪರ್ಯಾಯ ದ್ವೀಪವಾಯಿತು. ಎಲ್ಲಿ ನೋಡಿದರಲ್ಲಿ ಹಸುರಿಂದ ಕಂಗೊಳಿಸುವ ಗುಡ್ಡ ಬೆಟ್ಟಗಳು ! ನೆಲ. ಜಲ, ಬಾನುಗಳನ್ನೆಲ್ಲ ಒಂದುಗೂಡಿಸುವ ನೀಲಿಮೆ ನಿಸರ್ಗದ ಚೇತನ ಶಕ್ತಿಯಾಗಿ ಕಾಣಿಸುತ್ತಿತ್ತು. ನೆಲವೋ ! ಬಿಸಿಲ ಬೇಗೆಯಿಂದ ಕರಟಿಹೋದ ಹುಲ್ಲುಗಳಾಗಲಿ, ಕಡಿದೆಸೆದ ಗಿಡಗಳಾಗಲಿ, ಸವರಿ ಮಟ್ಟ ಮಾಡಿದ ನೆಲವಾಗಲಿ ಬೂದು, ಕಂದು ಬಣ್ಣಗಳನ್ನು ತಾಳಿ, ದಣಿದು ಬಿದ್ದಂತೆ ಈ ತನಕ ಕಾಣಿಸಿಕೊಂಡಿದ್ದರೆ, ಈಗ ನೆಲದ ಅಂಗುಲ ಅಂಗುಲವೂ ಹಸುರು ಚಿಗುರುಗಳಿಂದ, ಮೊಳಕೆಗಳಿಂದ ಜೀವಕಳೆ ಹೊತ್ತಿದೆ. ಮಳೆಗಾಲದ ದೂತತ್ವ ವಹಿಸಿ ಬರುತ್ತಿದ್ದ ಮುಗಿಲ ರಾಶಿಗಳಿಂದ ಮೂಡಣಬೆಟ್ಟದ ಸೆರಗು, ಸಂಜೆ ಮುಂಜಾನೆಗಳಲ್ಲಿ ರಂಜಿಸತೊಡಗಿದೆ. ಹಗಲಿನ ಬೇಗೆಗೆ ಮುಗಿಲುಗಳು ಈ ಗೋಡೆಗೆ ಅಂಜಿ, ಪ್ರಖರ ಸೂರ್ಯ ರಶ್ಮಿಯಿಂದ ಸೋಲಿಸಿಕೊಂಡು ಓಡಿದಂತೆ ಕಂಡರೂ, ಮೇಲಿಂದ ಮೇಲೆ ಬೆಟ್ಟವನ್ನು ಮುತ್ತುತ್ತಲೇ ಇದ್ದುವು. ದಿನ ಬರುತ್ತಲೇ ಹಿಮ್ಮೆಟ್ಟುತ್ತಲಿದ್ದುವು. ಒಂದು ದಿನ ರಾತ್ರಿ ಅವಕ್ಕೇ ವಿಜಯ ದೊರಕಿತು. ಮುಗಿಲ ಬಲ ಹೆಚ್ಚಿತು ; ಅವು ಕಾಳರಾಹುವಿನಂತೆ ಗಿರಿಶೃಂಗಗಳ ಮೇಲೆ ಹೂಡಿದ ಮುತ್ತಿಗೆಯನ್ನು ಸಡಲಿಸದೆ, ರಕ್ಕಸರಂತೆ ಹಲ್ಕಿಸೆದು ಗುಡುಗೆಬ್ಬಿಸಿ, ಕಣ್ಣಿಂದ ಸಿಡಿಲ ಕಿಡಿಯನ್ನು ಕಾರಿ. ತಮ್ಮ ಆವೇಶವನ್ನೆಲ್ಲ ತೋರಿದುವು. ತುಂಟ ಹುಡುಗನನ್ನು ಹಿಡಿದು ದಂಡಿಸಿ, ಬಚ್ಚಲ ಮನೆಯಲ್ಲಿ ನಿಲ್ಲಿಸಿಕೊಂಡು ಬಲವಂತದ ಸ್ನಾನ ಮಾಡಿಸುವ ಮುದ್ದು ತಾಯಿಯ ಕ್ರೌರ್ಯ ಪ್ರೇಮಗಳೆರಡಕ್ಕೂ ಅವಕಾಶವಾಯಿತು–ಆ ರಾತ್ರಿ !

ಮರುದಿನದ ನೋಟವೇ ಬೇರೆ. ನೆಲ, ಬೆಟ್ಟ ಮುಗಿಲುಗಳೊಳಗೆ ಯಾವುದೋ ಒಂದು ಬಗೆಯ ಸ್ನೇಹಮಯ ಲೀಲಾನೃತ್ಯ, ಕಣ್ಣುಮುಚ್ಚಾಳೆಯಾಟದಂಥ ವಿಲಾಸವೇ ತೊಡಗಿತು. ಬಿಸಿಲಿಂದ ಬಿರಿದು ಮಸಣದಂತಾದ ನೆಲ ನಿತ್ಯೋದ್ಯಾನವಾಯಿತು.

ದೇಹಲಿ ನಿವಾಸಿಯಾದ ಶಂಕರನ ವೈಜ್ಞಾನಿಕ ಮನಸ್ಸು, ವರ್ಷ

ಕಾಲದ ಈ ವಿಚಿತ್ರ ತಾಂಡವವನ್ನು ಕಂಡು ಮುಗ್ಧಗೊಂಡಿತು. ಅವನು ಸೃಷ್ಟಿಯ ಈ ಲಾಸ್ಯದಲ್ಲಿ ಓಡಾಡುವ ಶಿಶುವಾದ. ಮಳೆಯ ಪ್ರಾಪ್ತಿಯಿಂದ ಮೂಡೋಡಿಯ ಭೂಮಿ ವಿಚಿತ್ರ ಲಾವಣ್ಯ ತಾಳಿದ್ದು, ಅವನಲ್ಲಿ ಹೊಸ ರಕ್ತವನ್ನು ತುಂಬಿ ತುಳುಕಿಸಿತು. ಆ ಭೂಮಿಯು ಕುಡಿ ಇರುವುದು ತೀರಾ ಈಶಾನ್ಯಕ್ಕೆ ; ಒಂದು ಬೆಟ್ಟದ ಒಳಬೆಯಲ್ಲಿ ಆ ಮೂಲೆಯಿಂದಲೇ ಬೆಟ್ಟದ ಅಬ್ಬಿಯೊಂದು ಭೋರ್ಗರೆಯುತ್ತ, ನಲಿನಲಿದು ಪ್ರವಾಹವಾಗಿ ಹರಿದು, ಧೂಳಿನ ಕೆನ್ನೀರನ್ನೆಲ್ಲ ಬಂಗಾಡಿಯ ಹೊಳೆಗೆ ತಂದು ತುಂಬಿಸಿ, ಅದರ ಶಾಂತ ಸ್ವರೂಪವನ್ನು ಕಲಕಿ, ಆ ನದಿಗೂ ಯೌವನದ ಮತ್ತತೆಯನ್ನು ತುಂಬಿಸುತ್ತಿತ್ತು.

ಮೂಡೋಡಿಯ ಎಡಬಲಗಳಲ್ಲೆಲ್ಲ ಅಬ್ಬಿಗಳು ; ಪಡುವಣಕ್ಕೆ ಹೊಸ ಯೌವನದಿಂದ ಹರಿಯುವ ಹೊಳೆ; ಮೂಡಣಕ್ಕೆ ಬೆಟ್ಟದ ಹಸುರು ಗೋಡೆ ಅದೊಂದು ಪರ್ಯಾಯ ದ್ವೀಪ ಅಥವಾ ಲಾವಣ್ಯದ ಸೆರೆಮನೆಯೆಂದರೂ ಸಲ್ಲುತ್ತದೆ. ಹಳ್ಳ ದಾಟಿ ಆಚೀಚೆ ಹೋಗುವುದು ಕಷ್ಟ. ಶಂಕರನಾಗಲೀ, ಅವನ ಆಳುಗಳಾಗಲೀ ತೀರ ಅವಶ್ಯವಿದ್ದಾಗ ಮಾತ್ರ ತಾವು ಕಟ್ಟಿದ ಬೀಳಲಿನ ಸೇತುವೆಯನ್ನು ದಾಟಿ ಆಚೀಚೆ ಹೋಗುತ್ತಿದ್ದರು. ದಿನ ನಿತ್ಯ ಶಂಕರ ಮಳೆನೀರನ್ನು ಅಳೆಯುತ್ತಾನೆ. ಮೊದಲ ಎರಡು ತಿಂಗಳಲ್ಲೇ ೧೫೦ ಇಂಚು ಮೀರಿಸಿತು ಮಳೆ. ದೇಹಲಿಯಲ್ಲಿ ಅಂಥ ಮಳೆಗಾಲವನ್ನೆಂದಾದರೂ ಕಂಡಾನೆಯೇ? ಮೂಡೋಡಿಯ ಒಂದೇ ದಿನದ ಮಳೆ ದೇಹಲಿಯ ವರ್ಷದ ಮಳೆಯಾಗುವುದುಂಟು.

ಎಂಥ ಜಡಿಮಳೆಯಾದರೇನು ?–ಬಂಗಾಡಿಯ ಜನರು, ಕಂಬಳಿಯ ತೆಂಗಿನ ಗರಿಗಳ ಗೊರಬನ್ನು ಮಾಡಿಕೊಂಡು ದಿನವೆಲ್ಲ ಕೆಲಸಕ್ಕಾಗಿ ಓಡಾಡುತ್ತಿದ್ದಾರೆ. ಯಾವತ್ತು ಕೆಲಸ ಮಳೆಯ ಆರ್ಭಟೆಯಲ್ಲೇ. ಹಿಂದಣ ವರ್ಷ ಬಂದಾಗ ಆ ಊರಲ್ಲಿ ಮಳೆ ಹೆಚ್ಚು ಎಂಬ ಅನುಭವ ಅವನಿಗಾಗಿತ್ತು. ಆದರೆ ಅದೆಂಥ ಮಳೆಯೆಂದು ಅರಿತದ್ದು ಈಗ ಮಾತ್ರ.

ಅವನೂ ಆ ಮಳೆಯಲ್ಲಿ ದುಡಿಯತೊಡಗಿದ. ಆಳುಗಳೂ ಓಡಾಡುತ್ತಿದ್ದಾರೆ, ಮುತ್ತಯ್ಯಗೌಡನೂ ಮಳೆಯಲ್ಲೇ ನೆನೆದು ಅಲೆದಾಡುತ್ತಿದ್ದಾನೆ. ಎಳೆಯ ಕುಕ್ಕಪ್ಪನೂ ಆ ಮಳೆಯಲ್ಲಿ ಎಮ್ಮೆ ಕೋಣಗಳನ್ನು

ಮೇವಿಗೆ ಅಟ್ಟಿ ಕರತರುತ್ತಾನೆ. ಮಳೆಯಿಂದ ರಾತ್ರಿ ಬೆಳಗುಗಳಲ್ಲಿ ಹವೆಯಲ್ಲಿ ಶೈತ್ಯ ತುಂಬಿಕೊಳ್ಳುತ್ತದೆ. ಅಂಥ ಸಮಯದಲ್ಲಿ ಶಂಕರ ಕಟ್ಟಿಸಿದ ಬಿದಿರು ತಟ್ಟಿಯ ಮನೆ ಮಾತ್ರ ಅಲ್ಲಿನ ಜೀವನಕ್ಕೆ ತಕ್ಕುದಲ್ಲ—ಎಂದು ಅವನಿಗೂ ತಿಳಿಯತೊಡಗಿತು. ಹೊರಗೆ ಮಳೆ ಗಾಳಿ ಬೀಸತೊಡಗಿದರೆ, ಮನೆಯೊಳಗೆಲ್ಲ ನೀರೇ. ತೆಂಗಿನ ಸೋಗೆಯ ಚಾಪೆಗಳಿಂದ ಗೋಡೆಗಳನ್ನು ಹೊದೆಸಬೇಕಾಯಿತು. ಮುಂದಿನ ವರ್ಷ ಮಣ್ಣಿನ ಗೋಡೆಯನ್ನಾದರೂ ಮಾಡಬೇಕೆಂಬ ನಿರ್ಧಾರ ಅಲ್ಲಿಯೇ ಆತ ಮಾಡಬೇಕಾಯಿತು. ಮಳೆಗಾಲದ ವೆಚ್ಚಕ್ಕೆಂದು ತಂದಿರಿಸಿದ ಕಟ್ಟಿಗೆ, ರಕ್ಷಣೆ ಸಾಲದೆ ನೀರಿಂದ ತೊಯ್ದು, ಅಡುಗೆಯ ಕೆಲಸದಲ್ಲಿ ಕಣ್ಣೀರಿಯನ್ನು ಹುಟ್ಟಿಸಿತು.

ಗದ್ದೆಗಳಾಗಿ ವಿಂಗಡಿಸಿ, ಉತ್ತಂಥ ನೆಲದಲ್ಲಿ ಮೇಲಿಂದ ಮೇಲೆ ಕಳೆ ಚಿಗುರಿಕೊಂಡಿತು. ಆ ಗದ್ದೆಗಳಲ್ಲಿ ನೀರು ನಿಲ್ಲಿಸಿಕೊಂಡು, ಕಳೆಗಳನ್ನು ಬುಡ ಮೇಲಾಗಿಸಿ, ನಾಶಮಾಡಿ, ಸೊಪ್ಪು ಗೊಬ್ಬರ ತಂದು, ತುಂಬಿಸಿ, ಉಳುವ ಕೆಲಸ ಸಾಗಿಸಿದರು. ಎಳಚಿತ್ತಾಯರು ತಂದುಕೊಟ್ಟ ಆಗೆಯನ್ನು ಆ ಗದ್ದೆಯಲ್ಲಿ ತಂದು ನಟ್ಟುದೂ ಆಯಿತು. ಈ ಬೆಟ್ಟು ಗದ್ದೆಗಳ ಮೇಲಿದ್ದುದು ಪೂರ್ವದ ಜವುಗು ನೆಲ. ಅಲ್ಲಿ ಹೂಡಿದ ಕಾಲುವೆಗಳಿಂದ ನೀರು ಇಂಗಿತ್ತು. ಅಲ್ಲಿಯೂ ಉಳುಮೆ, ಬೇಸಾಯಗಳು ನಡೆದುವು. ಬತ್ತದ ಸಸಿಗಳನ್ನು ನಟ್ಟರು. ಎರಡು ಕಡೆಗಳಲ್ಲೂ ಪೈರೇನೋ ಚೆನ್ನಾಗಿ ಮೇಲಕ್ಕೆ ಬರತೊಡಗಿತು. ಗಾಳಿಗೆ ಅಲೆಯಲೆಯಾಗಿ ತಲೆದೂಗುವ ಸಸ್ಯವೃಂದವು ಮನಸ್ಸಿಗೆ ಉಲ್ಲಾಸ ತರತೊಡಗಿತು. ಅದನ್ನು ಕಂಡ ಎಳಚಿತ್ತಾಯರು, " ಈಗಿನವುಟ್ಟಿಗೆ ಬೆಳೆ ತುಂಬ ಹುಲುಸಾಗಿ ಕಾಣುತ್ತಿದೆ. ಗಿಡಗಳು ಸೊಕ್ಕದಿದ್ದರೆ ಒಳ್ಳೆಯ ತೆನೆಗಳೇ ಬಂದಾವು " ಎಂದು ಶಂಕರನೊಡನೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು.

ಹೊಲದ ಕೃಷಿ ಮೊದಲ ಎರಡು ತಿಂಗಳ ಕಾಲ ನಡೆಯಿತು. ಮುಂದೆ ಆಳುಗಳಿಗೆ ಕೆಲಸವಿಲ್ಲ—ಕೊಯ್ಲಿನ ತನಕ ಕೆಲಸವನ್ನು ಒದಗಿಸಿ ಕೊಡುವ ಹೊಣೆ ಅವನದು. ಇಲ್ಲದೆಹೋದರೆ ಆಳುಗಳ ಜೀವನ ಹೇಗೆ ಸಾಗಬೇಕು? ಪ್ರತಿ ತಿಂಗಳೂ ಅವನ ತಮ್ಮ ಕಳುಹಿಸುತ್ತಿದ್ದ ೨೦೦ ರೂಪಾಯಿಗಳಲ್ಲಿ ೧೫೦ರಷ್ಟು ಕೂಲಿಗೇನೆ ಕರಗುತ್ತಿತ್ತು. ಹಾಗೆ ವ್ಯಯಿ

ಸಿದ ಹಣ ಒಂದು ಪ್ರಯೋಜನಕ್ಕೆ ಬರಬೇಡವೇ? ಮೂಡೋಡಿಯಲ್ಲಿ ಸಾಗುಮಾಡದ ಭೂಮಿಯೇ ಇರಬಾರದೆಂದು ಅವನ ಹಂಬಲ.

ಶಂಕರ ಮುತ್ತಯ್ಯನನ್ನು ಕರೆದು "ಗೌಡ, ಮಳೆಗಾಲದಲ್ಲಿ ಬರಿದೆ ಕುಳಿತು ಮಾಡುವುದೇನು? ಬಹುಮಟ್ಟಿನ ಬೆಟ್ಟು ಬರಿದಾಗಿದೆ. ಮೂಡಣದ ಗುಡ್ಡದ ಸೆರಗು ಬರಿದೇ. ಯಾಕೆ ಹಾಗೆ ಅದನ್ನು ಸುಮ್ಮನಿರಿಸಬೇಕು? ಏನಾದರೂ ಮಾಡಲು ಬರಲಾರದೆ?" ಎಂದು ಕೇಳಿದ. ಆತ ವಿಚಾರಮಾಡಿದ; ಮಳೆಯ ಭರ ಕಡಿಮೆಯಾದರೆ ಅಲ್ಲಿ ಏನಾದರೂ ಮಾಡಬಹುದು ಎಂದು ಸೂಚಿಸಿದ. "ಬದನೆ, ಮೆಣಸು, ಒಂದಲ್ಲ ಒಂದನ್ನು ಬೆಳೆಯಬಹುದು. ಇಲ್ಲಿಯ ತನಕ ನಮ್ಮ ಬೇಲಿ, ಕಂದಕಗಳು ಕಾಡುಪ್ರಾಣಿಗಳನ್ನು ತಡೆದುದಾಗಿದೆ. ಆದರೆ ಮನೆಯ ವೆಚ್ಚಕ್ಕೆ ತರಕಾರಿ ಎಷ್ಟು ಬೇಕು? ಅದನ್ನು ಇನ್ನಷ್ಟು ಹೆಚ್ಚಾಗಿ ಬೆಳೆದುದರಿಂದ ಲಾಭ ಬರಲಾರದು. ತಲೆಹೊರೆಯಾಗಿ ಹೊತ್ತು, ಬೆಳ್ತಂಗಡಿಗೆ ಒಯ್ದು, ಸಂತೆಯ ಮಾರಾಟಮಾಡಿದರೆ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗಲಾರದು" ಎಂದು ಹೇಳಿದ. ಕೊನೆಗೆ, ನೆಲವನ್ನು ಬಂಜರುಬಿಡುವುದರಲ್ಲಿ ಅವನಿಗೆ ಯಾವ ಸಮಾಧಾನವೂ ಕಾಣಲಿಲ್ಲ. ಎರಡು ಎಕ್ರೆಯಷ್ಟು ನೆಲದಲ್ಲಿ ಗೆಣಸನ್ನೂ, ಇನ್ನೆರಡು ಎಕ್ರೆಗಳಲ್ಲಿ ಮೆಣಸನ್ನೂ ಬೆಳೆಯಿಸುವ ಸೂಚನೆ ಕೊಟ್ಟ. ಸೂಚನೆಯೊಂದಿಗೆ ಕೆಲಸವೂ ತೊಡಗಿತು. ಮಡಿಮಾಡಿದರು, ಕುಣಿ ತೋಡಿದರು, ಏರಿಹೊಡೆದರು, ಸಸಿ ನಟ್ಟರು, ಗೊಬ್ಬರ, ಬೂದಿ ಹಾಕಿಸಿದರು. ದಿನಹೋದಂತೆ—ಏನು ಬೆಳೆದರೂ ಬೆಳೆಯಬಹುದಾದ ಭೂಮಿ ಅದು—ಎಂಬ ವಿಶ್ವಾಸ ಉಂಟಾಯಿತು. ಅಷ್ಟೊಂದು ವರ್ಷ ಪಡು ಬಿದ್ದ ಭೂಮಿಯು ತನ್ನ ಸಸ್ಯಸಾರವನ್ನೆಲ್ಲ ತಾನೇ ಬಚ್ಚಿಟ್ಟುಕೊಂಡಿದೆ—ಎಂಬ ಸಂತೋಷ ಅವರಿಬ್ಬರಿಗೂ ಉಂಟಾಯಿತು. ಆದರೂ, ಗೊಬ್ಬರವೇ ಗಿಡಗಳ ಅನ್ನ, ಎಂದು ಬಲ್ಲ ಶಂಕರ ಅದನ್ನು ಶೇಖರಿಸುವ ಯೋಚನೆ ಮಾಡಿದನು. ದೊಡ್ಡದೊಂದು ಕುಣಿ ಅಗೆಯಿಸಿ, ಕಾಟುಕಲ್ಲುಗಳ ಗೋಡೆಯಿಂದ ಕುಣಿಯ ಮಗ್ಗುಲನ್ನು ಗಟ್ಟಿಮಾಡಿ, ಅದಕ್ಕೆ ಹಟ್ಟಿಯ ಗೊಬ್ಬರ, ಗಂಜಳ ತಂದುಹಾಕಿಸಿದ. ಸುತ್ತಲೂ ಅನರ್ಘವಾಗಿ ಬೆಳೆಯುವ ಕಾಡಿನ ಸೊಪ್ಪುಗಳನ್ನು ತಂದು ತುಂಬಿಸಿದ. ಕುಣಿಯ ಗಾತ್ರವನ್ನು ಕಂಡು ಬೆದ

ರಿದ ಮುತ್ತ "ಯಾಕೆ ಅಷ್ಟೆಲ್ಲ ಗೊಬ್ಬರ? ಇನ್ನು ಬೇಕಾಗುವುದು ಮುಂದಿನ ಮಳೆಗಾಲಕ್ಕೆ" ಎಂದು ಅನುಮಾನ ತೆಗೆದುದಕ್ಕೆ ಶಂಕರನೆಂದ "ಮುತ್ತಯ್ಯ, ನಾನು ಓದಿದ ಮಾತನ್ನು ಹೇಳುತ್ತಿದ್ದೇನೆ. ಅನುಭವದ ಮಾತಲ್ಲ. ನಿಜ. ಇಷ್ಟೆಲ್ಲ ಬೆಳೆಸುತಿದ್ದೇವೆ. ನೆಲದ ಸಾರವನ್ನೇ ಹೀರಿ ಈ ಗಿಡಗಳು ಬೆಳೆಯುತ್ತವೆ ಎಂದ ಮೇಲೆ, ಅವು ಕೊಂಡ ಸಾರವನ್ನೆಲ್ಲ ತಿರುಗಿ ನಾವು ನೆಲಕ್ಕೆ ಒಪ್ಪಿಸಲೇ ಬೇಕು. ಈ ಊರ ಹೊಲಗಳಲ್ಲಿ ಎರಡೆರಡು ಬಾರಿ ಬೆಳೆ ತೆಗೆಯುತ್ತಿದ್ದಾರೆ. ಆದಕ್ಕೆ ಎಷ್ಟೆಲ್ಲ ಸಾರ ಬೇಡ? ನೆಲದ್ದು ನೆಲಕ್ಕೇ ಸಲ್ಲಬೇಕು" ಎಂದ.

"ಅದೇನೋ ಸಮ. ನೆಲದಿಂದ ತೆಗೆದುದನ್ನು ನೆಲಕ್ಕೆ ಕೊಡಬೇಕಾದದ್ದು ನ್ಯಾಯ. ಆದರೆ ಎಲ್ಲ ನೆಲದಂತಲ್ಲ ಈ ನೆಲ. ಮೊದಲೇ ಇದು ಸಾರ ತುಂಬಿದ ಭೂಮಿ. ಗೊಬ್ಬರ ಹೆಚ್ಚಾಗಿ ಹಾಕಿದರೆ ಗಿಡಗಳು ಸೊಕ್ಕುವ ಭೀತಿ ಹೆಚ್ಚು. ತೆನೆಯ ಬದಲು ಸೊಪ್ಪು ಬಂದೀತು. ಅದಕ್ಕೇನೆ ನಮ್ಮೂರವರು ಗೊಬ್ಬರ ಹಾಕುವ ಬದಲು. ಗೊಬ್ಬರ ಸುಟ್ಟು ಬೂದಿಯನ್ನು ಹಾಕುತ್ತಾರೆ. ಗೊಬ್ಬರ ಇಲ್ಲಿನ ನೆಲಕ್ಕೆ ಹೆಚ್ಚಿಗೆ ಬೇಡ. ಮೇಲಿನ ಕಾಡನ್ನು ನೋಡಬಾರದೇ? ಎಷ್ಟು ಗಿಡಮರಗಳು ಬೆಳೆದಿಲ್ಲ. ಅವಕ್ಕೆ ಯಾರು ಗೊಬ್ಬರ ಹಾಕಿದ್ದಾರೆ. ಕಡಿದ ಹಾಗೆ ಗಿಡ ಚಿಗುರುತ್ತದೆ. ನಮ್ಮ ತೆಂಕಣಕ್ಕಿರುವ ಆಚೆಗಿನ ಗುಡ್ಡವನ್ನು ನೋಡಿ. ಅಲ್ಲಿ ಕಾಡು ಕಡಿದು ಎರಡು ವರ್ಷವಾಗಿಲ್ಲ. ಹುಚ್ಚು ಹುಚ್ಚಾಗಿ ಬೆಳೆದಿದೆ-ಗಿಡ, ಬಲ್ಲಿಗಳು. ಗೊಬ್ಬರ ಹೆಚ್ಚಾದರೂ ಅಪಾಯವೇ."

"ಮುತ್ತಾ, ಕಾಡಿನಲ್ಲಿ ಅದಕ್ಕೆ ಬೇಕಾಗುವ ಗೊಬ್ಬರ ಅಲ್ಲೇ ಸಿಗುತ್ತದೆ. ವರ್ಷಂಪ್ರತಿ ಉದುರುವ ಎಲೆಗಳು ಕೊಳೆತು, ಗಿಡಗಳಿಗೆ ಸಾರವಾಗುತ್ತದೆ. ಆ ಸಾರ ಮಳೆಯಿಂದ ಇಂಗಿ ಗಿಡಗಳಿಗೆ ಒದಗುತ್ತದೆ. ನಮ್ಮ ಬೇಸಾಯ ಹಾಗಿದೆಯೇ? ಬತ್ತ ಬೆಳೆಯಿಸಿದರೆ, ನಾವು ಕಾಳನ್ನೂ ಕೀಳುತ್ತೇವೆ, ಹುಲ್ಲನ್ನೂ ತೆಗೆಯುತ್ತೇವೆ. ತೆಗೆದ ಅಷ್ಟೊಂದು ಪದಾರ್ಥದ ಬಗ್ಗೆ ತಿರುಗಿ ನಾವು ಹೊಲಕ್ಕೆ ಕೊಡುವ ಗೊಬ್ಬರ ಸಾಕಾಗುವುದಿಲ್ಲ. ನಿಮ್ಮೂರ ವಾಡಿಕೆ ಹೇಗಿದೆಯೋ. ಆದರೆ ನನಗೆ ಚೆನ್ನಾಗಿ ಗೊತ್ತು. ಬೂದಿ, ಗೊಬ್ಬರದ ಕೆಲಸ ಮಾಡಲಾರದು. ಗೊಬ್ಬರ ಸುಟ್ಟು ಬೂದಿ

ಮಾಡಿದರೆ ಅದರ ಎಷ್ಟೋ ಸಾರಾಂಶ ನಷ್ಟವಾಗುತ್ತದೆ "

"ಹಾಗೆಂದರೆ ! ನಾನು ಕಣ್ಣಾರೆ ಕಂಡ ಅನುಭವ ಸುಳ್ಳೆನ್ನುತ್ತೀರಾ?"

" ಗೌಡಾ, ಸುಳ್ಳಲ್ಲ, ಗಿಡ ಬೆಳೆಯುವುದಕ್ಕೆ ಹತ್ತೆಂಟು ಬಗೆಯ ವಸ್ತುಗಳು ಬೇಕು. ಬೂದಿ ಅದರಲ್ಲಿ ಒಂದಂಶ ಮಾತ್ರ. ಗಾಳಿಯ ರೂಪದ ಸಾರವುಂಟು. ಉಪ್ಪಿನ ರೂಪದ ಸಾರವುಂಟು. ಅದರಲ್ಲಿ ಯಾವುದೊಂದು ಕಡಿಮೆಯಾದರೂ ಫಸಲು ಚೆನ್ನಾಗಿ ಬರುವುದಿಲ್ಲ. ನೆಲದೊಳಗೇನೇ ಇರ ಬೇಕಾದ ಎಷ್ಟೋ ವಸ್ತುಗಳುಂಟು. ಅದಕ್ಕೇನೆ ಇಲ್ಲಿನ ಜಾಗದ ನಾಲ್ಕಾರು ಕಡೆಗಳಿಂದ ಮಣ್ಣನ್ನು ತೆಗೆದು ಪರೀಕ್ಷೆಗೆಂದು ಕಳುಹಿಸಿದ್ದೇನೆ. ಈ ನೆಲ ದಲ್ಲಿ ಯಾವುದುಂಟು ಯಾವುದಿಲ್ಲ ಎಂದು ತಿಳಿಯಬೇಕಲ್ಲ. ಅದನ್ನು ತಿಳಿದಮೇಲೆ, ಕಡಿಮೆಯಾದ ಅಂಶ ತುಂಬಿಸಿಕೊಡಬೇಕು.

" ಹೌದು, ಆ ದಿನ ನೀವು ಅಲ್ಲಿಂದ ಇಲ್ಲಿಂದ ಒಂದೊಂದು ಮುಷ್ಟಿ ಮಣ್ಣು ತೆಗೆದು, ಪೊಟ್ಟಣ ಕಟ್ಟುವುದನ್ನು ನೋಡಿದೆ. ಆದರೆ ಅಷ್ಟರಿಂದ ಏನು ಪರೀಕ್ಷೆಯಾದೀತು ? "

" ಮುತ್ತಯ್ಯ, ನಿನಗೆ ಆ ಸಂಗತಿ ತಿಳಿಯುತ್ತದೋ ಇಲ್ಲವೋ. ನಮ್ಮ ಊರಲ್ಲಿ ಕೃಷಿಯೆಂದರೆ, ಪೂರ್ವಾಚಾರದಿಂದ ಬಂದ ಒಂದು ಕಸುಬು. ಹಿರಿಯರಂತೆ ಮಾಡಿಬರುವ ಒಂದು ಕಟ್ಟಳೆ. ಆದರೆ ಈ ಹೊತ್ತು ಕೃಷಿ ಎಂಬುದು ಬಹು ದೊಡ್ಡ ಕೆಲಸವೆಂದು ತಿಳಿದಿದ್ದಾರೆ. ನಾನು ಕಳುಹಿಸಿದ ಒಂದು ಮುಷ್ಟಿ ಮಣ್ಣಿನಿಂದಲೇ ಅದರ ಸ್ವಭಾವ ತಿಳಿದು ಹೇಳುವವರಿ ದ್ದಾರೆ. ಅದು ಒಂದೇನೆ ಅಲ್ಲ, ಪರದೇಶಗಳಲ್ಲಿ ಮೂರು ತಿಂಗಳಲ್ಲಾಗುವ ಬೆಳೆಯನ್ನು ಎರಡು ತಿಂಗಳಲ್ಲಾಗಬೇಕು—ಎಂದು ಹೇಳಿದರೆ, ಅದಕ್ಕೆ ಬೇಕಾದ ಬೀಜವನ್ನು ತಯಾರಿಸುತ್ತಾರೆ. ಅಷ್ಟು ಮಾತ್ರವಲ್ಲ, ನಾವೀಗ ಮೆಣಸು ನಟ್ಟಿದ್ದೇವಲ್ಲ. ಈ ಮೆಣಸಿನ ಖಾರ ಇನ್ನಷ್ಟು ಹೆಚ್ಚಬೇಕು ; ಒಳಗಿನ ಬೀಜ ತೀರ ಕಡಿಮೆಯಾಗಿರಬೇಕು. ಅದಕ್ಕೆ ಇಂಥದೇ ಬಣ್ಣ ಬರಬೇಕು-ಎಂದು ಹೇಳಿದರೆ, ಹತ್ತೆಂಟು ವರ್ಷಗಳಲ್ಲಿ ಅಂಥ ಗುಣಗಳುಳ್ಳ ಮೆಣಸಿನ ಬೀಜಗಳನ್ನೇ ಸೃಷ್ಟಿ ಮಾಡುವ ಪಂಡಿತರಿದ್ದಾರೆ " ಎಂದು ಹಲವು ಪಾಶ್ಚಾತ್ಯ ಶೋಧನೆಗಳನ್ನು ಗೌಡನಿಗೆ ಹೇಳಿ ಬೆರಗು ಉಂಟಾಗು ವಂತೆ ಮಾಡುತ್ತಿದ್ದ.

ಮುತ್ತಯ್ಯನಾದರೂ ತಾನು ಬಲ್ಲವ. ಧನಿ ಏನೂ ತಿಳಿಯದ ಮುದ್ದು ಕೂಸು–ಎಂದು ತಿಳಿದವನಲ್ಲ. ಧನಿಗಳಲ್ಲಿ ವಿಶ್ವಾಸ ಅವನಿಗಿದೆ. ಆ ವಿಶ್ವಾಸದಿಂದ—ಅವರೇನು ಪ್ರಯತ್ನ ಮಾಡುತ್ತಿದ್ದಾರೆ ; ಆ ಪ್ರಯತ್ನಗಳ ಫಲವಾಗಿ ಇಂದಿನ ಬೆಳೆ ಕೆಟ್ಟುಹೋದರೂ ನಾಳೆ ಚೆನ್ನಾದ ಫಲ ಸಿಗಬಹುದು–ಎಂಬ ನಂಬುಗೆ ಅವನಿಗೂ ಉಂಟಾಗುತ್ತಿತ್ತು. ಗೌಡನ ಈ ನಂಬಿಕೆಯ ಕಾರಣ ವಿಜ್ಞಾನವಲ್ಲ, ವಿವೇಕವಲ್ಲ. ಶಂಕರನ ಮೇಲಿದ್ದ ಭಕ್ತಿ, ಪ್ರೀತಿ.

ಮಳೆಗಾಲದಲ್ಲಿ ಶಂಕರ ಸದಾ ಆಳುಗಳ ಬೆನ್ನಿನ ಹಿಂದೆ ನಲಿಯುತ್ತಿರಬೇಕಾಗಿರಲಿಲ್ಲ. ಅವನ ಈ ಕೆಲಸದ ಭಾರವನ್ನು ಮುತ್ತಯ್ಯ ವಹಿಸುತ್ತಿದ್ದಾನೆ, ಗೆಳೆಯ ಕೃಷ್ಣ ವಹಿಸುತ್ತಿದ್ದಾನೆ. ಆದುದರಿಂದ ಅವನಿಗೆ ತುಂಬಾ ವಿರಾಮವಿದೆ. ಆ ವಿರಾಮವನ್ನು ತನ್ನ ಇನ್ನೊಂದು ಕನಸಿಗಾಗಿ ಬಳಸುತ್ತಿದ್ದಾನೆ. ಮನೆಯ ಮಗ್ಗುಲಲ್ಲಿಯೇ ಒಂದು ತಿದಿ ಹೂಡಿ, ಏನೋ ಕಬ್ಬಿಣದ ಕೆಲಸ ತೊಡಗಿದ್ದಾನೆ, ಅರ ಹಾಕಿ ಉಜ್ಜುತ್ತಾನೆ. ಬಿಡುವು ಮಾಡಿಕೊಂಡು ಮಂಗಳೂರಿಗೆ ಹೋಗಿ ಏನೇನೋ ಸಾಧನ, ಸಲಕರಣೆಗಳನ್ನು ಮಾಡಿಸಿಕೊಂಡು ತರುತ್ತಾನೆ. ಅವನ ದೃಷ್ಟಿಯು–ತನ್ನ ಭೂಮಿಯ ತುತ್ತುದಿಯಲ್ಲಿ ಹರಿದೋಡುವ ಅಬ್ಬಿಯ ಕಡೆಗೆ ನಟ್ಟಿದೆ. ಆ ಓಡುವ ನೀರಿನ ಶಕ್ತಿಯನ್ನು ಬಳಸಿಕೊಂಡು, ಸಣ್ಣಪ್ರಮಾಣದಲ್ಲಾದರೂ ವಿದ್ಯುತ್ತನ್ನು ಗಳಿಸಬೇಕೆಂಬ ಹಟ ಅವನದು. ಎಷ್ಟೆಂದರೂ ಅವನು ಆ ವಿಷಯದಲ್ಲೇ ಶಿಕ್ಷಣ ಪಡೆದವನಲ್ಲವೆ. ಬೀಳುವ ನೀರು ಬರಿದೆ ವ್ಯರ್ಥವಾಗಬಾರದು–ಎಂಬುದು ಅವನ ಬಾಯಾರಿಕೆ. ಆ ಬಾಯಾರಿಕೆ ತಣಿಸುವುದಕ್ಕೆ ಸಿದ್ಧವಾದ ಯಂತ್ರಸಾಮಗ್ರಿಗಳಿಲ್ಲ. ಯುದ್ಧಕಾಲವದು. ಒಂದು ವಸ್ತು ಸಿಕ್ಕಿದರೆ, ಇನ್ನೊಂದು ಸಿಗುತ್ತಿರಲಿಲ್ಲ. ಸಿಗುವ ವಸ್ತುವಿಗೂ ವಿಪರೀತ ಬೆಲೆ. ಆದುದರಿಂದ ಗೆಳೆಯ ಸೀತಾರಾಮನನ್ನು ಪೀಡಿಸಿ, ಏನೇನೊ ಸಲಕರಣೆಗಳನ್ನು ತರಿಸಿಕೊಂಡಿದ್ದಾನೆ. ಕಡಿಮೆ ಬೀಳುವ ವಸ್ತುಗಳನ್ನು ತಾನೇ ನಿರ್ಮಿಸುತ್ತೇನೆ–ಎಂಬ ಹಟ ತೊಟ್ಟಿದ್ದಾನೆ. ಅವನ ಈ ಕಮ್ಮಾರ ಕೆಲಸದಲ್ಲಿ ಕೃಷ್ಣನಿಗೂ ಆಸಕ್ತಿಯೇ. ಶಂಕರ ಅಬ್ಬಿಯ ನೀರಿನಿಂದ ವಿದ್ಯುತ್ತನ್ನು ಹೊರಡಿಸುತ್ತಾನೆ–ಎಂದು ಕೇಳಿದಮೇಲೆ, ಅವನ ಕುತೂಹಲ ಇನ್ನಷ್ಟು

ಹೆಚ್ಚಿದೆ. ಆತನನ್ನು ಪೀಡಿಸಿ, ಕೃಷ್ಣನು ಭೌತವಿಜ್ಞಾನ ಕಲಿಯುತ್ತಿದ್ದಾನೆ. ಅಸ್ಪಷ್ಟವಾದರೂ, ಅವನು ಕನಸಿನ ರಾಜ್ಯದಲ್ಲಿ ತೇಲುತ್ತಾನೆ.

ಒಂದು ದಿನ ಶಂಕರ, ತನ್ನ ಕೆಲಸಕ್ಕಾಗಿ ಮಂಗಳೂರಿಗೆ ಹೋಗಿದ್ದಾಗ ಕೃಷ್ಣನೊಬ್ಬನೇ ಕಮ್ಮಾರ ಸಾಲೆಯಲ್ಲಿ, ಮಗುವೊಂದು ಗೊಂಬೆಯನ್ನು ಮುದ್ದಿಸುವಷ್ಟು ಪ್ರೀತಿಯಿಂದ, ಶಂಕರ ಮಾಡಿಟ್ಟಿದ್ದ ಸಾಮಗ್ರಿಗಳನ್ನು ಒಂದೊಂದಾಗಿ ತೆಗೆದು ಮುದ್ದಿಸುತ್ತಿದ್ದ. ನಾಳೆ ಅದರಿಂದೇನಾದೀತು ಎಂಬ ಕಲ್ಪನೆಯನ್ನು ಮನಸ್ಸಿನಲ್ಲೇ ಕಲ್ಪಿಸುತ್ತಿದ್ದ. ಆ ವೇಳೆಗೆ ಮುತ್ತಯ್ಯನ ಸವಾರಿ ಅಲ್ಲಿಗೆ ಬಂದಿತು. ಅವನ ಕಣ್ಣು ಆ ವಸ್ತುಗಳ ಕಡೆಗೆ ಹೊರಳಿತು. " ಅದೇನಯ್ಯಾ, ಧನಿಗಳು ಇಲ್ಲಿ ಕುಳಿತು ಬಡಿಯುವುದು, ಮಸೆಯುವುದು. ಯಾವುದಕ್ಕಂತೆ ಆ ಕಬ್ಬಿಣದ ತುಂಡುಗಳು ?" ಎಂದು ಕೇಳಿದ. ಕೃಷ್ಣನಿಗೆ ನೆಪಕ್ಕೆ ಅಷ್ಟೇ ಪ್ರಶ್ನೆ ಬೇಕಿತ್ತು. ಉಪನ್ಯಾಸವನ್ನೇ ತೊಡಗಿಬಿಟ್ಟ. " ಗೌಡಜ್ಜ, ರಾಯರಿಗೆ ಏನೇನೆಲ್ಲ ಮಾಡುವ ಆಸೆ. ಎಷ್ಟು ದಿನ ಹಿಡಿಯುತ್ತದೆಯೋ. ಆದರೆ ನೋಡು, ರಾಯರು ಒಂದಲ್ಲ ಒಂದು ದಿನ ಎಣ್ಣೆ ಬತ್ತಿಗಳೆರಡೂ ಬೇಡದ ದೀಪವನ್ನು ಮಾಡಿ, ಈ ಮನೆಯಲ್ಲಿ ಉರಿಸುವುದು ಖಂಡಿತ. ಅದಕ್ಕಾಗಿಯೇ ರಾಯರು ಏನೇನೋ ಮಾಡುತ್ತಿದ್ದಾರೆ. ನನ್ನ ಅಣ್ಣ ಕೊಯಮತ್ತೂರಿನಿಂದ ಏನೇನೋ ಕಳುಹಿಸಿದ್ದಾನೆ " ಎಂದ.

" ಒಂದೆರಡು ದೀಪ ಉರಿಸಲಿಕ್ಕೆ ಇಷ್ಟು ಒದ್ದಾಟವೇ ? ಏನಾಗುತ್ತದೆ ಚಿಮಿಣಿ ದೀಪ ಉರಿಸಿದರೆ ? ಈ ಎಲ್ಲ ಕಷ್ಟವಿದೆಯೇ ? ಚಿಮಿಣಿ ಎಣ್ಣೆ ಸಾಕಷ್ಟು ಸಿಗುವುದಿಲ್ಲವೆಂದು ಹಾಗೆ ಮಾಡುತ್ತಾರೋ ಏನೋ. "

" ಹಾಗೇನಲ್ಲ ಮುತ್ತಯ್ಯ. ಅವರನ್ನು ' ನೀವೆಲ್ಲರೂ ಸೇರಿ, ಇಲ್ಲಿ ಹುಲಿ ಇದೆ, ಕಾಟಿ ಇದೆ, ಹಂದಿ ಇದೆ ' ಎಂದು ಹೆದರಿಸಿದ್ದೀರಿ. ಆ ' ಬೇಲಿಯೂ ಕಂದಕವೂ ಅವುಗಳನ್ನು ತಡೆಯಲಾರವು ' ಎಂದದ್ದರಿಂದ ಅವರ ತಲೆಯೇ ಕೆಟ್ಟುಬಿಟ್ಟಿದೆ."

" ಹಾಗೆಂದರೆ, ನಾವು ಈ ಊರವರೇ ಅಲ್ಲವೇ ? ವರ್ಷ ವರ್ಷವೂ ಕಾಡು ಪ್ರಾಣಿಗಳ ಉಪದ್ರವ ಕಾಣುತ್ತಿದ್ದೇವಲ್ಲ. ಸುಳ್ಳು ಹೇಳಿದ್ದಲ್ಲ, ಅನುಭವದಿಂದಲೇ ಹೇಳಿದ್ದು. ಮಳೆಗಾಲದಲ್ಲಿ ಆಚೀಚಿನ ಹಳ್ಳದ ನೀರಿಗೆ

ಹೆದರಿ ಅವು ದೂರ ನಿಲ್ಲಬಹುದು. ಮನಸ್ಸು ಮಾಡಿದರೆ ಅವಕ್ಕೆ ಹಳ್ಳವೂ ಲಕ್ಷ್ಯದ ಮಾತಲ್ಲ. ನಮ್ಮ ಬೇಲಿಯೂ ಹೇಳಿದ ತಡೆಯಲ್ಲ. ನಾವೂ ಈವರ್ಷ ಗೆಣಸು ನಟ್ಟಿದ್ದೇ ತಪ್ಪು. ಗೆಣಸಿದ್ದಲ್ಲಿ ಹಂದಿಯ ಉಪದ್ರವಿದೆ. ನನಗೆ ಅದು ಆವಾಗ ಹೊಳೆಯಲಿಲ್ಲ. ನಟ್ಟಮೇಲೆ ಅನಿಸುತ್ತಾ ಇದೆ. ಮೂರು ನಾಲ್ಕು ಮುಡಿಯಾಗುವಷ್ಟು ಜಾಗದಲ್ಲಿ ಗೆಣಸು ನಟ್ಟಿದ್ದೇವೆ, ಸೊಂಪಾಗಿ ಬೆಳೆದಿದೆ. ಹೂ ಬಿಡುವುದಕ್ಕಾಯಿತು, ಎಲ್ಲಿ ಈ ಶನಿಗಳು ಬಂದು ನುಗ್ಗುತ್ತಾವೋ ಎಂಬ ಹೆದರಿಕೆ ತೊಡಗಿದೆ. ಬಂದರಂತು ಮುಗಿಯಿತು-ಕುಂಬಾರಗೆ ವರ್ಷ, ದೊಣ್ಣೆಗೆ ನಿಮಿಷ."

"ಆದಕ್ಕೇನೆ ರಾಯರು ಇದನ್ನೆಲ್ಲ ತಯಾರು ಮಾಡುತ್ತಿರುವುದು. ಇನ್ನೂ ಮುಗಿಯಲಿಲ್ಲ. ಮುಗಿದ ಮೇಲೆ ನಮ್ಮ ಜಾಗಕ್ಕೆ ಸರಿಗೆಯ ಬೇಲಿ ಹಾಕುತ್ತಾರಂತೆ. ಅದರೊಳಗೆ ಮಿಂಚಿನ ಶಕ್ತಿ ಬಿಡುತ್ತಾರೆ. ಜಾನುವಾರು ಬಂದು ಮುಟ್ಟಿದರೆ, ಕಾಟ, ಕಡವೆ ಬಂದರೆ, ಅವುಗಳ ಮೈ ಬೇಲಿಗೆ ತಾಗಿದರೆ ಮೈ ಜುಮ್ ಆಗಿಬಿಡುತ್ತದೆ. ಅದೊಂದೇ ಈ ಪ್ರಾಣಿಗಳನ್ನು ತಡೆಯಬೇಕು-ಎನ್ನುತ್ತಾರೆ ಅವರು."

"ಹಾಗೂ ಒಂದುಂಟೇ! ಆಗಲಪ್ಪ ಬೇಗನೆ ಆಗಲಿ. ಇವರು ಮಾಡಿದ್ದನ್ನು ನೋಡಿ, ಊರವರೂ ಅದನ್ನು ಮಾಡಿಯಾರು. ಒಂದು ಹೊಸ ಉಪಾಯ ತೋರಿಸಿಕೊಟ್ಟಹಾಗಾಯಿತು ಜನಕ್ಕೆ."

"ಜನ ಅದನ್ನು ಮಾಡುವುದು ಸುಲಭವಲ್ಲ. ಬೇಕಾದ ಸಾಮಾನುಗಳು ಸಿಗುವುದಿಲ್ಲ. ಸಿಕ್ಕಿದರೂ ತುಂಬಾ ಬೆಲೆ. ಇವರಾದರೆ ಬೇಕಾದುದನ್ನು ಮಾಡುತ್ತಾರೆ. ಜನ ಮಾಡುವುದಾದರೆ ಎಂಜಿನು ಗಿಂಜಿನು ಅಂತ ಬೇರೆ ಯಂತ್ರ ಇರಿಸಿಕೊಳ್ಳಬೇಕು. ಇವರ ಉಪಾಯ ಬೇರೆಯೇ. ಗುಡ್ಡದ ನೀರು ಅಬ್ಬಿಯಾಗಿ ಇಳಿದು ಹಾಳಾಗುತ್ತದೆ. ಬೇಸಿಗೆಗೂ ಬತ್ತುವುದಿಲ್ಲ. ಆ ನೀರಿನಿಂದ ಯಂತ್ರ ತಿರುಗಿಸಿ, ಕೆಲಸ ಮಾಡಬೇಕೆಂಬ ಹಟ ಇವರದ್ದು. ಈ ಕೆಲಸಕ್ಕೇನೇ ಅವರು ಮಂಗಳೂರಿಗೆ ಹೋಗಿ ಬರುತ್ತಿರುವುದು. ತಿಂಗಳು ಎರಡು ತಿಂಗಳು ತಾಗೀತು ಎನ್ನುತ್ತಾರೆ" ಎಂದು ಮುತ್ತಯ್ಯ ಗೌಡನ ಆಸೆಗಳನ್ನು ಹೆಚ್ಚಿಸುವುದಕ್ಕೆ ಕೃಷ್ಣನೂ ಕಾರಣನಾಗುತ್ತಿದ್ದ.

ಈ ಮಾತುಕತೆ ನಡೆದ ಮರುದಿನವೇ ಮುತ್ತಯ್ಯ ಓಡೋಡಿ ಕೃಷ್ಣ

ನಿದ್ದಲ್ಲಿಗೆ ಬಂದು, ಮುಖ ಸಣ್ಣದು ಮಾಡಿ ಹೇಳಿದ "ಅಯ್ಯಾ, ನಾನು ಯಾವ ಹಾಳು ಗಳಿಗೆಯಲ್ಲಿ ಹಾಗೆಂದೆನೋ ಹಂದಿಯ ವಿಚಾರ ನಿನ್ನೆಯಷ್ಟೆ ಹೇಳಿದ್ದಲ್ಲವೆ! ನಿನ್ನೆ ರಾತ್ರಿಯೆ ಅವು ಗೆಣಸಿನ ಗದ್ದೆಗಳನ್ನು ಹೊಕ್ಕು ರಾಮಾರೂಢಿ ಮಾಡಿಬಿಟ್ಟಿದ್ದಾವೆ. ಇನ್ನಾಯಿತು; ಒಂದು ಸಾರಿ ರುಚಿಕಂಡ ಮೇಲೆ ಬಿಡುವಂತಿಲ್ಲ. ಮಾಡಿದ್ದೆಲ್ಲ ಅವುಗಳ ದರಿದ್ರ ಬಾಯಿಗಾಯಿತು" ಎಂದು ವ್ಯಸನತೋಡಿಕೊಂಡ. ಕೃಷ್ಣ ತಕ್ಷಣ ಎದ್ದುನಿಂತ. ರಾಮಯ್ಯನನ್ನು ಕೂಗಿ ಕರೆದುಕೊಂಡ. ಮುದುಕನೊಂದಿಗೆ ಗೆಣಸು ನಟ್ಟ ತಾವಿಗೆ ಹೋಗಿ ನೋಡಿದ. ಒಂದು ಮೂಲೆಯ ಗೆಣಸಿನ ಏರಿಗಳೆಲ್ಲ, ಹಂದಿಗಳ ಮಂದೆಯ ಕಾಲ ತುಳಿತದಿಂದ, ಕೆದಕಾಟದಿಂದ ತಲೆಕೆಳಗಾಗಿದ್ದುವು. ಅಷ್ಟೆಲ್ಲ ಮಾಡಿದ್ದು ಹಂದಿಯ ಹಿಂಡು ಎಂಬುದಕ್ಕೆ ಅನುಮಾನವಿಲ್ಲ. ಒಮ್ಮೆ ಗೆಣಸಿನ ರುಚಿ ಕಂಡ ಮೇಲೆ, ನಾಳೆಯ ದಿನ ಇನ್ನೂ ಹೆಚ್ಚಿನ ಹಾನಿಯಾಗು ವುದೆಂಬ ಭೀತಿ ಉಂಟಾಯಿತು. ಆದುದರಿಂದಲೇ—ಅವುಗಳು ಎಲ್ಲಿಂದ ನುಗ್ಗಿದುವು, ಹೇಗೆ ಬಂದುವು ಎಂಬುದರ ಸಂಶೋಧನೆಯನ್ನು ಮಾಡ ಬೇಕಾಯಿತು. ಹೆಜ್ಜೆಯ ಜಾಡನ್ನು ಅನುಸರಿಸಿ, ದಾರಿಯಲ್ಲಿ ಬಿದ್ದ ಗೆಣಸಿನ ತುಣುಕುಗಳ ಬೀಳಲುಗಳನ್ನು ಕಾಣುತ್ತ ಹೋದಂತೆ, ಮೂಡೋಡಿಯ ತೆಂಕುಭಾಗದ ಬೇಲಿಯನ್ನು ಮುರಿದು ಅವು ಬಂದುದು ಕಾಣಿಸಿತು. ಅಲ್ಲಿನ ದರೆಯೊಂದು ಕುಸಿದಿತ್ತು. ಅದರ ಮಣ್ಣು ಮಗ್ಗುಲ ಕುಣಿಯನ್ನು ಮುಚ್ಚಿತ್ತು. ಅವುಗಳ ಪ್ರವೇಶಕ್ಕೆ ಇಂಬು ಮಾಡಿಕೊಟ್ಟಿತ್ತು. ರಾಮಯ್ಯ ಆ ಬೇಲಿ, ಕಣಿಗಳನ್ನು ಸರಿಮಾಡಿ, ಇನ್ನಷ್ಟು ಮುಳ್ಳನ್ನು ನಟ್ಟು, ಹಂದಿಗಳ ದಾರಿಗೆ ಪ್ರತಿಭಟೆ ಹೂಡಿದ. ಮುತ್ತಯ್ಯನಿಗೆ—ಎಷ್ಟೆಂದರೂ ತಮ್ಮ ಬೇಲಿ ಎಷ್ಟು ಬಲವಾಗಿದ್ದರೂ ಹಂದಿಗೆ ಈಡಲ್ಲ—ಎಂಬ ಯೋಚನೆಯಾಗಿ, ಗೆಣಸಿನ ಹೊಲಕ್ಕೆ ರಾತ್ರಿ ಕಾವಲುಬೇಕು ಎಂದು ನಿರ್ಧರಿಸಿದ. ಆಳುಗಳನ್ನು ಕೂಡಿಕೊಂಡು ಹೊಲದ ಹತ್ತಿರ ಅಟ್ಟಳಿಗೆ ಕಾವಲಿನ ಮನೆಯನ್ನು ಕಟ್ಟ ತೊಡಗಿದ. ಆ ರಾತ್ರಿ ಅರ್ಧಮರ್ಧ ತಯಾರಾದ ಆ ಮನೆಯಲ್ಲಿ ಅವನೇ ಕಾವಲಾದ. ಅನಂತರ ಒಬ್ಬರಲ್ಲ ಒಬ್ಬರು ರಾತ್ರೆ ಕಾವಲಿರುತ್ತಿದ್ದರು; ಏನಾದರೂ ಸದ್ದಾದರೆ, ಡಬ್ಬಿಗಳನ್ನು ಬಡೆದು "ಹುಚೋ, ಹುಚ್ಚೋ" ಎಂದು ಗಂಟಲು ಬಿರಿದು ಗದ್ದಲವೆಬ್ಬಿಸುತ್ತಿದ್ದರು.

ಹಳ್ಳಿಯ ಊರಲ್ಲಿ ಕಾಗದ, ಪತ್ರ, ಸಾಮಾನು, ಸರಂಜಾಮು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುವುದಕ್ಕೆ ಅಡಚಣೆ ಹೆಚ್ಚು; ಆದರೆ ಸುದ್ದಿಯ ಸಂಚಾರ ಮಾತ್ರ ಬಹುತೀವ್ರ. ಶಂಕರನ ಗೆಣಸಿನ ಹೊಲಗಳನ್ನು ಕಾಡು ಹಂದಿಗಳ ಹಿಂಡು ಹೊಗ್ಗಿ, ಕೊಳ್ಳೆ ಹೊಡೆಯಿತೆಂಬ ಸುದ್ದಿಯು ತಂತಿ ವಾರ್ತೆಗೂ ಮಿಕ್ಕಿದ ವೇಗದಿಂದ ಊರಲ್ಲಿ ಹಬ್ಬಿತು. ಅದು ಯಾರ ಕಿವಿಗೆ ಬೀಳಬಾರದಿತ್ತೋ ಅಂತಹ ರಂಗರಾಯರ ಕಿವಿಗೇನೇ ಅದು ಹೋಗಿ ಬೀಳ ಬೇಕೇ? ಕೇಳಿ ಅವರ ಕಿವಿ ನಿಮಿರಿತು. ಅಜ್ಜಿಯ ಮುಂದಕ್ಕೆ ಹೋಗಿ ಬಣ್ಣ ಸವರಿ ಹೇಳಿದರು "ನಾವು ಬೇಡವೆಂದರೆ ಕೇಳುತ್ತಾನೆಯೇ ? ನಿನ್ನೆ ರಾತ್ರಿ ಯಂತೆ—ಒಂದು ಹಿಂಡು ಕಾಡುಹಂದಿ ಹೊಲವನ್ನು ನುಗ್ಗಿ, ಅವನು ನಟ್ಟ ಗೆಣಸು ಮೆಣಸನ್ನೆಲ್ಲ ತಲೆಕೆಳಗೆ ಮಾಡಿ ಹೋಯಿತಂತೆ. ಅಷ್ಟಕ್ಕೂ ಅವನಿಗೆ ಬುದ್ಧಿ ಬರಲಾರದು. ಕಾಟ, ಕಡವೆಗಳು ನುಗ್ಗಿ, ನಟ್ಟ ಬತ್ತದ ಪೈರು ತಲೆಕೆಳಗಾದರೂ ಅವನಿಗೆ ಜ್ಞಾನ ಬರಲಾರದು. ಅವನು ಎಂಜಿನಿಯರ ನಲ್ಲವೇ! ಇಲೆಕ್ಟ್ರಿಕ್‌ಬೇಲಿ ಮಾಡುತ್ತಾನಂತೆ. ಅದೊಂದು ಸೌಭಾಗ್ಯ ನೋಡಿ ದರಾಯಿತು. ಆ ಬೇಲಿಗೇನಾದರೂ ಕಡಿಮೆ, ಕಡಿಮೆ ೪,೦೦೦ ರೂಪಾಯಿ ಬೇಕಾದೀತು. ಅಪ್ಪನ ಧರ್ಮದ ದುಡ್ಡಿದೆ. ಖರ್ಚು ಮಾಡಲಿ. ಆದರೆ ಅಂಥ ಬೇಲಿ ಹಾಕಿ ಕಡವೆ, ಕಾಟಿ ಓಡಿಸುವ ಬದಲು, ನಮ್ಮ ಹಳ್ಳಿಯ ಜನರ ಪ್ರಾಣ ತೆಗೆಯದಿದ್ದರೆ ಸಾಕು. ಅಂಥ ಬೇಲಿಯ ವಿಚಾರ ನಾನೂ ಕೇಳಿದ್ದೇನೆ. ಯುದ್ಧ ಕೈದಿಗಳನ್ನಿರಿಸುವಲ್ಲಿ ಅಂಥ ಬೇಲಿಯನ್ನು ಹಾಕುತ್ತಾರಂತೆ. ಬೇಲಿ ಮುಟ್ಟಿದರೆ ಶೋಕ್ ಹೊಡೆದು ಆಸಾಮಿಯೇ ಫಡ್ಚ! ನಾಳೆ ಇವನ ಬೇಲಿಯನ್ನು ಅಕಸ್ಮಾತ್ ಯಾರಾದರೂ ಕೂಲಿಗಳು ಮುಟ್ಟಿ ಸತ್ತರೆ ಒಳ್ಳೆಯ ಕೀರ್ತಿ ಬರುತ್ತದೆ. ಪೋಲೀಸರ ಹಿಂದೆ ಇವನೂ, ನಾವೂ ತಿರುಗಾಡಿದರಾಯಿತು. ಆ ಪುಣ್ಯಾತ್ಮ ಇನ್ನೊಂದು ಸಾರಿ ಮನೆಗೆ ಬಂದಾಗ ಹೇಳು. ಇಂಥೆಲ್ಲ ಮಲಾಮತಿ ಮಾಡಬೇಡವೆಂದು ತಿಳಿಸು. ಬೇಕಾ ದರೆ ಆಳುಗಳಿಂದ ಇನ್ನೂ ಕಂತವಾದ ಕಣಿ, ಕಂದ ತೊಡಿಸಲಿ. ಈ ಇಲೆ ಕ್ಟ್ರಿಕಲ್ ವಹಿವಾಟು ಬೇಡ" ಎಂದು ಅಜ್ಜಿಯ ಮುಂದೆ ತಮ್ಮ ನಂಜನ್ನು ತೋಡಿಕೊಂಡರು.

ಮುದುಕಿಗೆ ಮೊಮ್ಮಗನ ವಿಚಾರದಲ್ಲಿ ಸಲ್ಲದ ಚಿಂತೆ ಮಾಡುವುದ

ಕ್ಕೊಂದು ಅವಕಾಶವಾಯಿತು. ಮೊಮ್ಮಗ ಹಿರಿಯರ ಭೂಮಿಯಲ್ಲಿ ಬಂದು ನೆಲಸಿ, ಸುಖವಾಗಿದ್ದಾನೆ–ಎಂದು ಕೇಳಬೇಕೆಂಬ ಆಸೆ ಅವಳಿಗೆ. ಅದನ್ನು ನೋಡಿಕೊಂಡು ತಾನು ಸತ್ತರೂ ಚಿಂತೆಯಿಲ್ಲ ಎನ್ನುವವಳು ಅವಳು. ಅಂಥವಳ ಕಿವಿಗೆ, ರಂಗರಾಯರು ಈ ಭೀತಿಯ ಸುದ್ದಿಯನ್ನು ಹಾಕಿದರೆ ಹೇಗೆ? ರಂಗನಾಡುವ ಮಾತುಗಳೆಲ್ಲ ಅಸೂಯೆ, ನಂಜುಗಳಿಂದ ಕೂಡಿದುವು–ಎಂದು ಗೊತ್ತು. ಆದರೂ ಸತ್ಯವೇ ಇಲ್ಲದವು ಎಂದು ತಿಳಿಯುವುದಕ್ಕೆ ಬರುತ್ತದೆಯೇ? ಶಂಕರನಿಗಾಗಿ ಕಾದು ಕುಳಿತಳು. ಅವನು ಬಂದರೆ ಕೇಳಬೇಕು-ಎಂಬ ಹಂಬಲ ತೊಟ್ಟಳು. ಮಳೆಗಾಲ ತೊಡಗಿದ ಮೇಲೆ ಶಂಕರ ಒಂದೋ ಎರಡೋ ಬಾರಿ ಹೋಗಿದ್ದ. ಹೋದಾಗಲೆಲ್ಲ ರಂಗರಾಯರಿದ್ದುದರಿಂದ ಕ್ಷಣಕಾಲ ನಿಂತು, ಅಜ್ಜಿಯೊಡನೆ ಒಂದೆರಡು ಮಾತನಾಡಿ ಹೊರಟು ಹೋಗಿದ್ದ. ಅವನಿಗೆ ರಂಗರಾಯರನ್ನು ಇದಿರಿಸುವ ಇಷ್ಟ ಖನೇನೂ ಇರಲಿಲ್ಲ. ಅಜ್ಜಿಯ ಸಲುವಾಗಿ ಅವರ ಮನೆಗೆ ಹೋಗಬೇಕಲ್ಲ–ಎಂಬ ವ್ಯಥೆಯೂ ಆಗುತ್ತಿತ್ತು. ಮಂಗಳೂರಿಗೆ ಹೋಗುವಾಗ ಅವರ ಮನೆಯ ಮಗ್ಗುಲಿಂದಲೇ ಹೋಗಿದ್ದರೂ, ಅವರ ಸ್ವರವನ್ನು ಕೇಳಿಯೇ ಅಲ್ಲಿಗೆ ಬಾರದೆ ಹೋಗಿದ್ದ.

ಅಜ್ಜಿಗೆ ಮೊಮ್ಮಗನನ್ನು ಕಾಣುವ ಆತುರವಾಯಿತು. ರಂಗನಿಲ್ಲದ ದಿನ ನೋಡಿ "ಮಗು ಒಮ್ಮೆ ಬಂದು ಹೋಗಲಿ" ಎಂದು ಹೇಳಿ ಕಳುಹಿಸಿದಳು. ಶಂಕರ ಮಂಗಳೂರಿಂದ ಬಂದ ಮೇಲೆ, ಗೇಣಸು ಸೂರೆಯಾದ ವಿಚಾರದಲ್ಲಿ, ಶ್ಯಾನುಭಾಗರು ಊರಲ್ಲೆಲ್ಲ ಹಬ್ಬಿಸಿದ ವಾರ್ತೆಗಳನ್ನು ಕೇಳಿದ್ದ. ಸಾಲದುದಕ್ಕೆ ವಿದ್ಯುತ್ ಬೇಲಿಯ ವಿಚಾರದಲ್ಲಿ ಹಬ್ಬಿಸಿದ ಸುದ್ದಿಯೂ ತಿಳಿದಿತ್ತು. ಹೀಗಾಗಿ ಅವರ ಮನೆಗೆ ಹೋಗುವ ಇಷ್ಟವೇ ಆಗಲಿಲ್ಲ. ಮನೆಯಲ್ಲಿ ಬೇಕಷ್ಟು ಕೆಲಸವಿದೆ. ಅವನ ವಿದ್ಯುತ್ ಸಲಕರಣೆ ಸಿದ್ಧವಾಗಿದೆ. ಅದನ್ನು ತಾತ್ಕಾಲಿಕವಾಗಿ ಅಬ್ಬಿಯ ಪಕ್ಕದಲ್ಲಿ ಹೂಡಿಯಾಯಿತು. ಹಂದಿಯ ಪ್ರವೇಶದಿಂದ ಅವನ ಈ ಕೆಲಸ ಚುರುಕಾಗಿ ನಡೆಯಿತು. ಭೂಮಿಯ ಸುತ್ತಲು ಅಲ್ಲಲ್ಲಿ ಮರದ ಕಂಬಗಳನ್ನು ನಿಲ್ಲಿಸಿದ. ಅವಕ್ಕೆ ಅಂತರ ಅಂತರವಾಗಿ ಸರಿಗೆಯ ಬೇಲಿಯನ್ನು ಬಿಗಿಯಿಸಿದ. ಅಬ್ಬಿಯ ನೀರಿಂದ ಚಿಕ್ಕ ಡೈನಮೋ ತಿರುಗುವಂತೆ ಮಾಡಿ ವಿದ್ಯುತ್ತನ್ನು ಹೊರಡಿಸಿ,

ಆ ವಿದ್ಯುತ್ತನ್ನು ಬೇಲಿಯ ಸರಿಗೆಗಳಿಗೆ ಒದಗಿಸಿದ. ಈ ಕೆಲಸ ಪೂರ್ಣವಾಗಿ ಎಳಚಿತ್ತಾಯರನ್ನು ಕರೆದುಕೊಂಡು ತನ್ನ ಆಳುಗಳ ಸಮ್ಮುಖದಲ್ಲಿ ಆದರ ಕೆಲಸ ತೋರಿಸಿದ. ತಾನು ಸರಿಗೆಯನ್ನು ಮುಟ್ಟಿದ ; ಉಳಿದವರಿಗೆ ಮುಟ್ಟಲು ಹೇಳಿ ಮೈ ಜುಮ್ಮಾಗುವಂತೆ ಮಾಡಿದ. ಎಳಚಿತ್ತಾಯರಿಗಂತು ತುಂಬ ಆಶ್ಚರ್ಯ, ಆಸೆ ಉಂಟಾಯಿತು. ಇಂಥ ಬೇಲಿಗಳಿದ್ದರೆ ಹೊರಗಿನ ಪ್ರಾಣಿಗಳಿಂದ ಬೆಳೆ ರಕ್ಷಿಸುವುದು ಸಾಧ್ಯ-ಎಂದನಿಸಿತು. ಎಲ್ಲರಿಂದಲೂ ಅಂಥ ಕೆಲಸ ಮಾಡಲು ಬಂದಿದ್ದರೆ ಆಗುತ್ತಿತ್ತು—ಎಂಬುದಷ್ಟೇ ಅವರ ಅಪೇಕ್ಷೆ. ಮುತ್ತಯ್ಯ ಗೌಡನ ಪಾಲಿಗೆ ಅದೊಂದು ಮಂತ್ರಶಕ್ತಿಯೇ ಎನಿಸಿತು. ಶಂಕರನ ಆ ಬೇಲಿಯ ನಿರ್ಮಾಣವನ್ನು ಕುರಿತು ಚರ್ಚಿಸುತ್ತ ರಂಗರಾಯರ ಹುಚ್ಚು ಮಾತುಗಳನ್ನು ನೆನೆದು ಹೇಳಿದ " ಸ್ವಾಮಿ, ನೀವೂ ಬೇಲಿ ಮುಟ್ಟಿದಿರಿ, ಮುತ್ತಯ್ಯನೂ ಮುಟ್ಟಿದ್ದಾನೆ, ಯಾರು ಇದರಲ್ಲಿ ಸತ್ತವರು ? ನಮ್ಮ ರಂಗರಾಯರು ಏನೇನೊ ಹೇಳುತ್ತಿದ್ದಾರಂತೆ. ವಿದ್ಯುತ್ ಬೇಲಿ ಹಾಕಿ ಜನರನ್ನು ಕೊಂದು ತಮಗೆ ಅಪಕೀರ್ತಿ ತರುತ್ತಾನೆ—ಎನ್ನುತ್ತಿದ್ದಾರಂತೆ. ಕೃಷಿಗೆ ನಾನು ಹೊಸಬನಿರಬಹುದು ; ಆದರಲ್ಲಿ ನಾನೂ ಹೆಡ್ಡನೂ ಇರಬಹುದು. ಆದಕ್ಕೇನೆ—ಏನು ಕೆಲಸ ಮಾಡಬೇಕಾದರೂ ನಿಮ್ಮಂಥವರನ್ನು ಹೆಜ್ಜೆ ಹೆಜ್ಜೆಗೂ ಕೇಳಿ ಮುಂದುವರಿಯುತ್ತಿದ್ದೇನೆ. ಆದರೆ ನಾಲ್ಕು ವರ್ಷ ಕಾಲ ಕಾಲೇಜಿನಲ್ಲಿ ಪಾಠ ಹೇಳಿಸಿಕೊಂಡ ನನಗೆ, ವಿದ್ಯುತ್ತಿನ ವಿಚಾರವೂ ತಿಳಿದಿಲ್ಲ-ಎಂಬ ರೀತಿಯಲ್ಲಿ ದೂರಿ, ಶ್ಯಾನುಭಾಗರು ಅಪಪ್ರಚಾರ ಮಾಡಿದರೆ ಯಾರಿಗೆ ಭೂಷಣ ? " ಎಂದು ನೋವಿನಿಂದ ನುಡಿದ.

"ಶಂಕರರಾಯರೇ, ಅದನ್ನೇನನ್ನು ಮನಸ್ಸಿಗೆ ಹಚ್ಚಿಕೊಳ್ಳುತ್ತೀರಿ ? ಶ್ಯಾನುಭಾಗರ ಸ್ವಭಾವವೇ ಹಾಗೆ. ಕಹಿ ಮಾತನಾಡಿಯೇ ಅವರಿಗೆ ಗೊತ್ತು ಹೊರತು ಸಿಹಿ ಮಾತನಾಡಿದವರಲ್ಲ. ಈ ತನಕ ನನ್ನೊಡನೆಯೇ ಸಾವಿರ ಸುದ್ದಿ ಹೇಳಿದ್ದಾರೆ. ಈಚೆ ಕಿವಿಯಲ್ಲಿ ಕೇಳಿದೆ ; ಆಚೆ ಕಿವಿಯಿಂದ ಬಿಟ್ಟೆ. ನಿಮಗೆ ಎಮ್ಮೆ, ಕೋಣ ತೆಗೆಯಿಸಿ ಕೊಟ್ಟಿದ್ದಕ್ಕೇನೇ ನನ್ನ ಮೇಲೆ ನಂಜು ಕಾರಿದರು. ಅವರ ನಾಲಿಗೆ ಅಂಥದೇ. ಅವರು ಮಾಡಿದ ಪಾಪ ಅವರಿಗೇನೇ ಹೊರತು-ನಮಗೇನು ಬಾಧಕ ? ಅದನ್ನೆಲ್ಲ ಮನಸ್ಸಿಗೆ ಹಾಕಿಕೊಳ್ಳಬೇಡಿ."

"ಮನಸ್ಸಿಗೆ ಹಾಕಿಕೊಳ್ಳುವವ ನಾನಲ್ಲ. ನನಗೆ ಬಂದಿರುವ ಉಭಯ ಸಂಕಟ ಇದು-ಅಜ್ಜಿ ಆಗಾಗ ನನ್ನನ್ನು ಬರಬೇಕೆನ್ನುತ್ತಿದ್ದಾರೆ. ಅವರನ್ನು ಕಾಣದೆ ನನ್ನ ಮನಸ್ಸಿಗೂ ಸಮಾಧಾನವಿಲ್ಲ. ಶ್ಯಾನುಭಾಗರು ಮಾಡುತ್ತಿರುವ ಅಪಪ್ರಚಾರ ಕೇಳಿದರೆ, ಅವರ ಮನೆಗೆ ಕಾಲಿರಿಸಲು ಮನಸ್ಸಾಗುವುದಿಲ್ಲ. ನನಗೆ ಬರುವ ತೊಂದರೆ ಅದು. ಹೋಗಲಾರೆ; ಹೋಗದಿರಲಾರೆ. ಮೊನ್ನೆ ಏತಕ್ಕೋ 'ಶಂಕರ ಬರಲಿ' ಎಂದು ಹೇಳಿ ಕಳುಹಿಸಿದ್ದಾರೆ. ಮಳೆಗಾಲ ಕಳೆದ ಮೇಲೆ, ಅವರು ಒಪ್ಪಿದರೆ ಅವರನ್ನೇ ಇಲ್ಲಿಗೆ ಕರತರುವ ಮನಸ್ಸು ನನ್ನದು. ನಾಲ್ಕು ದಿನವಾದರೂ ಅವರ ಸೇವೆ ಮಾಡಬೇಕೆಂಬ ಆಸೆ ನನಗಿದೆ, ಆ ಭಾಗ್ಯ ನನಗಿದೆಯೋ ಇಲ್ಲವೋ-ಯಾರು ಬಲ್ಲರು? ಶ್ಯಾನುಭಾಗರ ಬಾಯಿಯಿಂದ ಬರುವ ಇಲ್ಲದ ದೂರನ್ನು ಕೇಳಿ ಅವರಿಗೂ ತುಂಬಾ ವ್ಯಥೆಯಾಗುತ್ತಿರಬೇಕು."

ಅದಕ್ಕೆ ಎಳಚಿತ್ತಾಯರು ಸಮಾಧಾನ ಹೇಳುತ್ತಾ "ಏನೇ ಆಗಲಿ, ನಿಮ್ಮ ಮನಸ್ಸಿಗೆ ಎಷ್ಟೇ ನೋವಾದರೂ, ಅವರನ್ನು ಆಗಾಗ ಹೋಗಿ ಕಾಣಬೇಕು. ನಿಮ್ಮ ಕುಲದೇವತೆ ಅವರು. ಹೋಗಿ ನೋಡಿಕೊಂಡು ಬನ್ನಿ. ಅವರಿಗೆ ವಯಸ್ಸಾಯಿತು. ಎಷ್ಟು ದಿನ ಬದುಕುತ್ತಾರೋ, ಯಾರು ಬಲ್ಲರು. ಶ್ಯಾನುಭಾಗರ ಬಾಯಿಗೆ ಬೀಗ ಹಾಕುವವರು ಯಾರು ? ಅವರಿಲ್ಲದ ದಿವಸ ನೋಡಿ ನಿಮಗೆ ತಿಳಿಸುತ್ತೇನೆ; ಬೇಕಾದರೆ ಬಂದು ನಿಮ್ಮನ್ನು ಕರೆದುಕೊಂಡು ಹೋಗುತ್ತೇನೆ, ನಿಮ್ಮ ಜತೆಯಲ್ಲಿ ನನಗೂ ಇಷ್ಟು ಮಂಗಳಾರತಿ ಆದೀತು, ಆಗಲಿ" ಎಂದರು.

ಮುಂದಿನ ಸೋಮವಾರವೇ, ಶ್ಯಾನುಭಾಗರು ಬೆಳ್ತಂಗಡಿಯ ಸಂತೆಗೆ ಹೋಗಿದ್ದಾರೆ-ಎಂಬ ಸುದ್ದಿ ದೊರಕಿತು. ಅವರು ಶಂಕರನಲ್ಲಿಗೆ ಬಂದು, ಅವನನ್ನು ಶ್ಯಾನುಭಾಗರ ಮನೆಗೆ ಕರೆದುಕೊಂಡು ಹೋದರು. ಹಲವು ದಿನಗಳ ಬಳಿಕ ಆತನಿಗೆ ಅಜ್ಜಿಯ ದರ್ಶನವಾಯಿತು. ಆಕೆ ಅವನನ್ನು ಬಳಿಯಲ್ಲಿ ಕುಳ್ಳಿರಿಸಿಕೊಂಡು "ಏನು ಮಗು, ಈಗೀಗ ನೀನು ಬರುವುದೇ ಇಲ್ಲ. ಕೆಲಸವೇ? ಬೇಸಾಯದ ಕೆಲಸ ಮುಗಿಯಿತಲ್ಲ. ಆಗಾಗ ಬಂದು ಹೋಗಬಾರದೇ? ನಮ್ಮ ರಂಗ ಬುದ್ಧಿಗೇಡಿಯಾಗಿ ಆಡಿದ ಮಾತುಗಳನ್ನು ಕೇಳಿ ನೊಂದುಕೊಂಡೆಯಾ?" ಎಂದು ಸಂಭಾಷಣೆಗೆ ತೊಡಗಿದಳು. ಮಾತ

ನಾಡುತ್ತ-ಗೆಣಸಿನ ಬೆಳೆ, ಮೆಣಸಿನ ಬೆಳೆ, ಮುಳ್ಳಿನ ಬೇಲಿ, ಮಿಂಚಿನ ಬೇಲಿ ಎಲ್ಲ ಸುದ್ದಿಗಳೂ ಬಂದುವು. ಎಳಚಿತ್ತಾಯರು ಕೊನೆಯದನ್ನು ಕುರಿತು ಪ್ರತ್ಯಕ್ಷ ಸಾಕ್ಷಿ ಕೊಟ್ಟರು. ಆಕೆ ಸಮಾಧಾನಗೊಂಡು, ತನ್ನ ತೀರ್ಮಾನವನ್ನೂ ಹೇಳಿದಳು-"ನಮ್ಮ ರಂಗನ ಸ್ವಭಾವ ತೀರ ಒರಟು. ನಾಲಿಗೆಯೂ ಕೆಟ್ಟದು. ಬ್ರಹ್ಮನೇ ಅದನ್ನೆಲ್ಲ ತಿದ್ದಬೇಕು. ಅವನು ಹೇಳುವುದನ್ನೆಲ್ಲ ಹೇಳುತ್ತಿರಲಿ, ನೀನು ಮಾಡುವುದನ್ನು ಬಿಡಬೇಡ" ಎಂದಳು ; ಆಚೀಚೆ ನೋಡಿದಳು. ಸಮೀಪ ಇನ್ನಾರೂ ಇಲ್ಲದ್ದನ್ನು ಕಂಡು "ಮಗು ನನಗೆ ನಾನು ಹುಟ್ಟಿದ ಮನೆಯಲ್ಲಿ, ಮನೆಯೆಲ್ಲಿದೆ ಈಗ? ಆದರೂ ನೆಲವಾದರೂ ಉಳಿದಿದೆಯಲ್ಲ, ಅಲ್ಲಿ ಹೋಗಿ ಸಾಯಬೇಕೆಂಬ ಆಸೆ. ಬಹುದಿನ ಬದುಕುತ್ತೇನೆ ಎಂಬ ಭರವಸೆ ಇಲ್ಲ, ನೀನು ಕರೆದುಕೊಂಡು ಹೋಗಿ ನನ್ನ ಈ ಆಸೆಯನ್ನು ಪೂರೈಸುತ್ತೀಯಾ?" ಎಂದು ಕೇಳಿದಳು. ಈ ಮಾತುಗಳನ್ನಾಡುವಾಗ ಆಕೆಯ ಮುಖ ಕಡುದೀನವಾಗಿತ್ತು. ಎಳಚಿತ್ತಾಯರೆಂದರು "ಅಮ್ಮಾ, ನಿಮ್ಮಂತಹ ಹಿರಿಯರು ಆಡಿದ ಮಾತುಗಳನ್ನು ಕಿರಿಯರು ನಡೆಸಿಕೊಡಬೇಕು. ಶಂಕರರಾಯರ ಮನಸ್ಸಿನಲ್ಲಿಯೂ ಅದೇನೇ ಇದೆ. ಆದರೆ ನಿಮ್ಮ ಇನ್ನೊಬ್ಬ ಮೊಮ್ಮಗ ಬಿಡಬೇಕಲ್ಲ? ಅವರ ಹತ್ತಿರ ಒಂದು ಸಹಾಯವನ್ನೂ ಕೇಳದಿದ್ದರೂ ದೂರದಲ್ಲಿ ಕುಳಿತು ಏನೆಲ್ಲ ಹೇಳುತ್ತಿದ್ದಾರೆ. ನಿಮ್ಮನ್ನು ಕರೆದುಕೊಂಡು ಹೋದದ್ದಾದರೆ ಇನ್ನೇನೆಲ್ಲ ಅನ್ನಲಾರರು ? ತಾನು ಹಾಳಾದದ್ದೂ ಸಾಲದೆ, ಅಜ್ಜಿಯನ್ನು ಮನೆತಪ್ಪಿಸಿ, ಕೊಲ್ಲುವುದಕ್ಕೇನೇ ಕರೆದುಕೊಂಡು ಹೋದ-ಎಂದಾರು" ಎಂಬ ತಮ್ಮ ಭೀತಿಯನ್ನು ವ್ಯಕ್ತಪಡಿಸಿದರು.

" ಅವನು ಏನೂ ಅಂದಾನು, ಅನ್ನುವವನೇ. ನಾನು ಈ ಮನೆಯಲ್ಲಿ ಅನುಭವಿಸಬೇಕಾದುದನ್ನೆಲ್ಲ ಅನುಭವಿಸಿದ್ದೇನೆ. ರಂಗನ ಅಜ್ಜ ಎಷ್ಟೇ ಅನ್ಯಾಯ ಮಾಡಿರಲಿ, ಅನ್ಯಾಯವೇನು ? ನಮ್ಮ ಹಳೆಯ ಮನೆ ಮಣ್ಣುಗೂಡುವುದಕ್ಕೂ, ಅಣ್ಣ ದೇಶಭ್ರಷ್ಟನಾಗುವುದಕ್ಕೂ ಅವರೇ ಕಾರಣ, ಆದರೂ ನನಗೆ ಆಶ್ರಯ ಕೊಟ್ಟರು. ಗಂಡ ಕಳೆದುಕೊಂಡ ನನ್ನನ್ನು ತಂದು ಸಾಕಿದರು. ನಾನಾದರೂ, ಅದಕ್ಕೆ ಪ್ರತಿಯಾಗಿ, ಈ ಮನೆಯಲ್ಲಿ ಹುಟ್ಟಿದ ಪ್ರತಿಯೊಂದು ಮಗುವಿನ ಮಲಮೂತ್ರಗಳನ್ನು ತೆಗೆದು, ನನ್ನ

ಋಣ ಸಲ್ಲಿಸಿದ್ದೇನೆ. ಇನ್ನು ನನ್ನಿಂದಾಗುವ ಕೆಲಸವೇನಿಲ್ಲ. ನಾನು ಇದ್ದರೂ ಇಲ್ಲದಿದ್ದರೂ ಒಂದೇ. ವಯಸ್ಸಾದ ಮೇಲೆ ಒಂದು ಹೊರೆಯೇ; ನಾನು ಹೋದದ್ದರಿಂದ ಅವರಿಗೆ ನಷ್ಟವಂತೂ ಇಲ್ಲವೇ ಇಲ್ಲ. ಆದರೆ ನಮ್ಮ ಶಾಂತುವಿಗೆ ತುಂಬ ಬೇಸರವಾದೀತು, ನಿಜ. ಅವಳಾಗಲೀ ಅವಳ ಮಕ್ಕಳಾಗಲಿ, ಇಷ್ಟು ಪ್ರೀತಿಯಿಂದ ನನ್ನನ್ನು ಕಂಡುದರಿಂದಲೇ ನನಗೆ ಬದುಕು ಸಹನವಾಯಿತು. ಆದರೇನು? ನಾನು ಪರಊರಿಗೆ ಹೋಗುತ್ತಿದ್ದೇನೆಯೇ? ಹೋಗುವುದು ಮೂಡೋಡಿಗೆ. ಅವಳು ಆಗಾಗ ಬಂದು ಹೋಗಬಹುದಲ್ಲ" ಎಂದಳು. ಶಂಕರನಿಗೂ ಅವಳ ಆಸೆಯನ್ನು ಪೂರೈಸುವ ಮನಸ್ಸಾಯಿತು; ಒಪ್ಪಿಕೊಂಡು ಹೋದ. ಇವರು ಆಡಿದ ಮಾತುಗಳು ಆಚೆ ಚಾವಡಿಯಲ್ಲಿ ಕುಳಿತಿದ್ದ ಶಾಂತುವಿನ ಕಿವಿಗೆ ಬೀಳದೆ ಹೋಗಲಿಲ್ಲ. ಆಕೆ ಗಂಡನಂತಲ್ಲ. ಅವಳದ್ದು ಮಿದುವಾದ ಸ್ವಭಾವ, ಬೇನೆಯಿಂದ ಹಣ್ಣಾದ ಜೀವ. ಅಜ್ಜಿಯ ಮೇಲೊಂದು ಅಪಾರ ವಿಶ್ವಾಸ. ಅಜ್ಜಿ, ತಾನು ಕೈಲಾಗದವಳೆಂದು ಎಷ್ಟು ಹೇಳಿಕೊಂಡರೂ, ಅವಳ ಕರುಣೆ ಇಲ್ಲದಿರುತ್ತಿದ್ದರೆ ತನ್ನ ಹೊಟ್ಟೆಯ ಮಕ್ಕಳು ಹಾಗೆಲ್ಲ ಬೆಳೆದು ನಲಿದಾಡುತ್ತಿರುವುದು ಅಸಾಧ್ಯವೆಂದು ಗೊತ್ತಿತ್ತು. ಅಜ್ಜಿಗೂ ಗಂಡನಿಗೂ ಅಗಾಧ ತಾರತಮ್ಯ. ರಂಗರಾಯರು ಹೊಟ್ಟೆಗೆ ಅನ್ನ, ಮೈಗೆ ಬಟ್ಟೆಗಳನ್ನು ಕಾಲಕಾಲಕ್ಕೆ ತಂದುಕೊಟ್ಟವರು ನಿಜ. ಆದರೆ ಅವರ ಬಾಯಿ ಇತರರಿಗೆ ಶೂಲಪ್ರಾಯವಾಗಿದ್ದಂತೆ ಅವಳಿಗೂ ಆಗಿತ್ತು. ಎಷ್ಟೋ ಬಾರಿ, ಗಂಡನ ಚುಚ್ಚುಮಾತುಗಳಿಂದ ಆಕೆಯ ಎದೆ ನೊಂದಾಗ, ಅಜ್ಜಿಯೇ ಅವಳಿಗೆ ಸಮಾಧಾನ ಹೇಳಿದವಳು. ಅಂಥವಳು ಮನೆ ಬಿಟ್ಟು ಹೋಗುವುದೆಂದರೆ ಅವಳ ಅರ್ಧ ಜೀವವೇ ಹೋದಂತೆ. ಶಂಕರ ಹೊರಟುಹೋಗುತ್ತಲೇ ಶಾಂತು ತನ್ನೆದೆಯ ಅಳಲನ್ನು ತಡೆಯಲಾರದೆ, ಅವಳ ಮುಂದೆ ಗೋಗರೆದಳು—"ನೀವಿದ್ದುದರಿಂದ ನಾನಿಷ್ಟು ದಿನ ಬದುಕಿ ಉಳಿದೆ. ಈಗ ನನ್ನ ಕೈ ಬಿಡುತ್ತೀರಾ?" ಎಂದು ಬಹುವಾಗಿ ಅತ್ತಳು. ಮುದುಕಿಗೆ—ತಾನು ಬೆಳೆಸಿದ ಈ ಕೂಸುಗಳೆಲ್ಲವೂ ತನ್ನದೇ–ಎಂಬತಿಳುವಳಿಕೆ ಇಲ್ಲದಿದ್ದೀತೆ? ಅವರಿಗೂ ಸಂಕೋಚವಾಯಿತು. ಶಾಂತುವನ್ನು ನೋಯಿಸುವ ಇಷ್ಟವಿಲ್ಲ. "ನೋಡು, ಯಾವುದಕ್ಕೂ ಅವಸರವಿಲ್ಲ. ಹೋದರೂ ಊರುಬಿಟ್ಟು ಹೋಗುತ್ತೇನೆಯೇ? ನಿಮ್ಮಿಂದ

ತಪ್ಪಿಸಿಕೊಂಡು ಹೋಗುತ್ತೇನೆಯೇ? ನನ್ನ ಅಣ್ಣನ ಮೊಮ್ಮಗು ಊರಿಗೆ ಬಂದಿದೆ. ನಾಲ್ಕು ದಿನ ಆ ಮಗುವಿನೊಡನೆ ಬಾಳಬೇಕೆಂಬ ಆಸೆಯಾಗಿ ಹೋಗುತ್ತಿದ್ದೇನೆ"—ಎಂದು ಸಮಾಧಾನ ಹೇಳಿದಳು.

ಅಂತು ನಾಲ್ಕಾರು ಬಾರಿ, ಶಂಕರ ಅವರ ಮನೆಗೆ ಬಂದಾಗಲೆಲ್ಲ, ಮುದುಕಿ ಉಭಯ ಸಂಕಟಕ್ಕೆ ಕಟ್ಟುಬಿದ್ದು "ನಾಲ್ಕು ದಿನ ಹೋಗಲಿ"—ಎನ್ನಬೇಕಾಯಿತು. ಅಲ್ಲದೆ 'ರಂಗ ಏನು ಹೇಳಿದರೂ ನೀನು ಬರುವುದನ್ನು ನಿಲ್ಲಿಸಬಾರದು' ಎಂದು ತನ್ನ ವ್ಯಥೆಯನ್ನೂ ತೋಡಿಕೊಳ್ಳಬೇಕಾಯಿತು. ಶಂಕರ ತನ್ನ ಅಭಿಮಾನವನ್ನೆಲ್ಲ ಮೂಲೆಗಿರಿಸಿ, ಆಕೆಯ ಮನಸ್ಸಿನ ತೃಪ್ತಿಗಾಗಿ ಅಲ್ಲಿಗೆ ಹೋಗಿಬರುತ್ತಿರಬೇಕಾಯಿತು.

ಆತ ಮುದುಕಿಯ ದರ್ಶನಕ್ಕಾಗಿ ಆಗಾಗ ಹೋಗಿಬರುತ್ತಾನೆ. ರಂಗರಾಯರ ಮಾತುಗಳನ್ನು ಕೇಳಿಯೂ ಕೇಳದಂತೆ ವರ್ತಿಸುತ್ತಾನೆ. ತನ್ನ ಹೆಚ್ಚಿನ ವೇಳೆಯನ್ನು ಜಮೀನಿನ ಕೆಲಸದಲ್ಲಿ ಕಳೆಯುತ್ತಾನೆ. ಮಳೆಗಾಲ ಕಳೆಯಿತು; ಮೊದಲ ಬೆಳೆ ಕೈಗೆ ಬಂದಿತು. ತಾವೆಣಿಸಿದುದಕ್ಕಿಂತ ಹೆಚ್ಚಿನ ಫಸಲು ಬಂದಿದೆಯೆಂದು ಮುತ್ತಯ್ಯ, ಎಳಚಿತ್ತಾಯರಿಬ್ಬರೂ ಹೇಳಬೇಕಾಯಿತು. ಮೊದಲನೆಯ ಬೆಳೆಯ ಬೆನ್ನಿಗೆ, ಎರಡನೆಯ ಬೆಳೆ ಬಿತ್ತುವ ಆಸೆಯಾಯಿತು. ಎರಡಲ್ಲ, ಮೂರಾದರೂ ಬೆಳೆ ತೆಗೆಯುವಷ್ಟು ತಲೆ ನೀರು ಇರುವ ಭೂಮಿ, ಒಮ್ಮೆ ಆ ನೀರು ಬತ್ತಿದರೂ ಹೊಳೆಗೆ ಒಡ್ಡನ್ನು ಕಟ್ಟಿ, ನೀರು ಹಾಯಿಸಬಹುದಾದ ಅನುಕೂಲತೆಯಿತ್ತು. ತಿರುಗಿ ಹೊಲಗಳಿಗೆ ಗೊಬ್ಬರ ಚೆಲ್ಲಿಸಿದ; ಉಳುಮೆಮಾಡಿಸಿದ. ಬತ್ತ, ಉದ್ದು, ಹುರುಳಿಗಳನ್ನು ಬಿತ್ತಿಸಿದ. ಬಿಡುವು ದೊರೆತಾಗ ವಾರಕ್ಕೊಂದೆರಡು ಬಾರಿಯಾದರೂ ತಪ್ಪದೆ ಅಜ್ಜಿಯ ದರ್ಶನಕ್ಕಾಗಿ ಹೋಗಿಬರುತ್ತಿದ್ದ. ರಂಗರಾಯರು ಇಲ್ಲದುದನ್ನು ಕಂಡು ಹೋಗುವುದೇ ಹೆಚ್ಚು. ಹೋಗುವುದು ಹೆಚ್ಚಿದಂತೆ, ಮುದುಕಿಯನ್ನು ಕಾಣುವಷ್ಟೇ ಗೌರವ, ಪ್ರೀತಿಗಳಿಂದ ಮನೆಯ ಮಕ್ಕಳನ್ನೂ ನೋಡುತ್ತಿದ್ದ. ಶಾಂತುವೆಂದರೂ ಅಭಿಮಾನ; ಅವರ ಮಕ್ಕಳೆಂದರೂ ಅಭಿಮಾನ. ಶ್ರೀಮತಿಯ ಮುಖವನ್ನು ನೋಡಿದಾಗಲೆಲ್ಲ ಅವಳೊಳಗೆ ಹುದುಗಿದ ನೋವನ್ನು ತಿಳಿಯಬಲ್ಲವನಂತೆ ಅವನು ಮರುಕಗೊಳ್ಳುತ್ತಿದ್ದ. ಕೆಲವೊಮ್ಮೆ ಶಾಂತುವಿನೊಡನೆ "ರಂಗರಾಯರು ಅಷ್ಟೆಲ್ಲ ಕಾರುಭಾರಿಗಳು.

ಮಗಳಿಗೊಂದು ಗಂಡನನ್ನು ಹುಡುಕುವುದಕ್ಕಾಗದೆ ಹೋಯಿತೇ?" ಎಂದು ದುಂಟು. ಆದರೆ ಆದರ ಕಾರಣವೂ ಕ್ರಮೇಣ ತಿಳಿಯಿತು. ಆಕೆ ಕಿವುಡಿ ಯೆಂದು. ತಿಳಿದ ಮೇಲಂತೂ ಅವಳಿಗಾಗಿ ತುಂಬ ಅನುಕಂಪವುಂಟಾ ಯಿತು. ಫಕ್ಕನೆ ಮನೆಯ ಆವರಣದಲ್ಲಿ ರಂಗರಾಯರ ಧ್ವನಿ ಕೇಳಿಸಿ ತೆಂದರೆ, ಆವನ ನಡತೆ ಬದಲಾಗುತ್ತದೆ. ಸಲಿಗೆಯನ್ನೆಲ್ಲ ಬಚ್ಚಿಟ್ಟು ಲೆಕ್ಕಾ ಚಾರದ ಮಾತಿಗೆ ತೊಡಗುತ್ತಾನೆ.

ರಂಗರಾಯರಿಗೆ ಶಂಕರ ಆಗಾಗ ತಮ್ಮ ಮನೆಗೆ ಹೋಗಿ ಬರುತ್ತಿರು ವುದು ಏನೇನೂ ಸಮಾಧಾನವಿಲ್ಲದ ಸಂಗತಿ. ಅಜ್ಜಿಯ ಮೇಲಿನ ಮಮತೆ ಯಿಂದ ಆತ ಬರುತ್ತಿದ್ದಾನೆ-ಎಂಬುದನ್ನು ಅವರ ಕುಬುದ್ಧಿ ಒಪ್ಪಲಿಲ್ಲ. ಮನಸ್ಸು ಬೇರೆಯೇ ತರ್ಕಸರಣಿಯನ್ನು ಹಿಂಬಾಲಿಸಿತು. ಕಂಡವರ ಮಾತು ಗಳಿಂದಲೋ, ಅವರ ಸ್ವಬುದ್ಧಿಯಿಂದಲೋ, "ಶ್ರೀಮತಿ ಬೆಳೆದ ಹುಡುಗಿ. ಅದಕ್ಕಾಗಿ ಆಗಾಗ ಬಂದು ಹೋಗುತ್ತಿರಬೇಕು" ಎಂದಂದುಕೊಂಡರು.

ಇನ್ನೊಬ್ಬರು ಅವರ ಸ್ಥಿತಿಯಲ್ಲಿದ್ದರೆ, ಆ ಊಹೆ ನಿಜವಾಗಿದ್ದರೆ, ಸಂತೋಷಪಡಬಹುದಾದ ಸಂದರ್ಭವನ್ನು ಅವರು ವಿಷಮಕ್ಕೆ ತಿರುಗಿಸಿ ಕೊಂಡರು. ಅದರ ಪರಿಣಾಮವಾದ ಕೋಪವನ್ನು ಕೆಟ್ಟ ಮಾತುಗಳಿಂದ ಸೂಸಿದರು. ಶಾಂತುವನ್ನು ಗದರಿಸಿದರು ; ಆ ಗದರಿಕೆಯ ಮಾತುಗಳು ಅಜ್ಜಿಯ ಕಿವಿಗೆ ಬೀಳುವಂತೆ ಮಾಡಿದರು. "ಅವನಿಗೆ ಸಲಿಗೆ ಕೊಟ್ಟು ನನ್ನ ಮತ್ತು ನನ್ನ ಮಗಳ ಮರ್ಯಾದೆ ತೆಗೆಯಲು ಹೊರಟಿದ್ದೀರಿ" ಎಂದೂ ಅಂದರು. ಶ್ರೀಮತಿ ಕಿವುಡಿಯಾದುದರಿಂದ ಅಜ್ಞಾನದಲ್ಲಿಯೇ ಉಳಿದಳು. ಶಾಂತುವಿಗೆ ತುಂಬ ನೋವು ಉಂಟಾಯಿತು. ಆದರೆ ಶಂಕರ ಮನೆಗೆ ಬರಲೇಕೂಡದೆಂಬ ಹಟ ರಂಗರಾಯರದು. ಆ ಉದ್ದೇಶದಿಂದಲೇ ತಮ್ಮ ಆರೋಪವನ್ನು ಯಾರಾರ ಮೂಲಕವೋ ಶಂಕರನ ಕಿವಿಗೂ ಮುಟ್ಟಿಸಿ ದರು. ಶಂಕರನಿಗೆ ಅದರಿಂದ ಬೇಕಷ್ಟು ನೋವೂ ಆಯಿತು. ಉಭಯ ಸಂಕಟವೂ ಉಂಟಾಯಿತು. ಆತ ರಂಗರಾಯರ ಮನೆಗೆ ಹೋಗುವುದನ್ನೇ ನಿಲ್ಲಿಸಿದ.

ಅಜ್ಜಿಗೆ ಸಲ್ಲಿಸಿದ ವಚನವನ್ನು ಮುರಿಯಲಾರನೆಂಬುದಕ್ಕೆ ಅವಳನ್ನು ಆದಷ್ಟು ಬೇಗ ತನ್ನಲ್ಲಿಗೆ ಕರೆದು ತರಲು ನಿಶ್ಚಯ ಮಾಡಿದ.

ತನ್ನ ಗುಡಿಸಲಿನ ಬಿದಿರು ತಟ್ಟೆಯ ಗೋಡೆಗಳನ್ನು ಕಿತ್ತು ಹಾಕಿ, ಮಣ್ಣಿನ ಗೋಡೆಯನ್ನೂ, ಸಮನಾದ ಕಿಟಕಿ, ಬಾಗಿಲುಗಳನ್ನೂ ಹಾಕಿಸ ತೊಡಗಿದ. ಮನೆಗೆ ಇನ್ನೊಂದು ಕೋಣೆಯನ್ನೂ ಹೆಚ್ಚಿಸಿ ಸೇರಿಸಿದ. ಗಾರೆ ಮಾಡಿಸಿದ, ಸುಣ್ಣ ಬಳಿಸಿದ. ಮನೆಗೆಲಸ ಪೂರ್ಣವಾಗುತ್ತಲೇ ರಂಗರಾಯ ರಿಲ್ಲದ ದಿನ ಆರಿಸಿ,_ ಅವರ ಮನೆಗೆ ಹೋಗಿ, ಅಜ್ಜಿಯನ್ನು ಮಂಚಲಿನಲ್ಲಿ ಹೊರಿಸಿಕೊಂಡು ಬಿಡಾರಕ್ಕೆ ಕರೆದು ತಂದ. ಆದಿನ ಅವನ ಮನಸ್ಸಿನಲ್ಲಿಯೂ ಅಜ್ಜಿಯ ಮನಸ್ಸಿನಲ್ಲಿಯೂ ಆದ ಆನಂದ ಸಮಾಧಾನಗಳು ಅಷ್ಟಿಷ್ಟಲ್ಲ. ಆದರೆ ಅಷ್ಟೇನೆ ಕೊರಗು ಶಾಂತು ಮತ್ತು ಅವಳ ಮಕ್ಕಳಲ್ಲಿ ಉಂಟಾಗದಿರ ಲಿಲ್ಲ. ಆ ರಾತ್ರಿ ರಂಗರಾಯರು ಮನೆಗೆ ಬರುತ್ತಲೇ, ಎಲ್ಲ ಸಂಗತಿಗಳೂ ತಿಳಿದುವು. ಆನಂದ ವ್ಯಥೆಗಳೆರಡಕ್ಕೂ ಗುರಿಯಾಗದವರು ಅವರು. ಅಜ್ಜಿಯ ಮೇಲೆ ಇಷ್ಟಿಷ್ಟೂ ಮಮತೆ ಇಲ್ಲದವರಂತೆ ಬೇಕಷ್ಟು ಬೈದಾಡಿ ದರು. "ಹೋಯಿತು ಒಂದು ಪೀಡೆ. ಮೊಮ್ಮಗನನ್ನು ನಂಬಿ ಹೋಗಿದ್ದಾರ ಲ್ಲವೇ ? ಹೋಗಲಿ. ನಾಳೆ ಅವನು ದಿವಾಳಿ ಎಬ್ಬಿಸಿ, ಊರು ಬಿಟ್ಟು ಓಡು ವಾಗ, ಇವಳ ಹೆಣ ಸುಡುವುದಕ್ಕೆ ಈ ರಂಗ ಬರುತ್ತಾನೋ ಇನ್ನೊಬ್ಬ ಬರುತ್ತಾನೋ ಎಂದು ನೋಡುತ್ತೇನಲ್ಲ. ಇಷ್ಟುದಿನ ಅನ್ನ, ಅರಿವೆ ಕೊಟ್ಟು ಸಾಕಿದ ನನ್ನನ್ನು ಕಸವೆಂದು ತಿಳಿದು, ಒಂದು ಸುದ್ದಿಯೂ ಇಲ್ಲದೆ ಹೋದ ಳಲ್ಲವೇ ಹೋಗಲಿ" ಎಂದು ತಮ್ಮ ಕ್ರೂರ ಮನಸ್ಸನ್ನೆಲ್ಲ ಹೆಂಡತಿ ಮಕ್ಕ ಳೆದುರು ಬಿಚ್ಚಿದರು. ಶಾಂತುವಿಗೆ ಪತಿಯ ಮನಸ್ಸು ಕಠಿಣವೆಂದು ಗೊತ್ತಿ ದ್ದರೂ ಅದು ಇಷ್ಟೊಂದು ತೀಕ್ಷ್ಣವಾಗಬಹುದು—ಎಂದು ಅರಿತವಳಲ್ಲ. "ಎಲ್ಲ ಒಂದೊಂದು ಋಣಾನುಬಂಧ" ಎಂದು ಆಕೆ ತನ್ನ ದುಃಖದಲ್ಲೇ ಸಮಾ ಧಾನ ತಂದುಕೊಳ್ಳಲೆತ್ನಿಸಿದಳು. ಮಕ್ಕಳಲ್ಲಿ ಹಿರಿಯಳಾಗಿದ್ದ ಶ್ರೀಮತಿಯು ಕಿವಿ ಕಿವುಡಾಗಿದ್ದರೂ, ಬಾಯಿಯ ಮಾತುಗಳಿಂದ ದುಃಖಕ್ಕೆ ಎಡೆಕೊಡದೆ ಹೋದರೂ, ಹೃದಯ ಮಾತ್ರ ನೊಂದು ಬೇಯುತ್ತಲಿತ್ತು. ಕಣ್ಣೆಲ್ಲ ಆ ನೋವನ್ನು ಕಂಬನಿಯ ರೂಪದಲ್ಲಿ ಸುರಿಸುತ್ತಲಿತ್ತು. ಅವಳ ದುಃಖವೇನಿ ದ್ದರೂ ಅವಳೇನೆ ಹೊರಹೊಮ್ಮಿ ನುಂಗಿಕೊಳ್ಳುವವಳು. ಇನ್ನೂ ನುಂಗಿ ಕೊಂಡಾಳು. ಆದರೆ 'ಅಜ್ಜಿ, ಅಜ್ಜಿ' ಎಂದು ಗಂಟೆಗೆರಡುಬಾರಿ ಹಂಬಲಿಸುವ ಮಕ್ಕಳ ಕೂಗಾಟ ಮಾತ್ರ, ಅವಳ ಕಿವುಡು ಕಿವಿಗೂ ಕೇಳಿಸುತ್ತಲಿತ್ತು.

ಅದಕ್ಕೆ ಸಮಾಧಾನ ಹೇಳುವುದು ಕಷ್ಟ ಎಂದು ಚೆನ್ನಾಗಿ ಬಲ್ಲಳು. ಅಲ್ಲದೆ ರಂಗರಾಯರ ಹರಕು ಬಾಯಿಯಿಂದ, ಅಜ್ಜಿ ಹೋದುದು ಮೂಡೋಡಿಗೆ ಎಂಬ ಸಂಗತಿಯೂ ಮಕ್ಕಳಿಗೆ ತಿಳಿದಿದೆ. ಆಗಾಗ ಮಕ್ಕಳು 'ಅಜ್ಜಿ ಇದ್ದಲ್ಲಿಗೆ ಹೋಗುವ' ಎಂದರೆ, ಅವರನ್ನು ತಡೆಯುವ ಉಪಾಯ ಇನ್ನಷ್ಟು ಕಟುವಾಗುತ್ತಿತ್ತು.

## ಅಧ್ಯಾಯ ೧೦

ಅಜ್ಜಿಯನ್ನು ಮನೆಗೆ ಕರೆದುತಂದ ಮೇಲೆ, ಶಂಕರನ ಹೃದಯದಲ್ಲಿ ಅಪೂರ್ವ ಉತ್ಸಾಹವೊಂದು ತುಳುಕಾಡತೊಡಗಿತು. ಪ್ರಥಮ ದರ್ಶನದಲ್ಲೆ, ತಾಯಿ ತಂದೆಗಳಿಗಿಂತಲೂ ಹೆಚ್ಚಿನ ಭಕ್ತಿ ಅವಳ ಮೇಲೆ ಉಂಟಾಗಿತ್ತು. ಅವನ ಮಾನಸಿಕ ಹಂಬಲವನ್ನು ಪ್ರೋತ್ಸಾಹದಿಂದ ಹೆಚ್ಚಿಸಿದವಳು ಅವಳು. ಈಗ ಅವಳೇನೆ ತನ್ನ ಮನೆಗೆ ಬಂದು ಇರತೊಡಗಿದಳೆಂದ ಮೇಲೆ ಅವನ ಆನಂದಕ್ಕೆ ಪಾರವಿಲ್ಲ. ಅದೂ ಮೂಡೋಡಿಯಲ್ಲಿ, ತನ್ನ ಹಿರಿಯರು ನಟ್ಟು ಬೆಳೆಸಿದ ತಾವಿನಲ್ಲಿ, ತನ್ನ ಅಜ್ಜನ ಸೋದರಿ ಕುಳಿತಳೆಂದರೆ, ಅವನ ಪಾಲಿಗೆ ಆ ಮನೆ ಸಂಭ್ರಮದ ದೇಗುಲವೇ ಆಯಿತು. ಅವನಿಗೆ ವಿರಾಮ ಕಡಿಮೆ. ಅಡುಗೆಯ ಹೊಣೆಯನ್ನು ಕೃಷ್ಣ ಹೊರುತ್ತಿದ್ದಾನೆ. ಅವನಿಗೆ ಮಾಡಿ ಮುಗಿಯದಷ್ಟು ಬೇಸಾಯದ ಕೆಲಸಗಳಿವೆ. ಆದರೆ ವಿರಾಮ ದೊರೆತಾಗ, ಮನೆಯಲ್ಲಿರುವಾಗಲೆಲ್ಲ, ಮುದುಕಿಯ ಮುಂದೆ ಹೋಗಿ ಕುಳಿತಿರುತ್ತಾನೆ. ಅವಳಿಗೆ ತೀರ ಸಮೀಪವಾಗಿ ಕುಳಿತಿರುತ್ತಾನೆ. ಮಾತನಾಡುವುದಿರಲಿ, ಆಡದಿರುವುದಿರಲಿ, ಓದುವುದಿರಲಿ, ಮನಸ್ಸಿನಲ್ಲಿ ಕಲ್ಪನೆ ಹೆಣೆಯುವುದಿರಲಿ, ಅವಳೆದುರಿಗೆ ಕುಳಿತೇ ತನ್ನ ಮನಸ್ಸಿಗೆ ತೃಪ್ತಿ ತಂದುಕೊಳ್ಳುತ್ತಾನೆ. ಅವಳ ಬಳಿಯಲ್ಲಿದ್ದರೆ ಏನೋ ಒಂದು ಬಣ್ಣಿಸಲಾರದ ಆನಂದ ಅವನಿಗಾಗುತ್ತದೆ.

ಆದರೆ ಆಕೆಗೆ ಮಾತ್ರ, ರಂಗನ ಮನೆಯನ್ನು ಬಿಟ್ಟು ಬಂದ ಮೇಲೆ, ಒಮ್ಮೊಮ್ಮೆ ವ್ಯಥೆಯಾಗುತ್ತದೆ, ಬೇಸರ ಉಂಟಾಗುತ್ತದೆ. ತನ್ನ ಮರಿಮಕ್ಕಳ ನೆನಪೂ ಶಾಂತುವಿನ ನೆನಪೂ ಹುಟ್ಟಿತೆಂದರೆ "ಪಾಪ, ಎಷ್ಟು ನನ್ನನ್ನು ಹಂಬಲಿಸುತ್ತಿದ್ದಾರೋ" ಎಂದೆಂದುಕೊಳ್ಳುತ್ತಾಳೆ. ಮರುಗಳಿಗೆಗೆ ಈ ಮೊಮ್ಮಗನ ಮುಖ ನೋಡಿ ತನ್ನ ಚಿಂತೆ ಮರೆಯುತ್ತಾಳೆ, ಆಗಾಗ ಮೈ ಬೆವರಿಳಿಸಿಕೊಂಡು ಕೈ, ಮೈ ಧೂಳು ಮಾಡಿಕೊಂಡು ಬರುವ ಶಂಕರನನ್ನು "ಏನು ಕೆಲಸ ಮಾಡಿಸುತ್ತಿದ್ದೀ ? ಏನು ಮಾಡಿ ಬಂದೆ ?" ಎಂದು ಕೇಳುತ್ತಾಳೆ. ಮೂಡೋಡಿಯ ನೆಲವನ್ನೆಲ್ಲ ತುಳಿದು, ಶಂಕರನ ಕೆಲಸಗಳಿಗೆ ಸಾಕ್ಷಿಯಾಗುವಷ್ಟು ತ್ರಾಣ ಅವಳಿಗಿಲ್ಲ. ಆಕೆ ಆ ಚಿಕ್ಕ ಮನೆಯೊಳಗಷ್ಟೆ

ಓಡಾಡುತ್ತಾಳೆ. ಅವಶ್ಯವಿದ್ದರೆ ಅಂಗಳಕ್ಕೋ, ಬಚ್ಚಲಿಗೋ ಹೋಗಿಬರುತ್ತಾಳೆ. ಎಳೆ ಬಿಸಿಲಲ್ಲಿ ನಾಲ್ಕು ಹೆಜ್ಜೆ ಹಾಕಿ, ಮನೆಯ ಮುಂದೆ ಹೋಗಿ ಬೆನ್ನೊಡ್ಡಿ ಕುಳಿತಿರುವುದುಂಟು. ಕೃಷ್ಣ ಚಾಪೆ ಹಿಡಿದುಕೊಂಡು ಬಂದರೆ ಅದೆಲ್ಲ ಬೇಡವೆಂದು, ತನ್ನ ತಂದೆ ಮಾಡಿದ ಭೂಮಿ ಎಂಬ ಹೆಮ್ಮೆಯಿಂದ ನೆಲದಲ್ಲೇ ಕಾಲು ಚಾಚಿ ಕುಳಿತು ನಾಲ್ಕು ಸುತ್ತ ತನ್ನ ಮಂಜುಗಣ್ಣಿನ ನೋಟ ಬೀರುತ್ತಾಳೆ. ದೂರದ ಹಸುರು ಎಳೆಗಾಲದ ಸ್ವಪ್ನ ಸೌಂದರ್ಯವೆಲ್ಲ ಅವಳ ಕಲ್ಪನೆಯಲ್ಲಿ ಕೆರಳುತ್ತದೆ. ತನ್ನ ತಂದೆ ಶಾಂತ ಮೂರ್ತಿಯವರ ನೆನಪನ್ನು ಸ್ಮರಿಸುತ್ತಾಳೆ ; ಆ ಅಣ್ಣನ ತರುಣ ಮೊಗದ ನೆನವರಿಕೆಯನ್ನುಂಟುಮಾಡಿಕೊಳ್ಳುತ್ತಾಳೆ. ಆ ಗಳಿಗೆಯಲ್ಲಿ ಮುತ್ತಯ್ಯಗೌಡ ಅವಳನ್ನು ಕಂಡನೆಂದರೆ, ಎಲ್ಲ ಕೆಲಸ ಬಿಟ್ಟು ಅಲ್ಲಿಗೆ ಓಡಿಬರುತ್ತಾನೆ. ಕೃತಯುಗವೇ ಬಂದಿದೆ–ಎಂಬ ಭಾವನೆಯಾಗುತ್ತದೆ ಗೌಡನಿಗೆ. ಅವನ ಬಾಯಿಯಿಂದ ಪೂರ್ವಕಾಲದ ನೂರಾರು ಸ್ಮರಣೆಗಳು ಹೊರಡುತ್ತವೆ. ಶಾಂತಮೂರ್ತಿ ಒಡೆಯರ ಕತೆ ಹೇಳುವುದೆಂದರೆ ಅವನಿಗೆ ತುಂಬ ಇಷ್ಟ. ಅವು ಹೆಚ್ಚಾಗಿ ತನ್ನ ತಂದೆಯ ಬಾಯಿಂದ ಕೇಳಿದ ಮಾತುಗಳು. ಆ ಮಾತುಗಳ ಬೆನ್ನಿಗೇನೆ, ಸಣ್ಣಧನಿ ದತ್ತಮೂರ್ತಿಯವರ ಕತೆ ಬಂದೇ ಬರುತ್ತದೆ. ತಮ್ಮಿಬ್ಬರ ಬಾಲ್ಯದ ಸ್ಮರಣೆಗಳನ್ನು ಹಸುಳೆಯಂತೆ ನಗುತ್ತ ಹೇಳುತ್ತಾನೆ. ಅರ್ಥವಿಲ್ಲದ ಎಳೆತನದ ಆ ಆಟಗಳಿಗೆ ಏನೇನೋ ಅರ್ಥ ಕಲ್ಪಿಸುತ್ತಾನೆ. ಪೂರ್ವಕಾಲದ ಸೊಗಸಿನ ದಿನಗಳ ಸಂಭಾಷಣೆಗಳಿಂದ ಇಬ್ಬರ ನೆನಪೂ ಕೆದಕಿ, ಸುಖದ ಹಿಂದೆ ಹುದುಗಿದ ಎಷ್ಟೋ ಕಹಿ ನೆನಪುಗಳೂ ಮೂಡುವುದುಂಟು. ಆಕೆ ಎಳೆಯಳಾಗಿದ್ದಾಗ ಮದುವೆಯಾದುದು ; ಕಾರ್ಕಳಕ್ಕೆ ಪತಿಗೃಹಕ್ಕೆ ಹೋದುದು ; ತಂದೆಯ ತೊಡೆಯಿಂದ ಅತ್ತೆಯ ಅಧಿಕಾರವನ್ನು ಅನುಭವಿಸಿದ್ದು ; ಗಂಡನೇನೆಂಬ ಸಂಗತಿ ತಿಳಿಯುವ ಮುನ್ನವೇ ಅವನೊಡನೆ ನಾಲ್ಕು ಮಾತುಗಳನ್ನಾಡುವ ಮೊದಲೇ, ಮೃತ್ಯು ಅವನನ್ನು ಅಪಹರಿಸಿದ್ದು ; ಅನಂತರ ಪ್ರಾಪ್ತವಾದ ದಾರುಣ ವೈಧವ್ಯ ! ತಂದೆಯ ನೆನಪು, ತಾಯಿಯ ನೆನಪು, ಅದರ ಬೆನ್ನಿಗೆ ದತ್ತಣ್ಣನ ನೆನಪುಗಳು ಒಂದೊಂದಾಗಿ ಕವಿದು ಎಲ್ಲವನ್ನೂ ಬಣ್ಣಿಸುತ್ತಾಳೆ. ಅನಂತರ ಬರುತ್ತದೆ–ಸೋದರಮಾವ ರಂಗಣ್ಣನವರ ಕಾರುಭಾರ. ತಮ್ಮ ಮನೆ

ಯನ್ನು ಮುರಿದದ್ದು ; ಅಣ್ಣನನ್ನು ಓಡಿಸಿದ್ದು, ದೃಷ್ಟಿನಷ್ಟಳಾದ ತಮ್ಮ ಮಗಳನ್ನು ದತ್ತನಿಗೆ ಕೊಡಲು ಬಲವಂತ ಮಾಡಿದ್ದು, ಆತ ಉಭಯ ಸಂಕಟದಿಂದ ಪರಾರಿಯಾದದ್ದು. ಸೋದರ ಮಾವನ ಕಲಿ ಸ್ವಭಾವದಿಂದ ಹಿರಿಯರ ಬದುಕು ಮಣ್ಣುಗೂಡಿದ್ದು. ಇವೆಲ್ಲ ಆವೃತ್ತಿಯಿಂದ ಬಂದು ಹೋಗುತ್ತವೆ; ಆ ಎಲ್ಲವನ್ನು ನೆನೆದು ಮುದುಕಿ ಒಮ್ಮೆ ನುಡಿದ ಮಾತಿದು-

"ಮುತ್ತಾ, ನಮ್ಮಪ್ಪ ತಮ್ಮ ಭಾವನಿಗೆ ಕಟ್ಟಿಸಿಕೊಟ್ಟ ಮನೆ ಇಂದಿಗೂ ಉಳಿದಿದೆ ನೋಡು. ಆದರೆ ಹೋದದ್ದು ಹಾಳಾದದ್ದು, ನಮ್ಮ ಅಪ್ಪನ ಮನೆಯೇ. ಆ ಮನೆ ಇಂದಿಗೂ ಉಳಿಯುತ್ತಿದ್ದರೆ, ಈ ಭೂಮಿ ಬಂಜರು ಬೀಳದೆ ಇರುತ್ತಿದ್ದರೆ ಈ ಮಗುವಿಗೆ ಎಷ್ಟು ಸಂತೋಷವಾಗುತ್ತಿತ್ತೋ ಏನೋ. ಅದನ್ನು ಕಂಡೇ ಹೊಟ್ಟೆ ತುಂಬಬೇಕು. ಪಾಪ ಶಂಕರ ಎಲ್ಲವನ್ನೂ ಈಗ ಶ್ರೀಗಣದಿಂದಲೇ ತೊಡಗಬೇಕಾಗಿದೆ" ಎಂದರೆ, ಸಮಾಧಾನ ಹೇಳಬೇಕಾದವರು ಯಾರು ? ಮುತ್ತಯ್ಯ; ಹೇಳಿಯೇ ಹೇಳುತ್ತಾನೆ !

"ಅಮ್ಮಾ, ಅದೆಲ್ಲ ಒಂದೊಂದು ಕಾಲ. ಕಾಲಗತಿಗೆ ಸಮನಾಗಿ ಆಗುವುದೆಲ್ಲವೂ ಆಗಿಹೋಯಿತು. ನೆನೆದು ಫಲವೇನು ? ಆದರೆ ನೀವೇ ನೋಡುತ್ತೀರಿ-ಸಣ್ಣ ಧನಿಗಳು ಮಾಡಿಸುವ ಕೆಲಸನೋಡಿದರೆ ಮೂಡೋಡಿ ಮೊದಲಿಗಿಂತ ಹತ್ತುಪಾಲು ಚಂದವಾಗುತ್ತದೆ. ಅವರು-ತಮಗೆ ಬೇಸಾಯ ಏನೇನೂ ತಿಳಿದಿಲ್ಲ ಅನ್ನುತ್ತಾರಲ್ಲ. ತಾನು ಆದಕ್ಕೆ ಹೊಸಬ ಎನ್ನುತ್ತಾರಲ್ಲ ; ಆದರೆ ಮಾಡುತ್ತಿರುವ ಕೆಲಸ ಹಾಗೆ ಹೇಳುವುದಿಲ್ಲ. ಮೂರ್ತಿ ಸಣ್ಣದಾದರೂ ಕೀರ್ತಿ ದೊಡ್ಡದು—ಎಂಬ ಹಾಗಿದೆ ಅವರ ನಡತೆ. ನನ್ನ ಮುಪ್ಪಿನ ಘಳಿಗೆಯಲ್ಲಿ ಸಾವಿಗೆ ಎರಡೋ ಮೂರೋ ಮಾರು ದೂರವಿರುವಾಗ ಇಂಥ ಒಂದು ಕಣ್ಣಿನ ಸುಖ ಕಾಣುತ್ತೇನೆಂದು ಹಾರೈಸಿರಲಿಲ್ಲ. ನೀವೂ ಎಣಿಸಿರಲಾರಿರಿ. ದೇವರ ದಯೆಯಿಂದ ಕಾಣುವ ಹಾಗಾಗಿದೆ. ಎಲ್ಲವೂ ಹಿರಿಯರ ಪುಣ್ಯ ; ಅದೇನೆ ಇಷ್ಟು ಕೆಲಸ ಮಾಡಿಸಿದ್ದು. ಇಲ್ಲವಾದರೆ—ನಿಮ್ಮ ಮೊಮ್ಮಗ ಇದ್ದಾರೋ ಇಲ್ಲವೋ ಎಂದು ತಿಳಿಯದವರು, ಸುದ್ದಿ ಸೂರು ಕೇಳದ ಯಾವುದೋ ಊರಿಂದ ಕಾಣಿಸಿಕೊಂಡು, ಇಲ್ಲಿಗೆ ಬಂದು, ನಿಂತು, ಹಟ ಹಿಡಿದು ಕುಳಿತು ಇಷ್ಟೆಲ್ಲ ಮಾಡುತ್ತಿದ್ದಾರೆಂದರೆ

ಕಣ್ಣನ್ನೇ ನಂಬುವುದಕ್ಕೆ ಬರುವುದಿಲ್ಲ.

"ಈ ವರ್ಷ ಇನ್ನೂ ಐದು ಎಕ್ರೆ ಹೆಚ್ಚಿಗೆ ಬೇಸಾಯ ಮಾಡುತ್ತಾರಂತೆ. ಕಳೆದ ವರ್ಷ ಮೆಣಸು, ಗೆಣಸು ಎರಡೂ ಚೆನ್ನಾಗಿತ್ತು. ಸ್ವಲ್ಪವನ್ನೇನೋ ಹಂದಿ ತಿಂದು ಹೋಯಿತು. ಹೊಸಬೇಲಿ ಮಾಡಿದ ಮೇಲೆ ಯಾವ ಪ್ರಾಣಿಯ ಉಪದ್ರವವೂ ಇಲ್ಲ. ಹಿಂದಿನವರಿಗೆ ಅದೆಲ್ಲ ಮಾಡಲು ಬರುತ್ತಿತ್ತೇ. ಆದರೆ ಒಂದಾಸೆ ನನಗೆ-ಧನಿಗಳು ಸ್ವಲ್ಪ ದೊಡ್ಡ ಮನೆಯನ್ನು ಕಟ್ಟಬೇಕು. ಹಂಚಿನ ಮನೆಯಾಗಬೇಕು. ಇದು ಒಕ್ಕಲು ಮಕ್ಕಳಿಗೆ ಹೇಳಿಸಿದ ಗುಡಿಸಲು. ನಿಮ್ಮ ಹಿರಿಯರ ಮನೆ ಹೇಗಿರಲಿಲ್ಲ? ಎಷ್ಟು ದೊಡ್ಡ ಮನೆ, ಏನು ಕತೆ! ಆ ಮನೆಯ ಕಸ ಗುಡಿಸುವುದಕ್ಕೇ ನಾಲ್ಕು ಮಂದಿ ಬೇಕಿತ್ತು. ನಾನಂದಿದ್ದೇನೆ ಅವರಿಗೆ. ನೀವೂ ಅನ್ನಬೇಕು."

"ಅನ್ನುವುದೇ? ಇದಕ್ಕೆಲ್ಲ ದುಡ್ಡಿಗೆ ಏನುಮಾಡುತ್ತಿದ್ದಾನೋ ಏನೋ. ದೊಡ್ಡ ಮನೆ ಬರಿದೆ ಆಗುತ್ತದೆಯೇ? ಯುದ್ಧದ ಕಾಲವಂತೆ. ರಂಗ ಪ್ರತಿಯೊಂದಕ್ಕೂ ಒಂದಕ್ಕೆ ನಾಲ್ಕು ಪಾಲು ಬೆಲೆ ಅನ್ನುತ್ತಿದ್ದಾನೆ. ಹಾಗಿರುವಾಗ ಮನೆ ಕಟ್ಟುವುದು ಸುಲಭವೇ? ಆದರೆ ಅದೃಷ್ಟದಲ್ಲಿದ್ದರೆ ಮೆಲ್ಲಗೆ ಕಟ್ಟಿಸಿಯಾನು."

"ಕಟ್ಟಬೇಕಪ್ಪಾ. ನಾವು ಕಾಣುವುದಕ್ಕಿರಲಿ, ಇಲ್ಲದಿರಲಿ. ಮನೆ ಕಟ್ಟಿ, ಸುಖವಾಗಿ ಸಂಸಾರ ಮಾಡಿಕೊಂಡು, ಹಿರಿಯರ ಹೆಸರು ಉಳಿಸಬೇಕು" ಎಂದ. ಆಕೆ ನಗುತ್ತ "ಮುತ್ತ, ಮನೆ, ಮಠಕ್ಕೇನು ಅವಸರವಿದೆ? ಈ ಬಂಜರು ಭೂಮಿಯಲ್ಲಿ ಒಂದು ಗೇಣೂ ಹಡುಬೀಳದಂತಾಗಿ ಮೊದಲಿನ ಸ್ಥಿತಿಗೆ ಬಂದ ಮೇಲೆ ಮನೆ ಮಾಡಲಿ. ಈಗ ಇದು ಸಾಕಲ್ಲ: ಏನು ಕಡಿಮೆಯಾಗಿದೆ ಇಲ್ಲಿ"-ಎಂದರೆ, ಮುತ್ತ ಪ್ರತಿಯಾಗಿ ವಾದಹೂಡುತ್ತಾನೆ. "ನೀವೇ ಹಾಗೆ ಅನ್ನುವುದೇ? ನಾನು ನಿಮ್ಮ ಹತ್ತಿರ ಹೇಳಿದ್ದೇಕೆ?-ನೀವು ಹಿರಿಯರು; ಮೊಮ್ಮಗನಿಗೆ ಒಂದು ಲಗ್ನ ಮಾಡಿಸುತ್ತೀರಿ. ಆಮೇಲೆ ಆದರೂ ಮನೆ ಆಗಿಯೇ ಆಗುತ್ತದೆ-ಎಂಬ ವಿಶ್ವಾಸದಿಂದ."

ಮೊಮ್ಮಗನ ಮನೆಗೆ ಬಂದ ಮೇಲೆ, ಶಂಕರ ಬೇಗನೆ ಲಗ್ನ ಮಾಡಿಕೊಂಡು ಸಂಸಾರಿಯಾಗಬೇಕು, ಸುಖಿಯಾಗಿರಬೇಕು-ಎಂಬ ಬಯಕೆ ಅವಳಿಗೂ ಉಂಟಾಗಿದೆ. ಆ ನೆನಪು ಬಂದಾಗಲೆಲ್ಲ, ಮರಿಮಗಳು

ಶ್ರೀಮತಿಯ ನೆನಪು ಆಗಿಯೇ ಆಗುತ್ತದೆ. ಅವಳ ಗುಣ, ನಡತೆ ನೆನೆಯುತ್ತಾಳೆ. ಅವಳೀನೆ ಶಂಕರನ ಮಡದಿಯಾದರೆ ಆಗಬಹುದೆಂಬ ಆಸೆಯನ್ನು ತಳೆಯುತ್ತಾಳೆ. ಆದರೆ ಆಕೆ ಕಿವುಡಿ. ಹುಡುಗನೇನೆಂದಾನೋ—ಎಂಬ ಭೀತಿಯುಂಟಾಗುತ್ತದೆ. ಅಷ್ಟಕ್ಕೆ ರಂಗಣ್ಣನ ನೆನಪೂ ಬಂದರೆ, ಅದು ಆಗದ ಹೋಗದ ಯೋಚನೆ ಎಂದನಿಸುತ್ತದೆ. ಅಣ್ಣನ ನೆನಪೂ ಹುಟ್ಟುತ್ತದೆ. ಇಂಥ ಸೂಚನೆ ಮಾಡಿ ಇಲ್ಲದ ಒಂದು ಪ್ರಸಂಗ ತರಬಾರದು—ಎಂದನಿಸುತ್ತದೆ. ಅದಕ್ಕಾಗಿ ಮದುವೆಯ ಮಾತೆತ್ತಿದ ಗೌಡನಿಗೆ ಸಮಾಧಾನ ಹೇಳುತ್ತಾಳೆ-"ಮುತ್ತಾ, ಹುಟ್ಟು, ಸಾವು, ಮದುವೆ, ಮತ್ತೊಂದು—ಇವೆಲ್ಲ ನಮ್ಮ ಕೈಯಲ್ಲಿವೆಯೇ ? ಕಾಲ ಬಂದಾಗ ಆಗುತ್ತದೆ. ಅವನಿಗೂ ಹಿರಿಯರಿದ್ದಾರೆ. ಅಪ್ಪ, ಅಮ್ಮ ಇದ್ದಾರೆ. ಎಲ್ಲಿಂದಾದರೂ ಒಳ್ಳೆಯ ಕನ್ಯೆಯನ್ನು ನೋಡಿಯಾರು " ಎಂದು ಹೇಳುತ್ತ ಸಮಾಧಾನ ತಂದುಕೊಳ್ಳುತ್ತಾಳೆ.

ಶಂಕರನ ಮನೋಪ್ರಪಂಚ ಸಾಕಷ್ಟು ವಿಚಿತ್ರವಾಗಿ ಬೆಳೆಯುತ್ತಲಿದೆ. ಬಂದ ಕೆಲವು ದಿನಗಳ ತನಕ, ಅವನ ಮನಸ್ಸಿನಿಂದ ವರಲಕ್ಷ್ಮಿಯ ನೆನಪು ಅಳಿಯದೆ ಹೋದರೂ, ಕೃಷಿಯ ಕೆಲಸ ತೊಡಗಿದ ಮೇಲೆ ಅದನ್ನು ಮರೆತಿದ್ದಾನೆ. ಗಿಡ, ಮರಗಳ ಮೇಲೆ ಪ್ರೀತಿ, ಬೆಳೆ ಬೇಸಾಯದ ಮೇಲೆ ಪ್ರೀತಿ. ದನಕರುಗಳ ಮೇಲೆ ಪ್ರೀತಿ, ಆಳುಗಳ ಸುಖದುಃಖ ಚಿಂತನೆ—ಇಂಥವುಗಳಿಂದ ಸ್ವಸುಖದ ಬಯಕೆಯ ಕಡೆಗೆ ಅವನ ಮನಸ್ಸು ಹೋಗುತ್ತಲಿಲ್ಲ.

ಮೊದಲನೆಯ ಬೆಳೆ ಬೆಳೆದುದಾಯಿತು. ಎರಡನೆಯ ಬಾರಿ ಧಾನ್ಯ, ಬತ್ತ, ಬಿತ್ತಿ ಕೊಯ್ದುದಾಯಿತು. ಇನ್ನೊಂದು ಮಳೆಗಾಲವೂ ಬಂದಿತು. ಇನ್ನಷ್ಟು ಜಮೀನನ್ನು ಕೃಷಿಮಾಡಿದ್ದಾಯಿತು. ಮೂಡಣದ ಗುಡ್ಡದ ಸೆರಗಿನಲ್ಲಿ ಗೆಣಸು, ಮೆಣಸುಗಳ ಜತೆಗೆ ಶುಂಠಿಯ ಹೊಲ ಮಾಡಿದ್ದೂ ಆಯಿತು. ಇನ್ನು ಆತ ಯಾವ ಹೊಸ ಪೈರಿನ ಬೆಳೆಗೂ ಕೈ ಹಾಕಲಿಲ್ಲ. ಸುತ್ತಮುತ್ತಲಿನ ಜನ ಏನು ಬೆಳೆಯುತ್ತಿದ್ದಾರೋ ಅದನ್ನೇ ಹೆಚ್ಚಾಗಿ ಮಾಡುತ್ತಿದ್ದಾನೆ. ಅವರ ಬೇಸಾಯದ ರೀತಿಯನ್ನೇ ಅನುಸರಿಸುತ್ತಿದ್ದಾನೆ. ಅದರ ಕುಂದು ಕೊರತೆಗಳನ್ನು ಪರಿಶೀಲಿಸುವುದರಲ್ಲಿ ಕಾಲ ಕಳೆಯುತ್ತಿದ್ದಾನೆ. ತನ್ನ

ಹೊಲಗದ್ದೆಗಳಲ್ಲಿ—ಯಾವ ಲವಣ, ಯಾವ ಧಾತು, ಯಾವ ಸತ್ವ ಕಡಿಮೆ ಯಾಗಿದೆಯೆಂದು ಪರೀಕ್ಷಿಸುತ್ತ ಆ ಕೊರತೆ ನೀಗಿಸುತ್ತಿದ್ದಾನೆ. ಹಿಂದಿನ ಮತ್ತು ಇಂದಿನ ಬೆಳೆಗಳಲ್ಲಿನ ವ್ಯತ್ಯಾಸವನ್ನು ಅಳೆಯುತ್ತಲಿದ್ದಾನೆ.

ನಿತ್ಯ ಬೇಸಾಯದ ಕೆಲಸ ಮುಗಿಯಲು ಮೂಡೋಡಿಯ ಕಾಡು ಪಾಲಾದ ತಲೆಭೂಮಿಯನ್ನು ಪರಿಶೀಲಿಸಿ ಬಂದ. ಜಾಗವನ್ನು ಗುರುತಿಸಿ ದ್ದಾಯಿತು. ರೆವಿನ್ಯೂ ಇಲಾಖೆಯವರು ಹಳೆಯ ದಾಖಲೆಗಳಿಂದ, ಅವನಿಗೆ ಅದನ್ನು ಕೊಟ್ಟಿದ್ದಾರೆ. ಎರಡು ವರ್ಷಗಳ ಕಂದಾಯವೂ ಸಂದಿದೆ. ಈತ ಅದಕ್ಕೆ ಆವರಣ ಹಾಕಿದ ಮೇಲೆ, ಅರಣ್ಯ ಇಲಾಖೆಯವರು ಅದು ತಮ್ಮ ದೆಂದು ಹೇಳುತ್ತಿದ್ದಾರೆ. ಈ ಗೊಂದಲವು-ದೀರ್ಘವಾದ ಪತ್ರ,ವ್ಯವಹಾರಕ್ಕೆ ಕಾರಣವಾಗಿದೆ. "ಅವರವರೇ ಜಗಳ ಮುಗಿಸಿಕೊಳ್ಳಲಿ. ನಾನು ನನ್ನ ಕೆಲಸ ಮಾಡುತ್ತೇನೆ" ಎಂದು ಶಂಕರ ಧೈರ್ಯದಿಂದ ಅಲ್ಲಿನ ಕೆಲಸಕ್ಕೆ ತೊಡಗಿದ್ದಾನೆ. ಅರಿಗರನ್ನೂ, ಎಳಚಿತ್ತಾಯರನ್ನೂ ಅಲ್ಲಿಗೆ ಕರೆದೊಯ್ದು, ಎರಡೆರಡು ಬಾರಿ ಸ್ಥಳವನ್ನು ತೋರಿಸಿಕೊಂಡು ಬಂದ. ವಿಪುಲವಾದ ಸಮೃದ್ಧಿಯನ್ನು ಕಂಡು ಹೆಚ್ಚಿನ ಆಸೆ ತಾಳಿದ. ನೀರಿನ ಸ್ವಲ್ಪ ಅಂಶ ಮಾತ್ರ ಬೇಸಾಯಕ್ಕೆ ಹೋಗುತ್ತಿದೆ. ಉಳಿದದ್ದು ಹಳ್ಳಕ್ಕೆ ಹರಿದು ವ್ಯರ್ಥವಾ ಗುತ್ತದೆ. ಅದು ಹಾಳಾಗಬಾರದು—ಎಂಬ ಆಸೆ. ಸುತ್ತುಮುತ್ತ ಸಾಕಷ್ಟು ಒರತೆ ಇದ್ದುದನ್ನು ಕಂಡು, ಒಂದು ದೊಡ್ಡ ಜಲಾಶಯ ಮಾಡುವ ಬಯಕೆ ಅವನಲ್ಲಿ ಹುಟ್ಟಿತು. ದೊಡ್ಡದಾದ ಒಂದು ಕೆರೆಯನ್ನೂ ಅಗೆಸಿದ್ದಾಯಿತು. ನೀರಿನ ಸಂಗ್ರಹಕ್ಕೆ ಕಡು ಬೇಸಿಗೆಯಲ್ಲೂ ಕೊರತೆಯಿಲ್ಲ; ಮೇಲಿನ ಅಬ್ಬಿ ಬತ್ತಿದರೂ, ಒರತೆಯ ನೀರಿನಿಂದ ಕೆರೆ ತುಂಬಿ ತುಳುಕುತ್ತದೆ—ಎಂದು ಎಣಿಕೆ ಹಾಕಿದ. ಅಲ್ಲಿ ಏನು ಬೆಳೆಯುವುದೆಂದು ಗೆಳೆಯರೊಡನೆ ತರ್ಕ ಮಾಡಿದ. ಅವರ ಸೂಚನೆಯಂತೆ—ಹಲವು ಅಡಿಕೆ ತೋಟಗಳನ್ನು ಸಂದರ್ಶಿಸಿ ಬಂದ. ಹತ್ತು ಎಕ್ರೆಯಷ್ಟು ಭೂಮಿಯಲ್ಲಿ ಅಡಿಕೆಯನ್ನೇ ಬೆಳೆಯಬಹುದು—ಎಂದೆನಿಸಿತು. ವರ್ಷಕ್ಕೆ ಎರಡು ಎಕ್ರೆಗಳಂತೆ ತೋಟ ವಿಸ್ತರಿಸುವ ಹಂಚಿಕೆ ಮಾಡಿದ. ಆ ಕೆಲಸ ಸುಲಭವಾದ್ದಲ್ಲ, ಗುಡ್ಡದ ಮಗ್ಗುಲುಗಳನ್ನು ಸವರಿ, ನೆಲವನ್ನು ತಟ್ಟುಮಾಡಿ, ಕೆಲಸ ಸಾಗಬೇಕು. ಹಣ ನೀರಿನಂತೆ ವೆಚ್ಚಮಾಡಬೇಕು. ಎಳಚಿತ್ತಾಯರು ಆ ವಿಷಯದಲ್ಲಿ

ಅಧ್ಯೈರ್ಯ ಹೇಳುತ್ತಾರೆ " ಶಂಕರರಾಯರೇ, ಯೋಚನೆ ಏನೋ ಸರಿಯಾದದ್ದೇ. ಆದರೆ ನೆಲ ತಟ್ಟುಮಾಡಿ, ಗಿಡ ನೆಟ್ಟ ಮೇಲೆ, ಭೂಮಿ ಫೋರೆಸ್ಟಿಗೇ ಹೋಗತಕ್ಕದ್ದು—ಎಂದು ನಿರ್ಣಯ ಆದರೆ ಆಗೇನು ಮಾಡುತ್ತೀರಿ? ಹಾಕಿದ ಹಣ ವ್ಯರ್ಥವಾಗಲಿಲ್ಲವೇ ?" ಎಂದು ಅನುಮಾನ ಹುಟ್ಟಿಸಿದರು. ಶಂಕರ ನಿರ್ಧಾರವಾಗಿ " ಕೆಲಸ ವ್ಯರ್ಥವಾಗುವುದುಂಟೇ ? ಹಣ ಹಾಳಾಗುವುದೇಕೆ ? ನಾನು ಮಾಡುವುದನ್ನು ಮಾಡುತ್ತೇನೆ. ತೋಟ ಮಾಡುವುದಂತೂ ನಿಜವೇ. ಅಷ್ಟೆಲ್ಲ ಕೆಲಸ ಕಂಡ ಮೇಲೆಯೂ, ಅವರು ತಮ್ಮ ಹಟ ಹಿಡಿದರೆ ಹಿಡಿಯಲಿ. ಆಗ ನಾನು ನಟ್ಟ ಗಿಡ ಕೀಳಿಸಿ ತಿರುಗಿ ಕಾಡು ಬೆಳೆಯಿಸುತ್ತಾರೇನು ? ಮಾಡಲಾರರು. ನನಗೇ ಆ ಭೂಮಿಯನ್ನು ಕೊಡದಿದ್ದರೆ, ಇನ್ನೊಬ್ಬರಿಗಾದರೂ ಕೊಟ್ಟಾರಲ್ಲ. ಅವರಿಗಾದರೂ ಲಾಭವಾದೀತು."

" ನೀವು ಸುರಿದ ಹಣ ? ಪಟ್ಟ ಶ್ರಮ ?"

" ಅದು ಇದ್ದೇ ಇದೆ. ಕೆಲಸ ಮಾಡಿದ ತೃಪ್ತಿ ಇದ್ದೇ ಇರುತ್ತದೆ, ನನಗೆ ಹಣ ನಷ್ಟವಾದೀತು. ಆದರೆ ಗಿಡಗಳು ಬೆಳೆದುದನ್ನು ಕಂಡು ಬರುವ ಸಂತೋಷ ಎಂದೂ ನಷ್ಟವಾಗದಲ್ಲ. ಬರಿದೆ ಹೆದರಿ ಕುಳಿತರೆ ಫಲವಿಲ್ಲ. ನಿಮ್ಮ ಬಂಗಾಡಿಯವರು ಹೆದರಿಯೇ ಈ ಜಮೀನಿನ ತಂಟೆಗೆ ಬರಲಿಲ್ಲ. ನಾನೂ ಹೆದರಿದ್ದರೆ ಇಲ್ಲಿಗೆ ಬರುತ್ತಿರಲಿಲ್ಲ. ನಾನಂತು ಕೆಲಸ ನಿಲ್ಲಿಸುವುದಿಲ್ಲ " ಎಂದು ನುಡಿದದ್ದಲ್ಲದೆ, ನುಡಿದಂತೆ ನಡೆದೂ ನಡೆದ. ಆ ಬೇಸಿಗೆಗೆ ಎರಡು ಎಕ್ರೆಯಷ್ಟು ಜಮೀನನ್ನು ಸಮತಟ್ಟಾಗಿ ಮಾಡಿಸಿದ. ಗಿಡಗಳಿಗೆ ಕುಣಿ ತೆಗೆಸಿದ, ಆಗತೆ ಮಾಡಿಸಿದ, ನಡುವೆ ಬಾಳೆಯ ಗಿಡಗಳನ್ನು ತಂದು ಹಾಕಿಸಿದ. ಕೂಲಿಗಳೊಡನೆ ತಾನೂ ಸೇರಿ ಗೊಬ್ಬರ ಹೊತ್ತ. ಮಳೆ ಬೀಳುತ್ತಲೇ ಗಿಡ ತಂದು ನಡಿಸಿದ. ಆತ ಹೀಗೆ ಕೆಲಸದಲ್ಲಿ ತಲ್ಲೀನನಾಗಿರುವಾಗಲೇ ಒಂದು ದಿನ ಬೆಳಗಿನ ಜಾವ ಹೊತ್ತಿಗೆ ಗ್ರಾಮದ ಉಗ್ರಾಣಿ ತಿಮ್ಮ " ದೊರೆಗಳು ಸ್ಥಳ ನೋಡುವುದಕ್ಕೆ ಬಂದಿದ್ದಾರೆ " ಎಂಬ ಸುದ್ದಿಯನ್ನು ಕೊಟ್ಟ.

ಶಂಕರ ಅವನ ಹಿಂದೆಯೇ ಹೋದ. ಹೋಗಿ ಮನೆಯನ್ನು ಸೇರುವಾಗ, ಮನೆಯ ಮುಂಗಡೆ ಶ್ಯಾನುಭಾಗ ರಂಗರಾಯರು, ಮೂರು ನಾಲ್ಕು

ಜನ ಸರಕಾರಿ ನೌಕರರು, ನಿಂತದ್ದು ಕಾಣಿಸಿತು. ಆ ತನಕ ತನ್ನ ಭೂಮಿಗೆ ಕಾಲಿರಿಸದ ರಂಗರಾಯರನ್ನು ಕಂಡು ಶಂಕರನಿಗೆ ಆಶ್ಚರ್ಯವಾಯಿತು. ಅವರು ಇವನನ್ನು ಮಾತನಾಡಿಸಲಿಲ್ಲ. ಈತ ಅವರನ್ನು ಮಾತನಾಡಿಸಲಿಲ್ಲ. ಬಂದವರಲ್ಲಿ ಒಬ್ಬರು ಮಣೆಗಾರರು. ಅವರು ಶಂಕರನಿಗೆ, ಬಂದಿದ್ದ ಅಧಿಕಾರಿಗಳ ಪರಿಚಯಮಾಡಿಕೊಟ್ಟರು. "ಇವರು ತಹಶಿಲ್ದಾರರು, ಇವರು ಕಲೆಕ್ಟರರು, ಇವರು ಅರಣ್ಯ ಇಲಾಖೆಯವರು" ಎಂದು ತಿಳಿಸಿದರು. ಜತೆಗೆ ಅವರವರ ಪರಿವಾರವಿತ್ತು ; ಊರವರೇ ಆದ ಆರಿಗರೂ ಎಳಚಿತ್ತಾಯರೂ ಬಂದೇ ಬಂದಿದ್ದರು. ಬಂದವರಿಗೆ ಊರಿನ ಮಾತು ಬರುತ್ತಿರಲಿಲ್ಲ. ಹೀಗಾಗಿ ಮಣೆಗಾರರು ಶಂಕರನೊಡನೆ "ಶಂಕರರಾಯರೇ, ಆ ವಿವಾದದ ಭೂಮಿ ನೋಡಬೇಕಾಗಿದೆ, ಅಲ್ಲದೆ ನಿಮ್ಮ ಕೆಲಸವನ್ನೂ ಇವರಿಗೆ ತೋರಿಸಬೇಕು" ಎಂದು ಕೇಳಿದರು. ಶಂಕರನಿಗೆ ಸಂತೋಷವೇ ಆಯಿತು. ಅವರನ್ನು ಕರೆದುಕೊಂಡು ಆ ಭೂಮಿಯನ್ನೆಲ್ಲ ಸುತ್ತಿಸಿದ. ಹೊಸತಾಗಿ ಮಾಡಿದ ಹೊಲಗಳು, ತರಕಾರಿಯ ತೋಟ, ಗೆಣಸು ಮೆಣಸು ನಟ್ಟಸ್ಥಳ ಎಲ್ಲವನ್ನೂ ತೋರಿಸಿದ. ತಾನು ಮಾಡಿದ ಯಾವತ್ತು ಪ್ರಯತ್ನಗಳನ್ನು ವಿವರಿಸಿ ಹೇಳಿದ. "ಇಲ್ಲಿನ ಸುಮಾರು ಐವತ್ತು ಎಕ್ರೆ ಭೂಮಿಯಲ್ಲಿ ಪ್ರತಿಯೊಂದು ಚೂರನ್ನೂ ಕೃಷಿಮಾಡಬೇಕೆಂದು ನನ್ನ ಇಷ್ಟ. ಗುಡ್ಡದ ನೀರಿದೆ; ಹರಿಯುವ ನದಿ ಇದೆ. ನದಿಗೆ ಒಡ್ಡು ಹಾಕಿ ವರ್ಷವೆಲ್ಲ ಬೆಳೆ ಬೆಳೆಯಬಹುದು. ಇನ್ನು ಬರುವುದು ಬೇಸಿಗೆ. ಪಂಪಿನಿಂದ ನೀರೆತ್ತಿ ಬೆಳೆ ಬೆಳೆಯಬೇಕೆಂದು ನನ್ನಿಷ್ಟ. ಏನೋ ಯುದ್ಧ ಕಾಲವಾದುದರಿಂದ ಎಂಜಿನು, ಪಂಪು ಸಿಗುವುದು ಕಷ್ಟ" ಎಂದು ವಿವರಿಸಿದ. ಬಂದವರು ಕಣ್ಣಿಂದ ಕಾಣುತ್ತಿದ್ದರು, ಕಿವಿಯಿಂದ ಕೇಳುತ್ತಿದ್ದರು.

"ನಿಮ್ಮ ಊರವರು–ಇಲ್ಲಿ ಬೆಳೆ ಬೆಳೆದರೆ ಕಾಟ ಕಡವೆಗಳ ಉಪದ್ರ ಹೇಳಿತೀರದು ಎನ್ನುತ್ತಾರೆ. ನಿಮಗೆ ಅವುಗಳ ಬಾಧಕವಿಲ್ಲವೇ ?" ಎಂದು ತಹಶಿಲ್ದಾರರು ಕೇಳಿದರು. ಶಂಕರ ಅವರನ್ನು ಕರೆದುಕೊಂಡು ಭೂಮಿಯ ಕುಡಿಗೆ ಹೋದ. ಅಲ್ಲಿನ ಪುಟ್ಟ ಅಬ್ಬಿಯಿಂದ ವಿದ್ಯುತ್ತನ್ನು ಸಂಗ್ರಹಿಸಿ ಅದರಿಂದ ಸಾಧ್ಯವಾಗಿ ಮಾಡಿದ ಮಿಂಚಿನ ಬೇಲಿ ತೋರಿಸಿದ. ಅವರಿಗೂ ಮುಟ್ಟಲು ಹೇಳಿದ. ಎಳಚಿತ್ತಾಯರು "ಸ್ವಾಮಿ, ಅವರೊಬ್ಬರಿಂದಲೆ

ಇದು ಸಾಧ್ಯ. ಅವರು ಇಲೆಕ್ಟ್ರಿಕಲ್ ಇಂಜನಿಯರಿಂಗ್ ಪಾಸಾದವರು. ಇದನ್ನೆಲ್ಲ ಮಾಡಿಕೊಂಡರು! ನಮ್ಮಂಥ ಹಳ್ಳಿಯ ಜನಕ್ಕೆ ಇದು ಸಾಧ್ಯವೇ?" ಎಂದರು. ರಂಗರಾಯರು ಆ ಬೇಲಿಯನ್ನು ದೂರದಿಂದಲೇ ನೋಡುತ್ತಿದ್ದರೇ ಹೊರತು ಮುಟ್ಟುವ ಹವ್ಯಾಸಕ್ಕೆ ಹೋಗಲಿಲ್ಲ. ಮುಟ್ಟಿದ ವ್ಯಕ್ತಿಗಳು ಸಾಯದೆ ಇರುವುದನ್ನು ಕಂಡು, ತಮ್ಮ ಅಪಪ್ರಚಾರಕ್ಕಾಗಿ ನಾಚಿಕೆಯೂ ಆಯಿತು.

ಬಂದವರು ಆಚೀಚೆ ಕಣ್ಣು ಹಾಯಿಸುತ್ತ ನಡೆಯುತ್ತಿದ್ದರು; ನೋಡುತ್ತಿದ್ದರು. ಅವರೆದುರಿಗೆ ಶಂಕರ ತನ್ನ ಮನಸ್ಸಿನ ಹಂಚಿಕೆಗಳನ್ನೆಲ್ಲ ಒಂದೊಂದಾಗಿ ವಿವರಿಸುತ್ತಿದ್ದ. "ಈಗಲೇನೋ ಜನಗಳಿಗೆ ವರ್ಷವೆಲ್ಲ ಸಾಕಷ್ಟು ಕೆಲಸವಿದೆ–ಹೊಸ ಆಗಮೆ ಆಗುತ್ತಿರುವುದರಿಂದ. ಈ ಕೆಲಸ ಮುಗಿದ ಮೇಲೆ ಅವರ ವಿರಾಮಕ್ಕೆ ಏನಾದರೂ ಉಪವೃತ್ತಿ ದೊರಕಿಸಲೇಬೇಕು. ಇಲ್ಲದೆ ಹೋದರೆ ಜನ ಮೈಗಳ್ಳರಾಗುತ್ತಾರೆ. ಜೀವನಕ್ಕೂ ಕಷ್ಟ. ಇಲ್ಲಿನ ಜಲಶಕ್ತಿಯನ್ನು ಬಳಸಿ ಇನ್ನೂ ದೊಡ್ಡ ಡೈನೆಮೊ ಹಾಕಬಹುದು. ಸಣ್ಣ ಪುಟ್ಟ ಯಂತ್ರಗಳನ್ನೂ ನಡೆಯಿಸಬಹುದು-" ಎಂದು ವಿಸ್ತರಿಸುತ್ತ ಸಾಗಿದ. ಮುಂದೆ ವಿವಾದದ ಭೂಮಿಗೆ ಹೋದರು. ಅಲ್ಲಿನ ಕೆರೆ, ತಟ್ಟಾದ ಭೂಮಿ, ಅದರಲ್ಲಿ ತೋಡಿದ ಕುಣಿ, ನಟ್ಟ ಗಿಡಗಳನ್ನೆಲ್ಲ ನೋಡಿದರು. ಅರಣ್ಯ ಇಲಾಖೆಯ ಆಫೀಸರರು ತುಸು ವಿಸ್ಮಯ ತೋರಿಸುತ್ತ "ಏನು ಇಷ್ಟೆಲ್ಲ ಕೆಲಸ ಮಾಡಿಸಿ ಆಯಿತೇ-ವಿವಾದ ಮುಗಿಯುವುದರೊಳಗೆ?" ಎಂದರು. ಶಂಕರ ನುಡಿದ "ನಾನು ಇಂಥ ಸ್ಥಳ ನೋಡಿ ಹೇಗೆ ಸುಮ್ಮನೆ ಕುಳಿತಿರಲಿ! ವಿವಾದವಿರುವುದು ಭೂಮಿಯ ವಿಷಯದಲ್ಲಿ. ಮಾಡುವ ಕೃಷಿ ಮಾಡಿದ್ದೇನೆ. ನಾಳೆ ಅದು ಅರಣ್ಯಕ್ಕೆ ಸೇರುವುದೆಂದಾದರೂ ನನಗೆ ಬೇಸರವಿಲ್ಲ. ನಿಮಗಾದರೂ ಅದರ ಪ್ರಯೋಜನವಾದೀತಲ್ಲ, ಯಾವುದೂ ಬರಿದೆ ಹಾಳಾಗಬಾರದಲ್ಲ" ಎಂದುದಕ್ಕೆ ಅವರೂ ನಕ್ಕರು. ಬಂದವರೆಲ್ಲ ಶಂಕರನನ್ನು ವಿಧವಿಧವಾಗಿ ಪ್ರಶ್ನಿಸುತ್ತಿದ್ದರು. ಮಳೆಯಿಂದ ಮಣ್ಣು ಕೊಚ್ಚಿಹೋಗದಂತೆ ಮಾಡಿದ ದಂಡೆಗಳ ವಿಚಾರವಾಗಿ, ಅಲ್ಲಿ ನಟ್ಟ ಗಿಡಗಳ ವಿಚಾರವಾಗಿ,ನೆಲದ ಕೊರತೆಯ ವಿಚಾರವಾಗಿ, ಹಳ್ಳ ಅಡ್ಡತಿಡ್ಡಾಗಿ ಹರಿದು ವರ್ಷ ವರ್ಷವೂ ಅದರ ದಂಡೆ ಅಸ್ತವ್ಯಸ್ತವಾಗುತ್ತಿರುವುದನ್ನು ಅವನು

ತಡೆಯಲು ಮಾಡಿದ ಉಪಾಯಗಳ ವಿಚಾರವಾಗಿ-ಪ್ರತಿಯೊಂದು ವಿಷಯ ದಲ್ಲಿಯೂ ಕುತೂಹಲಿಗಳಾಗಿ ಕೇಳುತ್ತಿದ್ದರು. ಬಂದ ಅಧಿಕಾರಿಗಳು ಅವನ ಸಾಹಸಕ್ಕೆ ಬೆರಗಾಗಿ, ಅಷ್ಟು ಕ್ಷಿಪ್ರದಲ್ಲಿ ಆತ ಮಾಡಿದ ವಿವಿಧ ಏರ್ಪಾಟು ಗಳಿಗಾಗಿ ಪ್ರಸನ್ನರೇ ಆದರು. ಮರಳುತ್ತ ಅವನ ಕುಟೀರದಲ್ಲಿ ಕಾಫಿ, ಬಾಳೆಯ ಹಣ್ಣುಗಳನ್ನು ತಿಂದು ಅವನ ಕೆಲಸಕ್ಕಾಗಿ ಮೆಚ್ಚಿಗೆಯ ಮಾತು ಗಳನ್ನೂ ಆಡಿದರು. ಬಂದಿದ್ದ ಕಲೆಕ್ಟರರು "ನಿಮ್ಮಂಥವರಿಂದ ಹಳ್ಳಿಯವ ರಿಗೆ ಮಾರ್ಗದರ್ಶನವಾಗಬೇಕು" ಎಂದದ್ದಲ್ಲದೆ "ನೋಡಿ, ನಮಗೀಗ ಮೇಲಿನಿಂದ ಹೆಚ್ಚು ಆಹಾರ ಬೆಳೆಯುವುದಕ್ಕೆ ಒತ್ತಾಯ ಬರುತ್ತಲಿದೆ. ಎಷ್ಟು ಹೆಚ್ಚಿಗೆ ಬೆಳೆದಿದ್ದೀರಿ ?" ಎಂದು ಕೇಳುತ್ತಲಿದ್ದಾರೆ. ಆದರೆ ನಿಮ್ಮಂತೆ ಸಾಹಸ ಪಟ್ಟು ಕಾಡುಪಾಲಾದ ಭೂಮಿಯನ್ನು ಸಾಗುಮಾಡುತ್ತಿರುವವ ರನ್ನು ಬೆರಳಿಟ್ಟು ತೋರಿಸುವಂತಿಲ್ಲ. ಇಂಥ ಜಮೀನುಗಳು ಎಷ್ಟಿಲ್ಲ-ಈ ಜಿಲ್ಲೆ ಯಲ್ಲಿ? ಧೈರ್ಯಪಟ್ಟು ಮುಂದೆ ಬಂದು ಕೆಲಸ ಮಾಡುವವರನ್ನು ಮಾತ್ರ ಕಾಣೆ" ಎಂದು ಹೊಗಳಿದರು.

ರೆವಿನ್ಯೂ ಇಲಾಖೆಯವರು ಹಲವು ಕಾರುಭಾರಗಳ, ಜತೆಗೆ ಆಹಾರ ಬೆಳೆಯುವ ಹೊಣೆಯೂ ಒಂದು ಸೇರಿಕೊಂಡಿದೆ. ಆದುದರಿಂದ ಸ್ವಾಭಾ ವಿಕವಾಗಿ ಮೇಲಿನ ಅಧಿಕಾರಿಗಳು ತೋರಿಸುತ್ತಿದ್ದ ಒತ್ತಾಯವನ್ನು ಕೆಳ ಗಿನವರ ಮೇಲೆ ಹೊರಿಸುವುದು ವಾಡಿಕೆಯಾಗಿತ್ತು. ಇಲಾಖೆಯ ಕೊನೆಯ ಹಂತ ಗ್ರಾಮದ ಶ್ಯಾನುಭಾಗರು. ಮೇಲಿನ ಒದೆ ಏನಿದ್ದರೂ ಕಟ್ಟಕೊನೆಯ ಪೆಟ್ಟು ಶ್ಯಾನುಭಾಗರಿಗೆ. ಅಂಥದ್ದಕ್ಕೆಲ್ಲ ನುರಿತ ರಂಗರಾಯರು ಸಾಮಾನ್ಯ ಒದೆ, ಪೆಟ್ಟುಗಳಿಗೆ ಅಂಜುವವರಲ್ಲ. 'ಹಿಂದೆ ನಿಮ್ಮಲ್ಲಿದ್ದ ಪಡುಭೂಮಿ ಎಷ್ಟಿದೆ ?' ಎಂಬುದಕ್ಕೆ ಅಂಕೆ ಸಂಖ್ಯೆ ಕೊಟ್ಟಿದ್ದರು. ಹೆಚ್ಚಿನ ಕೃಷಿ ಮಾಡಿಸಿರಿ-ಅಂದದ್ದಕ್ಕೆ 'ಮೂಡು ಪ್ರದೇಶದಲ್ಲಿ ಸಾಧ್ಯವಿಲ್ಲ' ಅಂದಿ ದ್ದರು. ಸದ್ಯ ಅರಣ್ಯ ಇಲಾಖೆಗೂ, ಅವರು ಕೊಟ್ಟ ಭೂಮಿಗೂ, ಇರುವ ವಿವಾದವನ್ನು ಪ್ರತ್ಯಕ್ಷವಾಗಿ ನೋಡಿ, ತೀರ್ಮಾನಿಸಲು ತಾವಾಗಿ ಮುಂದೆ ಬಂದಾಗ, ತಹಶಿಲ್ದಾರರು ಶಂಕರನ ವಿಚಾರ ಜನರ ಬಾಯಿಂದ ತಾವು ಕೇಳಿದ ಸುದ್ದಿಗಳನ್ನು ಕಲೆಕ್ಟರ್ ದೊರೆಗಳ ಕಿವಿಗೆ ಹಾಕಿದಾಗ, ಅವರು ಉತ್ಸಾಹ ತಾಳಿದ್ದರು. ರಂಗರಾಯರು "ಅದೆಲ್ಲ ಮಕ್ಕಳಾಟಿಕೆಯ ಕೆಲಸ,

ಆಗುವ ಹೋಗುವ ಕೆಲಸವಲ್ಲ" ಎಂದು ಮೊದಲೇ ತೀರ್ಪು ಕೊಟ್ಟಿದ್ದರು. ಅಲ್ಲಿ ಬೆಳೆದದ್ದನ್ನು ಆದುದನ್ನು ನೋಡಬಾರದು—ಎಂಬ ಹಟ ಅವರದ್ದು. ಈಗ ನೋಡಲೇಬೇಕಾಯಿತು. ಹುಡುಗ ಏನೇನೋ ಮಾಡಿದ್ದಾನೆ—ಎನ್ನುವುದು ಸ್ಪಷ್ಟವಾಗಿ ಕಾಣುತ್ತಿತ್ತು. ಅವರ ಹೆದರಿಕೆ—ಎಲ್ಲಿಯಾದರೂ ಆ ಮಾತನ್ನು ಯಾರಾದರೂ ಚುಚ್ಚಿ ಹೇಳುತ್ತಾರೋ-ಎಂದು ಅವರೆಣಿಸಿದ್ದಕ್ಕೂ ಆದುದಕ್ಕೂ ಸಮ ಹೋಯಿತು. ಆ ಕೆಲಸಗಳನ್ನೆಲ್ಲ ನೋಡಿ, ಸಂತೋಷಪಟ್ಟ ಕಲೆಕ್ಟರರು ಕೇಳಿಯೇ ಕೇಳಿದರು : " ಏನು ಶ್ಯಾನುಭಾಗರೇ, ನೀವು ' ಇದೆಲ್ಲ ಮಕ್ಕಳಾಟಿಕೆ ಕೆಲಸ, ನೀರಿನ ಮೇಲೆ ಬರೆದ ಗೆರೆ ' ಎಂದಿದ್ದಿರಲ್ಲ. ಬಹುಶಃ ಸವಾರಿ ಇಲ್ಲಿಯತನಕ ಬರಲೇ ಇಲ್ಲವೆಂದು ಕಾಣುತ್ತದೆ " ಎಂದಂದರು. ರಂಗರಾಯರು ತಲೆ ಎತ್ತಲಿಲ್ಲ.

ಶಂಕರ ಆ ಮಾತಿನ ಬೆನ್ನಿಗೆ ತನ್ನ ಅನುಭವ ಹೇಳತೊಡಗಿದ. " ನಾನು ಈ ಗ್ರಾಮದಲ್ಲಿ ತುಂಬ ಅಲೆದಾಡಿದ್ದೇನೆ. ಚೆನ್ನಾಗಿ ನೋಡಿದ್ದೇನೆ. ಎಲ್ಲದಕ್ಕೂ ಇಲ್ಲಿ ಕಾಡಿನಿಂದ ಬರುವ ಅಡ್ಡಿ ಆತಂಕ ಹೆಚ್ಚು—ಎಂಬುದನ್ನು ಕಾಣುತ್ತಲಿದ್ದೇನೆ. ಎಷ್ಟೂ ಬೆಳೆಯಬಹುದು. ಆದರೆ ಬೆಳೆಸಿದ್ದನ್ನು ಉಳಿಸಿಕೊಳ್ಳುವುದು, ಕಷ್ಟ " ಎಂದು ತೆಂಕಣಕ್ಕಿದ್ದ ಕಾಡು ಕಡಿದ ಗುಡ್ಡಗಳನ್ನೆಲ್ಲ ತೋರಿಸಿದ. " ನೋಡಿ, ಅಲ್ಲಿ ತುಂಬ ಕಾಡಿತ್ತು. ಎರಡು ವರ್ಷಗಳ ಹಿಂದೆ ಅದನ್ನೆಲ್ಲ ಕಡಿದಿದ್ದಾರೆ. ಈಗ ಎಷ್ಟು ದಟ್ಟವಾದ ಪೊದೆಗಳು ಬೆಳೆದಿವೆ ನೋಡಿ. ಅದರ ನಡುವಣ ಕಣಿವೆಯಲ್ಲಿ ಐವತ್ತು ಎಕ್ರೆಗಳಷ್ಟು ಉತ್ತಮ ಜಮೀನು ಮಾಡಬಹುದು. ಬದಲು—ಈಗ ಹುಲಿ, ಚಿರತೆಗಳಿಗೆ ಒಳ್ಳೆಯ ಆವಾಸವಾಗಿದೆ. ಗ್ರಾಮದ ಜಾನುವಾರುಗಳೊಂದೂ ಉಳಿಯುತ್ತಿರಲಿಲ್ಲ. ನಿಮ್ಮ ರೆವಿನ್ಯೂ ಸ್ಥಳಗಳಲ್ಲಿ ಕಾಡು ಕಡಿದರೆ, ಮುಂದೆ ದನಕರುಗಳು ಹೊಕ್ಕು, ನೆಲವನ್ನು ಬೋಳಾಗಿ ಮಾಡಿಬಿಡುತ್ತವೆ. ಅದರಿಂದಲೂ ಭೂಮಿ ಕೊರೆದು ಹಾಳಾಗುತ್ತದೆ. ಅರಣ್ಯ ಇಲಾಖೆಯ ಹೆದರಿಕೆಯಿಂದ ಯಾರೂ ಹೋಗುವ ಹಾಗಿಲ್ಲ. ಹೀಗಾಗಿ ಅಲ್ಲಿ ಪೊದೆಗಳು ಹೆಚ್ಚಿ, ಕುರುಚಲು ಕಾಡು ಬೆಳೆದು, ಕಾಡುಪ್ರಾಣಿಗಳ ಹಾವಳಿ ಹೆಚ್ಚುತ್ತದೆ. ಕಾಡು ಕಡಿಯುವುದಂತು ಸರಿಯೆ. ಕಡಿದ ಮೇಲೆ ವ್ಯವಸ್ಥಿತವಾಗಿ ಬೇರೆ ಮರಮಟ್ಟುಗಳನ್ನು ಯಾಕೆ ನಡಬಾರದು." ಆದರಿಂದ

ಸರಕಾರಕ್ಕೂ ಲಾಭವಿದೆ, ಜನಕ್ಕೂ ಅಷ್ಟು ಹಾನಿಯಾಗದು."

ಬಳಿಯಲ್ಲಿ ನಿಂತಿದ್ದ ಫೋರೆಸ್ಟ್ ಆಫೀಸರು ನಗುತ್ತ "ಏನು, ಆ ಗುಡ್ಡಗಳ ಮೇಲೂ ನಿಮ್ಮ ಕಣ್ಣು ಬಿದ್ದಿದೆಯೇ ?" ಎಂದು ಕೇಳಿದರು.

"ನನ್ನ ಕಣ್ಣೇನಿಲ್ಲ. ನನಗೆ ಇಲ್ಲಿಯೇ ಬೇಕಷ್ಟು ಜಮೀನಿದೆ. ನನ್ನ ಅಭಿಪ್ರಾಯವಿಷ್ಟೇ. ಜನಕ್ಕೆ ಉಪಯೋಗವಾಗುವಂಥ ಸ್ಥಳ ಉಪಯೋಗ ವಾಗದಿದ್ದರೆ ಹೋಗಲಿ, ಹಿಂಸೆಗಾದರೂ ಕಾರಣವಾಗಬಾರದಲ್ಲ" ಎಂದ.

ಅವರೆಲ್ಲರು ಅಲ್ಲಿಂದ ಹೊರಡುವುದಕ್ಕೆ ಅನುವಾದರು. ಶಂಕರ ತುಸು ದೂರ ಅವರ ಜತೆಗೆ ಹೋಗಿ, ಬೀಳ್ಕೊಟ್ಟು ಬಂದ. ಆತನು ಮರಳುವಾಗ ಕಲೆಕ್ಟರರು "ನಿಮ್ಮ ಸಲಹೆ ನಮಗೆ ಆಗಾಗ ಬೇಕಾದೀತು-ಇಂಥ ಕೆಲಸಗಳಿಗೆ. ಅಲ್ಲದೆ ನೀವು ಈ ಕೆಲಸವನ್ನು ವಿಸ್ತರಿಸುವಲ್ಲಿ ನಮ್ಮಿಂದಾದ ಸಹಾಯವನ್ನು ಮಾಡುತ್ತೇವೆ" ಎಂದೂ ಅಂದರು.

ಬಂದವರೆಲ್ಲ ಬಂಗಾಡಿಯ ತನಕ ಹೋಗಿ, ಅಲ್ಲಿಂದ ಜೀಪ್ ಹತ್ತಿಕೊಂಡು ಬೆಳ್ತಂಗಡಿಗೆ ಹೊರಟು ಹೋದರು. ರಂಗರಾಯರು ಮುಖ ಕಂದಿದವರಾಗಿ ತಮ್ಮ ಮನೆಗೆ ಮರಳಿ ಬಂದರು. ಅವರ ಮನಸ್ಸು ವಿಧ ವಿಧವಾದ ಯೋಚನೆಗಳಿಗೆ ಗುರಿಯಾಗಿತ್ತು. ಶಂಕರನ ವಿಚಾರದಲ್ಲಿ ತಾವು ಅಷ್ಟೊಂದು ಮನಸ್ಸಿ ಮಾತನಾಡಬಾರದಿತ್ತು ಎಂದೂ ಆ ಹುಡುಗ ಗಾಳಿ ಗೋಪುರ ಕಟ್ಟುವವರಿಗಿಂತಲೂ ಹೆಚ್ಚಿನ ಸಾಹಸಿ ಎಂದೂ ಮನಗಂಡರು. ಮಾತ್ರವಲ್ಲ-ಅವನ ಬಳಿಗೆ ಆಗಾಗ ಓಡಾಡುತ್ತಿದ್ದ ಎಳಚಿತ್ತಾಯರಾಗಲೀ, ಆರಿಗರಾಗಲೀ ನುಡಿದ ಮಾತುಗಳಿಗೆ ಅವರು ಎಂದೂ ಬೆಲೆಕೊಟ್ಟವರಲ್ಲ. ಈಗ ಬೆಲೆ ಕೊಡಲೇಬೇಕಾಯಿತು. ಆದರೂ ಪೂರ್ವದಲ್ಲಿ ಮಾನಸಿಕ ಪ್ರತಿಭಟನೆ ಶಮನವಾಗಲೊಲ್ಲದು. ತನ್ನ ಪಂಥ ಸಾಗಿಸುವುದಕ್ಕೆ ಅದೂ ಪ್ರಯತ್ನ ಮಾಡುತ್ತಿತ್ತು. ಅದಕ್ಕೆ-ಮನಸ್ಸು ಒಡ್ಡುತ್ತಿದ್ದ ಸಮಾಧಾನ ವೆಂದರೆ "ಕೃಷಿಯನ್ನೇನೋ ಮಾಡಿದ್ದಾನೆ. ಅಗ್ಗದ ದುಡ್ಡನ್ನು ನೀರಿನಂತೆ ಸುರಿದಿದ್ದಾನೆ. ಅಷ್ಟೆಲ್ಲ ಮಾಡಿದರೂ ರೂಪಾಯಿಯನ್ನು ಬಿತ್ತಿ, ಆಣೆಯನ್ನು ಎತ್ತುವ ಪ್ರಯತ್ನ ಅದು. ಅಷ್ಟೆಲ್ಲ ಮಾಡಿದ್ದೇನೆ-ಎಂದು ಇತರರಿಗೆ ತೋರಿಸಬಹುದು, ಹೆಮ್ಮೆ ಕೊಚ್ಚಬಹುದು. ಆದರೆ ಸುರಿದ ಹಣಕ್ಕೆ ಸೇಕಡಾ ಒಂದರ ಬಡ್ಡಿಯೂ ಸಿಗುವುದು ಕಷ್ಟ" ಎಂದು ತಮಗೆ ತಾವೇ

ಸಮಾಧಾನ ಹೇಳುತ್ತ, ತೃಪ್ತಿ ಪಡೆಯಬೇಕಾಯಿತು.

ರಂಗರಾಯರ ಮನಸ್ಸು, ಆ ದಿನ ಅಧಿಕಾರಿಗಳು ಬಂದು ಮಾಡಿದ ತನಿಖೆಯ ಪರಿಣಾಮ ಏನಾಗಬಹುದು-ಎಂಬುದರ ಕಡೆಗೂ ಹರಿಯಿತು. ಅವರೆಲ್ಲರ ಮಾತು ಕತೆಗಳು ಕಿವಿಗೆ ಕೇಳಿಸುತ್ತಿದ್ದುವು. ಅರಣ್ಯ ಇಲಾಖೆಯವರ ವಿರೋಧವನ್ನು ಶಂಕರನ ಸಾಹಸದ ಕೆಲಸಗಳು ಗೆದ್ದಿವೆ-ಎಂಬುದು ಅವರಿಗೂ ಸ್ಪಷ್ಟವಾಗಿತ್ತು. ಆದರೂ ಮನಸ್ಸಿನ ವೈರ ಹೋಗಲಾರದೆಂಬುದಕ್ಕೆ ಅವರ ಒಂದು ಮಾತೇ ಸಾಕ್ಷಿ. ಎಳಚಿತ್ತಾಯರೊಮ್ಮೆ ಅವರಿಗೆ ಭೇಟಿಯಾದಾಗ ಅವರೆಂದರು "ಆ ಭೂಮಿ ಅವನಿಗಾಗುತ್ತದಯ್ಯ. ತೀರ್ವೆ ಹಣ ಕೊಡಲಿಲ್ಲವೇ? ಅರಣ್ಯ ಇಲಾಖೆಗೆ ಹೋಗಲಾರದು-ಎಂಬುದು ಖಂಡಿತ. ಈತ ಅಡಿಕೆ ತೋಟವನ್ನು ಮಾಡಿಸಿದ್ದಾನೆ. ಆರೇಳು ವರ್ಷಗಳಲ್ಲಿ ಭರ್ಜರಿ ತೋಟವೂ ಆಗುತ್ತದೆ. ನೀರಿದೆ. ತೆಂಕುದಿಕ್ಕಿನ ನೆರಳಿದೆ. ಗಿಡಗಳು ಚೆನ್ನಾಗಿ ಮೇಲಕ್ಕೇಳುತ್ತವೆ. ಆದರೆ ನೋಡಿ, ಅಡಿಕೆ ಬತ್ತದ ಸಸಿಯಲ್ಲ. ಅದಕ್ಕೆ ಇವನ ಮಿಂಚಿನ ಬೇಲಿ, ಆಳೆತ್ತರದ್ದೂ ಪ್ರಯೋಜನವಿಲ್ಲ. ಕಾಡಿನ ಕಪಿಗಳು ನೆಟ್ಟಗೆ ತೋಟಕ್ಕೆ ಹಾರಿಬಂದರೆ, ಅಡಿಕೆಯ ಮಿಳ್ಳೆಯೊಂದೂ ಉಳಿಯಲಾರದು'' ಎಂದರು. ಅಡಿಕೆ ಅವನ ಕೈಗೆ ಸಿಗಬಾರದು—ಎಂದು ಅವರ ಮನದಲ್ಲಿ ಹುದುಗಿದ ಆಸೆ, ಇಂಥ ಮಾತಿನಿಂದ ಪ್ರಕಟವಾಯಿತು. ಆ ಮಾತು ಶಂಕರನ ಕಿವಿಗೂ ಹೋಗಿ ಸೇರಿತು.

ಶಂಕರ ನಗುತ್ತ ಹೇಳಿದ–"ಎಳಚಿತ್ತಾಯರೇ, ಅವರು ಹೇಳುವುದೆಲ್ಲ ಸಮನೇ. ಆದರೆ ಅವರು ತಿಳಿದಷ್ಟು ಹೆಡ್ಡ ನಾನಲ್ಲ. ಇದು ಕಪಿ, ಕೋತಿಗಳ ರಾಜ್ಯವೆಂದು ನನಗೆ ಗೊತ್ತಿಲ್ಲವೇ? ಕಾಡಿನ ಗಡಿಯ ವರೆಗೂ ನಾನು ತೋಟ ಹಾಕಿಲ್ಲ. ಹಾಕುವುದೂ ಇಲ್ಲ. ನಡುವೆ ಹತ್ತಿಪ್ಪತ್ತು ಗಜ ಕರೆ ಬಿಟ್ಟಿದ್ದೇನೆ. ಮರಮಟ್ಟು ಸವರತೊಡಗಿದ್ದೇನೆ. ಮಂಗನ ಹಿಂಡುಬಂದರೂ ಅದು, ನಡೆಯುತ್ತ ಬೇಲಿಯನ್ನು ದಾಟಿಯೇ ಬರಬೇಕು, ಇನ್ನು ಅವುಗಳು ಅಂತರಿಕ್ಷದಲ್ಲಿ ಸೇತುವೆ ಕಟ್ಟಿ ತೋಟಕ್ಕೆ ಬರುವುದಾದರೆ ನಾನೇನೂ ಮಾಡಲಾರೆ.

ಮತ್ತೊಂದು ಮಳೆಗಾಲ ಕಾಲಿರಿಸಿತು. ಶಂಕರನ ಅಜ್ಜಿ ಅವನಲ್ಲಿಗೆ ಬಂದು ನೆಲೆಸತೊಡಗಿ ಒಂದು ವರ್ಷ ಸಮೀಪಿಸಿತು. ಅಲ್ಲಿಗೆ ಬಂದಂದಿ

ನಿಂದ ತನ್ನ ಮರಿಮಕ್ಕಳ ಚಿಂತೆ ಅವಳಿಗೆ ಆಗಾಗ ಹುಟ್ಟುತ್ತಿತ್ತು. ಆದರಂತೆ, ಶಾಂತುವಿಗೂ ಅವಳ ಮಕ್ಕಳಿಗೂ ಅಜ್ಜಿಯನ್ನು ನೋಡುವ ಆಸೆ ಬಲವಾಗಿಯೇ ಇತ್ತು, ಆದರೆ ಅವರ್‍ಯಾರೂ, ರಂಗರಾಯರ ಕೋಪ ನಿಷ್ಠುರಗಳನ್ನು ಸಹಿಸಿ. ಆಗಾಗ ಹೋಗಿಬರುವ ಧೈರ್ಯತೋರರು. ಶಾಂತುವಿನ ಮನಸ್ಸಿನಲ್ಲಿ-ತನ್ನ ಹಿರಿಯ ಮಗಳಾದ ಶ್ರೀಮತಿಗೆ ಶಂಕರನೇ ಗಂಡನಾಗಿದ್ದರೆ ಎಷ್ಟು ಚೆನ್ನ–ಎಂಬ ಆಸೆಯು ಹುದುಗಿತ್ತು, ಶಂಕರನ ಮೇಲೆ ಅವಳಿಗಂತು ಅಭಿಮಾನ. ಈ ಎಲ್ಲ ಆಸೆಗಳೂ. ಅಜ್ಜಿಯ ಮೇಲಿನ ಮೋಹವೂ, ಅವಳನ್ನು ಬಂಧನದಲ್ಲಿರಿಸಲಾರವು. ಗಂಡ ಊರಲ್ಲಿಲ್ಲದ ವೇಳೆ ಯಾರಿಗೂ ತಿಳಿಯದಂತೆ, ಆಕೆ ಅಜ್ಜಿಯ ದರ್ಶನಕ್ಕೆ ಒಂದೆರಡು ಬಾರಿ ಕದ್ದು ಹೋಗಿದ್ದಳು. ಪುಣ್ಯವಶಾತ್ ಈ ಸುದ್ದಿಯು ರಂಗರಾಯರ ಕಿವಿಗೆ ಮಾತ್ರ ಬೀಳಲಿಲ್ಲ. ಬಿದ್ದಿದ್ದರೆ ಶಾಂತು ಎರಡೂ ಕೈಗಳಿಂದ ಅದರ ಫಲ ಉಣ್ಣಬೇಕಿತ್ತು. ಅಲ್ಲಿಗೆ ಹೋದಾಗ ಆಕೆ ಶಂಕರನ ಕೆಲಸಗಳನ್ನು ನೋಡಿ ತುಂಬ ಹಿಗ್ಗಿದ್ದಳು, ಹಿಗ್ಗಿದರೇನು? ಗಂಡನೊಡನೆ ಆ ವಿಷಯವಾಗಿ ಒಂದೇ ಒಂದು ಸುದ್ದಿಯನ್ನು ಮಾತನಾಡುವ ಧೈರ್ಯ ಅವಳಿಗಿರಲಿಲ್ಲ. ತನ್ನ ಮನದ ನಿರೀಕ್ಷೆ ಸಫಲವಾಗಲಿ ಎಂದು ಯಾವುದೋ ಶುಭ ಮುಹೂರ್ತಕ್ಕಾಗಿ ಅವಳು ಕಾದಿದ್ದಳು, ಮಂಜುನಾಥ ಮನೆಗೆ ಬಂದರೆ, ಅವನಿಂದ ತಂದೆಗೆ ಎರಡು ಮಾತು ಹೇಳಿಸಿ, ಸಮಾಧಾನ ತರಿಸಬಹುದೆಂಬ ಅಸ್ಪಷ್ಟವಾದ ಆಸೆ ಅವಳದ್ದು,

ಹಿಂದಿನಕಾಲವಾದರೆ ಅದೂ ಸಾಧ್ಯವಿರಲಿಲ್ಲ. ಮಗನ ಹೆಸರು ಕೇಳಿದರೇನೆ ರಂಗರಾಯರು ಸಿಡಿಮಿಡಿಗೊಳ್ಳುತ್ತಿದ್ದರು. ಈಗ ಹವೆ ಬದಲಿಸಿದೆ. ಶಂಕರನ ಮೇಲೆ ಎಷ್ಟು ಕೋಪವೋ ಅವರಿಗೆ. ದೂರದಲ್ಲಿರುವ ಮಗನ ಮೇಲೆ ಅಷ್ಟು ಮಮತೆ. ಅವನಿಂದ ಒಂದು ಕಾಗದ ಬಂದಿತೆಂದರೆ, ಒಂದುವಾರದ ತನಕ ಆ ವಿಷಯವಾದ ಬಡಾಯಿಕೊಚ್ಚುತ್ತಿದ್ದರು. ಮೊನ್ನೆ ಮೊನ್ನೆ ಬಂದೊಂದು ಪತ್ರದಲ್ಲಿ "ಒಂದು ವಾರದ ರಜೆ ಕೇಳಿದ್ದೇನೆ. ರಜೆ ಸಿಕ್ಕಿದರೆ ನೆಟ್ಟಗೆ ವಿಮಾನದಲ್ಲಿ ಬೆಂಗಳೂರಿಗೆ ಬಂದು, ಊರಿಗೆ ಬರುತ್ತೇನೆ" ಎಂದು ಸುದ್ದಿ ಬರೆದಿದ್ದ. ಆ ಸುದಿನಕ್ಕಾಗಿ ಶಾಂತು ಕಾದಿದ್ದಾಳೆ. ಶ್ಯಾನುಭಾಗರೂ ತಮ್ಮ ವೀರಾಗ್ರೇಸರ ಮಗನ

ಬರುವಿಕೆಯನ್ನು ಹಂಬಲಿಸುತ್ತಿದ್ದಾರೆ. ಮಂಜುನಾಥನು ಸಾಮಾನ್ಯನಲ್ಲ. ಈಗ ವೈಮಾನಿಕ. ಬರ್ಮಾ ಯುದ್ಧಕ್ಕೂ ಹೋಗಿ ಖ್ಯಾತಿಯನ್ನು ಗಳಿಸಿದ್ದಾನಂತೆ. ಏನೇನೋ ಬಿರುದು ಬಾವಲಿ ಗಳಿಸಿದ್ದಾನಂತೆ. ಅದಕ್ಕೂ ಹೆಚ್ಚಿನ ಸಂಗತಿಯೆಂದರೆ ತಂದೆಗೆ ಪ್ರತಿ ತಿಂಗಳು—ನೂರು ನೂರು ರೂಪಾಯಿ ನಗದಿಯಿಂದ ಕಳುಹಿಸುತ್ತಿದ್ದಾನೆ.

ಈ ಹೊಸ ವೈಭವದಿಂದಾಗಿ ರಂಗರಾಯರ ಮನಸ್ಸಿನಲ್ಲಿ ಹೊಸ ಅಭಿಲಾಷೆ ಮೂಡಿದೆ. ಅದು ಮೂಡಿದ್ದು—ಕಲೆಕ್ಟರರ ಜತೆಯಲ್ಲಿ ಶಂಕರನ ಸಾಹಸ ನೋಡಿಕೊಂಡು ಬಂದ ಮೇಲೆ. ತಮ್ಮ ಮಗ ಕಳುಹಿಸುತ್ತಿರುವ ಹಣವನ್ನು ಜಾಗ್ರತೆಯಿಂದ ಕೂಡಿಸಿಡುತ್ತಿದ್ದಾರೆ. 'ಒಮ್ಮೆ ಈ ಹಾಳು ಯುದ್ಧ ಮುಗಿಯಲಿ ; ಮಗನನ್ನು ಯುದ್ಧದಿಂದ ಬಿಡಿಸಿಕೊಂಡು ಊರಿಗೆ ಕರೆಯಿಸಿ, ಮತ್ತೆಲ್ಲ ನೋಡುತ್ತೇನೆ' ಎಂದು ಏನೇನೋ ಆಸೆ ಕಟ್ಟುತ್ತಿದ್ದಾರೆ. ಸಾಮಾನ್ಯ ತಂದೆತಾಯರ ಪಾಲಿಗೆ ಇರುವಂಥ ಆಸೆಯೇ ಅದು. ಯುದ್ಧಭೂಮಿಯಲ್ಲಿ ತಮ್ಮ ಹೊಟ್ಟೆಯ ಕೂಸೊಂದು ಯಮನ ದವಡೆಯಲ್ಲಿ ಕುಣಿದಾಡುತ್ತಿರುವುದು ಯಾರೊಬ್ಬರಿಗೂ ಇಷ್ಟವಾಗದಚಿತ್ರ. ರಂಗರಾಯರ ಈ ಬಯಕೆ, ದಿನ ದಿನ ಮನಸ್ಸಿನಲ್ಲೇ ಆಕಾರ ತಾಳುತ್ತದೆ. ಯುದ್ಧ ಮುಗಿದ ಮೇಲೆ, ಅವನ ಹೆಸರಿನಲ್ಲಿ ಸರಕಾರದಿಂದ ಬೇಕಷ್ಟು ಜಮೀನು ಪಡೆಯಬಹುದು. ಅನುಭವಶಾಲಿಯಾದ ತಾನು, ಶಂಕರನನ್ನು ಮೀರಿಸುವ ಕೆಲಸ ಮಾಡಿಸಬಹುದು. ಒಮ್ಮೆ ಮಗನು ಸೇನೆಯಿಂದ ಮರಳಿ ಬರಲಾರನಾದರೂ, ಇದರಂತೆಯೇ ಅಥವಾ ಇದಕ್ಕೂ ಹೆಚ್ಚಾಗಿ ಹಣ ಕಳುಹಿಸುತ್ತಿರುವನಾದರೆ, ಅವನ ಹೆಸರಿನಲ್ಲಿ ಶಂಕರನನ್ನು ನಾಚಿಸುವ ನಂದನವನ ಮಾಡುತ್ತೇನೆ—ಎಂಬ ಕೆಚ್ಚು ಅವನ ಎದೆಯಲ್ಲಿ ಮೂಡ ತೊಡಗಿತು.

ಅದೊಂದು ದಿನ ನೀಟಾದ ಖಾಕಿ ಉಡುಗೆಯಲ್ಲಿ ವೈಮಾನಿಕ ಮಂಜುನಾಥನ ಸವಾರಿ ಥಟ್ಟನೆ ಮನೆಗೆ ಬಂದೇಬಿಟ್ಟಿತು. ಆಗ ಮಳೆಗಾಲ ಕಳೆದಿತ್ತು. ತಂದೆ ಮನೆಯಲ್ಲಿರಲಿಲ್ಲ. ಪುತ್ತೂರಿಗೆ ಹೋಗಿದ್ದರು. ಆತ ಬೆಂಗಳೂರಿಗೆ ಬಂದು, ಅಲ್ಲಿಂದ ನೇರಾಗಿ ಊರಿಗೆ ಬಂದುಬಿಟ್ಟ. ಶಾಂತುವಿಗೆ ಹಿಡಿಸಲಾರದಷ್ಟು ಆನಂದವಾಯಿತು. ಮಗನನ್ನು ನಾಲ್ಕು ನಾಲ್ಕು

ಬಾರಿ ದಿಟ್ಟಿಸಿ ನೋಡಿದಳು. ಮನೆಬಿಟ್ಟು ಓಡುವಾಗ ಎಳೆಯ ಹುಡುಗನಾಗಿದ್ದ. ಬಾಡಿದ ಕಪೋಲಗಳುಳ್ಳ ತೆಳ್ಳಗಿನ ಬಡಕಲು ಜೀವಿಯಾಗಿದ್ದ. ಈಗಲೋ—ಸುಂದರನೂ, ದೃಢಕಾಯನೂ ಆದ ಯುವಕನಾಗಿ ಮರಳಿದ್ದಾನೆ. ಮೈ ಮುಖಗಳಲ್ಲಿ ಮಾಂಸ ತುಂಬಿದೆ. ನಡೆನುಡಿಗಳಲ್ಲಿ ಚುರುಕುತನ ತುಂಬಿದೆ. ಹುಡುಗ ಬಂದವನೇ "ಅಮ್ಮಾ, ಅಪ್ಪ ಎಲ್ಲಿ? ಬೆಳ್ತಂಗಡಿಯಲ್ಲಿ ವಿಚಾರಿಸಿದೆ. ಅಲ್ಲಿ ಇದ್ದಿರಲಿಲ್ಲ. ಅಜ್ಜಿ ಎಲ್ಲಿ?" ಎಂದು ಕೇಳಿದ. ತಂದೆ ಪುತ್ತೂರಿಗೆ ಹೋದದ್ದು; ಎಂದು ಬರುವರೆಂದು ತಿಳಿಯದ್ದು—ಆತನಿಗೆ ನಿರಾಶೆಯನ್ನುಂಟುಮಾಡಿತು. ಅವನಿಗಿರುವುದು ಮೂರು ನಾಲ್ಕು ದಿನಗಳ ಅವಕಾಶ. ಹಾಗಾಗಿ ಶಾಂತು ಉಗ್ರಾಣಿಯನ್ನು ಕರೆದು, ಪುತ್ತೂರಿಗೆ ಸಂದೇಶ ಕಳುಹಿಸಿದಳು. "ಮಂಜು ಬಂದಿದ್ದಾನೆ. ಅವನಿಗೆ ಹೆಚ್ಚು ದಿನ ರಜೆಯಿಲ್ಲ. ಕೂಡಲೇ ಬರಲಿ" ಎಂದಂದಳು. ಉಗ್ರಾಣಿ ತಿಮ್ಮನಿಗೂ ಮಂಜುನಾಥನನ್ನು ನೋಡಿ ಪರಮಾನಂದವಾಯಿತು. ಅವನ ಠೀವಿ, ಆಕಾರ, ದುಸ್ತುಗಳನ್ನು ಕಂಡೇ ಆತ ಹಿಗ್ಗಿದ. ಶ್ಯಾನುಭಾಗರನ್ನು ಕರೆದು ತರುವುದಕ್ಕೆ ಧಾವಿಸಿದ.

ಮಂಜುನಾಥ ಮನೆಯನ್ನು ಸೇರುವಾಗ, ಮಧ್ಯಾಹ್ನದ ಮೂರು ತಾಸು ಕಳೆದಿತ್ತು. ಸ್ನಾನ ಮಾಡಿದ; ಊಟ ಮುಗಿಸಿದ. ತಾಯಿಯ ಬಾಯಿಂದ—ಅಜ್ಜಿ ಮನೆಬಿಟ್ಟು ಶಂಕರನ ಮನೆಯಲ್ಲಿ ಇರುವ ಸಂಗತಿಯನ್ನೂ ಕೇಳಿದ. ಶಂಕರನ ಹೆಸರು, ಆತ ದಿಲ್ಲಿಯವನೆಂಬ ಸುದ್ದಿಗಳನ್ನೆಲ್ಲ ಕೇಳಿ, ಅವನಿಗೆ ಸೋಜಿಗವೆನಿಸಿತು. ಆ ಒಂದು ಸಂಗತಿಯನ್ನು ಕುರಿತು ಅವನ ತಂದೆ ಅವನಿಗೆ ಬರೆದಿರಲಿಲ್ಲ. ಆದರೆ ವರಲಕ್ಷ್ಮಿಯ ನೆನಪಿನಿಂದಾಗಿ ಶಂಕರನಾರೆಂಬುದು ಊಹೆಯಾಗದೆ ಹೋಗಲಿಲ್ಲ. ಮನಸ್ಸು ಆದರಿಂದ ಅಷ್ಟೊಂದು ಉಲ್ಲಾಸ ತಾಳಲಿಲ್ಲ. ಊಟವಾದ ಬಳಿಕ ಮುತ್ತಜ್ಜಿಯನ್ನು ನೋಡಿಕೊಂಡು ಬರಲು ಉತ್ಸಾಹಪಟ್ಟ. ತಾಯಿ, ತಂದೆಗೆ ಶಂಕರನಲ್ಲಿರುವ ಬೇಸರದಿಂದಾಗಿ ತಾನು ಬರಲೊಲ್ಲೆ ಎಂದಂದರೂ, ಮಂಜುನಾಥ ಹೋಗಿಬರಲು ಪ್ರೋತ್ಸಾಹವನ್ನು ಕೊಟ್ಟಳು.

ಮಂಜುನಾಥ ಮನೆಯಿಂದಹೊರಟು, ಗುಡ್ಡದಾಟಿ, ಬಯಲಿಗೆಬಂದ ಅಲ್ಲಿಂದ ಹೊಳೆಯ ದಂಡೆಯನ್ನು ಸಮೀಪಿಸಿದ. ಆ ದಂಡೆಯಿಂದ ನೋಡು

ವಾಗಲೇ–ಎದುರಿನ ಮೂಡೋಡಿಯ ಬೆಟ್ಟು, ಬಯಲುಗಳು. ಈ ತನಕ ಕಾಣದ ಹೊಸತೊಂದು ಊರಾಗಿ ಕಾಣಿಸಿದುವು. ಹಳ್ಳವನ್ನಿಳಿದು ಆಚೆಯ ದಂಡೆಯನ್ನೇರುವಾಗ, ಆ ಭೂಮಿಯನ್ನೇ ಗುರುತಿಸುವಂತಿರಲಿಲ್ಲ. ಪೊದೆ ತುಂಬಿದ ಬೆಟ್ಟೆಲ್ಲ ಅಂಗಣ ಅಂಕಣಗಳಾಗಿ ವಿಭಾಗಿಸಿದ ಗದ್ದೆಗಳಾಗಿವೆ. ನಾಲ್ಕೆಂಟು ಗುಡಿಸಲುಗಳೂ ಎದ್ದು ನಿಂತಿವೆ. ತನಗೆ ಇದಿರಾದ ಆಳೊಬ್ಬನನ್ನು ಕರೆದು, ' ಶಂಕರರಾಯರ ಮನೆಯಾವುದು ? ' ಎಂದು ಕೇಳಿದ. ಆತ ಗುಡಿಸಲುಗಳ ಸಾಲನ್ನು ತೋರಿಸಿದಾಗ ಯಾವ ಮನೆಯನ್ನು ಹೊಗ್ಗಬೇಕು ಎಂಬುದು ಆತಗೆ ತೋಚಲಿಲ್ಲ. ಆ ಗುಡಿಸಲುಗಳನ್ನು ಸಮೀಪಿಸಿದಾಗ ಒಂದು ಮನೆಯ ಮುಂದೆ, ಶಂಕರ ಹಾರೆ ಹಿಡಿದು ಅಂಗಳದ ನೆಲ ಕೆರೆಯುತ್ತಿದ್ದ. ಶಂಕರನಿಗೆ ಖಾಕಿ ಉಡುಗೆಯ ಈ ಸರದಾರ ಬಂದುದೂ ಕಾಣಿಸಿತು. ಕತ್ತೆತ್ತಿದ್ದ. ವಿಟ್ಠಲನೋ ಎಂಬ ಭ್ರಮೆಯೊಾಯಿತು–ಆ ವೈಮಾನಿಕನ ಉಡುಗೆಯಿಂದ. ಅಷ್ಟರಲ್ಲಿ ಆತ ಬಂದೂ ಆಯಿತು. ಬಂದು " ಶಂಕರರಾಯರ ಮನೆ.....?" ಎಂದು ಕೇಳುವಾಗಲೇ, ಮುಖ ಮುಖ ಭೇಟಿಯೂಾಯಿತು. ಮಿಂಚಿನ ಘಾತದಂತೆ ಶಂಕರನ ಮನಸ್ಸು ಒಮ್ಮೆಗೆ ಸ್ತಂಭಿತವಾಯಿತು. ದಿಲ್ಲಿಯಲ್ಲಿ ಯಾರ ಕೈಯಲ್ಲಿ ವರಲಕ್ಷ್ಮಿಗೆ ಪತ್ರ ಕೊಟ್ಟಿದ್ದನೋ ಆ ವ್ಯಕ್ತಿ ! ಕಣ್ಣನ್ನು ನಂಬುವುದಕ್ಕೂ ಕಷ್ಟವಾಯಿತು. ಬಹು ದಿನದಿಂದ ಜಯರಾಮರ ಮನೆಯಲ್ಲಿ ಆಳಾಗಿ, ಊಳಿಗದವನಾಗಿ, ಕೆಲವೊಮ್ಮೆ ಡ್ರೈವರನಾಗಿ ಇದ್ದ ಹುಡುಗನು ಅವನೇಯೇ–ಎಂದು ನಂಬುವ ಸಾಹಸವಾಗಲಿಲ್ಲ. ' ಅಲ್ಲವೋ ಏನೋ ' ಎಂದು ಹೊಳೆದ ನೆನಪನ್ನು ಆತ ಮರೆತ. ಮಂಜುನಾಥ ಶಂಕರನನ್ನು ಬಹು ಚೆನ್ನಾಗಿ ಗುರುತಿಸಬಲ್ಲವನಾದರೂ, ಗುರುತಿಸಿದೆ ಎಂದು ತೋರಿಸಿಕೊಳ್ಳಲೇ ಇಲ್ಲ. ಅವನ ಮನಸ್ಸು ಕಾರಣಾಂತರಗಳಿಂದ ಅಜ್ಞಾನ ತತ್ವವನ್ನು ಬಯಸುತ್ತಿತ್ತು. ಶಂಕರನಿಗೆ ಗುರುತು ಹತ್ತದ ಮೇಲೆ, ತಾನಾಗಿ ಏತಕ್ಕೆ ಅದನ್ನು ತೋರಿಸಿಕೊಳ್ಳಬೇಕು ಎಂದು ಯೋಚಿಸಿ ಏನೂ ತಿಳಿಯದವನಂತೆ " ನಾನು ಶ್ಯಾನುಭಾಗರ ಮಗ. ಮುತ್ತಜ್ಜಿಯನ್ನು ನೋಡಲಿಕ್ಕೆ ಬಂದಿದ್ದೇನೆ. ನೋಡಬಹುದೇ ? " ಎಂದು ಕೇಳಿದ.

**ಆದರಿಂದ–ದಿಲ್ಲಿಯ ಹುಡುಗ ಅವನಿರಲಾರ–ಎಂದು ಶಂಕರನಿಗನಿ**

ಸಿತು. ರಂಗರಾಯರ ಮಗನು ಅಂಬಾಲದಲ್ಲೋ, ಇನ್ನೆಲ್ಲೋ ಇದ್ದಾನೆಂದು ಹೇಳಿದ್ದರು. ಅವನಿಗೂ ಇವನಿಗೂ ತುಸು ರೂಪಸಾಮ್ಯ ಇರಬಹುದಾದರೂ, ಈತ ಅವನಿಗಿಂತ ಬೆಳೆದ ವ್ಯಕ್ತಿ–ಎಂದನಿಸಿತು. ಅಷ್ಟರಲ್ಲಿ ಕೇಳಿದ ಪ್ರಶ್ನೆಯ ಕಡೆಗೆ ಗಮನ ಹರಿದು “ಹಾಗೇನು ಕೇಳುತ್ತೀರಿ? ಅವರು ನಿಮಗೆ ಮುತ್ತಜ್ಜಿಯಾದರೆ, ನನಗೆ ಅಜ್ಜಿ” ಎಂದು ನಕ್ಕ. ಹಾರೆಯನ್ನು ಬಿಸುಟ. ಕೈದೋರಿ ಒಳಕ್ಕೆ ಕರೆದುಕೊಂಡು ಹೋಗಿ, ಅಜ್ಜಿಯ ದರ್ಶನ ಮಾಡಿಸಿದ. ಮುದುಕಿಗೆ ತುಂಬ ಸಂತೋಷವಾಯಿತು. ಮಂಜುನಾಥನ ಕ್ಷೇಮ ಸಮಾಚಾರವನ್ನೆಲ್ಲ ಕೇಳಿದಳು; ತಾನು ಅಲ್ಲಿಗೆ ಬಂದ ಕಾರಣ ಹೇಳಿದಳು. ಅನಂತರ ರಂಗಣ್ಣ ಶಂಕರನೊಂದಿಗೆ ದ್ವೇಷಕಟ್ಟಿಕೊಂಡ ಬಗ್ಗೆ ಅಸಮಾಧಾನವನ್ನು ಸೂಚಿಸಿದಳು. ಮಂಜುನಾಥ ಮಾತ್ರ ಶಂಕರನ ಪರವಾದ ಮಾತುಗಳನ್ನು ಉದಾಸೀನನಾಗಿಯೇ ಕೇಳುತ್ತಿದ್ದನು. ಕೊನೆಗೆ ಹೊರಡುವಾಗ “ನಾನು ಬಂದಿದ್ದೇನಲ್ಲ, ಮನೆಗೆ ಬರುವುದಿಲ್ಲವೇ” ಎಂದು ಪ್ರಾರ್ಥಿಸಿದನು.

“ಈಗ ನನ್ನಿಂದ ಗುಡ್ಡ ಹತ್ತಿ ಇಳಿಯುವುದಕ್ಕಾಗುತ್ತದೆಯೇ ಮಗು? ಅಲ್ಲದೆ ನಿನ್ನ ಅಪ್ಪನಿಗೂ ನನ್ನ ಮೇಲೆ ತುಂಬ ಸಿಟ್ಟು ಬಂದಿದೆ. ಏನೋ–ಇರುವ ನಾಲ್ಕು ದಿನ ಇಲ್ಲಿಯೇ ಬದುಕಿ ಸಾಯುತ್ತೇನೆ. ನನ್ನಿಂದ ಯಾರಿಗೂ ಅಸಮಾಧಾನ ಬೇಡ. ನನಗೆ ಈ ಮಗು ಎಷ್ಟು ಬೇಕೋ, ರಂಗನೂ ಅಷ್ಟೇ ಬೇಕು. ನೀವೆಲ್ಲರೂ ಅಷ್ಟೇ ಬೇಕು. ನೀವೆಲ್ಲ ಚೆನ್ನಾಗಿ ಬಾಳಿ ಬದುಕಿದರೆ ಅದೇ ನನಗೆ ಸಮಾಧಾನ.”

ಮಂಜುನಾಥ ಹೊರಟು ಹೋದ. ಶಂಕರ ತನ್ನ ಬಂಧು ಎಂಬ ಗೌರವದಿಂದ ಹೊಳೆಯತನಕವೂ ಬಿಟ್ಟುಬಂದ. ಆದರೆ ಆತ ಮಾತ್ರ ತನ್ನ ಪೂರ್ವಪರಿಚಯವನ್ನು ಸ್ಮರಣೆಗೆ ತಂದುಕೊಡುವ ಪ್ರಯತ್ನವನ್ನೇ ಮಾಡಲಿಲ್ಲ.

ಆ ರಾತ್ರಿ ಶ್ಯಾನುಭಾಗರು ಮನೆಗೆ ಬರುವುದಕ್ಕೆ ಸಾಧ್ಯವಾಗಲಿಲ್ಲ. ತಾಯಿ ಮಕ್ಕಳಿಬ್ಬರೇ ಬಹು ರಾತ್ರಿಯ ತನಕವೂ ಮಾತನಾಡುತ್ತಲಿದ್ದರು. ಶ್ರೀಮತಿಯ ಮದುವೆ ಪ್ರಸ್ತಾಪವಂತು ಬಂದಿತು. ಮಂಜುನಾಥನೆಂದ “ಅಮ್ಮಾ, ಏನು, ಇನ್ನೂ ಶ್ರೀಮತಿಗೆ ನಂಟುತನ ಸಿಕ್ಕಿಲ್ಲವೇ? ಅಪ್ಪಾ ಏಕೆ

ಆ ವಿಷಯದಲ್ಲಿ ಉದಾಸೀನರಾಗಿದ್ದಾರೆ " ಎಂದು ಕೇಳಿದ. ಅದು ಶಾಂತು ವಿಗೂ ನೋವನ್ನು ಕೊಡುವ ಸಂಗತಿ. ಶ್ರೀಮತಿಯ ಬೆನ್ನ ಹಿಂದೆಯೇ ಇನ್ನಿಬ್ಬರು ಹೆಣ್ಣು ಮಕ್ಕಳಿದ್ದಾರೆ. ಒಂದೆರಡು ವರ್ಷಗಳಲ್ಲಿ ಅವರಿಗೂ ಲಗ್ನ ವಾಗಬೇಕಾಗುತ್ತದೆ. ಹಿರಿಯಳಿಗೇನೇ ಇನ್ನೂ ಲಗ್ನವಾಗಿಲ್ಲ ಎಂದಮೇಲೆ ಆ ಮಕ್ಕಳ ಪಾಡು ಏನೋ ಎಂತೊ. ಶಾಂತು ಮಗನ ಪ್ರಶ್ನೆಗೆ ' ಹೂಂ ' ಅನ್ನಲಿಲ್ಲ. 'ಹಾಂ' ಅನ್ನಲಿಲ್ಲ. ಮಂಜುನಾಥ ತಾನಾಗಿ "ಅಮ್ಮ, ಆಕೆಗೆ ಕಿವಿ ಕೇಳಿಸುವುದಿಲ್ಲ ಎಂದು ಇಷ್ಟು ಕಷ್ಟವೇ ? ಬಡವರಿಗಾದರೂ ಕೊಟ್ಟು ನಂಟಸ್ತಿಕೆ ಮಾಡಬಹುದಲ್ಲ. ಚಿನ್ನ ಹಾಕುತ್ತೇವೆ, ಬೇಕಾದರೆ ವರದಕ್ಷಿಣೆ ಯನ್ನೂ ಕೊಡುವ–ಎಂದರೆ ನಂಟುತನ ಸಿಗಲಾರದೇ ? ನನ್ನಿಂದಾದ ಹಣ ಒದಗಿಸುತ್ತೇನೆ. ಅಪ್ಪನಿಗೆ ಹೇಳು. ಇವಳ ವಿಷಯ ಉದಾಸೀನ, ಮಾಡಿ ದರೆ ಉಳಿದವರ ಲಗ್ನಕ್ಕೂ ಕಷ್ಟವಾದೀತಲ್ಲ" ಎಂದನು.

ಶಾಂತು ಆಗ ತನ್ನ ಮನಸ್ಸಿನಲ್ಲಿ ಹುದುಗಿದ ಆಸೆಯನ್ನು ವ್ಯಕ್ತ ಮಾಡಿದಳು. ಅದಕ್ಕೆ ಅಡ್ಡವಾಗಿರುವ ಗಂಡನ ಮನೋಭಾವವನ್ನೂ ವ್ಯಥೆ ಯಿಂದ ದೂರಿದಳು. "ನೀನು ನಿನ್ನ ಅಪ್ಪನಿಗೆ ಹೇಳಿ, ಅವರ ಈ ಹಟ ಬಿಡುವ ಹಾಗೆ ಮಾಡಿದರೆ, ಮದುವೆಯಾಗದೆ ಏನು ? ಶ್ರೀಮತಿ ಕಿವುಡಿ ಎಂಬುದು ನಿಜ. ಶಂಕರ ವಿದ್ಯಾವಂತನೂ ನಿಜ. ಅವನ ಇವಳ ಯೋಗ್ಯತೆಗೆ ತುಂಬ ಅಂತರವಿದೆ. ಆದರೂ ಸಮೀಪದ ಹುಡುಗ. ಒಳ್ಳೆಯ ಸಜ್ಜನ. ನಿನ್ನ ತಂದೆ ಇಷ್ಟೆಲ್ಲ ದೂರು, ನಿಂದೆ ಮಾಡಿದರೂ, ದ್ವೇಷ ಕಟ್ಟಿಕೊಂಡರೂ, ನಮ್ಮನ್ನೆಲ್ಲ ನೋಡಿದರೆ ಎಷ್ಟು ಪ್ರೀತಿ ಗೊತ್ತೇ ? ಶ್ರೀಮತಿಯನ್ನು ಕಂಡ ರೂ, ಆತನಿಗೆ ತುಂಬಾ ಆದರ. ಅವನಷ್ಟು ಓದಿದವರಾದರೂ, ಬೇಸಾಯ ದಂತಹ ಕೆಲಸಕ್ಕೆ ಇಳಿದಿರುವಾಗ, ಬಹಳ ಓದಿದ ಹುಡಿಗಿಯೇ ಬೇಕು ಎಂಬ ಹಟ ಹಿಡಿಯಲಾರ" ಎಂದು ತನ್ನ ಆಸೆಗಳನ್ನೆಲ್ಲ ವ್ಯಕ್ತಪಡಿಸಿದಳು. ಮಂಜುನಾಥ ಮಾತ್ರ ಅದರಿಂದ ಉತ್ಸಾಹ ತಾಳಲಿಲ್ಲ. "ಅಪ್ಪನಿಗೆ ನಾನು ಹೇಳುವುದೇ ? ಅವರ ಸ್ವಭಾವ ನಿನಗೆ ಗೊತ್ತಿಲ್ಲವೇ ?"—ಎಂದು ತನ್ನ ಹೊಣೆಯನ್ನು ತೇಲಿಸಿಬಿಟ್ಟ.

ಮರುದಿನ ಸಂಜೆ ಶ್ಯಾನುಭಾಗರು ಬೆಳ್ಳಂಗಡಿಗೆ ಬಂದರು. ಉಗ್ರಾ ಣಿಯ ಜತೆಯಲ್ಲಿ, ಕಳ್ಳು ಹರಿದು ಸ್ವಲ್ಪ ಹೊತ್ತಿನೊಳಗಾಗಿ ಮನೆಯನ್ನು

ಸೇರಿದರು. ದಾರಿಯುದ್ದಕ್ಕೂ-ಮಗ ಬಂದಿದ್ದಾನೆ, ನಮ್ಮ ಮಂಜು ಬಂದಿದ್ದಾನೆ–ಎಂಬ ಹಿಗ್ಗಿನಿಂದ ಕಂಡವರಿಗೆಲ್ಲ ಸಮಾಚಾರ ಹೇಳಿದರು. ಮನೆ ಹೊಗ್ಗುವ ಮುಂಚೆ, ಶಾಂತಿರಾಜ ಆರಿಗರ ಮನೆಯನ್ನು ಹೊಕ್ಕು ಅವರನ್ನು ಕರೆದುಕೊಂಡು, ದಾರಿಯಲ್ಲಿ ಮಗನ ಕೀರ್ತಿಯನ್ನು ಕೊಂಡಾಡುತ್ತ, ಕುಮಾರ ಕಂಠೀರವನ ದರ್ಶನವನ್ನು ಪಡೆದರು. ಮಗಳನ್ನು ಕಾಣುವ ಮೊದಲೂ, ಆ ಬಳಿಕವೂ, ಅವನ ಕುರಿತಾದ ಸ್ತುತಿ ಪಾಠವೇ ನಡೆಯಿತು. ತಂದೆಯನ್ನು ಕಂಡು, ಕೇಳಿದ ಮಗನಿಗೆ, ತನ್ನ ಹಳೆಗಾಲದ ತಂದೆ ಅಲ್ಲವೇ ಅಲ್ಲ–ಎನ್ನುವಷ್ಟು ಅಭಿಮಾನ ತುಂಬಿಹೋಯಿತು. ಅವರ ಮತ್ತು ಆರಿಗರ ಎದುರಿಗೆ, ಮಂಜುನಾಥ ತನ್ನ ವೈಮಾನಿಕ ಜೀವನದ ಸಾಹಸಗಳನ್ನು ಒಂದು ತಾಸಿನ ತನಕ ಬಣ್ಣಿಸಿದ. ರಂಗರಾಯರ ಪಾಲಿಗೆ ಮಗ ಮಂಜುನಾಥ ರಾಣಾ ಪ್ರತಾಪನನ್ನು ಮೀರಿಸುವ ಶಕ್ತನೂ, ಸಾಹಸಿಯೂ ಅನಿಸಿದ.

ಇನ್ನೆರಡು ದಿನಗಳ ಕಾಲವಷ್ಟೆ ಮಂಜುನಾಥ ಮನೆಯಲ್ಲಿದ್ದುದು. ತಂದೆ ಮಕ್ಕಳು ಅದೆಷ್ಟು ಮಾತನಾಡಿದರೋ, ಎಷ್ಟು ಹರಟೆಕೊಚ್ಚಿದರೋ ದೇವರೇ ಬಲ್ಲ. ಈ ಹರಟೆಯಲ್ಲಿ ಶಂಕರನಿಗೆ ಸಂಬಂಧಿಸಿದಂಥ ಮಾತಿನ ಪಾಲು ದೊಡ್ಡದು. ರಂಗರಾಯರು ಆರಂಭದಿಂದ ಕತೆಯನ್ನು ಹೇಳಿದರು-ತಾನು ಜಾತಕ ಕೇಳಿದ ವಿಚಾರ, ಸುಂದರರಾಯರ ಹೆಮ್ಮೆ, ಶಂಕರನ ಹುಚ್ಚು ಕೆಲಸಗಳು–ಒಂದೊಂದನ್ನೇ ಬಣ್ಣಿಸಿದರು,

ಒಂದೆರಡು ಪ್ರಶ್ನೆಗಳು ಮಗನ ವರಮಾನದ ವಿಚಾರದಲ್ಲೂ ಬಂದವು "ಊಟ, ಉಡಿಗೆ ಧರ್ಮಕ್ಕೆ ಹೋಗುತ್ತದೆ ಅನ್ನುತ್ತೀಯಾ. ಮುನ್ನೂರಕ್ಕೆ ಮಿಕ್ಕಿ ಸಂಬಳ ಅನ್ನುತ್ತೀಯ. ಆಗ ಮನೆಗೆ ಕಳುಹಿಸುವುದು ಅಷ್ಟು ಸ್ವಲ್ಪವೇ ?" ಎಂದು ಕೇಳಿದರು. ಮಂಜುನಾಥ, ತಾನು, ಹಣವನ್ನು ಬೇಂಕಿನಲ್ಲಿರಿಸುತ್ತಿದ್ದೇನೆಂದೂ, ಹಾಳುಮಾಡುತ್ತಿಲ್ಲವೆಂದೂ ಭರವಸೆಕೊಟ್ಟ. ರಂಗರಾಯರು ಶಂಕರನನ್ನು ಕೃಷಿಯಲ್ಲಿ ಸ್ಪರ್ಧಿಸುವ ತಮ್ಮ ಹಂಬಲ ತೋಡಿಕೊಂಡರು, "ನಾಳೆ ನೀನು ಸೈನ್ಯದಲ್ಲೇ ಇರುವುದು ಒಳ್ಳೆಯದಲ್ಲ. ಯಾವ ಕಾಲದಲ್ಲೂ ಮೃತ್ಯುವಿಗೆ ತಲೆಯೊಡ್ಡುವ ಜವಾಬ್ದಾರಿಯ ಕೆಲಸ" ಎಂದು ಉಪದೇಶಮಾಡಿ, ತಮ್ಮ ಕೃಷಿಕ ಯೋಜನೆಗಳನ್ನು ಅವನ ಮುಂದೆ ವಿಸ್ತರಿಸಿದರು. ಅನಂತರ ಅವನ ಲಗ್ನದ ಪ್ರಸ್ತಾಪವೂ ಬಂದಿತು. "ಯಾವು

ದಕ್ಕೂ ಯುದ್ಧ ಮುಗಿಯಲಿ" ಎಂದ ಮಂಜುನಾಥ. ಆ ಬಳಿಕ ಶ್ರೀಮತಿಯ ಮಾತುಕತೆ ಬಂದಿತು. ಮಂಜುನಾಥ ತನ್ನ ಸಲಹೆಗಳನ್ನೆಲ್ಲ ಕೊಟ್ಟು ಪರಮಾವಧಿಯ ಧನ ಸಹಾಯಮಾಡುತ್ತೇನೆ–ಎಂದ. ಆಗ ರಂಗರಾಯರು ಚಿಗುರಿಕೊಂಡರು. "ಚಿನ್ನ ಹಾಕಿ, ವರದಕ್ಷಿಣೆಯನ್ನು ಕೊಡುವ ಹಾಗಿದ್ದರೆ ಯಾರೂ ಸಿಕ್ಕಿಯಾರು. ಅದಿಲ್ಲದೆ, ಸೋತದ್ದು ನಾನು. ಸಮೀಪದಲ್ಲಿ ಗಂಡೂ ಇಲ್ಲ. ದೂರದ ನಂಟುತನ ನೋಡುವುದು ಏನು ಕಷ್ಟ ? ಹೇಗಾದರೂ ಹುಡುಕಿ ಲಗ್ನಮಾಡಿಯೇ ಬಿಡುತ್ತೇನೆ" ಎಂದಂದರು.

ಮನೆಯಲ್ಲಿ ನಿತ್ಯ ಔತಣದ ಊಟಗಳಾದುವು. ಮಗನೊಡನೆ ಅವನ ಭವಿಷ್ಯವನ್ನು ಚರ್ಚಿಸಿದ್ದಾಯಿತು. ಅಜ್ಜಿಯನ್ನು ಕುರಿತು ದೂರಿದ್ದಾಯಿತು. ಒಮ್ಮೆಗೆ ಅಜ್ಜಿಯ ದರ್ಶನಕ್ಕೆ ಹೋದ ಮಗನು ಇನ್ನೊಮ್ಮೆ ಹೋಗದಂತೆ ತಡೆಹಿಡಿದು, ಅವನ ಜತೆಗೆ ಬೆಳ್ತಂಗಡಿಯ ತನಕ ಹೋಗಿ, ಅವನಿಗೆ ಮಣೆಗಾರ ದೊರೆಗಳ ದರ್ಶನಮಾಡಿಸಿ, ಬಸ್ಸಿನಲ್ಲಿ ಕುಳ್ಳಿರಿಸಿ, ಕಳುಹಿಸಿದ್ದೂ ಆಯಿತು. ಮಗ ಬಂದು ಹೋದ ಸಂತೋಷ ಅವರಿಗೆ ಅಷ್ಟಿಷ್ಟಲ್ಲ. ಮಗ ಹೋದ ಬೆನ್ನಿಗೇ ಧರ್ಮಸ್ಥಳಕ್ಕೆ ಹೋದರು ; ದೇವರ ದರ್ಶನಮಾಡಿದರು. ಅಲ್ಲಿ ತಾವು ತಮ್ಮ ಮಗನ ಸಲುವಾಗಿ ಹೊತ್ತ ಕನಸುಗಳನ್ನೆಲ್ಲ ತೋಡಿಕೊಂಡರು. ಅವನ್ನೆಲ್ಲ ನೆರವೇರಿಸುವ ಹೊಣೆಯನ್ನು ದೇವರ ಮೇಲೆ ಹೊರಿಸಿ, ತಮ್ಮ ಊರಿಗೆ ಮರಳಿಬಂದರು. ಅಲ್ಲಿಂದ ಒಂದೇ ಸಮನೆ ಹಲವಾರು ಸವಿಗನಸುಗಳನ್ನು ಹೊತ್ತು, ಸ್ವರ್ಗ ಸುಖವನ್ನು ಅನುಭವಿಸತೊಡಗಿದರು. ಈ ಕನಸುಗಳಲ್ಲಿ ಶಂಕರನನ್ನು ಕುರಿತಾದ ಅಸೂಯೆ ಮಾತ್ರ ಅವರ ನಿದ್ದೆಯನ್ನೆಷ್ಟೋ ಬಾರಿ ಹಾಳು ಮಾಡಿದ್ದುಂಟು.

## ಅಧ್ಯಾಯ ೧೧

ದಿನಗಳು ಸರಿಯುತ್ತ ಹೋದಂತೆ ಯುದ್ಧದ ಸವಿಯನ್ನು ಜಗತ್ತಿನ ಪ್ರತಿಯೊಂದು ರಾಷ್ಟ್ರವೂ ಅನುಭವಿಸಲೇ ಬೇಕಾಯಿತು. ಹಿಂದುಸ್ಥಾನಕ್ಕೆ ಅದರ ನಿಜವಾದ ಅನುಭವವಾಗತೊಡಗಿದ್ದು ಬರ್ಮಾದೇಶ ಜಪಾನಿಯರ ವಶವಾದ ಮೇಲೆ. ಪೌರ್ವಾತ್ಯ ದೇಶಗಳ ಮೇಲೆ ಎಂದು ಜಾಪಾನಿನ ಬಲೆ ಬಿದ್ದಿತೊ, ಅಂದು ಭಾರತದಲ್ಲಿ ಅನ್ನದ ಕೊರತೆ ಕಾಣಿಸತೊಡಗಿತು. ನಾಡಿನ ಜನಗಳಿಗೆ ಆಹಾರದ ಕೊರತೆಯೊಂದಿದೆ—ಎಂಬ ಕೂಗು ಚೆನ್ನಾಗಿ ಕೇಳಿಸತೊಡಗಿತು. ದವಸ ಧಾನ್ಯಗಳ ಬೆಲೆ ಏರಿತು ; ಇತರ ವಸ್ತುಗಳೂ ತುಟ್ಟಿಯಾದುವು. ಮಳೆಯ ಮುದ್ದಿನ ಮಗುವಾದ ದಕ್ಷಿಣ ಕನ್ನಡವೂ ಆಹಾರ ಸಾಲದೆ ಕಂಗೆಡಬೇಕಾಯಿತು.

ಬರಿಯ ಹತ್ತು ವರ್ಷಗಳ ಹಿಂದೆ ನಾಡಿನ ರೈತರು ಹಣದ ಮುಗ್ಗಟ್ಟಿನಿಂದ ಕಂಗಾಲಾಗಿದ್ದರು. ಬಿತ್ತಿದ್ದನ್ನು, ಬೆಳೆದದ್ದನ್ನು ಹೇಳಿದ ಬೆಲೆಗೆ ಮಾರಬೇಕಿತ್ತು. ರೈತ, ಬೇಸಾಯಗಾರ, ನೆಲವನ್ನಾಶ್ರಯಿಸಿದ ಕೂಲಿ, ಎಲ್ಲರೂ ಕಸಕ್ಕಿಂತ ಕಡಿಮೆಯಾಗಿದ್ದರು. ಹತ್ತು ವರ್ಷಗಳ ಅವಧಿಯಲ್ಲಿ ಪರಿಸ್ಥಿತಿಯೇ ತಲೆಕೆಳಗಾಯಿತು. ಅಂದು ಶಂಕರ ಬೇಸಾಯ ತೊಡಗಿದ್ದರೆ ಮೇಲೇಳುವುದಕ್ಕಿರಲಿಲ್ಲ. ಇಂದು ಅವನಿಗನುಕೂಲವಾದಂಥ ಕಾಲ ಒದಗಿ ಬಂದಿದೆ. ಬಿತ್ತಿದ ಬೆಳೆಗೆ ಬೆಲೆ ಇದೆ, ಗಿರಾಕಿಯೂ ಇದೆ. ಬೆಳೆದುದು ಮೆಣಸಿರಲಿ, ಗೆಣಸಿರಲಿ, ಬತ್ತವಿರಲಿ—ಕೊಳ್ಳುವವರಿದ್ದಾರೆ. ಕೊಂಡು ತಿನ್ನುವವರೂ ಇದ್ದಾರೆ ಹೀಗಾಗಿ ಶಂಕರ ಬೇಸಾಯದಲ್ಲಿ ಚೆಲ್ಲಿದ ಹಣ ಉಸುಬಿನ ಮೇಲೆ ಸುರಿದ ನೀರಾಗಲಿಲ್ಲ. ಅವನ ಕೃಷಿಯ ವೆಚ್ಚವೂ ದಿನ ದಿನ ಏರತೊಡಗಿದೆ. ಎಲ್ಲ ವಿಧದ ವಸ್ತುಗಳ ಅಭಾವವು ಸತ್ಯಕ್ಕೋ, ಸುಳ್ಳಿಗೋ, ಕಾಣಿಸುತ್ತಿದೆ ; ವೆಚ್ಚ ಹೆಚ್ಚಿದೆ. ಕಷ್ಟವೂ ಹೆಚ್ಚಿದೆ. ಆದರೆ ದುಡಿದಂತೆ ದುಡಿತಕ್ಕೆ ತಕ್ಕ ಪ್ರತಿಫಲವೂ ದೊರೆಯುತ್ತಿದೆ.

ಶಂಕರ ಅಲ್ಪತೃಪ್ತಿಯ ಸ್ವಭಾವದವನಲ್ಲ. ಹಣವೇ ಅವನ ದೈವವೂ ಆಗಿರಲಿಲ್ಲ. ಇಷ್ಟು ಬೆಳೆದದ್ದು ಸಾಕು, ಇಷ್ಟು ಬಂದದ್ದು ಸಾಕು—ಎಂಬ ಎಣಿಕೆಯಪ್ರಪಂಚ ಅವನದ್ದಲ್ಲ, ಮೂಡೋಡಿಯ ಪ್ರತಿ ಅಂಗುಲ ನೆಲವೂ

ಹಸುರು ಹಚೆಯಿಂದ ಕಂಗೊಳಿಸಬೇಕೆಂಬುದು ಅವನ ಆಸೆ. ಮಳೆಗಾಲದಲ್ಲಿ ಆಸೆ ಕೈಗೂಡುವುದಕ್ಕೇನೂ ತೊಡಕಿಲ್ಲ. ಬೇಸಗೆಯ ಮಾತು ಬೇರೆ. ಹೋಗಗದ್ದೆಗಳು ಬೆಳೆದಂತೆ, ಮೇಲಿನ ಅಡಕೆಯ ತೋಟ ವಿಸ್ತರಿಸಿದಂತೆ, ಕುಡಿನೀರಿನ ಇತಿಮಿತಿ ಅವನಿಗೆ ಗೊತ್ತಾಗತೊಡಗಿತು, ಅವನ ಬೆಟ್ಟದ ಅಬ್ಬಿ ಭಾಗೀರಥೀ ಪ್ರವಾಹವಲ್ಲ. ಅದನ್ನು ಮನಗಂಡರೂ, ಮೂಡೋಡಿಯ ಕಾಲಬುಡದಲ್ಲೇ ಹರಿಯುವ ಹಳ್ಳದ ಎಣಿಕೆಯನ್ನು ಹಾಕುತ್ತಾನೆ ಶಂಕರ. ಮನಸ್ಸು ತಡೆಯದ್ದಕ್ಕೆ ಆ ನೀರನ್ನೂ ತಡೆಯುವೆನೆಂದುಕೊಂಡ. ಬಂಗಾಡಿಯ ಹೊಳೆಗೆ ನೀರ್ಕಟ್ಟೆಯೊಂದು ಸಿದ್ಧವಾಯಿತು. ಬೀಳಲುಗಳ ಕಂಬಗಳನ್ನು ಮಾಡಿ, ಕಲ್ಲು ತುಂಬಿಸಿ, ಅಂಥ ನಾಲ್ಕೆಂಟು ಕಂಬಗಳ ಸಹಾಯದಿಂದ ಬೀಳಲು, ಬಿದಿರು, ಚಾಪೆಗಳಿಂದ ಒಡ್ಡೊಂದನ್ನು ನಿರ್ಮಿಸಿದ. ಒಡ್ಡಿಂದ ತಡೆದು ಹಿಡಿದ ನೀರನ್ನು ತನ್ನ ಭೂಮಿಗೆ ಸಾಗಿಸಿ, ಐದು ಎಕ್ರೆ ಬತ್ತದ ಗದ್ದೆಗಳಲ್ಲಿ ಸುಗ್ಗಿಯ ಪೈರು ಸೊಂಪಾಗಿ ಬೆಳೆದು, ಗಾಳಿಯಲ್ಲಿ ನಲಿದಾಡುವುದನ್ನು ಕಂಡು ತಾನೂ ಹಿಗ್ಗಿದ. ಆದರೆ ಅಕಾಲಿಕವಾಗಿ ಒಂದು ದಿನ, ಹೇಳಿ ಕೇಳುವುದರೊಳಗೆ, ಬಾನಲ್ಲಿ ಮುಗಿಲು ಕಲೆತು, ಮಳೆಯೊಂದು ಬಡಿದೇ ಬಡಿಯಿತು. ಒಂದು ಗಳಿಗೆಯ ಮಳೆಯು ಬೆಟ್ಟದ ಅಬ್ಬಿಗಳನ್ನೆಲ್ಲ ಸೊಕ್ಕಿಸಿ, ಶಂಕರನ ನೀರ್ಕಟ್ಟೆಯನ್ನು ಕಸದಂತೆ ಕೊಚ್ಚಿಕೊಂಡು ಹೋಯಿತು. ಆ ಒಂದು ವರ್ಷವೇ ಶಂಕರ ಎರಡೆರಡು ಬಾರಿ ಆ ತೆರನ ನಷ್ಟವನ್ನು ಅನುಭವಿಸಬೇಕಾಯಿತು.

ಹಳ್ಳದಲ್ಲೇನೋ ಬೇಕಷ್ಟು ನೀರು ಹರಿಯುತ್ತದೆ. ನಾಲ್ಕು ಸುತ್ತಲಿನ ಬೆಟ್ಟುಗಳ ಒರತೆ ಅದನ್ನು ಬೇಸಿಗೆಯಲ್ಲೂ ಪೋಷಿಸುತ್ತದೆ. ಆದರೆ ಅವೇ ಬೆಟ್ಟಗಳ ಸೆರಗು ನಾಲ್ಕು ಸಾವಿರ ಅಡಿಗಳಷ್ಟು ಉನ್ನತವಾಗಿಯೂ ನೈಋತ್ಯದಿಂದ ಬೀಸುವ ಕಡಲು ಗಾಳಿಗೆ ಪರಿಪೂರ್ಣ ತಡೆಯಾಗಿಯೂ ನಿಂತಿರುವುದರಿಂದ, ಉಪಕಾರ ಮಾಡಿದಷ್ಟೇ ಉಪದ್ರ ಮಾಡಬಲ್ಲುದು. ಮೂಡೋಡಿಯಲ್ಲಿ ಮಳೆಗಾಲ ಬಿಡುವುದೂ ಮೆಲ್ಲ, ಹಿಡಿಯುವುದೂ ಬೇಗ—ಎಂಬುದು ಶಂಕರನ ಅನುಭವ. ಜತೆಗೆ ಬೆಟ್ಟದ ಸೆರಗಾದುದರಿಂದ, ಹೊತ್ತು ಗೊತ್ತಿಲ್ಲದ ಮಳೆಯೊಂದು ಎಂದೂ ಬಂದೀತೆಂಬ ನಿರೀಕ್ಷೆ ಇರಬೇಕಾದದ್ದೇ. ಹಾಗಾಗಿ ಬಂಗಾಡಿಯ ಹಳ್ಳದ ನೀರನ್ನು ಧೈರ್ಯವಾಗಿ

ನಂಬಿಕೊಂಡಿರಲು ಮಕ್ಕಳಾಟಿಕೆಯ ಒಡ್ಡು ಸಾಲದು ಎಂಬುದನ್ನು ಮನಗಂಡ. ಇನ್ನೂ ಭದ್ರವಾದ ಒಡ್ಡನ್ನು ಹಾಕುವುದಾದರೆ ಹಣವೆಷ್ಟು ಬೇಕೋ. ಅಲ್ಲದೆ ಸಿಮೆಂಟು, ಕಬ್ಬಿಣ—ಎಂದು ಕಳ್ಳಸಂತೆಯಲ್ಲೇ ಸಿಗುವ ವಸ್ತುಗಳಿಗೆ ಶರಣುಹೋಗಬೇಕು. ಆದರೂ ಹೊಳೆಯ ನೀರು ವ್ಯರ್ಥವಾಗುವುದನ್ನು ಕಂಡು ಮನಸ್ಸು ನೋಯುತ್ತದೆ.

ಎಷ್ಟೆಂದರೂ ಸುಮ್ಮನೆ ಕುಳಿತಿರಲಾರದಂಥ ಮನಸ್ಸು ಶಂಕರನದು ತಾನು ಅಲ್ಲಿಗೆ ಬಂದಮೇಲೆ ನಾಲ್ಕನೆಯ ಬೇಸಿಗೆ ಕಾಲಿರಿಸಿದೆ. ಅಷ್ಟು ಸಮಯವ್ರೂ ಗೆಳೆಯ ಸೀತಾರಾಮ 'ಬರುತ್ತೇನೆ ಬರುತ್ತೇನೆ' ಎನ್ನುತ್ತಾನೆಯೇ ಹೊರತು, ಬಂದುದಿಲ್ಲ. ಅವನ ತಮ್ಮ ಕೃಷ್ಣ ಜತೆಗಿದ್ದಾನೆ. ಆ ಹುಡುಗರ ಸಲುವಾಗಿ ಏನಾದರೊಂದು ಮಾಡಬೇಡವೇ ಎಂದು ಯೋಚನೆಮಾಡುತ್ತಾನೆ. ಏನು ಯೋಚನೆಮಾಡುವಾಗಲೂ ಹಾಳು ಯುದ್ಧದ ನೆನಪು ಬಂದೇ ಬರುತ್ತದೆ. ಬೆಟ್ಟದ ಅಬ್ಬಿಯ ಶಕ್ತಿಯನ್ನೆಲ್ಲಾ ಬಳಸುತ್ತೇನೆ—ಎಂದು ಯೋಚಿಸಿ ನಕ್ಷೆ ಬರೆಯುತ್ತ ಕುಳಿತರೆ, ಆ ನಕ್ಷೆ ಕಾರ್ಯರೂಪದ ಯಂತ್ರವಾಗುವುದು, ಎಂದೋ ಏನೋ ಅನಿಸುತ್ತದೆ. ಯುದ್ಧಪೂರ್ವದ ದಿವಸಗಳಾಗಿದ್ದರೆ ಸಾಲ ಮಾಡಿಯಾದರೂ ಕಾರ್ಯ ಸಾಧಿಸಬಹುದು ಇಂದು ಸಾಲ ಮಾಡಿದರೂ, ಒಂದುವಸ್ತು ಸಿಕ್ಕಿದರೆ ಇನ್ನೊಂದು ಸಿಗುವುದಿಲ್ಲ. ಆದರೂ ಕನಸನ್ನು ಬಿಟ್ಟುಬಿಡಲಾರದ್ದಕ್ಕೆ, ಆರೆಂಟು ತಿಂಗಳಾದರೂ ಕೆಲಸ ಮಾಡಬಲ್ಲ, ವಿದ್ಯುತ್ ಉತ್ಪನ್ನಮಾಡಬಲ್ಲ ಒಂದು ಹಂಚಿಕೆಯನ್ನು ಹಾಕಿ, ಅದರ ಚಿತ್ರಗಳನ್ನು ಸೀತಾರಾಮನಿಗೆ ಕಳುಹಿಸಿದ್ದಾನೆ. ಅದಕ್ಕೆ ಬೇಕಾದುದನ್ನು ಹೇಗಾದರೂ ಒದಗಿಸಿಕೊಡು—ಎಂದು ಬೇಡುತ್ತಿದ್ದಾನೆ.

ಇಂದು ಅವನ ಹೊಣೆ ಹೆಚ್ಚಿದೆ, ಅವನನ್ನು ಆಶ್ರಯಿಸಿದವರ ಸಂಖ್ಯೆ ಬೆಳೆದಿದೆ. ಅವನ ಭೂಮಿಯಲ್ಲಿ ಆರು ಕುಟುಂಬಗಳೂ ನೆಲೆಯೂರಿ ಜೀವನ ನಡೆಸತೊಡಗಿದ್ದಾರೆ. ಮಳೆ ಅತಿಯಾದಾಗ ಅವರಿಗೆ ಉದ್ಯೋಗ ದೊರಕಿಸುವುದು ಕಷ್ಟವಾಗುತ್ತದೆ. ಮಳೆ ಕಳೆದ ಮೇಲೂ ನಿತ್ಯವೂ ಅವರಿಗೆ ಏನು ಉದ್ಯೋಗ ಒದಗಿಸಿಕೊಡಲಿ—ಎಂಬ ಯೋಚನೆ ಬರುತ್ತದೆ. ಅದರ ಜತೆಗೆ ಇಂದಿನ—ಈ ಅಪೂರ್ವಕಾಲ ಕಳೆದಮೇಲೆ, ಹೇಗೆ, ಎಂಬ ಯೋಚ

ನೆಯಾಗುತ್ತದೆ. ಈಗೇನೋ ಪ್ರತಿಯೊಂದಕ್ಕೂ ಹುಚ್ಚು ಬೆಲೆ ಬರುತ್ತಿದೆ. ನಾಳೆಯೂ ಬಂದೀತೆಂಬ ಧೈರ್ಯವೇನು? ಒಮ್ಮೆ ಬಂದರೂ ಉಳಿದ ವಸ್ತುಗಳ ಬೆಲೆ ಆದರಂತೆಯೇ ಏರಿದರೆ ಬೆಲೆ ಬಂದೂ ಪ್ರಯೋಜನ ವೇನು? ತನ್ನ ಜನಕ್ಕೆ ಏನಾದರೊಂದು ಉಪವೃತ್ತಿ ತಾನು ಕಲ್ಪಿಸುವುದು ಅನಿವಾರ್ಯ ಎನಿಸುತ್ತದೆ. ಎಷ್ಟೋ ಸಣ್ಣ ಪುಟ್ಟ ಕೈಗಾರಿಕೆಗಳ ಕನಸು ಹೊರುತ್ತಾನೆ; ಆಗದು, ಸಾಗದು ಎಂದು ತನ್ನಲ್ಲೇ ತಾನು ಚರ್ಚಿಸುತ್ತಾನೆ ಹೊರಗಿನ ಸ್ಪರ್ಧೆಯನ್ನು ತಡೆಯಲಾರದಂತಹ ಯಾವ ಕೈಗಾರಿಕೆಯ ಮೇಲೂ ಅವನಿಗೆ ವಿಶ್ವಾಸ ಉಂಟಾಗುವುದಿಲ್ಲ. ನಿತ್ಯ ಜೀವನದಲ್ಲಿ ವ್ಯಾಪಾರದ ಸ್ಪರ್ಧೆ ಅನಿವಾರ್ಯವಾದುದು. ಆ ಸ್ಪರ್ಧೆಗೆ ಎದೆ ಒಡ್ಡಬೇಕಾದುದು ಅನಿವಾರ್ಯ. ಹೀಗೆಂದು ಕೈಕೆಲಸ ನೆಚ್ಚಿಕೊಳ್ಳದೆ, ಚಿಕ್ಕ ಪುಟ್ಟ ಯಂತ್ರಗಳನ್ನು ಬಳಸಿ ಊರಲ್ಲಿಯೇ ದೊರೆಯುವ ಕಚ್ಚಾಮಾಲುಗಳಿಂದ ಏನಾದರೂ ಉತ್ಪನ್ನಮಾಡಬೇಕು–ಎಂಬ ಹಂಬಲ ತೊಡುತ್ತಾನೆ. ಇಂಥ ಕನಸನ್ನು ಕಟ್ಟಿಕೊಂಡರೆ ಮನಸ್ಸು ಮತ್ತಷ್ಟು ಗೊಂದಲಕ್ಕೆ ಗುರಿಯಾಗುತ್ತದೆ. ಎಂಥ ವಸ್ತುಗಳಿವೆ, ಎಂಥ ಯಂತ್ರಗಳಿವೆ, ಏನು ಮಾಡಬಹುದು, ಯಾರು ಕೊಳ್ಳುವವರು, ಎಲ್ಲಿಂದ ಹಣ ಒದಗಿಸಲಿ-ಎಂಬ ಒಂದೊಂದೇ ಪ್ರಶ್ನೆ ವಿಸ್ತರಿಸಿ, ವಿಸ್ತರಿಸಿ ದೊಡ್ಡ ಸಮಸ್ಯೆಯಾಗಿ ಬಿಡುತ್ತದೆ. ಮನಸ್ಸಿನ ಮುಂದೆ ಕಲ್ಪನೆ ಹಾಕಿಕೊಳ್ಳುತ್ತಾನೆ. ಚಿತ್ರ ಬರೆಯುತ್ತಾನೆ. ದಾರಿಗಾಣದಾಗ ಸೀತಾರಾಮನಿಗೆ ಬರೆದು ತಿಳಿಸುತ್ತಾನೆ. ಹಣದ ಚಿಂತೆ ಉಂಟಾದಾಗ ನಿಟ್ಟುಸಿರು ಕರೆಯುತ್ತಾನೆ. ಒಮ್ಮೊಮ್ಮೆ ಗೆಳೆಯನಿಗೆ "ನೀನು ಬಾ, ಈ ಎಲ್ಲ ಪ್ರಶ್ನೆಗಳನ್ನು ನಾವು ಕೂಡಿಯೇ ಚರ್ಚಿಸುವ" ಎಂದು ಬರೆದರೆ ಮತ್ತೊಮ್ಮೆ "ನನ್ನ ಆಗು ಹೋಗದ ಕನಸುಗಳಿಗಾಗಿ ನಿನ್ನನ್ನು ಇದ್ದಲ್ಲಿಂದ ಕದಲಿಸುವುದಕ್ಕೆ ನಾನು ಇಷ್ಟಪಡುತ್ತಲಿಲ್ಲ" ಎಂದು ಬರೆದು "ನೀನು ಬರಿದೆ ಬಂದರೆ ಸಾಕು, ನಿಲ್ಲುವುದಕ್ಕಲ್ಲ, ನೋಡುವುದಕ್ಕೆ" ಎಂದು ತಿಳಿಸುತ್ತಾನೆ.

ತನ್ನ ಇಂಥ ಕನಸುಗಳಿಗಾಗಿ ಹಂಚಿಕೆ ಹಾಕುತ್ತಾನೆ. ಚಿತ್ರ ಬರೆಯುತ್ತಾನೆ. ಪ್ರಯೋಗ ನಡೆಸುತ್ತಾನೆ, ಪತ್ರವ್ಯವಹಾರ ಮಾಡುತ್ತಾನೆ. ಎಡೆಎಡೆಯಲ್ಲಿ ಮನಸ್ಸು ದಿಲ್ಲಿಯ ಕಡೆಗೂ ತಿರುಗುತ್ತದೆ, ಅದಕ್ಕೆ ಅವನೇ ಕಾರಣನೆಂದಲ್ಲ, ಅವನ ಅಜ್ಜಿಯೂ ಕಾರಣಳು. ಆಕೆಯ ವಯಸ್ಸು ಹೆಚ್ಚಿ

ನದು. ಆರೋಗ್ಯ ಮೊದಲಿನಂತೆಯೇ ಇರಲಾರದು. ಪ್ರಾಯ ಸಂದುದರ ಆಘಾತ ಜೀವನದ ಮೇಲೆ ಕಾಣಿಸಿಕೊಳ್ಳಲೇ ಬೇಕಲ್ಲ. ಆ ಮುದುಕಿಯ ಮನಸ್ಸಿನಲ್ಲಿ ಶಂಕರನ ತಂದೆಯನ್ನು ಕಾಣಬೇಕು–ಎಂಬ ಇಲ್ಲದ ಕುತೂಹಲ ಉಂಟಾಗಿದೆ. ಆದಕ್ಕಾಗಿ ಶಂಕರ ತಂದೆಗೆ ಬರೆಯುತ್ತಿದ್ದಾನೆ. ಅವರ ಸ್ವಭಾವ ಬಲ್ಲವನಾದರೂ, ಇಲ್ಲಿಗೆ ಬಂದು ತನ್ನ ಕೆಲಸಗಳನ್ನೆಲ್ಲ ಕಂಡ ಮೇಲಾದರೂ ಅವರ ಅಭಿಪ್ರಾಯ ಬದಲಾದೀತು—ಎಂಬ ಆಸೆಯೂ ಉಂಟಾಗುವುದುಂಟು. ಈಗ ಅಜ್ಜಿಯ ಪಕ್ಷ ವಹಿಸಿ, ಮೇಲಿಂದ ಮೇಲೆ ಬರೆದ ಪತ್ರಗಳಿಗೆ ಉತ್ತರವಾಗಿ "ಉದ್ಯೋಗ ನಿವೃತ್ತಿಯಾದೊಡನೆ ಬರುತ್ತೇನೆ" ಎಂದು ತಂದೆ ಬರೆದಿದ್ದರು. ಈಗ ಅವರು ಉದ್ಯೋಗ ನಿವೃತ್ತರಾಗಿದ್ದಾರೆ. ನಿವೃತ್ತರಾಗಿ ಸಮಯವೂ ಆಯಿತು. ತಂದೆ ಬಂದಾರು–ಎಂದು ಹಾದಿ ಕಾಯುತ್ತಿದ್ದಾನೆ ಮಗ.

ದಿಲ್ಲಿಯಲ್ಲಿ ಸುಂದರರಾಯರು ಕೆಲಸದಿಂದ ನಿವೃತ್ತರಾಗಿ ಇಂದಿಗೆ ಒಂದು ವರ್ಷವೇ ಸಂದಿದೆ. ನಿರಾಶೆಯಿಂದಲೇ ಅವರು ನಿವೃತ್ತರಾದರು. ಉಪಕಾರ್ಯದರ್ಶಿಯಾಗಿಯೇ ನಿವೃತ್ತರಾಗಬೇಕಾಯಿತಲ್ಲ–ಎಂದು ಅವರಿಗೆ ತೀವ್ರ ಅಸಮಾಧಾನ. ಅದನ್ನು ಹೆಚ್ಚಿಸುವಂಥ ಇನ್ನೊಂದು ಕಾರಣವೂ ಇತ್ತು, ಹಿಂದೆ ಅವರ ಕೆಳಗಿದ್ದು, ಅನಂತರ ಅವರ ಸರಿಸಮಾನರಾಗಿ, ಕಟ್ಟಕೊನೆಗೆ ಅವರನ್ನು ಮೀರಿಸಿ, ಕಾರ್ಯದರ್ಶಿಯಾದವರು ಜಯರಾಮು. ಆ ಘಟನೆಯಂತೂ ಅವರ ಅಂತರಂಗವನ್ನೆಲ್ಲ ಕುಲುಕಿಬಿಟ್ಟಿದೆ. "ಸರಕಾರದ ನ್ಯಾಯ ದೃಷ್ಟಿಯಲ್ಲೇ ನನಗೆ ವಿಶ್ವಾಸವಿಲ್ಲ"–ಎನ್ನುತ್ತಿದ್ದಾರೆ ಅವರು. ಪಾಪ ಅವರಿಗೆ ಸ್ಮರಣೆಯೂ ಕಡಿಮೆ. ಸ್ವತಃ ಅವರೇನೆ ಮೇಲಧಿಕಾರಿಗಳ ಪಕ್ಷಪಾತ ಬುದ್ಧಿಯಿಂದ, ತಮಗಿಂತ ಹಿರಿಯರನ್ನು ದಾಟಿಹೋದದ್ದು ಅವರ ಈಗಿನ ನೆನವರಿಕೆಗೆ ಬರುವುದಿಲ್ಲ. ಎಷ್ಟಿದ್ದರೂ ಅಧಿಕಾರ, ಉದ್ಯೋಗಗಳ ರಾಜ್ಯದಲ್ಲೇ ಉಸಿರಾಡಿದ ಸುಂದರರಾಯರಿಗೆ ಉದ್ಯೋಗ ಬಿಡುವುದೆಂದರೆ ಪ್ರಾಣಬಿಟ್ಟಂತೆಯೇ–ಎಂದನಿಸುತ್ತಿತ್ತು. ನೌಕರಿಯ ಅವಧಿ ವಿಸ್ತರಿಸಲು ಕೇಳಿಕೊಂಡರು. ಆದು ಕೈಗೊಡಲಿಲ್ಲ. ಯುದ್ಧ ಪ್ರಸಕ್ತಿಯಿಂದುಂಟಾದ ಹಲವಾರು ಹೊಸ ಇಲಾಖೆಗಳಲ್ಲಿ ತಮ್ಮಂಥ ಅನುಭವಿಗಳಿಗೆ ಏನಾದರೊಂದು ಸ್ಥಾನ ಸಿಕ್ಕೀತು—ಎಂದೆಣಿಸಿದರು; ಅದೂ ಕೈಗೂಡಲಿಲ್ಲ.

ಹೀಗಾಗಿ ಅವರ ಮನಸ್ಸು ಕಹಿಯಾಗಿತ್ತು

ಗಂಡನಂತೆಯೇ ಹೆಂಡತಿ—ಪ್ರತಿಮೆ. ಸಮಾಜದಲ್ಲಿ ಗಂಡನಿಗೆ ದೊರೆಯುತ್ತಿದ್ದ ಗೌರವ ಮನ್ನಣೆಗಳು, ಹಕ್ಕಿನಿಂದ ಅವಳ ಪಾಲಿಗೆ ದೊರೆಯುತ್ತಿದ್ದುವು. ನೂರಾರು ಮಂದಿ, ಕಂಡಲ್ಲಿ ಕೈ ಎತ್ತಿ ನಮಸ್ಕರಿಸುತ್ತಿದ್ದರು. ಈ ಒಂದು ವರ್ಷದಲ್ಲಿ ಅವಳ ಅನುಭವಗಳೂ ಕೈಕಡಿದಿವೆ. ಗಂಡನಂತೆ ಅವಳೂ ವಿಸರ್ಜಿಸಲ್ಪಟ್ಟ ಪ್ರತಿಮೆಯಾಗಿದ್ದಾಳೆ. ಅಧಿಕಾರಿಗಳ ಸತಿಯರ ಕ್ಲಬ್ಬಿನ ಸದಸ್ಯತ್ವ ಕಳೆಯಿತು. ಅವಳಿಗಿದ್ದ ಕಾರ್ಯದರ್ಶಿತ್ವ ಮಿಸೆಸ್. ಜಯರಾಮಳಿಗೆ ಹೋಯಿತು. ಸಾಲದುದಕ್ಕೆ ಹಲವಾರು ಹೊಸ ಅಧಿಕಾರಗಳೂ ನಿರ್ಮಾಣವಾಗಿ, ದಿಲ್ಲಿಯ ವನಿತಾ ಸಮಾಜದಲ್ಲಿ ಆದೆಷ್ಟೋ ನವೀನ ಮಹಿಳೆಯರ ಓಡಾಟ ತುಂಬಿದೆ. ಮೊದಲಿನ ಪ್ರತಿಷ್ಠೆಯನ್ನು ತಿರುಗಿ ದೊರಕಿಸಿಕೊಳ್ಳಲಾರಳು. ಆದರೂ ದಿಲ್ಲಿಯನ್ನು ಬಿಟ್ಟು ಮಗನ ಮನೆಗೆ ಹೋಗುವವಳಲ್ಲ. ಇನ್ನೂ ಇನ್ನೂ ಅಲ್ಲೇ ಮೆರೆದಾಡುವ ಬಯಕೆ. ಯುದ್ಧದಿಂದ ನಿರ್ಮಾಣವಾದ ಅನೇಕ ಹೊಸ ಸಮಿತಿ, ಸಂಘಗಳಲ್ಲಿ, ಸಾರ್ವಜನಿಕ ಸಮುದಾಯಗಳಲ್ಲಿ ಮೆರೆದಾಡಬೇಕೆಂಬ ಚಪಲ ತಪ್ಪಿದ್ದಲ್ಲ. ಮಗನ ಕರೆಯನ್ನು ಕೇಳಿ. ಸುಂದರರಾಯರಿಗೊಮ್ಮೆ ದಿಲ್ಲಿಯ ಆವರಣವನ್ನು ನಾಲ್ಕು ದಿನಕ್ಕಾದರೂ ಮರೆತುಬಿಡುವ-ಎಂದು ಅನಿಸುವುದುಂಟು. ಅನಿಸಿದಾಗ " ಪ್ರತಿಮಾ, ಶಂಕರನ ಕಾಗದ ಬಂದಿದೆಯಲ್ಲ. ಅಲ್ಲಿಗೊಮ್ಮೆ ಹೋಗೋಣವೇ ? ವಿಟ್ಠಲನೂ ಬಂದಾಗಲೆಲ್ಲ ಹೇಳುತ್ತಿದ್ದಾನೆ. ಅವನನ್ನು ಹಾಗೆ ದೂರಮಾಡುವುದು ಸಮನಲ್ಲವೆಂದು. ಶಂಕರನ ಕಾಗದ ನೋಡಿದರೆ ಆತ ತುಂಬಾ ಕೆಲಸ ಮಾಡಿಸಿದ ಹಾಗೆ ಕಾಣುತ್ತದೆ. ಹೋಗದೆ ಇದ್ದರೆ ಅವನಿಗೂ ಬೇಸರ. ವಿಟ್ಠಲನಿಗೂ ಅಸಮಾಧಾನ " ಎಂದು ವಾದಿಸುವುದುಂಟು. ಪ್ರತಿಮೆ ಕದಲಲಾರಳು. " ಹೋಗಿ, ನಿಮಗೆ ಬೇರೆ ಉದ್ಯೋಗವಿಲ್ಲ. ನಾನು ಹೋದರೆ ಈ ಎಲ್ಲ ಕಮಿಟಿಗಳ ಕೆಲಸ ಒಂದಕ್ಕೊಂದಾದೀತು. ಬಂದ ಮೇಲೆ ಇಲ್ಲಿದ್ದವರಿಗೂ ನನ್ನ ಗುರುತು ಸಿಗಲಾರದು " ಎನ್ನುತ್ತಾಳೆ. ಕುಲದ ಹಿರಿಯಳಾದ ಮುದುಕಿಯೊಬ್ಬಳಿದ್ದಾಳೆ ಎಂಬ ಅಭಿಮಾನ ಅವಳಿಗೇನಿಲ್ಲ. ವಿಟ್ಠಲನ ಮೇಲೆ ಅಭಿಮಾನವಿದ್ದರೂ. ತನ್ನ ಮೆರವಣಿಗೆಯ ಚಾಪಲ್ಯಕ್ಕೆ ತಡೆಮಾಡಿಕೊಳ್ಳುವಂಥ ಅಭಿಮಾನವೇನಲ್ಲ.

ಇಂತಹ ಸಮಯದಲ್ಲಿ ಒಂದು ದಿನ ವಿಟ್ಠಲನಿಂದ ತಂದೆತಾಯಿಯರಿಗೆ ಒಂದು ದೀರ್ಘ ಪತ್ರ ಬಂತು. "ಅಪ್ಪಾ, ಶಂಕರನ ಕಾಗದಗಳಿಗೆ ನೀವು ಸಮನಾಗಿ ಉತ್ತರವನ್ನು ಕೊಡುತ್ತಲಿಲ್ಲವಂತೆ. ನಮ್ಮ ಅಜ್ಜಿ ಅವನೊಡನೆ ಬಂದು ವಾಸವಾಗಿದ್ದಾಳಂತೆ. ನನಗೂ ಅವಳನ್ನು ನೋಡುವ ಆಸೆ ಉಂಟಾಗಿದೆ. ಎಷ್ಟೆಂದರೂ ಕುಲದ ಹಿರಿಯಳೆಂದ ಮೇಲೆ ಒಮ್ಮೆಯಾದರೂ ಹೋಗಿ ನೋಡಬೇಡವೇ? ನಿಮಗೀಗ ಬಿಡುವಿದೆ; ನಿವೃತ್ತರಾಗಿದ್ದೀರಿ. ಏತಕ್ಕೆ ಅಲ್ಲಿಯ ತನಕ ಹೋಗಿ ನಾಲ್ಕುದಿನ ಕಾಲ ಶಂಕರನೊಡನೆ ಕಳೆಯಬಾರದು? ಅವನೂ ನಿಮ್ಮ ಮಗನಲ್ಲವೇ? ಅವನಿಂದ ಅಂಥ ಅಪರಾಧವೇನಾಗಿದೆ? ನಿವೃತ್ತರಾದ ಮೇಲೆ ನಿಮಗೆ ಬೇರೆ ಏನು ಉದ್ಯೋಗ ದೊರಕಿಲ್ಲವೆಂದೂ, ನೀವು ಅದರಿಂದಾಗಿ ಬೇಸರದಲ್ಲಿರುವಿರೆಂದೂ ಅಮ್ಮ ಬರೆಯುತ್ತಲಿದ್ದಾರೆ. ಇನ್ನೂ ಇನ್ನೂ ನೌಕರಿಯ ಮೇಲೆ ನಿಮಗೆ ಏತರ ಮೋಹವೋ ತಿಳಿಯದು. ಉದ್ಯೋಗವಿಲ್ಲದೆ ಇರುವುದಕ್ಕೆ ಕಷ್ಟವಾದರೂ, ಅನ್ಯರ ಕೆಳಗೆ ದುಡಿಯುವ ಗುಲಾಮಗಿರಿಯಲ್ಲಿ ಏನು ಸುಖ? ನನಗೇ ಬೇಸರವಾಗುತ್ತಿದೆ. ಬೇರೊಬ್ಬರ ಗೆಲುವು ಸಾಧಿಸಲಿಕ್ಕೆ ನಮ್ಮ ಜೀವನವನ್ನು ನಿತ್ಯವೂ ಸಾವಿಗೆ ಒಡ್ಡುವುದರಲ್ಲಿ ಅರ್ಥ ಕಾಣುತ್ತಲಿಲ್ಲ" ಎಂದು ಬರೆದುದಲ್ಲದೆ, ಕೊನೆಯ ಪಂಕ್ತಿಗಳಲ್ಲಿ "ನನಗೆ ವಿರಾಮ ದೊರಕಿ, ಎಂಟು ದಿನಗಳ ರಜೆ ಸಿಕ್ಕಿದುದಾದರೆ ನಿಮ್ಮನ್ನು ಕರೆದುಕೊಂಡು ಅಲ್ಲಿಯ ತನಕ ಹೋಗಬೇಕು—ಎಂಬ ಆಸೆ ಇದೆ" ಎಂದೂ ಸೇರಿಸಿದ. ವಿಟ್ಠಲ ಮನೆಗೆ ಬರುವುದರಲ್ಲಿ ತಾಯಿತಂದೆಯರಿಬ್ಬರಿಗೂ ಸಂತೋಷವೇ. ವನಮಾಲೆ ಅವರ ಜತೆಗೇ ಇದ್ದಾಳೆ; ಅತ್ತೆಯಂತೆ ದಿಲ್ಲಿಯ ಸಮಾಜದಲ್ಲಿ ಮೆರೆದಾಡುತ್ತಿದ್ದಾಳೆ. ಪ್ರತಿಮೆಗೆ ಮಾತ್ರ ತನ್ನ ಮಗ ತನ್ನನ್ನು ಕಾಣಲು ಬರಬೇಕೆಂಬ ಆಸೆ ಇದ್ದರೂ, ತಾನು ಶಂಕರನನ್ನು ಕಾಣುವುದಕ್ಕಾಗಿ ದೂರದ ಪಯಣ ಮಾಡುವುದಕ್ಕೆ ಇಷ್ಟವಿಲ್ಲದವಳಾಗಿದ್ದಾಳೆ.

ಇದಾದ ಒಂದು ತಿಂಗಳೊಳಗಾಗಿ ವಿಟ್ಠಲ ರಜೆ ತೆಗೆದುಕೊಂಡು ದಿಲ್ಲಿಗೆ ಬಂದ. ಅವನ ಮನಸ್ಸು ಯುದ್ಧರಂಗದ ಅನುಭವಗಳಿಂದ ತುಂಬಾ ಬೇಸರಗೊಂಡಿತ್ತು. ಬಂದವನೇ ತಂದೆಯೊಡನೆ "ಅಪ್ಪಾ, ಶಂಕರನಿದ್ದಲ್ಲಿಗೆ ಹೋಗಿ ಬರೋಣ. ನನ್ನ ಮನಸ್ಸಂತೂ ತುಂಬಾ ಕೆಟ್ಟಿದೆ. ಈ

ಯುದ್ಧಪ್ರಸಂಗ ವಿಶೇಷವಾದ ನೋವನ್ನುಂಟುಮಾಡಿದೆ. ಯುದ್ಧದಲ್ಲಿ ಕಾದಾಡುತ್ತಿರುವ ನಾವು ನಮ್ಮವರೇ ಆದ ಸುಭಾಷರ ಸೇನೆಯ ಮೇಲೆ ಬಾಂಬೆಸೆಯಬೇಕೆಂದರೆ, ಮನಸ್ಸಿಗೆ ತುಂಬ ಜಿಗುಪ್ಸೆಯಾಗಿದೆ. ಮನಸ್ಸು ನೆಮ್ಮದಿಯಾಗಲು ಬದಲಾವಣೆ ಬೇಕೆನ್ನಿಸುತ್ತಿದೆ. ಈ ಆವರಣವನ್ನೆಲ್ಲ ಮರೆಯಬೇಕು. ಬನ್ನಿ, ಹೋಗುವ" ಎಂದು ತಂದೆತಾಯರನ್ನು ಬಲವಂತ ಮಾಡಿದ. ಕೊನೆಗೆ ಹೊರಟವರೆಂದರೆ—ವನಮಾಲೆ ಮತ್ತು ಸುಂದರರಾಯರು ಮಾತ್ರ. ಪ್ರತಿಮೆ ದಿಲ್ಲಿಯಲ್ಲಿ ಪ್ರತಿಮೆಯಾಗಿಯೇ ಉಳಿದಳು. ಮೂವರು ಕೂಡಿ ಬೆಂಗಳೂರಿಗೆ ಹೋಗಿ, ಅಲ್ಲಿಂದ ಶಂಕರನಿರುವಲ್ಲಿಗೆ ಹೊರಟರು.

* * * *

ಶಂಕರ ತನ್ನ ತಂದೆಗೆ ಪತ್ರ ಬರೆದು, ನಿರಾಶೆಗೊಂಡುದುದರಿಂದಲೇ ವಿಟ್ಠಲನಿಗೆ ಕಾಗದ ಬರೆಯಬೇಕಾಯಿತು. ದಿನ ದಿನ, ವಿಟ್ಠಲನ ಕಾಗದವನ್ನು ನಿರೀಕ್ಷಿಸುತ್ತಲೇ ಇದ್ದಾನೆ. ಅವನ ಕಾಗದ ಯುದ್ಧರಂಗದಲ್ಲಿ ಅಲೆಯುವ ವಿಟ್ಠಲನನ್ನು ಸೇರಬೇಕಾದದ್ದು, ವಿಟ್ಠಲನ ಕಾಗದ ತಂದೆಗೆ ಹೋಗಬೇಕಾದದ್ದು, ಅದಕ್ಕೆ ಉತ್ತರ ಬರಬೇಕಾದದ್ದು, ಎಲ್ಲವೂ ಮೆಲುನಡೆಯ ವ್ಯಾಪಾರಗಳು. ಆಶಾದಾಯಕವಾದ ಉತ್ತರ ಬಂದೀತೆಂದು ಶಂಕರ ಎಣಿಸಿರಲಿಲ್ಲ. ತನ್ನ ತಂದೆಗೆ ತನ್ನ ಆಜ್ಜಿಯನ್ನು ಕಾಣುವ ಅದೃಷ್ಟವಾಗಲೀ ಆಸೆಯಾಗಲೀ ಇರಬಹುದೆಂದು ಅವನೆಣಿಸಿರಲಿಲ್ಲ. ಕಾಗದ ಬರೆದು ಹಾಕಿದ ಆ ಸಮಾಚಾರವನ್ನು ಅಜ್ಜಿಗೆ ತಿಳಿಸಿದ. ತನ್ನ ಕರ್ತವ್ಯ ತಾನು ಮಾಡಿದ್ದೇನೆ–ಎಂಬ ಸಮಾಧಾನವಷ್ಟೇ ಅವನಿಗೆ. ಆಕೆಯೂ ತನ್ನ ಅಳಿಯನನ್ನು ನೋಡಲೇಬೇಕೆಂಬ ಹಟ ಹಿಡಿಯಲಿಲ್ಲ. ಆಕೆಯ ಮನಸ್ಸಿನಲ್ಲಿ ವಯಸ್ಸಾದ ತಾನು ಬಹುದಿನ ಬದುಕಿ ಉಳಿಯಲಾರೆ ಎಂಬ ತಿಳಿವು ಉಂಟಾಗಿತ್ತು. ಮುತ್ತಯ್ಯಗೌಡನ ಮುಂದೆ ಅದನ್ನು ಪ್ರಕಟಿಸಿದ್ದೂ ಉಂಟು. "ಮುತ್ತಾ, ನನಗೆ ಬಹುದಿನ ಬದುಕಬೇಕೆಂಬ ಆಸೆಯೇನೂ ಇಲ್ಲ. ಈ ಲೋಕದಲ್ಲಿ ಇದ್ದು ಪಡೆಯಬಹುದಾದ ಸಂತೋಷ ಪಡೆದಿದ್ದೇನೆ. ಶಂಕರ ಮದುವೆ ಮಾಡಿಕೊಳ್ಳಬಹುದೆಂಬ ಆಸೆ ಇದೆ. ಮಾಡಿಕೊಂಡಾನು, ಮನೆ ಕಟ್ಟಿಸಿಯಾನು. ಇಷ್ಟೆಲ್ಲ ಮಾಡಿದ ಅವನು ಅದನ್ನು

ತಿಳಿಯದವನೆ ? ನಾನು ಅದನ್ನು ಹೇಳಿ ಅವನ ಮನಸ್ಸಿಗೇಕೆ ಕರಕರೆ ಉಂಟುಮಾಡಬೇಕು ? " ಎಂದಿದ್ದಳು. ಗೌಡ ಹೆಚ್ಚಿಗೇನೂ ಹೇಳಲಿಲ್ಲ. ಆಕೆ ದಿನದಿನ ಕ್ಷೀಣಿಸುತ್ತಿದ್ದುದು ಅವನಿಗೂ ಕಾಣಿಸುತ್ತಿತ್ತು. ಅವನ-ಮನೋಭಾವವೂ ಅದೇ ತೆರನಾಗಿತ್ತು. " ಅಮ್ಮಾ, ನಿಮಗಿಂತ ನನಗೆ ಒಂದೆರಡು ವರ್ಷವಾದರೂ ಪ್ರಾಯ ಹೆಚ್ಚಾಗಿರಬಹುದು, ನನಗಾದರೂ ಇನ್ನೂ ಇನ್ನೂ ಬದುಕಬೇಕೆಂಬ ಆಸೆ ಇದೆ ಅನ್ನುತ್ತೀರಾ ? ಇನ್ನು ನನಗೆ ಏನಾಗಬೇಕಾಗಿದೆ ? ನಿಮ್ಮಂತೆಯೇ ನನ್ನ ಆಸೆಗಳೆಲ್ಲ ತೀರಿದ್ದಾವೆ. ನನ್ನ ಮರಿಮಗು ಕುಕ್ಕ, ಧಣಿಗಳ ತಾವಿಗೇ ಬಂದು ಸೇರಿದ್ದಾನೆ. ಅವನನ್ನು ನೋಡುವವರೂ ಇದ್ದಾರೆ. ಇನ್ನೇನು ದೇವರು ಕರೆಯಿಸಿದಾಗ ಹೋಗುವುದು. ಬದುಕುವ ಅತಿಯಾಸೆ ಮಾಡಬಾರದು " ಎಂದಿದ್ದ.

ಈ ಮಾತುಕತೆಗಳಾದಮೇಲೆ ಕೆಲವೇ ದಿನಗಳಲ್ಲಿ ಒಂದು ದಿನ ಶಂಕರ ಊಟಕ್ಕೆ ಕುಳಿತಿದ್ದ. ಅವನ ಮಗ್ಗುಲಿಗೆ ಅಜ್ಜಿಯ ಸಲುವಾಗಿ ಹಾಕಬೇಕಾಗಿದ್ದ ಎಲೆಯನ್ನು ಕಾಣದೆ ಶಂಕರ ವಿಸ್ಮಿತನಾದ. ಬಡಿಸುತ್ತಿದ್ದ ಕೃಷ್ಣನನ್ನು ವಿಚಾರಿಸಿದ " ಏನು ಕೃಷ್ಣ, ಅಜ್ಜಿ ಊಟಮಾಡುವುದಿಲ್ಲವೇ ? ಇವತ್ತೇನು ದಿನವಂತೆ ? " ಎಂದು ಕೇಳಿದ.

" ಇಲ್ಲವಂತೆ, ಬೇಡ ಎಂದರು. ಯಾಕೆಂದು ತಿಳಿಯಲಿಲ್ಲ. "

ಶಂಕರ ಆಶ್ಚರ್ಯಪಟ್ಟು ಅಲ್ಲಿಂದೆದ್ದು, ಮಗ್ಗುಲ ಕೋಣೆಯಲ್ಲಿ ಕುಳಿತ ಅಜ್ಜಿಯ ಬಳಿಗೆ ಹೋಗಿ" ಊಟ ಮಾಡುವುದಿಲ್ಲವೇ? ಯಾತಕ್ಕೆ?" ಎಂದು ಕೇಳಿದ.

" ನೀವು ಊಟಮಾಡಿ. ಇವತ್ತು ಹಿರಿಯರ ದಿವಸ; ನೆನಪಾಯಿತು. ನೆನಪಾದಮೇಲೆ ಊಟಮಾಡಬೇಕು—ಎಂದನಿಸುವುದಿಲ್ಲ. ಅಲ್ಲದೆ ಹಸಿವೂ ಕಾಣಿಸುವುದಿಲ್ಲ " ಎಂದಳು.

ಶಂಕರನಿಗೆ ಸಮಾಧಾನವಾಗದಿದ್ದರೂ, ಆತ ಊಟಕ್ಕೆ ಕುಳಿತ. ಕೃಷ್ಣನೂ, ಅವನೂ ನಿತ್ಯದಂತೆ, ಬಡಿಸಿಕೊಂಡು ಊಟಮಾಡಿದರು. ಊಟವಾದ ಮೇಲೆ, ಕೊಟಡಿಯಲ್ಲಿ ಮಂಚದ ಮೇಲೆ ಕುಳಿತು, ದಿಂಬಿಗೆ ಒರಗಿಕೊಂಡು ಮೌನವಾಗಿ ಜಪಸರ ತಿರುಗಿಸುತ್ತಿದ್ದ ಅಜ್ಜಿಯ ಬಳಿಗೆ ಬಂದರು. ಆಕೆ ಕಣ್ಣು ಮುಚ್ಚಿಕೊಂಡು ಧ್ಯಾನವಶಳಾಗಿದ್ದಳು. ಶಂಕರನ

ಮನಸ್ಸಿಗೆ ಏನು ಅನಿಸಿತೋ ಆ ಗಳಿಗೆಗೆ, " ಅಜ್ಜೀ " ಎಂದು ಕರೆದನು. ಆಕೆ ಕಣ್ಣು ತೆರೆದಳು ; " ಕರೆದೆಯಾ ಮಗು " ಎಂದೂ ಕೇಳಿದಳು. "ಹೌದು" ಎಂದು ಉತ್ತರವಿತ್ತ. " ಏನೋ ಕೇಳಬೇಕೆಂಬ ಮನಸ್ಸಾಗಿದೆ. ಕೇಳು ವುದು ಸರಿಯೋ ಅಲ್ಲವೋ ತಿಳಿಯುವುದಿಲ್ಲ—ಕೇಳಲೇ ?" ಎಂದ.

" ಕೇಳು, ನನ್ನಲ್ಲಿ ಕೇಳುವುದಕ್ಕೇನು ಅನುಮಾನ ? "

" ಮನಸ್ಸಿಗೇನೋ ತೋರುತ್ತಿದೆ ಕೇಳುವಾ, ಕೇಳುವಾ—ಎಂದು ಮುಂದೆ ಹಾಕುತ್ತಲಿದ್ದೆ. ಇಂದು ಕೇಳಬೇಕೆನಿಸುತ್ತಿದೆ. ಕೇಳುತ್ತೇನೆ. ನೋಡಿ—ರಂಗರಾಯರಿಗೆ ನನ್ನನ್ನು ಕಂಡರಾಗದು. "

" ಯಾಕೆ ಅವನ ಸುದ್ದಿ ತೆಗೆಯುತ್ತಿ ? ಅವನ ದಾರಿಯನ್ನು ನಾವು ಬದಲಿಸಲು ಸಾಧ್ಯವೇ ? ನಿನಗೆ ಅವನ ಹೆದರಿಕೆಯಾದರೂ ಏನು ? "

" ಹೆದರಿಕೆ ಎಲ್ಲಿಂದ ಬಂತು ! "

" ಮತ್ತೇಕಿಲ್ಲ. ಶ್ರೀಮತಿಯನ್ನು ಈ ಮನೆಗೆ ಕರೆದು ತರಬೇಕೆಂಬ ಆಸೆಯಾಗಿದೆ."

" ಶ್ರೀಮತಿಯನ್ನೆ ?" ಎಂದು ತಟಸ್ಥಳಾಗಿ, ತುಸು ಹೊತ್ತು ಮಾತ ನಾಡದೆ ಕುಳಿತಳು. ಅನಂತರ ಮಿದುವಾಗಿಯೇ ಅಂದಳು " ಮಗು, ನನಗೂ ಆ ಮಾತನ್ನು ಹೇಳಬೇಕೆಂದಿತ್ತು. ಆದರೆ ರಂಗನ ಹೆದರಿಕೆಯಿಂದ ಹೇಳುವ ಧೈರ್ಯವಾಗಲಿಲ್ಲ."

" ನಿನಗಿಷ್ಟವೇ ?"

" ತುಂಬಾ ಇಷ್ಟ ; ನಿನ್ನ ಬಾಯಿಯಿಂದಲೇ ಅದು ಬರಬೇಕು ಎಂಬ ಆಸೆ ನನಗೂ ಇತ್ತು. ಅದರಲ್ಲಿ ತಪ್ಪೇನಿಲ್ಲ. ಒಳ್ಳೆಯದೇ ಯೋಚನೆ. ಅವನೇ ಏನು ಮಾಡುತ್ತಾನೋ ! ನಿನ್ನ ಆಸೆ ಕೈಗೂಡಲಿ, ಆಕೆ ಸ್ವಲ್ಪ ಕಿವುಡಿ ನಿಜ. ಆದರೂ ಈ ಮನೆಗೆ ತಕ್ಕವಳು."

" ಹಾಗಾದರೆ ಅವರಾಗಿ ಕೇಳುವ ತನಕ ಸುಮ್ಮನಿರಬೇಕು ಅನ್ನು ತ್ತೀರಾ ?"

" ಆ ಗಳಿಗೆಯೂ ಬಂದೀತು........ಮಗು. ಇಂದು ಬೇಕೆಂದೇ ನಾನು ಊಟಮಾಡಲಿಲ್ಲ. ಹಿರಿಯರ ದಿನ ಎಂಬುದು ನಿನ್ನೆಯೆ ತಿಳಿದಿತ್ತು. ಹಿಂದೆ ಒಂದೆರಡು ಬಾರಿ ನಾನದನ್ನು ಮರೆತು, ಉಂಡುದುಂಟು. ಇವತ್ತು

ಬೆಳಿಗ್ಗಿನಿಂದಲೂ ದಿನದ ನೆನಪಾಗುತ್ತಾ ಇದೆ. ಮನಸ್ಸಿಗೇನೋ ತೋರುತ್ತಲಿದೆ. ನನ್ನ ಅಪ್ಪ, ಅಮ್ಮ, ಇರುವಲ್ಲಿಗೆ ಹೋಗಬೇಕೆಂಬ ಆಸೆಯಾಗುತ್ತಿದೆ. ವಯಸ್ಸಾಗಲಿಲ್ಲವೇ ? ಈ ಮುದಿ ವಯಸ್ಸಿನಲ್ಲಾದರೂ ನನ್ನ ತಾಯಿ ತಂದೆಯರು ಹೆತ್ತು ಸಲಹಿದ ನೆಲದಲ್ಲೇ ಬಂದು ಕುಳಿತು, ನಿನ್ನ ಕೈಯಲ್ಲಿ ಪರಮಸುಖ ಉಣ್ಣುತ್ತಿದ್ದೇನೆ. ನನಗೆ ಇಷ್ಟು ಸಾಲದೇ ?"

ಸ್ವಲ್ಪ ಹೊತ್ತು ಮಾತನ್ನು ನಿಲ್ಲಿಸಿದಳು. ಎಲ್ಲಿಗೋ ಹರಿಯುತ್ತಿದ್ದ ಮನಸ್ಸನ್ನು ತಡೆಯಲೆತ್ನಿಸುವಂತೆ ಪ್ರಯತ್ನ ಪೂರ್ವಕವಾಗಿ "ಮಗು, ಇನ್ನು ಮಾತನಾಡಿಸಬೇಡ. ಯಾರೋ ಕರೆಯುವ ಹಾಗೆ ಕಾಣುತ್ತದೆ. ಆಯಾಸವಾಗುತ್ತಿದೆ. ಒಂದು ಗಳಿಗೆ ದೇವರ ಸ್ಮರಣೆ ಮಾಡುತ್ತ ಮಲಗಿಕೊಳ್ಳುತ್ತೇನೆ. ರಂಗನ ಮನೆಗೆ ಹೋಗಿ ಬಾ. ಅಲ್ಲಿ ತರಿಸಿಟ್ಟ ಗಂಗಾಜಲವಿದೆ. ಒಂದಿಷ್ಟು ತಂದು ಬಾಯಿಗೆ ಹಾಕು" ಎಂದು ಮಾತು ಮುಗಿಸಿದಳು. ದಿಂಬಿಗೆ ಒರಗಿಕೊಂಡು ಜಪಸರ ತಿರುಗಿಸುತ್ತ ಕಣ್ಣವೆ ಮುಚ್ಚಿದಳು. ಕೃಷ್ಣ ಆ ಮಾತುಗಳನ್ನು ಕೇಳಿ, ಥಟ್ಟನೆ ಎದ್ದು ಶಂಕರನನ್ನು ಮಗ್ಗುಲಿಗೆ ಕರೆದು "ನಾನು ಶ್ಯಾನುಭಾಗರ ಮನೆಗೆ ಹೋಗಿಬರುತ್ತೇನೆ. ನೀವು ಅಜ್ಜಿಯ ಮಗ್ಗುಲಿಂದ ಏಳಬಾರದು. ನನಗೇಕೋ ಅಧೈರ್ಯವಾಗುತ್ತಿದೆ" ಎಂದ. ಶಂಕರನಿಗೂ ಮುಂದಿನ ವಿದ್ಯಮಾನದ ಪೂರ್ವ ಸೂಚನೆಯಾಯಿತು. ಕೃಷ್ಣನನ್ನು ಹೋಗಗೊಡದೆ, ಅಜ್ಜಿ ತನಗೆ ಹೇಳಿದ ಮಾತನ್ನು ತಾನೇ ನಡೆಯಿಸಬೇಕೆಂಬ ಮನವಾಗಿ, ರಂಗರಾಯರಲ್ಲಿಗೆ ಧಾವಿಸಿದ.

ಶ್ಯಾನುಭಾಗರು ಜಗುಲಿಯ ಮೇಲೆ ಎಲೆ ಅಡಿಕೆಯನ್ನು ಮೆಲ್ಲುತ್ತ ಕುಳಿತಿದ್ದರು. ಶಂಕರ ಅವರ ಬಳಿಗೆ ಧಾವಿಸಿಹೋಗಿ. ಮಾತು ತಡವರಿಸುತ್ತ 'ಅಜ್ಜಿಗೆ ಗಂಗಾಜಲ ಬೇಕಿತ್ತು. ಊಟ ಮಾಡಿರಲಿಲ್ಲ ಮಧ್ಯಾಹ್ನ. ಏನೋ ಒಂದು ನಮೂನೆ ಮಾತನಾಡುತ್ತಿದ್ದಾರೆ" ಎಂದು ಗಾಬರಿಯಿಂದ ನುಡಿದ. ರಂಗಣ್ಣ ಕಕ್ಕಾಬಿಕ್ಕಿಯಾದರು. ಶಂಕರನ ಮೋರೆಯ ಮೇಲಿನಿಂದ, ತಡವರಿಸಿದ ಮಾತುಗಳಿಂದ, ಅಜ್ಜಿಯ ಕಾಲ ಸಮೀಪಿಸಿದೆ ಎಂದು ತೋರಿ, ಕುಂಟುತ್ತ ಒಳಗೆ ಹೋಗಿ ಗಂಗಾಜಲ ಅರಸಿತಂದರು. ಶಾಂತುವಿಗೆ 'ಮಕ್ಕಳೊಡನೆ ಹೊರಡು' ಎಂದರು. ತಾವೂ ಅವಸರಿಸಿ ಹೊರಟರು. ಗಂಗಾಜಲದ ಮಿಳ್ಳೆ ಅವರ ಕೈಯಲ್ಲಿಯೇ ಇತ್ತು. ನಾಲ್ಕು ದಿನಗಳ

ಹಿಂದೆ ಕಾಲಿಗೆ ಮುಳ್ಳು ಚುಚ್ಚಿಸಿಕೊಂಡು ಕುಂಟುತ್ತಿದ್ದ ಅವರು, ಧಾವಿಸ ಲಾರದೆ " ಶಂಕರ, ಬೇಡ ಇದನ್ನು ನೀನೇ ತೆಗೆದುಕೊಂಡುಹೋಗು. ನಾನು ಕಾಲೆಳೆದುಕೊಂಡು ನಿನ್ನ ಹಿಂದೆಯೇ ಬಂದೆ " ಎಂದರು. ಶಂಕರ ಅವಸರ ದಿಂದ ಮನೆಯನ್ನು ಸೇರಿದ. ಅಜ್ಜಿಯ ಬಳಿಗೆ ಓಡಿ, ಕಿವಿಯಲ್ಲಿ " ತಂದಿ ದ್ದೇನೆ " ಎಂದ. ಥಟ್ಟನೆ ಆಕೆ ಕಣ್ಣನ್ನು ತೆರೆದಳು. ತುಟಿಯನ್ನು ನಡುಗಿಸಿ ದಳು. ಶಂಕರ ಪಾತ್ರೆಯ ಮುಚ್ಚಳ ತೆಗೆದು ತೀರ್ಥವನ್ನು ತುಟಿಗಳ ಎಡೆ ಯಲ್ಲಿ ಎರೆಯುತ್ತಲೇ ಅವನನ್ನು ನೋಡುತ್ತ ಕಣ್ಣು ಬಾಡಿಸಿದಳು. ಮುದುಕಿಯ ಕೈ ಮೆಲ್ಲಗೆ ಅವನ ಮೈಯನ್ನು ಸವರಿ, ಹಸ್ತದ ಕಡೆಗೆ ಹೋಯಿತು. ಶಂಕರ ತನ್ನ ಬಲಗೈಯನ್ನು ಅವಳ ಹಸ್ತಕ್ಕೊಪ್ಪಿಸಿ, ಎಡಗೈಯಿಂದ ಅವಳ ಪ್ರಾಯ ಜರ್ಜರಿತ ಪಾದಗಳನ್ನು ಸವರತೊಡಗಿ ದನು. ಥಟ್ಟನೆ ನೆನಪಾಗಿ " ಮುತ್ತನನ್ನು ಬರಹೇಳು " ಎಂದು ಕೃಷ್ಣನನ್ನು ಆಜ್ಞಾಪಿಸಿದ. ಇನ್ನೊಂದು ಹತ್ತು ನಿಮಿಷಗಳಲ್ಲಿ, ಮುತ್ತ ಬಂದು ಬಾಗಿಲಲ್ಲಿ ಇಣಿಕಿದ. " ಮುತ್ತಾ, ಬಾ ಒಳಕ್ಕೆ " ಎಂದು ಶಂಕರ ಕರೆದ. ಆ ಧ್ವನಿ, ಆ ಮುಖಗಳೆರಡೂ ಯಾವತ್ತೂ ಕಥೆ ಯನ್ನು ಹೇಳುತ್ತಿದ್ದುವು! ಎಲ್ಲರೂ ಸ್ತಂಭಿತರಾಗಿ ನಿಂತಿದ್ದರು. ಮುದುಕಿಯ ತೃಪ್ತ, ಶಾಂತಮುಖವನ್ನು ನಿರೀಕ್ಷಿಸುತ್ತಿದ್ದರು. ಉಸಿರು ನಿಡಿದು ಬರತೊಡಗಿತು. ಹೃದಯಕ್ರಿಯೆ ಅಲ್ಲಿಗೇ ನಿಂತಿತು. ಅದೇ ಕ್ಷಣಕ್ಕೆಂಬಂತೆ—ರಂಗರಾಯರು, ಶಾಂತು, ಮರಿಮಕ್ಕಳು, ಕಣ್ಣೀರು ಕರೆ ದುಕೊಂಡೇ, ಕಾತರ ಧ್ವನಿಗಳಿಂದ ಆ ಕಿರಿದಾದ ಕೋಣೆಯಲ್ಲಿ ಸೇರಿದರು. ಏನಾಯಿತೆಂದು ಎಲ್ಲರಿಗೂ ಗೊತ್ತಿದ್ದಂತಿತ್ತು. ಎಲ್ಲರಿಗಿಂತಲೂ ಹೆಚ್ಚಾಗಿ ಕಂಠಬಿರಿದು ಕೂಗಿದವರು ರಂಗಣ್ಣ, ಆಕೆಯ ಪಾದಗಳನ್ನು ತಡವಿದರು. ಅದರ ಮೇಲೆ ತಮ್ಮ ಮಸ್ತಕವನ್ನಿರಿಸಿದರು. " ನಾನು ಅಪರಾಧಿ " ಎಂದು ಮೇಲಿಂದಮೇಲೆ ನುಡಿದು ತೊಳಲಾಡುತ್ತ ಆ ವೃದ್ಧಪಾದಗಳನ್ನು ತಮ್ಮ ಕಂಬನಿಗಳಿಂದ ತೊಯ್ಸಿದರು. ಅಳದೆಯೆ ಕಂಠವನ್ನು ಬಿಗಿದು ಹಿಡಿದವರು ಶಂಕರ ಮತ್ತು ಮುತ್ತಯ್ಯ ಮಾತ್ರ. ಅವರ ಪಾಲಿನದು ಅಳುವನ್ನು ಮೀರಿ ದಂತಹ ದುಃಖ. ದುಃಖಕ್ಕಿಂತ ಮಿಗಿಲಾದ ಬೆರಗೂ ಸೇರಿತ್ತು. ತನ್ನ ಕೊನೆಯ ಗಳಿಗೆಯಲ್ಲಿ ಇಷ್ಟುಷ್ಟೂ ಪ್ರಜ್ಞೆ ಕಳೆದುಕೊಳ್ಳದೆ, ತನ್ನ ಜೀವನದ ತೃಪ್ತಿ

ಯನ್ನು ವ್ಯಕ್ತಮಾಡಿ, ಕಣ್ಣು ಮುಚ್ಚಿದ ಆ ಪವಿತ್ರಳ ಬಾಳಿಗೊಂದು ಕೊನೆ ಇದೆಯೇ !–ಎಂಬ ಬೆರಗಿನ ನೋಟ ಅವನ ಮುಖವನ್ನು ಕವಿದಿತ್ತು.

ಗಳಿಗೆ ಸರಿಯಿತು; ಅಳುವವರಿಗೆ ಮುತ್ತಯ್ಯ ಸಮಾಧಾನ ಹೇಳಿದ-ಅದರಲ್ಲಿ ಹೊಸತೇನಿಲ್ಲ. ಪುರಾಣ ಕಾಲದಿಂದಲೂ ಬಂದುದು ಅಥವಾ ಅದಕ್ಕೂ ಹಿಂದಿನಿಂದ ಹಿರಿಯರು ಹೇಳಿಬಂದ ಮಾತುಗಳೇ. ಅವನಿಗೆ ಫಕ್ಕನೆ ಅನಿಸಿತು–ಶಂಕರನನ್ನು ನೋಡಿ "ಸಣ್ಣ ಧನಿಗಳೇ, ನನ್ನ ದೇವರು ಏನೂ ಅನ್ನಲಿಲ್ಲವೇ ?" ಎಂದು ಕೇಳಿದ್ದ. ಏನೋ ಅಂದಿದ್ದರು ಎಂಬ ಮಾತು ಕೃಷ್ಣನಿಂದ ಕೇಳಿದ್ದ. ಆದುದರಿಂದಲೇ ಗೌಡ ತಿರುಗಿ ಅದನ್ನು ಕೇಳಿದ. ಶಂಕರ ತಲೆಯನ್ನೆತ್ತಲಿಲ್ಲ. ಅವನ ಮನಸ್ಸಿನಲ್ಲಿ ಆ ಸಂದರ್ಭದಲ್ಲಿ ತಾನೂ ಒಬ್ಬ ಅಪರಾಧಿ–ಎಂದನಿಸಿತೋ ಏನೋ. ಆದರೆ ಕೃಷ್ಣ "ಹೇಳು ಶಂಕರ ; ಅವರು ಹೇಳಿದ್ದನ್ನು ಹೇಳಿದರೆ ಏನು ತಪ್ಪು ?" ಎಂದು ಒತ್ತಾಯಿಸಿದ.

ಶ್ಯಾನುಭಾಗರು ಆ ಪ್ರಶ್ನೆಯನ್ನು ಕೇಳಿ, ಚೇತರಿಸಿಕೊಂಡು "ಅಜ್ಜಿ, ಏನಾದರೂ ಆಸೆಮಾಡಿ ಸತ್ತರೇ" ಎಂಬ ಕುತೂಹಲ ತಾಳಿದರು. ಆ ಹಿರಿಯಳಕಡೆಗೆ ತನ್ನಿಂದ ನೂರಾರು ಅಪರಾಧಗಳು ಆಗಿವೆ-ಎಂಬುದು ಗೊತ್ತಿದ್ದ ಮಾತು. ಎಳೆಗೂಸಾಗಿದ್ದಂದಿನಿಂದ ಎತ್ತಿ ಮುದ್ದಿಸಿ, ಬೆಳೆಯಿಸಿ, ಲಗ್ನ ಮಾಡಿಸಿದವರು ; ತನ್ನ ಸಂಸಾರವನ್ನು ನೋಡಿಕೊಂಡವರವರು. ಆದರೆ ಆಕೆಯ ಬಾಳಿನ ಕೊನೆಯ ದಿನಗಳಲ್ಲಿ ತಾನೇ ಕೃತಘ್ನನಾಗಿ ವರ್ತಿಸಿದೆ—ಎಂಬ ನೋವು ಅವರನ್ನು ಚುಚ್ಚುತ್ತಲಿತ್ತು. ಹೀಗಾಗಿ–ಅಜ್ಜಿಯ ಕೊನೆಯ ಗಳಿಗೆಯ ಮಾತುಗಳೇನಾದರೂ ಇದ್ದರೆ, ಅದನ್ನು ಪೂರೈಸುವ ಹೊಣೆ ತನ್ನದಲ್ಲವೇ-ಎಂದು ಬೇಡಿದರು. ಅಷ್ಟೊಂದು ಕಠಿಣ ಮನಸ್ಕರಾಗಿ ಬಾಳಿದ ಅವರ ತುಟಿ ನಾಲಿಗೆಗಳೆರಡಕ್ಕೂ ಬಂದ ಮಿದುತನವನ್ನು ಕಂಡು, ಶಂಕರಗೆ ಹೇಳಬೇಕೆನಿಸಿದರೂ, ಸಂಕೋಚದಿಂದ ನಾಲಿಗೆ ತೊದಲಿತು. "ಆಮೇಲೆ ಹೇಳಿದರಾಗದೆ ?" ಎಂದು ಗದ್ಗದಿಸಿದ. ಕೃಷ್ಣನಿಗೆ ಅದು ಸಮವೆಂದು ತೋರಲಿಲ್ಲ. ಶಂಕರನ ಬಾಯಲ್ಲಿ ಮಾತು ಬಾರದುದನ್ನು ಕಂಡು, ರಂಗರಾಯರಲ್ಲಿ ನೇರಾಗಿ ಅನ್ನಲಾರದೆ ಮುತ್ತನ ಮುಖ ನೋಡಿ ಆತ ಹೇಳಿದ. "ಅವರು ಹೀಗೆಂದರು" ಎಂದು ಆ ಮಧ್ಯಾಹ್ನದ ಉಪವಾಸ, ಅನಂತರದ

ಯಾವತ್ತೂ ಸಂಭಾಷಣೆಗಳನ್ನು ವಿಸ್ತರಿಸಿ ಹೇಳಿದ. ಈಗಲಾದರೆ ಶಂಕರನಿಗೆ ದುಃಖದ ಜತೆಯಲ್ಲಿ ಭೀತಿಯೂ ಉಂಟಾಯಿತು. ರಂಗರಾಯರ ಬಾಯಿಯಿಂದ, ಅಂಥ ಗಳಿಗೆಯಲ್ಲಿ ತಾನೇನು ಕೇಳಬೇಕಾಗುತ್ತದೋ—ಎಂಬ ಅಂಜಿಕೆ ಹುಟ್ಟಿತು. ಆದರೆ ಅದಕ್ಕೆ ಅವಕಾಶವುಂಟಾಗಲಿಲ್ಲ. ರಂಗರಾಯರ ಹಸ್ತಗಳು ಇನ್ನೂ ಮುದುಕಿಯ ಪಾದಗಳನ್ನು ಬಿಟ್ಟಿರಲಿಲ್ಲ. “ಅಜ್ಜಿ, ನೀನಿದ್ದಾಗ, ನಿನಗೆ ಸಂತೋಷ ಕೊಡುವ ಭಾಗ್ಯ ನನಗಿರಲಿಲ್ಲ. ಶಂಕರ ಅಳಿಯನಾಗಬಾರದೇ?” ಎಂದು ನಾನೇ ನುಡಿದಾಗ ನೀನು ಮೌನ ತಾಳಿದ್ದೆ. ಈಗ ನೀನು ‘ಅಸ್ತು’ ಎಂದಿದ್ದೀಯ. ನಾನು ಇಲ್ಲದಿದ್ದರೇನು, ಇದ್ದರೇನು; ಕೇಳಿದ್ದರೇನು, ಕೇಳದಿದ್ದರೇನು? ನಿನ್ನ ಇಚ್ಛೆ ಪೂರೈಸಿ ಕೊಡುವುದು ನನ್ನ ಕೆಲಸ. ಅದಕ್ಕಿಂತಲೂ ದೊಡ್ಡ ಪುಣ್ಯವಿಲ್ಲ—ಎಂದು ತಿಳಿದು ನಿನ್ನ ಋಣ ತೀರಿಸುತ್ತೇನೆ” ಎಂದು ಇನ್ನಷ್ಟು ಕಂಬನಿ ಸುರಿಸಿದರು. ಅವರ ವಕ್ರತೆಯನ್ನೆಲ್ಲ ಕಂಡು ಅನುಭವಿಸಿದ ಬಳಗಕ್ಕೆ, ಇಂಥ ಒಂದು ಪ್ರಾಯಶ್ಚಿತ್ತದ ಗಳಿಗೆಯೂ ಮಾನವನಿಗೆ ದೊರಕುವುದು ಉಂಟೇ! ಎಂದನಿಸಿರಬಹುದು. ಆ ಸಂಜೆಯ ಸೂರ್ಯ ಪಡುವಣ ಬಾನಲ್ಲಿ ಅಸ್ತಮಿಸಿ, ಹೊಂಬಣ್ಣ ನಾಲ್ದೆಸೆಗೂ ಚೆಲ್ಲುತ್ತಿದ್ದಾಗ, ಮೂಡೋಡಿಯ ಒಂದು ಮೂಲೆಯಲ್ಲಿ ಚಿತೆಯೊಂದು ಬೆಳಗಿ, ಶಾಂತಮೂರ್ತಪ್ಪನವರ ಮಗಳ ಶರೀರವನ್ನು ನುಂಗುತ್ತ, ಅಮರ ಪ್ರೇಮಮಯ ಜೀವನದ ನೆನಪನ್ನು ನಾಲ್ದೆಸೆಯ ಗಾಳಿಯಲ್ಲಿ ಬೆರೆಯಿಸುತ್ತಿತ್ತು. ಆಕೆಯ ಉತ್ತರಕ್ರಿಯೆಯನ್ನು, ರಂಗಣ್ಣನವರು ಆ ಮನೆಯಲ್ಲೇ ಕುಳಿತು ಅದೇ ನೆಲದಲ್ಲಿ ಭಕ್ತಿಪೂರ್ವಕವಾಗಿ ನಿರ್ವಹಿಸಿದರು. ಅಸೂಯೆಯಿಂದ ಪ್ರೇರಿತವಾದ ದ್ವೇಷದ ದಳ್ಳುರಿಯೊಂದನ್ನು, ಇಬ್ಬರಿಗೂ ಅಜ್ಜಿಯಾಗಿದ್ದ ಆ ಮುದುಕಿಯ ತ್ಯಾಗಮಯ ಜೀವನ, ನೊಂದಿಸಿ ಸಂತಸವನ್ನುಂಟು ಮಾಡಿತು.

ಹದಿಮೂರನೆಯ ದಿನವದು. ಉತ್ತರ ಕ್ರಿಯೆಗಳೆಲ್ಲವೂ ಮುಗಿದಿವೆ ಗತ ಜೀವಕ್ಕಾಗಿ ವೈಕುಂಠ ಸಮಾರಾಧನೆಯೆಂದು ಬಂಧುಗಳು ನೆರೆದಿದ್ದಾರೆ. ಎಲೆ ಬಡಿಸಿದ್ದಾರೆ. ಸಮೀಪದ ಬಂಧು ವರ್ಗವೆಲ್ಲ ಬಂದು ಕಲೆತಿದೆ. ಶಂಕರನ ಮನಸ್ಸಿಗೆ ಮಾತ್ರ ಕಟ್ಟಿಲೆಯ ಆ ಭೋಜನ ಸನ್ನಾಹ ಏನೊಂದೂ ಹಿತವನ್ನುಂಟುಮಾಡಿಲ್ಲ. ನೋವಿನಿಂದ ಉರಿದ ಅವನ ಮನಸ್ಸು ಔತಣದ

ಸವಿಯೂಟಕ್ಕೆ ಸಿದ್ಧವಾಗಿರಲಿಲ್ಲ. ಆತ ಯಾವ ಕೆಲಸಕ್ಕೋ ಮನೆಯ ಹೊರಜಗುಲಿಯಲ್ಲಿ ನಿಂತು. ಬೇಸರದಿಂದ ಕತ್ತು ಚಾಚಿ, ಸಮಾರಾಧನೆಗೆ ಯಾರಾದರೂ ಬರುವವರಿರಬಹುದೇ-ಎಂದು ಒಂದು ಕ್ಷಣ ಚಿಂತಿಸಿದ. ಆ ಗಳಿಗೆಗೆ-ನದಿಯ ದಂಡೆಯಿಂದ ಮೂವರು ಏರಿ ಬರುವುದು ಕಂಡಿತು. ಮೊದಲಿನ ಉಡುಗೆ ಖಾಕಿಯ ಉಡುಗೆ. ಮಂಜುನಾಥನೇ-ಎಂಬ ಭ್ರಮೆ ಯಾಗುವುದರೊಳಗೆ ವನಮಾಲೆ, ಸುಂದರರಾಯರು ಕಾಣಿಸಿಕೊಂಡರು. ಧಾವಿಸಿ ಹೋದ ಅವರೆಡೆಗೆ. ತಂದೆಯ ಬಳಿಗೋಡಿ 'ಅಪ್ಪಾ. ಹತ್ತು ದಿನ ಗಳ ಮುಂಚೆಯೇ ಬಂದಿದ್ದರೆ.... ಅಜ್ಜಿ ಹೊರಟು ಹೋದರು. ಈಹೊತ್ತು ಹದಿಮೂರನೆಯ ದಿನ' ಎನ್ನುತ್ತಲೇ ಸಿಡಿಲು ಬಡಿದಂತಾಯಿತು ಸುಂದರ ರಾಯರಿಗೆ. ಮುಖದಲ್ಲಿ ತುಂಬಿದ್ದ ಗೆಲವು. ಉತ್ಸಾಹಗಳೆಲ್ಲ ಮಾಯವಾ ದುವು. ಪ್ರತಿಯೊಬ್ಬರ ಮುಖದಲ್ಲೂ ಕತ್ತಲು ತುಂಬಿತು. ಸುಂದರರಾಯ ರಿಗೆ-ತಾನೆಂಥ ಅಭಿಮಾನ ಹೀನ. ಮಗ ಅಷ್ಟೊಂದು ಕರೆದರೂ ಹೋಗ ದಿರುವ ಪಾಪಿಯಾದೆ. ಕುಲದೇವತೆಯನ್ನು ಕಾಣಲಾರದ ನಿರ್ಭಾಗ್ಯನಾದೆ- ಎಂದನಿಸಿತು. ಅಂತು ಮಗನ ಮನೆಯನ್ನು ಸೇರಿದರು. ಸ್ನಾನ ಮುಗಿಸಿದರು. ಎಲ್ಲರೊಡನೆ ಊಟಕ್ಕೆ ಕುಳಿತುಕೊಂಡರು. ಬಳಗದವರೊಡನೆ ಕುಳಿತು, ಮಡಿದವರ ನೆನಪು ಮಾಡುತ್ತ, ಉಣ್ಣುವ ಗಳಿಗೆಯಾದರೂ ಒಂದು ದೊರೆಯಿತಲ್ಲ—ಎಂಬ ತೃಪ್ತಿಯಷ್ಟೇ ಅವರಿಗೆ.

ಬಂದ ದಿನವೆಲ್ಲ ರಂಗಣ್ಣ, ಶಾಂತು, ಶಂಕರ ಪ್ರತಿಯೊಬ್ಬರೂ ಸಂದ ಜೀವದ ಗುಣಗಾನ ಮಾಡುವವರೇ. ಅದನ್ನೆಲ್ಲ ಕೇಳಿ ಕೇಳಿ ವಿಟ್ಠಲ, ಸುಂದರರಾಯರಿಬ್ಬರೂ 'ಶಂಕರನೇ ಪುಣ್ಯವಂತ. ತಾವೇ ನಿರ್ಭಾಗ್ಯರು' ಎಂಬ ವ್ಯಥೆಗೀಡಾಗಬೇಕಾಯಿತು.

ಆ ಸಂಜೆ ರಂಗರಾಯರು ಬಂದ ಬಂಧುಗಳಿಗೆ ಹುದುಗಿದ ಕಹಿಯ ನ್ನೆಲ್ಲ ಮರೆತು, ತಮ್ಮ ಮನೆಗೆ ಬರಲು ಆಮಂತ್ರಿಸಿ ಸಕುಟುಂಬಿಗಳಾಗಿ ತೆರ ಳಿದರು. ಮರುದಿನದಿಂದ ಶಂಕರನಿಗೆ ವಿರಾಮ. ತಂದೆ, ತಮ್ಮ, ನಾದಿನಿಯ ರನ್ನು ಕರೆದುಕೊಂಡು ಹಿರಿಯರ ಭೂಮಿಯನ್ನೆಲ್ಲ ತೋರಿಸಿದ. ಹಳೆ ಗಾಲದ ನೆನಪಿನ ಮುತ್ತಗೌಡ ಅವರನ್ನು ನೆರಳಾಗಿ ಹಿಂಬಾಲಿಸುತ್ತಲಿದ್ದ. ಶಂಕರನ ತಂದೆಯ ಮೇಲೆ ಮುತ್ತನಿಗೂ ಭಕ್ತಿಯೇ. ತಡೆಯಲಾರದೆ,

ಕೃತಜ್ಞತೆಯಿಂದ ಹಳೆಗಾಲದ ಕಥೆಯನ್ನು ಅವರಿಗೆ ಹೇಳುತ್ತಿದ್ದ. ಶಂಕರ ಪ್ರತಿಯೊಂದನ್ನೂ ಅನುವಾದಿಸಿ, ತಂದೆಗೆ ತಿಳಿಸುತ್ತಿದ್ದ. ವಿಟ್ಠಲನ ಮನಸ್ಸು ಒಮ್ಮೊಮ್ಮೆ ಆ ಮಾತುಗಳನ್ನು ಕೇಳುತ್ತಿತ್ತು, ಒಮ್ಮೊಮ್ಮೆ ನದಿ, ತೋಟ, ಬೆಟ್ಟ, ಬಯಲುಗಳನ್ನು ಅಭಿಮಾನದಿಂದ ನೋಡುತ್ತಲಿತ್ತು. ತಮ್ಮ ಹಿರಿಯರು ಎಂಥ ಸುಂದರ ಜಾಗದಲ್ಲಿ ಬಾಳಿದರು—ಎಂಬ ಭಾವನೆ ಅವನಿಗೂ ಆಗುತ್ತಿತ್ತು. ಕಳೆದುಕೊಂಡ ಅಜ್ಜನ ಬದುಕನ್ನು, ತನ್ನ ಅಣ್ಣ ಬೆವರಿಳಿಸಿ, ಅಷ್ಟೊಂದು ಶ್ರಮದಿಂದ ಈ ಸ್ಥಿತಿಗೆ ತಿರುಗಿ ತಂದುದಕ್ಕೆ ತನಗಾದ ಸಂತೋಷವನ್ನು ವಿಟ್ಠಲ ವನಮಾಲೆಗೆ ಬಣ್ಣಿಸುತ್ತಿದ್ದ. ವನಮಾಲೆ ಪೇಟೆಯ ಬೆಡಗುಗಾತಿಯಾದರೂ, ಆ ನಿಸರ್ಗದ ಚೆಲುವಿಗೆ ಹುಚ್ಚಾಗಿದ್ದಳು. ಗಂಡನ ಅಭಿಮಾನದಲ್ಲಿ ಭಾಗಿಯಾದಳು. ವಿಟ್ಠಲನ ಪ್ರತಿಯೊಂದು ಪ್ರಶಂಸೆಗೂ 'ಅಹುದು, ಅಹುದು' ಅನ್ನುತ್ತಿದ್ದಳು. ಸುಂದರರಾಯರು ಮಗನೊಡನೆ ನಡೆದಾಡಿ ಪ್ರತಿಯೊಂದನ್ನೂ ಕಾಣುತ್ತಿದ್ದರು, ಕೇಳುತ್ತಿದ್ದರು; ಸೊಲ್ಲೆತ್ತುತ್ತಿರಲಿಲ್ಲ. ಚರ್ಚಿಸುತ್ತಿರಲಿಲ್ಲ. ಮಗ ತನ್ನ ಮಾತನ್ನು ಮೀರಿ, ಅಲ್ಲಿಗೆ ಬಂದುದಕ್ಕಾಗಿ ಉಂಟಾಗಿದ್ದ ಬೇಸರ, ಅವನ ಸಾಹಸಗಳನ್ನು ಕಂಡು ಮಾಯವಾಯಿತು. ಶಂಕರನ ಕಾಯಕಷ್ಟದ ಜೀವನದ ಅರಿವು ಉಂಟಾಗದೆ ಹೋಗಲಿಲ್ಲ. ಅರಿವಾದುದರಿಂದಲೇ "ಜೀವನಕ್ಕಾಗಿ ಇಷ್ಟೊಂದು ಒದ್ದಾಡಬೇಕೇ ? ಕೋಣೆಯಲ್ಲಿ ಕುಳಿತು, ಮೇಜಿನ ಮೇಲೆ ಕಾಗದ ಬಿಡಿಸಿ, ಚಿತ್ರ ಬರೆಯುತ್ತಲೋ, ಅಥವಾ ಕಾಗದಕ್ಕೆ ಸಹಿ ಹಾಕುತ್ತಲೋ ನಿಶ್ಚಿಂತೆಯಿಂದ ಇರಬಹುದಾದ ವ್ಯಕ್ತಿ ಇಷ್ಟೆಲ್ಲ ಮಾಡಬೇಕೇಕೆ ?" ಎಂಬ ಪ್ರಶ್ನೆ ಅವರ ಮನಸ್ಸಿನಲ್ಲಿ ಹುಟ್ಟುತ್ತಿತ್ತು.

ಶ್ಯಾನುಭಾಗರು ಮೂಡೋಡಿಯಿಂದ ಹೋಗುತ್ತ "ನಮ್ಮ ಮನೆಯೂ ನಿಮ್ಮ ಅಜ್ಜ ಕಟ್ಟಿಸಿಕೊಟ್ಟದ್ದೇ. ಬಂದು ನೋಡಿ ಹೋಗಬೇಕು"—ಎಂದು ಆಮಂತ್ರಿಸಿದ್ದರು. ಆ ಹಳ್ಳಿಯ ಮೂಲೆಯಲ್ಲಿ ಕುಳಿತು ಅವರಿಗಾದರೂ ಹೇಗೆ ಹೊತ್ತು ಹೋಗಬೇಕು ! ಮೂರನೆಯದಿನ ವಿಟ್ಠಲ, ವನಮಾಲೆ, ಸುಂದರರಾಯರು ಆ ಮನೆಗೆ ಹೋದರು. ಶಂಕರನಿಗೂ ಬರಬೇಕೆಂಬ ಆಮಂತ್ರಣವಿತ್ತು. 'ಹಳೆಯದನ್ನು ಮರೆತುಬಿಡು' ಎಂದು ಸಮಾಧಾನ ಹೇಳಿದ್ದರು. ಆದರೆ ಶಂಕರ ಅನುಮಾನಿಸಿ ಉಳಿದು ನಿಂತ.

" ತುಂಬ ಕೆಲಸ ಹಾಗೆಯೇ ಬಿದ್ದಿದೆ. ಈ ಹದಿನೈದು ದಿವಸಗಳಿಂದ ಏನೂ ಕೆಲಸವಾಗಿಲ್ಲ' ಎಂಬುದರಿಂದ ಆತ ಹೊರಡುವುದಕ್ಕೆ ಮನಸ್ಸುಮಾಡ ಲಿಲ್ಲ. ರಂಗರಾಯರೇ ಕರೆಯಲು ಬಂದಿದ್ದರು. ಶಂಕರ ಹೊರಡದ್ದನ್ನು ಕಂಡು 'ನಾಳಿಗಾದರೂ ಬರುತ್ತೀಯಲ್ಲ' ಎಂದು ಕೇಳಿದರು. 'ಬರು ತ್ತೇನೆ' ಎಂದು ಉತ್ತರಿಸಿದ. ರಂಗರಾಯರ ಮನೆಗೆ ಬಂದ ಅತಿಥಿಗಳಿಗೆ ವಿಶೇಷ ಆದರೋಪಚಾರಗಳಾದುವು. ತಮ್ಮ ಹಳೆಯ ಮನೆಯನ್ನೆಲ್ಲ ರಂಗರಾಯರು ಸಡಗರದಿಂದ ತೋರಿಸಿದರು. ಅನಂತರ ಗೋಡೆಗೆ ತಗಲ್ಹಿ ಹಾಕಿದ್ದ ಒಂದು ಫೋಟೋವನ್ನು ತೆಗೆದು " ಇದು ನಮ್ಮ ಹುಡುಗನದ್ದು" ಎಂದು ಹೇಳಿದರು. ವಿಟ್ಠಲ ಅದನ್ನು ಗುರುತಿಸಿ ಕೈಯಲ್ಲಿ ತೆಗೆದುಕೊಂಡ. ಅದನ್ನೇ ತಂದೆಗೆ ತೋರಿಸಿ "ಯಾರದ್ದೆಂದು ಗೊತ್ತಾಗುವುದಿಲ್ಲವೇ? ಜಯರಾಮರ ಮನೆಯಲ್ಲಿದ್ದನಲ್ಲ—ಆ ಹುಡುಗ ಇವನು. ನಮ್ಮಲ್ಲಿಗೂ ಹಲವು ಸಾರಿ ಬಂದಿದ್ದ. ಈಗ ಅವನಿರುವುದು ನನ್ನ ಸ್ಕ್ವಾಡ್ರನ್ನಿನಲ್ಲಿ" ಎಂದು ನುಡಿದು, ಶ್ಯಾನುಭಾಗರ ಕಡೆಗೆ ಮುಖ ಮಾಡಿದ, " ಇವ ನಿಮ್ಮ ಹುಡುಗನೇ? ನನ್ನ ಕೆಳಗೆಯೇ ಇದ್ದಾನೆ, ಅವನು ನಮ್ಮವನೆಂದು ನನಗೆ ತಿಳಿಯದೇ ಹೋಗಬೇಕೇ? ಅವನಿಗೂ ಗೊತ್ತಿಲ್ಲವೆಂದು ಕಾಣುತ್ತದೆ. ನಾಳೆ ಹೋದಾಗ ಹೇಳುತ್ತೇನೆ—ನಿಮ್ಮನ್ನೆಲ್ಲ ಕಂಡು ಬಂದಿದ್ದೇನೆ ಎಂದು ತಿಳಿಸುತ್ತೇನೆ" ಎಂದ. ರಂಗರಾಯರಿಗೆ ಆ ಮಾತನ್ನು ಕೇಳಿ ಅತ್ಯಾನಂದ ವಾಯಿತು.

ಅವರು ಸಂಕೋಚ ಪಡುತ್ತ, ಬಂಧುಗಳನ್ನು ಕುಳ್ಳಿರಿಸಿಕೊಂಡು ಅವರ ಸ್ಥಾನಮಾನಗಳ ಅಂತರ ಬಲ್ಲವರಾದರೂ, ಅಜ್ಜಿಯ ವಿಚಾರಗಳನ್ನು ಇನ್ನಷ್ಟು ಹೇಳಿದರು. "ನಾನು ಕೆಲವು ವರ್ಷಗಳ ಹಿಂದೆ ನಿಮಗೊಂದು ಕಾಗದವನ್ನು ಬರೆದಿದ್ದೆ. ನಿಮಗೆ ನೆನಪಿರಲಾರದು. ಕಾಗದದ ಜತೆಗೆ ಒಂದು ಜಾತಕವನ್ನೂ ಇರಿಸಿದ್ದೆ. ನಾವು ಬಡವರು. ಹಾಗೆಲ್ಲ ದುಡುಕ ಬಾರದಿತ್ತು—ಎಂದು ನನಗೂ ಅನಿಸಿತು" ಎಂದು ತಡವರಿಸಿ, ಅಜ್ಜಿಯ ಮೃತ್ಯುಮುಖದಲ್ಲಾದ ಸಂಭಾಷಣೆಯನ್ನು ಪ್ರತ್ಯಕ್ಷ ಕೇಳಿದವರಿಗಿಂತ ಚೆನ್ನಾಗಿ ಬಣ್ಣಿಸಿದರು. ಸುಂದರರಾಯರು ಉದಾಸೀನರಾಗಿಯೇ ಕುಳಿತಿದ್ದರು, ವಿಟ್ಠಲ ತುಂಬ ಆಸಕ್ತಿಯಿಂದ ಕೇಳುತ್ತಿದ್ದ. ಆದುದರಿಂದ–

ಮನೆಗೆಲಸದಲ್ಲಿ ಓಡಾಡುತ್ತಿದ್ದ ಶ್ರೀಮತಿಯನ್ನು ಕುತೂಹಲದಿಂದ ನೋಡಿದನು. ಹುಡುಗಿ ರೂಪವತಿಯಾಗಿ ಕಾಣಿಸಿದಳು. ಅವಳ ಕೊ[illegible] ಏನೆಂಬುದು ಅವನಿಗೂ ತಿಳಿಯುವಂತಿರಲಿಲ್ಲ. ಅವನ ಮನಸ್ಸಿನಲ್ಲಿ— ಹಳ್ಳಿಯಲ್ಲೇ ಹುಟ್ಟಿ ಬೆಳೆದ ಆ ಹುಡುಗಿ, ಅಣ್ಣನ ಬದುಕಿಗೆ ಒಪ್ಪತಕ್ಕವಳು ಎಂಬ ಅಭಿಪ್ರಾಯ ಉಂಟಾಯಿತು. ಆ ದಿನ ಸಂಜೆ ಮನೆಗೆ ಮರಳಿದ ಮೇಲೆ, ವಿಟ್ಠಲ ತಂದೆಯ ಸಮ್ಮುಖದಲ್ಲಿ ಅಣ್ಣನೊಡನೆ ಅಲ್ಲಿ ನಡೆದ ಮಾತುಕತೆಗಳನ್ನು ಹೇಳಿದ. "ನಮ್ಮ ಅಜ್ಜಿಯ ಆಸೆ ಹಾಗಿತ್ತೆಂದು ಅವರೆಂದರು. ಎಷ್ಟು ನಿಜವೋ, ಎಷ್ಟು ಸುಳ್ಳೋ" ಎಂದು ವಿಷಯವನ್ನು ಪೂರ್ಣಮಾಡಿದ. ಶಂಕರ ತನ್ನ ತಂದೆಯ ಎದುರು ಏನೂ ಮಾತಾಡಲಿಲ್ಲ. ಆದರೆ ಬಾಯಿಯಿಂದ ನಿರಾಕರಣೆಯ ಮಾತು ಹೊರಡದಿದ್ದುದನ್ನು ಕಂಡು, ವಿಟ್ಠಲನೇ ತಿರುಗಿ ಕೆದಕಿ ಕೇಳಿದ. "ಅಣ್ಣನಿಗೆ ಇಷ್ಟವಿದ್ದರೆ ಆಗಬಾರದೇಕೆ?" ಎಂದ. ಸುಂದರರಾಯರು ಉಪಾಯವಿಲ್ಲದವರಂತೆ "ಆಗಬಾರದೆಂಬುದೇನಿಲ್ಲ. ಅವರವರ ಇಷ್ಟವಲ್ಲವೇ" ಎಂದರು.

ವಿಟ್ಠಲ ತಿರುಗಿ "ಆಗುವುದಾದರೆ ಇಲ್ಲಿಯೇ ಆಗಬೇಕಷ್ಟೆ. ನೀನು ಬರಿದೆ ಬಾಯಿಯಿಂದ ಹೇಳುವುದೇ? ಅಥವಾ ಅಣ್ಣನಿಗೆ ಇಷ್ಟವಿದ್ದು ಲಗ್ನವಾಗುವುದಿದ್ದರೆ, ಅಮ್ಮನನ್ನು ಕರೆದುಕೊಂಡು ಬಂದು ಮದುವೆ ಆಗುವಂತೆ ಮಾಡುತ್ತೀಯಾ? ನನಗೆ ಇನ್ನು ಸದ್ಯದಲ್ಲಿ ರಜೆ, ಗಿಜೆ ಸಿಗಲಾರದು. ಇಷ್ಟು ಸಿಕ್ಕಿದ್ದೇನೆ ಹೆಚ್ಚು. ನಿನಗೆ ಹಾಗಿಲ್ಲವಲ್ಲ" ಎಂದು ನೇರವಾಗಿ ಪ್ರಶ್ನಿಸಿದನು. ಅದಕ್ಕೊಂದು ಕಾರಣವೂ ಇತ್ತು. ಶಂಕರನ ಜತೆಗಾರ ಕೃಷ್ಣನಿಂದ ವಿಟ್ಠಲನಿಗೆ ಅಣ್ಣನ ಮನಸ್ಸು ತಿಳಿದು ಬಂದಿತ್ತು. ಅಣ್ಣ ದಾಕ್ಷಿಣ್ಯಪರ. ಮಾತುಗಾರನಲ್ಲ ...ಎಂಬುದರಿಂದ ತಾನು ಮಾತಿನಲ್ಲಿ ದುಡುಕಿದ, ಆಗುವ ಮದುವೆ ಹೇಗೂ ಆಗುತ್ತದೆ. ಆದರೆ ತಂದೆ ತಾಯಿಗಳು ಬಂದು, ಅದನ್ನು ಪೂರೈಸಿ ಕೊಟ್ಟರೆ, ಅಣ್ಣಗೆ ಈ ವರೆಗೆ ಅವರಿಂದುಂಟಾದ ಬೇಸರ ಮಾಯವಾದೀತು—ಎಂಬುದು ಅವನ ಹಂಬಲ,

ಅವರು "ಏನು ವಿಟ್ಠಲ, ಹಾಗೆನ್ನುತ್ತೀ? ಅವನಿಗೆ ಇಷ್ಟವಿದ್ದ ಸಂಗತಿಯಾದರೆ ನಾನು ಬೇಡ ಅನ್ನುತ್ತೇನೆಯೇ? ನಾನಂತು ಖಂಡಿತ ಲಗ್ನಕ್ಕೆ ಬಂದು ಹೋಗುತ್ತೇನೆ. ಆದರೆ ನಿನ್ನ ಅಣ್ಣನೇ ಸುಮ್ಮನಿರುವಾಗ, ನೀನು

ಇಷ್ಟೆಲ್ಲ ಖಿತಕ್ಕೆ ಮಾತನಾಡುತ್ತೀಯೋ ನನಗೆ ತಿಳಿಯದು" ಎಂದು ನಕ್ಕರು ಶಂಕರನೂ ನಕ್ಕನು. "ನಿನ್ನಿಷ್ಟವನ್ನು ನಾನು ಮೊದಲು ತಿಳಿಸಿದ್ದು ನಮ್ಮ ಅಜ್ಜಿಗೆ. ಅದನ್ನು ಅವರು ಹೇಳಿದ್ದು ಮಾತ್ರ ಸಾಯುವ ದಿನ. ಅವರೂ ಆಗಲೆಂದು ಹರಸಿದರು. ಅದಕ್ಕೆ ತಡೆಯಾದದ್ದು ನಮ್ಮ ರಂಗರಾಯರೇ. ಬಹು ಹಿಂದೆಯೇ ಇದಕ್ಕಾಗಿ ಕಾಗದ ಬರೆದ ಅವರು, ನಾನು, ಎಂದು ಈ ಭೂಮಿಯನ್ನು ವಹಿಸಿಕೊಂಡು ಇಲ್ಲಿ ಕುಳಿತೆನೋ ಅಂದೇ ಸಿಟ್ಟಾದರು. ನಾನು ಬೇಸಾಯಗಾರನಾಗುವುದು ಅವರಿಗೆ ಹಿಡಿಸಲಿಲ್ಲ... ....ಅಷ್ಟಿದ್ದರೆ ಚಿಂತೆಯಿಲ್ಲ. ಮುಂದೆ ನನ್ನ ವಿಷಯದಲ್ಲಿ ಇಲ್ಲದ ಅಪಪ್ರಚಾರ ಮಾಡಿದರು. ಅನಂತರ ನನಗೂ ಅವರಿಗೂ ಬಹಳ ದೂರವಾಯಿತು" ಎಂದು, ಪೂರ್ವ ಕಥೆಯನ್ನು ಹೇಳಿ, ಹಿಂದಿನ ಯುದ್ಧ ಕೊನೆಗೊಂಡ ಬಗೆಯನ್ನು ವಿವರಿಸಿ ಹೇಳಿದ. ಅಂತು ಆ ದಿನದ ಸಂಭಾಷಣೆ ಮುಗಿಯುವಾಗ ಶಂಕರನ ಲಗ್ನದ ವಿಚಾರದಲ್ಲಿ ಎಲ್ಲರಿಗೂ ಒಪ್ಪಿಗೆಯಾಯಿತು. ಪ್ರತಿಮೆಯನ್ನು ಮದುವೆಗೆ ಕರೆದು ತರುತ್ತೇನೆಂದು ಸುಂದರರಾಯರೂ ಒಪ್ಪಿದರು.

ವಿಟ್ಠಲನ ರಜೆ ಕರಗಿತು. ಮರುದಿನ ಅವರೆಲ್ಲ ಮರುಪ್ರವಾಸ ತೊಡಗಿದರು. ಬೆಳ್ತಂಗಡಿಯ ತನಕ ನಡೆದು ಹೋಗಿ, ಅಲ್ಲಿಂದ ಬಸ್ಸನ್ನೇರಿದರು. ಹೊರಡುವಾಗ ಸುಂದರರಾಯರು ಶಂಕರನ ಬೆನ್ನು ಚಪ್ಪರಿಸಿ "ಹಿಂದಾದುದಕ್ಕೆ ಬೇಸರಪಡಬೇಡ" ಎಂದು ಮಿದುವಾಗಿ ಮಾತನಾಡಿಸಿ ಬೀಳ್ಕೊಟ್ಟರು. ವಿಟ್ಠಲ ವನಮಾಲೆಯರು ಉತ್ಸಾಹದ ಮಾತುಗಳನ್ನಾಡಿ ಜತೆಗೆ ಹೊರಟರು. ಶಂಕರನ ಮನಸ್ಸಿನಲ್ಲಿ ಕವಿದ ಕಗ್ಗತ್ತಲೆಯೊಂದು ಮಾಯವಾದಂತಾಯಿತು. ಮನೆಗೆ ಮರಳುವಾಗ ಲಘುಚಿತ್ತನಾಗಿಯೇ "ಕೊನೆಗಾದರೂ ತಂದೆ ನನ್ನನ್ನು ಒಲಿದರಲ್ಲ" ಎಂಬ ತೃಪ್ತಿಯಿಂದ ಮರಳಿದ. ಅದರ ಜತೆಗೆ–ಅಷ್ಟೆಲ್ಲಕ್ಕೂ ಕಾರಣವಾದದ್ದು ತನ್ನ ತಮ್ಮನ ಕರುಣೆ, ಅನನ್ಯವಾದ ಪ್ರೀತಿ–ಎಂಬುದನ್ನು ಆತ ನೆನೆಯದೆ ಹೋಗಲಿಲ್ಲ.

# ಅಧ್ಯಾಯ ೧೨

ಅಜ್ಜಿಯ ಸಾವಿನಿಂದ ಶಂಕರನ ಮನಸ್ಸು ತುಂಬ ದುಃಖಪೂರಿತ ವಾಯಿತು. ಅವಳ ಪರಿಚಯವೇ ಅಲ್ಲಿಗೆ ಬರುವುದಕ್ಕೆ ಹೆಚ್ಚಿನ ಒತ್ತಾಸೆ ಯನ್ನುಂಟುಮಾಡಿದ್ದು. ದಿನವೆಲ್ಲ ಶರೀರ ಶ್ರಮದಲ್ಲಿ, ಕೆಲಸದ ಚಿಂತೆಯಲ್ಲಿ ಇರುತ್ತಿದ್ದ ಅವನಿಗೆ, ಅಜ್ಜಿಯ ನೆನಪು ಮನಸ್ಸಿಗೆ ತುಂಬ ಸಂತಸವನ್ನುಂಟು ಮಾಡಿತ್ತು. ಏಕೆಂದರೂ ಪ್ರೇಮವಂಚಿತವಾದ ಬಾಳು ಅವನದ್ದು. ತಾಯಿ ತಂದೆಯರೊಡನೆ ಮನ ಮುರಿದಿತ್ತು. ವರಲಕ್ಷ್ಮಿಯ ಸ್ನೇಹ ನೋವಿಗೆ ಕಾರಣವಾಗಿತ್ತು. ವಿಟ್ಠಲನೊಬ್ಬನ ಪ್ರೋತ್ಸಾಹವಲ್ಲದಿದ್ದರೆ ಮನೆಯ ಬೆಂಬಲವೆಂಬುದೇ ಅವನಿಗಿರಲಿಲ್ಲ. ಅದಿದ್ದರೂ, ಇಲ್ಲದಿದ್ದರೂ ಬಂಗಾಡಿಗೆ ಬಂದು ಅರಣ್ಯ ಮಧ್ಯದಲ್ಲಿ ಕುಳಿತು, ಈತನ ಸಾಹಸಕ್ಕೆ ಪ್ರೇರಿಸಿದವಳು ಆ ಮುದುಕಿ. ಈತನ ಹಸಿದ ಜೀವಕ್ಕೆ. ಹೊಸ ಆಸೆ, ಕನಸುಗಳಿಗೆ, ಆಕೆ ತಾಯಿ ಬೇರಿನಂತೆ ನೀರಡಿಕೆ, ಆಹಾರವನ್ನೆಲ್ಲ ಒದಗಿಸಿದಳು. ಮನುಷ್ಯ ತನ್ನ ಕೆಲಸ ಗಳಲ್ಲಿ ಎಷ್ಟೇ ಮೈಮುರಿಯುವುದು ಶಕ್ಯವಾದರೂ, ಸಮಾಜ ಜೀವಿಯಾದ ಆತನ ಬಾಳು ಸಮನಾದ ಸ್ನೇಹ, ಮಾನವೀ ಸಂಪರ್ಕಗಳಿಲ್ಲದೆ ಸೊಗಯಿಸ ಲಾರದು. ಆಗ ಬಾಳು ಮರುಭೂಮಿಯಾಗುತ್ತದೆ. ಆ ಮರುಭೂಮಿಗೆ ಶಂಕರನ ಅಜ್ಜಿ ಒಂದು ಜಲಾಶಯದಂತೆ ಕಾಣಿಸಿದ್ದಳು. ಅವಳ ದೆಸೆ ಯಿಂದಾಗಿ ಒಂದು ನಂದನವನದ ಕನಸು ಅವನ ಮನಸ್ಸಿನಲ್ಲಿ ಮೂಡಿತು. ಮೊದಲು ಮೊದಲು ಮರೀಚಿಕೆಯಂತೆ ಅದು ಚಂಚಲವಾಗಿದ್ದು, ಅಸ್ಪಷ್ಟ ವಾಗಿದ್ದು ಕೈಗೂಡುತ್ತದೋ, ಇಲ್ಲವೋ ಎಂಬ ಭ್ರಮೆಯನ್ನು ಹುಟ್ಟಿಸಿತು. ಅದೇ ಮರೀಚಿಕೆ ಅಳಿದು, ಅದರ ಸ್ಥಾನದಲ್ಲಿ ಸಸ್ಯಭರಿತ ಹೊಲ, ತೋಟ, ಗದ್ದೆಗಳಾದುದು ಅಜ್ಜಿಯ ಹರಸುವಿಕೆಯಿಂದ—ಎಂದು ಆತ ತಿಳಿಯುತ್ತಿ ದ್ದಾನೆ. ಶ್ರೇಯಸ್ಸಿನ ಒಂದು ಪಾಲು ಮುತ್ತಯ್ಯಗೌಡನಿಗೂ ಸಲ್ಲಬೇಕಾಗಿದೆ ಆ ಇಬ್ಬರೂ ಶಂಕರನ ಸರಿಸಮಾನ ಭಕ್ತಿಗೆ ಕಾರಣರಾಗಿದ್ದರು. ಅವುಗಳ ಲ್ಲೊಂದು ಜೀವ ಇಂದು ಮಾಯವಾಗಿದೆ. ಇನ್ನೇನು? ಮುದಿಯ ಮುತ್ತಯ್ಯ ಗೌಡನೂ ಎಷ್ಟು ಕಾಲ ಬಾಳಿಯಾನು? ಆತನೂ ಅಳಿದನೆಂದರೆ ತನ್ನ ಜೀವ ವೆಲ್ಲ ಒಂಟಿಯಾಗುತ್ತದೆ-ಎಂಬ ಭೀತಿ ಶಂಕರನಿಗೆ. ರಂಗರಾಯರ ಮನಸ್ಸು

ಪರಿವರ್ತನೆಗೊಂಡು ಮಿದುವಾದಂತೆ ಕಾಣಿಸಿದರೂ, ಅದರ ಮೇಲೆ ನಂಬಿಕೆ ಇಲ್ಲ. ಅದು ನಿಜಕ್ಕೂ ಮಿದುವಾಗಬಲ್ಲ ಮನಸ್ಸೇ? ಪಕ್ವವಾದರೂ ಸವಿಯಾಗಬಲ್ಲುದೆ? ಎಂಬ ಅನುಮಾನ ಬರುತ್ತದೆ. ಆದರಿಂದ ಅವನ ಚಿರ ಸ್ನೇಹದ ಬಯಕೆಯೆಂದೂ ಕೈಗೂಡಲಾರದು ಎಂಬ ಸಂಶಯ ಮೂಡುತ್ತದೆ.

ಶಾಂತು, ಅವಳ ಮಕ್ಕಳು, ಮುದುಕಿ ಗತಿಸಿದ ಮೇಲೆ ಶಂಕರನಲ್ಲಿಗೆ ಆಗಾಗ ಬಂದುಹೋಗುತ್ತಿದ್ದಾರೆ. ಮನೆಯಲ್ಲಿ ಮಾಡಿದ ತಿಂಡಿ ತಿನಸುಗಳೇನಾದರೂ ಇದ್ದರೆ ತಂದುಕೊಡುತ್ತಾರೆ. ಮನೆಯವರ ಜತೆಗೆ ಶ್ರೀಮತಿಯೂ ಬರುವುದುಂಟು. ಅವಳನ್ನು ಕುರಿತು ಶಂಕರ ಆಗಾಗ ನೆನೆದುದುಂಟು. ಆದರೆ ಚೆನ್ನಾಗಿ ಕೇಳಲಾರದ ಅವಳೊಡನೆ ಸಂಭಾಷಣೆಯನ್ನೆಸಗುವ ಸಾಹಸ ಮಾಡಲಿಲ್ಲ. ಮನದಲ್ಲಿ ಮೂಡಿದ ಎಷ್ಟೋ ಆಸೆಗಳನ್ನು ಕುರಿತು, ಶಾಂತುವಿನೊಡನೆ ತರ್ಕಿಸಲು ಆತ ಧೈರ್ಯಪಡಲಿಲ್ಲ. ಅವಳೇ ಒಂದೆರಡು ಬಾರಿ ಅನ್ನುತ್ತಿದ್ದಳು "ಶಂಕರ, ಅವರೆನ್ನುತ್ತಿದ್ದರು—ಎಷ್ಟು ನಿಜವೋ, ಎಷ್ಟು ಸುಳ್ಳೋ—ಮಂಜುವಿಗೂ ಕನ್ಯೆ ಹುಡುಕುತ್ತಿದ್ದೇನೆ. ಅವನಿಗೂ ಶ್ರೀಮತಿಗೂ ಒಂದೇ ಸಮಯಕ್ಕೆ ಲಗ್ನ ಮಾಡುವುದು ಒಳಿತಲ್ಲವೇ—ಎನ್ನುತ್ತಿದ್ದಾರೆ" ಎಂಬ ಸುದ್ದಿಯನ್ನು ತಿಳಿಸುವುದರ ಜತೆಗೆ, ಆ ವಿಷಯದಲ್ಲಿ ಮಾಡುತ್ತಿದ್ದ ಪ್ರಯತ್ನಗಳ ಕುರಿತಾಗಿಯೂ ಹೇಳುತ್ತಿದ್ದಳು.

ಈ ಮಾತು ತೀರಾ ಸುಳ್ಳು ಎನ್ನುವಂತಿಲ್ಲ. ಒಮ್ಮೆ ರಂಗರಾಯರು ಜಾತಕ ತರಿಸಿಕೊಂಡು, ಮಗನ ಸಲುವಾಗಿ ನಂಟುತನ ಮಾತನಾಡಿ ಬಂದುದೂ ಉಂಟು. ಹುಡುಗಿಯ ಮನೆಗೂ ಹೋಗಿ ಬಂದರು. ಮಗನಿಗೆ ತಕ್ಕ ಕನ್ಯೆ ಎಂದು ತಾವೇ ತೀರ್ಮಾನಿಸಿದರು. ಜಾತಕವೂ ಹೊಂದಿ ಬಂದಿತ್ತು. ಹುಡುಗನ ಸಮ್ಮತಿ ಪಡೆಯುವುದು ಮಾತ್ರ ಬಾಕಿ. ಮಗ ಮಂಜುನಾಥನಿಗೆ ಕಾಗದ ಬರೆದರು; ಜತೆಗೆ ಭಾವೀ ವಧುವಿನ ಚಿತ್ರವನ್ನಿರಿಸಿದರು. ತಿಂಗಳಾಯಿತು, ಎರಡು ತಿಂಗಳಾಯಿತು—ಪ್ರತ್ಯುತ್ತರ ಮಾತ್ರ ಬರಲಿಲ್ಲ. ಹುಡುಗ ಯುದ್ಧದ ಓಡಾಟದಲ್ಲಿದ್ದಾನೆ—ಎಂದು ಊಹಿಸಿ, ತಿರುತಿರುಗಿ ಪತ್ರ ಬರೆಯುತ್ತಲೇ ಇದ್ದರು. ಒಂದು ದಿನ ಆ ಹಾಳು ಯುದ್ಧ ಮುಗಿಯಿತೆಂಬ ಸಂತೋಷದ ವಾರ್ತೆಯನ್ನು ಕೇಳಿ ಸಂತೋಷ ತಾಳಿದರು.

ಜಗತ್ತಿಗೇ ಸಂತೋಷದ ದಿನವದು ರಂಗರಾಯರ ಸಂತೋಷ ಇನ್ನಷ್ಟು ಹೆಚ್ಚಾದದ್ದು. ಮಗನಿಗೊಂದು ಕಾಗದ ಬರೆದರು–"ಯುದ್ಧ ಮುಗಿದುದರಿಂದ ನಿನಗೂ ಬಿಡುಗಡೆಯಾಗಬಹುದು; ರಜೆ ಸಿಗುವುದಕ್ಕೇನೂ ತೊಂದರೆಯಾಗಲಾರದು, ಹುಡುಗಿಯ ಕಡೆಯವರು ಆತುರಪಡುತ್ತಿದ್ದಾರೆ. ನಾನೂ ಒಪ್ಪಿಗೆ ಕೊಟ್ಟಿದ್ದೇನೆ. ನೀನು ಕೂಡಲೇ ಹೊರಟು ಬಾ. ಶ್ರೀಮತಿಗೂ ಅದೇ ವೇಳೆಗೆ ಲಗ್ನಮಾಡುವುದೆಂದು ನಿಶ್ಚಯಿಸಿದ್ದೇವೆ. ಒಮ್ಮೆಗೇ ಎರಡೂ ಕೆಲಸ ಮುಗಿಸಿದರೆ ಅದಷ್ಟು ಒಳ್ಳೆಯದಲ್ಲವೇ ? ಬರುತ್ತಾ ಸಾಕಷ್ಟು ಹಣ ತಾ" ಎಂದು ಪತ್ರ ಬರೆದರು. ಬರೆದ ಪತ್ರಕ್ಕೆ, ಬಹು ದಿನಗಳ ಮೇಲೆ ನಿರಾಶಾದಾಯಕವಾದ ಪ್ರತ್ಯುತ್ತರ ಬಂದಿತು. ಆತ "ನನ್ನ ವಿಚಾರದಲ್ಲಿ ನೀವಷ್ಟು ಆತುರ ಮಾಡುವುದು ಬೇಡ. ನಾನು ಮದುವೆ ಮಾಡಿಕೊಳ್ಳುವ ಅವಸರದಲ್ಲಿಲ್ಲ. ನನ್ನ ಭವಿಷ್ಯವೇನೆಂದು ಇನ್ನೂ ನಿರ್ಧರಿಸಿಲ್ಲ. ಲಗ್ನ ಮಾಡಿಕೊಳ್ಳುವಾಗ–ನನಗೆ ಬೇಕಾದವಳನ್ನು ನಾನೇ ಆರಿಸುತ್ತೇನೆ. ಸಾಧ್ಯವಾದಷ್ಟು ಹಣ ಕಳುಹಿಸುತ್ತೇನೆ"—ಎಂದು ಬರೆದಿದ್ದ. ಮಗನ ಮೇಲೆ ಅಷ್ಟೊಂದು ಆಸೆ. ಅಭಿಮಾನಗಳನ್ನು ತಳೆದಿದ್ದ ರಂಗರಾಯರಿಗೆ, ಈ ಪತ್ರದಿಂದ ಸಿಡಿಲೆರಗಿದ ಹಾಗಾಯಿತು. ತುಂಬಾ ರೋಷಗೊಂಡರು; ಮಗನನ್ನು ಮನಸ್ಸಿನಲ್ಲೇ ಬೈದರು. "ಕಳೆದಾವರ್ತಿ ಬಂದಾಗ ನಾನು ಅವನಿಗೆ ಉಪದೇಶಿಸಿದ್ದು ನೀರಲ್ಲಿ ಮಾಡಿದ ಹೋಮವಾಯಿತು. ಹಿರಿಯರೆಂದರೆ ಈ ಮಕ್ಕಳಿಗೆ ಕಾಲ ಕಸ" ಎಂದು ತಮ್ಮ ದುಃಖ ತೋಡಿಕೊಂಡರು. ಈ ದುಃಖವನ್ನು ಶಾಂತು ಶಂಕರನಲ್ಲಿ ತೋಡಿಕೊಂಡಳು. ಜತೆಗೆ–"ನಿನ್ನ ತಮ್ಮ ಅವನ ಮೇಲಾಫಿಸರನಂತಲ್ಲವೇ? ಅವನಿಗಿಷ್ಟು ಬುದ್ಧಿ ಹೇಳುವ ಹಾಗೆ ಬರೆಯುತ್ತೀಯಾ ?" ಎಂದು ಕೇಳಿದಳು. 'ಹೂಂ' ಎಂದು ಸುಮ್ಮನಾದ ಶಂಕರ. ಮಂಜುನಾಥ ಎಂಥವನೆನ್ನುವ ಅನುಭವ ಅವನಿಗೆ ಚೆನ್ನಾಗಿ ಆಗಿತ್ತು. ಹಿಂದಿನ ಬಾರಿ ಬಂದಾಗ ಗುರುತಿಲ್ಲದಂತೆ ನಟಿಸಿದ್ದು; ಆತ ತನಗೆ ವರಲಕ್ಷ್ಮಿಯ ಪತ್ರ ತಂದು ಕೊಟ್ಟ ಹುಡುಗನು ಹೌದೋ, ಅಲ್ಲವೋ—ಎಂಬ ಅನುಮಾನ ಮಾಡಿದ್ದು; ಮುಂದೆ ವಿಟ್ಠಲ ಊರಿಗೆ ಬಂದ ಮೇಲೆ ಆ ವಿಚಾರ ಸ್ಪಷ್ಟವಾದದ್ದು–ಇವೆಲ್ಲ ನೆನಪಾದುವು. ತನಗವನ ಮರವೆಯಾಗಿದ್ದರೂ, ಅವನಿಗೆ ಮರವೆಯಾಗುವ ಕಾರಣವಿಲ್ಲ. ಇದರಿಂದಾಗಿ ಅವನ ಮನಸ್ಸು ಮತ್ತಷ್ಟು ತೊಡಕಿಗೆ

ಗುರಿಯಾಯಿತು.

ಮನಸ್ಸಿಗೆ ಬೇಸರ ಬಂದಾಗ ಶರೀರ ಶ್ರಮಕ್ಕೆ ಇಳಿಯುತ್ತಾನೆ. ತೋಟ ವಿಸ್ತರಿಸುವುದು, ಬೀಜ ಬಿತ್ತುವುದು, ಬೆಳೆಕೊಯ್ಯುವುದು–ಇವುಗಳಲ್ಲೇ ಮುಳುಗಿಬಿಡುತ್ತಾನೆ. ಹಾಗಿದ್ದರೂ ಆ ಭೂಮಿ ತಂದೊಡ್ಡಿದ ಸಮಸ್ಯೆಗಳು ಇನ್ನೂ ಪೂರ್ತಿಯಾಗದೆ ಉಳಿದಿವೆ. ಹೊಳೆ ನೀರಿನ ಭವಿಷ್ಯದ ನಿರ್ಧಾರವಾಗಿಲ್ಲ. ತನ್ನನ್ನು ಹೊಂದಿಕೊಂಡಿರುವ ಕೃಷ್ಣನಿಗಾಗಿ ಏನು ಮಾಡಬೇಕು—ಎಂಬುದನ್ನು ಕಾಣಲಾರ. ತನ್ನನ್ನು ಆಶ್ರಯಿಸಿರುವ ಹಲವಾರು ಕೂಲಿಗಳಿಗೆ ಏನಾದರೊಂದು ಉಪವೃತ್ತಿ ಕಲ್ಪಿಸಬೇಕು—ಎಂದು ಯೋಚಿಸಿದರೆ, ಅದೂ ಏನೆಂದು ಇನ್ನೂ ನಿರ್ಧಾರವಾಗಿಲ್ಲ. ಇವೆಲ್ಲವುಗಳನ್ನು ಚರ್ಚಿಸುವುದಕ್ಕೆ ಗೆಳೆಯ ಸೀತಾರಾಮನಿಗೆ ಪತ್ರ ಬರೆಯುತ್ತಾನೆ. " ಇಂದು ಬರುತ್ತೇನೆ. ನಾಳೆ ಬರುತ್ತೇನೆ " ಎಂಬ ಬರಿಯ ಭರವಸೆಗಳಷ್ಟೇ ಬರುತ್ತವೆ. ಮನಸ್ಸು ಗೊತ್ತು ಗುರಿಯಿಲ್ಲದೆ ಹರಿಹಂಚಾಗಿ ಹೋಗಿರುವ ಈ ಕಾಲದಲ್ಲಿ, ಒಂದು ದಿನ ಸೀತಾರಾಮನ ಪತ್ರ ಬಂತೆಂದು ಅವನಿಗೆ ತುಂಬಾ ಸಂತೋಷ ಉಂಟಾಯಿತು. ಇನ್ನು ನಾಲ್ಕು ದಿನಗಳಲ್ಲಿ ಅವನು ಸಕುಟುಂಬಿಯಾಗಿ ಬರುವವನಿದ್ದಾನೆ. ಬರುವ ದಿನ, ಮುಹೂರ್ತ ತಿಳಿಸಿದ್ದಾನೆ.

ಸೀತಾರಾಮನ ಪತ್ರ ಬಂದ ಮೇಲೆ ಶಂಕರನ ಮನಸ್ಸು ಉಬ್ಬಿ ಅರಳಿತು. ಅವನೊಡನೆ ಹಲವಾರು ವಿಷಯಗಳನ್ನು ಚರ್ಚಿಸಬೇಕೆಂದು ಆಸೆಯಾಯಿತು. ಅದರಲ್ಲಿ ತನ್ನ ಸಾಂಸಾರಿಕ ಜೀವನದ ಕನಸೂ ಒಂದಾಗಿತ್ತು. ಇಂಥ ಯಾವ ವಿಚಾರಗಳಲ್ಲೂ ಕೃಷ್ಣ ಪ್ರಯೋಜನವಿಲ್ಲ. ವಯಸ್ಸು ಕಿರಿದು, ಅನುಭವ ಸಾಲದು. ನಿರ್ಧಾರ—ತೀರ್ಮಾನಗಳೆಂಬುವಿಲ್ಲ. ಶಂಕರ ಹಾಗೆಂದರೆ ಹಾಗೆ; ಹೀಗೆಂದರೆ ಹೀಗೆ. ಈಗ ಸೀತಾರಾಮ ಬರುವನೆಂದು ಸಂತೋಷ ಉಂಟಾದರೂ ಆತ ಸಮನಾದ ವಿರಾಮವಿರಿಸಿಕೊಂಡು ಬರುತ್ತಾನೆಯೋ, ಅಥವಾ ಅವಸರದ ಕುದುರೆ ಏರಿ ಬರುತ್ತಾನೆಯೋ ಯಾರಿಗೆ ಗೊತ್ತು ?

ಆತ ಬರಬೇಕಾದ ದಿನ ಬೆಳಗ್ಗೆ ಶಾಂತರಾಜ ಅರಿಗರ ಮನೆಗೆ ಹೋಗಿ, ಅವರ ಎತ್ತಿನ ಗಾಡಿಯನ್ನು ಕಟ್ಟಿಸಿಕೊಂಡು, ಮೋಟರು ಬರುವ ವೇಳೆಗೆ

ಸಮನಾಗಿ ಬೆಳ್ತಂಗಡಿಯನ್ನು ಸೇರಿದ. ಬಸ್ಸಿನಿಂದ ಇಳಿದ, ಸಕುಟುಂಬಿಯಾದ ಸೀತಾರಾಮನಿಗೆ ಸ್ವಾಗತ ಬಯಸಿದ. ಆತ, ಆತನ ಹೆಂಡತಿ, ಎರಡು ಕಿರಿಯ ಮಕ್ಕಳನ್ನು ಬಂಡಿಯಲ್ಲಿ ಕುಳ್ಳಿರಿಸಿಕೊಂಡು, ಊರಿನ ಕಡೆಗೆ ಹೊರಟ. ಎಷ್ಟೆಂದರೂ ಗಾಡಿಯ ಪಯಣ. ಮಳೆಗಾಲ ಕಳೆದಿತ್ತಷ್ಟೆ. ದಾರಿಯ ಹಳ್ಳ, ತಿಟ್ಟು ಹಾಗೆಯೇ ಉಳಿದಿತ್ತು, ಅಲ್ಲಲ್ಲಿ ಹರಿವ ತೋಡುಗಳು ಅಡ್ಡವಾಗುತ್ತಿದ್ದುವು. ಎತ್ತಿನ ಬಲಕ್ಕೆ ತಮ್ಮ ತೋಳ್ಬಲ ಸೇರಿಸಿ, ಊರನ್ನು ಸೇರುವಾಗ, ಮಧ್ಯಾಹ್ನದ ಹನ್ನೆರಡು ಗಂಟೆಯಾಗಿತ್ತು. ನಾಲ್ಕು ವರ್ಷಗಳ ಮೇಲೆ ಅವರಿಬ್ಬರ ಭೇಟಿಯಾಗುತ್ತಿದೆ. ಬಂದವರಿಗೆ ಹಣ್ಣು ಹಂಪಲನ್ನು ಕೊಟ್ಟು, ಮಾತು ಅಡುಗೆಯ ಕೆಲಸಗಳನ್ನು ಜತೆ ಜತೆಯಲ್ಲಿ ಸಾಗಿಸತೊಡಗಿದರು.

ಮಧ್ಯಾಹ್ನ ಊಟ ಮುಗಿಸಿ, ವಿಶ್ರಾಂತಿಯಾದ ಮೇಲೆ ಕೃಷ್ಣ ಅತ್ತಿಗೆ, ಅಣ್ಣನ ಮಕ್ಕಳೊಡನೆ ಆಟವಾಡುತ್ತ ಕುಳಿತ. ಶಂಕರ ತನ್ನ ಗೆಳೆಯನನ್ನು ಕರೆದುಕೊಂಡು ಅಬ್ಬಿಯ ಕಡೆಗೆ ಸಾಗಿದ. ಅಲ್ಲಿ ನಿರ್ಮಿಸಿದ ತೋಟ, ಕೊಳಗಳಿಂದ ತೊಡಗಿ ಕೆಳಗಿನ ತನಕ ಒಂದೊಂದೇ ಕೆಲಸವನ್ನು ತೋರಿಸುತ್ತ, ಹಳೆಯ ಕಥೆಗಳನ್ನೆಲ್ಲ ಹೇಳುತ್ತ ಸಂಜೆಯಾದುದು ಅವನ ಗಮನಕ್ಕೇ ಬರಲಿಲ್ಲ. ಅಷ್ಟೆಲ್ಲ ಕೆಲಸಗಳನ್ನು ಬರಿಯ ಕೆಲವೇ ವರ್ಷಗಳ ಅವಧಿಯಲ್ಲಿ ತನ್ನ ಗೆಳೆಯ ಸಾಧಿಸಿದ್ದಾನೆಂದು ಅವನು ನಂಬದಾದ. ಕೆಲಸದ ತಾಪತ್ರಯಗಳು, ಅದಕ್ಕೆ ಬಿದ್ದ ಖರ್ಚು ವೆಚ್ಚ, ಪ್ರತಿಯೊಂದನ್ನು ಕುರಿತು ಸೀತಾರಾಮ ಕೇಳುತ್ತಲಿದ್ದ.

ಖರ್ಚು ವೆಚ್ಚಗಳ ಕಥೆ ಹೇಳುತ್ತ—" ಬತ್ತದ ಕೃಷಿ ಮೊದಲನೆಯ ಎರಡು ವರ್ಷಗಳ ಕಾಲ ಲಾಭದಾಯಕವಾಗದಿದ್ದರೂ, ಈಗ ಪ್ರಯೋಜನಕಾರಿಯಾಗುತ್ತಿದೆ. ಆರೆಂಟು ವರ್ಷಗಳ ಬಳಿಕ ಚೆನ್ನಾದ ಲಾಭ. ಬರಿಯ ಜೀವನವನ್ನಷ್ಟೇ ನಡೆಸಿಕೊಂಡು ಹೋಗುವುದಾದರೆ ಖರ್ಚುವೆಚ್ಚ ಸಮವಾಗಬಹುದು. ಆದರೆ ಭೂಮಿಯನ್ನು ಸುಧಾರಿಸಬೇಕು. ತೀವ್ರವಾಗಿ ಆ ಸುಧಾರಣೆ ನಡೆಯಬೇಕು—ಎಂದರೆ, ಕಸವಿಸಿ ಮಾಡದೆ ಹಣ ಸುರಿಯಬೇಕಾಗುತ್ತದೆ " ಎಂಬುದನ್ನೆಲ್ಲ ವಿವರಿಸಿದ.

" ಇಷ್ಟು ದಿನ ಈ ಎಲ್ಲ ಖರ್ಚಿಗೂ ವಿಟ್ಠಲನೇ ಕೊಟ್ಟನೆನ್ನುತ್ತೀಯಾ?"

ಎಂದು ಕೇಳಿದ ಸೀತಾರಾಮ.

"ಅವನೇನೆ. ಹೊರಡುವಾಗ ಒಂದಿಷ್ಟು ನಗದು ಹಣ ಕೊಟ್ಟವನೂ ಅವನೇ. ಅಂದಿನಿಂದ ಮೊನ್ನೆ ಮೊನ್ನೆಯ ತನಕ ತಿಂಗಳಿಗೆ ಇನ್ನೂರು ರೂಪಾಯಿಗಳಂತೆ ಕಳುಹಿಸುತ್ತಲೇ ಬಂದಿದ್ದಾನೆ. ಒಂದು ತಿಂಗಳೂ ತಪ್ಪಿಸಿಲ್ಲ. ಅವನ ಬೆಂಬಲವಲ್ಲದಿದ್ದರೆ ಇಷ್ಟೆಲ್ಲ ಕೆಲಸಗಳಾಗಲು ಇಪ್ಪತ್ತು ವರ್ಷ ಬೇಕಾಗುತ್ತಿತ್ತೋ ಏನೋ. ಆದರೆ ಒಂದೆರಡು ತಿಂಗಳಿಂದ ಅವನಿಂದ ಏಕೋ ಕಾಗದವೆಂಬುದಿಲ್ಲ. ಈ ಮಳೆಗಾಲಕ್ಕೆ ಮೊದಲು ತಂದೆಯನ್ನು ಇಲ್ಲಿಗೆ ಕರೆದುಕೊಂಡು ಬಂದಿದ್ದ, ಅವನ ಹೆಂಡತಿಯೂ ಬಂದಿದ್ದಳು" ಎನ್ನುತ್ತ ಅವರು ಬಂದ ಸಂದರ್ಭವನ್ನು ಕುರಿತು ಹೇಳಿದ. "ಅಷ್ಟೆಲ್ಲ ಒತ್ತಾಯಿಸಿದರು. ಬರುವಾಗ ಹದಿನೈದು ದಿನ ತಡವಾಗಿ ಬಂದರು. ಇಲ್ಲದೆ ಹೋದರೆ ಅಜ್ಜಿಯನ್ನು ಕಾಣುವ ಯೋಗ ಅವರಿಗಿರುತ್ತಿತ್ತು" ಎಂದು ಹೇಳಿದ. ಕತ್ತಲಾಗತೊಡಗಿತು. ಅಜ್ಜಿಯ ನೆನಪಿನಿಂದ ಅವನ ಮನಸ್ಸೂ ಕತ್ತಲಾಗತೊಡಗಿತ್ತು. "ಅದೆಲ್ಲ ದೊಡ್ಡ ಚರಿತ್ರೆ—ಸೀತಾರಾಮ. ರಾತ್ರೆ ಹೇಳುತ್ತೇನೆ; ಅಜ್ಜಿ ನನ್ನಲ್ಲಿಗೆ ಬಂದರು. ಆ ಮುದುಕಿ ಹೊರಟು ಹೋದ ಮೇಲೆ ನನ್ನ ಮನಸ್ಸೇ ಒಂದು ತೆರನಾಗಿದೆ" ಎಂದು ಬೇಸರದ ದನಿಯಿಂದ ನುಡಿದು, ಅವನನ್ನು ಮನೆಗೆ ಕರೆದುಕೊಂಡು ಹೋದ.

ಬಂದಿದ್ದ ಗೆಳೆಯ ದಿನ ಎರಡು ದಿನಗಳನ್ನಲ್ಲ—ಮೂಡೋಡಿಯಲ್ಲಿ ಒಂದು ವಾರವನ್ನೇ ಕಳೆಯಬೇಕಾಯಿತು. ಗೆಳೆಯನ ಸಾಹಸವೂ, ಅವನ ಮತ್ತು ತಮ್ಮನ ಬಲವಂತವೂ, ಅವನ ಮನಸ್ಸಿನ ವಿಶ್ರಾಂತಿಯ ಬಯಕೆಗಳೂ—ಎಲ್ಲವೂ ಸೇರಿ ಈ ವಿರಾಮವನ್ನುಂಟು ಮಾಡಿದುವು.

ಸೀತಾರಾಮನ ಸೋದರ ಕೃಷ್ಣನ ವಿಚಾರದಲ್ಲೂ ಮಾತು ಬಂದಿತು.

"ಸೀತಾರಾಮ, ಅವನಿಗೆ ನನ್ನ ಮೇಲೆ ತುಂಬ ಅಭಿಮಾನವೂ ಇದೆ, ಇಷ್ಟವೂ ಇದೆ. ಇಷ್ಟೊಂದು ದಿನಗಳಿಂದ ಇದ್ದಾನಲ್ಲ, ಯಾವುದೇ ಸಂಗತಿಯಲ್ಲಿರಲಿ, ಹೇಳಿದ ಕೆಲಸಗಳನ್ನೆಲ್ಲ ಮಾಡಿಕೊಂಡು ಬಂದಿದ್ದಾನೆ. ಒಮ್ಮೆಯಾದರೂ ಹಾಗಲ್ಲ ಹೀಗೆ—ಎಂದವನಲ್ಲ. ಅವನ ಭವಿಷ್ಯದ ವಿಚಾರದಲ್ಲೂ ಒಂದು ನಿರ್ಧಾರಕ್ಕೆ ಬರಬೇಕು."

"ಶಂಕರ, ಕೃಷ್ಣ ಇಲ್ಲಿ ಇಷ್ಟು ದಿವಸ ಇದ್ದಾನು ಎಂದು ನನಗನಿಸಿರ

ಲಿಲ್ಲ. ಇದ್ದಷ್ಟು ದಿನ ನಿನ್ನ ಜತೆಯಲ್ಲಿ ಕೆಲಸ ಮಾಡಿ, ಅನುಭವ ಪಡೆಯ ಬೇಕೆಂಬುದೇ ನನ್ನ ಇಷ್ಟವಾಗಿತ್ತು. ನಮಗೂ ಊರಲ್ಲಿ ಸ್ವಲ್ಪ ಬರಡು ಜಮೀನಿದೆಯಲ್ಲ. ಇಲ್ಲಿನ ಅನುಭವದಿಂದ ನಾಳೆ ನಮ್ಮ ಜಾಗದಲ್ಲೇ ಕುಳಿತು ಏನಾದರಿಷ್ಟು ಸುಧಾರಣೆ ಮಾಡಬಹುದಲ್ಲ."

"ಕೃಷ್ಣ ಊರಿಗೆ ಹೋಗಲೇಬೇಕೇ?"

"ಇಲ್ಲೇ ಇರಬೇಕೆನ್ನುತ್ತೀಯಾ?"

"ಇದ್ದರೆ ತುಂಬ ಸಂತೋಷವೂ ಆಗುತ್ತಿತ್ತು, ಸಹಾಯವೂ ಆಗು ತ್ತಿತ್ತು. ನನ್ನ ಕೆಲಸವೂ ಪೂರ್ಣವಾಗಿಲ್ಲ. ನನ್ನ ಆಸೆಗಳಿಗೆ ಸಂಪೂರ್ಣ ರೂಪ ಬರಬೇಕಾದರೆ, ಇನ್ನೂ ಆರೆಂಟು ವರ್ಷಗಳು ಬೇಕು. ಬೇಸಾಯ ವಾಗದ ಭೂಮಿ ಇದೆ; ಮುಗಿಯದ ತೋಟವಿದೆ. ಅಲ್ಲದೆ ದನಕರುಗಳ ವಿಚಾರವನ್ನೇ ಮಾಡಿಲ್ಲ. ಉಪವೃತ್ತಿಯ ಎಣಿಕೆ ಹಾಕಿಲ್ಲ. ನನ್ನ ಕನಸೇನಿ ದ್ದರೂ-ಕೈಗೆ ಬರುವ ಹಣಕ್ಕೆ ಸಮನಾಗಿ ಕೆಲಸ ಸಾಗಿಸುತ್ತಿದ್ದೇನೆ. ನಿಮ್ಮ ಕೃಷ್ಣ ನನ್ನ ಜತೆಗಿದ್ದು, ನನ್ನ ಲಾಭನಷ್ಟಗಳಿಗೆ ಪಾಲುಗಾರನಾದರೂ ಸರಿಯೆ. ಅಥವಾ. ಇಲ್ಲೆಲ್ಲಾದರೂ ಸಮೀಪ ಇನ್ನೊಂದು ಭೂಮಿ ಮಾಡಿ ಕೊಂಡರೂ ಸರಿಯೆ—ಒಬ್ಬರು ಇನ್ನೊಬ್ಬರಿಗೆ ನೆರವು ಕೊಡುತ್ತ ಬದುಕ ಬಹುದು. ಮೊದಮೊದಲು ನಾನು ನಿನ್ನ ಆಸೆಯನ್ನು ಹಿಡಿದಿದ್ದೆ. ಅದಂತು ವ್ಯರ್ಥವಲ್ಲ."

"ಶಂಕರ, ಮೊದಲು ಮೊದಲು ನಿನ್ನ ಹಂಚಿಕೆಯನ್ನು ಕೇಳಿದಾಗ ಯಾವೊಂದು ನಂಬಿಕೆಯೂ ಬರಲಿಲ್ಲ. ಈಗ ಇದನ್ನೆಲ್ಲ ಕಂಡಮೇಲೆ ನಂಬಿಕೆ ಏನೋ ಉಂಟಾಗಿದೆ. ಆದರೆ ನಾನು ಒಬ್ಬಂಟಿಗನಾಗಿಲ್ಲವಷ್ಟೆ."

"ನಿಜ—ಹೆಂಡತಿ ಇದ್ದಾಳೆ; ಮಕ್ಕಳಿದ್ದಾರೆ. ಅಲ್ಲವೆ? ಅದರಿಂದ ತೊಡಕೇನು?"

"ತೊಡಕಲ್ಲ. ನನ್ನ ಯಜಮಾನಿಯ ಮನಸ್ಸು ಇಂಥದಕ್ಕೆ ಒಲಿಯ ಲಾರದು. ಒಮ್ಮೆ ಪರಿಹಾಸ್ಯಕ್ಕಾಗಿ ಅವಳೊಡನೆ ಮಾತನಾಡಿದಾಗ, ಅವ ಳೆಂದಳು 'ಇವೆಲ್ಲ ನೋಡುವುದಕ್ಕೆ ಚಂದ. ಇರುವುದಕ್ಕಲ್ಲ' ಎಂದು."

"ಓ, ಹಾಗೋ, ಆದರೆ ಹಿಂದೆ ನೀನೇ ಅಂದ ನೆನಪುಂಟೆ?—ನಾನು ಮದುವೆಯಾಗುವುದು ಹಳ್ಳಿಯ ಹುಡುಗಿಯನ್ನು. ಬೆನ್ನಿಗೆ ಅಂಟಿ ಬರು

ತ್ತಾಳೆ ಹೋದಲ್ಲಿಗೆ—ಎಂದ ಮಾತು ನೆನಪುಂಟೇ ?"

ಸೀತಾರಾಮ ನಕ್ಕ. "ನೀನು ಮರತೇ ಇಲ್ಲ ಅಲ್ಲವೇ-ಆ ಮಾತನ್ನು ? ನನಗಂತು ಆ ಮಾತು ಪ್ರತಿಗಳಿಗೆಗೂ ನೆನಪಾಗುತ್ತದೆ. ನಿನ್ನ ಮೊದ ಮೊದ ಲಿನ ಪತ್ರಗಳನ್ನು ನೋಡಿ, ಇಲ್ಲಿಗೆ ಬರುವ ಆಸೆಯಾಗಿತ್ತು, ಬಂದು ನಿಲ್ಲುವ ಆಸೆಯಾಗಿತ್ತು. ಆದರೆ ನನ್ನ ಹೆಂಡತಿಯ ಅಭಿರುಚಿಯೇ ಬೇರೆ ಎಂಬುದನ್ನು ಈ ಅವಧಿಯಲ್ಲಿ ಮನಗಂಡಿದ್ದೇನೆ. ಅವಳು ಇಂಥ ಜೀವನಕ್ಕೆ ಹೇಳಿಸಿದ ವ್ಯಕ್ತಿಯಲ್ಲ. ಒಮ್ಮೆ ನಾವು ಲಘು ಜೀವನಕ್ಕೆ ಇಳಿದೆವೆಂದರೆ ಆ ಅಭ್ಯಾಸ ಬಿಡುವಂತಿಲ್ಲ. ನಿನ್ನ ವರಲಕ್ಷ್ಮಿ ದಿಲ್ಲಿಯವಳಾದರೂ ಸರಿಯೆ, ನನ್ನವಳು ಕುಂದಾಪುರದವಳಾದರೂ ಸರಿಯೆ. ಮನಸ್ಸು ಇಂಥ ಶ್ರಮಕ್ಕೆ ಒಲಿಯ ಲಾರದು. ಹಾಗಾಗಿ ನನ್ನ ಇಷ್ಟವೆಲ್ಲ ನಿರಾಶೆಯದು. ಅವಳ ಮನಸ್ಸನ್ನು ಮುರಿದು ನನ್ನ ಹಟವನ್ನು ಸಾಧಿಸುವುದು ಕಷ್ಟವಲ್ಲ. ಆದರೆ ಅದರಿಂದ ಇಬ್ಬರಿಗೂ ಸುಖವಿಲ್ಲ" ಎಂದು ಮಾತನಾಡುವಾಗ, ಸ್ವಾಭಾವಿಕವಾಗಿ ಮಾತಿನ ಸರಣಿ ವರಲಕ್ಷ್ಮಿಯ ಕಡೆಗೆ ಹರಿಯಿತು. ಶಂಕರನ ಲಗ್ನದ ವಿಚಾರದಲ್ಲೂ ಅದು ಹರಿಯಿತು. "ವರಲಕ್ಷ್ಮಿಯ ಕಾಗದವೇನಾದರೂ ಬಂದಿತ್ತೇ ?" ಎಂದು ಕೇಳಿದ. ಅನಂತರ "ಏನು, ನೀನು ಲಗ್ನವಾಗುವ ವಿಚಾರವನ್ನೇ ಮರೆತಿದ್ದೀಯಾ ?" ಎಂದ. ಶಂಕರ ಆ ವಿಷಯದಲ್ಲಿ ತನಗೆ ತೋರಿದ ಸಂಗತಿಯನ್ನೆಲ್ಲ ತಿಳಿಸಿದ. ಅದರ ಜತೆಗೆ ಉಭಯತರಿಗೂ ಪರಿಚಿತರಾದ ರಂಗರಾಯರ ಸ್ವಭಾವವನ್ನು ಕುರಿತೂ ಹೇಳಿದ. ಆ ಕಾರಣ ದಿಂದಾಗಿ-ಮದುವೆ ಆಗುವ ತನಕ ಆದೀತು ಎಂಬ ಧೈರ್ಯವೂ ಇಲ್ಲವೆಂಬ ಅನುಮಾನವನ್ನೂ ಸೂಚಿಸಿದ.

ಅಲ್ಲಿಂದ ಮಾತು ತಿರುಗಿ ಕೃಷ್ಣನ ಕಡೆಗೆ ಹರಿಯಿತು. ಸೀತಾರಾಮ ಯೋಚಿಸಿ ನುಡಿದ. "ಅವನು ದೊಡ್ಡವನಾಗಿದ್ದಾನೆ. ಅವನೇನೆ ಭವಿಷ್ಯ ವನ್ನು ನಿರ್ಧರಿಸಬೇಕು. ನಾಳೆ ಹೋಗುವಾಗ ಅವನನ್ನು ಜತೆಗೆ ಕರೆದು ಕೊಂಡು ಹೋಗುತ್ತೇನೆ. ತಂದೆಯನ್ನು ವಿಚಾರಿಸಿ, ಏನಾದರೊಂದು ನಿರ್ಧಾರ ಮಾಡುವ."

"ಹಾಗೆಯೇ ಮಾಡಬಹುದು, ಆದರೆ ನಾನು ಆ ಪ್ರಶ್ನೆಯನ್ನು ಹೇಳು ತ್ತಿರುವುದು ಒಂದು ಅನುಕೂಲ ಸಂದರ್ಭ ಬಂದಿದೆ ಎಂಬ ಕಾರಣದಿಂದ.

ನಮಗೆ ಮೊದಲು ಭೇಟಿಯಾದ ಶಾಂತಿರಾಜರ ನೆನಪಿದೆಯಲ್ಲ; ಅವರು 'ತಮ್ಮೊಂದು ಜಮೀನು ಮಾರುವುದಿದೆ' ಎಂದು ಹೇಳುತ್ತಿದ್ದಾರೆ. ಈ ಕಡೆ ಭೂಮಿಗೆ ಅಡಿಮೇಲೆ ಬಿದ್ದುಕೊಳ್ಳುವ ಗಿರಾಕಿಗಳಿಲ್ಲ. ಅವರ ಒತ್ತಾಯಕ್ಕೆ ನಾನೂ ಜಮೀನು ನೋಡುವುದಕ್ಕೆ ಹೋಗಿದ್ದೇನೆ. ಇಲ್ಲಿಗೂ ಬೆಳ್ತಂಗಡಿಗೂ ಇರುವ ಒಳದಾರಿಯಲ್ಲಿದೆ. ಆ ಭೂಮಿ ಎರಡು ಮೂರಾವರ್ತಿ ನೋಡಿ ಬಂದಿದ್ದೇನೆ. ಆ ಕಡೆ ಈ ಕಡೆ ಗುಡ್ಡಗಳು. ನಡುವೆ ಒಂದು ಕಣಿವೆಯಹಾಗಿದೆ. ಅರಿಗರ ಮನಸ್ಸಿನಲ್ಲಿ ಅದು ನಿಷ್ಪ್ರಯೋಜಕವಾದ ಭೂಮಿ; ಬತ್ತಿದ ಎಮ್ಮೆ—ಎಂದಿದೆ. ನನಗೆ ಅದರ ನಾಳಿನ ಭವಿಷ್ಯ ಒಳ್ಳೆಯದಿದ್ದೀತು ಎನಿಸುತ್ತದೆ. ಮೂಡೋಡಿಗಿಂತ ವಿಪರೀತವಾದ ಪರಿಸ್ಥಿತಿ ಅಲ್ಲಿನದು. ಇಲ್ಲಿ ಮೊದಲು ನನಗಿದಿರಾದ ಪ್ರಶ್ನೆ ಜವುಗು ನೆಲ, ಬೆಳೆದ ಕಾಡು. ಅಲ್ಲಿಯೂ ಕಾಡಿತ್ತು. ಅರಿಗರು ಹಣದ ಆಸೆಗೆ ಸ್ಥಳವನ್ನೂ ಕಾಡನ್ನೂ ಚೆನ್ನಾಗಿ ನೋಡದೆ, ಸಾವಿರ ರೂಪಾಯಿಗಳ ಆಸೆಯಿಂದ ಮರಮಟ್ಟುಗಳನ್ನು ಕೊಟ್ಟರು. ಅದನ್ನು ಕೊಂಡವ ಅದನ್ನು ನೆಲಸಮ ಮಾಡಿ, ಬೇಕಾದಷ್ಟು ಹಣ ಸಂಪಾದನೆ ಮಾಡಿದ, ಬಹು ಹಿಂದೊಮ್ಮೆ ಅಂದರೆ ನಾವು ಈ ಜಾಗಕ್ಕೆ ಬಂದ ವರ್ಷ ಅದರ ನಡುವಣದಲ್ಲಿರುವ ಕಣಿವೆಯಲ್ಲಿ ಬೇಸಗೆಯಲ್ಲೂ ನೀರು ಹರಿಯುತ್ತಿದ್ದುದನ್ನು ಕಂಡಿದ್ದೆ. ಈಗ ಅದು ಶುದ್ಧ ಮರುಭೂಮಿ. ಸಾಲುದುದಕ್ಕೆ ಸುತ್ತ ಪಾಗಾರವಿಲ್ಲದೆ ದನಕರುಗಳು ಮೆಂದು ನೆಲದ ಕೆಮ್ಮಣ್ಣು ಮಾತ್ರ ಎಲ್ಲೆಲ್ಲೂ ಕಾಣಿಸುತ್ತದೆ. ಅಲ್ಲಿದ್ದ ನೀರಿನ ಒರತೆ ಸುದ್ದಿಯಿಲ್ಲದೆ ಅಡಗಿದೆ. ಅರಿಗರಿಗೆ ಅದನ್ನು ಕೊಟ್ಟರೆ ಸಾಕಾಗಿದೆ. ನನಗೆನಿಸುತ್ತದೆ ಸುತ್ತ ಪಾಗಾರ ಹಾಕಿಸಿದರೆ ಗಿಡಗಳು ತಿರುಗಿ ಹುಟ್ಟಿ, ಮೊದಲಿನ ಒರತೆ ಉಂಟಾದೀತೆಂದು." ಆ ವಿಚಾರದಲ್ಲಿ ಮಾತನಾಡಿ, ಮನ ತಣಿಯದೆ, ಅದೇ ದಿನ ಗೆಳೆಯನನ್ನು ಕರೆದುಕೊಂಡು ಅಲ್ಲಿಗೂ ಹೋಗಿಬಂದ.

ಒಳದಾರಿಯಲ್ಲಿ ಅವರ ಮನೆಯಿಂದ ಅಲ್ಲಿಗೆ ಒಂದು ಹರದಾರಿ ಮಾತ್ರ. ಬಂಗಾಡಿಯಂತೆ ಅದು ಮೂಡಣ ಪ್ರಾಂತವಾದರೂ ಅಲ್ಲಿನ ನೋಟವೇ ಬೇರೆ. ಸುತ್ತಲೆಲ್ಲ ಇಳಿಜಾರಾಗಿ ಹರಡಿಕೊಂಡಿರುವ ಗುಡ್ಡಗಳ ಮಗ್ಗುಲು. ಬಹು ದೂರದಲ್ಲಿ ಸರಕಾರದವರು ಕಾದಿರಿಸಿದ ಕಾಡು. ಆಚೀ

ಚಿನ ಹಳ್ಳಿಯವರಿಗೆ ಜಾನುವಾರುಗಳನ್ನು ಅಟ್ಟುವುದಕ್ಕೆ ಈ ಗುಡ್ಡಗಾಡು ಉತ್ತಮ ಸ್ಥಳವಾಗಿತ್ತು. ದನಕರುಗಳ ಓಡಾಟದಿಂದ ಗುಡ್ಡದಲ್ಲಿ ಹಸುರಿನ ಛಾಯೆ ಕಡಿಮೆಯಾಗಿತ್ತು. ಅಲ್ಲಲ್ಲಿ ಬೆಳೆಯುತ್ತಿರುವ ಸೊಪ್ಪು ಸದೆಗಳಿಗೆ ಆಚೀಚಿನ ರೈತರು ಕತ್ತಿ ಹಾಕಿ ಕೊಂಡುಹೋಗುತ್ತಾರೆ. ಈ ಪ್ರದೇಶದ ನಟ್ಟನಡುವೆ ಶಾಂತಿರಾಜರಿಗೆ ಸೇರಿದ ನಾಲ್ವತ್ತು, ಐವತ್ತು ಎಕ್ರೆ ಜಮೀನಿದೆ. ಆ ಜಮೀನಿನ ತಳಕ್ಕೆ ಹೋದರೆ, ಮೂರು ನಾಲ್ಕು ಎಕ್ರೆ ಹೊಲದಂತೆ ಹರಡಿಬಿದ್ದ ನೆಲವಿದೆ. ಒಂದು ಕಾಲದಲ್ಲಿ ಸಾಗುವಳಿಯಾಗಿರಲೂಬಹುದು, ಮುರಿದು ಬಿದ್ದ ಒಂದು ಒಕ್ಕಲು ಮನೆಯ ಗುರುತಿದೆ. ಆ ಹೊಲಗಳ ಮೇಲ್ಗಡೆಯೆ ಅರಿಗರು ಮಾರಿದಂಥ ಕಾಡಿದೆ. ಈಗ ಅಲ್ಲಿ ಕಾಡಿನ ಬದಲು ಸಾಮಾನ್ಯ ಕುರುಚಲು ಗಿಡಗಳಿವೆ. ನಿತ್ಯ, ನಿತ್ಯ ರೈತರು ಬಂದು ಕತ್ತಿ ಹಾಕಿ ಸೊಪ್ಪನ್ನು ಅಲ್ಲಿಂದಲೇ ಒಯ್ಯುತ್ತಿದ್ದಾರೆ. ಆದರೆ ಅರಿಗರ ಜಾಗದಿಂದ ನಟ್ಟನಡುವೆ ನಿಂತು ನೋಡಿದರೆ, ನಾಲ್ಕು ಸುತ್ತಲೂ ನೂರಾರು ಎಕ್ರೆ ಭೂಮಿ ಯಜಮಾನರಿಲ್ಲದಂತೆ, ಅನಾಥವಾಗಿ ಸಸ್ಯಶೂನ್ಯವಾಗಿ ತೋರುತ್ತದೆ,

" ಇಷ್ಟೆಲ್ಲ ಬಟ್ಟ ಬಯಲೂ ಅರಿಗರದ್ದೇನು" ಎಂದ ಸೀತಾರಾಮು.

"ನಾವು ನಿಂತ ಜಮೀನು, ಅದರ ಸುತ್ತಮುತ್ತಲಿನ ನಾಲ್ವತ್ತು ಐವತ್ತು ಎಕ್ರೆ ಅವರದ್ದಿರಬೇಕು. ಉಳಿದದ್ದೆಲ್ಲ ಸರಕಾರಕ್ಕೆ ಸೇರಿದ್ದು. ಗೋಚರಾವಿಗಾಗಿ ಬಿಟ್ಟಿರಬೇಕು. ಅಥವಾ ಸಮೀಪದ ರೈತರಿಗೆ ಅದರಲ್ಲಿ ಕುಮುಕಿಯ ಹಕ್ಕು ಸೇರಿರಲೂಬಹುದು. ಅಂತು ಯಾರೊಬ್ಬರ ಆಸೆಗೂ ಸಿಲುಕದಂಥ ಜಾಗವಾಗಿ ಉಳಿದಿದೆ ಇದು. ಅರಿಗರ ಮನಸ್ಸಿನಲ್ಲಿ ಇದಕ್ಕೆ ತೆರುವ ಕಂದಾಯ ವ್ಯರ್ಥ–ಎಂಬ ಭಾವನೆಯಾಗಿದೆ. ಕೃಷ್ಣನ ಸಲುವಾಗಿ ಇದನ್ನು ಮಾಡಿಕೊಂಡರೇನು–ಎಂಬ ಆಸೆ ನನಗೆ. ಇಲ್ಲಂತು ಮಲೇರಿಯದ ಪೀಡೆ ಇಲ್ಲವೇ ಇಲ್ಲ. ಕಾಡು ಮೃಗಗಳಿಗೂ ದೂರವಾಗಿರುವ ತಾವಿದು" ಎಂದು ತನ್ನ ಮನಸ್ಸಿನ ಹಂಚಿಕೆಗಳನ್ನು ಅವನ ಮುಂದೆ ಒಂದೊಂದಾಗಿ ವಿವರಿಸಿದ. ಅಲ್ಲಿ ಏನೇನು ಮಾಡಬಹುದು, ಏನು ಮಾಡಲು ಸಾಧ್ಯ. ಅಲ್ಲಿನ ಪ್ರಯೋಗಗಳಿಗೆ ಎಷ್ಟೆಲ್ಲ ವೆಚ್ಚ ತಗಲೀತು–ಎಂಬುದನ್ನೆಲ್ಲ ತರ್ಕಿಸಿದ. ಸೀತಾರಾಮನ ಮನಸ್ಸಿನಲ್ಲಿ 'ಯಾಕಾಗಬಾರದು' ಎಂಬ ಆಸೆ ಉಂಟಾ

ಯಿತು. ತನ್ನ ತಂದೆಯ ಭೂಮಿ ಅಣ್ಣತಮ್ಮಂದಿರಲ್ಲಿ ಹಂಚಿ ಹೋಗುವಾಗ ಬರುವ ಪಾಲು ಸಣ್ಣ ತುಣುಕು. ನಾಳೆ ಕೃಷ್ಣ ಸಂಸಾರಿಯಾದ ಬಳಿಕ ಅಷ್ಟು ಕಡಿಮೆ ಜಮೀನಿನಿಂದ ಜೀವನಮಾಡುವುದು ಸುಲಭವಲ್ಲ. ಬದಲು —ಶಂಕರನ ಜತೆಯಲ್ಲಿದ್ದಾಗಲೇ ಅವನ ನೆರವಿನಿಂದ ಈ ಜಮೀನನ್ನು ಅಭಿವೃದ್ಧಿಗೆ ತಂದುದಾದರೆ ಸ್ವತಂತ್ರ ಜೀವನಕ್ಕೆ ಒಂದು ದಾರಿಯಾದೀತು— ಎಂದು ತೋರಿತು. ಅಲ್ಲದೆ ತಮ್ಮನ ಈ ಪ್ರಯತ್ನದಲ್ಲಿ ತಾನೂ ಸ್ವಲ್ಪ ಸ್ವಲ್ಪ ಆರ್ಥಿಕ ಸಹಾಯವನ್ನು ಮಾಡಬಹುದೆನಿಸಿತು. ಆತನೆಂದ "ಆಗಲಿ ಶಂಕರ, ನಮ್ಮ ಎಳಚಿತ್ತಾಯರನ್ನು ಹಿಡಿದು ಆರಿಗರನ್ನು ಮಾತನಾಡಿಸುವ ನ್ಯಾಯವಾದ ಬೆಲೆಗೋ, ಅಥವಾ ಮೂಲಗೇಣಿಗೋ ದೊರೆತರೆ, ಧೈರ್ಯವಾಗಿ ಮುಂದುವರಿಯಬಹುದು" ಎಂದು ಸಮ್ಮತಿಯನ್ನು ಕೊಟ್ಟ. ಸ್ಥಳವನ್ನು ನೋಡಿ ಇಬ್ಬರೂ ಮನೆಗೆ ಮರಳಿದರು.

ಸೀತಾರಾಮ ಅಲ್ಲಿದ್ದಷ್ಟು ಕಾಲ ಗೆಳೆಯನೊಡನೆ ಹಾಸ್ಯ ಪರಿಹಾಸ್ಯದಲ್ಲಿದ್ದ. ಬದಲು ಶಂಕರ ಚರ್ಚಿಸುತ್ತಿದ್ದ ವಿಷಯಗಳೆಲ್ಲವೂ ಕೃಷಿಗೆ ಸಂಬಂಧಪಟ್ಟವು. ಬೇರೊಂದು ಮಾತೇ ಅವನಿಗೆ ತಿಳಿಯದು. ನೀರಾವರಿಯನ್ನು ಕುರಿತು ಮಾತು ಬಂದಿತು. ಈಗಿನ ದಿನಗಳಲ್ಲಿ ಆ ಹೊಳೆಗೆ ನೀರ್ಕಟ್ಟೆಯನ್ನು ಹಾಕುವ ಪ್ರಯತ್ನ ಬೇಡವೆಂದೂ ಬದಲು ಒಂದು ಎಂಜಿನ್ನು ಹೂಡಿ. ಬೇಕಷ್ಟು ನೀರು ಎತ್ತಬಹುದೆಂದೂ, ಉಳಿದ ವೇಳೆ ಅದರಿಂದಲೇ ಏನಾದರೂ ಕೈಗಾರಿಕೆ ನಡೆಸಬಹುದೆಂದೂ, ಸೀತಾರಾಮನು ಸೂಚಿಸಿದ. ವಿದ್ಯುತ್ ಯೋಜನೆಯನ್ನು ಬೆಳೆಯಿಸುವ ವಿಚಾರದಲ್ಲೂ ಕಾಲವು ಪ್ರತಿಕೂಲವಾಗಿತ್ತು. ಅಲ್ಲದೆ ನಾಳೆ ಯುದ್ಧ ಮುಗಿಯಿತೆಂದರೆ, ಎಂಥ ದಿನಗಳು ಬಂದಾವು, ಯಾವ ಉದ್ಯಮ ನಿಂತೀತು. ಯಾವುದು ನಿಲ್ಲದು—ಎಂದು ಹೇಳುವುದಕ್ಕೂ ದಾರಿ ಕಾಣುತ್ತಿರಲಿಲ್ಲ. ಹೀಗೆ ಆ ಇಬ್ಬರು ಗೆಳೆಯರಲ್ಲಿ ಭವಿಷ್ಯದ ಹಲವು ಚರ್ಚೆಗಳು ನಡೆದುವು. ಸೀತಾರಾಮ ಬಳಿಕ ತನ್ನ ಊರಿನ ದಾರಿಯನ್ನು ಹಿಡಿದ. ಜತೆಗೆ ತಮ್ಮ ಕೃಷ್ಣನನ್ನೂ ಒಯ್ದುದರಿಂದ ಕೆಲವು ದಿನ ಕಾಲ ಶಂಕರ ಒಂಟಿಯಾಗಿರಬೇಕಾಯಿತು. ಏಕಾಂಗಿಯಾಗಿದ್ದಾಗಲೇ ಇಲ್ಲದ ಚಿಂತೆ ಕವಿಯುವುದು. ಇಂದು ಕೈತುಂಬ ಕೆಲಸ ಆತನಿಗಿದ್ದರೂ ಮನಸ್ಸಿನಲ್ಲಿ ಚಿಂತೆಗಳು ತುಂಬಿ ಕೆಲಸ ಮಾಡಲು ಬೇಸರ ಬರುತ್ತಿದೆ,

ಸಾಲದುದಕ್ಕೆ ಆ ಎರಡು ತಿಂಗಳಿನಿಂದಲೂ ತಮ್ಮ ವಿಟ್ಠಲನಿಂದ ಪತ್ರವೂ ಬಂದಿರಲಿಲ್ಲ, ಹಣವೂ ಬಂದಿರಲಿಲ್ಲ. ವಿಟ್ಠಲನಿದ್ದ ಯುದ್ಧಕ್ಷೇತ್ರದಲ್ಲಿ ಯುದ್ಧ ಮುಗಿದಿದೆ. ಇನ್ನು ಅವನಿಂದ ವಿರಾಮವಾಗಿ ಪತ್ರ ಬರಬಹುದು. ಹಿಂದೆ ಅವನಿಂದ ಬರುವ ಹಣ ನಿಯಮಿತ ಕಾಲಕ್ಕೆ ತಪ್ಪದೆ ಬರುತ್ತಿತ್ತು. ಈಗ ಅದು ಬರುತ್ತಲಿಲ್ಲ. ಇತ್ತ ಹಣವಿಲ್ಲದೆ ಕೈಯೂ ಕಟ್ಟುತ್ತಿತ್ತು. ಉಪಾಯಗಾಣದೆ ತಂದೆಗೊಂದು ಪತ್ರ ಬರೆದ. ಅದರಲ್ಲಿ ತನ್ನ ಕ್ಷೇಮ ಸಮಾಚಾರಗಳನ್ನು ತಿಳಿಸಿ 'ತಮ್ಮನಿಂದ ಪತ್ರಗಳಿಲ್ಲ. ಅಲ್ಲಿಂದೇನಾದರೂ ಸುದ್ದಿ ಬಂದಿದೆಯೇ?' ಎಂದು ವಿಚಾರಿಸಿ ಪತ್ರ ಬರೆದ. ಪತ್ರಕ್ಕೆ ಉತ್ತರ ಬರುವ ತನಕ ಅವನ ಜೀವಕ್ಕೆ ಯಾವ ಸಮಾಧಾನವೂ ಇರಲಿಲ್ಲ.

ಅಷ್ಟರಲ್ಲಿ ಅವನ ಬಿಡುವನ್ನು ತುಂಬುವುದಕ್ಕೆ ಅನಿವಾರ್ಯದ ಒಂದು ಕೆಲಸ ದೊರೆತೇ ದೊರೆಯಿತು. ಮುದಿಯ ಮುತ್ತಯ್ಯ ಗೌಡ ಹಾಸುಗೆ ಹಿಡಿದ, ಅವನ ಮುಖ ಬಿಳುಪೇರುತ್ತ ಬಂದಿತು. ಮೈಯಲ್ಲಿ ನೀರು ತುಂಬತೊಡಗಿತು. ಅದನ್ನು ಕಂಡು ಶಂಕರನಿಗೆ ಹೇಳಲಾರದ ಗಾಬರಿ ಉಂಟಾಯಿತು. ಆತ ಹಾಸುಗೆ ಹಿಡಿದಂದಿನಿಂದ ಶಂಕರನಿಗೆ ಮುತ್ತಯ್ಯನ ಮನೆಯ ಕಾವಲು. ಊರ ಮದ್ದುಗಳನ್ನು ತಂದುದಾಯಿತು. ಮನಸ್ಸಮಾಧಾನವಾಗದುದಕ್ಕೆ ಬೆಳ್ತಂಗಡಿಗೆ ಓಡಿ ಅಲ್ಲಿನ ವೈದ್ಯರನ್ನು ಕೇಳಿದುದಾಯಿತು. ರೋಗಿಯ ಕಾಯಿಲೆಯ ಚಿಹ್ನೆಗಳನ್ನೆಲ್ಲ ಬಣ್ಣಿಸಿದಾಗ "ಅವನಿಗೆಷ್ಟು ವಯಸ್ಸು" ಎಂದು ಕೇಳಿದರು ವೈದ್ಯರು.

"ನೂರಕ್ಕೆ ಸಮೀಪ."

"ನೂರೇ? ಇನ್ನೇತಕ್ಕೆ ಚಿಕಿತ್ಸೆ! ಆ ವಯಸ್ಸಿನ ತನಕ ಬದುಕಿದವರನ್ನೇ ನಾನು ಕಾಣೆ. ಬದುಕಿದರೂ 'ಡ್ರೊಪ್ಸಿ' ಬಂದ ಮೇಲೆ ಉಳಿಯುವ ಭರವಸೆ ಇಲ್ಲ."

"ಡ್ರೊಪ್ಸಿಯೇ ಅದು?"

"ನೀವು ಹೇಳುವುದರ ಮೇಲಿಂದ ಹಾಗಿರಬೇಕೆನಿಸುತ್ತದೆ ಚಿಕಿತ್ಸೆ ಈ ಪ್ರಾಯದಲ್ಲಿ ಫಲಕಾರಿಯಾಗಲಾರದು."

"ನೀವು ಬಂದು ಒಮ್ಮೆ ನೋಡಿ ಹೋಗಿ."

"ಎಲ್ಲಿ, ಬಂಗಾಡಿಯಲ್ಲಿದ್ದಾನೆಯೇ?"

" ಹೌದು."

" ನಿಮ್ಮ ಸಮಾಧಾನಕ್ಕಾಗಿ ಬರಬೇಕಷ್ಟೆ. ಬೇಡ, ಮದ್ದನ್ನು ಕೊಂಡುಹೋಗಿ. ಪ್ರಯೋಜನ ಕಂಡರೆ ಹೇಳಿ, ಬರುತ್ತೇನೆ. ಬರಿದೆ ಎಂಟು ಮೈಲು ದೂರ ನಡೆಯುವುದೇತಕ್ಕೆ ? "

" ಗಾಡಿ ಮಾಡಿಸಲೇ ? "

" ಬೇಡ "

ಅಂತು ಶಂಕರನ ಆಗ್ರಹಕ್ಕಾಗಿ ಅವರು ಹೊರಡಬೇಕಾಯಿತು. ರೋಗಿಯನ್ನಲ್ಲದೆ ಹೋದರೂ ಶಂಕರನ ಪ್ರಯೋಗಗಳನ್ನಾದರೂ ನೋಡಿ ಕೊಂಡು ಬರಬಹುದಲ್ಲ—ಎಂದೆಣಿಸಿ ಹೊರಟರು. ಗಾಡಿಯ ವೈಭವ ಬೇಡವೆಂದು ನಡೆದೇ ಹೋದರು. ಶಂಕರ ಅವರಿಗೆ ಹೊಸಬನಲ್ಲ. ಅವನ ಹೆಸರು ನಾಲ್ಕು ಜನರ ಬಾಯಲ್ಲಿ ಇಂದು ಕೇಳಿಸುತ್ತಲಿದೆ. ಹೀಗಾಗಿ ದಾರಿ ಯುದ್ದಕ್ಕೂ ವೈದ್ಯರು ಶಂಕರನ ಕೃಷಿಯ ವೃತ್ತಾಂತವನ್ನೆಲ್ಲ ಕೇಳಿ ತಿಳಿಯು ತ್ತಿದ್ದರು. ಬಂಗಾಡಿ ಸಮೀಪಿಸಿತು. ಮೂಡೋಡಿಗೂ ಬಂದರು. ಮುತ್ತಯ್ಯ ಗೌಡನ ದರ್ಶನವಾಯಿತು. ಗೌಡನು ಮಲಗಿದಲ್ಲಿಂದಲೇ " ಧನಿಯರೇ, ಇವರು ಯಾರು ?" ಎಂದು ಕೇಳಿದ.

" ಡಾಕ್ಟರರು, ನಿನ್ನನ್ನು ನೋಡಲು ಕರೆದು ತಂದೆ."

" ಅಯ್ಯೋ, ಬೇಡವಿತ್ತು. ನೀವು ಹೋದುದೇ ನನಗೆ ಗೊತ್ತಿರ ಲಿಲ್ಲ. ನನಗಿನ್ನು ಬದುಕುವ ಆಸೆಯೇ? ಈ ಹಳೆಯ ಕೊರಡು ತೇದು ತೇದು ನುಣ್ಣಗಾಗಿದೆ. ಡಾಕ್ಟು ಬಂದೇನು ಮಾಡುತ್ತಾರೆ?"

ನೀನು ಸುಮ್ಮನಿರು. ಅವರು ಪರೀಕ್ಷೆ ಮಾಡಲಿ. ನಿನಗೆ ಕಷ್ಟವಾ ದರೂ ನನಗಾಗಿ ಸುಮ್ಮನಿರು. ಅವರು ಕೊಡುವ ಮದ್ದನ್ನು ತೆಗೆದುಕೊ. ಗುಣವಾದೀತು."

ಗೌಡ ನಕ್ಕನು. " ಅಯ್ಯಾ, ನೀವೆಂದ ಹಾಗೆ ಮಾಡುತ್ತೇನೆ. ನಿಮ್ಮ ಹಿರಿಯರು ತೋರಿದ ಕೃಪೆಯನ್ನು ಮರೆತಿರಲಿಲ್ಲ. ನಿಮ್ಮ ದಯೆಯನ್ನೂ ಮರೆಯುವಂತಿಲ್ಲ. ಆದರೆ ನಾನಿನ್ನು ಬದುಕಿ ಮಾಡುವುದೇನಿದೆ ? ನಾನು ಖಂಡಿತಕ್ಕೂ ಸಾಯುವವ. ಈ ಮೂಡೋಡಿಯ ಒಂದು ಮೂಲೆಯಲ್ಲಿ ನನ್ನ ಹೆಣಕ್ಕೆ ಕಿಚ್ಚುಗಾಣಿಸಿ ಬಿಟ್ಟರೆ ನನ್ನಷ್ಟು ಪುಣ್ಯಾತ್ಮರಾರೂ ಇಲ್ಲ

ಎಂದೆಣಿಸುತ್ತೇನೆ."

ಡಾಕ್ಟರರು ಬಂದುದಕ್ಕೆ ಪರೀಕ್ಷೆಮಾಡಿದರು. ಮದ್ದು, ಉಪಚಾರಗಳನ್ನೆಲ್ಲ ಹೇಳಿದರು. ಅನಂತರ ಶಂಕರನೊಡನೆ "ಅವನ ಮಾತೇ ಸತ್ಯವಾಗುತ್ತದೆ. ಅವನು ಬದುಕಲಾರ. ಹಾಗೆ ಬದುಕುವ ಆಸೆಯೂ ಅವನಿಗಿಲ್ಲ. ಆದರೆ ಮಾಡುವ ಸೇವೆಯನ್ನು ಮಾಡಬೇಕಲ್ಲ." ಆದಕ್ಕೆ ಪ್ರತಿಯಾಗಿ ಶಂಕರ, ಆತನ ಕತೆಯನ್ನು ಹೇಳಿ, ಅವನ ವಿಷಯದಲ್ಲಿ ತನಗಿರುವ ಮಮತೆ, ಅಭಿಮಾನ ವ್ಯಕ್ತಮಾಡಿದ. ಡಾಕ್ಟರರಿಗೆ ಊಟಮಾಡಿಸಿ, ಜತೆಗೆ ಆಳೊಬ್ಬನನ್ನು ಬೆಳ್ತಂಗಡಿಗೆ ಮರಳಿ ಕಳುಹಿಸಿದ.

ಮುತ್ತಯ್ಯ ಗೌಡನೇನೋ ಇನ್ನಷ್ಟು ಬಲವಾಗಿಯೇ ಹಾಸುಗೆ ಹಿಡಿದ, ಗುಣಮುಖವಾಗುವ ಕಾಯಿಲೆಯಾಗಿ ಅದು ಕಾಣಿಸಲೇ ಇಲ್ಲ. ಆದರೂ ಶಂಕರ ದಿನಕ್ಕೆ ನಾಲ್ಕಾರು ಬಾರಿ ಅವನಲ್ಲಿಗೆ ಬಂದು, "ಮೊದಲಿಗಿಂತ ಈಗ ಗುಣ ಕಾಣುವುದಿಲ್ಲವೇ?" ಎಂದು ಕೇಳಿಯೇ ಕೇಳುತ್ತಾನೆ. "ಹೂಂ" ಎಂಬ ಉತ್ತರ ಬರುತ್ತದೆ. ಮದ್ದಿಗೆ ಬೆಳ್ತಂಗಡಿಗೆ ಜನ ಹೋಗುತ್ತಿದೆ. ಮದ್ದನ್ನಂತೂ ತಂದುಕೊಡುತ್ತಾರೆ. ದಿನಗಳು ಸಂದುವು. ಒಂದು ದಿನ ಶಂಕರನೊಡನೆ "ಕೃಷ್ಣಪ್ಪನಿಲ್ಲವೇ?" ಎಂದು ಕೇಳಿದ. ಕೊನೆಗೆ ಅವನು ಅಣ್ಣನ ಜತೆಗೆ ಹೋದ ಸಂಗತಿ ತಿಳಿದು ಸುಮ್ಮನಾದ. ಇನ್ನೊಮ್ಮೆ "ಅಯ್ಯಾ, ನೀವು ಬರಿದೆ ಮದ್ದು, ಮತ್ತೊಂದು ಎಂದು ಶ್ರಮಪಡಬಾರದು. ದುಡ್ಡು ದಂಡ. ನನ್ನ ಲೆಕ್ಕಾಚಾರ ಮುಗಿಯಿತು. ನಾನು ಹೋದರೂ, ನನ್ನ ಮರಿಮುಗುವನ್ನು ನನ್ನ ಹಾಗೆ ನೋಡಿಕೊಂಡು ಬರಬೇಕು." ಎಂದು ಹೇಳಿದ. ಅನಂತರ ತುಸುಹೊತ್ತು ಧನಿಗಳ ಮುಖವನ್ನೇ ನೋಡಿ, ನಗುವಿನ ಛಾಯೆಯನ್ನು ಹೊರಡಿಸಿ "ಒಂದು ಮಾತು ಧನಿಗಳೇ. ನಿಮ್ಮ ಅಜ್ಜಿ ಹೇಳಿದ ಮಾತನ್ನು ನಡೆಸಿಕೊಡುತ್ತೀರಲ್ಲ?" ಎಂದು ಕೇಳಿದ.

ಮುದುಕನ ಬಾಯಿಯಿಂದ ಶಂಕರ ಈ ಪ್ರಶ್ನೆಯನ್ನು ನಿರೀಕ್ಷಿಸಿಯೇ ಇರಲಿಲ್ಲ. "ಮದುವೆಯ ವಿಚಾರವೇ?" ಎಂದ ಶಂಕರ,

"ಹೌದು; ಯಾಕೆ ಮುಂದೆ ಹಾಕುತ್ತಿದ್ದೀರಿ? ನೀವು ಒಬ್ಬಂಟಿಗರಾಗಿ ಇರಬಾರದು."

" ಶ್ಯಾನುಭಾಗರು ಆ ಮೇಲೆ ಆ ಪ್ರಸ್ತಾಪವನ್ನೇ ತೆಗೆಯಲಿಲ್ಲ."

" ಹಾಗೋ........ಏನೋ ಅವರ ಮನಸ್ಸು—ಏನೂ ಇರಲಿ. ಅವರ ಮಗಳಲ್ಲವಾದರೆ ಇನ್ನಾರೂ ಸಿಗಲಾರರೆ? ಅಂತು ನಿಮ್ಮ ಸಂಸಾರ ಮೂಡೋಡಿಯಲ್ಲಿ ಬೆಳೆದು ಒಳ್ಳೆಯದಾದರೆ ನನ್ನ ಜೀವಕ್ಕೊಂದು ತೃಪ್ತಿ."

" ಅದೆಲ್ಲ ನಮ್ಮ ಇಷ್ಟವೇ ಗೌಡ ?"

" ನಿಮ್ಮ ಹಿರಿಯರ ಹರಸುವಿಕೆ ಇದೆ. ನೀವೇನೂ ಯೋಚಿಸಬೇಡಿ. ಒಳ್ಳೆಯದೇ ಆದೀತು."

ಮೇಲಿನ ಮಾತುಕತೆಗಳಾದ ಎರಡು ದಿನಗಳ ತನಕ ಗೌಡನ ಮನೆಗೆ ಶಂಕರ ಹಗಲಲ್ಲಿ ಹೋಗಿ ಬರುತ್ತಿದ್ದ ; ರಾತ್ರಿ ಹೋಗುತ್ತಿರಲಿಲ್ಲ. ಎರಡನೆಯ ರಾತ್ರಿ ಮಲಗಿದ ಗೌಡ ಬೆಳಗಾಗುವಾಗ ಏಳಲಿಲ್ಲ ಎಂಬ ಸುದ್ದಿಯನ್ನು ಅವನ ಬಂಧು ರಾಮಯ್ಯ, ಅಳುತ್ತ ಹೊತ್ತುಕೊಂಡು ಬಂದ. ಶಂಕರ ಮುತ್ತಯ್ಯನ ಸಾವನ್ನು ನಿರೀಕ್ಷಿಸಿಯೇ ಇದ್ದ. ಆದರೂ ಅಷ್ಟೊಂದು ಉತ್ತಮ ಜೀವ ನಷ್ಟವಾಯಿತು ಎಂದು ಎಣಿಸುವುದಕ್ಕೆ ಮನಸ್ಸು ಸಿದ್ಧವಾಗಿರಲಿಲ್ಲ. ಕೂಡಲೇ ಅಲ್ಲಿಗೆ ಧಾವಿಸಿದ. ಮನೆಯವರಿಗೂ, ಎಳೆಯ ಕುಕ್ಕನಿಗೂ ಸಮಾಧಾನ ಹೇಳಿದ. ಅಳುವ ಹುಡುಗನಿಗೆ ಭರವಸೆಗಳನ್ನೆಲ್ಲ ಕೊಟ್ಟ. ಆ ಮೃತನ ಕಳೇಬರದ ಮುಂದೆ ಕುಳಿತು ಅದರೊಳಗೆ ಬಾಳಿ ಬದುಕಿದ ಉದಾತ್ತ ಜೀವನವನ್ನು ಕುರಿತು ಬಹುವಾಗಿ ನೆನೆದ. ಮುತ್ತಯ್ಯನ ಬಯಕೆ ಸಂಪೂರ್ಣವಾಗುವಂತೆ, ಮೂಡೋಡಿಯ ಗುಡ್ಡದ ಸೆರಗಿನಲ್ಲೇ ಅವನ ಕಳೇಬರಕ್ಕೆ ಕಿಚ್ಚುಕೊಟ್ಟುದಾಯಿತು.

ಆತ ಸತ್ತ ಹತ್ತೆಂಟು ದಿನ ಕಾಲ ಒಬ್ಬಂಟಿಗನಾಗಿ ಒಂದು ಕ್ಷಣವೂ ಮೂಡೋಡಿಯಲ್ಲಿ ನಿಲ್ಲಲಾರದಷ್ಟು ಕಳವಳ, ಚಿತ್ತ ಚಾಂಚಲ್ಯ ಶಂಕರನಿಗೆ. ಅಲ್ಲಿಂದ ಎಳಚಿತ್ತಾಯರಲ್ಲಿಗೆ ಹೋಗಿ ತನ್ನ ಮಗುವಿನ ಮನಸ್ಸನ್ನು ತೋಡಿಕೊಂಡ. 'ನನ್ನ ಮುತ್ತ ಹಾಗೆ, ಮುತ್ತ ಹೀಗೆ' ಎಂದ. ಆ ಹಳೆಯ ಜೀವಗಳಲ್ಲಿ ಪಕ್ವವಾದ ತಾಳ್ಮೆ, ತೃಪ್ತಿ, ಕಾರ್ಯಾಸಕ್ತಿ ಮೊದಲಾದ ಗುಣಗಳನ್ನು ನೆನೆದು ಆ ಗುಣಗಳ ಹತ್ತರಲ್ಲೊಂದು ಪಾಲಾದರೂ ತನಗೆ ಬಂದೀತೆ—ಎಂದು ಹಂಬಲಿಸಿದ. ಎಳಚಿತ್ತಾಯರು ಅವನ ಮರುಕದಲ್ಲಿ ಸಹಭಾಗಿಗಳಾದರು.

ಶಂಕರನ ಜೀವನದ ದಾರಿಯಲ್ಲಿ-ಒಂದು ನೋವಿನ ಹಿಂದೆ ಇನ್ನೊಂದು ಕಾಣಿಸಿತು. ರಂಗಣ್ಣ ಶ್ಯಾನುಭಾಗರು ಬೇನೆಯಿಂದ ಹಾಸಿಗೆ ಹಿಡಿದಿದ್ದಾರೆಂದೂ, ಅವರಿಗೆ ಸನ್ನಿಪಾತ ಜ್ವರವೆಂದೂ ಸುದ್ದಿ ಬಂದಿತು. ಶಾಂತು ಮಕ್ಕಳನ್ನು ಕಳುಹಿಸಿದಳು. ಶಂಕರ ಅವರ ಬಳಿಗೋಡಿದ. ಅವರ ಮನಸ್ಸು ಹೇಗಿದ್ದಿರಬಹುದು—ಎಂಬ ಚಿಂತೆಗೆ ಹೋಗದೆ, ಸುದ್ದಿ ತಿಳಿದ ದಿನವೇ, ಔಷಧಕ್ಕಾಗಿ ಓಡಾಡಿದ. ಅದು ಜ್ವರದ ಮೂರನೆಯ ದಿನ. ತಾಪವಂತೂ ಚೆನ್ನಾಗಿ ಅಡರಿತ್ತು. ಶ್ಯಾನುಭಾಗರು ತಲೆ ತುಂಬ ಮಾತಾಡುತ್ತಿದ್ದರು. ತಮ್ಮ ಮಗನ ದೂರನ್ನು ಅವನಲ್ಲಿ ಬಿತ್ತರಿಸಿದರು. ತಾವು ಎಣಿಸಿದ ಮದುವೆಯ ಸಂಬಂಧವನ್ನು ನಿರಾಕರಿಸಿದ ಬಗ್ಗೆ ವ್ಯಥೆ ಸೂಚಿಸಿದರು. "ನಿನಗೂ ಅವನಿಗೂ ಒಂದೇ ವೇಳೆಗೆ ಲಗ್ನವಾದೀತೆಂದು ಹಾರೈಸಿದ್ದೆ—ಹೋಗಲಿ, ಅವನಿಗೆ ಅದೃಷ್ಟವಿಲ್ಲ. ಜ್ವರ ಗುಣವಾದ ಮೇಲೆ ನಿನ್ನ ಮತ್ತು ಶ್ರೀಮತಿಯ ಲಗ್ನವಾದರೂ ಆಗಲಿ" ಎಂದು ತುದಿಮೊದಲಿಲ್ಲದ ಮಾತಿಗೆ ತೊಡಗಿದರು.

"ಅದ್ಯಾವ ಮಾತನ್ನೂ ಈಗ ಆಡಬೇಡಿ. ಹುಷಾರಾದ ಬಳಿಕ—ನಾನಿದ್ದೇನೆ, ನೀವಿದ್ದೀರಿ. ಮಾತನಾಡುವ. ತೊಂದರೆಯೇನು? ಈಗ ದಣಿಯ ಬೇಡಿ. ವಿಶ್ರಾಂತಿ ಪಡೆಯಿರಿ" ಎಂದ.

ತುಸು ಅನುಮಾನವಾಯಿತು ರಂಗರಾಯರಿಗೆ, "ಅಜ್ಜಿಯ ಮಾತನ್ನು ನಡೆಸಿಕೊಡುತ್ತೀಯಲ್ಲ?" ಎಂದು ಕೇಳಿದರು.

"ಯಾಕೆ ನಿಮಗೆ ಅಧೈರ್ಯ?" ಎಂದು ಹೇಳಿ ನಕ್ಕ.

ರಂಗರಾಯರೂ ನಕ್ಕರು. "ಇಲ್ಲ, ತಪ್ಪು ನನ್ನದು. ಮುಂದುವರಿಸಿದವ ನಾನು. ಎಂದೋ ಆಗಬಹುದಾಗಿದ್ದ ಕೆಲಸ ನನ್ನಿಂದಲೇ ತಡವಾಯಿತು" ಎಂದರು.

ಅನಂತರ ಅವರ ತಾಪ ಹೆಚ್ಚುತ್ತ ಬಂದು ಶರೀರ ದಣಿಯಿತು. ಬಾಯಿಯಿಂದ ಅರ್ಥವಿಲ್ಲದ ಹುಚ್ಚು ಮಾತುಗಳು ತೊಡಗಿದವು. ಎಲ್ಲರನ್ನೂ ಅರ್ಭಟಿಸಿ ಕರೆಯತೊಡಗಿದರು. ಮಗನ ಮೇಲಿನ ರೋಷ ಪ್ರಧಾನವಾಗಿತ್ತು. ಎಡೆ ಎಡೆಯಲ್ಲಿ ತೃಪ್ತಿಹೊಂದದೆ ಉಳಿದ ಶಂಕರನ ಮೇಲಿನ ಸಿಟ್ಟಿನ ಮಾತುಗಳೂ ತುಂಬಿದ್ದುವು. ಶಂಕರನ ಕಿವಿಗೂ ಅವು ಬಿದ್ದುವು.

ಅವನಿಗೂ ಕೇಳಿ ಬೇಸರವಾಯಿತು. ಮನೆಗೆ ಬಂದವನಿಗೆ, ನಾಳಿನ ಅಳಿಯನಿಗೆ ಆ ರೀತಿಯಲ್ಲಿ ಆಡುತ್ತಿದ್ದಾರಲ್ಲ–ಎಂದು ಶಾಂತುವಿಗಾದ ಗಾಬರಿ ಹೇಳಲಾರದ್ದು. ಅದನ್ನೆಲ್ಲ ಪರಿಶೀಲಿಸಿದ ಶಂಕರ, ತಾನೇ ತಾಳ್ಮೆ ವಹಿಸಿ "ಪಾಪ, ಜ್ವರದಿಂದ ಬುದ್ಧಿ ಸ್ವಾಧೀನವಿಲ್ಲದೆ ಆಡುತ್ತಿರುವ ಮಾತನ್ನು ನೆನೆದು, ಯಾರು ಯಾತಕ್ಕೆ ನೋವು ತಂದುಕೊಳ್ಳಬೇಕು?" ಎಂದು ಹೇಳಬೇಕಾಯಿತು.

ಅನಂತರದ ದಿನಗಳಲ್ಲಿ ರಂಗರಾಯರ ಜ್ವರ ಒಂದೇ ಸವನೆ ಏರಿತು ಹೊರತು ತಗ್ಗಲಿಲ್ಲ. ಶಂಕರ ಬೆಳ್ತಂಗಡಿಯಿಂದ ಡಾಕ್ಟರರನ್ನು ಅಲ್ಲಿಗೆ ಕರದೊಯ್ದು, ಹಗಲು ರಾತ್ರಿಯೆಲ್ಲ ಅವರ ಬಳಿ ಕುಳಿತು ಚಿಕಿತ್ಸೆ ನಡೆಯಿಸಿದ. ಡಾಕ್ಟರರು ಅಧೈರ್ಯಪಟ್ಟುದರಿಂದ ಮಂಜುನಾಥನ ವಿಳಾಸಕ್ಕೆ ತಂತಿಯೂ ಹೋಯಿತು. ಡಾಕ್ಟರರ ಮದ್ದಾಗಲೀ, ಉಳಿದವರ ಉಪಚಾರಗಳಾಗಲಿ ರಂಗರಾಯರನ್ನು ಉಳಿಸಲು ಶಕ್ತವಾಗಲಿಲ್ಲ. ಹದಿನೆರಡು ದಿನಗಳಲ್ಲಿ ಅವರು ತೀರಿಕೊಂಡರು. ಕೊನೆಯ ಕೆಲವು ದಿನಗಳು ಹೆಚ್ಚಿನ ವಿಸ್ಮೃತಿ, ಮೌನಗಳಿಂದಲೇ ತುಂಬಿತ್ತು. ಅವರ ಬಾಳು ಕೊನೆಗೊಂಡು ದೊಡ್ಡದೊಂದು ಸಂಸಾರವನ್ನು ಶೋಕ ಸಾಗರದಲ್ಲಿ ಮುಳುಗಿಸಿತು. ಮಂಜುನಾಥ ಬರುವ ತನಕ, ಶಂಕರನೇ ಅಲ್ಲಿದ್ದು ಮನೆಯ ನಿತ್ಯರೋದನ, ಕೊರಗುಗಳಿಗೆ ಸಮಾಧಾನಗಳನ್ನು ಹೇಳುವ ಹಿರಿಯನಾಗಬೇಕಾಯಿತು.

ಒಂದು ವರ್ಷದ ಅವಧಿಯಲ್ಲಿ ಶಂಕರನ ಕಣ್ಮುಂದೆ ನಡೆದ ಮೂವರು ಆಪ್ತರ ಸಾವುಗಳು ಶಂಕರನ ನೆಲೆಯನ್ನೇ ಅದುರಿಸಿಬಿಟ್ಟುವು. ಕೊನೆಯ ಸಾವು ಸಹ ಅವನನ್ನು ಹೆಚ್ಚಿನ ಮರುಕಕ್ಕೆ ಗುರಿಮಾಡಿತು. ರಂಗರಾಯರ ಕೊನೆಯ ದಿನಗಳಲ್ಲಿ, ವಿಸ್ಮೃತಿಯಲ್ಲಿ, ಅವರ ಮನೋಭಾವ ವ್ಯಕ್ತವಾಗಿದ್ದರೂ, ಶಂಕರನ ಮನಸ್ಸು ಸಂಕೋಚಗೊಳ್ಳಲಿಲ್ಲ. ತನ್ನವರು, ತನ್ನವರಿಗೆ ಬೇಕಾದವರು ಎಂದು ಅವರ ಸುಖ, ದುಃಖಗಳ ಚಿಂತನೆ ಮಾಡಿದ. ರಂಗರಾಯರು ಬಿಟ್ಟುಹೋದ ಸಂಸಾರದ ಭವಿಷ್ಯವೂ ದೊಡ್ಡ ಸಮಸ್ಯೆಯಾಗಿ ಕಂಡಿತು. ಅನುತಾಪ ಯೋಗ್ಯವಾಗಿಯೇ ಕಂಡಿತು. ಆರೆಂಟು ಮಕ್ಕಳು, ಬಳಲಿ ಬೆಂಡಾದ ಶಾಂತು–ಅವರ ಪಾಡೇನು! ಮಂಜುನಾಥ ಬಂದು ಅವರ ಹೊಣೆಯನ್ನು ಹೊತ್ತಾನೆಯೇ? ತುಸುವೇ ಕಂಡ ಮಂಜುನಾಥನ ನಡತೆಯಿಂದ ಆ ಧೈರ್ಯವಂತು ಶಂಕರನಿಗೆ ಬರಲಿಲ್ಲ.

## ಅಧ್ಯಾಯ ೧೩

ಶ್ಯಾನುಭಾಗ ರಂಗರಾಯರು ತೀರಿಕೊಂಡು ಒಂದು ವಾರವೇ ಸಂದಿತು; ಹತ್ತು ದಿನಗಳಾದವು: ಹದಿನೈದು ದಿನಗಳೇ ಆದುವು. ಮಂಜುನಾಥ ಮಾತ್ರ ಊರಿಗೆ ಬರಲಿಲ್ಲ. ಅವನಿಗೆ ಕೊಟ್ಟ ತಂತಿಯ ವಿಳಾಸದಲ್ಲಿ ತಪ್ಪಿರಬಹುದು ಎಂದು ಊಹಿಸಿ, ಹಳೆಯ ಕಾಗದ ಪತ್ರಗಳನ್ನು ಹುಡುಕಿ ಇನ್ನೂ ಒಂದೆರಡು ವಿಳಾಸಗಳಿಗೆ ತಂತಿ ಕೊಟ್ಟುದಾಯಿತು. ಆತ ಬಂದು ತನ್ನ ಮನೆಯ ಹೊಣೆಯನ್ನು ಹೊರುವ ತನಕ ಶಂಕರ, ಅಲ್ಲಿ ಇಲ್ಲಿ-ಎರಡು ಕಡೆಗಳಿಗೂ ಓಡಾಡಬೇಕಾಯಿತು. ರಂಗಣ್ಣನವರ ಮನೆ ದುಃಖಭಾರದಿಂದ ಸಂಪೂರ್ಣ ಮೂಕವಾಗಿತ್ತು. ಶಾಂತುವಿಗೆ ಪ್ರಾಯ ಸಂದಿದ್ದರೂ, ಪ್ರಪಂಚವೇನೆಂದು ಅರಿಯದ ಮಕ್ಕಳಂತೆ ಅಳುವುದಷ್ಟನ್ನೇ ಬಲ್ಲಳು. ಅವಳ ಸ್ಥಿತಿಯನ್ನು ಕಂಡು ಮನೆಗೆಲಸಗಳನ್ನೆಲ್ಲ ಶ್ರೀಮತಿಯೇ ವಹಿಸಿಕೊಂಡಿದ್ದಾಳೆ. ಅವಳ ಒತ್ತಿನ ಇಬ್ಬರು ತಂಗಿಯರು, ಅವಳ ಕೆಲಸದಲ್ಲಿ ನೆರವಾಗುತ್ತಿದ್ದಾರೆ. ಇನ್ನುಳಿದವೆಲ್ಲ ತೀರ ಚಿಕ್ಕವು. ಇದ್ದುದರಲ್ಲಿ ಶ್ರೀಮತಿಯೇ ಧೈರ್ಯದಿಂದ ಮನೆಯ ಹೊಣೆಯನ್ನು ಹೊತ್ತಂತೆ ಕಾಣುತ್ತದೆ. ತನಗೆ ತಿಳಿಯದ ಸಂಗತಿಗಳನ್ನು ತಾಯಲ್ಲಿಯೋ ಆಗಾಗ ಬರುವ ಶಂಕರನಲ್ಲಿಯೋ ವಿಚಾರಿಸಿ ತಿಳಿದು ಮಾಡುತ್ತಾಳೆ. ಶಂಕರ ಅವಳೊಡನೆ ಸಂಭಾಷಣೆಗೆ ತೊಡಗಿದ್ದು ಆಗಲೇನೆ. ಅಳುಕಿ, ಅಳುಕಿ ಮಾತನಾಡಿದ. ಆತ ತುಟಿಯ ಸ್ವರವನ್ನೇರಿಸದಿದ್ದರೂ, ತುಟಿಯ ಚಲನೆಗಳಿಂದ ಮಾತನ್ನು ಊಹಿಸುವುದಕ್ಕೆ ಶ್ರೀಮತಿ ಶಕ್ತಳಾದುದನ್ನು ಕಂಡು ಸಂತೋಷಪಟ್ಟ. ನಿಜಕ್ಕೂ ಆಕೆಗೆ ತೀರ ಗಟ್ಟಿಯಿಲ್ಲದ, ತೀರ ಹಗುರವಲ್ಲದ ನಡುವಣ ಸ್ಥಾಯಿಯಲ್ಲಿ ಮಾತನಾಡಿಸಿದರೆ ಮಾತ್ರ ಕೇಳಿಸುತ್ತಿರಲಿಲ್ಲ. ಆಕೆಯ ಕಿವಿ ಧ್ವನಿಯ ಕೆಲವೊಂದು ತರಂಗಮಾನಕ್ಕೆ ಮಾತ್ರ ಕಿವುಡಾಗಿದ್ದಂತೆ ಅನಿಸಿತು. ಪ್ರತಿದಿನ ಅಲ್ಲಿಗೆ ಬಂದು ಹೋಗುವಾಗಲೆಲ್ಲ ಶಂಕರ "ಮನೆಗೆ ಹೋಗಿ ಬರುತ್ತೇನೆ" ಎಂದು ಹೇಳಿಯೇ ಹೊರಡುತ್ತಿದ್ದ.

ಸ್ವತಃ ಶಂಕರನ ಮನಸ್ಸೂ ದುಃಖಪೂರಿತವಾಗಿತ್ತು. ತಮ್ಮನನ್ನು ಕುರಿತಾದ ಯೋಚನೆಗಳಿಂದ ಬಾಧಿತವಾಗಿತ್ತು. ತಂದೆಗೆ ಪತ್ರ ಬರೆದು

ದಕ್ಕೆ ಕೊನೆಗೊಂದು ಉತ್ತರ ಬಂದಿತು. ಅದರಲ್ಲಿ ' ವಿಟ್ಠಲನ ಪತ್ರ ನಮಗೂ ಇಲ್ಲ. ಕಾಗದ ಬಾರದೆ ಮೂರು ತಿಂಗಳಾದವು. ನಾವು ಚಿಂತೆಗೆ ಗುರಿಯಾಗಿದ್ದೇವೆ. ಅವನ ವಿಮಾನ ಬಲವಂತದಿಂದ ಬರ್ಮಾಕ್ಷೇತ್ರದಲ್ಲಿ ಇಳಿಯಿತಂತೆ. ಆತ ಜಾಪಾನಿಯರಿಗೆ ಸೆರೆಯಾಗಿರಬೇಕು. ಅವರ ಕೈಯಲ್ಲಿ ಅವನ ಗತಿ ಹೇಗಾಗಬಹುದೆಂದು ಊಹಿಸಲಾರೆವು. ಪ್ರತಿಮೆಯು ತೀರ ಭ್ರಮಿಷ್ಟಳಾಗಿದ್ದಾಳೆ. ವಿಟ್ಠಲನ ಚಿಂತೆಯಲ್ಲೇ ಮಲಗಿದ್ದಾಳೆ. ' ನೀನು ಬಂದು, ತಾಯಿಗಿಷ್ಟು ಸಮಾಧಾನವನ್ನಾದರೂ ಹೇಳಬೇಕು ' ಎಂದು ಬರೆದಿದ್ದರು. ಶಂಕರ ಆ ಪತ್ರವನ್ನು ನೋಡಿ, ತಕ್ಷಣ ಹೊರಡುವುದಕ್ಕೂ ಬರುವಂತಿರಲಿಲ್ಲ. ಮಂಜುನಾಥ ಆಚೆನ ಮನೆಗೆ ಬಂದು ಅಲ್ಲಿನ ಹೊಣೆ ವಹಿಸಿಕೊಂಡಿದ್ದರೆ, ಈತ ಬೇಸಾಯವನ್ನಾದರೂ ಮರೆತು ದೇಹಲಿಗೆ ಹೊರಡಬಹುದಿತ್ತು. ಸಾಲದುದಕ್ಕೆ ಊರಿಗೆ ಹೋದ ಕೃಷ್ಣ ಮರಳಿ ಬಂದಿಲ್ಲ. ಎರಡು ಮೂರು ವರ್ಷಗಳ ಬಳಿಕ ಹೋದುದರಿಂದ ಅವಸರದಿಂದ. ಕರೆಯಿಸಲು ಶಂಕರನಿಗೂ ಇಷ್ಟವಾಗಲಿಲ್ಲ. ಇಷ್ಟೆಲ್ಲ ಚಿಂತೆಗಳಿಂದ ಅವನು ನುಗ್ಗುನುರಿಯಾಗಿರುವಾಗಲೇ ಸುಂದರರಾಯರಿಂದ ಬೇರೊಂದು ತಂತಿ ಬಂದಿತು — " ವಿಟ್ಠಲ ಜಾಪಾನಿಯರ ಕೈಗೆ ಸಿಕ್ಕಿ. ಅವರ ಹಿಂಸೆಗೊಳಗಾಗಿ, ಸಾವಿಗೀಡಾದ " ಎಂಬ ಸುದ್ದಿ ದೊರೆಯಿತು. ಅದರಿಂದ ತಡೆಯಲಾರದಂತಹ ನೋವು ಉಂಟಾಯಿತು. ವಿಧಿಯು ತನ್ನೊಬ್ಬನ ಮೇಲೆಯೇ ಮುನಿದಂತಿದೆಯಲ್ಲ—ಎಂದು ಕಾಣಿಸಿತು ಶಂಕರನಿಗೆ. ತನ್ನ ತಪ್ಪೊಂದೂ ಇಲ್ಲದೆ ಮನುಷ್ಯನ ಮೇಲೆ ಒಂದರ ಮೇಲೊಂದಾಗಿ ಹೀಗೆ ಘಾತ ಅಪಘಾತಗಳು ಬರುತ್ತವಲ್ಲ ; ತನ್ನವರೆಂಬುವರು ಒಬ್ಬರ ಹಿಂದೆ ಒಬ್ಬರು ಸಾವಿಗೀಡಾದರಲ್ಲ ಎಂಬ ಚಿಂತೆ ಬೇರೂರಿತು. ಆದರೂ ತನ್ನ ನೋವಿಂದ ಇನ್ನೊಬ್ಬರ ನೋವನ್ನು ಹೆಚ್ಚಿಸುವ ಸ್ವಭಾವ ಅವನದ್ದಲ್ಲ. ತಮ್ಮನ ಮೃತ್ಯುವಿನ ಸುದ್ದಿಯನ್ನು ರಂಗರಾಯರ ಮನೆಯವರಿಗೆ ತಿಳಿಸಲಿಲ್ಲ. ಆತ ತನ್ನ ದುಃಖ ಮುಳುಗಿಸುವುದಕ್ಕೆ ಕೆಲಸ ಒಂದೇ ಮದ್ದು—ಎಂದು ಯೋಚಿಸಿದ. ಕೃಷ್ಣನಿಗೆ ಬರುವಂತೆ ಪತ್ರ ಹಾಕಿದ. ಸೀತಾರಾಮನಿಗೆ ತನಗೊದಗಿದ ವಿಪತ್ತುಗಳನ್ನು ಬಣ್ಣಿಸಿ ಬರೆದ. ತನ್ನ ಗಳಿಗೆಗಳನ್ನು ಶ್ರಮ ದಣಿವುಗಳಿಂದ ತುಂಬಿಸದೆ ಹೋದಲ್ಲಿ ತನಗೆ ಹುಚ್ಚೇ ಹಿಡಿದೀತು ಎಂದು

ತೋರಿತು. ಅದಕ್ಕಾಗಿ ಹಾರೆ ಗುದ್ದಲಿಗಳನ್ನು ಹಿಡಿದುಕೊಂಡು ನೆಲವನ್ನು ಏನು, ಏಕೆಂದು ತಿಳಿಯದೆ ಅಗೆಯ ತೊಡಗಿದನು. ಮುತ್ತಯ್ಯ ಗೌಡನಿದ್ದಿದ್ದರೆ "ಅಯ್ಯಾ ಇಲ್ಲೇಕೆ ಅಗೆಯುತ್ತಿದ್ದೀರಿ? ಈ ಕುಣಿ ಏತಕ್ಕೆ? ಬಿಸಿಲು ಕಳೆದ ಮೇಲೆ ಅಗೆಯಬಾರದೇ?" ಎಂದಾದರೂ ಕೇಳುತ್ತಿದ್ದ. ಇಂದು ಆ ರೀತಿಯಲ್ಲಿ ಅಪರೋಕ್ಷವಾಗಿ ಸಮಾಧಾನ ಹೇಳುವವರೂ ಇಲ್ಲ. ಆತ ತನ್ನ ಆಳುಗಳಲ್ಲಿ ಸಲುಗೆ ಇಟ್ಟುಕೊಂಡಿದ್ದರೂ 'ಏನು? ಏಕೆ?' ಎನ್ನುವಷ್ಟು ಸಲುಗೆ ಇತರರಿಗೆ ಇವನಲ್ಲಿ ಹುಟ್ಟೀತೇ? ಹೀಗ ಒಂಟಿಯಾಗಿದ್ದು ಹೇಳಕೇಳುವವರಿಲ್ಲದೆ, ಸುಲಭದಲ್ಲಿ ಅವನ ಮನಸ್ಸಿಗೆ ನೆಮ್ಮದಿಯಿಲ್ಲದಾಯಿತು.

ಅದಕ್ಕಾಗಿಯೇ ಬೇರೆಯೇ ಉದ್ಯೋಗವನ್ನು ತೊಡಗಿದ. ಕತ್ತಿಯನ್ನು ಹಿಡಿದು ತನ್ನ ಭೂಮಿಯ ಸುತ್ತಲೂ ಸಂಚರಿಸತೊಡಗಿದ. ಅಲ್ಲಿ, ಇಲ್ಲಿ ಹುಚ್ಚಾಗಿ ಬೆಳೆಯುತ್ತಿದ್ದ ಬೆತ್ತ, ಬಿದಿರು, ಮರಗಳನ್ನು ತುಂಡುಮಾಡಿ ತಂದ. ಅವುಗಳ ಸ್ವಭಾವವನ್ನು ಪರಿಶೀಲಿಸಲು ಪ್ರಯೋಗಗಳಲ್ಲಿ ತೊಡಗಿದ. ಮರದ ತುಂಡುಗಳನ್ನು ಸೀಳಿ, ಕೊಚ್ಚಿ, ಮುರಿದು, ಬಗ್ಗಿಸಿ, ಗುಣ ತಿಳಿಯತೊಡಗಿದ. ಇಷ್ಟೆಲ್ಲ ವಸ್ತು ಒಡವೆಗಳು ಅನರ್ಘವಾಗಿ ದೊರೆಯುತ್ತಿರುವಾಗ, ಅವುಗಳಿಂದ ತಾನೇನು ಮಾಡಬಹುದು ಎಂಬ ಚಿಂತನೆಗೆ ಮನಸ್ಸನ್ನು ತೊಡಗಿಸಿದ.

ಒಮ್ಮೆ ರಂಗರಾಯರ ಮನೆಯಿಂದ ಮರಳಿಬರುವಾಗ ಎಳಚಿತ್ತಾಯರ ಮನೆಯ ಅಂಗಳಕ್ಕೆ ಕಾಲಿರಿಸಿದ. ಅಲ್ಲಿ ಮೆಟ್ಟುಕತ್ತಿಗಳ ಮೇಲೆ ಕುಳಿತು, ಅಡಿಕೆ ಸುಲಿಯುವ ಕೆಲಸ ಸಾಗುತ್ತಿತ್ತು. ಅಡಿಕೆಯ ಸಿಪ್ಪೆಗಳನ್ನು ನಿತ್ಯ ಬಚ್ಚಲಿನಲ್ಲಿ ಸುಡುವುದನ್ನು ಆತ ಕಂಡಿದ್ದ. ಅದರ ಸಿಪ್ಪೆ, ಹೊರಗಣ ನಾರು ಇವೆಲ್ಲ ಕೆಲಸಕ್ಕೆ ಬಾರವೆ?–ಎಂದೆನಿಸಿತು. ತನ್ನ ಮನೆಗೆ ಇಷ್ಟು ಸಿಪ್ಪೆಗಳನ್ನು ಹೊರಸಿಕೊಂಡು ಹೋದ. ಸಿಪ್ಪೆಯ ನಾರುಗಳನ್ನೆಲ್ಲ ಒಟ್ಟುಕೂಡಿಸಿದ. ಕೈಯಲ್ಲಿ ತಿರುವುತ್ತ ಹಗ್ಗ ಹೊಸೆದ. ಹಸಿಬೆ, ಗೋಣಿ ನಾರುಗಳಂತೆ ಸರಾಗವಾಗಿ ದಾರವನ್ನಾಗಿ ಮಾಡಬಹುದಾದ ಈ ಹೊಟ್ಟನ್ನು ಯಾಕೆ ಜನರು ವ್ಯರ್ಥವಾಗಿ ಸುಟ್ಟು ಬೂದಿ ಮಾಡಬೇಕು–ಎಂದನಿಸಿತು. ಕೈರಾಟೆಯಿಂದ ಅದನ್ನು ನೂಲನ್ನಾಗಿ ಮಾಡುವ ಕೆಲಸ ಕಷ್ಟವಲ್ಲ. ಆದರೆ ಗೋಣಿ

ಚೀಲಗಳು ಕಡಿಮೆ ಬೆಲೆಯ ವಸ್ತುಗಳು. ಧಾರಾಳವಾಗಿ ಖರ್ಚಾಗ ತಕ್ಕಂಥವು. ಕೈಯಿಂದ ನೂತರೆ ಅಂಥ ಅಗ್ಗದ ಚೀಲಗಳನ್ನು ಮಾಡಲು ಸಾಧ್ಯವಿಲ್ಲ. ಇದಕ್ಕಾಗಿ ತಾನೇತಕ್ಕೆ, ಅಲ್ಪ ಶಕ್ತಿಯಿಂದ ನಡೆಯಬಲ್ಲ ಒಂದು ಯಂತ್ರವನ್ನು ಶೋಧಿಸಬಾರದು, ಎಂಬ ಹುಚ್ಚು ಬೇರೂರಿತು.

ಮನೆಯಲ್ಲಿ ಕುಳಿತಾಗ, ದಾರಿಯಲ್ಲಿ ಅಲೆಯುವಾಗ ಹೊಸ ರಾಟೆಯ ಕನಸನ್ನು ಕಾಣತೊಡಗಿದ. ತನ್ನ ವಿದ್ಯಾಭ್ಯಾಸದ ಅವಧಿಯಲ್ಲಿ ಹತ್ತಿಯ ಗಿರಣಿಗಳನ್ನು ಆತ ಕಾಣದವನಲ್ಲ. ದೊಡ್ಡ ಪ್ರಮಾಣದ ನೂಲುವ 'ಜೆನ್ನಿ'ಗಳು ಅವನ ಕಣ್ಮುಂದೆ ನಲಿದಾಡತೊಡಗಿದುವು. ನೂರಾರು ಕದಿರುಗಳು ಒಂದು ಯಂತ್ರದಲ್ಲಿ ತಿರುಗುತ್ತ–ಹತ್ತಿಯ ಹಿಂಜಿಯನ್ನು ದಪ್ಪದ ಬತ್ತಿಯನ್ನಾಗಿಯೂ–ದಪ್ಪದ ಬತ್ತಿಯನ್ನು ದಪ್ಪದ ದಾರವನ್ನಾಗಿಯೂ, ತಿರುಗಿ ಅದನ್ನು ಸಪುರದ ದಾರವನ್ನಾಗಿ ಮಾಡುವಂತೆ ಚಿಕ್ಕೊಂದು ಯಂತ್ರ ಏಕೆ ಸಾಧ್ಯವಿಲ್ಲ ಎಂದೆನಿಸತೊಡಗಿತು. ಕಾಗದ ಪೆನ್ಸಿಲುಗಳ ಲೆಕ್ಕಾಚಾರಕ್ಕೆ ತೊಡಗಿದ. ಅಡಿಕೆ ನಾರಿನ ಉದ್ದ, ನೂಲಿನ ದಪ್ಪ, ದಪ್ಪಕ್ಕೆ ಬೇಕಾದ ತಿರುಪುಗಳು ಇವನ್ನೆಲ್ಲ ಗುಣಿಸಿದ. ಯಂತ್ರ ವಿಭಾಗಗಳ ಅಳತೆ ಹಾಕಿಕೊಂಡು ಕಾಗದದಲ್ಲಂತೂ ಒಂದು ಯಂತ್ರ ಸುಲಭವಾಗಿ ನಿರ್ಮಾಣಗೊಂಡಿತು. ಅದರ ಬೆನ್ನಿಗೆ–ಒಂದು ಕದಿರಿನ ಬದಲು ನಾಲ್ಕೆಂಟು ಕದಿರುಗಳಿಂದ ನೂಲು ಹೊರಡಿಸಬಲ್ಲ ಯಂತ್ರದ ಪಾಯ ಹಾಕಿದ. ಅದರ ನಕಾಸೆ ಮುಗಿಯುತ್ತಲೇ ಬಡಗಿಯೊಬ್ಬನನ್ನು ಕರೆದು, ಮರದಲ್ಲಿ ಆಕೃತಿಗಳನ್ನು ಮಾಡಿಸತೊಡಗಿದ.

ಈ ಕೆಲಸ ಬಿರುಸಿಂದ ನಡೆಯುತ್ತಿರುವಾಗಲೇ, ಕೃಷ್ಣ ಅವನನ್ನು ಸೇರಿಕೊಂಡ. ಆತನಿಗೆ ಶಂಕರನಿಗೆ ಬಂದೊದಗಿದ ವಿಪತ್ತನ್ನು ಕೇಳಿ ತುಂಬ ಬೇಸರವಾಯಿತು. ಮಾತಿಲ್ಲದೆ ಮೂಕನಂತೆ ಶಂಕರನ ಹಿಂದೆ ಅವನೂ ಅಲೆಯತೊಡಗಿದ. ಮೊದಲಿನಂತೆ ಅಡುಗೆಯ ಕೆಲಸವನ್ನು ತಾನು ನಿರ್ವಹಿಸಿಕೊಂಡ. ಚಿಂತಾಕ್ರಾಂತವಾದ ಶಂಕರನ ಮುಖವನ್ನು ಕಂಡು, "ಶಂಕರ ನೀನೊಮ್ಮೆ ಡಿಲ್ಲಿಗೆ ಹೋಗಿ ಬರುವುದು ಒಳ್ಳೆಯದು. ತಂದೆತಾಯರನ್ನು ಕಂಡುಬಂದ ಹಾಗೂ ಆಯಿತು. ಇಂಥ ವೇಳೆಯಲ್ಲಿ ಅವರಿಗೆ ಸಮಾಧಾನ ಹೇಳಿದ ಹಾಗೂ ಆಯಿತು" ಎಂದು ಅವನನ್ನು ಬೋಧಿಸತೊಡಗಿದ.

ಕೃಷ್ಣನ ಮಾತುನ್ನು ನಿರಾಕರಿಸುವುದಕ್ಕಿಲ್ಲ. ಆದರೆ ಆದಕ್ಕೆ ಶಂಕರನ ಪ್ರತ್ಯುತ್ತರವಿಷ್ಟೆ, "ಆ ಮನೆಯ ಮಂಜುನಾಥ, ಬರಲಿಲ್ಲವಲ್ಲ. ಆತ ಊರಿಗೆ ಬರುವ ಮುಂಚೆ ನಾನು ಹೊರಡುವುದಾದರೂ ಹೇಗೆ?" ಎಂದು.

ಅಂತು ದಿನವೆಲ್ಲ ಅವರಿಬ್ಬರೂ ಸೇರಿ ತಮ್ಮ ಪ್ರಯೋಗಗಳನ್ನು ಭರದಿಂದ ಸಾಗಿಸಿದರು. ತಂದ ಬಿದಿರು ಓಟೆಗಳನ್ನು ಸೀಳಿ, ಇದ್ದಕ್ಕಿದ್ದಂತೆ ಏನೇನು ಮಾಡಬಹುದೆಂದು ಪ್ರಯೋಗ ನಡೆಸಿದರು. ಆಳತೆ ಪಟ್ಟಿ ಆಟದ ಸಾಮಗ್ರಿ, ಅಂಗಿ ಗುಂಡಿ, ಪಾದರಕ್ಷೆಯ ಹಿಮ್ಮಡಿ—ಹೀಗೆ ಒಂದಲ್ಲ ಹತ್ತಾರು ಮರದ ವಸ್ತುಗಳನ್ನು ನಿರ್ಮಿಸಿದರು. ಅವುಗಳನ್ನು ಸುಲಭವಾಗಿ ದೊಡ್ಡ ಪ್ರಮಾಣದಲ್ಲಿ ನಿರ್ಮಿಸುವ ಬಗೆ ಹೇಗೆಂದು ಚಿಂತಿಸತೊಡಗಿದರು.

ಇಂಥ ಒಂದು ದಿನ, ನಿತ್ಯದ ವಾಡಿಕೆಯಂತೆ, ಶಂಕರ ಶ್ಯಾನುಭಾಗರ ಮನೆಗೆ ಹೊರಟ. ಸಂಜೆಯ ಇಳಿಬಿಸಿಲು ಅವನ ಮುಖದ ಮೇಲೆ ನಲಿದಾಡುತ್ತಿತ್ತು. ಮನಸ್ಸಿನಲ್ಲಿ ಗೃಹಕೈಗಾರಿಕೆಯ ಹಲವಾರು ಕನಸುಗಳು ತುಂಬಿ ತುಳುಕಾಡುತ್ತಿದ್ದುವು. ತಲೆಯಲ್ಲೆಲ್ಲ ಅವೇ ವಿಚಾರಗಳನ್ನು ತರ್ಕಿಸುತ್ತ ರಂಗರಾಯರ ಮನೆಯ ಅಂಗಳಕ್ಕೆ ಕಾಲಿರಿಸಿದಾಗ 'ಶಂಕರ್' ಎಂಬ ತೀರ ಪರಿಚಿತ ಧ್ವನಿಯೊಂದು ಎಲ್ಲಿಂದಲೋ ಕಿವಿಗೆ ಕೇಳಿಸಿದಂತಾಯಿತು. ಧ್ವನಿ ಗಟ್ಟಿಯಾಗಿತ್ತು. ಶಂಕರ ಕಣ್ಣೆತ್ತಿ ನೋಡುವಾಗ, ಆ ಮನೆ ಜಗುಲಿಯಿಂದ ಅವನ ಕಡೆಗೇನೆ ಎರಡು ಹೆಜ್ಜೆ ಇರಿಸಿದ ಸ್ತ್ರೀ ವ್ಯಕ್ತಿಯೊಬ್ಬಳು ಕಾಣಿಸಿದಳು. ಶಂಕರನಿಗೆ ತನ್ನ ಕಿವಿ, ಕಣ್ಣುಗಳೆರಡೂ ಸುಳ್ಳೆನ್ನುತ್ತಿವೆಯಲ್ಲ ಎಂದೆನಿಸಿತು. ತನ್ನೆದುರಿಗೆ ನಿಂತಿದ್ದ ವ್ಯಕ್ತಿ—ವರಲಕ್ಷ್ಮಿ ಎಂಬುದನ್ನು ಆತ ನಂಬದಾದ. ಅವಳನ್ನೇ ಬಿರುನೋಟದಿಂದ ನೋಡುತ್ತ ನಿಂತಾಗ, ಆಕೆ ತನ್ನ ಕೈಯನ್ನು ಮುಂದೆ ನೀಡಿದಳು. ಶಂಕರ ಮೈ ಮರೆತವನಂತೆ ತನ್ನ ಕೈ ಮುಂದಕ್ಕೊಡ್ಡಿದ. ಆಕೆ ಕೈಗಳನ್ನು ಕುಲುಕಿ ಅವನ ಎರಡು ಭುಜಗಳ ಮೇಲೆ ತನ್ನ ಕರಗಳನ್ನಿಟ್ಟು "ನೀವು ಇಲ್ಲಿದ್ದೀರಾ! ನನಗೆ ತಿಳಿದಿರಲೇ ಇಲ್ಲ. ಮಂಜುನಾಥ ಹೇಳಲೇ ಇಲ್ಲ" ಎಂದುಸುರಿದಳು.

ಆಷ್ಟೆಂದುದೇನೋ ಸರಿಯೆ, ಮರುಕ್ಷಣ ವಿಸ್ಮಯ ತುಂಬಿದ್ದ ಮುಖ ವಿವರ್ಣಗೊಂಡಿತು. ಐದು ವರ್ಷಗಳ ಹಳೆಯ ಗೆಳೆತನದ ಆಸೆ ಕನಸುಗಳು ಕಣ್ಣೆದುರಿಗೆ ಹೊಮ್ಮಿ, ಮನಸ್ಸನ್ನು ಕುದಿಯುವಂತೆಮಾಡಿತು. ಮರುಕ್ಷಣ

ಆಕೆಗೆ ಅಲ್ಲಿ ನಿಲ್ಲುವಂಥ ಸಾಹಸವೂ ಆಗಲಿಲ್ಲ. "ಬನ್ನಿ ಕುಳಿತುಕೊಳ್ಳಿ." ಎಂದಿಷ್ಟೇ ಹೇಳಿ ಒಳಕ್ಕೋಡಿದಳು. ಒಳಗೆ ಹೋಗಿ ಕಳುಹಿಸಿದುದಾರನ್ನು ಮಂಜುನಾಥನನ್ನು. ಮಂಜುನಾಥ ಬಂದೊಡನೆಯೇ, ಶಂಕರನಿಗೆ ತಾನು ಕಂಡದ್ದೆಲ್ಲ ವಿಚಿತ್ರವಾದ ಕನಸೆಂದೇ ಅನಿಸಿತು. 'ನನಗೇಕೆ ಹೀಗೆ ಬುದ್ಧಿ ಕೆಟ್ಟಿದೆ ? ಚಿತ್ತ ಸ್ವಾಸ್ಥ್ಯವಿಲ್ಲ?' ಎಂದೆನಿಸಿತು. ತಲೆಯಲ್ಲಿ ತುಂಬಿಕೊಂಡ ಯಂತ್ರದ ಗಾಲಿಗಳೂ, ದಂಡಗಳೂ ಮಾಯವಾಗಿ, ಅವುಗಳ ಬದಲು ತನ್ನ ಪೂರ್ವಕಾಲದ ಪ್ರೇಯಸಿಯಾಗಿದ್ದ ವರಲಕ್ಷ್ಮಿಯ ರೂಪವು ಕಣ್ಣೆದುರು ನಲಿಯತೊಡಗಿತು. "ಏನು, ವರಲಕ್ಷ್ಮಿ ಯಾರೂ ದೊರೆಯದೆ ಮಂಜುನಾಥ ನಂಥ ತರುಣನ ಸ್ನೇಹ ಮಾಡಿದಳೇ ?" ಎಂದು ತುಟಿ ತನ್ನಷ್ಟಕ್ಕೆ ವಿಸ್ಮಯ ದಿಂದ ಕುಣಿದಾಡತೊಡಗಿತು. ಮಂಜುನಾಥ ಹೊರಕ್ಕೆದ್ದು ಬಂದುದು ನಿಜ ವಾದರೂ ಮುಂದೆ ಬರಲೇ ಇಲ್ಲ. ವರಲಕ್ಷ್ಮಿಯೂ ಬರಲಿಲ್ಲ. ನಿಜಕ್ಕೂ ಅವರಿಬ್ಬರೂ ಅಷ್ಟು ಸುಲಭವಾಗಿ ಧೈರ್ಯದಿಂದ ಶಂಕರನೆದುರು ಬಂದು ನಿಲ್ಲುವುದಕ್ಕೆ ಸಾಧ್ಯವಾಗಲಿಲ್ಲ. ಹತ್ತಾರು ನಿಮಿಷಗಳ ಕಾಲ ಸರಿಯಿತು. ಆ ಒಂದೊಂದು ನಿಮಿಷವೂ ಶಂಕರನ ಪಾಲಿಗೆ ಒಂದೊಂದು ಯುಗವಾ ಯಿತು. ಮಂಜುನಾಥ ! ಆ ಯಾವ ಹುಡುಗ ಜಯರಾಮರ ಮನೆಯಲ್ಲಿ ಆಳಾಗಿದ್ದನೋ, ಯಾವಾತನ ಕೈಯಲ್ಲಿ ವರಲಕ್ಷ್ಮಿ ತನಗೆ ಮೊದಲನೆಯ ಪತ್ರವನ್ನು ಕಳುಹಿಸಿದ್ದಳೋ, ಅಂಥ ಒಬ್ಬ ಸಾಮಾನ್ಯ ವ್ಯಕ್ತಿಯನ್ನು ಆಕೆ ಒಲಿದು ಬರುವುದು ಸಾಧ್ಯವೇ?-ಎಂಬ ಪ್ರಶ್ನೆ ಅವನ ಮನದಲ್ಲಿ ಮೂಡಿತು. ಒಲಿದುದೇನು ? ಮದುವೆಯಾಗಿಯೇ ಬಂದಿದ್ದಾಳಲ್ಲ-ಎಂದು ಎದೆಯಲ್ಲಿ ಅನುಮಾನ ಮಿಂಚಿತು. ಮರುಗಳಿಗೆಗೆ ಸಮಾಧಾನವೂ ಹೊಳೆಯಿತು. ಅಂದು ಮಂಜುನಾಥ ಕೀಳಾಗಿದ್ದಿರಬಹುದು. ಇಂದು ವೈಮಾನಿಕ. ದೊಡ್ಡ ನೌಕರಿಗಳಿಸಿದ್ದಾನೆ. ವರಲಕ್ಷ್ಮಿ ಎಂದೋ ಮನೆಯವರನ್ನು ಧಿಕ್ಕರಿಸುವಳು. ಇನ್ನಷ್ಟು ಧಿಕ್ಕರಿಸುವುದು ಕಷ್ಟವಲ್ಲ—ಎಂದು ತೋರಿದರೂ, ತನ್ನ ಗೆಳತಿ ಯಾಗಿದ್ದ ವರಲಕ್ಷ್ಮಿಯಲ್ಲಿ, ಅಷ್ಟೆಲ್ಲ ಪರಿವರ್ತನೆಯಾಗುವುದು ಶಕ್ಯವೆ— ಎಂದೆನಿಸಿತು. ತನ್ನ ಆಳಾಗಿದ್ದ ವ್ಯಕ್ತಿ, ವೈಮಾನಿಕನಾಗಿ ನಾಗರಿಕ ಪ್ರಪಂಚ ದಲ್ಲಿ ಮೆರೆದುದನ್ನು ಕಂಡ ಮಾತ್ರಕ್ಕೆ ವರಲಕ್ಷ್ಮಿಯ ತಾರುಣ್ಯ ಹಳೆಯ ಸ್ಮರಣೆಗಳನ್ನೆಲ್ಲ ಮರೆಯುವಂತೆ ಮಾಡೀತೇ ! ಮುಂದೆ ಹೆಚ್ಚಿನ ಸಮಾ

ಧಾನ ಬಂದಿತು. 'ಪ್ರೇಮವೆಂಬುದು ಕುರುಡು' ಎಂದಿದ್ದಾನೆ ಒಬ್ಬ ಕವಿ. ಹೀಗೆ ತರ್ಕವಿತರ್ಕಗಳ ಗೊಂದಲಕ್ಕೆ ಸಿಲುಕಿ, ಆತ ನುಗ್ಗಾಗಿರುವ ವೇಳೆಗೆ ಹಾಗೂ ಹೀಗೂ ಮಂಜುನಾಥ ಧೈರ್ಯ ತಾಳಿ ಹೊರಕ್ಕೆ ಬಂದ. ತಾಯಿ ಬಾಯಿಂದ ಶಂಕರನ ಉಪಕಾರ ಕೇಳಿದ್ದುದಕ್ಕೋ ಏನೋ, "ಬನ್ನಿ, ಅಮ್ಮ ನನ್ನು ನೋಡುವುದಕ್ಕೆ ಬಂದಿರಾ? ಒಳಗಿದ್ದಾರೆ" ಎಂದಂದು, ತಾಯಿ ಬಳಿ ಗೋಡಿ ಶಂಕರ ಬಂದಿದ್ದಾನೆಂದೂ ಹೇಳಿದ. ಶಂಕರ ಮಾತ್ರ ನಿತ್ಯ ಬಂದು ಹೋಗುತ್ತಿದ್ದ ಮನೆಯನ್ನು ನೆಂಟನಂತೆ ಅಳುಕಳುಕಿ ಹೊಗ್ಗಬೇಕಾ ಯಿತು. ಮಂಜುನಾಥನು ತಿರುಗಿ ಅವನ ಬಳಿಗೆ ಬರಲಿಲ್ಲ. ಹಿಂದೆ ಅಜ್ಜಿಯ ದರ್ಶನಕ್ಕೆ ಹೋದಾಗ ಯಾವ ಬಗೆಯ ವಿಸ್ಮೃತಿಯನ್ನು ತಳೆದಿದ್ದನೋ, ಅದೇ ಬಗೆಯ ವಿಸ್ಮೃತಿಯ ನಾಟಕವನ್ನು ಹೂಡಿದ. ಶಂಕರ ಜಗಲಿಯಲ್ಲಿ ಕುಳಿತ. ಶಾಂತು ಅಲ್ಲಿಗೇ ಬಂದಳು. ಆಗಲೇ ಅವರಿಗೆ ಕೇಳುವಂತೆ ಮಂಜು ನಾಥನ ಬಾಯಿಯಿಂದ "ವರಾ, ತಿರುಗಾಟಕ್ಕೆ ಹೋಗಿ ಬರೋಣ" ಎಂಬ ನುಡಿ ಕೇಳಿಸಿತು.

ಮಂಜುನಾಥ ಅವರ ಕಣ್ಣೆದುರಿಂದ ಮರೆಯಾದ ಬಗೆ, ವರಲಕ್ಷ್ಮಿಯ ಪ್ರೇಮಕ್ಕೆ ಶಂಕರ ತಿರುಗಿ ಪ್ರತಿಸ್ಪರ್ಧಿಯಾಗಿ ಬಂದಾನು—ಎಂಬ ಭಯ ವನ್ನುಂಟುಮಾಡಿದಂತೆ ಕಾಣಿಸಿತು. ಶಂಕರ ಯಾರೆಂದು ತಿಳಿದೂ ತಿಳಿದೂ, ಅವನನ್ನು ಮಾತನಾಡಿಸುವ ಇಲ್ಲವೆ ಉಪಚರಿಸುವ ಗೌರವ ಬುದ್ಧಿ ಮಂಜುನಾಥನಿಗೆ ಇಲ್ಲೆಂಬುದನ್ನು ಕಂಡು ನೋವಾಯಿತು. ವರಲಕ್ಷ್ಮಿ ಮಂಜುನಾಥನಂಥ ವ್ಯಕ್ತಿಯನ್ನು ಹಿಂಬಾಲಿಸಬೇಕಿತ್ತೇ? ಎಂಬ ನೋವೂ ಅವನನ್ನು ಸ್ವಾಗತಿಸಿದ ಅವಳ ಸರಳ ಸ್ವಭಾವವೂ, ಆತನ ಮನಸ್ಸಿನಲ್ಲಿ ಪರಿಣಾಮಮಾಡದೆ ಹೋಗಲಿಲ್ಲ. ಎದುರಿಗೆ ಶಾಂತು ಬಂದು ಕುಳಿತೊಡ ನೆಯೇ ಅವಳೊಡನೆ "ಹುಡುಗ ಎಂದು ಬಂದ?" ಎಂದು ಕೇಳಿದ.

"ಬಂದ; ಬೆಳಿಗ್ಗೆ ಹತ್ತು ಗಂಟೆಗೇನೇ ಬಂದಿದ್ದ. ಎಲ್ಲಿಂದಲೇನೋ ಬಂದನಂತೆ. ಬಂದು ಏನಾದೀತು? ಏನಾಗಲಾರದು–ಎಂಬುದು ನನಗೆ ತಿಳಿಯುದ್ದಲ್ಲ. ನೀನೇ ನೋಡಿದೆಯಲ್ಲ–ಜತೆಯಲ್ಲಾರನ್ನೋ ಕರೆದು ತಂದಿ ದ್ದಾನೆ. ಅವನ ಹೆಂಡತಿಯೋ, ಹೆಂಡತಿ ಆಗುವಳೋ! ಅದನ್ನೂ ನಾನು ಕೇಳಲಿಲ್ಲ. ಅವರಿದ್ದಾಗ ಜಾತಕ ನೋಡಿ; ಮಾಡಿ, ನಂಟುತನ ಗೊತ್ತು

ಮಾಡಿದರೆ, ಏನೇನೋ ಕಾಗದ ಬರೆದ. ಪ್ರಾಯಶಃ ಇದಕ್ಕೇನೆ ಇರಬೇಕು. ಏನು ಮಾಡಲಿಕ್ಕಾಗುತ್ತದೆ?"

"ಅವನೇನು ಸಣ್ಣವನೇ? ಮನಸ್ಸಿಗೆ ಸಮನೆಂದು ಕಂಡವಳನ್ನು ಲಗ್ನವಾಗುತ್ತಾನೆ. ಅದರಲ್ಲೇನು ಬೇಸರ?"

"ಅದಕ್ಕೆ ಬೇಸರ ಮಾಡಿದರೂ ಒಂದೇ, ಮಾಡದಿದ್ದರೂ ಒಂದೇ. ಬೇಸರ ನನ್ನ ಭವಿಷ್ಯವನ್ನು ನೋಡಿ. ಮನೆಯ ಗೋಳನ್ನು ಬಂದವನಲ್ಲಿ ಹೇಳಿಕೊಂಡರೆ, ಅವನಾಡುವ ಮಾತುಗಳನ್ನು ಕೇಳಿದರೆ, ನಮಗೆಲ್ಲ ದೇವರೊಬ್ಬನೇ ಗತಿಯೆಂದು ಕಾಣುತ್ತದೆ, ಇನ್ನು ತಿಂಗಳೊಳಗೋ, ಹದಿನೈದು ದಿನದಲ್ಲೋ ಅವನಿಗೆ ಲಗ್ನವಂತೆ. ಡಿಲ್ಲಿಯಲ್ಲೊ ಇನ್ನೆಲ್ಲೊ ಆಗುತ್ತದಂತೆ. 'ನಿನಗೇನಾಗಬೇಕು ನನ್ನಿಂದ? ಖರ್ಚಿಗೆ ಹಣ ಕಳುಹಿಸುತ್ತೇನೆ. ಇಲ್ಲವೆ ಮನೆಮಾರು ಮಾರಾಟಮಾಡಿ ಹೊರಟುಬಿಡುವ. ಈಗಲ್ಲವಾದರೂ ಕೆಲವು ಸಮಯದ ಬಳಿಕ ಹಾಗೆಯೇ ಮಾಡಬೇಡವೆ' ಅನ್ನುತ್ತಾನೆ. ಅವನಿಗೆ ಈ ಊರಲ್ಲಿ ನಿಲ್ಲಲಿಕ್ಕೇ ಸಾಧ್ಯವಿಲ್ಲವಂತೆ. ನಾನೇನು ಮಾಡಬೇಕು ಹೇಳು. ಇದ್ದ ಹಿರಿಯರ ನೆಲ, ಹೊಲಗಳನ್ನು ಮಾರಿ ಅವನ ಹಿಂದೆ ಹೊರಡಬೇಕೆ? ನಾಳೆ ದಿನ ನನ್ನ ಸೊಸೆಯಾಗುವವಳು ನನ್ನನ್ನು ಒದ್ದು ಹೊರಕ್ಕಟ್ಟಿದರೆ ಈ ಮಕ್ಕಳು ಮರಿಗಳನ್ನು ಕಟ್ಟಿಕೊಂಡು, ಗೊತ್ತು ಗುರಿಯಿಲ್ಲದ ಊರಿನ ಬೀದಿಯಲ್ಲಿ ಬಿದ್ದು ಅಲೆಯಬೇಕೇ? ನನಗೊಂದೂ ತಿಳಿಯುವುದಿಲ್ಲ.

"ನಾನೇನೇನೊ ಆಸೆಮಾಡಿಕೊಂಡಿದ್ದೆ. ಆ ಆಸೆಯೆಲ್ಲ ಮುಗಿಯಿತು. ಮಕ್ಕಳನ್ನು ಹೆತ್ತ ಪುಣ್ಯ ಮಾತ್ರ ನನಗೆ. ಮುಂದೇನನ್ನೂ ಬಯಸಬಾರದು ಎಂದು ಕಾಣುತ್ತದೆ ಈಗ. ಅವರಿದ್ದಾಗ ಎಷ್ಟು ಸುಖವಿತ್ತೆಂದು ಗೊತ್ತು. ಎಷ್ಟು ಬೈದರೂ ಹೊಟ್ಟೆಗೆ ಸರಿಯಾಗಿ ತಂದು ಹಾಕುತ್ತಿದ್ದರು. ತಿಂಗಳಿಗೊಮ್ಮೆಯಾದರೂ 'ಶಾಂತು, ನಾನು ಹೀಗೆ ಮಾಡಿದೆ ಹಾಗೆ ಮಾಡಿದೆ' ಎನ್ನುತ್ತಿದ್ದರು. ಇನ್ನು ಮುಂದೆ ಅಷ್ಟೂ ಇಲ್ಲದ ಅವಸ್ಥೆ ನಮಗೆ, ಮದುವೆಯಾಗಬೇಕಾದ ಮೂರು ಮಕ್ಕಳಿವೆ. ಆ ಮೇಲೆ ಗಂಡುಮಕ್ಕಳು, ಈಗಿರುವ ಭೂಮಿಯನ್ನು ನೋಡಿಕೊಂಡು ಕುಳಿತರೆ ಒಂದಿಷ್ಟು ಗಂಜಿಯನ್ನಾದರೂ ಉಣ್ಣಬಹುದು. ಬದಲು ಇವನನ್ನು ನಂಬಿ ಹೋದರೆ, ಅಂತರ ಪಿಶಾಚಿಯಾಗಿ ಬಾಳಬೇಕಾದೀತು" ಎಂದು ಅರ್ಧ ಸಂಭಾಷಣೆಯಲ್ಲಿ ಶ್ರೀಮ

ತಿಯ ತಂಗಿ ಸರಸಿಯನ್ನು ಕರೆದು "ಸರಸಿ, ಶಂಕರನಿಗೆ ಕಾಫಿಯನ್ನು ತಂದು ಕೊಡು'' ಎಂದು ಹೇಳಿದಳು. ಮಗನಿಗಾಗಿ ಮಾಡಿದ ತಿಂಡಿ ಉಪಹಾರಗಳಲ್ಲಿ, ಶಂಕರನಿಗೂ ಒಂದು ಪಾಲು ಬಂದಿತು. ಮಗಳನ್ನುದ್ದೇಶಿಸಿ ಶಾಂತು "ಅಣ್ಣ ಅಲ್ಲೆಲ್ಲಿದ್ದಾನೆ ನೋಡಿಕೊಂಡು ಬಾ" ಎಂದಳು. ಆಕೆ ಆಚೀಚೆ ಹೋಗಿ ನೋಡಿ "ಇಲ್ಲ, ಅವರಿಬ್ಬರೂ ಎಲ್ಲಿಗೋ ತಿರುಗಾಡಲು ಹೋಗಿರಬೇಕು" ಎಂಬ ಸುದ್ದಿ ತಂದಳು.

ಶಂಕರನ ಮುಂದೆ ಕಾಫಿ, ತಿಂಡಿಗಳು ಬಂದುವು. 'ತಿನ್ನು ಮಗು' ಅನ್ನುತ್ತಿದ್ದಾಳೆ ಶಾಂತು. ಆದರೆ ಹಿಂದೆ ಕಂಡ ವಿಚಿತ್ರ ಸಂಗತಿ, ಶಾಂತುವಿನ ಬಾಯಿಯಿಂದ ಕೇಳಿದ ಮಾತುಗಳು ಇವೆಲ್ಲ ಉಪಹಾರ ಸೇವನೆಗೆ ಅವಕಾಶ ಕೊಡುತ್ತವೆಯೇ? ಆತ ನೆಪಕ್ಕೆ ಕಾಫಿಯ ಬಟ್ಟಲನ್ನು ತುಟಿಗೇರಿಸಿ ಹಾಗೆಯೇ ಕೆಳಕ್ಕಿಳಿಸಿದ. ಆಕೆ ಇನ್ನೊಮ್ಮೆ ಮಾತಿಗೆ ತೊಡಗಿದಳು. "ಶಂಕರ, ನನ್ನ ಮನೆಯನ್ನುಳಿಸುವ ಭಾರ ನಿನ್ನ ಪಾಲಿಗೆ. ನೀನೇನು ಮಾಡುತ್ತೀಯೋ ಮಾಡು. ನಾನು ಯಾವ ವಿಚಾರಕ್ಕೂ ಅವನನ್ನು ಕೇಳುವುದಿಲ್ಲ. ಕೇಳಿ ಪ್ರಯೋಜನವಿಲ್ಲ ಅವನಿಗೆ ತನ್ನ ಸುಖ ಒಂದೇ ಕಾಣುತ್ತದೆಯೇ ಹೊರತು ನಾವಾರೂ ಬೇಕಾಗಿಲ್ಲ" ಎಂದಳು.

"ಅಮ್ಮಾ, ಮನೆಮಠ ಮಾರಿಕೊಂಡು, ಅವನ ಹಿಂದೆ ಹೋದರೆ ನಾಳೆ ನೀನನ್ನುವ ಪಾಡೇ ಬಂದೀತು. ಅವನು ಬೇಕಾದುದನ್ನು ಹೇಳಲಿ. ಅವನು ಊರಲ್ಲಿ ಇರುವವನಾದರೆ ಸರಿ. ಆದರೆ ಇರಲಾರನೆಂದೇ ನನಗೆ ಕಾಣುತ್ತದೆ. ನೀವು ಯೋಚನೆ ಮಾಡಬೇಡಿ. ನಾನು ಬದುಕಿರುವಷ್ಟು ದಿನ ನಿಮ್ಮನ್ನು ನೋಡಿಕೊಳ್ಳುವ ಭಾರ ನನ್ನದು. ನೀವು ಬೇರೆ ಚಿಂತೆ ಹಚ್ಚಿಕೊಳ್ಳಬೇಡಿ" ಎಂದು ಶಾಂತುವಿಗೆ ಭರವಸೆ ಕೊಟ್ಟ. ಅಲ್ಲಿ ಬಹುಹೊತ್ತು ಕುಳಿತುಕೊಳ್ಳುವುದಕ್ಕೂ ಅವನಿಗಾಗಲಿಲ್ಲ. ಮಂಜು ಇರುವಷ್ಟು ಸಮಯ ಅಲ್ಲಿಗೆ ಬಂದು ಹೋಗುವುದು ಸರಿಸಮನಲ್ಲವೆನಿಸಿತು ಅವನಿಗೆ. ಅದುದರಿಂದಲೇ "ಅಮ್ಮಾ, ನಿಮ್ಮ ಮಗನಿಗೆ ನನ್ನ ಗುರುತು ಸಾಕಷ್ಟು ಇದೆ. ಹಾಗಿದ್ದರೂ ಮಾತನಾಡಿಸುವ ಇಷ್ಟವಿರುವ ಹಾಗಿಲ್ಲ. ಅವನಿರುವ ನಾಲ್ಕು ದಿನಕಾಲ ನಾನು ಬಂದು ಹೋಗುವುದಿಲ್ಲ. ಅವನಿಗೂ ತೊಂದರೆ, ನನಗೂ ತೊಂದರೆ. ಹೆಚ್ಚಿನ ಕೆಲಸವಿದ್ದರೆ ಮುಕ್ಕಳೊ

ಡನೆ ಹೇಳಿ ಕಳುಹಿಸಿ "-ಎಂದು ಹೇಳಿ, ತನ್ನ ಮನೆಗೆ ಹೊರಟು ಹೋದ.

ಆ ದಿನ ಶಂಕರನ ಮನಸ್ಸು ತುಂಬ ವ್ಯಸನಗ್ರಸ್ತವಾಗಿತ್ತಾದುದರಿಂದ ಶ್ರೀಮತಿಯ ಬಳಿಗೂ ಹೋಗಲಿಲ್ಲ. ವಾಡಿಕೆಯಂತೆ " ಅಮ್ಮನನ್ನು ಚೆನ್ನಾಗಿ ನೋಡಿಕೊ " ಎಂದಾಗಲಿ " ಏನಾದರೂ ಸಾಮಾನು ಬೇಕಿತ್ತೇ?" ಎಂದಾಗಲೀ ಕೇಳದೆ, ನೆಟ್ಟಗೆ, ತನ್ನ ಮನೆಗೆ ಹೊರಟುಬಂದ. ಅವನ ಮನಸ್ಸಿನ ಸ್ಥಿತಿಯೂ ವಿಚಿತ್ರವಾದ ಗೊಂದಲದಿಂದ ತುಂಬಿತ್ತು.

ಊರಿಗೆ ಬಂದ ಮಂಜುನಾಥ ತನ್ನ ಮನೆಯಲ್ಲಿ ಹದಿನೈದು ದಿನಗಳ ತನಕ ಕಾಲ ಕಳೆದ, ಅಷ್ಟೊಂದು ದಿವಸ ಕಳೆದರೇನು ? ತನ್ನ ಪ್ರಪಂಚವೇ ಅವನಿಗೆ ಹೊರತು ಇನ್ನೊಬ್ಬರ ಸುಃಖ ದುಃಖಗಳ ಯೋಚನೆ ಅವನಿಗಿರಲಿಲ್ಲ. ಇಂಥ ವೇಳೆಯಲ್ಲಿ ತಾಯಿಯೊಡನೆ ಸ್ವಲ್ಪ ಸಮಯವನ್ನು ಕಳೆದರೆ ಅವಳ ಮನಸ್ಸಿನ ಸ್ವಲ್ಪ ಭಾರವಾದರೂ ಕಡಿಮೆ ಯಾಗಬಹುದು—ಎಂಬ ಯೋಚನೆಯೂ ಅವನಿಗಾಗಲಿಲ್ಲ. ಸೂತಕದ ಮನೆ, ದುಃಖ ತುಂಬಿದ ಮನೆ ಎಂಬ ಗೊಡವೆಯನ್ನು ಮರೆತೇ ಅತ ವರಲಕ್ಷ್ಮಿಯೊಡನೆ ಸರಸ, ಸಲ್ಲಾಪ, ಚೇಷ್ಟೆಗಳಲ್ಲಿ ಸಮಯ ಕಳೆದ. ತಮ್ಮ ನವಯುಗದ ಒನಪು, ಒಯ್ಯಾರಗಳು ತಾಯಿಗೆ ರುಚಿಸಬಹುದೋ, ರುಚಿಸಲಾರವೋ, ಎಂಬ ವಿಚಾರ ಸರಣಿಯು ಅವನ ಮನಸ್ಸಿಗೆ ಬರುತ್ತಿರಲಿಲ್ಲ. ತಾಯಿ ಶಾಂತುವಿಗೆ ಮಾತ್ರ ಮಗನ ಈ ನಡವಳಿಕೆ ಇಷ್ಟುಷ್ಟೂ ಒಪ್ಪಲಿಲ್ಲ. ತನ್ನ ಸೊಸೆಯಾಗುವವಳು ಯಾರು ಎಂದು ಆಕೆ ಕೇಳಿದರೆ " ಅದನ್ನೆಲ್ಲ ತೆಗೆದುಕೊಂಡು ನಿನಗೇನಾಗಬೇಕು ? " ಎಂಬುದೇ ಅವನ ಉತ್ತರ. " ಮನೆಯ ವಿಷಯದಲ್ಲಿ ಏನುಮಾಡುತ್ತೀಯಾ ? " ಎಂದು ಕೇಳಿದರೆ " ನಾನೇನು ಮಾಡಬಹುದು ? ಮನೆ ಮಾರಬಾರದು ಅನ್ನುತ್ತೀಯಾ ನೀನು. ಇಲ್ಲೇ ಇರಬೇಕು ಎನ್ನುವವಳು ನೀನು. ನನಗದು ಸಾಧ್ಯವೇ? " ಎನ್ನುತ್ತಾನೆ ಆತ. ಶಾಂತುವಿಗೆ ತನ್ನ ಭವಿಷ್ಯ ತೀರ ಕತ್ತಲಾಗಿ ಕಾಣಿಸಿದಾಗ, ಮಗನಿಗೆ ಬುದ್ಧಿ ಹೇಳುವ ಹವ್ಯಾಸಕ್ಕೆ ಹೋಗುತ್ತಾಳೆ.

" ಅವರು ಅಷ್ಟೆಲ್ಲ ಹೇಳಿದ್ದು ಮರವೆಯಾಯಿತೇ ? ' ಒಂದು ಚೂರು ಭೂಮಿ ತೆಗೆದುಕೊಳ್ಳುವ. ಈ ಮಿಲಿಟರಿಯ ತಂಟೆ ಬೇಡ ' ಎಂದಿದ್ದರಲ್ಲ. ದೊಡ್ಡವನಾದ ಬೇರೆ ಗಂಡು ಮಕ್ಕಳಿದ್ದರೆ ನಾನು ನಿನ್ನ ಕಾಲನ್ನು

ಹಿಡಿಯ ಬೇಕಾಗಿರಲಿಲ್ಲ. ಹಿರಿಯವ ನೀನು. ಒಬ್ಬರಲ್ಲ ಮೂವರು ಮದುವೆಗೆ ನೆರೆದ ತಂಗಿಯರಿದ್ದಾರೆ. ಇನ್ನು ಆ ಮಗುವಾದರೂ ಬಂಗಾಡಿ ಶಾಲೆ ಮುಗಿಸಿದಮೇಲೆ ನಾಳೆ ಬೆಳ್ತಂಗಡಿ ಶಾಲೆಗೆ ಹೋಗಬೇಡವೇ ? ಓದು ಮುಂದುವರಿಸಬೇಡವೇ ? ಅವನ ಜೀವನಕ್ಕಾದರೂ ಒಂದು ದಾರಿಯಾಗ ಬೇಡವೇ?" ಎಂದು ಮೊರೆಯಿಡುತ್ತಾಳೆ.

ಅದಕ್ಕೆ ಪ್ರತ್ಯುತ್ತರ : " ಹಿರಿಯನಾಗಿ ಹುಟ್ಟಿದ್ದು ನನ್ನ ತಪ್ಪೆ ? ನಿನಗೆ ವಿಮಾನದ ಹೆದರಿಕೆ ಇದ್ದರೆ ನಾನೇನು ಮಾಡಬೇಕು ? ತಿಂಗಳಿಗೆ ಮುನ್ನೂರು ನಾನ್ನೂರು ಸಿಗುವುದನ್ನು ಬಿಟ್ಟು ಈ ಹಳ್ಳಿಯಲ್ಲಿ ಬಂದಿರ ಬೇಕೆನ್ನುತ್ತೀಯಾ ? "

" ಯಾಕೆ–ಶಂಕರನಿಲ್ಲವೇ ? ನಿನಗಿಂತಲೂ ಹತ್ತು ಪಾಲು ಹೆಚ್ಚು ಓದಿದವ. ಬೇಸಾಯ ಮಾಡಿಕೊಂಡು ಚೆನ್ನಾಗಿಯೇ ಇದ್ದಾನಲ್ಲ. "

ಶಂಕರನ ಹೆಸರನ್ನು ಕೇಳಿದರೆ ಮಂಜುನಾಥನ ಮುಖದ ಬಣ್ಣ ಬದಲಿ ಸುತ್ತಿತ್ತು. ಶಾಂತುವಿಗೂ ಅದು ಗೋಚರವಾಗದಿರುತ್ತಿರಲಿಲ್ಲ. ತಂದೆ ಬಿತ್ತಿದ ವೈರದ ಬೀಜವು ಮಗನ ತಲೆಯಲ್ಲಿ ಇನ್ನೂ ತುಂಬಿಕೊಂಡಿದೆ. ಹಿರಿಯರ ಪಾಪದ ಬೆಳೆ ಇನ್ನೂ ಕಳೆದಿಲ್ಲ–ಎಂದು ಯೋಚಿಸಬೇಕಾಗುತ್ತದೆ ಅವಳು. ಮರುಗಳಿಗೆಗೆ ಶ್ರೀಮತಿ ಶಂಕರರ ಲಗ್ನದ ವಿಚಾರದಲ್ಲಿ ಮಗ ಏನನ್ನುತ್ತಾನೋ ಎನ್ನುವ ಹೆದರಿಕೆಯೇ ಆಗುತ್ತದೆ. ನಾಳೆಯ ದಿನ, ಅವನಿಂದ ಸ್ವಲ್ಪವಾದರೂ ಆರ್ಥಿಕ ಸಹಾಯ ಬಯಸಬಹುದಾದಲ್ಲಿ, ಅವನಿಗೆ ಸುದ್ದಿ ತಿಳಿಸದೆ ಲಗ್ನ ಮಾಡುವುದಕ್ಕಾಗುತ್ತದೆಯೇ—ಎಂಬ ಯೋಚನೆಯಾಗುತ್ತದೆ. ಮದುವೆಯಾಗಬಹುದಾದರೂ ವೆಚ್ಚ ಸಹಿಸ ಬೇಕಾದವನು ಮಂಜುನಾಥನೇ ಅಲ್ಲವೇ? ಎಷ್ಟೆಂದರೂ ತಂದೆ ಬದುಕಿದ್ದಾಗ "ಚಿನ್ನ ಕೊಡುತ್ತೇನೆ. ವರದಕ್ಷಿಣೆ ಕೊಡುತ್ತೇನೆ" ಎಂದು ಆತನೇ ಅಂದಿದ್ದ ನಲ್ಲ–ಎಂದು ಯೋಚಿಸಿ, ಗಳಿಗೆ ಸಾಧಿಸಿ ನಂಟುತನದ ವಿಚಾರ ಹೇಳಿದಳು. "ಮಂಜು, ಶ್ರೀಮತಿಗೆ ಎಂದು ಲಗ್ನ ಮಾಡಿಸುವುದು ನೀನು ? ನಿನ್ನೊಬ್ಬನ ಯೋಚನೆಯನ್ನು ಮಾಡಿದರೆ ಸಾಕೇ?" ಎಂದು ಕೇಳಿದಳು.

ಮಂಜುನಾಥ ನಿರುಪಾಯನಾಗಿ ತಾಯಿಯ ಮುಖವನ್ನೇ ನೋಡಿದ. ತಂದೆ ಬರೆದ ಒಂದು ಕಾಗದದ ನೆವವೂ ಆಯಿತು. "ಅಪ್ಪನಿದ್ದಾಗ ಏನೋ

ಒಂದು ನಂಟುತನ ಗೊತ್ತಾಗಿತ್ತು ಎಂದು ಬರೆದಿದ್ದರು. ಅದಕ್ಕೆ ನಾನು ಹಣ ಕೊಡುತ್ತೇನೆ ಎಂದೂ ಹೇಳಿದ್ದೆ. ಅಷ್ಟೆಲ್ಲ ನಿಜವಾದರೂ, ಅವರು ಹುಡುಗ ಯಾರೆಂಬ ವಿಚಾರದಲ್ಲಿ ಒಂದು ಪಂಕ್ತಿಯನ್ನಾದರೂ ನನಗೆ ಬರೆದಿರಲಿಲ್ಲ. ಹಣಕ್ಕೆ ಮಾತ್ರ ನಾನು ಬೇಕಾಯಿತು" ಎಂದ.

"ನೀನೆನ್ನುವುದೇನು? ಯಾವ ಹುಡುಗನನ್ನು ನಿಶ್ಚಯಿಸಿದ್ದೀಯ? ಎಷ್ಟು ಖರ್ಚಿಗೆ ಬೇಕು? ಎಂದು ಅರೆಮನಸ್ಸಿನಿಂದ ಕೇಳತೊಡಗಿದ. ಶಾಂತುವಿನ ಭೀತಿಯು ಇನ್ನಷ್ಟು ಹೆಚ್ಚತೊಡಗಿತು. ಹೇಳಬೇಕಾದುದನ್ನು ಹೇಳದೆಯೆ ಉಪಾಯವಿಲ್ಲ ಎಂದು, ತನ್ನ ಭಾರವನ್ನು ನೀಗಿಸಿಕೊಂಡಳು. "ನಾನೇನು ಗೊತ್ತುಮಾಡಿದ್ದಲ್ಲ. ಅವರಿದ್ದಾಗಲೇ ಯೋಚಿಸಿ ನಿಶ್ಚಯಿಸಿದ್ದು ಅವಳನ್ನು ಶಂಕರನಿಗೆ ಕೊಡಬೇಕೆಂದು ಗೊತ್ತಾಗಿತ್ತು" ಎಂದಳು.

"ಏನು–ಶಂಕರನಿಗೆ! ಯಾವ ಶಂಕರನಿಗೆ ?"

"ಶಂಕರ ಗೊತ್ತೇ ಇಲ್ಲವೇ ನಿನಗೆ? ಮೊನ್ನೆ ನೀನೇ ಅಂದೆ—ಶಂಕರ ಬಂದಿದ್ದಾನೆ ಮನೆಗೆ ಎಂದು, ಮೂಡೋಡಿಗೂ ನೀನು ಹೋದವನು ಅಜ್ಜಿ ಇದ್ದಾಗ."

"ಅವನಿಗೇ!" ಎಂದು ತಿರುಗಿ ವಿಸ್ಮಯ ಸೂಚಿಸಿದ."

"ಏನಾಗಿದೆ ಅವನಿಗೆ? ಅವನು ಒಪ್ಪಿದ್ದು ನಮ್ಮ ಪುಣ್ಯ."

"ಅಪ್ಪ ಅವನನ್ನು ನಮ್ಮ ಕುಲವೈರಿಯೆಂದು ತಿಳಿದಿದ್ದರು. ಮುತ್ತಜ್ಜಿಗೆ ಅವನೆಂದರೆ ಒಳ್ಳೆಯ ನೆಚ್ಚು–ಎಂದ ಮಾತ್ರಕ್ಕೆ, ಅಪ್ಪನ ಮನಸ್ಸಿಗೆ ಬಾರದ ಕೆಲಸವನ್ನು ನಾವು ಮಾಡುವುದೇ? ನಿನಗೆ ಬೇರೆ ಯಾರೂ ಸಿಗಲಿಲ್ಲವೇ?"

"ಅವರಿಂದು ಬದುಕಿರುತ್ತಿದ್ದರೆ ಈ ತಿಂಗಳಲ್ಲಿ ಇದೇ ಲಗ್ನ ನಡೆದು ಹೋಗುತ್ತಿತ್ತು. ಅವರಿಗೆ ಮಾತ್ರ ಕನ್ಯಾದಾನದ ಯೋಗವಿರಲಿಲ್ಲ."

"ಏನು ಮಾತನಾಡುತ್ತೀ ನೀನು ? ಅಪ್ಪನಿಗೆ ಶಂಕರನ ಹೆಸರು ಕೇಳಿದರಾಗುತ್ತಿರಲಿಲ್ಲ" ಎನ್ನುತ್ತಲೇ ಶಾಂತು ತನ್ನ ಪತಿಯ ಮನಸ್ಸು ಪರಿವರ್ತನೆಗೊಂಡ ಕಥಾನಕವನ್ನು ಹೇಳಬೇಕಾಯಿತು. ಅವಳ ಕಣ್ಣುಗಳು ಕೆಂಪಡರಿ ತುಟಿ ಗದ್ಗದಿಸಿತು. ಕಂಬನಿ ಉದುರಿತು. ಊಟದ ವೇಳೆಯಲ್ಲಿ ನಡೆದ ಮಾತುಕತೆಗಳಿವು, ಮಂಜುನಾಥ ವರಲಕ್ಷ್ಮಿಯರಿಬ್ಬರೂ ಊಟಕ್ಕೆ ಕುಳಿತಿ

ದ್ದರು. ಆತ ಹುಬ್ಬು ಗಂಟಿಕ್ಕಿಕೊಂಡು ಸಿಡುಕಿನ ಮುಖದಿಂದ ತಾಯಿಯ ಮಾತನ್ನು ಕೇಳುತ್ತಿದ್ದ. ವರಲಕ್ಷ್ಮಿಯು ಆ ಯಾವತ್ತು ದೃಶ್ಯವನ್ನು ವಿಸ್ಮಯದಿಂದಲೇ ನೋಡುತ್ತಿದ್ದಳು. ಶಾಂತುವಿನ ಬಾಯಿಂದ ಬಂದ ಕಥಾನಕ, ಮುದುಕಿಯ ಕೊನೆಗಾಲದ ಬಯಕೆ, ರಂಗರಾಯರ ವಚನ, ಆ ಮೇಲಾದ ಹೃದಯ ಪರಿವರ್ತನೆ, ಜತೆಗೆ ಶಾಂತುವಿನ ಮಾನಸಿಕ ಕಲ್ಲೋಲ ಇವು ಮಂಜುನಾಥನನ್ನು ತುಸುವೂ ಕದಲಿಸಿದಂತೆ ಕಾಣಲಿಲ್ಲ.

ಆತ ಹೇಳಿದ "ಅಮ್ಮಾ ನೀನು ಸುಳ್ಳು ಹೇಳುತ್ತೀ ಅನ್ನಲಾರೆ. ಅಜ್ಜಿ ಸಾಯುವವೇಳೆಗೆ ಅಪ್ಪನು ವ್ಯಥೆಗೆ ಏನೂ ಅಂದಿರಬಹುದು. ಅವರ ನಿಜವಾದ ಮನಸ್ಸೇನೆಂದು ನನಗೆ ಗೊತ್ತು. ಯಾರೂ ಹೇಳಬೇಕಾಗಿಲ್ಲ. ಆ ಕಥೆಯನ್ನೆಲ್ಲ ಉಗ್ರಾಣಿ ತಿಮ್ಮ ನನಗೆ ಹೇಳಿದ್ದಾನೆ. ಏನೂ ಗೊತ್ತಿಲ್ಲ ಎಂದು ತಿಳಿಯುವುದು ಬೇಡ. ಅಪ್ಪ ಕಾಯಿಲೆ ಬಿದ್ದಾಗ ಶಂಕರ ಇಲ್ಲಿ ಬಂದು ನಮ್ಮಪ್ಪನ ಚಾಕರಿ ಮಾಡಿರಬಹುದು. ಅದು ಅವರ ಮೇಲಣ ಮರ್ಯಾದೆಯಿಂದಲೂ ಅಲ್ಲ, ಸ್ನೇಹದಿಂದಲೂ ಅಲ್ಲ. ಜ್ವರ ಕುದಿಯುತ್ತಿದ್ದಾಗ ಅಪ್ಪ ಶಂಕರನ ವಿಚಾರದಲ್ಲಿ ಬಯ್ಯುತ್ತಿದ್ದರೆಂಬುದು ಸುಳ್ಳಲ್ಲವಷ್ಟೆ. ಏನೂ ಇರಲಿ ಈ ಸಂಬಂಧ ಅವರ ಆತ್ಮಕ್ಕೆ ಒಪ್ಪಲಾರದ್ದು, ನನಗೂ ಒಪ್ಪಲಾರದ್ದು.

"ಇಷ್ಟು ದಿನ ಕಾದೆಯಂತೆ. ಇನ್ನು ನಾಲ್ಕು ದಿನ ಕಾಯಬೇಕಾದೀತು. ನೀನು ಬೇರೆಲ್ಲಾದರೂ ಹುಡುಕು. ನಿನ್ನಿಂದಾಗದಿದ್ದರೆ ನಾನು ಹುಡುಕುತ್ತೇನೆ. ಅಂತು ನನ್ನ ಮನಸ್ಸನ್ನು ಹೇಳಿಬಿಡುತ್ತೇನೆ, ನಿನಗೆ ನಾನು ಬೇಕೆಂದಿದ್ದರೆ ಈ ನಂಟುತನದ ವಿಚಾರ ಅಲ್ಲಿಗೇ ಬಿಟ್ಟುಬಿಡು. ಶಂಕರ ಈ ಮನೆಗೆ ಇನ್ನು ಮುಂದೆ ಬರಲೂ ಕೂಡದು" ಎಂದು ಗಟ್ಟಿಯಾಗಿ ಒದರಿ, ಕೈ ತೊಳೆಯಲು ಹೋದ. ದೋಷ, ನಂಜುಗಳು ಅವನ ಒಂದೊಂದು ಮಾತಿನಲ್ಲೂ ತುಂಬಿಕೊಂಡಿದ್ದುವು. ತಂದೆಯ ಮೂರ್ಖ ಗುಣಗಳ ಪ್ರತೀಕವಾಗಿದ್ದ ಆತ ಇಷ್ಟೆಲ್ಲ ಆಡಿದ್ದು ಸಾಲದೆಂಬಂತೆ ಕೈ ತೊಳೆದುಕೊಂಡು, ತಿರುಗಿ ಊಟದ ಮನೆಗೆ ಬಂದು, ಗೋಡೆಗೆ ಒರಗಿ ಕುಳಿತುಕೊಂಡು, ದೊಡ್ಡದೊಂದು ಉಪನ್ಯಾಸವನ್ನೇ ತೊಡಗಿಬಿಟ್ಟ.

"ಅಮ್ಮ, ನಿನಗೆ ಆತನು ಯಾರು, ಎಂಥವನು ಎಂಬುದು ಗೊತ್ತಿಲ್ಲ. ನಮ್ಮ ಹಿರಿಯರ ಕುಲದವನು, ದೊಡ್ಡವರ ಮಗ—ಎಂದಿಷ್ಟೇ ಗೊತ್ತು.

ಅವರ ಸಿರಿವಂತಿಕೆಯೆಲ್ಲ ನನಗೆ ಗೊತ್ತು. ಅಪ್ಪ ಅವರಿಗೆ ಜಾತಕ ಕಳುಹಿಸಿದಾಗ ಏನು ಮಾಡಿದರೆಂದು ಗೊತ್ತೇ ಇದೆ. ಇವಳ ಜಾತಕವನ್ನೇ ಕಳುಹಿಸಿರಲಿಲ್ಲವೇ? ಆಗ ಅವರ ಕಾಗದಕ್ಕೆ ಉತ್ತರ ಕೊಡುವಷ್ಟು ತಕ್ಕವರಾಗಿ ನನ್ನಪ್ಪ ಕಾಣಿಸಲಿಲ್ಲ. ಸಂಬಂಧದವರಾದರೆ ಏನು? ಹಳ್ಳಿಯ ಮೂಲೆಯ ಶ್ಯಾನುಭಾಗರೆಂದು ತಿಳಿದರಲ್ಲವೇ? ಅದಕ್ಕೂ ಮುಂಚಿನ ಕತೆಯೊಂದನ್ನು ಹೇಳುತ್ತೇನೆ. ನಾನದನ್ನು ಅಪ್ಪನಿಗೂ ಹೇಳಿರಲಿಲ್ಲ. ನನ್ನ ಮನಸ್ಸಿನಲ್ಲೇ ಈ ಹೊತ್ತಿನ ತನಕವೂ ಇರಿಸಿಕೊಂಡಿದ್ದೇನೆ. ಅದನ್ನೆಲ್ಲ ಕೇಳಿದ ಮೇಲೆ ಅವರ ಕುಲ, ಸಂಬಂಧಗಳು ಏನೆಂದು ನಿನಗೂ ತಿಳಿದೀತು" ಎಂದು ಒಂದು ಕಥಾನಕವನ್ನೇ ತೆಗೆದ,

ಜಾತಕದ ಪ್ರಕರಣ, ರಂಗರಾಯರು ಬರೆದ ಪತ್ರದ ಪ್ರಕರಣಗಳು ಅವಳಿಗೆ ತಿಳಿದುವಾಗಿದ್ದರೂ, ಅವು ಹಿಂದಿನ ಮಾತುಗಳು. ಪರಿಚಯಕ್ಕೆ ಪೂರ್ವದವು. ಸುಂದರರಾಯರು ಬಂಗಾಡಿಗೆ ಬಂದವರಲ್ಲ. ಬಂದ ಮೇಲೆ ಆ ಲಗ್ನದ ವಿಚಾರದಲ್ಲಿ ಅವರು ಏನೊಂದೂ ಆತಂಕ ತಂದವರಲ್ಲ. ' ಅವರವರ ಇಷ್ಟ ' ಎಂದಿದ್ದರು. ಸಣ್ಣ ಪುಟ್ಟ ತಪ್ಪುಗಳಿಗಾಗಿ ಹೀಗೆ ಸಿಡುಕಾಗುವುದು ಯೋಗ್ಯವಲ್ಲ ಎಂದು ಅವಳಿಗೆ ತೋಚಿದಾಗ, ಮಂಜುನಾಥ ತೊಡಗಿದ ಕಥಾನಕದ ವಿಷಯವೇ ಬೇರೆಯಾಗಿತ್ತು.

"ಅಮ್ಮಾ, ನಾನು ಮನೆಯನ್ನು ಬಿಟ್ಟು ಎಷ್ಟು ವರ್ಷಗಳಾದವು? ಆಗಿರಬೇಕು—ಏಳೋ ಎಂಟೋ. ಅಪ್ಪನಮೇಲಿನ ಬೇಸರದಿಂದ ಊರುಬಿಟ್ಟೆ. ಕೈಯ್ಯಲ್ಲಿ ಕಾಸಿರಲಿಲ್ಲ. ಹೇಗೋ ಹೇಗೋ ತುಂಬ ಕಷ್ಟಪಟ್ಟು ಮುಂಬಯಿಯನ್ನು ಸೇರಿಕೊಂಡೆ. ಅಲ್ಲಿ ಚಿಲ್ಲರೆ ಚಾಕರಿ ಮಾಡಿಕೊಂಡು, ಹೊಟ್ಟೆ ತುಂಬಿಸಿಕೊಂಡು, ಬೀದಿಯ ಮಗ್ಗುಲಲ್ಲಿ ಮಲಗಿದ ದಿನಗಳೂ ಉಂಟು. ಆಗ ನಮ್ಮ ಜಿಲ್ಲೆಯ ಯಾರೋ ಒಬ್ಬರ ಗುರುತಾಯಿತು. ಅವರ ಪರಿಚಯದಿಂದ ಸಂಬಂಧಿಕರೊಬ್ಬರ ಗುರುತಾಯಿತು. ಬಂಗಾಡಿ ಲಕ್ಷ್ಮಣರಾಯರೆಂದು ಅವರ ಹೆಸರು. ಬಂಗಾಡಿ ಎಂಬ ಹೆಸರನ್ನು ಕೇಳಿಯೇ ಅವರಲ್ಲಿಗೆ ಹೋದೆ; ಗುರುತುಮಾಡಿಕೊಂಡೆ. ಅವರಲ್ಲಿ ಹೋಗಿ ಯಾಚಿಸಿದೆ. ' ಏನಾದರೂ ಚಾಕರಿ ಮಾಡಿಸಿಕೊಡಿ," ಎಂದು ಬೇಡಿದೆ. ' ಈಗೆಲ್ಲಿಯ ಚಾಕರಿ? ರಿಟ್ರೆಂಚ್‌ಮೆಂಟ್ ನಡೆದಿದೆ. ನಾವೇ ಒಳ್ಳೆಯ ಸ್ಥಿತಿಯಲ್ಲಿಲ್ಲ. ಮನೆಯಲ್ಲಂತು

ಜಾಗವಿಲ್ಲ' ಎಂದು ಯೋಚಿಸಿ ಹೇಳಿದರು: "ನಮ್ಮ ದೂರದ ಸಂಬಂಧದ ಅಣ್ಣನಾಗುವವರು ಡಿಲ್ಲಿಯಲ್ಲಿದ್ದಾರೆ. ಸೆಕ್ರೆಟೇರಿಯಟ್‌ನಲ್ಲಿ ಕೆಲಸ. ಸಾವಿರ ರೂಪಾಯಿ ಸಂಬಳ ಬರುತ್ತಿದೆ. ಏನಾದರೂ-ಊರಿನವನು, ಜಾತಿಯವನು- ಎಂಬುದರಿಂದ ಸಹಾಯಮಾಡಿಯಾರು. ಸುಂದರರಾಯರು ಎಂದು ಹೆಸರು. ಹಿಂದೆ ಮುಂಬಯಿಯಲ್ಲೇ ಇದ್ದರು. ಇರುವಾಗ ಇಲ್ಲಿಗೆ ಬಂದು ಹೋಗುತ್ತಿದ್ದರು. ನಾವೂ ಅವರಲ್ಲಿಗೆ ಹೋಗುತ್ತಿದ್ದೆವು. ಈಗ ದಿಲ್ಲಿಗೆ ಹೋದ ಮೇಲೆ ಏನೋ ಇಲ್ಲಿಗೆ ಬಂದಿಲ್ಲ, ಕಾಗದ ಪತ್ರವೂ ಇಲ್ಲ. ಆದರೆ ನಮ್ಮ ಮೇಲೆ ತುಂಬ ಅಭಿಮಾನ. ನೀನು ಅಲ್ಲಿಗೆ ಹೋದರೆ ಏನಾದರೂ ಕೆಲಸವಾದೀತು. ಗುರುತಿಗೆ ಒಂದು ಕಾಗದವನ್ನು ಕೊಡುತ್ತೇನೆ" ಎಂದರು. ಎಂದು ಹಾಗೆಂದು ಕಾಗದವನ್ನು ಕೊಟ್ಟುದಲ್ಲದೆ ದಾರಿಯ ಖರ್ಚಿಗೂ ಹಣವನ್ನು ಕೊಟ್ಟು ಕಳುಹಿಸಿದರು. ನಾನು ತುಂಬ ಆಸೆಯಿಂದ ಮುಂಬಯಿಯನ್ನು ಬಿಟ್ಟು ದಿಲ್ಲಿಗೆ ಹೋದೆ. ಕಣ್ಣು ಕಾಣದ ಊರದು. ನನಗೆ ಹಿಂದುಸ್ತಾನಿ ಬರುತ್ತಿರಲಿಲ್ಲ. ಚೂರುಪಾರು ಇಂಗ್ಲಿಷ್ ಅಷ್ಟೇ ಬರುತ್ತಿತ್ತು. ದಿಲ್ಲಿಯಲ್ಲಿ ಅವರ ಮನೆಯ ವಿಳಾಸ ಸಮನಾಗಿ ಗೊತ್ತಿರದೆ ಮೂರುದಿನ ಕಾಲ ಸೆಕ್ರೆಟೇರಿಯೆಟ್‌ನಲ್ಲಿ ಅವರ ಮೋಟರು ಬಳಿಯಲ್ಲಿ ಕಾದುನಿಂತೆ. ಕೊನೆಗೆ ಅವರ ದರ್ಶನವಾಯಿತು. ಕಾಗದ ಕೊಟ್ಟೆ. 'ಮನೆಗೆ ಬಾ' ಎಂದರು. ಮನೆ ಅರಸಿಕೊಂಡು ಹೋದೆ. ನಾನು ಹೋದಾಗ ಅವರಿದ್ದಿರಲಿಲ್ಲ. ಇದೇ ಶಂಕರನ ತಾಯಿ ಇದ್ದರು. ರಾಯರಾದರೂ ಬೇಕು, ಆ ಹೆಂಗಸು ಬೇಡ. ಬಂದವನನ್ನು ಒಂದಿಷ್ಟಾದರೂ ಮಾತನಾಡಿಸಬೇಡವೇ? ನಾಲ್ಕು ದಿನ ಹಿಡಿಯಿತು ಸುಂದರರಾಯರನ್ನು ಕಾಣುವುದಕ್ಕೆ. ಅವರ ಕಾರು ಬರುವಾಗ ರಾತ್ರಿಯಾಗಿತ್ತು. ಕಾರಿನಿಂದ ಇಳಿದೊಡನೆಯೇ 'ಬಂದಿದ್ದೇನೆ' ಎಂದೆ. 'ಈಗೇನು ಮಾಡುವುದು? ನಾಳೆ ಬಾ' ಎಂದರು. ಮರುದಿನ ಬೆಳಿಗ್ಗೆ ಹೋದೆ, ಒಳಗೆಲ್ಲ ಕಾಫಿ ಕುಡಿಯುತ್ತಿದ್ದರು, ಜಗುಲಿಯಲ್ಲಿ ಕಾದು ಕುಳಿತೆ. 'ಬಾ' ಎಂದು ಕರೆಯಲಿಲ್ಲ. 'ಕುಳಿತುಕೋ' ಎನ್ನಲಿಲ್ಲ. ಅಂತು ಬಹು ಹೊತ್ತಿನ ನಂತರ ಹೊರಗೆ ಬಂದು ಅಂದರು "ಮಗು, ಇಲ್ಲೆಲ್ಲ ರಿಟ್ರೆಂಚ್‌ಮೆಂಟ್ ನಡೆದಿದೆ. ನೀನು ಬಂದ ಸಮಯವೇ ಕೆಟ್ಟದ್ದು. ಬೇರೆ ಸಮಯವಾದರೆ ಏನೂ ಮಾಡಬಹುದಿತ್ತು. ಅಲ್ಲದೆ ನಿನ್ನ ಮೆಟ್ರಿಕ್ ಪೂರಾ ಆಗ

ಲಿಲ್ಲ ಅನ್ನುತ್ತೀಯ, ಏನೂ ಕೆಲಸ ಸಿಗಲಾರದು" ಅಂದರು. ಬೇಗ ಅಲ್ಲಿಂದ ಹೊರಟೆ. ಪರವೂರಿನ ಹುಡುಗ; ಜಾತಿಯವ. ಸಂಬಂಧಿಕ ರಿಂದ ಒಂದು ಪತ್ರ ತಂದಿದ್ದಾನೆ—ಎಂಬ ಯಾವ ಗೊಡವೆಯೂ ಇಲ್ಲದೆ, ಹೊರಗೆ ಕಳುಹಿಸಿದರು. ನನಗೆ ಸಿಡಿಲೆರಗಿದಂತಾಯಿತು. ಕೈಯಲ್ಲಿ ಕಾಸೂ ಇರಲಿಲ್ಲ. ನಿಲ್ಲುವುದಕ್ಕೆ ನೆರಳೂ ಇರಲಿಲ್ಲ. ಯಾರನ್ನು ಬೇಡ ಬೇಕು, ಎಲ್ಲಿ ಕೆಲಸಕ್ಕೆ ಹೋಗಬೇಕು—ಎಂದು ತೋರದಾಯಿತು. ಬೇರೆ ಉಪಾಯ ಕಾಣದೆ ಅವರ ಮನೆಗೆ ಸಮೀಪವಾಗಿರುವ ಇನ್ನೊಂದು ಮನೆ ಯನ್ನು ಹೊಕ್ಕೆ. ಜಯರಾಮ ಎಂಬುವರ ಮನೆಯದು. ಅವರು ಇವ ರಂತೆಯೆ ದೊಡ್ಡ ಕೆಲಸದಲ್ಲಿದ್ದರು. ಅಲ್ಲಿಗೆ ಹೋದೆ. ಮುಖ ಪೆಚ್ಚಗೆ ಮಾಡಿ ನಿಂತೆ. ಈಗ ನನ್ನ ಜತೆಗೆ ಬಂದಿದ್ದಾಳಲ್ಲ–ಇವಳು ಅವರ ಮಗಳು. ಆಗ ಚಿಕ್ಕವಳಿದ್ದಳು. ನನ್ನನ್ನು ಕಂಡಳು. ಕಂಡವಳೇ ತಂದೆಯನ್ನು ಕರೆದುಕೊಂಡು ಬಂದಳು. ನನ್ನ ಗೋಳನ್ನೆಲ್ಲ ಅವರ ಮುಂದೆ ಹೇಳಿದೆ. "ಚಾಕರಿ ಏನಿಲ್ಲ. ಏನು ಮಾಡಲಿ. ಆದರೆ ನಿನಗೆ ಬೇರೆ ಕೆಲಸ ಸಿಗುವ ತನಕ ಈ ಮನೆಯಲ್ಲಿರು. ಮಕ್ಕಳನ್ನು ನೋಡಿಕೊಂಡಿರು" ಎಂದು ಆಶ್ರಯ ಕೊಟ್ಟರು. ಆವರ ಉಪಕಾರದಿಂದ ಬದುಕಿಕೊಂಡೆ. ಇಲ್ಲವಾ ದರೆ ನನಗೆ ಹುಚ್ಚು ಹಿಡಿಯುತ್ತಿತ್ತು.

"ಅವರಲ್ಲಿ ಸಂಬಳವಿಲ್ಲದೆ, ಊಟಮಾಡಿಕೊಂಡು ಮೂರು ವರುಷ ವಿದ್ದೆ. ನನಗೆ ತಿಳಿದ ಕೆಲಸ ಮಾಡುತ್ತಿದ್ದೆ. ಖರ್ಚಿಗೆ ಕೊಡುತ್ತಿದ್ದರು. ಅವರ ಮಕ್ಕಳನ್ನು ಶಾಲೆಗೆ ಕೊಂಡುಹೋಗಿಬಿಡುತ್ತಿದ್ದೆ. ಬಿಡುವು ತುಂಬಾ ಇತ್ತು. ಹಾಗಾಗಿ ಅವರ ಮೋಟರಿನಲ್ಲಿ ಡ್ರೈವಿಂಗ್ ಕಲಿತೆ, ಲೈಸೆನ್ಸ್ ಪಡೆದೆ. ಇನ್ನೆಲ್ಲಾದರೂ ಮೋಟರ್ ಡ್ರೈವರನ ಕೆಲಸ ಸಿಗಬಹುದು— ಎಂದು ಯೋಚಿಸುವುದರೊಳಗಾಗಿ ವಿಮಾನ ದಳಕ್ಕೆ ಜನಗಳನ್ನು ಕರೆಯು ತ್ತಿದ್ದರು, ಅದೃಷ್ಟ ಪರೀಕ್ಷೆ ಮಾಡುತ್ತೇನೆಂದು ಹೋಗಿ ಭೇಟಿಯಾದೆ ಯಾವ ಪುಣ್ಯದಿಂದಲೋ ಏನೋ—ಅಲ್ಲಿ ಕೆಲಸಕ್ಕೆ ಸೇರಿಸಿಕೊಂಡರು. ಈ ನಾಲ್ಕೈದು ವರ್ಷಗಳಲ್ಲಿ ವೈಮಾನಿಕನಾಗಿ ಬಾಳಿದ್ದೇನೆ.

"ಇಷ್ಟೆಲ್ಲ ಕತೆ ಕೇಳಿದ ಮೇಲೆ ನಿನಗೆ ಗೊತ್ತಾದೀತು, ನಿನ್ನ ಶಂಕರನ ಮನೆಯವರು ಎಂಥವರೆಂದು. ಖಂಡಿತಕ್ಕೂ ಅವನ ಸಂಬಂಧ ನನಗೆ

ಬೇಡ. ಶ್ರೀಮತಿಗೆ ಮದುವೆಯಾಗದಿದ್ದರೂ ಚಿಂತೆಯಿಲ್ಲ; ಅವರ ಕುಲದ ಹಂಗು ನನಗೆ ಬೇಡ" ಎಂದು ನುಡಿದು, ಎದ್ದುಬಿಟ್ಟ.

ಆ ದಿನ ಶಾಂತುವಿನ ಪಾಡು ಏನೆನ್ನಬೇಕು! ಮಂಜುನಾಥನ ಹೃದಯ ಹಿಂದಣ ಬೇಗುದಿಯಿಂದ, ಸೇಡಿನಿಂದ ಬೇಯುತ್ತಲಿತ್ತು. ಆತನಿಗೆ ಮಾತನಾಡುತ್ತ ಆಡುತ್ತ ಹಳೆಯ ನೋವುಗಳಿಂದ ದುಃಖವೂ ಒತ್ತಿ ಬಂದಿತ್ತು. ಈ ಎಲ್ಲ ಮಾತುಗಳಾಗುವಾಗ ಶ್ರೀಮತಿಯು ಬಾಗಿಲ ಮರೆಯಲ್ಲಿ ನಿಂತು ಕೇಳುತ್ತಿದ್ದಳು. ಇದು ತನ್ನ ವಿಷಯವೆಂದು ಅವಳಿಗೂ ಗೊತ್ತಿತ್ತು. ಶಾಂತು ಮಾತ್ರ, ಮಗನ ಒಂದು ಕಾಲದ ನೋವಿಗಾಗಿ, ಇಂದು—ಸುಂದರರಾಯರ ಮೇಲಿನ ಕೋಪವನ್ನು ಮಗ ಶಂಕರನ ಮೇಲೆ ತೀರಿಸಿಕೊಳ್ಳಲು ಸಿದ್ಧಳಾಗಿರಲಿಲ್ಲ. ಶಂಕರನ ಪರಿಚಯ ಬಹು ದಿನದ್ದು. ಅವನ ವಿಷಯದಲ್ಲಿ ಉಂಟಾದ ನಂಬಿಕೆ, ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನ ಮೇಲೂ ಉಂಟಾಗಿರಲಿಲ್ಲ. ಹೀಗಾಗಿ, ಆಕೆ ಅನಂತರ ಮಗನೊಡನೆ ಮದುವೆಯನ್ನು ಕುರಿತಾಗಿ ಒಂದೇ ಒಂದು ಮಾತನ್ನು ಆಡಲಿಲ್ಲ. ಅವನೂ ಆ ಸಂಗತಿಯನ್ನು ಕೆದಕಿ ಮೇಲಕ್ಕೆ ಹಾಕಲಿಲ್ಲ.

ಮಂಜುನಾಥನ ಪಾಲಿಗೆ, ಈ ಒಂದು ಅಪ್ರಿಯವಾದ ಘಟನೆಯೊಡನೆ ಇನ್ನೊಂದು ಸಂಗತಿಯೂ ಸೇರಿತು. ಅವನ ಜತೆಗಾರ್ತಿಯಾದ ವರಲಕ್ಷ್ಮಿ ತಾನು ಪರಮ ವೈರಿಯೆಂದು ತಿಳಿದುಕೊಂಡ ಶಂಕರನನ್ನು ಭೇಟಿಯಾಗಲು ಬಯಸಿದಳು. ವರಲಕ್ಷ್ಮಿಯ ಮನಸ್ಸು ಅಲ್ಲಿಗೆ ಬಂದು ಶಂಕರನನ್ನು ಕಂಡಂದಿನಿಂದ, ಅನಂತರ ಮಂಜುನಾಥ ಮನೆಯಲ್ಲಿ ವರ್ತಿಸಿದ ಬಗೆಯನ್ನೆಲ್ಲ ನೋಡಿದಂದಿನಿಂದ, ಅತ್ಯಂತ ವಿಪ್ಲವಕ್ಕೊಳಗಾಗಿತ್ತು. ಮಂಜುನಾಥನ ಎದುರಿಗೆ ಅವಾವುದನ್ನು ತೋರಿಸಿಕೊಳ್ಳದಿದ್ದರೂ ಒಳಗೆ ಆ ಜ್ವಾಲಾಮುಖಿ ಕುದಿಯುತ್ತಲೇ ಇತ್ತು. ಆಕೆ "ಶಂಕರನಲ್ಲಿಗೆ ಹೋಗಿಬರುತ್ತೇನೆ. ಊರು ಬಿಡುವ ಮೊದಲು ಒಮ್ಮೆಯಾದರೂ ನೋಡಿ ಬಾರದಿದ್ದರೆ ಚಂದವಲ್ಲ" ಎಂದಾಗ, ಮಂಜುನಾಥ ಥಟ್ಟನೆ "ಅವನ ಹಂಗು ನಿನಗೇನು? ಹೋಗಬೇಕಾಗಿಲ್ಲ" ಎಂದುಬಿಟ್ಟ. ವರಲಕ್ಷ್ಮಿಯು ಮುಖ ಮುರಿದದ್ದನ್ನು ಕಂಡ. ಅವಳನ್ನು ಅಷ್ಟು ಸುಲಭದಲ್ಲಿ ಆಳಬಹುದೆಂಬ ಮಂಜುವಿನ ಅಹಂಕಾರ ಕುಸಿಯಿತು. ತುಸು ಮಿದುವಾಗಿ "ಹಾಗಲ್ಲ, ನನ್ನ ಜತೆಯಲ್ಲಿ

ಬಂದದನ್ನು ನೋಡಿ ಅವನಿಗೆ ಸಿಟ್ಟಾಗಿಯೇ ಆಗುತ್ತದೆ. ಯಾಕೆ, ಬೇಕೆಂದೇ ಹೋಗಿ, ಅವನ ಕೋಪಕ್ಕೆ ಗುರಿಯಾಗಬೇಕು?" ಎಂದ. ಅದಕ್ಕವಳು "ನಮ್ಮ ಸ್ನೇಹ ಜಗಳದಿಂದ ಮುರಿದದ್ದಲ್ಲ. ಆತನ ಸ್ವಭಾವ ನನಗೆ ಗೊತ್ತು ನನ್ನದು ಅವನಿಗೆ ಗೊತ್ತು. ಅವನ ಅಭಿಪ್ರಾಯ–ಜೀವನದ ವಿಚಾರದಲ್ಲಿ ಬೇರೆಯಾಯಿತು ಎನ್ನುವುದರಿಂದ ನಾವು ಬೇರೆಯಾಗಬೇಕಾಯಿತು. ಆದರೆ ಈಗ ಇಷ್ಟು ಗುರುತಿದ್ದೂ ಅವನ ಬಳಿಗೆ ಒಮ್ಮೆಯಾದರೂ ಹೋಗದಿದ್ದರೆ, ಅದು ಸಭ್ಯವರ್ತನೆಯೆನಿಸದು" ಎಂಬುದಕ್ಕೆ ಮಂಜುನಾಥ ಉಪಾಯ ಗಾಣದೆ ಮನೆಯ ಉಗ್ರಾಣಿಯನ್ನು ಅವಳ ಜತೆಗೆ ಕಳುಹಿಸಿಕೊಟ್ಟ.

ಮೂಡೋಡಿಯನ್ನು ಕಾಣುತ್ತ ಅವಳ ಮುಖ ಪ್ರಸನ್ನವಾದಂತೆ, ವರಲಕ್ಷ್ಮಿಯನ್ನು ಕಂಡು ಶಂಕರನಿಗೂ ಸಂತೋಷವೇ ಆಯಿತು. ಏನಿಲ್ಲದೆ ಹೋದರೆ, ಅವಳಿಗೆ–ರೈತನಾಗಿ ತಾನಿಷ್ಟೆಲ್ಲ ಸಾಧಿಸಿದ್ದೇನೆ, ನಾಗರಿಕರು ಮೂದಲಿಸುವಂಥ ಕೆಲಸವೇನಲ್ಲ-ಎಂದು ತೋರಿಸುವ ಇಚ್ಛೆ, ಜತೆಗೆ ವರಲಕ್ಷ್ಮಿ ತನ್ನ ಮನಸ್ಸಿನಲ್ಲಿ ಹಳೆಯ ಯಾವ ಕಹಿಯನ್ನೂ ಇರಿಸಿಕೊಳ್ಳದೆ ಬಂದಳಲ್ಲ–ಎಂಬ ಸಂತೋಷ. ಆಕೆಯನ್ನು ಕರೆದುಕೊಂಡು ತನ್ನ ಹೊಲ ಮನೆಗಳನ್ನು ತೋರಿಸುತ್ತ ನಡೆದ. ಅವಳಿಗೆ ತನ್ನ ಕೆಲಸವನ್ನೂ, ನಾಳಿನ ಆಸೆಯನ್ನೂ ಬಣ್ಣಿಸಿದ. ಅವನ ಉತ್ಸಾಹದ ನುಡಿಗಳಲ್ಲಿ ನೈಸರ್ಗಿಕ ಕಾವ್ಯದ ಹುರುಪೇ ಕಾಣಿಸಿತು. ಆಕೆಯನ್ನು ತನ್ನ ಬಡ ಕುಟೀರಕ್ಕೆ ಕರೆದುಕೊಂಡು ಬಂದ. ಬಾಳೆಯಹಣ್ಣು, ಹಾಲುಗಳನ್ನು ಕೊಟ್ಟು ಸತ್ಕರಿಸಿದ. ಉಪಾಹಾರ ಮುಗಿಯಿತು. ಹೊತ್ತಾಗುತ್ತ ಬಂದುದರಿಂದ ವರಲಕ್ಷ್ಮಿ ಎದ್ದು ನಿಂತಳು. ತುಸು ದೂರ ಅಂದರೆ, ನದಿ ದಂಡೆಯ ತನಕ, ಶಂಕರನೂ ಜತೆಯಲ್ಲೇ ಬಂದ. ಬೀಳ್ಕೊಡುವಾಗ ವರಲಕ್ಷ್ಮಿಯ ಮುಖ ವರ್ಣವಿಹೀನವಾಗಿತ್ತು; ನಾಚಿಕೆ ಕ್ಷಮೆಗಳಿಂದ ತುಂಬಿತ್ತು. "ನೀನೆಷ್ಟು ದೊಡ್ಡವನೋ ಅಷ್ಟು ಮೂರ್ಖಳು ನಾನು" ಎಂದು ಒಂದೇ ಮಾತನ್ನು ಹೇಳಿ ಹೊರಟಳು. ಆಗ ಶಂಕರ ಮತ್ತೂ ನಾಲ್ಕು ಹೆಜ್ಜೆ ನಡೆದು ಬರಬೇಕಾಯಿತು, ಮಾತಿನ ಸಂಪೂರ್ಣ ಅಭಿಪ್ರಾಯ ಆತನಿಗಾಗದಿರಲಿಲ್ಲ. ಆತನೆಂದ "ವರಾ, ಹಾಗೆನ್ನಬೇಡ. ಹಿಂದಿನದನ್ನು ಮರೆತು ಬಿಡು. ಆರಿಸಿದ ಬಾಳ್ವೆಯನ್ನು ಚೆನ್ನಾಗಿ ಮಾಡಿಕೊ. ಬಾಳ್ವೆ ಇರುವುದು ಕಲಿಯುವುದಕ್ಕೆ, ಕಲಿತು ತಿದ್ದಿಕೊಳ್ಳುವು

ದಕ್ಕೆ, ತಿದ್ದಿ ತೃಪ್ತಿಪಡೆಯುವುದಕ್ಕೆ" ಹೀಗೆಂದು, ಅವಳ ಜತೆಯಲ್ಲಿ ತುಸ ದೂರ ಹೋಗಿ. ಅವಳನ್ನು ಬಿಟ್ಟು ಮರಳಿ ಬಂದ. ಆಕೆಗೆ ಮಾತ್ರ ಕಣ್ಣು ಗಳಲ್ಲಿ ದುಃಖ ಉಕ್ಕಿ ಬರುತ್ತಿತ್ತು, ಉಸಿರು ನಿಡುಸುಯ್ಯುತ್ತಿತ್ತು, ಶಂಕರ ನನ್ನು ಇನ್ನೊಮ್ಮೆ ನೋಡುವುದಕ್ಕೂ ನಾಚಿಕೆಯಾಗುತ್ತಿತ್ತು.

ಮನೆಗೆ ಮರಳಿದ ಶಂಕರನಿಗಾದರೂ ಅದೇ ಬಗೆಯ ದುಃಖ, ವ್ಯಥೆ ಗಳು ಉಂಟಾಗದಿರಲಿಲ್ಲ. ಎಷ್ಟೆಂದರೂ ವರಲಕ್ಷ್ಮಿ ಅವನ ಗೆಳತಿಯಾಗಿದ್ದ ವಳು. ಆಕೆ ಮಂಜುನಾಥನನ್ನು ಮದುವೆಯಾದದ್ದೇ ಆದರೆ ಸುಖಿಯಾಗ ಲಾರಳು—ಎಂದು ಅವನ ಅಂತರಂಗ ಹೇಳುತ್ತಿತ್ತು. ಆದರೆ ಆ ವಿಚಾರದಲ್ಲಿ ಆಕೆಯನ್ನು ಎಚ್ಚರಿಸುವ ಸಾಹಸಕ್ಕೂ ಆತನು ಹೋಗಲಾರ. ಇಬ್ಬರೂ ಬಲಿತವರು. ವಿವೇಚನೆಯಿಂದ ಕೆಲಸಮಾಡಲು ಬಲ್ಲವರು. ಹೆರವರ ಉಪ ದೇಶದಿಂದ ತೀರ್ಮಾನವಾಗಬೇಕಾದ ಪ್ರಶ್ನೆಯೂ ಅದಲ್ಲ.

ವರಲಕ್ಷ್ಮಿ ಶಂಕರನ ಮನೆಗೆ ಬಂದು, ಅವನನ್ನು ನೋಡಿ ಹೋದ ದಿನ ಸಂಜೆಯೇ, ಶ್ರೀಮತಿ ತನ್ನ ತಂಗಿಯೊಬ್ಬಳನ್ನು ಕರೆದುಕೊಂಡು ಅವನನ್ನು ಕಾಣುವುದಕ್ಕೆ ಹೊರಟಳು. ಶಂಕರ ಅವರ ಮನೆಗೆ ಬಾರದೆ ಆರು ದಿನಗಳೇ ಸಂದಿದ್ದುವು. ಆಗ ಶಂಕರ ಯಾವುದೋ ಒಂದು ನಕ್ಷೆ ಬರೆಯುತ್ತಲಿದ್ದವ. ಚಕಿತನಾಗಿ ಎದ್ದು ನಿಂತ. 'ಏನು ಬಂದೆ?' ಎಂದು ಅವಳನ್ನು ಆಶ್ಚರ್ಯ ದಿಂದ ಕೇಳಿದ. ಶ್ರೀಮತಿಯು, ಜತೆಗೆ ಬಂದ ಸಹೋದರಿಯನ್ನು ಏನೋ ಮದ್ದಿನ ಗಿಡ ತರುವಂತೆ ಹೇಳಿ, ಮಾತಿಗೆ ತೊಡಗಿದಳು. ಅವಳ ಮುಖವು ಕಂದಿತ್ತು: ಕಣ್ಣು ಊದಿತ್ತು. ನಾಲ್ಕಾರು ದಿನಗಳ ದುಃಖವೆಲ್ಲ ಎದೆಯನ್ನು ನಡುಗಿಸಿತ್ತು. ಶಂಕರ ಆತುರವಾಗಿ ಕೇಳಿದ ಪ್ರಶ್ನೆಗೆ ಶ್ರೀಮತಿಯ ಉತ್ತರ ವಿಚಿತ್ರವಾಗಿತ್ತು. ಅವನ ತೋಳುಗಳನ್ನು ತಬ್ಬಿಕೊಂಡು 'ನನ್ನನ್ನೇನು ಮಾಡುತ್ತೀರಿ?" ಎಂದು ಆಕೆ ಬಿಕ್ಕಿ ಬಿಕ್ಕಿ ಅಳತೊಡಗಿದಳು. ಬೇರೆ ಯಾವೊಂದು ಮಾತೂ ಅವಳ ಬಾಯಿಯಿಂದ ಹೊರಡಲಿಲ್ಲ. ಸಮಾಧಾನ ಹೇಳುವುದಕ್ಕೆ ಹೋದರೂ, ಆಕೆಗೆ ಏನೂ ಸಮಾಧಾನವಾಗುವಂತಿರಲಿಲ್ಲ. ಕಣ್ಣೀರ ಮಳೆಯೂ ನಿಲ್ಲುವಂತಿರಲಿಲ್ಲ. ಆದರಿಂದಾಗಿ ಮನೆಯಲ್ಲಿ ಏನೋ ಕೋಲಾಹಲ ನಡೆದಿರಬೇಕೆಂದೂ, ಮಂಜುನಾಥ ಅವಳಿಗೆ ಏನೋ ಅಂದಿರ ಬೇಕೆಂದೂ ಶಂಕರನಿಗೆ ಅನಿಸಿತು.

"ಯಾಕೆ ಇಷ್ಟು ಅಳುತ್ತೀಯಾ? ಅಣ್ಣ ನಿನಗೇನಾದರೂ ಹೇಳಿದನೇ?" ಎಂದು ಕೇಳಿದ.

ಅದಕ್ಕೆ ಆಕೆಯ ಮಾತುಗಳಿಷ್ಟೇ "ನನ್ನನ್ನು ತಳ್ಳುವುದಿಲ್ಲ ಎಂದು ಮಾತು ಕೊಡಿ. ನೀವು ಕೈಬಿಟ್ಟರೆ ನಾನು ಬದುಕುವುದಿಲ್ಲ" ಎಂಬುದು.

ಅದನ್ನೆಲ್ಲ ಕೇಳಿ, ಶಂಕರ ಆಚೆಗೆ ಹೋದ. ಶ್ರೀಮತಿಯ ತಂಗಿ ಸರಸಿಯನ್ನು ಕೂಗಿ ಕರೆದ. ಆಕೆ ಬರುವ ತನಕ ಅವಳಿಗೆ ಸಮಾಧಾನದ ಮಾತುಗಳನ್ನು ಹೇಳಿದ. "ನೀನೇತಕ್ಕೆ ಅಷ್ಟು ಅನುಮಾನಿಸುತ್ತೀ? ನಿನ್ನಣ್ಣ ಏನೂ ಹೇಳಲಿ. ನಾನು ನಿನ್ನನ್ನು ಬಿಟ್ಟು ಇನ್ನೊಬ್ಬರನ್ನು ಮದುವೆಯಾಗುವುದಿಲ್ಲ. ಸಾಕಲ್ಲ ಇಷ್ಟು ಮಾತು" ಎಂದುದಕ್ಕೆ "ಸಾಕು" ಎನ್ನಲೇಬೇಕಾಯಿತು ಆಕೆ.

ಸರಸಿ ಬಂದವಳು, ತಮ್ಮ ಮನೆಯಲ್ಲಿ ನಡೆದ ಯಾವತ್ತು ಗಲಭೆ, ಗದ್ದಲಗಳನ್ನೆಲ್ಲ ಕುರಿತು ವಿವರಿಸಿ ಹೇಳಿದಳು. ಅದನ್ನು ಕೇಳಿ ಶಂಕರ ನಕ್ಕು "ಅವನೆನ್ನಲಿ. ಇರುವ ನಾಲ್ಕು ದಿನ ಕಾಲ ಏನು ಹೇಳುತ್ತಾನೋ, ಹೇಳಿಕೊಳ್ಳಲಿ. ಅಮ್ಮನಿಗೆ ಹೇಳು-ಏನೂ ಯೋಚನೆ ಮಾಡಬೇಡವೆಂದು. ಯಾವ ಚಿಂತೆಯನ್ನೂ ಹಚ್ಚಿಕೊಳ್ಳಬೇಡವೆಂದು" ಎಂದು ಶ್ರೀಮತಿಗೆ ಸಮಾಧಾನ ಹೇಳಿದ. ಅನಂತರ ಶ್ರೀಮತಿಯನ್ನು ಕರೆದು "ನಿನ್ನಣ್ಣ ಹೋಗುವ ತನಕ ನಾನು ಬರುವುದಿಲ್ಲ. ಆಮೇಲೆಯೂ ಬರುವುದಿಲ್ಲವೇ? ಖಂಡಿತಕ್ಕೂ ಬರುತ್ತೇನೆ" ಎಂದೂ ಹೇಳಿದ. ಜತೆಗೆ ಅಕ್ಕನ ವಿಚಾರದಲ್ಲಿ ಎಚ್ಚರವಾಗಿರೆಂದು ಸರಸಿಗೆ ತಿಳಿಸಿದ್ದೂ ಆಯಿತು.

ಆದರೆ ಆ ಉಪದೇಶ ಬೇಕಾಗಿರಲಿಲ್ಲ. ಏಕೆಂದರೆ—ಆ ದಿನ ಮನೆಗೆ ಮರಳಿದವಳು ಸರಸಿ ಮಾತ್ರ. ಶ್ರೀಮತಿಗೆ ಅಣ್ಣನ ಮೇಲೆ ಯಾವ ಧೈರ್ಯವೂ ಇದ್ದಿರಲಿಲ್ಲ. ತನ್ನನ್ನು ಆತ ಬಲವಂತದಿಂದ ಜತೆಗೆ ಕರೆದುಕೊಂಡುಹೋಗಿ ಇನ್ನಾರಿಗಾದರೂ ಮದುವೆ ಮಾಡಿಕೊಟ್ಟಾನು, ಎಂಬ ಪುಕ್ಕು ಬೇರೆ. ಅವನ ಆಳವನ್ನು ಅಳೆಯಲಾರದವಳು ಅವಳು. ಆ ದಿನ ಆಕೆ ಬಂದದ್ದೇ ಶಂಕರನಲ್ಲಿ ಆಶ್ರಯ ಪಡೆಯುವುದಕ್ಕೆ. ಶಂಕರ ಎಷ್ಟೇ ಹೇಳಲಿ, ಏನೇ ಸಮಾಧಾನ ಪಡಿಸಲಿ-ಅಲ್ಲಿಂದ ಕದಲದವಳು ಅವಳು. ಹೀಗಾಗಿ ಶಂಕರ ಉಭಯ ಸಂಕಟಕ್ಕೆ ಗುರಿಯಾದ. ಶ್ರೀಮತಿಯನ್ನು

ಹಿಂದಕ್ಕೆ ಕಳುಹಿಸುವುದು ಅವಳನ್ನು ನೋವಿಗೆ ಗುರಿಪಡಿಸಿದಂತೆ-ಎಂದು ತಿಳಿದಮೇಲೆ ಇರಿಸಿಕೊಳ್ಳಲೇ ಬೇಕಾಯಿತು. ಹಿಂದೆ ಅಜ್ಜಿಯನ್ನು ಕರೆದುಕೊಂಡು ಬಂದು, ರಂಗಣ್ಣನವರ ಕೋಪಕ್ಕೆ ಬಲಿಯಾದ ಹಾಗೆ, ಇಂದು ಶ್ರೀಮತಿಗೆ ಆಶ್ರಯ ಕೊಟ್ಟು, ಮಂಜುನಾಥನ ಸಿಟ್ಟಿಗೆ ಗುರಿಯಾಗಬೇಕಾಯಿತಲ್ಲ—ಎಂಬ ವ್ಯಥೆಯಾಯಿತು. " ಏನೂ ಆಗಲಿ, ಬಂದುದನ್ನು ಅನುಭವಿಸದೆಯೆ ಮಾರ್ಗವಿದೆಯೇ ? " ಎಂದು ಎಣಿಸಿ ಸುಮ್ಮನಾದ.

## ಅಧ್ಯಾಯ ೧೪

ಊರಿಗೆ ಬರುತ್ತ ಮಂಜುನಾಥನು ಹರ್ಷ, ಉತ್ಸಾಹಗಳಿಂದ ತುಂಬಿ ಬಂದಿದ್ದರೂ, ಊರಲ್ಲಿ ಕಳೆದ ದಿನಗಳು ಅದಕ್ಕೆ ಸಮನಾಗಿರಲಿಲ್ಲ. ಅವನ ಮನಸ್ಸು ತೊಡಕು, ಬೇಸರಗಳಿಗೆ ಗುರಿಯಾಯಿತು. ಮನೆಯನ್ನು ಸೇರಿದ ಮೇಲೆ, ಮನೆಯ ಭವಿಷ್ಯ ಅವನನ್ನು ಚಿಂತೆಗೆ ಗುರಿಮಾಡಿತು. ಆದರೆ ತನ್ನ ಸ್ವಾರ್ಥವನ್ನು ಬದಿಗೊತ್ತಿ, ಮನೆಯ ಶ್ರೇಯಸ್ಸಿಗಾಗಿ ದುಡಿಯುವ ಬುದ್ಧಿ ಅವನದಲ್ಲ. 'ಬಂಗಾಡಿಯ ಬಿಡಾರ ಮುಚ್ಚಿಬಿಡುವ' ಎಂಬ ಯೋಚನೆ ಅವನದು. ಅದಕ್ಕಾಗಿ ತಮ್ಮ ಭೂಮಿ, ಮನೆಗಳನ್ನು ಮಾರಾಟಮಾಡಿದ ರಾಗದೆ–ಎಂದು ತಂದೆಗೆ ಆಪ್ತರಾಗಿದ್ದ ಅರಿಗರನ್ನು ಕೇಳಿದ. ಅರಿಗರು "ಅದು ಸಲ್ಲದ ಕೆಲಸ. ಸಾಧ್ಯವೂ ಆಗಲಾರದು" ಎಂದರು. ಈ ಹುಚ್ಚ ಹಾಗೇನಾದರೂ ಮಾಡಿಯಾನೆಂದು — "ಚಿಕ್ಕ ಮಕ್ಕಳಿರುವಾಗ ಅಪ್ರಾಯಸ್ಥರ ಹಕ್ಕನ್ನು ಮೀರಿ ಮಾರಿದರೆ, ಕೊಂಡವರಿಗೆ ತೊಂದರೆ ಬಂದೀತು" ಎಂದು ಅವರು ಬೆದರಿಸಿದ್ದರಿಂದ ಆ ಯೋಚನೆಯನ್ನು ಬಿಡಬೇಕಾಯಿತು. ಹೀಗಾಗಿ ಬಿಡಾರವನ್ನು ಕೊನೆಗಾಣಿಸಿ, ಈ ಬಾರಿಯೇ ತಾಯಿಯನ್ನೂ, ಸೋದರ ಸೋದರಿಯರನ್ನೂ ಜತೆಗೆ ಒಯ್ಯಲು ಅನುಕೂಲವಾಗಲಿಲ್ಲ. ಕೊಂಡೊಯ್ಯಬೇಕೇ—ಎಂಬ ವಿಚಾರದಲ್ಲೂ ಅವನ ಮನಸ್ಸು ಸಮನಾದ ನಿರ್ಧಾರಕ್ಕೆ ಬರಲಿಲ್ಲ. ಮದುವೆಯಾಗುವೆನೆಂಬ ಹುಮ್ಮಸಿನಿಂದ ವರಲಕ್ಷ್ಮಿಯನ್ನು ಕರೆದುಕೊಂಡು ಬಂದನಾದರೂ ಅದೂ ಆಗಿಲ್ಲ.

ಇನ್ನು ಮದುವೆಯಾಗಿ, ಬಿಡಾರ ಹೂಡಿ, ಆ ಮೇಲೆ ಮನೆಯವರನ್ನು ಸಾಗಿಸಬೇಕು. ವಿಮಾನ ದಳದ ನೌಕರನಾದವನಿಗೆ ಒಂದೇ ತಾವಿನಲ್ಲಿ ಕೆಲಸ ಸಿಗುತ್ತದೆಯೇ? ವರ್ಗವಾದಾಗ ಬಿಡಾರ ಸಾಗಿಸಬೇಕು. ಆ ಯೋಚನೆಯೇ ಹೆಚ್ಚಾಗಿ ಗಂಡ ಹೆಂಡಿರು ತಾವಿಬ್ಬರೇ ವಿಲಾಸಮಯವಾಗಿ ಜೀವಿಸುವುದಕ್ಕೂ, ತಾಯಿ ತಂಗಿಯರ ಹೊರೆ ಹೊರುವುದಕ್ಕೂ, ತುಂಬಾ ಅಂತರ ಕಂಡಿತು. ಅದನ್ನು ಯೋಚಿಸುತ್ತಲೇ ಅವನ ಸ್ವಾರ್ಥವೇ ಗೆದ್ದಿತು.

ತಾಯಿಗೆ ಒಂದಿಷ್ಟು ಹಣ ಕಳುಹಿಸುವುದೇ ವಾಸಿ, ಊರಲ್ಲಿ ಬಿದ್ದಿರಲಿ–ಎಂದು ಯೋಚಿಸಿದ. ಶ್ರೀಮತಿ ಶಂಕರನ ಮನೆಗೆ ಓಡಿ ಹೋದದ್ದು

ತಾಯಿಯ ಪ್ರೇರಣೆಯಿಂದ—ಎಂದು ಆತ ಖಚಿತಮಾಡಿಕೊಂಡು ಅವಳ ಮೇಲೆಯೂ ಸಿಟ್ಟಾದ. ತನ್ನ ಅಧಿಕಾರ ವಾಣಿಗೆ ವಿರೋಧ ಉಂಟಾದುದನ್ನು ಆತ ಸಹಿಸಲಾರ. "ನಿಮ್ಮ ತಂಟೆಯೇ ನನಗೆ ಬೇಡ. ನನ್ನ ಮಾತನ್ನು ನೀವು ಕೇಳುವವರಲ್ಲವಾದರೆ, ನಿಮ್ಮ ಹಂಗು ನನಗೇನು? ನೋಡುವ, ನನಗೂ ನಿಮ್ಮೆಲ್ಲರಿಗೆ ಬುದ್ಧಿ ಕಲಿಸಲು ಬಂದೀತು. ನಾಳೆ ಈ ಮನೆ, ಮತ್ತೊಂದನ್ನು ವಿಕ್ರಯಿಸಿದರೆ, ಆಗ ಶಂಕರ ನಿಮಗೆ ಆಶ್ರಯ ಕೊಡುತ್ತಾನೋ, ನಾನು ಕೊಡಬೇಕಾಗುತ್ತದೋ" ಎಂದು ಘರ್ಜಿಸಿ, ತಾಯಿಯೊಡನೆ ಮಾತನ್ನೂ ಬಿಟ್ಟ. ಮನೆಯ ತಾಯಿಯೊಡನೆ ಮುನಿಸುಗೊಂಡಂತೆ, ಮನದನ್ನೆಯೊಡನೆಯೂ ಮುನಿಸೇ. ಶ್ರೀಮತಿ ಶಂಕರನಲ್ಲಿಗೆ ಹೋದದ್ದು ಅದಕ್ಕೆ ಪೀಠಿಕೆಯಾದರೂ, ತನ್ನೆದುರು ಶಂಕರನನ್ನು ಎಲ್ಲರೂ ಹಿರೇಮಾಣಿಯನ್ನಾಗಿ ಮಾಡಿದರಲ್ಲ—ಎಂಬ ಸಿಟ್ಟು ಮುಖ್ಯ. ಆ ಸಿಟ್ಟು ವರಲಕ್ಷ್ಮಿಯ ಕಡೆಗೂ ತಿರುಗದಿರಲಿಲ್ಲ. ಆಕೆಯೂ ಅಲ್ಲಿಗೆ ಹೋಗಿ ಬಂದಿದ್ದಾಳೆ. ಅವಳನ್ನು ಕಳುಹಿಸುವಾಗ ಯೋಚನೆ ಮಾಡಿರಲಿಲ್ಲ. ಶಂಕರನ ಮೇಲಿನ ಸೇಡು ತೀರಿಸುತ್ತೇನೆ—ಎಂಬ ಹಾಗೆ, ಪ್ರದರ್ಶಿಸುವುದಕ್ಕೇನೆ ಅವಳನ್ನು ಬಂಗಾಡಿಗೆ ಕರೆತಂದಿದ್ದ. ಶಂಕರ ಬಂಗಾಡಿಯಲ್ಲಿದ್ದಾನೆ—ಎಂದು ಅವಳಿಗೆ ಹೇಳಿರಲಿಲ್ಲ. ತಾವಿಬ್ಬರೂ ವೈಭವದಿಂದ ಅಲೆದಾಡುವಾಗ ಆತನ ಗಮನ ಸೆಳೆಯಬೇಕೆಂಬುದು ಅವನ ಆಸೆಯಾಗಿತ್ತು. ಆದರೆ ಒಮ್ಮೆ ಅಲ್ಲಿಗೆ ಹೋಗಿಬಂದ ಅವಳ ಬಾಯಿಯಿಂದ ಶಂಕರನನ್ನು ಕುರಿತಾದ ಪ್ರಶಂಸೆಯ ಮಾತುಗಳನ್ನು ಕೇಳಿದ ಗಳಿಗೆಯಿಂದ, ಅವನ ಎದೆಗೆ ಉರಿಯೇ ಬಿದ್ದಂತಾಗಿದೆ. ಅವಳೆದುರಿಗೆ ತೋರಿಸುತ್ತಿದ್ದ ಸರಸವಾದ, ಸವಿಯಾದ ನಗು ಮುಖ ನೀರಸವೂ, ಗಂಭೀರವೂ, ಉದಾಸೀನವೂ ಆಯಿತು. ಆ ಬದಲಾವಣೆ ವರಲಕ್ಷ್ಮಿಗೂ ತಿಳಿಯದೆ ಹೋಗಲಿಲ್ಲ.

ವರಲಕ್ಷ್ಮಿಯನ್ನು ಒಲಿಸುವುದಕ್ಕೆ ಅದೃಷ್ಟವೇ ಅವನಿಗೆ ನೆರವಾಗಿತ್ತು. ಅಲ್ಲದೆ ಹೋದರೆ–ಶಂಕರನ ಬಳಿಗೆ ಆಕೆಯ ಮೊದಲನೆಯ ಓಲೆಯನ್ನು ಒಯ್ದವನು ಅವನೇ ಅಲ್ಲವೇ? ಅವರಿಬ್ಬರಲ್ಲಿ ಸ್ನೇಹ ಸಂಬಂಧ ಬೆಳೆದು, ಅವರು ಸವಿಗನಸನ್ನು ಕಾಣುತ್ತಿದ್ದಾಗ, ಇವನ ಮನದಲ್ಲೂ ಸುಪ್ತ ಆಸೆಗಳು ಕೆರಳಿದುವು. ಜಯರಾಮರ ಮನೆಯಲ್ಲಿ ವರಲಕ್ಷ್ಮಿಯ ಮೇಲೆ ಅವನಿಗೆ ಅತ್ಯಧಿಕ ಅಭಿಮಾನ. ಅವರ ಮನೆಯವರು–ವರಲಕ್ಷ್ಮಿ ಬಂದ ನಂಟುತನ

ಮುರಿದಾಗ, ಶಂಕರನೊಡನೆ ಪತ್ರವ್ಯವಹಾರ ಮಾಡಿದಾಗ, ನಿಷ್ಠುರ ಗೊಳ್ಳಲು ಈತ ಅವಳ ವಿಷಯದಲ್ಲಿ ಪ್ರತ್ಯಕ್ಷ ಸಹಾನುಭೂತಿಯನ್ನು ವ್ಯಕ್ತಪಡಿಸಿದ್ದ. ಅನಂತರ ಅವರಿಬ್ಬರಿಗೆ–ತಮ್ಮ ಕನಸುಗಳು ಪರಸ್ಪರ ಹೊಂದಲಾರವು—ಎಂದು ತೋರಿತು. ಆಗ ಮಂಜುನಾಥನ ಆಸೆಗಳು ಚಿಗುರಿದುವು. ಆಕೆ ಸ್ವತಂತ್ರ ಬುದ್ಧಿ ಪ್ರಕಟಿಸತೊಡಗಿದಳು. ಕಾಲೇಜನ್ನು ಸೇರಿದಳು. ಅದರೆ–ತನ್ನನ್ನು ಮನೆಯ ಆಳು ಎಂದೇ ತಿಳಿದಿರಬಹುದು. ಅದು ತನ್ನ ಪ್ರತಿಷ್ಠೆಗೆ ಕುಂದು. ತಾನಿನ್ನು ಅಲ್ಲಿರಬಾರದು, ಅವಳೆದುರಿನಲ್ಲಿ ಮನ್ನಣೆಗಳಿಸುವ ವ್ಯಕ್ತಿಯಾಗಬೇಕು–ಎಂಬ ಹಿರಿಯಾಸೆಯು ಅವನ ಭವಿಷ್ಯವನ್ನು ರೂಪಿಸತೊಡಗಿತು. ಬೇರಾವ ಭವಿಷ್ಯದ ದಾರಿಯೂ ಅವನಿಗೆ ಕಾಣಿಸಲಿಲ್ಲ. "ಸುಂದರರಾಯರ ಮಗ ವಿಟ್ಠಲನಂತೆ ತಾನೇಕೆ ವಿಮಾನ ದಳವನ್ನು ಸೇರಬಾರದು" ಎಂದು ಹಂಬಲಿಸಿದ; ವೈಮಾನಿಕ ಶಿಕ್ಷಣವನ್ನು ಪಡೆದು ಅವಿಶ್ರಾಂತವಾಗಿ ದುಡಿದ. ಹೊಸ ಉಡುಗೆ, ಹೊಸ ಜೀವನದಿಂದ ಹೊಸ ವ್ಯಕ್ತಿ ಎನಿಸಿಯೂ ಬಿಟ್ಟ. ಜಯರಾಮನ ಮನೆಯವರಿಂದ ಅವನಿಗೆ ಪ್ರೋತ್ಸಾಹವೂ ದೊರೆಯಿತು. ಆದುದರಿಂದ ದಿಲ್ಲಿಗೆ ಬಂದಾಗಲೆಲ್ಲ, ಮನೆಯವನಂತೆ ಅಲ್ಲಿಗೆ ಬರುತ್ತಿದ್ದ ವರಲಕ್ಷ್ಮಿಯ ಮುಂದೆ ಬನಗಳಲ್ಲಿನ ಗಂಡು ನವಿಲಂತೆ ಮೆರೆಯತೊಡಗಿದ. ಅವಳ ಮುಂದೆ, ಅವರ ಮುಂದೆ ತನ್ನ ವೈಮಾನಿಕ ಜೀವನ, ಸಾಹಸಗಳನ್ನು ಬಣ್ಣಿಸಿ, ತಾನು ಅಸಾಮಾನ್ಯ ವ್ಯಕ್ತಿ ಎಂದು ನಟಿಸತೊಡಗಿದ. ಸ್ವಾಭಾವಿಕವಾಗಿ ಅವನ ಈ ಹೊಸ ಜೀವನಕ್ಕೆ ಒಂದು ಮಿರುಗಿತ್ತು. ಸಾಹಸ ಪೌರುಷಗಳ ಒಂದು ಮುದ್ರೆ ಇತ್ತು. ಎಳೆಯರ, ಹೆಂಗಳೆಯರ ಅಭಿಮಾನ, ಆದರಗಳನ್ನು ಸೆಳೆಯುವ ಬೆಡಗೆಲ್ಲವೂ ಅದಕ್ಕಿತ್ತು.

ವರಲಕ್ಷ್ಮಿಯ ಸ್ನೇಹ, ಸಲುಗೆ, ಮಂಜುನಾಥನ ಕಡೆಗೆ ಅಭಿಮಾನ ಆದರಗಳಾಗಿ ಪರಿಣಮಿಸಿದ್ದು ಒಂದೆರಡು ದಿನಗಳ ವ್ಯವಹಾರದಿಂದಲ್ಲ. ಆಕೆ ಮನೆಯ ಎಲ್ಲರೊಡನೆಯೂ ಮಾತು ಕಡಿಮೆ ಮಾಡಿದ್ದಳು. ತನ್ನ ಕೆಲಸಕ್ಕಷ್ಟೇ ಮಾತಾಡುವವಳು. ಕಾಲೇಜಿನಲ್ಲಿ ವ್ಯಾಸಂಗ ಮಾಡತೊಡಗಿದಳು. ದೇಹಲಿಯ ಸ್ವಚ್ಛಂದ ವಾತಾವರಣದಲ್ಲಿ, ಬಾನಲ್ಲೇ ಮನತೇಲಿಸಿಕೊಂಡು, ಬಾಳಿನ ಕಷ್ಟ ಸುಖಗಳ ಎಣಿಕೆಯಿಲ್ಲದೆ, ಹಳೆಯ ನೋವನ್ನು

ಮರೆಯಲೆತ್ನಿಸುತ್ತಿದ್ದಳು. ಹೊಸ ಕನಸನ್ನು ಕಾಣಲೆತ್ನಿಸಿದಳು. ಮನೆಯವರಿಂದಾಗಿ ನೊಂದ ಅವಳ ಮನಸ್ಸಿಗೆ–ಎಷ್ಟು ತೀವ್ರವಾಗಿ ಮನೆಯವರ ಹಂಗನ್ನು ತಪ್ಪಿಸಿಕೊಂಡು ಸ್ವತಂತ್ರ ಜೀವನ ನಡೆಯಿಸಬಹುದೋ ಅಷ್ಟು ತೀವ್ರವಾಗಿ ಅದನ್ನು ನಡೆಯಿಸಬೇಕು–ಎಂದು ತೋರಿತು. ಆರ್ಥಿಕ ಪರಾಶ್ರಯದಿಂದ ಸ್ತ್ರೀಗೆ ಮಾನಸಿಕ ಪರಾಶ್ರಯಪ್ರಾಪ್ತಿಯಾಯಿತು. ತನಗೆ ಹಾಗಾಗಬಾರದು-ಎಂದುಕೊಂಡು ಕಾಲೇಜಿನ ವ್ಯಾಸಂಗ ಮುಗಿಸಿದವಳೇ ಕಾಲೇಜು ಒಂದರಲ್ಲಿ ಉಪಾಧ್ಯಾಯಿನಿಯಾದಳು, ಮನೆಗೆ ಬಂದು ಹೋಗುತ್ತಿದ್ದ ಮಂಜುನಾಥನ ಸಾಹಸಗಳ ವಿಚಾರದಲ್ಲಿ ಅವಳಿಗೆ ಅಭಿಮಾನ ಉಂಟಾದರೂ, ಮೊದಮೊದಲು ಮನೆಯ ಹುಡುಗ-ಎಂಬ ದೃಷ್ಟಿಯಿಂದ ನೋಡುತ್ತಿದ್ದಳು. ಕಾಲ ಸರಿದಂತೆ-ದಿಲ್ಲಿಯ ಸ್ವತಂತ್ರ ಆವರಣದಲ್ಲಿ ಆಕೆಯನ್ನರಸಿಕೊಂಡು ಎಲ್ಲಾದರೂ ಮಂಜುನಾಥ ಬಂದನೆಂದರೆ ಅದಕ್ಕೂ ಹೆಚ್ಚಿನ ಸಲುಗೆ ತೋರಿಸುತ್ತಿದ್ದಳು, ಮಾತನಾಡುತ್ತಿದ್ದಳು. ಅವಳಿಗೇನೆ ತಿಳಿಯದಂತೆ, ಸಮ ವಯಸ್ಸಿನ ಈ ವೀರ ಯೋಧನು ಅವಳ ಆರಾಧ್ಯ ದೇವತೆಯಾಗಿ ಪರಿಣಮಿಸಿದ.

ಯುದ್ಧಕ್ಕೆ ಸೇರಿದ ಮಂಜುನಾಥ ದಿನ ನಿತ್ಯ ಮಾತಿಗೆ ಸಿಗುವ ವ್ಯಕ್ತಿಯಲ್ಲ. ದೇಹಲಿಗೆ ಬರುವ ವ್ಯಕ್ತಿಯೂ ಅಲ್ಲ. ಅವನ ನಂಬಿಕೆಯಿಂದಲೇ ವರಲಕ್ಷ್ಮಿಯ ಬಾಳು ಸರಿಯುವಂತೆಯೂ ಇಲ್ಲ. ಸ್ವಾತಂತ್ರ್ಯದ ಸವಿಗನಸನ್ನು ಕಟ್ಟಿಕೊಂಡಿದ್ದ ಆಕೆ ಎಮ್. ಎ. ಯನ್ನು ಮುಗಿಸಿದ್ದಳು. ನಿತ್ಯವೂ ಮನೆಗೆ ಹೋಗಿ ಬರುವ ಬದಲು, ಕಾಲೇಜಿನ ಅಧ್ಯಾಪಕಿಯಾಗಿ ಅದರ ಹಾಸ್ಟೆಲಿನಲ್ಲಿಯೇ ಉಳಿಯತೊಡಗಿದಳು, ದಿನ ಸರಿದಂತೆ ಸ್ವತಂತ್ರ ಜೀವನದ ಕನಸಿನ ಜತೆಗೆ, ಗೆಳೆತನದ ಬಯಕೆ ಅವಳಲ್ಲಿ ಬೆಳೆಯಿತು. ತನ್ನ ಜತೆಗಾರರಾಗಬಹುದಾದ ವ್ಯಕ್ತಿಗಳಲ್ಲಿ ಮಂಜುನಾಥನಲ್ಲಿರುವ ಹಿರಿಮೆ ಉಳಿದವರಲ್ಲಿ ಆಕೆ ಕಾಣದಾದಳು. ಬೇರೆಯೇ ಬಿಡಾರಮಾಡಿದ ಅವಳನ್ನು ಕಂಡು ಮಂಜುನಾಥ "ನಿನ್ನ ಸ್ವತಂತ್ರ ಮನೋಭಾವವನ್ನು ಕಂಡು ನನಗೆ ತುಂಬಾ ಸಂತೋಷ" ಎಂದ. ಅದರಿಂದ ಅವನ ಮೇಲಿನ ಗೌರವ ಇನ್ನೂ ಹೆಚ್ಚಿತು. ಅವನಂಥ ವ್ಯಕ್ತಿ ತನ್ನ ಜತೆಗಾರನಾದರೆ ತಾನು ದಾಸಿಯಾಗಿ ದುಡಿಯಬೇಕಾದ ಪ್ರಮೇಯವೇ ಇಲ್ಲ–ಎಂದನಿಸಿತು. ಅಷ್ಟಿದ್ದರೂ

'ನನ್ನನ್ನು ಮದುವೆಯಾಗುತ್ತೀಯಾ?' ಎಂದು ಆಕೆಯು ಅವನನ್ನು ಕೇಳಿದವಳಲ್ಲ. ಕೇಳುವ ಹಂಬಲವಾದರೂ 'ಅವನ ಬಾಯಿಯಿಂದಲೆ ಆ ಮಾತನ್ನು ತರಿಸಬೇಕು' ಎಂಬ ಆಸೆ ಅವಳದ್ದು. ಈ ಆಸೆ ನೆರವೇರಿಸುವುದಕ್ಕೋ ಎಂಬಂತೆ ಯುದ್ಧ ಕೊನೆಗೊಂಡು, ತುಸು ರಜೆ ಪಡೆದು ಮಂಜುನಾಥ ಬಂದನು. ಆಗಲೋ! ಅವನ ಎದೆಯ ಮೇಲೆ ಸಾಹಸದ ಪದಕಗಳೂ, ಪಟ್ಟಿಗಳೂ ನಾಲ್ಕಾರಿದ್ದುವು. ಅವಳ ಕಣ್ಣಿಗೆ ಸ್ವರ್ಗದಿಂದ ಇಳಿದ ದೇವತೆಯಂತೆ ಕಾಣಿಸಿದ ಆತ.

ಆತ ಬಂದು, ಅವಳನ್ನು ಭೇಟಿಯಾದಾಗ, ವರಲಕ್ಷ್ಮಿಯ ಆಸೆಯೇನೋ ಪಕ್ವವಾಗಿತ್ತು. ಅವನ ಎದೆಯಲ್ಲಿ ತೂಗುತ್ತಿದ್ದ ಬಿಲ್ಲೆಗಳನ್ನು ಕಂಡು "ಇವು ಯಾವುದಕ್ಕೆ" ಎಂದು ಕೇಳಿದಾಗ, ಅರೆತಾಸಿನ ಸಾಹಸ ಸ್ವರ್ಗವನ್ನೇ ಚಿತ್ರಿಸಿದ ಆತ. ಆಕೆಯ ಭುಜದ ಮೆಲೆ ಕೈಯಿರಿಸಿ, "ಇಲ್ಲೇ ನಿಂತೇನು ಮಾತನಾಡುವುದು? ತಿರುಗಾಡಿಕೊಂಡು ಬರುವ" ಎಂದ. ಇಬ್ಬರೂ ವಿಹಾರಕ್ಕೆ ಹೊರಟರು. ಮಂಜುನಾಥನ ಮಾತಿಗೆ ಕಿವಿಗೊಡುತ್ತಿದ್ದ ವರಲಕ್ಷ್ಮಿಯ ಮನಸ್ಸಿನಲ್ಲಿ 'ಆತ ಹೆಚ್ಚು ಓದಿದ ಹುಡುಗನಲ್ಲ. ನಮ್ಮ ಮನೆಯಲ್ಲಿದ್ದ ಚಾಕರಿಯಾಳು' ಎಂಬ ಭಾವನೆಯು ಸಂಪೂರ್ಣವಾಗಿ ಮಾಯವಾಗಿತ್ತು. ತನ್ನ ಹೆಗ್ಗಳಿಕೆಯನ್ನು ಆಡಿ ಮುಗಿಸಿದ ಮಂಜುನಾಥ, ವರಲಕ್ಷ್ಮಿಯ ರೂಪ ಪ್ರಶಂಸೆಗೂ ತೊಡಗಿದ. ತುಸು ಅಭಿಮಾನ ಉಂಟಾಯಿತು. ಲಜ್ಜೆಯೂ ಪ್ರಾಪ್ತಿಸಿತು. ಒಬ್ಬರನ್ನೊಬ್ಬರು ಬೀಳ್ಕೊಡುವಾಗ "ನಾನು ರಜೆ ಪಡೆದು ಬಂದಿದ್ದೇನೆ. ವಿರಾಮವಿದೆ, ಒಮ್ಮೆ ಈ ಎಲ್ಲ ಕಠಿಣ ದಿನಗಳನ್ನು ಮರೆತುಬಿಡಬೇಕೆಂದಿದ್ದೇನೆ. ಎಲ್ಲಾದರೂ ಸಂಚಾರಕ್ಕೆ ಹೋಗಬೇಕೆನಿಸುತ್ತದೆ. ಸಮನಾದ ಜತೆಗಾರರಿಲ್ಲ........" ಎಂದ.

"ಎಲ್ಲಿಗೆ?"

"ಮೊದಲಂತು ಊರಿಗೆ. ನಮ್ಮೂರೇನು ಕಡಿಮೆಯೆಂದು ತಿಳಿಯುತ್ತೀಯಾ? ಅನಂತರ, ಸಾಧ್ಯವಾದರೆ ಕಾಶ್ಮೀರಕ್ಕೆ........ಬರುತ್ತೀಯಾ?" ಎಂದು ಅನಿರೀಕ್ಷಿತವಾದ ಪ್ರಶ್ನೆಯನ್ನು ಕೇಳಿದ.

ಆನಂದದಲ್ಲಿ ತೇಲುತ್ತಿದ್ದ ಮನಸ್ಸು, ಅವಳಿಂದ "ಬರುತ್ತೇನೆ" ಎಂಬ ಉತ್ತರವನ್ನು ಹೊರಡಿಸಿತು.

ಮಂಜುನಾಥ ತನ್ನಷ್ಟಕ್ಕೆ "ಅವಳು ಬರುತ್ತಾಳೆ ಎಂಬುದು ನನಗೆ ಖಂಡಿತವಾಗಿ ಗೊತ್ತಿತ್ತು. ನಾನು ನಾಳೆ ಮದುವೆಯಾಗುವುದಾದರೂ ಅವಳನ್ನೆ. ಅವಳು ಇನ್ನೊಬ್ಬರನ್ನೂ ಇಷ್ಟು ಗೌರವದಿಂದ ಕಾಣುವವಳಲ್ಲ" ಎಂದೆಣಿಸಿಕೊಂಡು ಬಂದ. ಮನಸ್ಸು ತುಂಬ ಆನಂದಗೊಂಡಿತ್ತು. ಊರಿಗೆ ಹೋಗಬೇಕು—ಎಂಬುದು ಅವನಿಗೆ ಇಷ್ಟವಾದ ಸಂಗತಿಯಾಗಿರಲಿಲ್ಲ. ಈ ಬಾರಿ ಆತ ದಿಲ್ಲಿಗೆ ಬಂದದ್ದು ವರಲಕ್ಷ್ಮಿಯನ್ನು ಗೆಲ್ಲುವುದಕ್ಕಾಗಿ. ನಡುವೆ ಬಂದಿತು. ಹಾಳು ಸೂತಕವೊಂದು. ಆದರಿಂದ ಊರಿಗೆ ಹೋಗಲೇಬೇಕಾಯಿತು. ಆದರೆ ಮುಖ್ಯ ಉದ್ದೇಶವೇನೋ ಪೂರೈಸಿತು. ಊರನ್ನು ನೆನೆಯುತ್ತಲೇ ಶಂಕರನನ್ನೂ ನೆನೆದ. ಅವನನ್ನು ಹಂಗಿಸುವ ಸಂದರ್ಭ ದೊರೆತುದಕ್ಕಾಗಿ ಹಿಗ್ಗಿದ.

ಪ್ರಣಯದ ಹಿಗ್ಗಿನಿಂದ. ಗಂಡಿನ ಬಯಕೆಯಿಂದ ವರಲಕ್ಷ್ಮಿ ಮಂಜುನಾಥನ ಜತೆಗೆ ಹೊರಟುಬಿಟ್ಟಳು. ದಾರಿಯುದ್ದಕ್ಕೂ ಮಂಜುನಾಥನ ಮನಸ್ಸಿನಲ್ಲಿ—ಆಕೆಗೆ ಶಂಕರನನ್ನು ತೋರಿಸಬೇಕು. ತನ್ನ ಜೀವನಕ್ಕೂ, ಶಂಕರನ ಕೆಸರಿನ ಬಾಳ್ವೆಗೂ ಇರುವ ಅಂತರ ಕಾಣಿಸಬೇಕು—ಎಂದು ತನ್ನ ಸೇಡಿಗೆ ಶಂಕರನನ್ನು ಗುರಿಮಾಡಿದ್ದ. ಮೂಲದಲ್ಲಿ ಉಂಟಾದ ಸಿಟ್ಟೆಲ್ಲವೂ ಸುಂದರರಾಯರ ಮೇಲಿನದು. ಅಲ್ಲಿಗೆ ಹೋಗುವಂತಿರಲಿಲ್ಲ. ಸಾಲದುದಕ್ಕೆ ಅವರ ಮಗ ವಿಟ್ಠಲನ ಕೈಕೆಳಗೆ ದುಡಿಯಬೇಕಾದ ಕಹಿಯೂ ಪ್ರಾಪ್ತಿಸಿತು. ಅವೆಲ್ಲವುಗಳ ನಂಜನ್ನು ಶಂಕರನ ಮುಂದೆ ಪ್ರದರ್ಶಿಸುತ್ತೇನೆ. ಎಂದೆಣಿಸಿ ಬಂದ. ವರಲಕ್ಷ್ಮಿ ತನ್ನವಳಾಗುವ ವಿಚಾರದಲ್ಲಿ ಯಾವ ಭೀತಿಯೂ ಇರಲಿಲ್ಲ. ಮನಸ್ಸು ಒಂದಾಗಿತ್ತು. ನಾಮ ಮಾತ್ರದ ವಿವಾಹ ವಿಧಿ ಎಷ್ಟರದು—ಎಂಬ ವಿಚಾರ ಸರಣಿ ಅವನದು.

ಊರಿಗೆ ಬಂದೊಡನೆಯೆ ಶಂಕರನನ್ನು ಕುರಿತಾದ ತಾತ್ಸಾರ ಅಸೂಯೆಯಾಗಿ ಪರಿಣಮಿಸುವುದಕ್ಕೆ ಹೆಚ್ಚು ಸಮಯ ಹೋಗಲಿಲ್ಲ. ತನ್ನ ತಾಯಿ ಅವನನ್ನು ಕುರಿತು ಅಭಿಮಾನ ತಾಳಿದ್ದಕ್ಕೆ ಸಿಟ್ಟು ಬರತೊಡಗಿತು. ಸಾಲದುದಕ್ಕೆ ತಂದೆ ತೀರಿಕೊಂಡ ಬಳಿಕ, ಶಂಕರನೇ ತಮ್ಮ ಮನೆಯ ವಿಚಾರಗಳನ್ನೆಲ್ಲ ನೋಡಿಕೊಂಡುದು ಆ ಅಸಮಾಧಾನವನ್ನು ಹೆಚ್ಚಿಸಿತು. ತನ್ನ ತಂದೆಗೂ ಅವನಿಗೂ ಸ್ನೇಹವಿದ್ದಿಲ್ಲದೆ ಹೋದರೂ, ಈತ ಬರುವು

ದನ್ನು ಕಂಡು, ಅವನಲ್ಲೇನಾದರೂ ಕುಟಿಲ ಯೋಚನೆಗಳಿರಬಹುದೆಂದು ತರ್ಕಿಸಿದ. ಆ ತರ್ಕಕ್ಕೆ ಸಮನಾಗಿಯೆ – ತಾಯಿಯ ಮಾತುಗಳಿಂದ ಶ್ರೀಮತಿಯ ಕೈಯನ್ನು ಅವನು ಹಂಬಲಿಸಿದ್ದಾನೆ— ಎಂಬುದನ್ನು ತಿಳಿದು ಕೊಂಡ. ಮನಸ್ಸು ಮತ್ತಷ್ಟು ರೇಗಿತು. ತನ್ನ ತಂಗಿಯನ್ನು ಮದುವೆ ಯಾಗುವ ಯೋಗ್ಯತೆ ಅವನಿಗೆಲ್ಲಿಂದ ಬಂತು ಎಂದು ತೋರಿತು. ಅದಕ್ಕೂ ಹೆಚ್ಚಾಗಿ, ಎಳೆತನದಲ್ಲಿ, ತನ್ನನ್ನು ನೋಡಿಯೂ ನೋಡದಂತೆ ಮಾಡಿದ, ಪ್ರತಿಮೆ, ಸುಂದರ ರಾಯರ ಸೊಸೆ ಶ್ರೀಮತಿ ಆಗುವುದೆಂದರೇನು ?-ಎಂದು ಅಹಂಕಾರ ಕೆರಳಿಸಿತು. ತಾನಿರುವಾಗಲೇ ಶಂಕರನು ತಮ್ಮ ಮನೆಗೆ ಬಂದದ್ದು ಅಭಿಮಾನವನ್ನು ಚುಚ್ಚಿತು. ಸಾಲದುದಕ್ಕೆ, ತಾನೇ ಎಣಿಸಿದ ಯೋಚನೆಯಿಂದ ವರಲಕ್ಷ್ಮಿ ಶಂಕರನ ಮನೆಗೆ ಹೋಗಲು ಬಯಸಿದ್ದೂ ಅಂತರಿಕ ಅತೃಪ್ತಿಯನ್ನುಂಟು ಮಾಡಿತು. ಇವೆಲ್ಲ ವಿವಿಧ ವಿಷಗಾಳಿ ಗಳು ಬೀಸತೊಡಗಿದಂತೆ, ಮಂಜುನಾಥನ ಮನಸ್ಸು ವಿಚಿತ್ರವಾಗಿ ಉರಿ ಯತೊಡಗಿತು. ವರಲಕ್ಷ್ಮಿಯೊಡನೆ ನಾಲ್ಕು ಸರಿಯಾದ ಮಾತುಗಳನ್ನು ಆಡುವ ತಾಳ್ಮೆಯೂ ಅವನಿಗಿಲ್ಲದೆ ಹೋಯಿತು. ಎಂದು ಶ್ರೀಮತಿ ತನ್ನನ್ನು, ಅವಳನ್ನು ಮೂದಲಿಸಿ ಶಂಕರನ ಮನೆಗೆ ಹೋದಳೋ, ಅಂದೇ ಬಣವೆಗೆ ಬೆಂಕಿ ಬಿದ್ದಂತಾಯಿತು. ಶ್ರೀಮತಿಯ ಮೇಲಿನ ಸಿಟ್ಟು ತನ್ನ ಪ್ರೇಯಸಿಯಲ್ಲಿನ ಅಸಮಾಧಾನವಾಗಿ ಮಾರ್ಪಟ್ಟಿತು. 'ವರಲಕ್ಷ್ಮಿ ಸಹ ಶಂಕರನ ಕೆಲಸವನ್ನು ಹೊಗಳಿಬಿಟ್ಟಳಲ್ಲ' ಎಂಬ ಅಸಮಾಧಾನ ಆಗಾಗ ಮನಸ್ಸಿಗೆ ಬರತೊಡಗಿತು.

ಇತ್ತ ಈ ಹತ್ತು ಹನ್ನೆರಡು ದಿನಗಳ ಕಾಲ ಅವರ ಮನೆಯಲ್ಲಿ ಕುಳಿತ ವರಲಕ್ಷ್ಮಿಯ ಪಾಲಿಗೂ ಮಾನಸಿಕ ನೆಮ್ಮದಿ ದೊರೆಯಲಿಲ್ಲ. ಮಂಜುನಾಥನ ವಿಚಾರದ ಅಭಿಮಾನವೆಷ್ಟೇ ಇದ್ದರೂ, ಗಳಿಗೆ ಗಳಿಗೆಗೂ ತಾಯಿಯೊಡನೆ ತಂಗಿಯೊಡನೆ ರೇಗುತ್ತಿದ್ದ ಅವನ ನಡತೆ, ಅವಳ ಮನ ಸ್ಸಿನಲ್ಲಿ ಆಶ್ಚರ್ಯವನ್ನು ಹುಟ್ಟಿಸುತ್ತಿತ್ತು. ಶಾಂತು ಜೋಲು ಮೋರೆ ಹಾಕಿಕೊಂಡು, ನಡುವೆ ಬಿಕ್ಕಿ ಬಿಕ್ಕಿ ಅಳುತ್ತ, ಧ್ವನಿ ಏರಿಸದೆಯೆ ಆಡು ತ್ತಿದ್ದ ಸಣ್ಣ ಪುಟ್ಟ ಮಾತುಗಳಿಗೂ ಮಂಜುನಾಥ ರೇಗುತ್ತಿದ್ದುದನ್ನು ಕಂಡು ಏಕೋ ಅವಳ ಮನಸ್ಸಿಗೆ ಮಂಜುನಾಥನ ತಾಳ್ಮೆಗೇಡಿತನ

ತಪ್ಪೆಂದು ತೋರುತ್ತಿತ್ತು. "ಯಾಕೆ ಅಷ್ಟು ಸಿಟ್ಟಾಗುತ್ತೀರಿ ?" ಎಂದು ಆಕೆ ಕೇಳುವಂತಾಯಿತು. ಮನೆಯ ಹಿರಿಯಳನ್ನು ಕುರಿತು, ವರಲಕ್ಷ್ಮಿಯಲ್ಲುಂಟಾದ ಕನಿಕರ ಮಂಜುನಾಥಗೆ ಸ್ತ್ರೀಯರು ಸ್ತ್ರೀಯರ ಪಕ್ಷ ವಹಿಸಿ ಮಾತನಾಡುವ ನಡತೆಯಾಗಿ ಕಂಡಿತು. "ಅದೆಲ್ಲ ನಮ್ಮ ವಿಚಾರ" ಎಂದು ತೇಲಿಸಿ ಆತ ಪ್ರತ್ಯುತ್ತರ ಕೊಡುತ್ತ ಬಂದಹಾಗೆ, ವರಲಕ್ಷ್ಮಿಯ ಧೈರ್ಯ ಕೆಡುವುದಕ್ಕೊಂದು ಅವಕಾಶವಾದಂತಾಯಿತು. ಈತ ತಾಯಿಯೊಡನೆ, ತಂಗಿಯೊಡನೆ ಕೋಪದಿಂದ, ಅಧಿಕಾರದಿಂದ, ಸಿಡುಕಿನಿಂದ ಮಾತನಾಡುವ ರೀತಿಯನ್ನು ಕಂಡರೆ ನಾಳೆ ತನ್ನೊಡನೆಯೂ ಅದೇ ಬಗೆಯಲ್ಲಿ ವರ್ತಿಸಿದರೆ – ಎಂಬ ಭೀತಿ ತಲೆದೋರಿತು. 'ಅದು ನಮ್ಮ ನಮ್ಮ ವಿಚಾರ' ಎನ್ನುವ ಮಾತುಗಳೂ ತನ್ನ ಮೇಲಿನ ಅವಿಶ್ವಾಸ, ಅನಾದರ ಎಂದು ತಿಳಿಯುವಂತಾಯಿತು.

ಹೀಗೆ ಒಂದು ಕಡೆಯಲ್ಲಿ ತುಂಬಿದ್ದ ಅಭಿಮಾನ ಕುಸಿಯುತ್ತ ಹೋದಂತೆ, ಅದಕ್ಕೆ ಮಂಜುನಾಥ ತಾನಾಗಿ ಅವಕಾಶ ಕಲ್ಪಿಸುತ್ತ ಹೋದಂತೆ, ಇನ್ನೊಂದು ಕಡೆಯಿಂದ ಶಂಕರನನ್ನು ಕುರಿತಾಗಿ, ಗೌರವ, ಆದರ ಪ್ರಾಪ್ತವಾಗತೊಡಗಿತು. ಆಕೆ ಅವನನ್ನು ಕಾಣುವುದಕ್ಕೆ ಹೋದಾಗ, ಹಳೆಯ ನೋವು ನಿರಾಶೆಗಳೊಂದನ್ನೂ ನೆನೆಯದೆ ಎಷ್ಟು ಮಿದುವಾಗಿ ಎಷ್ಟು ಗೌರವದಿಂದ ಶಂಕರ ಸ್ವಾಗತ ಮಾಡಿದ. ತನಗೆ ಪರಿಚಯವಾದಂದಿನಿಂದ ಆ ಗಳಿಗೆಯ ತನಕ ಆತನ ನಡತೆಯಲ್ಲಿ, ಮಾತಿನಲ್ಲಿ, ಎಂಥ ಮಿತ, ಔಚಿತ್ಯ ಕಾಣುತ್ತಿದೆ! ತಾನೇ ಅಳುಕಿ, ಅಳುಕಿ ಅವನಲ್ಲಿ ಹೋದರೂ ಆತ ಹಿಂದೇನು ಆಗಿರದಂತೆ ಅವಳನ್ನು ತನ್ನ ತೋಟದ ಸುತ್ತ ಮುತ್ತ ತಿರುಗಿಸಿಕೊಂಡು ಬಂದ. ಕೃಷ್ಣನ ಎದುರು ಅವಳನ್ನು ಕುರಿತು ಒಳ್ಳೆಯ ಮಾತುಗಳನ್ನಾಡಿದ. ಅವನನ್ನು ಬೀಳ್ಕೊಡುವಾಗ ಹಳೆಗಾಲದ ಗೌರವವೆಲ್ಲ ಅವನ ಮೇಲೆ ಉಂಟಾಗಿತ್ತು. ಆತ ಕಾರ್ಯಸಾಧಕನೆಂದೂ ಮಂಜುನಾಥನ ಯುದ್ಧರಂಗದ ಸಾಹಸಕ್ಕಿಂತ ಶಂಕರನ ಶಾಂತಿರಂಗದ ಸಾಹಸ ಕಡಿಮೆಯಾದುದಲ್ಲವೆಂದೂ ಮನಸ್ಸಿಗೆ ಕಂಡಿತ್ತು.

ಮಂಜುನಾಥನ ಮನೆಯಲ್ಲಿನ ನಿತ್ಯ ಗದ್ದಲ, ಜಗಳಗಳ ದೆಸೆಯಿಂದಾಗಿ ಆಕೆಯ ಮನಸ್ಸಿನ ಸಂತೋಷ ಕೆಟ್ಟು, ವಿಲಾಸದ ಬದಲು ವಿರಸ ಉಂಟಾ

ಯಿತು. ' ಯಾವುದಕ್ಕೂ ಊರಿಗೊಮ್ಮೆ ಹೋಗುತ್ತೇನೆ. ನಾನೇನೂ ಅವನಿಗೆ ಮದುವೆಯ ಮಾತು ಕೊಟ್ಟಿಲ್ಲ. ಅವನ ಜತೆಗೆ ಬಂದುದು ಮೂರ್ಖತನವಾದರೂ ಆದರಿಂದ ತನ್ನನ್ನು ಮಾರಿಕೊಂಡಂತಲ್ಲ" ಎಂಬಷ್ಟು ನೋವು ಅವಳ ಮನಸ್ಸಿನಲ್ಲಿ ತುಂಬಿ ಬಂದಿತು. ಇನ್ನೆರಡು ಮೂರು ದಿನಗಳೊಳಗಾಗಿ ಮಂಜುನಾಥ ತಾಯಿಯನ್ನು ಊರಲ್ಲೇ ಬಿಟ್ಟು ದಿಲ್ಲಿಗೆ ಹೋಗುವ ನಿಶ್ಚಯ ಮಾಡಿದ. ತಾನಿನ್ನು ಒಂದೆರಡು ದಿನಗಳಲ್ಲಿ ಹೊರಡಬೇಕಾಗುತ್ತದೆ–ಎಂದು ವರಲಕ್ಷ್ಮಿಗೆ ಅನಿಸಿದೊಡನೆ ಆ ಮೊದಲೊಮ್ಮೆ ಶಂಕರನನ್ನು ಕಂಡೇನೆಯೇ ಎಂದನಿಸತೊಡಗತು. ಅನಿಸಿದರೂ ಆದರಿಂದ ಯಾವೊಂದು ಆಸೆಗೆ ಎಡೆಯಿರಲಿಲ್ಲ. ಅವಳ ಮನಸ್ಸಿನಲ್ಲಿ ಶ್ರೀಮತಿ ಶಂಕರನ ಬಳಿಯನ್ನು ಸೇರುತ್ತಾಳೆ, ಸೇರಿದ್ದಾಳೆ. ತಾನೆಂದೂ ಅವನ ಪಾಲಿಗೆ ಸಲ್ಲುವವಳಲ್ಲ—ಎಂದು ತೋರಿತು. ಆದರೆ ಶಂಕರ ಇಂದು ತನ್ನಿಂದ ದೂರವಾಗಿದ್ದರೆ ಅದು ತನ್ನ ಮೂರ್ಖತೆಯಿಂದ—ಎಂದು ಅವಳಿಗೆ ಅಡಿಗಡಿಗೆ ತೋರುತ್ತಿತ್ತಾದುದರಿಂದ ಅವನನ್ನು ಇನ್ನೊಮ್ಮೆ ಕಂಡಾದರೂ ಬರಬೇಕು. ಒಮ್ಮೆ ಈ ಊರನ್ನು ಬಿಟ್ಟೆನೆಂದರೆ ಆತನನ್ನು ಕಾಣುವುದಕ್ಕೂ ಸಾಧ್ಯವಿಲ್ಲ—ಎಂಬ ಆಸೆಯಿಂದಲೇ—ಕಾಣಬೇಕು, ಕಾಣಬೇಕು—ಎಂದು ಹಂಬಲಿಸತೊಡಗಿದಳು. ಆದರೆ ಮಂಜುನಾಥನನ್ನು ಆದಕ್ಕಾಗಿ ಕೇಳಲು ಭೀತಿ; ಕೇಳಿದರೂ ತೊಡಕೇ.

ಶ್ರೀಮತಿಯು ಬಾಯಿಂದ ಮಂಜುನಾಥನ ಸ್ವಭಾವವನ್ನರಿತುಕೊಂಡ ಶಂಕರ, ಆವನಿರುವಷ್ಟು ದಿನ ಶ್ಯಾನುಭಾಗರ ಮನೆಗೆ ಹೋಗಲು ಸಾಹಸಪಡಲಿಲ್ಲ. ಶಂಕರನ ಮೇಲೆ ಮಂಜುನಾಥನಿಗಿದ್ದ ತಾತ್ಸಾರಭಾವವು ವರಲಕ್ಷ್ಮಿಗೆ ತಿಳಿದೇ ಇತ್ತು. ಅವನಿಗೆ ತಿಳಿಸಿ, ಇನ್ನೊಮ್ಮೆ ಶಂಕರನಲ್ಲಿಗೆ ಹೋಗುವ ಸಂದರ್ಭ ದೊರೆಯದೆಂದು ಗೊತ್ತೇ ಇತ್ತು. ಆದರೆ ಮಂಜುನಾಥ ಒಂದು ದಿನ ತನ್ನ ಮುಂದಿನ ಪಯಣಕ್ಕೆ ಟಿಕೇಟುಗಳನ್ನು ಕಾದಿರಿಸಲು ಬೆಳ್ತಂಗಡಿಗೆ ಹೋಗಬೇಕಾಯಿತು. ಈ ಅವಕಾಶವನ್ನು ಸಾಧಿಸಿಕೊಂಡು ವರಲಕ್ಷ್ಮಿಯು ಆಲೆದಾಡುತ್ತ, ಮಂಜುನಾಥನ ತಂಗಿಯೊಬ್ಬಳನ್ನು ಜತೆಗೆ ಕರೆದುಕೊಂಡು ಮೂಡೋಡಿಗೆ ಹೊರಡುವ ಯೋಚನೆ ಮಾಡಿದಳು. ಕೊನೆಗೆ ಜತೆಗೆ ಯಾರೂ ಇರುವುದು ಲೇಸಲ್ಲವೆಂದು ಎಣಿಸಿ,

ಒಬ್ಬಳೇ ಹೋದಳು. ಶಂಕರ ಆದರದಿಂದ ಅವಳನ್ನು ಸ್ವಾಗತಿಸಿದ. ಅದರ ಜತೆಯಲ್ಲಿ "ಮಂಜುನಾಥನಿಗೆ ನೀನು ಬರುವುದು ಇಷ್ಟವಾಗಲಾರದಲ್ಲ. ಏಕೆ ಬಂದೆ?" ಎಂದು ಪ್ರಶ್ನೆ ಮಾಡಿದ.

"ಶಂಕರ್, ನಿನಗೂ ಇಷ್ಟವಿಲ್ಲವೇ?" ಎಂದಳು ಅವಳು.

"ಹಾಗಲ್ಲ. ಆತನಿಗೆ ನನ್ನ ಮೇಲೆ ತುಂಬಾ ಅಸಮಾಧಾನ. ಆ ಮನೆಯಲ್ಲಿದ್ದ ನಿನಗೆ ಅದನ್ನೆಲ್ಲ ಬಿಡಿಸಿ ಹೇಳಬೇಕಾಗಿಲ್ಲ. ನಾಳೆ ಅವನನ್ನು ಮದುವೆಯಾಗುವ ನೀನು ಸುಮ್ಮನೆ ನಿಷ್ಠುರವನ್ನೇಕೆ ಕಟ್ಟಿಕೊಳ್ಳಬೇಕು" —ಎಂದು ಕೇಳುತ್ತಲೇ, ಆಕೆಯ ಮುಖ ವಿವರ್ಣವಾಯಿತು. ಬೇಸರದ ದನಿಯಿಂದ "ಏನೋ, ನಾನವನ ಜತೆಗೆ ಬಂದದ್ದೇ ಹುಚ್ಚುತನ. ಅದೀಗ ತಿಳಿದಿದೆ. ಈಗ ನನ್ನ ಕಣ್ಣು ಚೆನ್ನಾಗಿ ತೆರೆದಿದೆ. ನಿನ್ನಂಥ ಪುಣ್ಯಾತ್ಮ ನನ್ನಂಥವಳ ಪಾಲಿಗೆ ಸಿಗಲಿಲ್ಲವಾದರೂ, ಇನ್ನು ಇಂಥ ಮೂರ್ಖರ ಬಲೆಗೆ ಬೀಳುವುದಿಲ್ಲ. ಅಷ್ಟನ್ನೇ ಹೇಳುವುದಕ್ಕೆ ಬಂದೆ—ಮನಸ್ಸು ತಡೆಯದ್ದಕ್ಕೆ, ನಿನ್ನಲ್ಲಿ ಹೇಳಬೇಕೆಂದನಿಸಿತು?" ಎಂದು ನುಡಿದಳು. ಅವರವರಲ್ಲಿ ಹೆಚ್ಚಿನ ಅಸಮಾಧಾನವೇನೋ ಉಂಟಾಗಿದೆಯೆಂದು ಶಂಕರನಿಗೆ ಹೊಳೆಯಿತು. ಅವನಿಷ್ಟೆ ಹೇಳಿದ. "ವರಾ, ನೀನು ತಿಳಿದವಳು. ಓದಿದ್ದೀ, ಮಾಡಿದ್ದೀ, ಬುದ್ಧಿ ಇದೆ. ಇಂಥ ವಿಚಾರಗಳಲ್ಲಿ ನಿಮ್ಮ ನಿಮ್ಮ ಹೊಣೆಯನ್ನು ನೀವೇ ಯೋಚಿಸಬೇಕು; ಹೊರತು ಅನ್ಯರ ಉಪದೇಶ ಯಾವ ಉಪಯೋಗಕ್ಕೂ ಬಾರದು."

"ಆತನೊಡನೆ ನನ್ನ ಲಗ್ನವಾದರೆ ನನಗೆ ಸುಖ ದೊರಕೀತು ಎಂದೆಣಿಸುತ್ತೀಯಾ? ಈ ಊರಿಗೆ ಬಂದ ಮೇಲೇನೇ ಅವನ ಸ್ವಭಾವ ಚೆನ್ನಾಗಿ ತಿಳಿಯುವುದಕ್ಕೆ ಸಂಪೂರ್ಣ ಅವಕಾಶವಾದದ್ದು. ಇನ್ನು ಯಾವ ವಿಚಾರವೂ ಇಲ್ಲ."

"ಏನು ಮಾಡುತ್ತೀ, ಹಾಗಾದರೆ?"

"ನಾಳೆ ಅವನೊಡನೆ ಊರಿಗೆ ಹೊರಡುತ್ತೇನೆ—ನೆಟ್ಟಗೆ ದಿಲ್ಲಿಗೆ. ಅಲ್ಲಿಯತನಕ ಮೌನವಾಗಿರುತ್ತೇನೆ. ಮುಂದೆ ನನ್ನ ದಾರಿ ನನಗೆ. ಇದನ್ನೆಲ್ಲ ನೋಡಿದರೆ ಬದುಕು ನಿರಾಶೆಗೊಳ್ಳುತ್ತದೆ. ವೈದ್ಯ ವಿದ್ಯೆಯಂಥ ಏನಾದರೊಂದು ವಿದ್ಯೆಗಳಿಸಿ, ನಾಲ್ಕು ಜನಕ್ಕೆ ಉಪಯೋಗವಾಗುವ ಬಾಳು

ಮಾಡಿದರೆ ಬದುಕಿದ್ದಾದರೂ ಸಾರ್ಥಕ-ಎನಿಸುತ್ತದೆ. ಮನುಷ್ಯರ ಸ್ವಭಾವ ಹೀಗೆಲ್ಲ ವಿಚಿತ್ರವಾದೀತು-ಎಂದು ನಾನು ತಿಳಿದಿರಲಿಲ್ಲ. ಇಷ್ಟೆ ಶಂಕರ್, ನನ್ನ ಮುಂದಿನ ಭವಿಷ್ಯದಲ್ಲಿ ನನಗೇನೆ ಅಂಜಿಕೆಯಾಗಿದೆ. ಮನಸ್ಸಿಗೆ ದುಃಖವಾದಾಗ, ತೊಂದರೆ ಬಂದಾಗ, ದಿಲ್ಲಿಯಿಂದ ಕಾಗದ ಬರೆದರೆ ಉತ್ತರ ಕೊಡುತ್ತೀಯಾ? ಎಂದಾದರೊಂದು ದಿನ ನೀನೂ ಶ್ರೀಮತಿಯೂ ಲಗ್ನವಾಗಿ ಸುಖವಾಗಿರುವುದನ್ನು ಕೇಳಿ, ನಾಲ್ಕು ದಿನ ನನಗೆ ಬರಲು ಮನಸ್ಸಾದರೆ ಅವಕಾಶ ಕೊಡುತ್ತೀಯಾ?"

ಈ ಎಲ್ಲ ಮಾತುಗಳಿಂದ ವರಲಕ್ಷ್ಮಿಯ ಮನಸ್ಸಿನಲ್ಲಿ ಉಂಟಾಗಿದ್ದ ವಿಪ್ಲವಗಳನ್ನೆಲ್ಲ ಆತ ಅರಿತುಕೊಂಡ. ಅವಳ ವಿಷಯದಲ್ಲಿ ತುಂಬ ಸಹಾನುಭೂತಿ ಮೊದಲಿನಿಂದಲೂ ಇತ್ತು. ಈಗ ಅನುಕಂಪವುಂಟಾಯಿತು. ಬಂದವಳನ್ನು ನೂರು ಗಜ ದೂರ ಕಳುಹಿಸಿಕೊಟ್ಟು "ಚೆನ್ನಾಗಿ ವಿಚಾರ ಮಾಡಿ ಯಾವ ಕೆಲಸವನ್ನಾದರೂ ಕೈಗೊಳ್ಳು. ಬರಿದೆ ಯೌವನದ ಭ್ರಮೆಗೆ ಬಲಿಯಾಗಬೇಡ....ನನ್ನ ನೆರವಾಗಲೀ ಸ್ನೇಹವಾಗಲೀ ಎಂದೂ ನಿನ್ನದು. ನಮ್ಮ ಜೀವನದ ಅಭಿರುಚಿ ಬೇರೆಯಾದ ಮಾತ್ರಕ್ಕೆ ಸ್ನೇಹ ಮುರಿಯಬೇಕೆಂದಿಲ್ಲ" ಎಂದು ನುಡಿದು ಬೀಳ್ಕೊಟ್ಟ. ಮರಳುವಾಗ ವರಲಕ್ಷ್ಮಿಯ ಮುಖ ತುಂಬ ಬಾಡಿತ್ತು. ಮನಸ್ಸು ಬಹುವಾಗಿ ನೊಂದಿತ್ತು. ತನ್ನ ಹಿಂದಿನ ಯಾವತ್ತೂ ಕೃತಿಗಳಿಗಾಗಿ ಅವಳು ಪರಿತಪಿಸುವಂತೆ ಕಾಣುತ್ತಿತ್ತು.

ಸರಿ, ಮರುದಿನ ಆಕೆ ದೆಹಲಿಗೆ ಪಯಣ ಹೊರಟಳು. ಸಿಡುಕಿನಿಂದ ಮನೆಗೆ ಬಂದ ಮಂಜುನಾಥ, ಸಿಡುಕಿನಿಂದಲೇ ಮನೆಯನ್ನು ಬಿಟ್ಟ. ಆ ಎಲ್ಲ ಸಿಡುಕಿನ ಪರಿಣಾಮ ಶಾಂತು ಮತ್ತು ಅವಳ ಮಕ್ಕಳ ಮೇಲೆ ಆಗದಿದ್ದೀತೇ? ಶಾಂತುವಿಗಂತು ತನ್ನ ಭವಿಷ್ಯಕ್ಕಾಗಿ ಮಂಜುನಾಥನನ್ನು ನಂಬಿಕೊಂಡಿರುವುದು ಏನೇನೂ ಉಚಿತವಲ್ಲವೆಂದು ತೋರಿತು.

ಮಂಜುನಾಥನು ಹೊರಟುಹೋದನೆಂದು ತಿಳಿದ ಮೇಲೆಯೇ ಶಂಕರ ಅವರ ಮನೆಗೆ ಹೋದುದು. ಶ್ರೀಮತಿಯನ್ನು ಅಲ್ಲಿಗೆ ಕರೆದೊಯ್ದು ಬಿಟ್ಟ. ಅಲ್ಲಿ ಶಾಂತು ಅಷ್ಟೊಂದು ದಿನ ನಡೆದ ಪುರಾಣವನ್ನು ಬಣ್ಣಿಸಿ, ತನ್ನ ಮಗನ ಮೇಲೆ ತನಗೇನೂ ವಿಶ್ವಾಸ ಉಳಿದಿಲ್ಲವೆಂದೂ, ಹಿರಿಯರ ಆಸೆಯನ್ನು

ಕೈಗೂಡಿಸುವ ಭರವಸೆಯಾಗಲಿ, ತಮ್ಮನ್ನು ಕಾಪಾಡುವ ಭಾರವಾಗಲಿ ಅವನ ಮೇಲಿದೆ–ಎಂದೂ ಅಳುತ್ತ ತಿಳಿಸಿದಳು. ಅದಕ್ಕೆ ಶಂಕರ "ನೀವೇನೂ ಯೋಚನೆ ಮಾಡಬೇಡಿ. ನಿಮ್ಮ ಮನಸ್ಸಿನಲ್ಲಿ ಏನಿದೆ ಎಂಬುದು ನನಗೆ ಗೊತ್ತು. ನೀವು ಮದುವೆಯ ವಿಚಾರದಲ್ಲಿ ಅವಸರ ಮಾಡಬೇಡಿ. ನಾನು ಕೊಟ್ಟ ಮಾತಂತೂ ಇದೆ. ಈಗ ನಮ್ಮೆರಡು ಮನೆಗಳೂ ಸೂತಕದ ಮನೆಗಳೇ. ಯಾವ ಅವಸರವೂ ಚಂದವಲ್ಲ."

"ಎರಡೂ ಮನೆಯೆಂದರೆ?" ಎಂದು ವಿಸ್ಮಯದಿಂದ ಶಾಂತು ಕೇಳಿದುದಕ್ಕೆ ಶಂಕರ ತನ್ನ ತಮ್ಮನ ನಿಧನದ ವಾರ್ತೆಯನ್ನು ತಿಳಿಸಬೇಕಾಯಿತು. ಆದರಿಂದ ತನಗುಂಟಾದ ವ್ಯಥೆ, ಕಷ್ಟಗಳನ್ನೆಲ್ಲ ಅತ ಇಷ್ಟು ದಿನಗಳ ಬಳಿಕ ಹೇಳಿದ್ದಲ್ಲದೆ ಈ ಸಂದರ್ಭದಲ್ಲಿ "ದುಃಖಿಗಳಾದ ತಂದೆ ತಾಯಿಗಳನ್ನು ನೋಡಿಕೊಂಡು ಬರುವುದು ನನ್ನ ಕರ್ತವ್ಯ. ಅಲ್ಲಿಯ ತನಕ ನಿಮಗೇನುಬೇಕೆಂದು ಹೇಳಿದರೆ ತರಿಸಿ ಹಾಕುತ್ತೇನೆ" ಎಂದು ನುಡಿದು ಹೊರಟುಹೋದ. ತಾನು ಮರಳಿ ಬರುವ ತನಕ ಆಗಬೇಕಾದ ಕೆಲಸದ ವ್ಯವಸ್ಥೆಗಳನ್ನೆಲ್ಲ ಕೃಷ್ಣನಿಗೆ ತಿಳಿಸಿ, ನಾಲ್ಕಾರು ದಿನಗಳೊಳಗಾಗಿ ದಿಲ್ಲಿಗೆ ಹೊರಟುಬಿಟ್ಟ.

ದಿಲ್ಲಿಯ ಪಯಣ ಶರೀರಕ್ಕಂತು ಸುಖವಾಗಿರಲಿಲ್ಲ. ಮನಸ್ಸು ನೆಮ್ಮದಿ ತಾಳುವ ಸ್ಥಿತಿ ಮೊದಲೇ ಇರಲಿಲ್ಲ. ಜನರಿಂದ ಕಿಕ್ಕಿರಿದ ರೈಲು ಬಂಡಿಗಳನ್ನು ಹತ್ತಿ ಇಳಿದು, ರಾತ್ರಿ ಹಗಲೆಲ್ಲ ಪಯಣ ಮಾಡಿ, ದೆಹಲಿಯನ್ನು ಸೇರುವಾಗ ಅವನು ನುಗ್ಗಾಗಿಹೋಗಿದ್ದ. ದಾರಿಯುದ್ದಕ್ಕೂ ಮಡಿದ ಸೋದರನ ಸಲುವಾದ ಚಿಂತೆ, ಆದರಿಂದ ತಂದೆತಾಯರ ಮೇಲೆ ಆಗಬಹುದಾದಂಥ ಪರಿಣಾಮ, ಅವರನ್ನು ಕಂಡಾಗ ಅವರೇನು ಹೇಳುತ್ತಾರೋ, ತಾನೇನು ಹೇಳಬೇಕೋ–ಎಂಬ ಅಂಜಿಕೆ. "ಇನ್ನಾದರೂ ನೀನು ದಿಲ್ಲಿಗೆ ಬಂದಿರು" ಎಂದು ಅವರು ಹೇಳಿದ್ದಾದರೆ ತಾನು ಏನು ಮಾಡಬೇಕು"–ಎಂಬಿವೇ ಚಿಂತೆಗಳಿಂದ ಮನಸ್ಸು ಕುಲುಕಿ ಹೋಗಿತ್ತು. ಮನೆಯನ್ನು ಸೇರಿದಂತಾಯಿತು. ತಂದೆ "ಏಕೆ ಮೊದಲೇ ಬರಲಿಲ್ಲ?" ಎಂದು ಕೇಳಿದರು. ಅದಕ್ಕೆ ರಂಗರಾಯರ ಮನೆಯ ಪ್ರಸಂಗಗಳನ್ನು ವಿವರಿಸಿ ಹೇಳಬೇಕಾಯಿತು. ಸುಂದರರಾಯರು ತಮ್ಮ ದುಃಖ ತೊಡಗಿದರು. ವಿಟ್ಠಲನ ಹತ್ತೆಂಟು ಪತ್ರಗಳನ್ನು ಶಂಕರನ

ಕೈಗೆ ತುಂದಿಕ್ಕಿದರು. ತಂದೆಯ ಮಾತುಗಳಿಗೂ, ನೋವಿನ ಅನುಭವಗಳಿಗೂ ಆತ ಪಾಲುಗಾರನಾದ. " ನನಗೀಗ ಕಾಣಿಸುತ್ತದೆ–ಈ ಸಂಸಾರವೆಂಬುದೆಲ್ಲ ಬರಿಯೊಂದು ಮಾಯೆಯೇ ಸರಿ. ಅದರಲ್ಲಿ ಸುಖವೇನಿದೆ ? ಉದ್ಯೋಗ ಇದ್ದಾಗ ನಾಲ್ಕುದಿನ ದೊಡ್ಡ ಆಫೀಸರನಾಗಿ ಮೆರೆದೆ. ನೌಕರಿಯಿಂದ ನಿವೃತ್ತಿಗೊಂಡ ಮರುದಿನವೇ ನನಗಿರುವ ಪ್ರತಿಷ್ಠೆ. ಗೌರವ ವಿಸರ್ಜಿಸಿದ ವಿನಾಯಕನಷ್ಟಾಯಿತು ......ವಿಟ್ಠಲ ವಿಮಾನ ದಳಕ್ಕೆ ಸೇರಿದಾಗಲೇ ಮನಸ್ಸು ಅಷ್ಟೊಂದು ಉತ್ಸಾಹವಾಗಿರಲಿಲ್ಲ. ಆದರೆ ಅದೊಂದು ಕೀರ್ತಿ ಎಂದು ತಿಳಿದೆ. ಆದರಿಂದ ಅವನಿಗೆ ಕೈತುಂಬ ಸಂಬಳ, ಹುದ್ದೆಯಲ್ಲಿ ಬಡತಿ, ಸಮಾಜದಲ್ಲಿ ಕೀರ್ತಿ ದೊರೆತುದು ಕಂಡು ನನಗೂ ಹೆಮ್ಮೆಯುಂಟಾಯಿತು. ಆದರೆ ಯುದ್ಧವೆಂದರೆ ಭೀತಿ ಇದ್ದೇ ಇರುತ್ತದೆ. ನಾಳೆ ಯುದ್ಧ ಮುಗಿಯ ಬಹುದು ಎನ್ನುವುದಕ್ಕೆ ನಾಲ್ಕು ದಿನಗಳ ಮುಂಚೆ ಹೀಗಾದೀತೆಂದು ನಾನು ಎಣಿಸಿರಲಿಲ್ಲ. ಅವನು ಸಜೀವ ಸೆರೆಸಿಕ್ಕಿ, ಆ ಜಾಪಾನಿಯರ ಕೈಯಲ್ಲಿ ಎಂತೆಲ್ಲ ಹಿಂಸೆ ಅನುಭವಿಸಿದನೋ, ಕಷ್ಟಕ್ಕೀಡಾದನೋ–ಅದನ್ನೆಲ್ಲ ನೆನೆದರೆ ಬದುಕೇ ಬೇಡವೆಂದೆನಿಸುತ್ತದೆ " ಎಂದು ಬಹುವಾಗಿ ಮಾತನಾಡಿದರು.

ಮತ್ತೊಮ್ಮೆ ಮಾತನಾಡುವಾಗ ಮನಸ್ಸು ಬೇರೆಯೇ ತೆರನಾಗಿತ್ತು. ಅವರ ಕೈಯಲ್ಲಿ ಅರವಿಂದರ ಗೀತಾ ವ್ಯಾಖ್ಯಾನವಿತ್ತು. ಅದನ್ನು ತಿರುವುತ್ತ ತಿರುವುತ್ತ "ಎಲ್ಲವೂ ಹಾಳು ಮನಸ್ಸಿನ ಸಮಾಧಾನಕ್ಕಾಗಿ. ಎಂದೂ ಇಲ್ಲದ ವೈರಾಗ್ಯ ಇಂದು-ಬಂದಿದೆಯಾದರೂ, ಆಸಕ್ತಿಯಿಲ್ಲದೆ ಮಾಡುವ ಕರ್ತವ್ಯ ಮಾಡಬೇಕು ಎನ್ನುವ ಮಾತೇ, ಅರ್ಥವಾಗುವುದಿಲ್ಲ. ನನ್ನಿಂದ ಅದು ಸಾಧ್ಯವಾದೀತೆ? ಸಾಯುವ ತನಕ ಬದುಕುವ ಆಸೆ ಮನುಷ್ಯನಿಗೆ ಇದ್ದೇ ಇರುತ್ತದೆ. ಏನು ಮಾಡುವುದಾದರೂ ಆ ಆಸೆ ಪೂರೈಸಿಕೊಳ್ಳುವುದಕ್ಕೆ. ಬರಿದೆ ಕರ್ತವ್ಯವೆಂದರೇನು? ಹಿಂದೆ ಕೈತುಂಬ ಕೆಲಸವಾದರೂ ಇತ್ತು. ಈಗ ಅದೂ ಇಲ್ಲ ; ಹೊತ್ತುಹೋಗದ್ದಕ್ಕೆ ಇದನ್ನೆಲ್ಲ ಎತ್ತಿಕೊಂಡು ಓದು ತ್ತಿದ್ದೇನೆ. ಎಷ್ಟೋ ಸಾರಿ-ಎಣಿಸಿದರೆ, ಮನುಷ್ಯನ ಉದ್ಯೋಗಕ್ಕೂ ಆದ ರ್ಶಕ್ಕೂ ಪರಸ್ಪರ ಹೊಂದಿಕೆ ಬಾರದೆಹೋದಲ್ಲಿ ಜೀವನದಲ್ಲಿ ಸುಖಿಸಿಗಲಾರ ದೆಂದೆನಿಸುತ್ತದೆ. ನೌಕರಿ ಮುಗಿದ ಮೇಲೆ ನಾನು ಮಾಡಬಹುದಾದ ಕೆಲಸ ವಾದರೂ ಏನಿದೆ? ಬೇರೊಂದು ಕೆಲಸವೇ ನನಗೆ ಬಾರದು. ಸಮಯಹೋಗ

ಬೇಕಾದರೂ ಹೇಗೆ? ಅದನ್ನೆಲ್ಲ ಎಣಿಸಿಕೊಂಡರೆ ನಿನ್ನ ದಾರಿಯೆ ಸಮನೆಂದು ಕಾಣಿಸುತ್ತದೆ. ಹೇಗೂ ಇರಲಿ. ನಿನಗೆ ಇಷ್ಟವಾದ ಕೆಲಸವನ್ನು ಮಾಡಿಕೊಂಡಿದ್ದೀಯಾ. ಇಷ್ಟವಾದ ಸ್ಥಳವನ್ನು ಸೇರಿಕೊಂಡಿದ್ದೀಯಾ. ಇರುವಷ್ಟು ಕಾಲ ಸ್ವತಂತ್ರವಾಗಿ ಇಚ್ಛೆಬಂದ ಹಾಗೆ ಇರಬಹುದು" ಎಂದು, ಸ್ವಲ್ಪ ಹೊತ್ತು ಮಾತುನಿಲ್ಲಿಸಿ, ತಮ್ಮನ್ನೇ ಕೇಳುತ್ತಿದ್ದ ಮಗನನ್ನು ಕುರಿತು ಇನ್ನೂ ಹೇಳಿದರು. "ಅವಳು ಏನುಮಾಡುತ್ತಾಳೋ ತಿಳಿಯದು. ದಿಲ್ಲಿಯನ್ನು ಬಿಡುವ ಯೋಚನೆ ಅವಳಿಗೆ ಬರುವುದೇನೆ ಸಾಧ್ಯವಿಲ್ಲ. ನಾನೂ ಹೇಳಿಯಾಯಿತು. ಇನ್ನು ಈ ದಿಲ್ಲಿಯ ನಾಟಕ ಸಾಕು ; ಉಳಿದವ ಒಬ್ಬ ಹುಡುಗ ಅವನ ಒಟ್ಟಿಗೆ ಹೋಗಿ ಇರೋಣ—ಎಂದೆ. ನಮಗೆ ಇಂಥಲ್ಲೇ ಇದ್ದು ಏನಾಗಬೇಕು—ಎಂದರೆ, ಅವಳ ಮನಸ್ಸು ಅವಳಿಗೇ ಗೊತ್ತು. 'ನೀವು ಬೇಕಾದರೆ ಹೋಗಿ' ಅನ್ನುತ್ತಾಳೆ. ಅವಳಿಗೆ ನಾನಾದರೂ ಬೇಡ: ದಿಲ್ಲಿ ಬೇಕಾಗಿದೆ. ಈ ಪ್ರಪಂಚ ಅಷ್ಟೊಂದು ಮಾಯೆಯ ವಸ್ತು ಅನ್ನುವುದಕ್ಕೆ ಅವಳೇ ಸಾಕ್ಷಿ. ದಿಲ್ಲಿಯ ಮೋಹ ಅವಳಿಗೆ ಬಿಡಲೊಲ್ಲದು."

ತಂದೆಗೆ ತನ್ನ ಜತೆಯಲ್ಲಿ ಬಂದಿರುವ ಆಸೆಯಾಗಿದೆ ಎಂಬುದನ್ನು ಕೇಳಿ ಶಂಕರನಿಗಾದ ಆನಂದ ಅಷ್ಟಿಷ್ಟಲ್ಲ. ವಯಸ್ಸಾದ ಹಿರಿಯರನ್ನು ದಿಲ್ಲಿಯಂತಹ ಊರಲ್ಲಿ, ಅಷ್ಟು ದೂರದಲ್ಲಿ ಇರಿಸಿ, ತಾನು ಬಂಗಾಡಿಯಲ್ಲಿ ಉಳಿದುಕೊಂಡರೆ, ಅವರ ಚಿಂತೆ ತಪ್ಪಲಾರದು ಎಂದನಿಸುತ್ತಿತ್ತು. ಇಷ್ಟ ಬಂದಾಗ ಹೋಗಿಬರುವ ತಾವೂ ಅಲ್ಲ. ಹೋಗಿ ಬರುವುದಕ್ಕೆ ಒಂದುವಾರ ಹಿಡಿಯುತ್ತದೆ-ಹೀಗೆಂದು ಯೋಚಿಸುತ್ತ ತಾಯಿಯ ಮನಸ್ಸು ಒಲಿಸಲು ಅಲ್ಲ ತಿಳಿಯಲು ಪ್ರಯತ್ನಿಸುವೆನೆಂದು ಬಳಿಗೆ ಹೋದರೆ ಏನೂ ತಿಳಿಯದೆ ಹೋಗುತ್ತದೆ. ಮಗ ಮನೆಗೆ ಬಂದಿದ್ದಾನೆ ಎಂಬ ಸಂತೋಷವಿಲ್ಲ. ವಿಟ್ಠಲನ ಮೃತ್ಯುವು ಅವಳನ್ನು ಘಾಸಿಮಾಡಿದೆ. ವಿಟ್ಠಲನನ್ನು ಪ್ರೀತಿಸಿದಷ್ಟು ಪ್ರತಿಮೆ ಶಂಕರನನ್ನು ಎಂದೂ ಪ್ರೀತಿಸಿರಲಿಲ್ಲ. ವಿಟ್ಠಲ ವಿಮಾನದಳದ ನಾಯಕನಾದ ಮೇಲಂತು ಅವನ ಕೀರ್ತಿಯು ತನ್ನದೇ ಎಂದು ಮೆರೆದಾಡಿದವಳು ಅವಳು. ಮಿಶ್ರರ ಮನೆಯ ನಂಟುತನ ದೊರೆತ ಮೇಲೆ, ತಮ್ಮ ಪ್ರತಿಷ್ಠೆ ತುಂಬಾ ಹೆಚ್ಚಿದೆ—ಎಂದು ತಿಳಿದುಕೊಂಡಿದ್ದಳು. ಮಗನ ಮರಣದಿಂದ ಆ ಉನ್ನತ ಗೋಪುರ ಕುಸಿದು ಹೋಗಿದೆ. ಹಾಗೆಂದು ಬೇರೊಂದು

ಕಡೆಗೆ ಮನಸ್ಸು ಹರಿಯಲಾರದು. ನಷ್ಟವಾದ ಸುಖ ಕೀರ್ತಿಗಳ ಕಡೆಗೆ ಮನಸ್ಸು ಓಡುತ್ತಿದೆ. ಹೊರತು ಬೇರೊಂದು ವಿಧಾನದಿಂದ ತನ್ನನೋವನ್ನು ತಾನು ತಣಿಸಿಕೊಳ್ಳಬೇಕು ಎಂಬ ಯೋಚನೆ ಅವಳಿಗುಂಟಾಗಲಾರದು. ತನಗಾಗಿ ಹೊರಗಿನ ಬಾಳಿಂದ ಅವಳು ಪಡೆದವಳೇ ಹೊರತು. ತನ್ನ ಬಾಳಿಂದ ಪರರಿಗೆ ಏನನ್ನೂ ತೆತ್ತವಳಲ್ಲವೆಂಬಂತೆ ಅವಳ ವರ್ತನೆಯಿದೆ.

ಗಂಡನ ಬಾಯಿಂದ ಬಂಗಾಡಿಯ ವಿಚಾರದಲ್ಲಿ ಬೇಕಷ್ಟು ಪ್ರಶಂಸೆ ಕೇಳಿದ್ದಾಳೆ. ಮನಸ್ಸಿಗೆ ಅಷ್ಟೆಲ್ಲ ನೋವಾದ ಗಳಿಗೆಯಲ್ಲಿ ಪತಿ "ಬಾ ಅಲ್ಲಿಗೆ ಹೋಗುವ, ಮನೆ ಅಷ್ಟೇನು ಚೆನ್ನಾಗಿಲ್ಲ, ಆದರೆ ಒಂದು ಆರು ತಿಂಗಳ ಅವಧಿಯಲ್ಲಿ ಬೇಕಾದ ಮನೆ ಕಟ್ಟಿಸಿಕೊಳ್ಳಬಹುದು. ಇಲ್ಲಿ ನೀನು ಸಮಾಜ ಸೇವೆ ಮಾಡುವ ಹಾಗೆ ಅಲ್ಲಿಯೂ ಮಾಡಬಹುದು. ಇಲ್ಲಿಯಂತೆ ಅಲ್ಲಿಯೂ ಬಡವರಿದ್ದಾರೆ. ರೋಗಿಗಳಿದ್ದಾರೆ. ಕಂಗಾಲರಿದ್ದಾರೆ. ಪೇಟೆಯಲ್ಲಿ ಕೆಲಸ ಮಾಡಿದರೇನೆ ಕೆಲಸ. ಹಳ್ಳಿಯಲ್ಲಿ ಮಾಡಿದರೆ ಅದು ಸಮಾಜಸೇವೆ ಆಗಲಾರದು ಎಂದಿದೆಯೋ?" ಎಂದೂ ಅಂದರು. ಅಂಥ ವಾದಗಳಿಗೆ ಅವಳೇನೂ ಉತ್ತರಕೊಡುವುದಿಲ್ಲ. 'ಹೂಂ' ಎಂದು ಬಿಟ್ಟರೆ ಮುಗಿಯಿತು. ದಿಲ್ಲಿಯಲ್ಲಿರುವ ಅನಾಥಾಲಯಗಳಿಗೆ ಅವಳು ಹೋಗಿಬರುತ್ತಾಳೆ. ಆಸ್ಪತ್ರೆಗಳಿಗೆ ಹೋಗಿ ಬರುವುದುಂಟು. ಸ್ತ್ರೀ ಸಮಾಜದ ಹಲವಾರು ಚಟುವಟಿಕೆಗಳಲ್ಲಿ ಭಾಗವಹಿಸುವುದುಂಟು. ಅವಳಿಗೂ ಅಂತರಂಗದಲ್ಲಿ, ಕೆಲಸ ಮಾಡುವವರಿಗೆ ಪ್ರಪಂಚದಲ್ಲೆಲ್ಲ ಅವಕಾಶವಿದೆ ಎಂದು ಗೊತ್ತಿಲ್ಲವೇ? ಗೊತ್ತಿದೆ. ಆದರೆ ಜನ ಕಾಣುವಲ್ಲಿ, ಕೀರ್ತಿ ಬರುವಲ್ಲಿ ಕೆಲಸ ಮಾಡಬೇಕು, ಮಾಡಿದ ಕೆಲಸವನ್ನು ಮೆರೆಯಿಸಬೇಕು—ಎಂದು ಮನಸ್ಸು ಹಂಬಲಿಸಿದಾಗ ಹಳ್ಳಿಯನ್ನು ಸೇರಲು ಇಚ್ಛೆಪಟ್ಟಾಳೇ? ಮಗನಿರುವ ಹಳ್ಳಿಗೆ ಹೋದರೆ, ಬಣ್ಣ ತೊಳೆದು ಹೋದ ನವಿಲಿನಂತಾದೀತು ಅವಳ ನಡಿಗೆ. ಒಂದು ಸಭೆಯೇ, ಸಮಾರಂಭವೇ, ಪರಿಚಯ ಕೂಟವೇ, ವಿದಾಯ ಕೂಟವೇ, ವರ್ಧಂತಿಯೇ, ಇನ್ನೊಂದೇ! ಅವೆಲ್ಲ ನಾಗರಿಕ ಬೆಡಗುಗಳು ಅವಳ ಪಾಲಿಗೆ ಮಹತ್ವದ್ದೆನಿಸುತ್ತವೆ. ಹೀಗಾಗಿ ಮಗನು 'ಬಾ' ಎಂದು ಆಮಂತ್ರಿಸಿದರೆ, 'ಇಲ್ಲ' ಎನ್ನಲಾರದುದಕ್ಕೆ "ಈಗ ಬೇಡ, ಮನಸ್ಸು ಸಮಾಧಾನವಾಗಲಿ, ಮುಂದೆ ನೋಡುವ"—ಎಂದುಬಿಟ್ಟಳು. ಮುಂದೆ

ಯಾದರೂ ಆಕೆ ಬಂಗಾಡಿಗೆ ಬಂದು ನಾಲ್ಕು ದಿನ ತನ್ನ ಜತೆಯಲ್ಲಿ ಇದ್ದಾಳು ಎಂಬ ವಿಶ್ವಾಸ ಶಂಕರನಿಗಿಲ್ಲ.

ಶಂಕರ ದಿಲ್ಲಿಗೆ ಬಂದು ಹದಿನೈದು ದಿನಗಳಾದವು. ಇದ್ದ ಹೆಚ್ಚಿನ ಸಮಯ ಮನೆಯಲ್ಲೇ ಕಳೆಯುತ್ತಿತ್ತು. ತೀರ ಬೇಸರವಾದರೆ ದಿಲ್ಲಿಯ ಹೊಸ ವಿಸ್ತರಣಗಳ ಹಾದಿಗಳಲ್ಲಿ ವಿಹಾರಕ್ಕೆ ಹೋಗುತ್ತಿದ್ದ. ಆ ನಾಲ್ಕಾರು ವರ್ಷಗಳಲ್ಲಿ ದಿಲ್ಲಿ ಬೆಳೆದಿದೆ, ಬದಲಿಸಿದೆ ಎಂದು ತೋರುತ್ತಿತ್ತು ಅವನಿಗೆ. ಎಲ್ಲೆಲ್ಲಿಯೂ ಮಿಲಿಟರಿ ವಾಹನಗಳ, ಜನಗಳ ಸಂಚಾರ. ಯುದ್ಧ ಮುಗಿದರೂ ಯೋಧರ ಅಲೆದಾಟ ಮುಗಿದಿಲ್ಲ. ಅವರನ್ನು ಕಂಡಾಗಲೆಲ್ಲ ತನ್ನ ಸೋದರನ ಸಾವು ನೆನಪಾಗಿ ಬೇಗನೆ ಊರನ್ನು ಸೇರಬೇಕು ಅನಿಸುತ್ತದೆ. ಒಂದೆರಡು ಬಾರಿ—ವರಲಕ್ಷ್ಮಿಯನ್ನು ಕಂಡು ಬರೋಣ. ಆಕೆ ತನ್ನ ಮನೆಗೆ ಬಂದುದಕ್ಕೆ ತಿರುಗಿ ಅವಳಿಗೆ ಭೇಟಿ ಸಲಿಸೋಣ- ಎಂದು ತೋರಿದರೂ ಬೇಡವೆನಿಸಿತು. ಆದರೂ ಅವಳನ್ನು ಕುರಿತಾದ ಚಿಂತೆ ತೂಗುತ್ತಿತ್ತು. " ಏನು ಮಾಡಿದಳೋ, ತಿರುಗಿ ಮನ ಬದಲಿಸಿ, ಮಂಜುನಾಥನನ್ನು ವರಿಸಿದ್ದಾದರೆ ಹೇಗೆ ಸಾಗುತ್ತದೋ ಅವರ ಜೀವನ " ಎಂದು ಅನಿಸಿತು. ಈ ವೇಳೆಯಲ್ಲಿ ಅವಳಲ್ಲಿಗೆ ನಾನು ಹೋಗುವುದು ಉಚಿತವಲ್ಲ—ಎಂದು ಹೋಗದೆಯೆ ಉಳಿದ.

ಎಷ್ಟು ದಿನ ಕುಳಿತಾನು ದಿಲ್ಲಿಯಲ್ಲಿ ? ತಾಯಿ ಬರುವಂತಿಲ್ಲ. ತಂದೆ ಅವಳನ್ನು ಬಿಟ್ಟು ಕದಲಲಾರ—ಎಂದು ತೋರಿದ್ದರಿಂದ, ಹೊರಡುವ ದಿನ ನಿಶ್ಚಯ ಮಾಡಿದ. ಇನ್ನೊಂದು ಬಾರಿ ತಾಯಿಯ ಮುಂದೆ " ಅಮ್ಮಾ, ಎಲ್ಲಾ ಯೋಚನೆಗಳನ್ನು ಬಿಟ್ಟು ಅಲ್ಲಿ ಬಂದು ಸುಖವಾಗಿರಬಹುದು. ಚಿಂತೆ ಮರೆಯುವುದಕ್ಕಾದರೂ ಅಲ್ಲಿ ಬಂದಿರಬಹುದು " ಎಂದ. ಪ್ರತ್ಯುತ್ತರ ದೊರೆಯಲಿಲ್ಲ. ಹೊರಡುವ ದಿನ ಬಂತು. ತಂದೆ ಅವನ ಜತೆಯಲ್ಲಿ ನ್ಯೂದಿಲ್ಲಿ ನಿಲ್ದಾಣದ ತನಕ ಕಳುಹಿಸಿ ಕೊಡಲು ಬಂದರು. ಅಲ್ಲಿ ಮಗನ ಭುಜದ ಮೇಲೆ ಕೈಯಿಟ್ಟು " ಶಂಕರ, ಅವಳು ಬರಲಿಲ್ಲವೆಂದು ಮನಸ್ಸಿಗೆ ಹಚ್ಚಿಕೊಳ್ಳಬೇಡ. ನನಗಂತು ದಿಲ್ಲಿ ಬೇಸರ ಬಂದಿದೆ. ಒಂದು ವರ್ಷದೊಳಗಾಗಿ ನೀನಿರುವಲ್ಲಿಗೆ ಬರುತ್ತೇನೆ. ಇನ್ನು ನಮಗೆ ಯಾರಿದ್ದಾರೆ? ಇರುವವ ನೀನೊಬ್ಬ........" ಎಂದರು. ತುಸು ಹೊತ್ತಿನ

ಬಳಿಕ "ಹಣ ಬೇಕಾದರೆ ಬರೆ. ಈಗ ಈ ಚೆಕ್ಕನ್ನು ಕೊಟ್ಟಿದ್ದೇನೆ-೫೦೦೦ಕ್ಕೆ. ಹೋದವನೇ ಒಂದು ಚಿಕ್ಕ ಮನೆಯನ್ನು ಕಟ್ಟಿಸು. ಇಲ್ಲಿ ಇಷ್ಟು ದೊಡ್ಡ ಬಂಗಲೆಯಲ್ಲಿದ್ದು ಆ ಗುಡಿಸಿಲಿನಲ್ಲಿರುವುದಕ್ಕೆ ಮನಸ್ಸು ಬರುವುದಿಲ್ಲ. ಮನೆ ಕಟ್ಟಿಸಿ ತಿಳಿಸು. ಒಡನೆಯೇ ಬರುತ್ತೇನೆ. ಅಲ್ಲಿ ನಿನಗೆ ಏನೇನು ಮಾಡಬೇಕೆಂದಿದೆಯೋ-ಮಾಡಿಸು. ಹಣಕ್ಕಾಗಿ ಅಂಜಬೇಡ, ಕಳುಹಿಸುತ್ತೇನೆ "—ಎಂದಂದು, ಅವನನ್ನು ಪ್ರೀತಿಯಿಂದ ಬೀಳ್ಕೊಟ್ಟರು. ನಿಜಕ್ಕೂ ಅವರ ಮಾತಿನಿಂದ, ಅವರ ಮನಸ್ಸು ಬದಲಿಸಿದ್ದೂ, ಮನಸ್ಸು ಪ್ರಸನ್ನವಾದದ್ದೂ ವ್ಯಕ್ತವಾಗುತ್ತಿತ್ತು. ಅವರ ಭರವಸೆಗಳಿಂದ ಅವನ ಮುಂದಿನ ಬದುಕಿಗೆ ಒಂದು ಧೈರ್ಯವೂ ಆಯಿತು.

## ಅಧ್ಯಾಯ ೧೫

ಶಂಕರ ದಿಲ್ಲಿಯಿಂದ ಹೊರಟು ಮುಂಬಯಿಯನ್ನು ಸೇರುತ್ತಲೇ, ತನ್ನ ಕೃಷಿಕ ಕಾರ್ಯಕ್ಷೇತ್ರವನ್ನು ವಿಸ್ತರಿಸಲು ಬೇಕಾದ ಉಪಕರಣಗಳನ್ನು ಕೊಳ್ಳುವುದಕ್ಕೆ ನಿಂತ. ನೀರಾವರಿಗಾಗಿ ಎಂಜಿನ್, ಪಂಪುಗಳನ್ನು ಕೊಂಡ. ಕೈಗಾರಿಕೆಗಳಿಗೆ ಅವಶ್ಯಕವಾದ ಸಾಧನಗಳನ್ನು ಕೊಂಡ. ಮುಂಬಯಿಂದ ಮಂಗಳೂರಿಗೆ ಬರಿಯ ಎರಡು ದಿನಗಳ ಪ್ರವಾಸ. ಹಡಗನ್ನೇರಿದ ಅವನಿಗೆ ಏರಿದ ಗಳಿಗೆಯಿಂದಲೇ ಬಂಗಾಡಿಯ ಕನಸುಗಳು ಕಾಣತೊಡಗಿದವು. ಎಲ್ಲದಕ್ಕಿಂತ ಹೆಚ್ಚಾಗಿ, ರಂಗರಾಯರ ಮನೆಯ ಭವಿಷ್ಯ ಕಣ್ಣಮುಂದೆ ಕಾಣುತ್ತಿತ್ತು. ಅವರ ಸಲುವಾಗಿ ಮುಂದೇನು ಮಾಡುವುದಕ್ಕೊ ದಾರಿ ತೋರದು. ಶಾಂತು, ಮಗನ ಹಂಗನ್ನು ಸಂಪೂರ್ಣ ತೊರೆಯುವ ತನಕ, ಅವನ ದಾರಿ ಉಭಯ ಸಂಕಟದ್ದು. ಅಂತು—ಹಾಗೆ ಮಾಡಲೇ, ಹೀಗೆ ಮಾಡಲೇ—ಎಂಬುದರಲ್ಲಿ ಮೂರನೆಯ ದಿನ ಮಧ್ಯಾಹ್ನ ಹಡಗು ರೇವನ್ನು ಸೇರಿತು. ಒಂದಿಷ್ಟು ಉಪಾಹಾರ ಮುಗಿಸಿ, ಬಸ್ಸು ನಿಲ್ದಾಣಕ್ಕೆ ಧಾವಿಸಿದನು. ಹಡಗು ತಡವಾಗಿ ಬಂದಿತ್ತು. ಆದುದರಿಂದ ಕೊನೆಯ ಬಸ್ಸು ಒಂದೇನೇ ಇದ್ದು, ಆತ ಬೆಳ್ತಂಗಡಿಯನ್ನು ಸೇರುವಾಗ ಕತ್ತಲೆಯಾಗಿತ್ತು. ಜತೆಯಲ್ಲಿ ತಂದ ಸಾಮಾನುಗಳಿಂದಾಗಿ ಒಬ್ಬನೇ ನಡೆದುಹೋಗುವಂತಿಲ್ಲ. ರಾತ್ರಿಯನ್ನು ಆ ಊರಲ್ಲಿ ಕಳೆದು, ಮರುದಿನ ಆಳೊಬ್ಬನನ್ನು ಕಟ್ಟಿಕೊಂಡು ಹೊರಡುತ್ತೇನೆ—ಎಂದು ಹೋಟಲಿನ ಜಗುಲಿಯಲ್ಲಿ ಕುಳಿತು ಯೋಚಿಸುತ್ತಿರುವಾಗಲೇ ತಮ್ಮೂರ ಉಗ್ರಾಣಿಯ ಭೇಟಿಯಾಯಿತು.

'ಎಂದು ಬಂದಿರಿ?' ಎಂದು ಆತ ಪ್ರಶ್ನಿಸಿದ.

'ಈಗಷ್ಟೆ ಬಂದೆ. ನೀನು ಎಲ್ಲಿಗೆ ಹೊರಟದ್ದು?'

'ಹೊರಟದ್ದು ಡಾಕ್ಟರಲ್ಲಿಗೆ. ಶ್ರೀಮತಿಯಮ್ಮನಿಗೆ ಕಾಯಿಲೆ. ರಾಯರಿಗೆ ಆದ ಜ್ವರವೇ ಅವರಿಗೂ ಬಂದಿದೆ. ಅವರಂತೆಯೇ ಯದ್ವಾತದ್ವಾ ಮಾತನಾಡುತ್ತಾ ಇದ್ದಾರೆ. ಶಾಂತಮ್ಮ ಹೆದರಿ ಕಂಗಾಲಾಗಿದ್ದಾರೆ. ನೀವು ಇರುತ್ತಿದ್ದರಾದರೂ ಒಂದಿಷ್ಟು ಧೈರ್ಯವಾಗುತ್ತಿತ್ತು. ಪುಣ್ಯಕ್ಕೆ—ಎಳಚಿತ್ತಾಯರು ದಿನಾಲು ಮನೆಗೆ ಬರುತ್ತಿದ್ದಾರೆ. ಈಗ ಅವರೇನೇ 'ನಾನು ಕುಳಿ

ತಿರುತ್ತೇನೆ, ನೀನು ಹೇಗಾದರು ಮಾಡಿ ಡಾಕ್ಟರರನ್ನು ಕರೆದುಕೊಂಡು ಬಾ' ಎಂದು ಹೇಳಿ ನನ್ನನ್ನು ಕಳುಹಿಸಿದರು. ಅದಕ್ಕೇನೆ ಬಂದೆ."

ಶಂಕರನ ಪಾಲಿಗೆ ಸಿಡಿಲೆರಗಿದಂತಾಯಿತು. ರಂಗರಾಯರಿಗೆ ಬೇನೆ ಬಂದಾಗಲೇ, ಉಳಿದವರಿಗೆ ಜ್ವರ ನಿರೋಧದ ಮದ್ದನ್ನು ಕೊಡಿಸದೆ ಹೋದುದು ಎಷ್ಟು ಮೂರ್ಖತನವಾಯಿತು—ಎಂದು ತೋರಿತು. ಈಗ ವಿಚಾರಕ್ಕೆ ಅವಕಾಶವಿಲ್ಲ. ಉಗ್ರಾಣಿಯೊಂದಿಗೆ ಡಾಕ್ಟರರ ಮನೆಗೆ ಓಡಿದನು. ದಾರಿಯುದ್ದಕ್ಕೂ, 'ಎಷ್ಟು ದಿನವಾಯಿತು? ತುಂಬಾ ಅಶಕ್ತಿಯೇ? ಬೇರೆ ಏನಾದರೂ ತೊಂದರೆಗಳಿವೆಯೇ' ಎಂದು ಕೇಳುತ್ತಲೇ ಇದ್ದ. ಡಾಕ್ಟರರ ಮನೆಗೆ ಹೋಗಿ, ಅವರನ್ನು ಆಗ್ರಹಪಡಿಸಿ, ಕರೆದೊಯ್ಯುವುದಕ್ಕೆ ಪ್ರಯಾಸವಾಗಲಿಲ್ಲ. ಅಲ್ಲದೆ ಅವರು ಶಂಕರನ ಪರಿಚಯಸ್ಥರೇ ಆದುದರಿಂದ ವಾಹನಕ್ಕಾಗಿ ಹಂಬಲಿಸದೆ, ಕಾಲ್ನಡೆಯಿಂದಲೇ ಹೊರಟರು. ಉಗ್ರಾಣಿ ತಿಮ್ಮ ಕೈಯಲ್ಲಿ ಬೆಳಕನ್ನೂ, ವೈದ್ಯರ ಚೀಲವನ್ನೂ ಹಿಡಿದು ಮುಂದಕ್ಕೆ ಸಾಗಿದ. ಅವರು ನಸುಬೆಳಕಿನಲ್ಲಿ ಎಡವುತ್ತ, ತಡವುತ್ತ ರಂಗರಾಯರ ಮನೆಯನ್ನು ಸೇರುವಾಗ ಒಂಬತ್ತು ಗಂಟೆಯಾಗಿರಬಹುದು. ಬರುವವರ ಧ್ವನಿ ಕೇಳುತ್ತಲೇ, ಎಳಚಿತ್ತಾಯರು ಎದ್ದು ಹೊರಗೆ ಬಂದು ಸ್ವಾಗತಿಸಿದರು. ಶಂಕರ ಬಂದುದನ್ನು ಕಂಡು ಅವರಿಗೆ ಹಿಡಿಯಲಾರದಷ್ಟು ಸಂತೋಷವಾಯಿತು. ಅದನ್ನು ಪ್ರಕಟಿಸುವುದಕ್ಕೂ ವೇಳೆಯಿರಲಿಲ್ಲ.

ಒಳಗಿನ ಕೋಣೆಯೊಂದರಲ್ಲಿ ಒಂದು ಚಾಪೆ ಹರವಿ; ಚದ್ದರು ಹಾಸಿ, ಮಾಸಲು ದಿಂಬನ್ನಿರಿಸಿ, ಅದರ ಮೇಲೆ ಎಲುಬು ಮೂಳೆಯಾಗಿರುವ ಶ್ರೀಮತಿಯನ್ನು ಮಲಗಿಸಿದ್ದರು. ಅನತಿ ದೂರದಲ್ಲಿ ಮಿಣುಕು ಕಾಲುದೀಪ ಉರಿಯುತ್ತಿತ್ತು. ಶ್ರೀಮತಿಯ ಕಣ್ಣುಗಳು ಅರ್ಧ ಮುಚ್ಚಿಕೊಂಡಿದ್ದವು. ಬಾಯಿಂದ ತೊದಲು ಮಾತುಗಳು ಹೊರಡುತ್ತಿದ್ದವು. ಮೈತುಂಬ ಕುದಿವ ಜ್ವರ. ಅದಕ್ಕಾಗಿ ತಲೆಗೆ ಏನೋ ಲೇಪ ಹಚ್ಚಿದ್ದರು. ಆಕೆಯ ಸುತ್ತು ಶಾಂತು, ಅವಳ ಮಕ್ಕಳು ಹೊಂಚುಹಾಕುತ್ತಿದ್ದರು. ಅಷ್ಟೊಂದು ತುಂಬಿದ ಜೀವ, ಕಾಂತಿಯುತವಾದ ಮುಖ, ಈ ಬಗೆಯಲ್ಲಿ ಬೆಂದು ಬೆಂಡಾದುದು ಯಾವ ತಾಯ ಕರುಳಿಗೆ ತೃಪ್ತಿ ತಂದೀತು ? ಇವರು ಬರುತ್ತಲೇ ಶಾಂತುವಿನ ಕಣ್ಣು, ವೈದ್ಯರ ಕಡೆಗೂ ಶಂಕರನ ಕಡೆಗೂ ತಿರುಗಿತು. ಮನದ

ಮೊರೆ ಕಂಬನಿಯ ರೂಪದಲ್ಲಿ ಹರಿಯಿತು. ಶ್ರೀಮತಿಯ ಮುಖದ ಗುರುತು ಸಿಕ್ಕಲಾರದ್ದನ್ನು ಕಂಡು ಶಂಕರಗೆ ದಿಗಿಲುಗೆಟ್ಟಿತು. ಎಲ್ಲರೂ ವೈದ್ಯರ ಅಪ್ಪಣೆ ನಿರೀಕ್ಷಿಸಿದರು. ಬಂದ ವೈದ್ಯರು ರೋಗಿಯನ್ನು ಪರೀಕ್ಷಿಸಿ, ತಲೆಗೆ ಲೇಪದಬದಲು ಕೊಲೋನ್ ದ್ರಾವ್ಯ ಕೊಟ್ಟರು. ನಿದ್ದೆ ಬರುವಂತೆ ಮದ್ದು ಕೊಟ್ಟರು. ಆಕೆಯನ್ನು ಪರೀಕ್ಷಿಸಿ ಶ್ವಾಸಕೋಶಗಳಲ್ಲಿ ಕಫದ ದಟ್ಟಣೆಯಿದೆ ಯೆಂದು ಹೇಳಿದರು. ಚೆನ್ನಾಗಿ ಆರೈಕೆ ಮಾಡಿದಲ್ಲಿ ಯಾವ ಭೀತಿಯೂ ಇಲ್ಲವೆಂದು ಭರವಸೆ ಕೊಟ್ಟರು. ಕತ್ತಲಾಗಿದ್ದುದರಿಂದ, ಅವರು ಬೆಳ್ತಂಗ ಡಿಗೆ ಮರಳುವಂತಿಲ್ಲ.ಎಳಚಿತ್ತಾಯರ ಜತೆಯಲ್ಲಿ, ಅವರ ಮನೆಗೆ ಊಟಕ್ಕೆ ಹೊರಟು ಹೋದರು. ಹೋಗುತ್ತ–ಇನ್ನೊಮ್ಮೆ ಬರುತ್ತೇನೆಂದು ತಿಳಿಸಿ ಹೋದರು.

ಶಂಕರ ಪ್ರಯಾಣದಿಂದ ದಣಿದು ಬಂದಿದ್ದ. ಹಸಿವೂ ಆಗಿತ್ತು. ಸ್ನಾನ ಮೊದಲೇ ಮಾಡಿರಲಿಲ್ಲ. ಆದರೆ ಅಲ್ಲಿ ಬಂದು ಸೇರಿದವನಿಗೆ-ಶ್ರೀಮ ತಿಯನ್ನು ಕುರಿತಾದ ಚಿಂತೆಯೊಂದಲ್ಲದೆ ಬೇರಾವ ಯೋಚನೆಯೂ ಬಾರದೆ ಹೋಯಿತು. ಆಕೆಯ ಮಗ್ಗುಲ ಬಳಿಯಲ್ಲಿಯೇ ಕುಳಿತು—ಎಂದು ಆ ಜ್ವರ ತಗ್ಗೀತು, ಎಂದು ಆಕೆಗೆ ಸ್ಮೃತಿ ಬಂದೀತು–ಎಂಬ ನಿರೀಕ್ಷಣೆಯಿಂದ ಅವಳ ಮುಖವನ್ನು ನೋಡುತ್ತಾ ರಾತ್ರಿಯನ್ನು ಕಳೆದನು. ದಿನ ದಿನ ಮಗ ಳಿಗಾಗಿ ನಿದ್ದೆಯನ್ನು ಬಿಟ್ಟ ಶಾಂತುವು ಬಸವಳಿದು, ಅಲ್ಲಿಯೇ ತುಸು ದೂರ ದಲ್ಲಿ ಮಲಗಿ ನಿದ್ದೆಹೋದಳು. ಮದ್ದಿನ ಪ್ರಭಾವದಿಂದ ಶ್ರೀಮತಿಗೂ ನಿದ್ದೆ ಬಂದಿತು. ಆದರೆ ಶಂಕರನ ಕಾವಲು ಮಾತ್ರ ಒಂದೇ ಸವನೆ ನಡೆದಿತ್ತು.

ರಾತ್ರಿ ಕಳೆಯಿತು; ಬೆಳಗಾಯಿತು. ಊಟ ವಿಶ್ರಾಂತಿಗಳಿಗೆ ಎಳಚಿ ತ್ತಾಯರಲ್ಲಿಗೆ ಹೋದ ವೈದ್ಯರು ಇನ್ನೊಮ್ಮೆ ಆ ಮನೆಗೆ ಬಂದರು. ರೋಗಿ ಯನ್ನು ಪರೀಕ್ಷಿಸಿ ಆಕೆಗೆ ಎದೆಗೆ ಶಾಖವನ್ನು ಕೊಡಲೇ ಬೇಕು-ಎಂದರು. ಜ್ವರ ತಗ್ಗಿಸುವುದಕ್ಕಾಗಿ ಕೊಲೋನ್ ಲೇಪನ ತಪ್ಪಿಸಬಾರದು ಎಂದರು. ಮುಂಜಾಗ್ರತೆಗಾಗಿ ಮನೆಯ ನಿವಾಸಿಗಳಿಗೆ, ಜ್ವರನಿರೋಧಕ ಮದ್ದನ್ನು ಚುಚ್ಚಿದರು.

ಶಂಕರ ಅವರನ್ನು ಕಳುಹಿಸಿಕೊಟ್ಟು, ಮನೆಗೆ ಮರಳಿದನು. ಮುಖ ತೊಳೆದು, ಮಿಂದು, ಒಂದಿಷ್ಟು ಉಪಾಹಾರ ಮುಗಿಸಿ ತಿರುಗಿ ಶ್ರೀಮತಿಯ

ಹತ್ತಿರಕ್ಕೆ ಹೋಗಿ ಕುಳಿತನು. ನಡುನಡುವೆ ಭೀತಿಯಿಂದ ಅಳುತ್ತಿರುವ ಶಾಂತುವಿಗೆ ಸಮಾಧಾನ ಹೇಳಬೇಕಿತ್ತು. "ಗುಣವಾಗುತ್ತದೆ; ಅಧೈರ್ಯಪಡಬೇಡಿ-ಡಾಕ್ಟರರು ಹೇಳಿದ್ದಾರೆ" ಎನ್ನುತ್ತಿದ್ದ. ಕೊಲೋನ್ ಲೇಪನದಿಂದ ಆಕೆಯ ತಲೆಯ ಬಿಸಿ ಇಳಿಯಿತು. ಔಷಧ ಸೇವನೆಯಿಂದ ನಿದ್ದೆಯು ಬಂದಿತ್ತು. ಸುಮಾರು ಮಧ್ಯಾಹ್ನದ ಹೊತ್ತಿಗೆ ಆಕೆ ಕಳೆದುಕೊಂಡಿದ್ದ ಸ್ಮೃತಿಯನ್ನು ಪಡೆದಳು. ಕಣ್ಣು ತೆರೆದು ಮೊದಲ ಬಾರಿಗೆ, ಶಂಕರನನ್ನು ದಿಟ್ಟಿಸಿ ನೋಡಿದಳು. 'ಬಂದಿರಾ?' ಎಂದು ಮೆಲುಧ್ವನಿಯಲ್ಲಿ ನುಡಿದಳು. ಅಷ್ಟಕ್ಕೆ ಶಂಕರ, ಮಾತನಾಡಬೇಡವೆಂದು ನಗುತ್ತ ಸನ್ನೆಮಾಡಿದುದರಿಂದ ಅವನನ್ನೇ ನೋಡುತ್ತ ತೃಪ್ತಿಪಡುವವಳಂತೆ ವಿರಮಿಸಿದಳು. ಆ ಎರಡು ದಿನಗಳಿಂದ ಆಕೆಯು ಯಾವ ಆಹಾರವನ್ನೂ ತೆಗೆದುಕೊಂಡಿರಲಿಲ್ಲ, ಶಂಕರ ಹಾಲನ್ನು ತಂದು, ಅದರ ಸಾರವನ್ನು ತೆಗೆದು, 'ವೇ'ಮಾಡಿ ಅವಳ ತುಟಿಗೆ ಒಡ್ಡುತ್ತಲೇ. ಅದನ್ನು ಸ್ವೀಕರಿಸಿದಳು. ಆಹಾರ ಬೇಕೆನಿಸಿತ್ತೋ, ಇಲ್ಲವೋ, ಅಥವ ಅವನ ತೃಪ್ತಿಗಾಗಿ ಕುಡಿದಳೋ-ಅಂತು ಕುಡಿದಳು. ಏನೋ ಒಂದುಆಸೆ ಅವಳ ಕಣ್ಣು, ತುಟಿಗಳೆರಡರಲ್ಲಿಯೂ ಹೊರಸೂಸುವ ಪ್ರಯತ್ನ ಕಾಣುತ್ತಿತ್ತು. ತನ್ನ ಚೇತನಶೂನ್ಯ ಬಲಗೈಯನ್ನು ಇರಿಸಿದಲ್ಲಿಂದಲೇ ಸರಿಸಿ. ಶಂಕರನ ಮೈಗೆ ತಗಲಿಸಿದುದನ್ನು ಕಂಡು ಆತ ಅದನ್ನುಎತ್ತಿ ತನ್ನ ತೊಡೆಯ ಮೇಲಕ್ಕಿರಿಸಿಕೊಂಡು ತನ್ನ ತುಂಬು ಹಸ್ತಗಳಿಂದ ಸವರತೊಡಗಿದನು. ಏನಿದೆ ಅಲ್ಲಿ? ತನ್ನ ಒರಟು ಕೈಗೆ ತಡೆಯುವ ಕಡ್ಡಿಗಳಂತಿದ್ದ ಅವಳ ಕೈಬೆರಳುಗಳು! ಆದರೆ ಈ ಭವ್ಯ ಸಂಭಾವನೆಯು ಶ್ರೀಮತಿಯ ಮನಸ್ಸಿಗೆ ಎಷ್ಟು ತೃಪ್ತಿಯನ್ನು ತಂದುಕೊಟ್ಟಿತೋ ಏನೋ! ಬಹು ಹೊತ್ತಿನ ತನಕವೂ ಅವನನ್ನೇ ದಿಟ್ಟಿಸಿ ನೋಡುತ್ತಿದ್ದಳು. ಕಣ್ಣು ದಣಿಯಿತು; ನಿದ್ದೆ ಬರುವಂತಾಯಿತು. "ಪಾಪ–ಆಯಾಸವಾಗಿದೆಯೇ ಏನೋ ಎಂದು ತಾನು ಮಗ್ಗುಲು ಸರಿಯದೆ ಅಲ್ಲಿಯೇ ಬಳಿಯ ಗೋಡೆಗೆ ಒರಗಿ ಕುಳಿತ, ಆತನಿಗೂ ದಣಿವಿನಿಂದ ನಿದ್ದೆ ಬಂದಿತ್ತು. ತನ್ನ ಕೈಗಳನ್ನು ತೆಗೆದರೆ ಆಕೆಗೆ ಎಚ್ಚರವಾಗಬಹುದೆಂದು ಹೆದರಿ, ಸರಸಿಯನ್ನು ಕೂಗಿ ಕರೆದು ಒಂದು ದಿಂಬನ್ನು ತರಿಸಿಕೊಂಡು, ತನ್ನ ಬೆನ್ನು ಗೋಡೆಗಳ ನಡುವೆ ತುರುಕಿಸಿ ತಾನೂ ಒರಗಿದ. ಕಣ್ಣು ಬಾಡಿತ್ತು. ಅವನ ಕತ್ತು ಲೋಡು, ಗೋಡೆ

ಗಳ ಆನಿಕೆಯಲ್ಲಿ ವಿಶ್ರಾಂತಿ ಪಡೆಯಿತು. ಅಲ್ಲಿಯೇ ಗಾಢವಾದ ನಿದ್ರೆ ಬಂದಿತು.

ಮಗಳ ಮುಖವನ್ನು ನೋಡಿ ಶಾಂತು ಹೊರಡಿಸಿದ ವಿಕಟವಾದೊಂದು ಚೀತ್ಕಾರ ಶಂಕರನ ನಿದ್ದೆಯನ್ನು ಧ್ವಂಸಮಾಡಿತು. ಗಾಬರಿಯಿಂದ ಕಣ್ಣು ತೆರೆಯುವಂತೆ ಮಾಡಿತು. ಕಾರಣ–ಸ್ಪಷ್ಟವಾಯಿತು. ತನ್ನ ಅಂತರಿಕ ಬಯಕೆಯನ್ನೂ, ಸ್ನೇಹ ಸಾನ್ನಿಧ್ಯವನ್ನೂ ವಿಚಿತ್ರವಾದ ಬಗೆಯಲ್ಲಿ ತೀರಿಸಿಕೊಂಡು, ಶ್ರೀಮತಿಯು ಪರಮ ತೃಪ್ತಿಯಿಂದ ವಿರಮಿಸಿಕೊಂಡಿದ್ದಳು. ಆದರೆ ಆ ವಿರಾಮ ಮಾತ್ರ ಚಿರವಿರಾಮವಾಗಿತ್ತು.

ಒಂದೆರಡು ನಿಮಿಷಗಳ ಕಾಲ, ಶಂಕರ ಬಡ ಶ್ರೀಮತಿಯ ಮುಖವನ್ನೇ ದಿಟ್ಟಿಸಿ ನೋಡಿದ. ಏನು ಕಂಡಿತೋ-ಏನೋ. ಅವಳ ಹಣೆಯನ್ನು ತುಟಿಗಳಿಂದ ಮುದ್ದಿಸಿದ. ಮರುಗಳಿಗೆಗೆ ತನ್ನ ಎದೆಯನ್ನು ಕಲ್ಲುಮಾಡಿಕೊಂಡು, ಮನೆಯನ್ನು ರೋದನದಿಂದ ತುಂಬಿಸುತ್ತಿದ್ದ ಶಾಂತುವಿನ ಬಳಿಗೆ ಹೋಗಿ, ಅವಳೆರಡೂ ತೋಳುಗಳನ್ನು ಬಿಗಿದು ಆಗ್ರಹಪಡಿಸಿದ. "ಅಮ್ಮಾ, ನೀವು ಹೀಗೆಲ್ಲಾ ಅಳಬಾರದು. ಅವಳಿಗಾಗಿಯೂ ನನಗಾಗಿಯೂ ಅಳಕೂಡದು" ಎಂದ. ಅವಳ ಮನಸ್ಸೂ ಆ ಗಳಿಗೆಯಲ್ಲಿ ಕಲ್ಲಾಗುವಂತೆ ಪ್ರೇರೇಪಿಸಿದ.

ಅವನ ಮುಂದಿನ ಕೆಲಸ ಹೊರಲಾರದಷ್ಟು ಕಠಿಣ. ಶ್ರೀಮತಿಯ ಅಂತಿಮಯಾತ್ರೆಗೆ ಸಾಕ್ಷಿಯಾದ. ತನ್ನ-ಅವಳ, ವಿವಾಹ ನಡೆದುದೇ ಚಿತೆಯಲ್ಲಿ–ಎಂಬ ಭ್ರಮೆಯಿಂದ ಮನೆಗೆ ಮರಳಿದ. ಮುಂದಣ ಆಸೆಯೆಲ್ಲ ಮಣ್ಣುಗೂಡಿತೆಂದು ಎಣಿಸಿದ. ಅದರಲ್ಲಿಯೇ ಉಳಿದವರಿಗೆ ಸಮಾಧಾನ ಹೇಳುವ ಹೊರೆಯನ್ನೂ ಹೊತ್ತ. ಶಂಕರನ ಕಣ್ಣುಗಳು ಎಚ್ಚರವಿರುವಾಗ ಕಂಬನಿ ಸುರಿಸುತ್ತಿರಲಿಲ್ಲ. ಶಾಂತು ಮೊದಲಾದವರ ಎದುರು ತುಟಿ ಅಲುಗಾಡಿಸುತ್ತಿರಲಿಲ್ಲ. ಆದರೆ ಮಲಗಿ ನಿದ್ದೆಹೋಗುವಾಗ, ಒಂಟಿಯಾಗಿ ಕುಳಿತಾಗ, ಅವನ ಪಾಡೇನೆಂದು ಅವನೊಬ್ಬನೇ ಹೇಳಬೇಕಾಗಿತ್ತು. ಆದರೆ ಅವನ ಹತ್ತುಮಡಿ ವ್ಯಥೆ, ನೋವು ಯೋಚನೆಗಳಿಂದ ತೊಳಲಾಡಿದವಳು ಶಾಂತು. ಯಾರು ಏನು ಹೇಳಿದರೂ, ಆ ಮಾತುಗಳೆಲ್ಲವೂ ಅವಳ ಪಾಲಿಗೆ ಶೂನ್ಯವಾದ ಒಣ ಅಕ್ಷರಗಳಾಗಿದ್ದುವು. ಹೋದವರು ಹೋದರೂ, ಉಳಿದ

ವರ ಪಾಡನ್ನೂ, ನಾಳಿನ ಹೊರೆಯನ್ನೂ ಎಣಿಸಿಕೊಂಡಾಗಲೆಲ್ಲ ಆಕೆಗೆ ಭಯ, ಭೀತಿಗಳು ಉಕ್ಕೇರುತ್ತವೆ. ಮೊದಲು ಮಗನನ್ನು ಕರೆಯಿಸಿ ಕೊಳ್ಳಬೇಕು. ಅವನಿಗೆ ತಂತಿ ಕೊಟ್ಟೂ ಆಯಿತು. ಆ ಕೆಲಸ ಮಾಡುವುದಕ್ಕೂ ಶಂಕರನೇ ಬೇಕು. ಅವನೇನೋ ಅವರ ಮನೆಗೆ ಆಗಾಗ ಹೋಗಿ ಸಮಾಧಾನ ಹೇಳಿ ಬರುತ್ತಾನೆ. ಮಗನ ಬರಕ್ಕಾಗಿ ಶಾಂತು ದಿನ ಕಾಯುತ್ತಾಳೆ. 'ಮೊನ್ನೆಯಷ್ಟೆ ಬಂದಿದ್ದ, ಇನ್ನೆಲ್ಲಿ ಬರುತ್ತಾನೆ' ಎಂದು ಆಕೆ ನಿರಾಶೆ ತಾಳಿ ಸಮಾಧಾನ ತಂದುಕೊಳ್ಳುತ್ತಾಳೆ.

ಶಂಕರನ ಮಾನಸಿಕ ಪ್ರಪಂಚವು ಮಾತ್ರ–ಪರಿಣಾಮ ಶೂನ್ಯವಾದ ವಿಪ್ಲವಗಳಿಂದ, ನೋವುಗಳಿಂದ ತುಂಬಿಕೊಂಡಿತ್ತು. ಶ್ರೀಮತಿಯ ಸಾವಿಂದ ಸವಿ ಜೀವನದ ಆಸೆಯೊಂದು ಮಣ್ಣುಗೂಡಿದ್ದಲ್ಲದೆ—ಸಾವೆಂಬ ಭಯಂಕರ ಸತ್ಯದ ಮುಂದೆ ಉಳಿದೆಲ್ಲ ಮಾನವೀ ಹೋರಾಟಗಳಿಗೆ ಅರ್ಥ ವೇನು-ಎಂಬ ಪ್ರಶ್ನೆಯೇ ಬಲವಾಗಿ ಕಾಣಿಸಿತು. ಯಾಕಾಗಿ ಈ ದುಡಿತ? ಎಂದು ಅನಿಸುತ್ತಿತ್ತು. ಆದರೆ ಮನಸ್ಸಿಗೆ ಹೀಗೆ ಹುಚ್ಚು ಹಿಡಿದಂತೆ ಕಂಡರೂ ಅದರ ನಡುವೆ, 'ಬಾಳು ಬೆದರುವುದಕ್ಕಾಗಿ ಅಲ್ಲ. ಬದುಕುವು ದಕ್ಕಾಗಿ;' ಇರಬಹುದೆಂದು ಎಣಿಸುವುದುಂಟು. ಬೆದರಿಕೆಗಾಗಿ ತಾನು ಮನಸೋತಿದ್ದರೆ ಈ ಊರಿಗೇ ಬರುತ್ತಿರಲಿಲ್ಲ–ಎಂದು ಅನಿಸುತ್ತಿತ್ತು. ಯಾರ ಬದುಕೂ ಚಿರವಲ್ಲ. ಆ ಪಾಠ ಎಲ್ಲರಿಗೂ ತಿಳಿದಿದೆ. ಅದು ಅಚಿರ ವಾದುದರಿಂದಲೇ ಕೈಗೆ ಸಿಕ್ಕಿರುವ ವೇಳೆ ಹಾಳಾಗಬಾರದು. ಇಂದು ಸರಿದ ಸಮಯ ನಾಳೆ ಬರಲಾರದು–ಎಂದು ಮನಸ್ಸನ್ನು ತನ್ನ ಕೆಲಸಗಳಿಗೆ ತೊಡಕಿಸುತ್ತಾನೆ. ಹಿಂದೆ ವಿರಾಮ ದೊರಕಿದಾಗ, ಬರೆದಿರಿಸಿದ ಯಂತ್ರ ಸಲಕರಣೆಗಳ ಚಿತ್ರಗಳನ್ನು ಹೊರಕ್ಕೆ ತೆಗೆದು, ಆ ಕನಸುಗಳನ್ನು ಕಾರ್ಯಕ್ಕೆ ತರಲು ಪ್ರಯತ್ನಿಸುತ್ತಾನೆ. ತಿದಿ ಹೊತ್ತಿಸುತ್ತಾನೆ. ಕಬ್ಬಿಣ ಕಾಯಿಸುತ್ತಾನೆ, ತೂತು ಕೊರೆಯುತ್ತಾನೆ, ಸ್ಕ್ರೂ ಜೋಡಿಸುತ್ತಾನೆ, ಗಾಲಿ ಹೊಂದಿಸುತ್ತಾನೆ. ಅವನ ಸಹಾಯಕ್ಕೆ 'ಅಣ್ಣ, ಯಾಕೆ ಇಷ್ಟು ಬೇಸರ?' ಎಂದು ಗಳಿಗೆ ಗಳಿಗೆಗೆ ನುಡಿಯುವ ಕೃಷ್ಣನೂ ಇದ್ದಾನೆ. ಒಂಟಿಯಾಗಿರಲಿ, ಜತೆಗೂಡಿರಲಿ–ಆತನು ದುಡಿಯುತ್ತಲೇ ಇರುತ್ತಾನೆ. ನಿದ್ರೆಯಿಂದ ಕೈಯು ಅರವೋ, ಕೊಡತಿಯೋ ಕಳಚಿಬೀಳುವ ತನಕವೂ

ಆತನ ದುಡಿತ ಒಂದೇ ಸಮನೆ ಸಾಗುತ್ತದೆ.

ಶಂಕರನ ಈ ತೆರನ ಚರ್ಯೆಗಳು, ಅವನ ಮಾನಸಿಕ ವೇದನೆಗಳ ಫಲ ಎಂಬುದು ಕೃಷ್ಣನಿಗೆ ಗೊತ್ತಿತ್ತು. ಬರಿಯ ಒಂದು ವರ್ಷದ ಅವಧಿಯಲ್ಲಿ ನಾಲ್ವರು ಅಪ್ತರ, ಬಂಧುಗಳ ಸಾವನ್ನು ಸಹಿಸಬೇಕಾದ ಪ್ರಸಂಗ ಸುಲಭವಾದುದಲ್ಲ-ಎಂದು ಅವನಿಗೆ ತಿಳಿದಿತ್ತು. ಶಂಕರ ಕಂಬನಿಯನ್ನು ಮಿಡಿಯದೆ ಇರುವುದನ್ನು ಕಂಡರೆ ತನಗಾದ ನೋವನ್ನು ಕುರಿತು ತುಟಿ ಮಿಟುಕಿಸದಿರುವುದನ್ನು ಕಂಡರೆ 'ಅಣ್ಣನಿಗೆ ಹುಚ್ಚು ಹಿಡಿದರೇನು ಗತಿ!'—ಎಂಬ ಚಿಂತೆಯೂ ಕೃಷ್ಣನಿಗೆ ಬರತೊಡಗಿತು. ಆ ಭೀತಿಯಿಂದ ಅಣ್ಣ ಸೀತಾರಾಮನಿಗೆ "ನೀನು ಒಮ್ಮೆ ಬಂದು ಹೋಗಲೇಬೇಕು" ಎಂದು ಒತ್ತಾಯಮಾಡಿ ಪತ್ರ ಬರೆದ. ಈಗೀಗ ಕೆಲಸದಲ್ಲಿ ಮಗ್ನನಾದ ಶಂಕರನು ಶ್ಯಾನುಭಾಗರ ಮನೆಗೂ ಹೋಗದಿರುವುದನ್ನು ಕಂಡರೆ—ಅವನ ಬದಲು ತಾನು ಹೋಗುತ್ತಾನೆ.

ಶ್ರೀಮತಿಯ ಮರಣದಿಂದ ಶಂಕರನ ಮನಸ್ಸು ಬಾಡಿರಬಹುದು-ಎಂದು ಶಾಂತುವಿಗೆ ಗೊತ್ತಿದ್ದರೂ, ಅದು ಯಾವ ಬಗೆಯಲ್ಲಿ ಎಂದು ಅವಳು ಊಹಿಸಲಾರಳು. ಕೃಷ್ಣ ಅದನ್ನೆಲ್ಲಾ ಹೋಗಿ ಹೇಳುವವನೂ ಅಲ್ಲ. ಆದರೆ ಮೂಕನಾಗಿಯೂ ಇರಲಾರ. ಒಮ್ಮೊಮ್ಮೆ ಎಳಚಿತ್ತಾಯರಲ್ಲಿಗೆ ಹೋಗಿ ಅವರಿಗೆ ಆ ಸುದ್ದಿ ಹೇಳುವುದುಂಟು. ಎಳಚಿತ್ತಾಯರು ಬಂದು ಶಂಕರನ ಬೇಸರ ಕಳೆಯುವುದಕ್ಕೆ, ನೇರಾಗಿ 'ಏಕೆ ಚಿಂತೆ ಮಾಡುತ್ತೀರಿ?' ಎಂದು ಕೇಳುವ ಬದಲು, ಕೃಷಿಯ ಮಾತುಗಳನ್ನು ಎತ್ತುತ್ತಾರೆ. "ಎಂಜಿನ್, ಪಂಪು ಕೊಂಡಿದ್ದೀರಂತಲ್ಲ. ಅವು ಬಂದುವೇ? ಎಂದು ನೀರಾವರಿ ತೊಡಗುತ್ತೀರಿ? ನಿಮಗೆ ನೀರು ಹೆಚ್ಚಾಗುವುದಾದರೆ ನನಗೂ ಸಿಗಬಹುದಲ್ಲ" ಎಂದು ಯಾವ ಯಾವುದೋ ಪ್ರಸ್ತಾಪಗಳಿಗೆ ಅವನ ಮನ ಸೆಳೆಯುತ್ತಾರೆ. ಸತತೋದ್ಯೋಗಿಯಾದ ಶಂಕರನ ಮನಸ್ಸು ವಿಹ್ವಲವಾದರೆ, ಅದಕ್ಕೆ ಕೆಲಸವನ್ನು ಕುರಿತಾದ ಮಾತುಕತೆಗಳೇ ಚಿಕಿತ್ಸೆ-ಎಂದು ಅವರು ತಿಳಿದಂತೆ ಕಾಣುತ್ತದೆ. ಕಳೆದ ಸಾವು ನೋವುಗಳ ವಿಚಾರವಾಗಿ ಯಾವ ಸೊಲ್ಲನ್ನೂ ಎತ್ತುವುದಿಲ್ಲ. "ಹುಟ್ಟಿದವರು ಒಂದಲ್ಲ ಒಂದು ದಿನ ಸಾಯಬೇಡವೇ?" ಎಂಬ ವೇದಾಂತವನ್ನು ಈ ಎಳೆಯನ ಕಿವಿಗೆ ತಂದು ತುಂಬಿಸಲಿಲ್ಲ.

ಅಷ್ಟನ್ನು ಶಂಕರ ತಿಳಿದವನೇ—ಎಂದೂ ಗೊತ್ತು. ಕೆಲಸವೊಂದೇ ಅವರ ಮಾತುಕತೆಗೆ ಗುರಿಯಾದವಿಷಯ. ತಾಸುತಾಸುಗಳ ತನಕ ಆಸಕ್ತಿಯಿಂದ ಮಾತನಾಡುತ್ತಿದ್ದ ಎಳಚಿತ್ತಾಯರ ಸಂಭಾಷಣೆಯ ದೆಸೆಯಿಂದ ಶಂಕರನ ಮನಸ್ಸಿನ ಕಾವು ಇಳಿಯತೊಡಗಿತು. ಆ ಹಳ್ಳಿಯ ಊರಲ್ಲಿ ಸರಿಸಾಟಿಯಾಗಿ ಕುಳಿತು ಮಾತನಾಡುವುದಕ್ಕಾದರೂ ಎಷ್ಟು ಮಂದಿ ಇದ್ದಾರೆ? ಒಮ್ಮೊಮ್ಮೆ ಎಳಚಿತ್ತಾಯರು ಅರಿಗರನ್ನು ಕರೆದು ತರುತ್ತಾರೆ. ಕರತಂದು "ಏನು ಮಾಡಿದಿರಿ—ಇವರ ಜಾಗದ ವಿಷಯದಲ್ಲಿ? ಬೇರೆ ಯಾರೋ ಅದನ್ನು ಕೇಳುತ್ತಿದ್ದಾರಂತೆ. ಆದರೆ ಅವರಿಗೆ ನಿಮಗೇನೆ ಕೊಡುವುದರಲ್ಲಿ ಇಷ್ಟ" ಎಂಬ ಪ್ರಶ್ನೆ ಹಾಕಿದ್ದುಂಟು. ಅದಕ್ಕೆ ಆತ "ನಾನೇ? ಏನು ಮಾಡಲಿ? ಜಾಗ ನೋಡಿದ್ದೇನೆ. ಆಗಬಹುದೆಂದೂ ತೋರುತ್ತದೆ. ಈಗೇನೋ ಹಾಳು ಬಿದ್ದಿದ್ದರೂ, ನಾಳೆ ಪ್ರಯೋಜನಕ್ಕೆ ಬಂದೀತು ಎಂದು ಮನಸ್ಸಿಗೆ ಅನಿಸುತ್ತದೆ. ನಾನು ಅದನ್ನು ನನಗಾಗಿ ಕೇಳಿದ್ದಲ್ಲ. ನಮ್ಮ ಈ ಕೃಷ್ಣನಿಗಾಗಿ ಕೇಳಿದ್ದು. ಅವನ ಅಣ್ಣನಿಂದ ಇನ್ನೂ ಸಮನಾದ ಉತ್ತರ ಬಂದಿಲ್ಲ. ನನ್ನೊಬ್ಬನಿಂದ ಎರಡೂ ಕಡೆಗಳಿಗೆ ಮನಸ್ಸು ಹಾಕುವುದಾಗಲೀ ಹಣ ಸುರಿಯುವುದಾಗಲಿ ಸಾಧ್ಯವಲ್ಲದ ಕೆಲಸ" ಎಂದು ಉತ್ತರಿಸುತ್ತಾನೆ.

ಅರಿಗರು ಅಲ್ಲಿಂದ ಎದ್ದುಹೋದ ಬಳಿಕ, ಎಳಚಿತ್ತಾಯರು "ಅಲ್ಲ, ಆ ಬೋಳು ಭೂಮಿಯು ಯಾವ ಪ್ರಯೋಜನಕ್ಕೆ ಬಂದೀತು? ನೀರಿಲ್ಲ; ಗಿಡಮರಗಳಿಲ್ಲ. ಬೋಳೆಂದರೆ ತೀರ ಬೋಳು. ಈಗಿನ ದಿನಗಳಲ್ಲಿ ಸುತ್ತಲೂ ಅಗಳು ಹಾಕಿಸುವುದಕ್ಕೇನೆ ಸಾವಿರರೂಪಾಯಿ ಖರ್ಚು ಹಿಡಿದೀತು. ಕೊಂಡ ಜಾಗ ಪ್ರಯೋಜನಕ್ಕೆ ಬರಬೇಕಾದರೆ, ಇನ್ನೆಷ್ಟು ಹಣ ಸುರಿಯಬೇಕಾಗುತ್ತದೋ ಏನೋ" ಎಂದು ಆ ನೆಲವನ್ನು ಹಳಿಯತೊಡಗಿದರೆಂದರೆ, ಆವೇಶದಿಂದ ಶಂಕರ ಮಾತಿಗೆ ತೊಡಗುತ್ತಾನೆ. ಆ ಜಾಗದ ಸಾಧ್ಯಾಸಾಧ್ಯತೆಗಳನ್ನೆಲ್ಲ ಕಣ್ಣಮುಂದೆ ಚಿತ್ರ ಕಟ್ಟುವಂತೆ ಬಣ್ಣಿಸುತ್ತಾನೆ. ಅಷ್ಟೆಲ್ಲ ಹೇಳಿ ಮುಗಿಸಿದ ಬಳಿಕ "ನಾನೇನು ಮಾಡಲಿ? ನಮ್ಮ ಸೀತಾರಾಮನಿಗೆ ಅವಕಾಶವೂ ಇಲ್ಲ. ಬುದ್ಧಿಯೂ ಇಲ್ಲ" ಎಂದು ನಕ್ಕು ನುಡಿಯುತ್ತಾನೆ.

ಅಂತಹ ಒಂದು ದಿವಸದಲ್ಲಿ ಕೃಷ್ಣನ ಕಾಗದದಿಂದ ಕಾತರಗೊಂಡ ಸೀತಾರಾಮ, ಗೆಳೆಯನನ್ನು ನೋಡುವುದಕ್ಕಾಗಿ ಧಾವಿಸಿ ಬಂದ. ಅವನು

ಬರುವ ವೇಳೆಗೆ ಸಮನಾಗಿ,ಶಂಕರ ವಿಭ್ರಮ ಲೋಕದಿಂದ ವಸ್ತು ಲೋಕಕ್ಕೆ ಇಳಿದು ಸಂಚರಿಸತೊಡಗಿದ್ದನಷ್ಟೆ. ಅತ್ತ ಮುಂಬಯಿಯಲ್ಲಿ ಕೊಂಡ ಎಂಜಿನ್, ಪಂಪು ಮೊದಲಾದುವು ಊರಿಗೆ ಬಂದಿದ್ದುವು. ಅದೇ ವೇಳೆಗ ಸೀತಾರಾಮನೂ ಸಹಾಯಕನಾಗಿ ಬಂದೊದಗಿದನು.

ಇದರಿಂದಾಗಿ ಶಂಕರ ಇನ್ನೊಮ್ಮೆ ಉತ್ಸಾಹ ತಾಳುವುದಕ್ಕೆ ಅನುಕೂಲವಾಯಿತು. ಹಳೆಯ ನೋವುಗಳು ಮರವೆಯಾಗದಿದ್ದರೂ, ಸಹನಶಕ್ತಿಯು ಬಂದೊದಗಿದೆ. ಗೆಳೆಯನನ್ನು ಕರೆದುಕೊಂಡು ಇನ್ನೊಮ್ಮೆ ಅರಿಗರ ಭೂಮಿಯನ್ನು ನೋಡಹೋದ. ಅಲ್ಲಿಂದ ಅವರೊಡನೆ ಭೂಮಿಯ ಬೆಲೆಯ ನಿಷ್ಕರ್ಷೆಗೂ ಕುಳಿತ. ಯುದ್ಧವು ಮುಗಿದ ಮೇಲಂತು ಎಲ್ಲೆಲ್ಲೂ ಭೂಮಿಯ ಬೆಲೆ ಮಿತಿಮೀರಿ ಏರಿದ್ದನ್ನು ಕೇಳಿದ ಅರಿಗರು, ತಮ್ಮ ಭೂಮಿಗೆ ಹೆಚ್ಚುಕಡಿಮೆ ಐದು ಸಾವಿರ ರೂಪಾಯಿಯಾದರೂ ದೊರೆಯಬೇಕೆಂದು ಹಂಬಲಿಸಿದರು. ಬಂಗಾಡಿಯ ಮಟ್ಟಿಗೆ ಆ ಬೆಲೆ ತುಂಬಾ ಹೆಚ್ಚು. ಹಾಗೆಂದು ಎಳಚಿತ್ತಾಯರ ಮಧ್ಯಸ್ಥಿಕೆಯಿಂದ ಎರಡು ಸಾವಿರಕ್ಕೆ ಭೂಮಿ ಕೃಷ್ಣನ ಹೆಸರಿಗೆ ದೊರೆಯಿತು. ಸೀತಾರಾಮ ಇದ್ದಾಗಲೇ ಅದರ ಮುಂದಿನ ಪಾಯಗಳನ್ನು ಕುರಿತು ಚರ್ಚಿಸಿದರು. ಮಳೆಗಾಲ ಮುಗಿಯುವುದರೊಳಗೆ ಕೃಷ್ಣ ಅಲ್ಲಿಗೆ ಹೋಗಿ ವಾಸಮಾಡಬೇಕೆಂಬ ನಿರ್ಧಾರವೂ ಆಯಿತು.

ಗೆಳೆಯನಿಗಾಗಿ ಸೀತಾರಾಮ ಮಂಗಳೂರಿಗೆ ಹೋಗಿ, ಎಂಜಿನ್ ಮೊದಲಾದುವುಗಳನ್ನು ತರಿಸಿಹಾಕಿದನು. ಅರಿಗರ ಮನೆಯ ತನಕ ಗಾಡಿಯಲ್ಲಿ ಬಂದ ಯಂತ್ರ ಸಲಕರಣೆಗಳನ್ನು ಮೂಡೋಡಿಗೆ ಹೊರಿಸಿ, ಸಾಗಿಸಿ, ಅಲ್ಲಿ ಸ್ಥಾಪಿಸುವ ಕೆಲಸ ಭರದಿಂದ ನಡೆಯಿತು. ಮಾಡು ಕಟ್ಟಿದ್ದಾಯಿತು. ನದಿ ದಂಡೆಯಲ್ಲಿ. ಮಾಡಿನ ಕೆಳಗೆ, ಎಂಜಿನಿಗೆ ಅಸ್ತಿವಾರ ಹಾಕಿದ್ದಾಯಿತು. ಪಂಪನ್ನು ಜೋಡಿಸಿ ನಳಿಗೆಗಳಿಂದ ಹೊಳೆಯ ನೀರನ್ನೆತ್ತಿ ಮೇಲಕ್ಕೆ ಹಾಯಿಸುವ ಏರ್ಪಾಡಾಯಿತು. ಎಳಚಿತ್ತಾಯರು ಅಂಥೆಲ್ಲಾ ಚಮತ್ಕಾರ ಕಂಡದ್ದು ಅದೇ ಮೊದಲು. ಹಳ್ಳಿಯವರಾದ ಅವರಿಗೆ ವಿಸ್ಮಯವೇ ವಿಸ್ಮಯ ! ಹೊಳೆಯ ನೀರಿಗೆ ಬರಗಾಲವಿಲ್ಲ. ಬೆವರನ್ನು ಇಷ್ಟಿಷ್ಟೂ ಹನಿಯಿಸದೆ ಆನೆ ಸೊಂಡಿಲಿನಿಂದ ನೀರು ಕುಡಿದು ಮೈಮೇಲೆ ಸುರಿದುಕೊಳ್ಳುವ ಹಾಗೆ, ನೀರಾವರಿಯ ಈ ವಿಧಾನವು ಅವರಲ್ಲಿ ಆಸೆಯನ್ನು ಹುಟ್ಟಿಸಿತು.

ಶಂಕರ ಅಲ್ಲಿ ನಿಂತು ಕೆಲಸಮಾಡುತ್ತಿರುವಾಗ ನಿತ್ಯವೂ ಬಂದು ನೋಡುತ್ತಿದ್ದರು. ನೀರೆತ್ತುವ ಕೆಲಸ ತೊಡಗಿದ ಮೇಲೆ, ಅಲ್ಲಿಂದ ಕದಲುವುದಕ್ಕೇ ಅವರಿಗೆ ಇಷ್ಟವಿರುತ್ತಿರಲಿಲ್ಲ. ಅಲ್ಲಿ ಜೋಡಿಸಿದ ಕಬ್ಬಿಣದ ನಳಿಗೆಗಳಲ್ಲದೆ, ರಾಶಿಹಾಕಿದ ರಬ್ಬರ್ ನಳಿಗೆಗಳನ್ನು ನೋಡಿದ ಅವರು "ಇಷ್ಟೆಲ್ಲಾ ಆನೆ ಸೊಂಡಿಲು ಏತಕ್ಕೆ ?" ಎಂದು ಕುತೂಹಲದಿಂದ ಪ್ರಶ್ನಿಸಿದರು.

ಶಂಕರ ನಕ್ಕ.

"ಏಕೆ ನಗಾಡಿದಿರಿ?" ಎಂದು ಕೇಳಿದರು ಎಳಚಿತ್ತಾಯರು.

"ನೀವು ಆ ದಿನ, ಅಂದರೆ ನಾನು ಅರ್ಧ ಮರ್ಧ ಬುದ್ಧಿ ಕೆಟ್ಟವನಂತಿರುವಾಗ ಆಡಿದ ಮಾತುಗಳು ನೆನಪಿದೆಯೇ?" ಎಂದು ಕೇಳಿದ.

"ಏನಪ್ಪಾ. ನಾನು ಅಂದದ್ದು" ಎಂದು ಗಾಬರಿಯಿಂದಲೇ ನುಡಿದರು.

"ಮತ್ತೇನಿಲ್ಲ—ಪಂಪುಗಿಂಪು ಹಾಕಿದರೆ ನಮ್ಮ ಗದ್ದೆಗೂ ಇಷ್ಟು ನೀರು ಬಂದೀತೇ-ಎಂದು ಕೇಳಿದ್ದಿರಿ. ಊರವರು ನೀವು. ನಾನು ಮೊದಲು ಬಂದದ್ದೇ ನಿಮ್ಮ ಮನೆಗೆ. ಈಗ ನಿಮ್ಮ ನೆನಪನ್ನು ಮರೆಯುವುದಕ್ಕೆ ಬರುತ್ತದೆಯೇ? ಹೊಳೆಯ ಆಚೆಯ ದಂಡೆ ನಿಮ್ಮದು; ಈಚೆಯ ದಂಡೆ ನನ್ನದು. ಹಾಗೆಂದು ನಿಮಗೆ ನೀರುಕೊಡಲು ಎಂಜಿನನ್ನು ಕಿತ್ತು ಆಚೆಗೆ ಹಾಕುವುದು ಸಾಧ್ಯವಲ್ಲದ ಮಾತು. ಅದಕ್ಕಾಗಿ ಮುಂಬಯಿಯಲ್ಲಿ, ಇವನ್ನೆಲ್ಲಾ ಕೊಳ್ಳುವಾಗಲೇ ಈ ಆನೆಯ ಸೊಂಡಿಲನ್ನೂ ಕೊಂಡೆ. ಈ ನಳಿಗೆಯ ಮೂಲಕ ನದಿ ದಾಟಿಸಿ ನಿಮಗೂ ನೀರನ್ನು ಕೊಡುವುದಕ್ಕೆ ಬಂದೀತೆಂದು".

ಎಳಚಿತ್ತಾಯರಿಗೆ ನಂಬಲಾರದಷ್ಟು ಆಶ್ಚರ್ಯವಾಯಿತು.

"ನನಗಾಗಿ ತಂದಿರಾ, ನಿಜವೇ?" ಎಂದರು.

"ಮತ್ತೆ ನನಗೇಕೆ? ಇಲ್ಲಿನ ಗದ್ದೆಗಳಿಗೆ ಈ ಕಬ್ಬಿಣದ ನಳಿಗೆ ಸಾಕು. ಇಷ್ಟೆಲ್ಲಾ ಉದ್ದದ ರಬ್ಬರು ನಳಿಗೆಯು ಬೇಕಾಗಿಲ್ಲ. ಅಲ್ಲದೆ ನೋಡಿ ನೀವು ಆಗಾಗ ಚೇಷ್ಟೆಮಾಡುತ್ತೀರಿ- ಈಗಿನ ಕಾಲದ ಹುಡುಗರಿಗೆ ದೇವರ ತಲೆಯ ಮೇಲೆ ನೀರು ಹಾಕಿಯೇ ಗೊತ್ತಿಲ್ಲವೆಂದು. ಹೋಗಲಿ—ದೇವರ ತಲೆಯ ಮೇಲೆ ನೀರು ಹಾಕುವ ನಿಮ್ಮಂಥ ಬ್ರಾಹ್ಮಣರ ತಲೆಯ ಮೇಲಾದರೂ ಇಷ್ಟು ನೀರು ಹಾಕೋಣ—ಎಂಬ ಏರ್ಪಾಟು ಮಾಡಿದ್ದೇನೆ. ಅದಾದರೂ ಒಂದು ಪುಣ್ಯದ ಕೆಲಸವಲ್ಲವೇ?"

ಅವರು ಗೊಳ್ಳೆಂದು ನಕ್ಕರು. ಅವರಿಗೆ ಎರಡೆರಡು ಕಾರಣಗಳಿಂದ ಆನಂದವಾಯಿತು. ತಮಗಾಗಿ ಅಷ್ಟೊಂದು ಕೆಲಸ ಮಾಡಿದನೆಂದೊಂದು ಆನಂದ. ಪರಿಹಾಸ್ಯಶೀಲನಲ್ಲದ ಶಂಕರ, ಚಿಂತೆಯ ಸೋಂಕನ್ನು ಮರೆತು ನಕಲಿ ಮಾಡಿದ್ದೊಂದು ಆನಂದ. ಆದರೆ ಮರುಕ್ಷಣಕ್ಕೆ ತುಸು ವ್ಯಾಕುಲವೂ ಆಯಿತು. "ಏನು ಮಹಾರಾಯರೇ, ಎಷ್ಟು ಹಣ ಕೊಟ್ಟಿರಿ? ತುಂಬಾ ಕ್ರಯವಿದ್ದೀತು ಇದಕ್ಕೆ. ನನಗೋಸ್ಕರ ರೂಪಾಯಿ ದಂಡ ಮಾಡಿದಿರಲ್ಲ" ಎಂದು ತುಸು ಅನುಮಾನಿಸಿ ಮಾತನಾಡಿದರು. ಶಂಕರ ಮತ್ತೊಮ್ಮೆ ಹೇಳಿದ "ಹಣ ಕೊಟ್ಟೇ ತಂದೆ. ಆದರೆ ಆ ಸಂಗತಿಯಲ್ಲಿ ಬೇಸರಿಸಬೇಕಾದ್ದೇನಿದೆ? ನಾನು ಬಂದಂದಿನಿಂದ ಎಷ್ಟು ಬಗೆಯಿಂದ ನೀವು ನನಗೆ ಸಹಾಯ ಮಾಡಿಲ್ಲ. ನಿಮ್ಮ ಭೂಮಿ, ಇಲ್ಲಿನ ಹಾಗೆಯೇ ಹಸುರಾದುದನ್ನು ಕಂಡರೆ, ಅದೇನೆ ನನಗೆ ಪ್ರತಿಫಲ. ಸುಗ್ಗಿ, ಕೊಳಕೆಗಳಿಂದ ನಿಮಗೆ ಒಂದು ನೂರು ರೂಪಾಯಿ ಹೆಚ್ಚಿನ ಪ್ರಯೋಜನವಾದರೆ ನನಗೆ ಆನಂದ. ನನಗೆ ಇದರಿಂದ ಹತ್ತೆಂಟು ರೂಪಾಯಿಗಳ ಎಷ್ಟೊ ಖರ್ಚಾಗಬಹುದು—ಅಷ್ಟೇ ತಾನೆ!"

"ಎಷ್ಟೊಯ ಖರ್ಚನ್ನು ನಾನು ಕೊಡುತ್ತೇನಪ್ಪಾ" ಎಂದರು ಅವರು. ಸೀತಾರಾಮ ಚೇಷ್ಟೆಗೆ "ಹಾಗಿದ್ದರೆ ಎಂಜಿನ್, ಪಂಪು ಮೊದಲಾದುವುಗಳ ಖರ್ಚನ್ನೂ ಕೊಟ್ಟುಬಿಡಿ. ಏನು ಮಹಾ?" ಎಂದು ನಗುವಿನಲ್ಲೆ ಆ ವಿಚಾರದ ಸಂಭಾಷಣೆ ಮುಗಿಸಿದರು.

ಸೀತಾರಾಮ ಗೆಳೆಯನ ಸಲುವಾಗಿ ಹೆಚ್ಚು ಕಡಿಮೆ ಒಂದು ತಿಂಗಳ ಕಾಲ ರಜೆಯನ್ನು ಮುಂದುವರಿಸಿ ಕುಳಿತುಕೊಂಡ. ಅವನ ಆಸೆ, ಬಯಕೆ ಕಾರ್ಯಗಳಿಗೆಲ್ಲ ನೆರವಾದ. ಸುಂದರರಾಯರ ಸಲುವಾಗಿ ಚಿಕ್ಕದೊಂದು ಮನೆಯ ನಕಾಸೆಯನ್ನು ತಯಾರಿಸಿದರು. ಅದಕ್ಕೆ ಬೇಕಾದ ಮರಮುಟ್ಟುಗಳನ್ನು ಒದಗಿಸಿದರು. ಯಾಂತ್ರಿಕ ರಾಟೆಯೊಂದನ್ನು ನಿರ್ಮಾಣ ಮಾಡಬಹುದೆಂಬ ನಿರ್ಧಾರಕ್ಕೆ ಬಂದು, ಅದರ ಮಾದರಿಯನ್ನು ನಿರ್ಮಿಸಿದರು. ಅದಲ್ಲದೆ ಅಲ್ಪ ಯಂತ್ರಬಲದಿಂದ ನಡೆಸಬಹುದಾದ ಇನ್ನೂ ಕೆಲವು ಸಾಧನಗಳ ಆಕೃತಿಗಳ ಕಲ್ಪನೆ ಮಾಡಿದರು. ಆ ಬಳಿಕವೇ ಸೀತಾರಾಮ ತನ್ನ ಉದ್ಯೋಗವನ್ನು ಸೇರಿಕೊಳ್ಳಲು ಹೊರಟುಹೋದುದು, ತಮ್ಮನ

ಭೂಮಿಯ ಅಭಿವೃದ್ಧಿಗೆ ಬೇಕಾದ ಹಣದ ಸಹಾಯದ ಭರವಸೆಯನ್ನು ಕೊಟ್ಟು ಆತ ಹೊರಟು ಹೋದ.

ಶಂಕರನಿಗೆ ಈಗ ಬಿಡುವೆಂಬುದು ಇಲ್ಲ. ತಂದೆಯ ಸಲುವಾಗಿ ಚಿಕ್ಕ ಮನೆಯೊಂದು ಮಳೆಬೀಳುವ, ಮೊದಲು ಪೂರ್ಣವಾಗಬೇಕು. ಕಲ್ಲು, ಮರ, ಹಂಚು ಇತರ ಸಾಮಗ್ರಿಗಳ ಸಂಗ್ರಹ, ಎಲ್ಲವೂ ಬೇಗನೆ ಆಗಿ ಕಟ್ಟಡವಾಗಬೇಕು. ಎಂಜಿನ್ ಹೂಡಿಯಾದುದರಿಂದ ಹೊಳೆನೀರಿನ ಉಪಯೋಗದಿಂದ ಕೃಷಿಯನ್ನು ತೊಡಗಬೇಕು. ಎರಡನೆಯ ಬೆಳೆ ಮೂರನೆಯ ಬೆಳೆಗಳೆಂದರೆ–ನೀರಿನಿಂದಲೇ ಆಗಲಾರದಷ್ಟೆ, ಹೊಲಗದ್ದೆಗಳಿಗೆ ಮತ್ತಷ್ಟು ಸಾರ ಒದಗಿಸಬೇಕು. ಅವುಗಳನ್ನೆಲ್ಲ ಮಾಡಿಸುತ್ತ ಆತನ ಸಮಯ ಸರಿಯುತ್ತದೆ. ಮನೆಯ ಕೆಲಸಕ್ಕಾಗಿ—ಬಡಗಿ, ಮೇಸ್ತ್ರಿಗಳೊಡನೆ ಶ್ರಮಿಸುವಾಗಲೆಲ್ಲ ತಂದೆಯ ನಿರೀಕ್ಷೆ ಮಾಡುತ್ತಾನೆ. ಆ ನಿರೀಕ್ಷೆಯ ಜತೆಗೆ ಬರಿಯ ಮೂರು ದಿನದ ಕಾಲಕ್ಕಾದರೂ, ತನ್ನ ಮೇಲಿನ ವಿಶ್ವಾಸಕ್ಕಾದರೂ, ಅಣ್ಣನಿಗೆ ಅಂಜಿ ಬಂದ ಶ್ರೀಮತಿಯ ನೆನಪು ಹುಟ್ಟುತ್ತದೆ. ಆಕೆ ಬದುಕಿದ್ದರೆ ತಾನೆಷ್ಟು ಸುಖಿಯಾಗಿರುತ್ತಿದ್ದೆನೋ–ಎಂಬ ಕಲ್ಪನೆ ಮೂಡುತ್ತದೆ. ನಿಟ್ಟುಸಿರು ಬರುತ್ತದೆ. ನಷ್ಟವಾದ ಬದುಕಿಗಾಗಿ ಹಂಬಲಿಸಿ ಪ್ರಯೋಜನವಿಲ್ಲವೆಂದು ತನಗೆ ತಾನೇ ಸಮಾಧಾನ ಹೇಳುತ್ತಾನೆ. ಅಂಥ ಒಂದು ದಿನ ಅಂಚೆಯವ ಬಂದು, ಕೈಮೇಲೊಂದು ಲಕೋಟೆ ಇರಿಸಿದ. ಅದರ ಮೇಲೆ ನವದೇಹಲಿಯ ಮುದ್ರೆಯೊತ್ತಿತ್ತು. ಪರಿಚಿತವಾದ ಬರಹ, ತಂದೆಯದಲ್ಲ; ಇನ್ನಾರದ್ದೆಂದು ಹೊಳೆಯಲಿಲ್ಲ. ಒಡೆದು ನೋಡಿದರೆ, ವರಲಕ್ಷ್ಮಿಯಿಂದ ಬಂದಿತ್ತು ಕಾಗದ. ಈಗ ಏಕೆ ಪತ್ರ ಬರೆದಿರಬಹುದು ಎಂಬ ಕುತೂಹಲದಿಂದ ತೆರೆದು ಓದಿದ. "ಶಂಕರ, 'ಪ್ರಿಯ ಶಂಕರ' ಎಂದು ಬರೆಯುವ ಸಾಹಸ, ಅದೃಷ್ಟ-ಎರಡೂ ನನಗೆ ಇಲ್ಲ. ನನ್ನ ಹಿಂದಿನ ಹುಚ್ಚು ಮನಸ್ಸಿಗಾಗಿ, ಮೂರ್ಖ ವಿಚಾರ ಸರಣಿಗಾಗಿ ವ್ಯಥೆಗೊಳ್ಳುತ್ತೇನೆ. ಆದರೆ ಆ ವ್ಯಥೆಯಿಂದ ಪ್ರಯೋಜನವಿಲ್ಲವೆಂದು ಬಲ್ಲೆ. ಕೆಟ್ಟ ಮೇಲೆ ಬುದ್ಧಿ ಬಂದಿತು, ಎನ್ನುವ ಪಾಡು ನನ್ನದಾಗಿದೆ. ಹೊರಗಿನ ಸೋಗು, ಬೆಡಗು, ಆಡಂಬರಗಳನ್ನು ಕಂಡು ಗೆಳೆತನಕ್ಕಿಂತ ಅವೇ ಹಿರಿದೆಂದು ತಿಳಿದು ನಿನ್ನನ್ನು ನಿರಾಶೆಗೊಳಿಸಿದವಳು ನಾನು. ನನಗೂ ಆ ದಿನ ನಿರಾಶೆಯಾಗಿತ್ತು.

ಆ ಬಳಿಕ ಇಷ್ಟೆಲ್ಲ ವರ್ಷಗಳ ತನಕ ನಾನು ಹೇಗೆ ದಿನ ಕಳೆದೆನೋ ನನಗೇ ತಿಳಿಯದಾಗಿದೆ. ಈ ದೀರ್ಘ ಕಾಲದ ಬಳಿಕ ನಿನ್ನನ್ನು ಭೇಟಿಯಾದಾಗ—ನಿನ್ನ ರೀತಿ ನಾನು ಕೇಳಿದ ನಾಲ್ಕೇ ನಾಲ್ಕು ಮಾತುಗಳು—ಇವೆಲ್ಲವೂ ಸೇರಿ ನನ್ನ ಮೂರ್ಖತೆಯನ್ನು ಗಳಿಗೆ ಗಳಿಗೆಗೂ ನೆನಪರಿಕೆ ಮಾಡಿಕೊಡುತ್ತಿವೆ.

" ನಾನು ನಿನ್ನನ್ನು ಬೀಳ್ಕೊಡುವಾಗ ಹೇಳಿದ ಮಾತುಗಳು ನೆನಪಿದೆಯೇ? ನಿಮ್ಮೂರಿಗೆ ಬಂದಬಳಿಕ, ಮಂಜುನಾಥನ ಚರ್ಯೆಯನ್ನು ನೋಡಿದ ಬಳಿಕ, ಮನಸ್ಸು ಬೇಸರಿಸಿ ನುಡಿದ ಮಾತುಗಳವು. ದಾರಿ ತಪ್ಪಿದ ನಾನು ಕೊನೆಗಾದರೂ ಕಣ್ಣು ತೆರೆಯುವಂತಾಯಿತು. ಮೋಹದ ಬಲೆಯಿಂದ ತಪ್ಪಿಸಿಕೊಳ್ಳುವಂತಾಯಿತು. ತೀರ ಮೊದಲಾಗಲೀ ಆಮೇಲಾಗಲೀ ದೇಹಲಿಯಲ್ಲಿ ನಾನು ಕಂಡ ಮಂಜುನಾಥನಿಗೂ ನಿಮ್ಮೂರಲ್ಲಿ ಕಾಣಸಿಕ್ಕಿದ ಮಂಜುನಾಥನಿಗೂ ಎಷ್ಟು ತಾರತಮ್ಯ ! ಅವನಿಗೂ ನನಗೂ ಇರುವ ಅಂತರ ಇನ್ನಷ್ಟು ಸ್ಪಷ್ಟವಾಗುತ್ತದೆ. ಬರುವ ಮುನ್ನ, ನಿನ್ನ ವಿಚಾರದಲ್ಲಿ ಮಾತು ಬಂದಾಗ, ನಿನ್ನನ್ನು ತೋರಿಸುವೆ ಎಂದಿದ್ದ ಅವನಿಗೆ ನಾನು ನೋಡಹೋದುದು ಇಷ್ಟುಷ್ಟೂ ಸಹನೆಯಾಗಲಿಲ್ಲ. ನೋಡಿ ಬಂದ ಮೇಲೆ—ಎಲ್ಲಿಲ್ಲದ ಅಸೂಯೆ ಅವನ ಹೃದಯವನ್ನು ತುಂಬಿಕೊಂಡಿತು. ಅಲ್ಲದೆ ಆತ ನಿನ್ನ ವಿಚಾರದಲ್ಲಿ ಆಡಿದ ಮಾತುಗಳೂ ನನ್ನನ್ನು ನೋವಿಗೆ ಗುರಿಮಾಡಿದವು. ಹೆತ್ತ ತಾಯನ್ನು ಅವನು ಕಂಡ ಬಗೆ ನನ್ನಲ್ಲಿ ಜಿಗುಪ್ಸೆಯನ್ನು ಹುಟ್ಟಿಸಿತು. ಅದನ್ನೆಲ್ಲಾ ನಿನ್ನಲ್ಲಿ ತೋಡಿಕೊಳ್ಳುವ ಸಲುವಾಗಿಯೆ ನಾನು ಎರಡನೆಯ ಬಾರಿಗೆ ಬಂದದ್ದು. ಆದರೆ ಹೇಳುವುದಕ್ಕೆ ಬಾಯಿ ಬರಲಿಲ್ಲ. ನಿನಗೂ ಅವನಿಗೂ ಎಷ್ಟು ಅಂತರ ! ನಿನ್ನನ್ನು ನೋಡುವ ಭಾಗ್ಯವಾದರೂ ಸಿಕ್ಕಿತು. ಅಂತೂ ಇಂಥ ಮೂರ್ಖತನಕ್ಕೆ ಇನ್ನೊಮ್ಮೆ ಹೋಗಲಾರೆ. ಆತ ಖಂಡಿತವಾಗಿಯೂ ನನ್ನ ಬಳಿಗೆ ಬರಲಾರ.

"ನೀನು ಕ್ಷೇಮವಷ್ಟೆ. ನಿನ್ನನ್ನು ಮದುವೆಯಾಗಲಿರುವ ಶ್ರೀಮತಿಯು ತುಂಬಾ ಪುಣ್ಯವಂತಳೆಂದು ತಿಳಿಯುತ್ತೇನೆ. ಆಕೆಯ ನಡೆನುಡಿಗಳು ಎಷ್ಟು ಶಾಂತ. ನಿನ್ನಂಥವನ ಜೀವನಕ್ಕೆ ತಕ್ಕ ನೆರವು, ಸ್ನೇಹ, ಪ್ರೀತಿಗಳನ್ನು ತೋರಬಲ್ಲ ಶಕ್ತಿ ಆಕೆಯಲ್ಲಿದೆ. ನೀನು ಅವಳಿಗೆ ಆ ದಿನ

ಲಿಕ ನೆರವುಕೊಟ್ಟುದು ತುಂಬ ಉಚಿತ....ನಾನು ಹೇಗೂ ಇರಲಿ, ಹಳೆಯ ಸ್ನೇಹಿತಳೆಂಬ ಅಭಿಮಾನದಿಂದ, ಈ ಪತ್ರಕ್ಕೆ ಉತ್ತರ ಬರೆಯುವಿ ಎಂದು ನಂಬಿದ್ದೇನೆ."

ಶಂಕರ ತಬ್ಬಿಬ್ಬಾದ. ವರಲಕ್ಷ್ಮಿಯಿಂದ ಅಂಥದೊಂದು ಪತ್ರ ಬಂದೀತೆಂದು ಆತ ಎಣಿಸಿರಲಿಲ್ಲ. ಮಂಜುನಾಥನ ಸ್ನೇಹವನ್ನು ಅವಳು ಕಳೆದುಕೊಂಡುದಕ್ಕೆ, ಅವನಿಗೆ ಏನೂ ದುಃಖವಾಗಲಿಲ್ಲ. ಆ ಸ್ನೇಹವು ವಿವಾಹದಲ್ಲಿ ಕೊನೆಗೊಂಡಿದ್ದರೆ, ವರಲಕ್ಷ್ಮಿಯ ಭವಿಷ್ಯ ಕಗ್ಗತ್ತಲೆಯಿಂದ ತುಂಬುತ್ತಿತ್ತು, ಇಲ್ಲದೆಹೋದರೆ ಅದೊಂದು ವಿರಸ ದಾಂಪತ್ಯವಾಗುತ್ತಿತ್ತು—ಎಂದು ಯೋಚಿಸುತ್ತಾನೆ. ಅವಳ ಸಲುವಾಗಿ, ಅವಳನ್ನು ಕಂಡೊಡನೆಯೇ ಮನದಲ್ಲಿ ಮರುಗಿದ್ದಾನೆ. ಅವಳು ತನ್ನವಳಾಗಲಿಲ್ಲವೆಂಬ ವ್ಯಥೆಯಿಂದಲ್ಲ; ಹಾಳಾಗುತ್ತದೆಯಲ್ಲ ಒಂದು ಜೀವನ—ಎಂಬ ದುಃಖದಿಂದ. ಈಗ ಆ ನಂಟುತನ ಮುರಿದುದಕ್ಕಾಗಿ ಅವನಿಗೆ ಸಂತೋಷವೇ ಆಯಿತು. ಪತ್ರದ ಉತ್ತರಾರ್ಧದಲ್ಲಿ ಶ್ರೀಮತಿಯನ್ನು ಕುರಿತು ಬರೆದ ಆಕೆಯ ಮಾತುಗಳು, ದುಃಖ, ಸಂಕೋಚವೆರಡನ್ನೂ ಉಂಟುಮಾಡಿದುವು. ಆಕೆ ಬದುಕಿದ್ದರೆ ವರಲಕ್ಷ್ಮಿಯ ಭವಿಷ್ಯವಾಣಿ ಸತ್ಯವಾಗುತ್ತಿತ್ತೆಂದು ಊಹಿಸಬಲ್ಲ, ಅವಳ ವಿಚಾರದಲ್ಲಿ ಈಕೆಗಾದರೂ ಆದರವಿತ್ತೆಂದು ಕೇಳಿ ಸಂತೋಷವಾಯಿತು. ಆದರೆ ಮರುಗಳಿಗೆಗೆ—ಕೈತಪ್ಪಿದ ಬದುಕಿಗಾಗಿ ದುಃಖವಾಯಿತು. ಅದನ್ನು ಮರೆಯಬೇಕೆಂದು ಪ್ರಯತ್ನಿಸುವಾಗ, ಯಾರ್ಯಾರೋ ನೆನಪಿಗೆ ತಂದುಕೊಡುತ್ತಿದ್ದಾರಲ್ಲ—ಎಂದೂ ತೋರಿತು.

ಪತ್ರದ ಕೊನೆಯ ವಾಕ್ಯ ಇನ್ನಷ್ಟು ಕರುಣಾಜನಕವಾಗಿತ್ತು. 'ನನ್ನ ಹಳೆಯ ಸ್ನೇಹವನ್ನು ನೆನೆದು ಉತ್ತರಹಾಕುತ್ತೀಯ?' ಎಂದು ಕೇಳಿದ್ದಾಳೆ. ಅವಳಿಗೇನೆಂದು ಬರೆಯಬೇಕು? ಬರೆಯಲೇ, ಬೇಡವೆ? ಬರಯದೆ ಹೋದರೆ ನ್ಯಾಯವೇ—ಎಂಬ ಅನುಮಾನಗಳು ಮೂಡುತ್ತವೆ. ಆದರೆ ತನಗಿಂತ ತುಂಬಾ ನಿರಾಶೆಯಿಂದ ನೊಂದಿರಬೇಕಾದ ಅವಳನ್ನು ಸಮಾಧಾನಪಡಿಸುವುದು—ತನ್ನ ಕೆಲಸವೆಂದು ಬರೆಯುವುದಕ್ಕೆ ಕುಳಿತ. ಆದರೆ—'ಶ್ರೀಮತಿಯ ಭಾಗ್ಯ ಬರಿಯ ಕನಸಿನ ಭಾಗ್ಯ'ವಾಯಿತೆಂದು ಲೇಖನಿ ಓಡಿಸುವುದಾದರೂ ಹೇಗೆ? ಆ ಮಾತನ್ನು ಬರೆಯುವುದಕ್ಕೂ

ಇಲ್ಲ, ಬರೆಯದೆ ಇರುವುದಕ್ಕೂ ಇಲ್ಲ. ಶ್ರೀಮತಿಯೆಂದು ಬರೆದು, ಹೊಡೆದು, ಬರೆದು, ಹೊಡೆದು, "ಆ ಪುಣ್ಯ ನನಗಿಲ್ಲದೆ ಹೋಗಿದೆ. ಆವಳು ದೇವರ ಮನೆಗೆ ಹೋಗಿದ್ದಾಳೆ" ಎಂದು ಪತ್ರವನ್ನು ಮುಗಿಸಿದ. ಇನ್ನೊಮ್ಮೆ ಅವನ ಹೃದಯ ಕಂಪಿಸಿತು. ಮುಖ ಬಿಸಿಗೊಂಡು ಕಂಬನಿ ಸುರಿಸಬೇಕಾಯಿತು.

# ಅಧ್ಯಾಯ ೧೬

ಹೊಸ ಕೆಲಸ, ಹೊಸ ಹುಚ್ಚುಗಳನ್ನು ಕಟ್ಟಿಕೊಂಡು ದುಡಿಯುತ್ತಿರುವ ಶಂಕರನಿಗೆ ಸ್ವವಿಚಾರಕ್ಕೂ ಸ್ವಸುಖಚಿಂತನೆಗೂ ಅವಕಾಶವೆಲ್ಲಿಯದು ? ತೀರ ಅಪೂರ್ವಕ್ಕೊಮ್ಮೊಮ್ಮೆ-ಮಲಗಿಕೊಂಡಿದ್ದಾಗ ತನ್ನ ಕುರಿತಾದ ಚಿಂತೆ ಬರುವುದಿಲ್ಲವೆಂದಲ್ಲ, ಬರುತ್ತದೆ. ಆದರೆ ಮರುಕ್ಷಣಕ್ಕೆ ಅದನ್ನು ಮರೆತುಬಿಡುತ್ತಾನೆ. ಬಹುವಾಗಿ ತನ್ನ ಮತ್ತು ಕೃಷ್ಣನ ಕೃಷಿವಲಯಗಳ ಕನಸಿನಲ್ಲಿ ಲೀನನಾಗಿರುವುದೇ ಹೆಚ್ಚು. ಎರಡು ಕಡೆಗಳಲ್ಲಿಯೂ ಮಾಡಬಹುದಾದ ಕೆಲಸ ತುಂಬಾ ಇದೆ; ಇರುವ ವಿರಾಮ ಕಡಿಮೆ. ಪ್ರಿಯವಾದ ಉದ್ಯೋಗವಾದುದರಿಂದ ಕೆಲಸದಲ್ಲಿ ಆತ ಮೈಮರೆಯುವುದೇ ಹೆಚ್ಚು. ಶ್ರೀಮತಿಯು ಅಗಲಿ ಇಂದಿಗೆ ಮೂರುವರ್ಷಗಳು ಸಂದಿವೆ ಮನಸ್ಸಿನ ನೋವನ್ನೆಲ್ಲಾ ಕೆಲಸದಲ್ಲಿಯೇ ತಿಕ್ಕಿ, ತೀಡಿ, ಚಿಂತೆಗೆ ಬಿಡುವೇ ಇಲ್ಲದಂತೆ ಮಾಡಿದ್ದಾನೆ. ಅದರ ಪರಿಣಾಮವೆಂದರೆ ಐದು ವರ್ಷಗಳಲ್ಲಿ ಪೂರ್ಣವಾಗಬೇಕಾಗಿದ್ದ ಮೂಡೋಡಿಯ ಕೃಷಿ ವಿಸ್ತಾರ-ಮೂರು ವರ್ಷಗಳೊಳಗೆ ಮುಗಿದುದು. ತೆಂಗಿನ ತೋಟ ಪೂರ್ಣವಾಗಿದೆ. ಅದರ ಪ್ರತಿಯೊಂದು ಸಂಸ್ತರದಲ್ಲೂ ನಟ್ಟ ಗಿಡಗಳು ತಲೆಯೆತ್ತಿ ನಿಂತು, ಆ ಬೆಟ್ಟದ ಒಳಬೆಯಲ್ಲಿ ಹಸುರು ಬಣ್ಣದ ಸೋಪಾನ ರಾಜಿಯೊಂದನ್ನು ನಿರ್ಮಿಸಿದಂತೆ ಕಾಣುತ್ತದೆ. ಕೆಲವೊಂದು ಸಂವತ್ಸರಗಳಲ್ಲಿ ನಟ್ಟ ಗಿಡಗಳಲ್ಲಿ ಫಲ ಬಂದಿವೆ. ಉಳಿದುವು ಬಾರದೆ ಹೋದರೂ ನಡುನಡುವೆ ನಟ್ಟ ಬಾಳೆಯ ಗಿಡಗಳಿಂದಾಗಿ ವೆಚ್ಚ ಹುಟ್ಟುತ್ತಿದೆ.

ಈ ಎಲ್ಲ ವರ್ಷಗಳಲ್ಲಿ ಒಮ್ಮೆ ಭೂಮಿಯ ಯಾವತ್ತು ಮಗ್ಗುಲನ್ನು ನಟ್ಟಗಿಡಗಳ ಹಸುರಿನಿಂದ ತೊಯ್ಯಿಸಿದನಾದರೂ, ಕಾಲಕ್ರಮೇಣ ನೆಲವೂ ವಿಶ್ರಾಂತಿಯನ್ನು ಬಯಸುತ್ತದೆ—ಎಂದು ತಿಳಿದುಕೊಂಡಿದ್ದಾನೆ. ನೀರಿದೆ; ನೀರನ್ನೆತ್ತುವ ಸಾಧನಸಲಕರಣೆಗಳಿವೆ ಎಂದು ಜಮೀನಿಗೆ ವಿಶ್ರಾಂತಿಯನ್ನು ಕೊಡದೆಹೋದರೆ ಬೆಳೆ ಹುಲುಸಾಗಲಾರದು ಎಂದು ಕಲಿತಿದ್ದಾನೆ. ಒಂದೇ ಬೆಳೆಯನ್ನು ಬೆಳೆಸಿ, ನೆಲ ಬರಡಾಗುವುದೆಂದು ಕಂಡುಕೊಂಡಿದ್ದಾನೆ. ಹೀಗೆ ವಿವಿಧ ರೀತಿಗಳಿಂದ ತನ್ನ ಅನುಭವಗಳನ್ನು ಹೆಚ್ಚಿಸಿಕೊಂಡು ಹಸುರಿನ

ಸ್ವರ್ಗವೊಂದನ್ನು ಕಲ್ಪಿಸಿದ್ದಾನೆ.

ಬೇಸಾಯದ ಜತೆಗೆ ದನಕರುಗಳ ಚಿಂತೆಯೂ ತೊಡಗಿತು. ಜಾನುವಾರುಗಳಿಲ್ಲದ ಕೃಷಿಯಿಲ್ಲ. ದನ ಬರಡಾದರೆ, ಬಡಕಲಾದರೆ ನೆಲವೂ ಬರಡು ; ಜನವೂ ಬಡಕಲು—ಎಂಬುದನ್ನು ಅರಿತಿದ್ದಾನೆ. ಈ ಎರಡೆರಡು ಕೆಲಸಗಳು ಹೆಚ್ಚಾಗಿ ಕಂಡರೂ, ಪಶುಪಾಲನೆಯನ್ನು ಬಿಟ್ಟು ಕೃಷಿಯಿಲ್ಲ ಎಂದರಿತಿದ್ದಾನೆ. ಆದ್ದರಿಂದ ತನ್ನ ದನಕರುಗಳಿಗಾಗಿ–ಮೇವು ಬೆಳೆಯಲು ಭೂಮಿ ಮೊಸಲಿಡುತ್ತಾನೆ. ಸಾರಪುಷ್ಟವಾಗಿ ಬೆಳೆದಂಥ ಅವನ ಹುಲ್ಲಿನ ಬಯಲು, ಕಬ್ಬಿನ ತೋಟದಂತೆ ಕಂಗೊಳಿಸುತ್ತಿದೆ. ಕಾಡಿನ ಮೃಗಗಳಿಗೆ ಅದನ್ನು ಕಂಡು ಅಸೂಯೆಯೂ ಹುಟ್ಟಬೇಕು. ಹುಟ್ಟಿಯೇ ಹುಟ್ಟಿತು. ಗುಡ್ಡಗಳಿಂದ ಕಾಟಕಡವೆಗಳಿಂದು ಹಿಂಡಾಗಿ ಬಂದರೆ, ಬರಿಯ ಮಿಂಚಿನ ಬೇಲಿಯೊಂದೇ ಅವನ್ನು ತಡೆದೀತೆಂಬ ಧೈರ್ಯವಿಲ್ಲ. ಹಾಗಾಗಿ ಸುತ್ತಲಿನ ಕಂದಕವನ್ನುಮತ್ತಷ್ಟು ಆಳವಾಗಿ ತೋಡಿಸಿದ. ಎಷ್ಟು ಕಷ್ಟವಾದರೇನು? ಎಷ್ಟು ಬೇಸರವಾದರೇನು? ಒಂದು ಗಳಿಗೆಯ ಕಾಲ ಮೂಡೋಡಿಯ ಬಯಲು, ತೋಟ, ಗುಡ್ಡಗಳನ್ನು ಸಂಚರಿಸಿ ಬಂದದ್ದಾದರೆ ಎಂತಹ ಮನಸ್ಸೂ ತಣಿಯಬೇಕು. ಒಮ್ಮೊಮ್ಮೆ ಅವನಿಗೂ ಅನಿಸುತ್ತದೆ-ತಾನು ಇಲ್ಲಿಗೆ ಬಂದು ಎಂಟು ವರ್ಷಗಳಾದುವು. ಈ ಅವಧಿಯಲ್ಲಿ ತಾನು ಸಾಧಿಸಿದುದನ್ನು ನೆರೆಕರೆಯ ಜನ ಏಕೆ ಸಾಧಿಸಬಾರದು--ಎಂದು. ತನಗಿಂತ ಹೆಚ್ಚಾಗಿ ಜನಕ್ಕೆ ಕೃಷಿಯ ಅನುಭವವಿದೆ, ನಮ್ಮ ಜನ ತುಸು ಆಲಸ್ಯವನ್ನು ಬಿಟ್ಟರೆ, ಅಂಧಾನುಕರಣೆ ಬಿಟ್ಟರೆ, ಸಾಹಸ ತೋರಿದರೆ ಅದೆಲ್ಲವೂ-ಸಾಧ್ಯ ಎಂದೆನಿಸುತ್ತದೆ.

ಆತನ ಯೋಜನೆಗಳಲ್ಲಿ ಕೈಗೂಡದ್ದೆಂದರೆ ನೀರ್ಕಟ್ಟೆಯದು. ಬದಲು ಎಂಜಿನು ಹಾಕಿದ್ದಾನೆ. ನೀರ್ಕಟ್ಟೆ ಕಟ್ಟುವುದಾಗಿದ್ದರೆ ಮತ್ತೂ ತೊಡಕಿತ್ತು. ಸರಕಾರವನ್ನು ಬೇಡಬೇಕಾಗಿತ್ತು. ನೆರೆಕರೆಯವರ ಅನುಮತಿ ಕೇಳಬೇಕಾಗಿತ್ತು. ಈಗ ಆ ತೊಂದರೆಗಳಿಲ್ಲ. ಅವನು ಎಂಜಿನು ಹಾಕಿದ್ದರಿಂದ ಪರೋಕ್ಷವಾದ ಲಾಭ ಜನಕ್ಕೂ ಉಂಟಾಗಿದೆ. ಅದರ ಸದ್ದಿಗೆ ಕಾಡಿನ ಹುಲಿ ಚಿರತೆಗಳ ಉಪದ್ರ ಕಡಿಮೆಯಾಗಿದೆ. ಅದು ಸ್ಥಾಪನೆಯಾಗುವ ತನಕ, ಆಸುಪಾಸಿನ ದನಕರುಗಳು ವಾರಕ್ಕೊಂದೆಡಂತೆ ಹುಲಿರಾಯನ ಬಾಯಿಗೆ

ಬೀಳುತ್ತಿದ್ದುವು. ಎಳಚಿತ್ತಾಯರಿಗಂತು ತುಂಬ ಆಶ್ಚರ್ಯ, ಆವರೆನ್ನುತ್ತಾರೆ. "ಏನು ಶಂಕರರಾಯರೇ, ಈಗೀಗ ಶಿಕಾರಿಮಾಡುವವರಿಲ್ಲವಾದರೂ ಹುಲಿಗಳ ಉಪದ್ರ ಕಡಿಮೆಯಾದ ಹಾಗೆ ಇದೆಯಲ್ಲ. ನಮ್ಮ ಬಯಲಿನಲ್ಲಿ ಅದರ ತಂಟೆಯೇ ಇಲ್ಲ, ಹಾಗೆಂದು ಆಚೀಚಿನ ಗ್ರಾಮಗಳಲ್ಲಿ ತುಂಬಾ ತೊಂದರೆ ಇದೆ' ಎನ್ನುತ್ತಾರೆ. ಇಬ್ಬರು ಕೂಡಿಯೇ ಕಾರಣವನ್ನು ಯೋಚಿಸಿ ಯೋಚಿಸಿ, "ಎಂಜಿನು ತಂದು ಹಾಕಿದ್ದೇವಲ್ಲ. ಪ್ರಾಯಶಃ ಅದರಿಂದ ಇರಬಹುದು ; ಅದರ ದಡಬಡಿಸುವ ಸದ್ದಿಗೆ ಅಂಜಿ ಅವು ಸಮೀಪದ ಕಾಡನ್ನು ಬಿಟ್ಟೇ ಹೋದಂತೆ ಕಾಣುತ್ತದೆ" ಎಂದು ತರ್ಕಿಸುತ್ತಾರೆ. ಅವರ ಊಹೆಗೆ ನೆರೆಕರೆಯವರ ಬೆಂಬಲವೂ ದೊರೆಯುತ್ತದೆ.

ಶಂಕರಗೆ ನೆಲದ ಮಮತೆ ಎಷ್ಟು ಗಾಢವಾಗಿ ಬೆಳೆದು ಬಂದಿದೆಯೋ, ಅಷ್ಟೇ ಕಡಿಮೆಯಿಲ್ಲದ ಪ್ರೀತಿ, ತನ್ನ ಆಳುಗಳ ವಿಚಾರದಲ್ಲಿಯೂ ಬೆಳೆದು ಬಂದಿದೆ. ತನ್ನ ಒಕ್ಕಲುಗಳ ಮನೆಯಲ್ಲಿ ಯಾರೇ ಬೇನೆ ಬಿದ್ದಿರಲಿ, ತನ್ನ ಮನೆಯವರಂತೆ ಚಿಂತೆ ವಹಿಸುತ್ತಾನೆ. ಆಸ್ಪತ್ರೆಗೆ ಓಡಾಡುತ್ತಾನೆ. ಎಷ್ಟೋ ಬಾರಿ–ಅಷ್ಟೊಂದು ದೂರ ಮದ್ದಿಗೆ ಓಡುವ ಬದಲು, ಈ ಗ್ರಾಮದಲ್ಲೇ ಒಂದು ಔಷಧಾಲಯವಿದ್ದರಾಗದೇ ಎಂಬ ಆಸೆ ತೊಡುತ್ತಾನೆ. ವರಲಕ್ಷ್ಮಿಗೆ ಆತ ಬರೆದೊಂದು ಕಾಗದದಲ್ಲಿ ಅಂತಹ ಹಂಬಲ ತೋಡಿಕೊಂಡುದುಂಟು. "ನಾನು ನಮ್ಮ ಜನಕ್ಕೆ ನೆಲ ಒದಗಿಸಿದ್ದೇನೆ, ನಿವಾಸ ಒದಗಿಸಿದ್ದೇನೆ, ಈಗೀಗ ಇಲ್ಲಿನ ಬೆಳೆಯ ಲಾಭದ ಒಂದಂಶವನ್ನು ವೇತನದ ಜತೆಗೆ ಹಂಚಿಕೊಡುತ್ತಿದ್ದೇನೆ. ಅವರ ವಿರಾಮದ ವೇಳೆಗೆ ಉದ್ಯೋಗ ದೊರಕಿಸಲು ಪ್ರಯತ್ನಿಸುತ್ತಿದ್ದೇನೆ. ನನಗೆ ಇಲ್ಲಿನ ಮುಖ್ಯವಾದ ಕೊರತೆಯೆಂದರೆ ವೈದ್ಯ ಸಹಾಯ ಕೆಲವೊಮ್ಮೆ ಸಣ್ಣಪುಟ್ಟ ಬೇನೆಗಳಿಗಾಗಿ ಆರೆಂಟು ಮೈಲುಗಳ ದೂರ ನಾನೇ ನಡೆದುಹೋಗಿ ಮದ್ದು ತಂದುಕೊಡಬೇಕು. ಇಲ್ಲಿಯವರು, ಏನು ಬೇನೆ ಬಂದರೂ, ಭೂತಕ್ಕೆ ಹರಕೆ ಸಲ್ಲಿಸಿ ಕುಳಿತಿರುತ್ತಾರೆ. ನನ್ನ ಒತ್ತಾಯಕ್ಕಷ್ಟೇ ಮದ್ದು ಕುಡಿಯುತ್ತಾರೆ. ಒಂದು ಚಿಕಿತ್ಸಾಲಯ ಸಮೀಪವಾಗಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು" ಎಂದು ಉದ್ಗರಿಸಿದ್ದ.

ಶಂಕರ ಈಗ ಸದಾ ಒಬ್ಬಂಟಿಗನಾಗಿಲ್ಲ. ತಂದೆಯ ಸಲುವಾಗಿ ಅದೇ ವರ್ಷವೇ ಸುಂದರವಾದೊಂದು ಮನೆಯನ್ನು ಕಟ್ಟಿಸಿದ. ಆಷ್ಟರ ನಾಗರಿಕ

ಆವರಣಕ್ಕೆ ಕೊರತೆ ಬರಬಾರದೆಂದು ವಿದ್ಯುತ್ ದೀಪಗಳ ಸೌಕರ್ಯ ಕಲ್ಪಿಸಿದ. ಅನಂತರ, ತಂದೆಗೆ ಬನ್ನಿರೆಂದು ಕಾಗದ ಬರೆದ. ತಮ್ಮ ಮಾತಿನಂತೆ ಸುಂದರರಾಯರು ಬಂದೇ ಬಂದರು. ಸ್ವತಃ ಅವರಿಗೆ ಕೃಷಿಯಲ್ಲಿ ಯಾವ ಆಸಕ್ತಿ ಇಲ್ಲದಿದ್ದರೂ, ಮಗನ ಕೆಲಸಗಳನ್ನು ಕಂಡು ಸಂತೋಷಗೊಳ್ಳುತ್ತಾರೆ. ಸಂಜೆಯೊಮ್ಮೆ, ಬೆಳಗ್ಗೊಮ್ಮೆ ತಮ್ಮ ಭೂಮಿಯಲ್ಲಿ ಸುತ್ತಾಡಿ ಸಂತೋಷ ಪಡುತ್ತಾರೆ. ಅವರ ಹೆಚ್ಚಿನ ಸಮಯವೇನೋ, ಓದಿನಲ್ಲಿ ಕಳೆಯುತ್ತದೆ. 'ಹೊತ್ತು ಹೋಗದ್ದಕ್ಕೆ, ಇನ್ನೇನು ಮಾಡಲಿ' ಎನ್ನುತ್ತಾರೆ! ಆದರೆ ಎರಡು ದೋಣಿಗಳಲ್ಲಿ ಕಾಲಿಟ್ಟಂತಿತ್ತು ಅವರ ಪಾಡು. ಸಂಪೂರ್ಣ ಮಗನೊಡನೆಯೂ ಇರಲಾರರು. ಸಂಪೂರ್ಣ ದಿಲ್ಲಿಯಲ್ಲೂ ಇರಲಾರರು ಈ ಎರಡು ಊರುಗಳ ನಡುವೆ ಡೋಲಾಯಮಾನರಾಗಿದ್ದಾರೆ.

ಪ್ರತಿಮೆಯೋ! ಒಮ್ಮೆ ಮಾತ್ರ, ಆ ಮನೆ ಕಟ್ಟಿದ ಹೊಸತರಲ್ಲಿ, ಅಲ್ಲಿಗೆ ಬಂದಿದ್ದಳು. ಆದರೆ ಬಂಗಾಡಿಯಲ್ಲಿ ಅವಳಿಗೊಪ್ಪುವ ಮಹಿಳಾ ಸಮಾಜವನ್ನು ಎಲ್ಲಿಂದ ತರಬೇಕು? ಹಾಗಾಗಿ ಅಲ್ಲಿದ್ದ ಪ್ರತಿ ದಿನವೂ ದಿಲ್ಲಿಯನ್ನು ನೆನೆಯಬೇಕಾಗಿತ್ತು. ಒಂದು ತಿಂಗಳ ಕಾಲವಿದ್ದು ದಿಲ್ಲಿಗೇನೇ ಹೊರಟುಹೋದಳು. ಸುಂದರರಾಯರು ತಮ್ಮ ದಿಲ್ಲಿಯ ಬಿಡಾರ ಮುಚ್ಚುವ ಹಾಗಿರಲಿಲ್ಲ. ಅವರಿಗೆ ದೊರೆಯುತ್ತಿದ್ದ ನಿವೃತ್ತಿ ವೇತನದ ಹೆಚ್ಚಿನ ಪಾಲು ಆಕೆಯ ವೆಚ್ಚಕ್ಕೇನೆ ಸಲ್ಲುತ್ತಿದೆ. ಮನೆ ಮೊದಲಿನಷ್ಟು ದೊಡ್ಡದಾಗಿಲ್ಲ. ಆದರೇನು? ಬಾಡಿಗೆ, ಅಡುಗೆಯವ, ಆಳು, ಮೋಟರು ಇವುಗಳ ಅನುಕೂಲತೆ ಮೊದಲಿನಂತೆಯೆ ಸಾಗಿಬಂದಿದೆ. ಮೊದಲಿಗಿದ್ದ ದುಡ್ಡಿನ ಬೆಲೆ ಈಗ ಉಳಿದಿಲ್ಲ—ಎಂದು ಸುಂದರರಾಯರು ತಿಳಿದಿದ್ದಾರಾದರೂ, ಪ್ರತಿಮೆ ಕಂಡುಕೊಂಡಿಲ್ಲ. ಶಂಕರ ತಾಯಿಯನ್ನು ಬಹುವಿಧದಿಂದ ಬೇಡಿ, ಊರಲ್ಲಿ ನಿಲ್ಲಿಸಿಕೊಂಡಿರಬೇಕೆಂದಿದ್ದ. ಆದರೆ ಅದು ಸಫಲವಾಗಿಲ್ಲ. ಕೊನೆಗೆ ತನ್ನಷ್ಟಕ್ಕೆ ತಾನೇ ಸಮಾಧಾನವನ್ನು ತಂದುಕೊಳ್ಳುತ್ತಾನೆ. "ಅಮ್ಮ ಮೊದಲಿನಿಂದಲೂ ತನ್ನದೇ ಆದ ಹುಚ್ಚರ ಸ್ವರ್ಗ ಕಟ್ಟಿಕೊಂಡಿದ್ದವಳು. ಇದನ್ನೆಲ್ಲ ಕಂಡು ಆನಂದಿಸುವ ಯೋಗ್ಯತೆ ಅವಳಿಗಿಲ್ಲ. ಸೀರೆ ಆಭರಣಗಳ ಸಮುದಾಯವೇ ಅವಳ ಪಾಲಿನ ನಂದನವನ. ಸಮಾಜ ಸೇವೆಯ ನಟನೆಯೇ ಮೈಮರೆಸುವನಾಟಕ. ಯಾರೇನು ಮಾಡಲಿ" ಎಂದು

ಸುಮ್ಮನಾಗುತ್ತಾನೆ. ತಂದೆಯಾದರೂ ವರ್ಷದ ಕೆಲವು ತಿಂಗಳಲ್ಲಿ ತನ್ನೊಟ್ಟಿಗೆ ಇರುತ್ತಾರೆಂಬುದೇ ಹೆಮ್ಮೆಯ ವಿಷಯ. ಇನ್ನು ಉಳಿದ ವೇಳೆ ಅವರು ದೇಹಲಿಗೆ ಹೋಗಿರುತ್ತಾರೆ.

ಮೂಡೋಡಿಯಲ್ಲಿ ತನ್ನದೇ ಆದ ಒಂದು ನಂದನವನವನ್ನು ಕಟ್ಟಿ ಮುಗಿಸುವುದರೊಳಗಾಗಿ, ಸಹಚರ ಕೃಷ್ಣನಿಗಾಗಿ ಇನ್ನೊಂದು ವನದ ಹಂಚಿಕೆಯನ್ನು ಹಾಕಿದ್ದಾಯಿತು. ಕೃಷ್ಣ ಅಲ್ಲಿಗೆ ಹೋಗಿ ವಾಸವಾಗ ತೊಡಗಿ ಮೂರು ವರ್ಷಗಳಾಗಿವೆ. ಅಲ್ಲಿನ ಕೆಲಸ ತೊಡಗಿದಾಗ—ಶಂಕರನಿಗೆ ಅಂತರಂಗದಲ್ಲಿ ಅಂಜಿಕೆಯುಂಟಾಗಿತ್ತು. ಅಲ್ಲಿನ ಭೂಮಿಯೇ ಬೇರೆ, ಇಲ್ಲಿನದೇ ಬೇರೆ. ಎರಡು ಕಡೆಯಲ್ಲೂ ಎದುರಿಸಬೇಕಾಗಿದ್ದ ಸಮಸ್ಯೆಗಳೇ ಬೇರೆಯೆಂದು. ತನ್ನ ಕೆಲಸ ಯಶಸ್ವಿಯಾದಂತೆ ಅದೂ ಆಗಬೇಕಲ್ಲವೆ?

ಒಮ್ಮೆ ಆಗದೆಹೋದರೆ—ಆ ಹೊಣೆ ತನ್ನದೆಂದು ತೋರುತ್ತದೆ. ತನ್ನ ಹುಚ್ಚು ತೀರ್ಮಾನಕ್ಕಾಗಿ ಕೃಷ್ಣನಾಗಲೀ ಸೀತಾರಾಮನಾಗಲೀ ಹಾನಿಗೊಳಗಾಗಬಾರದಷ್ಟೆ. ತನ್ನ ದೃಷ್ಟಿಯಿಂದ ಆರಿಗರು ಕೊಟ್ಟ ಭೂಮಿಗೆ ಎರಡು ಸಾವಿರ ರೂಪಾಯಿ ಹೆಚ್ಚಲ್ಲ. ಆರಿಗರೊ? ಲೋಭಿಯಂತೆ ಕಸವಿಸಿ ಮಾಡಿದರು. ಅಂತರಂಗದಲ್ಲಿ—'ಅದು ಬತ್ತಿದ ಎಮ್ಮೆ, ಬರಡು; ಸಿಕ್ಕಿದ್ದು ಲಾಭ' ಎಂದೂ ತಿಳಿದರು. ಅವರಿಗೆ ಬಂಧುವೊಬ್ಬನಿಂದ ಶ್ರಮವಿಲ್ಲದೆ ದೊರೆತ ಆ ಭೂಮಿಯಿಂದ ಪಡೆಯುವ ಲಾಭವನ್ನೆಲ್ಲ ಪಡೆದಿದ್ದಾರೆ. ಊರ ಕೆಲವರು–ಶಂಕರರಾಯರು ಮೂಡೋಡಿಯಲ್ಲಿ ಗೆದ್ದಿದ್ದಾರೆಂದು ಇಲ್ಲಿ ಗೆಲ್ಲುವುದು ಹೇಗೋ—ಎಂದೂ ಅಂದಿದ್ದಾರೆ.

ಭೂಮಿಯನ್ನು ಮಾರುವಾಗ ಆರಿಗರಿಗೆ ಇದ್ದಷ್ಟು. ಸಂತೋಷ, ಆ ಮೇಲೆ ಉಳಿಯಲಿಲ್ಲ. ಮೊದಲು, ಮೊದಲು "ನೋಡಿ ಶಂಕರರಾಯರೇ, ನನಗೆ ಅದರಿಂದ ಲಾಭವಾಗಲಿ, ನಷ್ಟವಾಗಲಿ, ನಿಮ್ಮ ಕೈಗೆ ಅದು ಹೋದದ್ದೆಂಬುದು ತುಂಬಾ ಸಂತೋಷ. ನೀವು ಅದನ್ನು ನಂದನವನದ ಹಾಗೆ ಮಾಡುತ್ತೀರಿ ಎಂಬುದು ನನಗೆ ಗೊತ್ತು." ಎಂದು ಅಂದಿದ್ದರೂ ಮುಂದೆ ಅಷ್ಟೊಂದು ಉತ್ಸಾಹ ಉಳಿಯಲಿಲ್ಲ. "ನಿಮ್ಮ ಬಾಯಿಯೇ ಸತ್ಯವಾಗಲಿ" ಎಂದಿದ್ದ ಶಂಕರ. ಅದು ಎಂದು ಸತ್ಯವಾಗುತ್ತ ಬಂದಿತೋ ಆರಿಗರ ಮನಸ್ಸಿನ ಉತ್ಸಾಹ ಕಡಿಮೆಯಾಯಿತು. ಸಾಲದುದಕ್ಕೆ ಅವರ ಅಳಿಯ

ನೇಮಿರಾಜಭಂಗರು "ಯಾಕೆ ಮಾವ, ಅದನ್ನು ಮಾರಿದ್ದು?" ಎಂದು ಕೇಳಿದಾಗ, ಮನಸ್ಸು ತುಸು ಚಂಚಲವಾಯಿತು. ಆಗ ಅರಿಗರು "ನಿನಗೆ ಮರುಳು. ಇದು ಮೂಡೋಡಿಯ ಹಾಗಲ್ಲ. ತೀರ ಪಡುಬಿದ್ದ ಭೂಮಿ. ಅಲ್ಲಿ ನೀರಿದೆ; ಪ್ರತಿಯೊಂದೂ ಇದೆ. ಇಲ್ಲಿ ಇದ್ದ ನೀರು ಬತ್ತಿದೆ. ಇಲ್ಲಿನ ಗುಡ್ಡಕ್ಕೆ ನೀರೆರೆದು ಅವರು ಕಂಗಾಲಾಗುತ್ತಾರೆ. ಈಗಾಗಲೇ ಸಾವಿರದ ಮೇಲೆ ಹಣ ಖರ್ಚಾಯಿತು. ಗುಡಿಸಲು, ಮನೆ, ಕಟ್ಟುವುದಕ್ಕೆ—ಬೇಲಿ ಹಾಕುವುದಕ್ಕೆ ಇನ್ನೂ ಸಾವಿರ ಎರಡು ಸಾವಿರಬೇಕು. ವಾಸಕ್ಕೆ ಚಂದವಾದ ಸ್ಥಳವಾದೀತೇ ಹೊರತು, ಅದರಿಂದ ಮತ್ತೇನೂ ಪ್ರಯೋಜನವಿಲ್ಲ." ಎಂದು ನಕ್ಕು ನುಡಿದರು.

ಆದರೂ, ಆಗಾಗ ಅಲ್ಲಿ ಏನು ತಮಾಷೆ ನಡೆಯುತ್ತದೆಂದು ನೋಡುವುದಕ್ಕೆ ಹೋಗಿಬರುತ್ತಿದ್ದರು. ಮೊದಲಿನ ವರ್ಷವೇ ಸುತ್ತಲೂ ಎತ್ತರವಾದ ಅಗುಳನ್ನು ಹಾಕಿಸಿದರು. ಒಂದೆರಡು ಗುಡಿಸಲುಗಳನ್ನು ಕಟ್ಟಿದರು. ಇಕ್ಕಡೆಯ ಗುಡ್ಡಗಳ ನಡುವೆಯಿದ್ದ ಕಣಿವೆಯನ್ನು ಸವರಿ, ಮೂರು ಎಕ್ರೆ ಗದ್ದೆ ಮಾಡಿದ್ದರು. ಗದ್ದೆಯ ಅಂಚುಗಳು, ಕೊರೆದುಹೋಗದಂತೆ ಹುಲ್ಲು ಗಿಡಗಳನ್ನು ಹಚ್ಚಿದ್ದರು. ಅಲ್ಲಿಂದ–ಮಳೆ ಬಿಸಿಲೆನ್ನದೆ, ಕೃಷ್ಣ ಹತ್ತೆಂಟು ಆಳುಗಳನ್ನು ಕಟ್ಟಿಕೊಂಡು, ಕೆಲಸಕ್ಕೆ ತೊಡಗಿದ. ಕಣಿವೆಯ ಯಾವತ್ತು ನೆಲವನ್ನು ತಟ್ಟಾಗಿ ಮಾಡುವ ಪ್ರಯತ್ನ ಸಾಗಿಸಿದ. ಏನಾಗದೆ ಹೋದರೆ, ಒಂದು ಬೆಳೆಯೊದರೂ ಬರಬಹುದೆಂಬ ಆಸೆ ಅವನಿಗೆ, ಮೊದಲಿನ ಎರಡು ವರ್ಷ ಅಲ್ಲಿ ಬೆಳೆಯನ್ನು ಬೆಳೆಯುವ ಬದಲು, ಬರಿದೆ ಉಳುಮೆ ಮಾಡಿ, ಸೊಪ್ಪುಸದೆ ಹೊತ್ತುತಂದು, ನೆಲದಲ್ಲಿ ಕೊಚ್ಚಿ ಕೊಳೆಯಿಸಿದನು. ಆದರೆ ಎಡಬಲದ ಗುಡ್ಡದ ಇಳಕಲುಗಳಲ್ಲಿ ಬೇರೆಯೇ ಕೃಷಿಯ ಪ್ರಯತ್ನ ನಡೆಯಿತು. ಅದರ ಉದ್ದಕ್ಕೂ, ನೀರನ್ನು ತಡೆಯುವುದಕ್ಕಾಗಿ ಸಮತಳವಾದ ದಂಡೆಗಳನ್ನು ಹಾಕಿಸಿದರು. ಇಳುಕಲಿನ ಕೆಳಗಿನ ಭಾಗ ಹತ್ತು ಹದಿನೈದು ಎಕ್ರೆಗಳಷ್ಟು ಈ ತೆರನಲ್ಲಿ ಮಾಡಿದ ಹೊಲವಾಯಿತು. ಅನಂತರ ಅದರ ಮೇಲಿನ ಸೀಳಿನ ಕಡೆಗೆ ಮನಸ್ಸನ್ನು ಹಾಕಿದರು. ಎಡಸೆರಗಿನಲ್ಲಿ ಸಾಲಾಗಿ ಕುಣಿಗಳನ್ನು ತೋಡಿಸಿ, ಸೊಪ್ಪು ತುಂಬಿಸಿ ಮುಚ್ಚಿಸಿದನು. ಬಲಗಡೆಯಲ್ಲಿಯೂ—ಅದೇ ಬಗೆಯಲ್ಲಿ ತುಸು ಸಮೀಪಕ್ಕೆ ಕುಣಿ

ಗಳನ್ನು ತೋಡಿಸಿದರು. ಹೀಗೆ ಒಂದು ವರ್ಷವೆಲ್ಲ ದುಡಿದು ಇಷ್ಟನ್ನೇ ಮಾಡಿದ್ದು.

ವರ್ಷದ ಕೊನೆಗೆ —ಆರಿಗರು ಅಲ್ಲಿಗೆ ಹೋದಾಗ ಕೃಷ್ಣ ಅಲ್ಲಿದ್ದಿರಲಿಲ್ಲ. ತನ್ನ ಊರಿಗೆ ಹೊರಟುಹೋಗಿದ್ದ. ಆರಿಗರು ಅಲ್ಲಿನ ಕಾವಲಿನವನೊಬ್ಬನನ್ನು ಕರೆದುಕೊಂಡು ಸುತ್ತಲೂ ಅಲೆದಾಡಿ, ಯಾವ ಯೋಚನೆಯೂ ಹೊಳೆಯದೆ ವಿಸ್ಮಯಪಟ್ಟರು. "ಏನಂತೆ—ನಿನ್ನ ಧನಿಗಳ ಯೋಚನೆ ? ಏನುಮಾಡಿದ್ದಾರೆ ? ಗದ್ದೆಮಾಡಿದ್ದಾರೆ, ಬಿಟ್ಟಿದ್ದಾರೆ. ಕುಣಿ ತೋಡಿದ್ದಾರೆ, ಮುಚ್ಚಿದ್ದಾರೆ; ಗಿಡ ನೆಟ್ಟಿದ್ದಿಲ್ಲ ಬೆಳೆಮುದಿಲ್ಲ" ಎಂದು ನಕ್ಕು ನುಡಿದರು. ಅವರಿಗೆ ಕಂಡ ಒಂದು ಸಂಗತಿಯೆಂದರೆ–ಅವರು ಪೂರ್ವದಲ್ಲಿ ಕಡಿದಿದ್ದ ಕಾಡಿನ ಜಾಗ, ಈಗ ಎಲ್ಲೆಲ್ಲಿಯೂ ಚಿಗುರಿ ಹಸುರಾದುದು. ಮನೆಗೆ ಬರುತ್ತಾ ಅವರಿಗೆ ಹೊಳೆದ ವಿಚಾರವೆಂದರೆ "ಅಲ್ಲಿ ಬೆಳೆಯುವುದೆಂದರೆ ಸೊಪ್ಪು ಮಾತ್ರ. ಅವರು ಸುರಿದ ಹಣವೆಲ್ಲವೂ ನೀರಲ್ಲಿ ಮಾಡಿದ ಹೋಮ" ಎಂದು.

ತಮ್ಮ ಅಳಿಯನಿಗೆ ತಿಳಿಸುವುದಕ್ಕೆ, ಹಿಗ್ಗಿ ಹೇಳುವುದಕ್ಕೆ ಅವರಿಗೆ ಅಷ್ಟೇ ಸಾಕಾಯಿತು. ಆ ಮೇಲೆ ಬಹುಕಾಲ ಅಲ್ಲಿ ಹೋಗಲಿಲ್ಲ. ಇನ್ನೊಮ್ಮೆ ಕೃಷ್ಣನ ನಿರಾಶೆಯ ಮುಖವನ್ನು ನೋಡುತ್ತೇನೆಂದೇ ಅಲ್ಲಿಗೆ ಉದ್ದೇಶಪಟ್ಟು ಹೋದರು. ಅದು ಮಳೆಗಾಲವಾಗಿತ್ತು. ಕೃಷ್ಣ ಊರಲ್ಲಿದ್ದ. ಆಗ ಕಣಿವೆಯ ನೆಲದಲ್ಲಿ ಅರೆವಾಸಿಯಷ್ಟು ಭೂಮಿ ಗದ್ದೆಯಾಗಿತ್ತು. ಅದರಲ್ಲಿ ಬತ್ತದ ಬೆಳೆ ಕಂಗೊಳಿಸಿತು. ಬೆಳೆ ತುಂಬ ಚೆನ್ನಾಗಿಯೇ ಇತ್ತು. ಮುಂದಿನ ನೆಲವನ್ನೆಲ್ಲಾ ಸಂಪೂರ್ಣ ತಟ್ಟಾಗಿ ಮಾಡಿ ಇರಿಸಿದ್ದರು. ಎಡಬಲದ ಗುಡ್ಡಗಳಲ್ಲಿ–ಸಾಲುಸಾಲಾಗಿ ಗಿಡಗಳನ್ನು ನಟ್ಟಿದ್ದರು. ಆರಿಗರ ಜತೆಗೆ ಕೃಷ್ಣನಿದ್ದ. ಅತ ಅಲ್ಲಿಗೆಲ್ಲ ಅವರನ್ನು ಕರೆದೊಯ್ದ. ಅಲ್ಲಿ ಚೆನ್ನಾಗಿ ಮೇಲಕ್ಕೆದ್ದ ಗಿಡಗಳನ್ನು ನೋಡಿ "ಮಾವಿನ ಸಸಿ ನಟ್ಟಿದ್ದೀರಾ?" ಎಂದು ಕೇಳಿದರು ಆರಿಗರು.

"ಹೂಂ"

"ಎಷ್ಟು ಗಿಡಗಳಿವೆ? ನೂರಿನ್ನೂರು ಇರಬಹುದೆಂದು ಕಾಣುತ್ತದೆ."

"ಇಲ್ಲ ಹತ್ತು ಎಕ್ರೆಗಳಿಂದ ನಾನ್ನೂರು ಗಿಡಹಾಕಿಸಿದ್ದೇನೆ."

"ಆಚೆಯ ಗುಡ್ಡದಲ್ಲಿ?"

"ಅಲ್ಲಿ ಬರಿಯ ಗೇರು ಸಸಿಗಳನ್ನು ಹಾಕಿದ್ದೇವೆ. ಮಡಿ ಮಾಡಿ, ಸಸಿಗಳನ್ನು ಬೆಳೆಸಿ, ಈ ವರುಷ ಸ್ವಲ್ಪ ಭಾಗವಷ್ಟೇ ಹಾಕಿದ್ದೇವೆ. ಮುಂದಿನ ವರ್ಷ ಪೂರ್ಣ ಹಾಕಬೇಕೆಂದಿದೆ."

"ನಾನ್ನೂರು ಮಾವು ಹಾಕಿದ್ದೀರಾ? ಎಷ್ಟು ವರ್ಷಗಳಲ್ಲಿ ಫಲಕೊಡಬಹುದು? ಇಷ್ಟೆಲ್ಲಾ ಫಲಕೊಟ್ಟರೆ—ಮಾಡುವುದೆಲ್ಲಿ? ನೋಡಿ, ಕೆಲವು ವರ್ಷ ಬೆಳ್ತಂಗಡಿಗೆ ಘಟ್ಟದಿಂದ ರಾಶಿರಾಶಿಯಾಗಿ ಮಾವಿನ ಹಣ್ಣು ಬರುತ್ತದೆ. ನೂರಕ್ಕೆ ರೂಪಾಯಿಯಲ್ಲಿ ಕೊಟ್ಟದ್ದುಂಟು." ಎಂದು ನಿರಾಶೆ ತೋರಿಸಿದರು. ಕೃಷ್ಣನ ಮನ ನೋಯಿಸಬಾರದೆಂದು "ಆದರ ಬದಲು ಗೇರುಸಸಿ ಹಾಕಿದರೇನೆ ಉತ್ತಮ. ಇದಕ್ಕೆ ಬೇಕಾದ ಕೃಷಿ ಅದಕ್ಕೆ ಬೇಕಾಗಿಲ್ಲ. ಅಲ್ಲದೆ ಗೇರುಬೀಜಕ್ಕೆ ಒಳ್ಳೆಯ ದರವೂ ಇದೆ" ಎಂದಂದರು.

"ಎಲ್ಲವನ್ನು ಶಂಕರಣ್ಣ ಹೇಳಿದ ಹಾಗೆ ಮಾಡಿದ್ದೇನೆ. ಮಾವನ್ನು ಹಾಕುವಾ ಅಂದ. ಹಾಕಿದೆ. ಈಗ ಜನರು ಮೊದಲಿನ ಹಾಗಲ್ಲ; ಹಣವಿದೆ ಹಣ ಖರ್ಚು ಮಾಡುತ್ತಾರೆ. ಮಂಗಳೂರಿನಲ್ಲಿ ಡಜನು ಹಣ್ಣಿಗೆ ರೂಪಾಯಿಯ ಮೇಲಿದೆ ಬೆಲೆ. ನಮಗೆ ನೂರಕ್ಕೆ ಮೂರು ರೂಪಾಯಿ ಸಿಕ್ಕಿದರೂ ನಷ್ಟವಾಗಲಾರದು ಎನ್ನುತ್ತಾರೆ."

"ಹಾಗಿದ್ದರೆ ಆ ಕಾಡು ಸವರಿದಲ್ಲಿ, ಹಾಗೆಯೇ ಬಿಟ್ಟದೇಕೆ? ಸೊಪ್ಪಿಗೆಂದು ಕಾಣುತ್ತದೆ. ಅರ್ಧ ಮೈಲು ಹೋದರೆ–ಸರಕಾರಿ ಜಾಗದಿಂದ ಬೇಕಷ್ಟು ಸೊಪ್ಪು ತರಬಹುದಲ್ಲ" ಎಂದು ಅಭಿಪ್ರಾಯ ವ್ಯಕ್ತಮಾಡಿ ಹೋದರು. ಈ ಬಾರಿ ಮಾತ್ರ ಅವರ ಮನಸ್ಸು ತುಸು ವಿಚಾರಕ್ಕೊಳಗಾಗಿತ್ತು.

ಅನಂತರದ ವರ್ಷ ಅರಿಗರು ಮೂರು ನಾಲ್ಕು ಆವೃತ್ತಿ ಅಲ್ಲಿಗೆ ಬಂದು ಹೋದರು. ಬೇಸಗೆಯಲ್ಲೂ ಬಂದರು; ಮಳೆಗಾಲದಲ್ಲೂ ಬಂದು ಹೋದರು, ಅವರ ಕಣ್ಣು ನಂಬಲಾರದಷ್ಟು ಮಾರ್ಪಾಟು ಅಲ್ಲಿ ನಡೆದಿತ್ತು. ಗದ್ದೆಗಳಲ್ಲಿ ಬತ್ತ, ಧಾನ್ಯಗಳು ಬೆಳೆದಿದ್ದುವು. ಕಣಿವೆಯ ತುತ್ತ ತುದಿಯಲ್ಲಿ ಕೆರೆ ತೋಡಿದ್ದರು, ಬೇಸಿಗೆಯಲ್ಲೂ ಅಲ್ಲಿ ನೀರು ತುಂಬಿತ್ತು. ಅದನ್ನು ಕಂಡಂತೂ ಅರಿಗರಿಗಾದ ಆಶ್ಚರ್ಯ ಅಷ್ಟಿಷ್ಟಲ್ಲ "ಏನು ಈ ನೀರು ಎಲ್ಲಿಂದ ಬಂತು? ಮೇಲಿನಿಂದಲೂ ಒರತೆಯ ನೀರು ಹರಿದುಬರುತ್ತಿದೆ. ಇಷ್ಟು

ನೀರಿಲ್ಲದ್ದೀತು-ಎಂದು ನನಗೆ ಗೊತ್ತಿದ್ದರೆ, ನಾನು ಅಡಿಕೆಯ ತೋಟವನ್ನು ಮಾಡುತ್ತಿದ್ದೆ" ಎಂದರು. ಮನಸ್ಸಿನಲ್ಲಿ ತಾನೇ ಆದನ್ನು ಮಾಡದೆಹೋದೆನೆ ಎಂಬ ಆಸೆ ಉದಯಿಸಿತು.

"ಶಂಕರಣ್ಣ ಮೇಲಿನ ಕಾಡನ್ನು ಹಾಗೆಯೇ ಚಿಗುರುವುದಕ್ಕೆ ಬಿಡಲು ಹೇಳಿದ್ದು, ಅದಕ್ಕೇನೆ. ಕಾಡನ್ನು ಕಡಿದುದರಿಂದ ನೀರಿನ ಒರತೆ ಮಾಯ ವಾಗಿರಬೇಕು ಎನ್ನುತ್ತಾನೆ. ಈಗ ಮೇಲೆಲ್ಲ ಪೊದೆಗಳೂ ಗಿಡಗಳೂ ಬೆಳೆ ದುದರಿಂದ ನೀರು ಉಂಟಾಗಿದೆ."

"ಛೇ ಛೇ-ಅದೆಂತಹ ಮಾತು ? ಕಾಡಿದ್ದರೆ ಇದ್ದ ನೀರು ಬತ್ತಿಹೋ ಗುತ್ತದೆಂದು ಹೇಳುತ್ತಾರೆ ಊರವರು. ನಿಮ್ಮ ಅಭಿಪ್ರಾಯ ತದ್‌ವಿರುದ್ಧ ವಾಯಿತಲ್ಲ."

"ಆರಿಗರೇ, ನೀವು ಕಾಡು ಕಡಿದು ಬಿಟ್ಟದ್ದರಿಂದಲೇ ಇದ್ದ ನೀರು ಆರಿರಬೇಕು. ಗಿಡಮರಗಳಿದ್ದರೆ—ಬೇರುಗಳಿಂದ ನೆಲ ಸಡಿಲಿ, ಮಳೆಯ ನೀರು ಇಂಗಿ, ಪಸೆ, ಒರತೆಗಳುಂಟಾಗುತ್ತವೆ. ನೀವು ಕಾಡು ಕಡಿದುದ ರಿಂದ ಆ ಒರತೆ ಹೊರಟು ಹೋಗಿರಬೇಕು.

ಕೃಷ್ಣನ ಪ್ರತ್ಯುತ್ತರದಿಂದ ಆರಿಗರಿಗೆಷ್ಟು ಸಂತೋಷವಾಯಿತೋ ಹೇಳಲಾರದ ಸಂಗತಿ. ಅದರೆ ಅವರು ಮನೆಗೆ ಮರಳುವಾಗ, ಅವರ ಮನಸ್ಸಿನಲ್ಲಿ ಅಸೂಯೆಯೋ, ಬೇಸರವೋ-ತುಂಬಿಕೊಂಡಿತ್ತು. ಇಂತಹ ಒಳ್ಳೆಯ ಜಾಗವನ್ನು ತಾನು ಮಾರಬಾರದಿತ್ತು ಎಂದೆನಿಸಿತ್ತು. ಕಾಲ ಸರಿ ದಂತೆ, ಆ ಭೂಮಿಯಲ್ಲಿ ನಟ್ಟ ಗಿಡ ಮರಗಳು ಚಿಗುರಿ ದೊಡ್ಡದಾದಂತೆ, ಹೊಲವೆಲ್ಲ ಹಸುರಾದಂತೆ, ಅವರ ಮನದ ಬೇಗುದಿಯೂ ಹೆಚ್ಚಿತು.

ಸಂಪೂರ್ಣವಾಗಿ ಮೂರು ವರ್ಷಗಳು ಕಳೆದು, ನಾಲ್ಕನೆಯವರ್ಷವೇ ಈಗ ಕಾಲಿರಿಸಿದೆ. ಕೃಷ್ಣನ ಜತೆಗೆ ಅವನ ಒಬ್ಬ ತಮ್ಮನೂ ಬಂದು ಸೇರಿ ದ್ದಾನೆ. ಇಬ್ಬರೂ ಬಿಡುವಿಲ್ಲದೆ ದುಡಿಯುತ್ತಾರೆ. ಅಲ್ಲದೆ, ಅಣ್ಣ ಸೀತಾ ರಾಮ ಸದ್ಯವೇ ಬರುವನೆಂಬ ಸಂತೋಷ ಮನಸ್ಸಿನಲ್ಲಿ ತುಂಬಿದೆ. ಆತ ತಮ್ಮಂದಿರ ವೆಚ್ಚಕ್ಕೆ ಬೇಕಾದಂತೆ ಹಣ ಒದಗಿಸಿದ್ದರೂ, ಅಲ್ಲಿಗೆ ಬಂದು ನೋಡುವ ಬಿಡುವು ಆತನಿಗೆ ದೊರೆತದ್ದು—ನಾಲ್ಕು ವರ್ಷಗಳ ಬಳಿಕ. ಬಂದವ ನೆಟ್ಟಗೆ, ಶಂಕರನ ದರ್ಶನಕ್ಕೆ ಓಡಿಬಂದ. ಅವನೊಡನೆಯೇ ಇದ್ದ.

ಅಣ್ಣನ ದರ್ಶನಕ್ಕೆ ಕೃಷ್ಣ ಅಲ್ಲಿಗೆನೇ ಧಾವಿಸಿದ. ಅಲ್ಲಿಂದ ಮೂವರೂ ಸೇರಿ ಹೊಸ ಭೂಮಿಯನ್ನು ನೋಡಹೋದರು.

ಎಲ್ಲವನ್ನೂ ನೋಡಿ ಬಳಿಕ ಸೀತಾರಾಮ "ಶಂಕರ, ಇನ್ಯಾವ ಅಧೈರ್ಯವೂ ನನಗಿಲ್ಲ. ನಮ್ಮ ಕೃಷ್ಣ, ಸ್ವಂತ ಸಂಸಾರ ಮಾಡಿಕೊಂಡು ಸುಖವಾಗಿರಬಹುದು. ಇನ್ನೆರಡು ಮೂರು ವರ್ಷಗಳಲ್ಲಿ, ಮಾವು, ಗೇರುಗಳು ಫಲಕೊಡಬಹುದೇನೋ! ಕೃಷ್ಣನಿಗೆ ಈ ವರ್ಷವೇ ಲಗ್ನಮಾಡಬೇಕೆಂದು ತಂದೆಯ ಹಟ. ನಾನು ಈ ಬಾರಿ ಬಂದದ್ದೇ ಅದಕ್ಕೆ" ಎಂದು ಉಸುರಿದ.

ಬಹು ವರ್ಷಗಳ ಬಳಿಕ ಶಂಕರ, ಆ ಸೋದರರ ಜತೆಯಲ್ಲಿ ಮುದ್ರಾಡಿಗೆ ಹೋಗುವ ಪ್ರಸಂಗ ಬಂದೊದಗಿತು. ಶಂಕರ ಹಿಂದೆ ಅಲ್ಲಿಗೆ ಹೋಗಿ ಏಳೆಂಟು ವರ್ಷಗಳೇ ಸಂದಿದ್ದವಾದರೂ, ಅವನ ವಿಚಾರ ತೋಳ್ಪಾಡಿತ್ತಾಯರಿಗೆ ಚೆನ್ನಾಗಿ ಕೇಳಿ ಗೊತ್ತು. ಆದುದರಿಂದ ಶಂಕರನ ವಿಚಾರದಲ್ಲಿ ಸೀತಾರಾಮನ ಮನೆಯವರಿಗೆ ಅತಿ ಹೆಚ್ಚಿನ ಗೌರವವುಂಟಾಗಿತ್ತು. ತಮ್ಮೊಬ್ಬ ಮಗನ ಭವಿಷ್ಯದ ಯಾವತ್ತು ಹೊಣೆಯನ್ನು ಹೊತ್ತು, ರೂಪಿಸಿದ್ದಕ್ಕೆ, ಅವರಲ್ಲಿ ಕೃತಜ್ಞತೆಯೂ ತುಂಬಿತ್ತು. ಅಲ್ಲಿನ ಮಾತುಕತೆಗಳನ್ನು ಕೇಳುವಾಗ, ಕೃಷ್ಣನ ತಂದೆಗೆ ಬಂಗಾಡಿಗೆ ತಾನೂ ಹೋಗಿ ನೋಡಿಬರಬೇಕೆಂಬ ಬಾಯಾರಿಕೆ ಉಂಟಾಯಿತು. ಕೃಷ್ಣನ ಲಗ್ನಕ್ಕೆ, ಸೀತಾರಾಮನ ಅಗ್ರಹದಿಂದ ಬಂಧುಗಳಾದ ಎಳಚಿತ್ತಾಯರು ಅಲ್ಲಿಗೆ ಬಂದಿದ್ದರು. ಅವರು ಬಂದಮೇಲೆ ಕೇಳಬೇಕೇ? ಶಂಕರನನ್ನು ಇಂದ್ರಾದಿ ದೇವತೆಗಳಿಗೆ ಹೋಲಿಸಿ ಮಾತನಾಡುತ್ತಿದ್ದರು. ಈ ಹೊಗಳಿಕೆಯ ಎಡೆಯಲ್ಲಿ ಶಂಕರನನ್ನು ಕುರಿತು ಒಂದು ಟೀಕೆಯನ್ನೂ ಮಾಡಿದರು. "ಶಂಕರರಾಯರೇ, ನೀವು ಮಾಡಿದ ಕೆಲಸವೆಲ್ಲಾ ಸರಿಯೆ. ಸೀತಾರಾಮನಿಗೂ ನೀವು ಇದ್ದೇ ಲಗ್ನವಾಯಿತು. ಕೃಷ್ಣನ ಲಗ್ನಕ್ಕೆ ಇದೇ ಬಂದಿದ್ದೀರಿ. ಅಂತಹ ನಿಮ್ಮ ವಿಷಯದಲ್ಲಿ ನನ್ನ ಆಕ್ಷೇಪ ಒಂದೇನೆ—ನೀವು ಒಬ್ಬಂಟಿಗರಾಗಿ ಎಷ್ಟು ದಿನ ಇರುತ್ತೀರಿ? ಯಾರಿಗಾಗಿ ಮೂಡೋಡಿಯಲ್ಲಿ ಕುಳಿತು, ಜೀವ ಹಿಡಿದುಕೊಂಡು, ಆ ಸ್ವರ್ಗನಿರ್ಮಾಣ ಮಾಡಿದಿರಿ?" ಎಂಬ ಸರಳ ಪ್ರಶ್ನೆಯೊಂದನ್ನು ಕೇಳಿದರು. ಅವರೆಲ್ಲರ ಮುಂದೆ ಶಂಕರ ನಗಲೇಬೇಕಾಯಿತು.

ನಕ್ಕು ನುಡಿದ "ಎಳಚಿತ್ತಾಯರೇ, ನೀವೇ ಅನ್ನುತ್ತೀರಲ್ಲ—ಪ್ರತಿಯೊಂದಕ್ಕೂ ಒಂದೊಂದು ಕಾಲವುಂಟೆಂದು. ನೀವು ಹೇಳುವುದಕ್ಕೆ ತಕ್ಕ ಕಾಲ ಇನ್ನೂ ಬಂದಿಲ್ಲವೆಂದು ಕಾಣುತ್ತದೆ" ಎಂದ.

ಹೀಗೆ ಹಾಸ್ಯ, ಸಂತೋಷಗಳಲ್ಲಿ ಮದುವೆಯ ದಿನಗಳು ಕಳೆದುವು. ಕೃಷ್ಣನಿನ್ನು ಕೆಲವೇ ದಿನಗಳಲ್ಲಿ ಬಂಗಾಡಿಗೆ ಮರಳುತ್ತಾನೆ. ಸೀತಾರಾಮ ಊರನ್ನು ಬಿಟ್ಟು ಉದ್ಯೋಗವನ್ನು ಸೇರಬೇಕಾಗುತ್ತದೆ. ಮದುವೆ ಕಳೆಯುತ್ತಲೆ, ಶಂಕರನ ಮನಸ್ಸು ಮೂಡೋಡಿಯ ಕಡೆಗೆ ಹಾರತೊಡಗಿತು. ಅವನೂ ಎಳಚಿತ್ತಾಯರೂ ಜತೆ ಸೇರಿ ಬಸ್ಸನ್ನೇರಿ ಊರಿಗೆ ಪಯಣ ಹೊರಟರು. ದಾರಿಯುದ್ದಕ್ಕೂ ಶಂಕರನ ಮನಸ್ಸಿನಲ್ಲಿ ಎಳಚಿತ್ತಾಯರು ಕೇಳಿದ ಪ್ರಶ್ನೆ ಪ್ರತ್ಯುತ್ತರವನ್ನು ನಿರೀಕ್ಷಿಸುತ್ತಲಿತ್ತು. ಜತೆಗಾರ್ತಿಯ ಆಸೆ, ಸಂಸಾರವನ್ನು ಕಟ್ಟುವ ಆಸೆ, ತನ್ನ ಹಿರಿಯರ ಕುಲ ತನ್ನಿಂದ ಮುಂದೆ ಬೆಳಗಬೇಕೆಂಬ ಆಸೆ—ಎಲ್ಲವೂ ಅವನಲ್ಲಾಗಿದ್ದುವು. ತನ್ನ ಅಜ್ಜಿ ತಾನು ಅಲ್ಲಿಗೆ ಬಂದುದನ್ನು ಕಂಡು ಹಿಗ್ಗಿದಂತೆ ತಾನು ಶ್ರಮಿಸಿ ಬೆಳೆಯಿಸಿದ ಹೊಲ ನೆಲ, ತನ್ನ ಮಕ್ಕಳು ಮರಿಮಕ್ಕಳು ನಲಿದಾಡುವ ರಂಗವಾಗಬೇಕು ಎಂಬ ಆಸೆ, ಅವನ ಎದೆಯಲ್ಲಿಯೂ ತುಂಬಿ ತುಳುಕಾಡುತ್ತಿತ್ತು.

ಅಷ್ಟೇಕೆ? ತಂದೆ ಸುಂದರರಾಯರು ಎಷ್ಟೋ ಬಾರಿ ಮಗನಿಗೆ ಬುದ್ಧಿ ಹೇಳಿದ್ದುಂಟು. "ಮಗು, ಹೋದವರ ಚಿಂತೆ ಎಷ್ಟರತನಕ ಮಾಡಬಹುದು? ಸತ್ತವರು ಬರುತ್ತಾರೆಯೇ? ಅವಳಂತೆಯೇ ಅವಳ ತಂಗಿ ಸರಸಿಯಿದ್ದಾಳೆ. ಅವಳನ್ನಾದರೂ ಸರಿಯೇ, ಇನ್ನಾರನ್ನಾದರೂ ಸರಿಯೆ-ಲಗ್ನಮಾಡಿಕೊಳ್ಳಬಾರದೇ" ಎಂದುದುಂಟು. ಶಾಂತು ಒಂದು ವರ್ಷ ಕಳೆದಮೇಲೆ, ಶಂಕರ ತನ್ನ ನೋವನ್ನೆಲ್ಲಾ ಮರೆತಾನು, ತನ್ನೆರಡನೆಯ ಮಗಳನ್ನು ಅವನ ಕೈಮೇಲಿರಿಸಿದರೆ ಚಂದ–ಎಂದೂ ಆಸೆಮಾಡಿದ್ದಳು. ಅದಕ್ಕೆ ವಿಘ್ನವಿದ್ದೀತೆಂದು ಅವಳಿಗನಿಸಿರಲಿಲ್ಲ. ಅವಳಿಗಾಗಿ ಶಂಕರ ಈ ಎಲ್ಲ ವರ್ಷಗಳಲ್ಲಿ ನೀಡುವ ನೆರವನ್ನೆಲ್ಲ ನೀಡಿದ್ದಾನೆ. ಮನೆಯ ಮುಖವನ್ನು ಕಾಣದ ಮಂಜುನಾಥನ ಅಭಾವವನ್ನು ತುಂಬಿಸಿದ್ದಾನೆ. ಅವರ ಮನೆಯ ಪೂರ್ಣಭಾರವನ್ನು ಹೊತ್ತಿದ್ದಾನೆ. ಕಟ್ಟಕೊನೆಗೆ, ಸರಸಿಗೆ ವರನನ್ನು ಹುಡುಕಿ ತಂದು ಕೊಟ್ಟ ಮೇಲೆ, ಅವಳ ಆಸೆ ನಿರಾಶೆಯಾಯಿತು. ಅದಕ್ಕಾಗಿ ಅವನೊಡನೆ

ಬೇಸರಿಸಲೇ ? ಯಾರು ಅಷ್ಟೆಲ್ಲಾ ಮಾಡುವವರು ? ಸರಸಿಯ ಲಗ್ನ ಮಾಡಿಸಿದ; ಅವಳ ತಂಗಿಗೆ ನಂಟುತನವನ್ನು ಹುಡುಕುತ್ತಿದ್ದಾನೆ. ಕಿರಿಯ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ನೆರವಾಗುತ್ತಿದ್ದಾನೆ. ಆದರೆ ಶ್ರೀಮತಿಯ ಸಾವಿನ ಬಳಿಕ ಮದುವೆಯ ವಿಚಾರವನ್ನು ಮಾತ್ರ ಮಾತನಾಡುತ್ತಿರಲಿಲ್ಲ. ಏತಕ್ಕೆ—ಎಂದು ಕೇಳುವ ಸಾಹಸ ಶಾಂತುವಿನಲ್ಲೂ ಇಲ್ಲ.

ಶಂಕರ, ಈ ಕಾಲದಲ್ಲಿ ತನ್ನ ಕೃಷಿಕೋದ್ಯಮದಲ್ಲಿ ಎಷ್ಟೇ ತಲ್ಲೀನನಾದರೂ, ಒಮ್ಮೊಮ್ಮೆಯಾದರೂ ಮನಸ್ಸಿನಲ್ಲಿ ಚಿಂತೆ ತುಂಬಿ ತುಳುಕುತ್ತದೆ. ಶ್ರೀಮತಿಯ ಸಾವಿನ ನೋವನ್ನು ಸಹಿಸಲು ಕಲಿತಿದ್ದಾನೆ. ಆದರೆ ಆ ಶೂನ್ಯವನ್ನು ತುಂಬಿಸುವ ಬೇರೊಂದು ಜೀವವಿದ್ದೀತು. ಇದ್ದರೆ ಎಲ್ಲಿ—ಎಂದು ಆತನಿಗೆ ಹೊಳೆಯುವುದಿಲ್ಲ. ನಡುವೆ ಏನಾದರೊಂದು ಆಸೆಯ ತುಣುಕು ಹೊಳೆಯುತ್ತಿದ್ದರೆ, ಅದು ವರಲಕ್ಷ್ಮಿಯ ವಿಚಾರದಲ್ಲಿ. ಅವಳು ಅವನೊಡನೆ ಪತ್ರವ್ಯವಹಾರವನ್ನು ಇರಿಸಿಕೊಂಡದ್ದೇ ಅದಕ್ಕೆ ಕಾರಣ.

" ಶ್ರೀಮತಿ ದೇವರ ಬಳಿಗೆ ಹೋಗಿದ್ದಾಳೆ " ಎಂಬ ವಿಸ್ಮಯಕಾರಕ ಸುದ್ದಿ ಸೂಚಿಸುವಂಥ ಪತ್ರವನ್ನು ಓದಿದ ವರಲಕ್ಷ್ಮಿಗೆ, ಆ ದಿನ ಅದೆಷ್ಟು ಅನುಕಂಪವಾಯಿತೋ ಹೇಳಲಾಗದು. " ಅವಳಿದ್ದಿದ್ದರೆ ನಿನ್ನ ಜೀವನಕ್ಕೆ ಎಷ್ಟು ಇಂಬು ದೊರೆಯುತ್ತಿತ್ತೋ; ಅವಳನ್ನು ಕಳೆದುಕೊಂಡ ನಿನಗೆ ಹೇಗೆ ದಿನ ಸಾಗುತ್ತದೋ....ಆದರೂ ಅನಿವಾರ್ಯದ ಇಂತಹ ಪ್ರಸಂಗಕ್ಕೆ ಸಹನೆಯೊಂದೇ ಮದ್ದು. ನಿನ್ನ ಕೆಲಸದಲ್ಲಿ ಮೈಮರೆಯುವುದೊಂದೇ ದಾರಿ " ಎಂದು ಆಕೆ ಬರೆದಿದ್ದಳು. ಮತ್ತೊಮ್ಮೆ ಬರೆಯುವಾಗ " ನಿನ್ನ ಉದಾತ್ತ ಜೀವನಕ್ಕೆ ನೆರವಾಗಬಲ್ಲವರು ಎಷ್ಟು ಜನರಿದ್ದಾರೆ ! " ಎಂದು ಹಲುಬಿದ್ದಾಳೆ. ಇವಾವುದೂ ಉಪಚಾರದ ಮಾತುಗಳಾಗಿರಲಿಲ್ಲ. ಮನಃಪೂರ್ವಕವಾಗಿ ನುಡಿದ ನುಡಿಗಳು. ತನ್ನ, ಅವನ ಆಳತೆಯ ಅಂತರವನ್ನು ತಿಳಿದು ಬರೆದ ಮಾತುಗಳು.

ಅವಳಿಗೆ ತನ್ನ ಬಾಳು ಒಡೆದ ಕನ್ನಡಿಯಂತಾಗಿದೆ—ಎಂಬ ಅರಿವು ಚೆನ್ನಾಗಿದೆ. ಶಂಕರ ತನ್ನ ಪಾಲಿಗೆ ಅಷ್ಟು ಸುಲಭವಾಗಿದ್ದಾಗ, ಸ್ವಾರ್ಥದ ಹಾರೈಕೆಯಿಂದ ದೊರೆತ ವಸ್ತುವನ್ನು ಕಳೆದುಕೊಂಡಳು. ಎರಡನೆಯ ಬಾರಿಗೆ—ಇನ್ನೂ ಹೆಚ್ಚಿನ ಮೂರ್ಖತನವಾಯಿತು. ಮಂಜುನಾಥನ ಸ್ನೇಹ

ಬಯಸಿ, ಅವನ ಜತೆಗೆ ಹೋದುದು ಅವಳ ಸುಖಕ್ಕೂ ಕೀರ್ತಿಗೂ ಮೃತ್ಯುವಾಯಿತು. ಒಂದೇ ವೇಳೆಗೆ ಈ ಇಬ್ಬರೂ ವ್ಯಕ್ತಿಗಳು ಕಣ್ಣುಮುಂದೆ ಕಾಣಿಸಿದಾಗ, ಇಬ್ಬರ ಗುಣವನ್ನು ಪರಿಶೀಲಿಸುವ ಅವಕಾಶ ಒದಗಿದಾಗ, ಅವುಗಳೊಳಗೆ ಕಂಡ ಅಂತರ ಎಲ್ಲಿಲ್ಲದ ನೋವನ್ನುಂಟುಮಾಡಿತು. ಯಾವುದನ್ನು ಬಿಟ್ಟು ಯಾವುದನ್ನು ಹಾರೈಯಿಸಿದೆ–ಎಂದು ಮನಸ್ಸಿನಲ್ಲಿ ಭಾವನೆಯಾಗಿ,ಅದು ಮುಖದಲ್ಲೂ ಮೂಡಿತು. ಅದು ಮುಖದಿಂದ ಪ್ರತ್ಯಕ್ಷವಲ್ಲದಿದ್ದರೂ ಪರೋಕ್ಷವಾಗಿ ಪ್ರಕಟವಾದುದರಿಂದ, ಮಂಜುನಾಥನನ್ನು ರೇಗಿಸಿತು. ಬಂಗಾಡಿಗೆ ಬಂದಮೇಲೆ, ಅವನೊಡನೆ ಮಾತಿಗೂ ಅವಳ ಮನ ಅಳುಕಿತು. ಆ ತಾಯಿ ಮಕ್ಕಳ ಸಂವಾದ ಕೇಳಿ ಮನಸ್ಸು ವ್ಯಗ್ರವಾಯಿತು. ಅದನ್ನೆಲ್ಲಾ ತುಂಬಿಕೊಂಡು ಎಷ್ಟು ವಿಲಾಸಮಯವಾಗಿ ವರ್ತಿಸಬೇಕೆಂದರೂ, ಅದು ನಾಟಕವಾಗಿಯೇ ಕಂಡು ಬಂತು.

ಈ ಎಲ್ಲ ಬಗೆಯ ಚಿಂತೆಗಳು ಆಕೆಯ ಮನಸ್ಸಿನಲ್ಲಿ ನಲಿದಾಡಿ, ಮಂಜುನಾಥನಿಗೂ ಪೂರ್ವಸೂಚನೆ ಕೊಡುವಂತಾಯಿತು. ರಾತ್ರಿ ಅಶಾಂತಿಯಿಂದ ಮಲಗಿ ನಿದ್ದೆಹೋದ ಅವಳು, ಎರಡು ಮೂರಾವರ್ತಿ ಏನೇನೋ ಕನವರಿಸಿದಳು. "ಶಂಕರ, ಶಂಕರ" ಎಂದಳು ಎರಡಾವೃತ್ತಿ. ಇನ್ನೊಮ್ಮೆ "ಶಂಕರ, ನೀನೆಷ್ಟು ದೊಡ್ಡವ, ನಾನೆಂತಹ ಹುಚ್ಚಿ" ಎಂದು ಉದ್ಗರಿಸಿದಳು. ಆಕೆಗೆ ನಿದ್ದೆ ಬಂದಿರಬಹುದು; ತುಸು ದೂರದಲ್ಲಿ ಮಲಗಿದ ಮಂಜುನಾಥ ನಿದ್ದೆಗೆಟ್ಟಿದ್ದ. ಅವನ ಕಿವಿಗೆ ಈ ಕನವರಿಕೆ ಕೇಳಬೇಕೆ? ಆ ಮಾತುಗಳಿಂದ ಅವನಿಗೆ ಬರೆಯಿಟ್ಟಂತಾಯಿತು. ತಾನು ಶಂಕರನನ್ನು ಕೆಣಕುವ ಸಲುವಾಗಿಯೇ ವರಲಕ್ಷ್ಮಿಯನ್ನು ಕರೆತಂದಿದ್ದರೂ, ಅದೇನೇ ತನ್ನ ಮುಖಭಂಗಕ್ಕೆ ಕಾರಣವಾಯಿತಲ್ಲ–ಎಂದೆನಿಸಿತು. ಶಂಕರನ ಮೇಲಿನ ದ್ವೇಷ ಹೆಚ್ಚಿತು; ತನ್ನ ಇನಿಯಳ ವಿಚಾರದಲ್ಲಿ ಅನುಮಾನ ಹೆಚ್ಚಿತು. ಶಂಕರನನ್ನು ಕಾಣುವುದಕ್ಕಾಗಿಯೇ ವರಲಕ್ಷ್ಮಿ ಬಂದಿರಬಹುದೇ–ಎಂಬ ಸಂಶಯವೂ ಉಂಟಾಯಿತು. ಈ ಎಲ್ಲ ಯೋಚನೆಗಳಿಂದ ಅವರ ಮನಸ್ಸು ಮುರಿಯಿತು. ಅಂತು ಇದ್ದ ಅಸಮಾಧಾನವನ್ನು ಅವರಿಬ್ಬರೂ ನುಂಗಿಕೊಂಡು, ದೆಹಲಿಯನ್ನು ಸೇರಿದರು. ಆ ಬಳಿಕ ಒಬ್ಬರ ಭೇಟಿ ಇನ್ನೊಬ್ಬರಿಗಿಲ್ಲ. ವರಲಕ್ಷ್ಮಿ, ಅದು ತನ್ನ ಪಾಲಿಗೆ ದೊರೆತ ಆಶೀರ್ವಾದವೆಂದು

ತಿಳಿದಳು.

ಅನಂತರ ಬಹುದಿನಗಳ ತನಕ ಅವಳ ಮನಸ್ಸಿನಲ್ಲಿ ಉಂಟಾದ ಕೊರಗು ಅಷ್ಟಿಷ್ಟಲ್ಲ. ತನ್ನ ಮೂರ್ಖತೆಗಾಗಿಯೂ ಅತ್ತಳು. ಶಂಕರನ ಸಲುವಾಗಿಯೂ ಹಂಬಲಿಸಿದಳು. ಆದರೆ ಶ್ರೀಮತಿಯ ಗುಣವನ್ನು ತಿಳಿದವಳಾದುದರಿಂದ, ಶಂಕರ ಮತ್ತು ಅವಳ ಬಾಂಧವ್ಯದಲ್ಲಿ ಪ್ರತಿಸ್ಪರ್ಧಿಯಾಗುವ ಯೋಚನೆ ಮಾಡಲಿಲ್ಲ. ಆದರೆ ಅಷ್ಟೊಂದು ಕ್ಷಿಪ್ರದಲ್ಲಿ ಶ್ರೀಮತಿಯು ತೀರಿಕೊಂಡು, ಶಂಕರನ ಜೀವನಕ್ಕೆ ವಿಶೇಷ ನೋವು ಉಂಟಾದೀತೆಂದು ಆಕೆ ಎಣಿಸಿರಲಿಲ್ಲ. ಶ್ರೀಮತಿಯ ಸಾವಿಗಾಗಿ ತಾನೂ ವ್ಯಥೆಗೊಂಡಳು. ತನ್ನ ಅನುತಾಪವನ್ನು ವ್ಯಕ್ತಮಾಡಿದಳು. ಆದರೆ ಕಾಲ ಕ್ರಮೇಣ — ತನ್ನ ಒಂಟಿ ಜೀವನ, ಪ್ರಣಯ ಭಂಗಿಗಳನ್ನು ನೆನೆದಂತೆ ಈ ಕಾಂಕ್ಷೆ ಬಲವಾಯಿತು : "ಅವನನ್ನು ತಾನು ಪಡೆಯಲಾರೆನೇ" ಎಂಬ ಬಯಕೆ ಉಂಟಾಯಿತು. ಶಂಕರ ಹೇಗೂ ಅವಿವಾಹಿತ ; ತಾನು ತನ್ನ ಪಾಲಿನ ಸ್ವಾರ್ಥವನ್ನು ಬಿಟ್ಟರೆ ಈ ಆಸೆ ಕೈಗೂಡುವುದಕ್ಕೆ ಕಷ್ಟವಾಗಲಾರದು. ಈಗಂತು ಶಂಕರನ ಮೇಲಿನ ಭಕ್ತಿಯಿಂದ ಆ ಸ್ವಾರ್ಥ ತಗ್ಗಿದೆ, ದಾಂಪತ್ಯದಲ್ಲಿ ಬೆರೆಯುವ ಜೀವರಿಗೆ ಸಹನೆ, ಪ್ರೇಮ, ಔದಾರ್ಯಗಳೇ ಹೆಚ್ಚಿನವೆಂದು ಅನುಭವದಿಂದಲೂ ಹೋಲಿಕೆಯಿಂದಲೂ ತಿಳಿದಿದ್ದಾಳೆ.

ಶಂಕರ ತನ್ನ ಮೇಲೆ ಮುನಿಸುಗೊಂಡಿರಬಹುದು, ಮಂಜುನಾಥನೊಡನೆ ಬಂದುದಕ್ಕೆ ಅನಾದರ ತಾಳುವುದೂ ಸಹಜ, ಆದರೆ ತನ್ನ ಕಾಗದಕ್ಕೆ ಉತ್ತರ ಬರೆಯುತ್ತಿದ್ದಾನೆ. ದ್ವೇಷವಿಲ್ಲದೆ ಔದಾಸೀನ್ಯವಿಲ್ಲದೆ ವಿವರವಾಗಿ ಒಂದೊಂದು ವಿಷಯವನ್ನೂ ತಿಳಿಸುತ್ತಿದ್ದಾನೆ. ಗೆಳೆಯರೊಡನೆ ಹೇಳುವಂತೆ ಮನಸ್ಸನ್ನು ಬಿಚ್ಚಿಹೇಳುತ್ತಿದ್ದಾನೆ. ಹೀಗೆಂದು ಎಷ್ಟೋ ಬಾರಿ ತನ್ನ ಮನಸ್ಸಿನ ಹಂಬಲ ತೋಡಿಕೊಳ್ಳುವುದು ಉಂಟು. 'ಪತ್ರ ಬರೆಯಲೇ, ಬೇಡವೇ' ಎಂದು ಯೋಚಿಸುತ್ತಾಳೆ. ಲೇಖನಿ ಮುಂದಕ್ಕೆ ಹರಿಯುವುದಿಲ್ಲ. ಅವನ ವೈರಿಯೊಡನೆ ನಾಲ್ಕಾರು ದಿನ ಒಡಾಡಿದ ನೆನಪು ಬಂದೇ ಬರುತ್ತದೆ. ತನ್ನನ್ನು ಶಂಕರ ಮೂದಲಿಸಲಿಲ್ಲ ಎಂದ ಮಾತ್ರಕ್ಕೆ ಹಿಂದಿನ ಪ್ರೇಮ, ಆದರ, ಅಭಿಮಾನಗಳು ಹುಟ್ಟುವುದು ಸಾಧ್ಯವೆಂದು ಅನಿಸಲಿಲ್ಲ. ಹೀಗಾಗಿ ನೇರವಾಗಿ ಬರೆಯುವ ಸಾಹಸ ಅವಳಿಗೆ ಉಂಟಾಗಲಿಲ್ಲ.

"ಇಲ್ಲ, ಅವನನ್ನು ಮರೆತುಬಿಡುತ್ತೇನೆ. ನನ್ನ ಯೋಗ್ಯತೆಗೆ ಮೀರಿದ ವಸ್ತು" ಎಂದು ಆಕೆ ಎಷ್ಟೆಷ್ಟು ಯೋಚಿಸಿದರೂ, ಆಸೆ ಮಾತ್ರ ತಡೆಯದು, ಅವನ ಸಮೀಪದಲ್ಲಿಲ್ಲಾದರೂ ಇದ್ದು ಸ್ನೇಹವನ್ನು ಸಂಪಾದಿಸಿಯೇನು ಎಂಬ ಆಸೆಯಾಗುತ್ತದೆ. ಒಂದಲ್ಲ ಒಂದು ರೀತಿಯಿಂದ—ತಾನು ಕಳೆದು ಕೊಂಡ ಮನ್ನಣೆಯನ್ನು ಗಳಿಸಬೇಕು. ಅವನ ಕೆಲಸಗಳಿಗೆ ಸಹಾಯಕಳಾಗಿ ಒದಗಬೇಕು. ನಾಗರಿಕ ವಿಲಾಸಗಳ ಹುಚ್ಚಿಗೆ ಬಿದ್ದವಳು ತಾನು–ಎಂಬ ಅಭಿಪ್ರಾಯವನ್ನು ಬದಲಿಸಬೇಕು-ಎಂಬ ಸಾಹಸಕ್ಕೆ ತೊಡಗಿದಳು. ಆತನ ಪತ್ರಗಳನ್ನು ಓದುತ್ತ–ಅಲ್ಲಿ ವೈದ್ಯಕೀಯ ಸಹಾಯದ ಆವಶ್ಯಕತೆ ಇದೆ– ಎಂದು ತಿಳಿದು, ಈ ಬಗೆಯಿಂದಲಾದರೂ ತಾನು ಅವನಿಗೆ ನೆರವಾಗಬಾರದೇ ಎಂದು ಬಯಸಿದಳು. ಒಮ್ಮೆ ಈ ಹುಚ್ಚು ತಲೆಗೇರುತ್ತಲೇ, ತನ್ನ ಅಧ್ಯಾಪಕ ವೃತ್ತಿಯನ್ನು ಬಿಟ್ಟು ದಾದಿತನ ಕಲಿತಳು; ಹೋಮಿಯಾಪತಿಯಂತಹ ಚಿಕಿತ್ಸಾ ಮಾರ್ಗದಲ್ಲಿ ಅನುಭವವನ್ನು ಪಡೆಯತೊಡಗಿದಳು. ಸಾಲದುದಕ್ಕೆ ಶಂಕರನ ನೆನಪಿನಿಂದ ಅವನನ್ನು ಕುರಿತು ಮಾತನಾಡಬೇಕೆಂಬ ಬಯಕೆಯಿಂದ, ಅವನ ತಾಯಿ ಪ್ರತಿಮೆಯ ಮನೆಗೆ ಒಡಾಡತೊಡಗಿದಳು. ಸುಂದರರಾಯರು ಬಂಗಾಡಿಯ ವಾಸ ಮುಗಿಸಿ, ಅಲ್ಲಿಗೆ ಬಂದುದಾದರೆ, ಒಂದೇ ಒಂದು ಸಂಜೆ ವರಲಕ್ಷ್ಮಿ ಅವರ ಮನೆಗೆ ಹೋಗುವುದನ್ನು ತಪ್ಪಿಸಿಲ್ಲ. ಆ ತಾಯಿತಂದೆಗಳ ಎದುರು ಶಂಕರನನ್ನು ಎಷ್ಟು ಕೊಂಡಾಡಿದರೂ ಅವಳಿಗೆ ಸ್ವಲ್ಪವೇ! ಪ್ರತಿಮೆ ಹೆಚ್ಚಾಗಿ ಮಾತಿಗೆ ಸಿಗುವವಳಲ್ಲವಾದರೂ ಈಗೀಗ ಮಗನ ಹಿರಿಮೆಯನ್ನು ಕೇಳುವುದಕ್ಕೆ ಅವಳಿಗೂ ಸಂತೋಷವಾಗುತ್ತಿತ್ತು. ಸುಂದರರಾಯರು ಅಷ್ಟೊಂದು ಮಾತನಾಡುವವರಲ್ಲ, ಆದರೆ ಅವರಿಗೂ ಒಮ್ಮೊಮ್ಮೆ ಮಗನ ವಿಚಾರದಲ್ಲಿ ಕನಿಕರ ಕಾಣುವುದುಂಟು, ಶ್ರೀಮತಿಯ ಮೃತ್ಯುವಿನಿಂದ ಅದು ಹೆಚ್ಚಿದೆ. 'ಅವಳ ತಂಗಿಯನ್ನು ಮದುವೆಯಾಗು' ಎಂದು ಬೋಧಿಸಿದರು. ಆತ ಮಾತನಾಡದ್ದನ್ನು ಕಂಡು ನಿರಾಶೆ ತಾಳಿದರು. ಎಷ್ಟು ದಿನ ಹೀಗೆ ನೋವು ಹೊತ್ತುಕೊಂಡಿದ್ದಾನು—ಎಂದು ಯೋಚಿಸುತ್ತಿದ್ದರು. ಆನಂತರ ಎರಡು ಬಾರಿಯ ದಿಲ್ಲಿ, ಬಂಗಾಡಿಗಳ, ಪಯಣದಲ್ಲಿ ಅವರಿಗೆ ವರಲಕ್ಷ್ಮಿಯನ್ನೇತಕ್ಕೆ ಶಂಕರ ಲಗ್ನವಾಗಬಾರದು—ಎಂದೂ ಅನಿಸಿತ್ತು. ಒಮ್ಮೆ ಆಕೆಯೊಡನೆಯೂ "ವರ, ನಾನು ನಾಡಿದ್ದು ಮಗನಿದ್ದಲ್ಲಿಗೆ

ಹೋಗುತ್ತೇನೆ. ಬರುತ್ತೀಯಾ" ಎಂದೂ ಕೇಳಿದ್ದರು.

"ನನಗೆ ಬರಬೇಕೆಂದು ಅಷ್ಟು ಆಸೆಯಿದೆ. ಆದರೂ ಇನ್ನೂ ನನ್ನ ಓದು ಮುಗಿದಿಲ್ಲ" ಎಂದು ಅವಳು ನುಡಿದುದೂ ಉಂಟು.

"ಏನು ಓದುವುದು? ಯಾವ ಮಣ್ಣಿಗೆ? ಆಯುಷ್ಯವೆಲ್ಲಾ ಓದುತ್ತಲೇ ಇರುವುದೇನು?" ಎಂದು ಅವರೂ ಹೇಳುವಂತಾಯಿತು.

ಮುಂದೆ ಮಗನ ಊರಿಗೆ ಹೋದಾಗ, ಆತನೊಡನೆ ವರಲಕ್ಷ್ಮಿ ತಮ್ಮ ಮನೆಗೆ ಬರುತ್ತಿರುವುದನ್ನೂ, ಅವನ ವಿಷಯದಲ್ಲಿ ತುಂಬಾ ಕುತೂಹಲ ತೋರುತ್ತಿರುವುದನ್ನೂ ಬಣ್ಣಿಸಿದ್ದರು. "ಹಿಂದೊಮ್ಮೆ ನೀನು ಅವಳ ಲಗ್ನವಾಗಬೇಕೆಂದು ಎಣಿಸಿದ್ದೆಯಲ್ಲವೇ ? ಅವಳಿಗಿನ್ನೂ ಲಗ್ನವಾಗಿಲ್ಲ; ಗೊತ್ತಿದ್ದ ಹುಡುಗಿ.ಮೊದಲಿಗಿಂತ ಮನಸ್ಸು, ನಡತೆ, ತುಂಬಾ ಮಿದುವಾಗಿದೆ"ಎಂದು ಪೀಠಿಕೆ ಹಾಕಿದರೆ, "ಅಪ್ಪಾ, ಆಕೆ ಪೇಟೆಯ ಹಕ್ಕಿ. ದಿಲ್ಲಿಯಂತಹ ಊರನ್ನು ಬಿಟ್ಟು ಬರಲಾರಳು" ಎಂದು ಸಂಭಾಷಣೆಯನ್ನು ಕೊನೆಗೊಳಿಸಿದ. ಸುಂದರರಾಯರು ಆಮೇಲೆ ಆಕೆಯ ವಿಚಾರದಲ್ಲಿ ಹೆಚ್ಚೇನೂ ಹೇಳುವುದಕ್ಕೆ ಹೋಗಲಿಲ್ಲ. ಆದರೆ ಅವರ ಅಂತರಂಗಕ್ಕೆ ಗೊತ್ತಿತ್ತು — ವರಲಕ್ಷ್ಮಿಗೆ ಶಂಕರನ ವಿಚಾರದಲ್ಲಿ ತುಂಬಾ ಗೌರವವಿದೆಯೆಂದು. ಅವಳೇ ಪತ್ರ ಬರೆದುದಾದರೆ, ಆ ಕೆಲಸ ಸಾಧ್ಯವೆಂದು. ಆದರೆ ಬರಿಯ ಆಲೋಚನೆಗಳಲ್ಲದೆ ಯಾವುದೂ ಕೃತಿಗೆ ಬರಲಿಲ್ಲ.

ಬೇಸಗೆಯ ಬಿಸಿಲಲ್ಲಿ, ಬಯಲಿನ ಹಸುರು ಗಿಡಗಳೆಲ್ಲವು ಒಣಗಿ ಯಾವತ್ತು ಜೀವಕಳೆ ನಾಶವಾದಂತೆ ಕಂಡು, ಮುಂಗಾರು ಬಡಿದ ನಾಲ್ಕು ದಿನಗಳಲ್ಲಿ ಯಾವತ್ತು ಹಸುರು ಮೊಳೆತು ಜೀವೋದಯವಾಗುವಂತೆ — ಶಂಕರನ ಮನಃ ಪ್ರಪಂಚದಲ್ಲಿ ಜಡವಾಗಿ ಬಿದ್ದಿದ್ದ ವಿವಾಹದ ಹಂಬಲ, ಕೃಷ್ಣನಮದುವೆಗೆ ಹೋದುದರಿಂದ, ತಿರುಗಿ ಕುಡಿ ಒಡೆಯುವಂತಾಯಿತು. ಎಷ್ಟು ಜೀವಕಳೆ ಅದು ತಳೆದುಕೊಂಡಿತ್ತೋ, ಅಷ್ಟೇ ಚೈತನ್ಯದಿಂದ ಕುಡಿಯೊಡೆಯಿತು. ಎರಡೆರಡು ನಿರಾಶೆಯ ಪರ್ವಗಳು ನೆನಪಿಗೆ ಬರುತ್ತಿದ್ದುವು — ಇದ್ದು ದೊರೆಯದೆ ಹೋದುದೊಂದು, ದೊರೆತು ಇಲ್ಲದಾದುದೊಂದು. ಆ ಎರಡು ನೆನಪುಗಳಲ್ಲಿ ತಂದೆಯೇ ವರಲಕ್ಷ್ಮಿಯ ನೆನಪನ್ನು ಚುಚ್ಚಿದ್ದು, ಅದೀಗ ಚಿಗುರುವುದಕ್ಕೆ ಅನುಕೂಲವಾಯಿತು. ಅವಳ ವಿಚಾರದಲ್ಲಿ ತಿಳಿಯ

ಷ್ಟೇನಿಲ್ಲ. ಒಳ್ಳೆ ವಿಚಾರ, ಸ್ನೇಹಪರ ನಡತೆ, ಅಪೂರ್ವ ಬುದ್ಧಿಶಕ್ತಿ–ಎಲ್ಲವೂ
ಇವೆ. ಸ್ಪಷ್ಟವಾಗಿ ಮನಸ್ಸನ್ನು ತೋಡಿಕೊಳ್ಳುವ ದಿಟ್ಟತನವೂ ಇದೆ. ದಿಟ್ಟ
ತನಕ್ಕೆ ತಕ್ಕುದಾದ ನಡತೆಯೂ ಇದೆ. ಯೌವನದ ಭರದಲ್ಲಿ ಒಮ್ಮೆ ತಪ್ಪಿ
ನಡೆದರೂ, ತಪ್ಪನ್ನರಿತು ತಿದ್ದಿಕೊಂಡು, ಚೆನ್ನಾದ ಬಾಳ್ವೆಯನ್ನು ಮಾಡುವ
ಳೆಂದೂ ಬಯಸಿದ್ದನು. ಹಾಗೆ ತನ್ನೊಂದು ಪತ್ರದಲ್ಲಿ "ಪ್ರೇಮವೆಂಬುದು
ಕುರುಡು–ಎಂಬ ಗಾದೆಯಂತೆ ಮುಂದಾದರೂ ದುಡುಕಬೇಡ. ದಾಂಪತ್ಯ
ಯಾವಜ್ಜೀವನದ ಬಂಧನ; ಒಂದು ಗಳಿಗೆಯ ಉನ್ಮತ್ತತೆಯಿಂದ ಯಾವ
ಜ್ಜೀವನದ ಭವಿಷ್ಯ ನಿರ್ಧರಿಸುವುದು ತಪ್ಪು" ಎಂದು ಬರೆದಿದ್ದ. ಅದ
ಕ್ಕವಳು ಬರೆದ ಉತ್ತರವೂ ವಿಚಿತ್ರವಾಗಿತ್ತು. "ನಾನು ಮದುವೆಯಾಗಿ
ಸುಖಿಯಾಗಿರಬಲ್ಲೆ-ಎಂಬುದರಲ್ಲಿಯೆ ನಿರಾಶೆಯಾಗಿದೆ" ಎಂದು ಬರೆದಿದ್ದಳು.
ಪಾಪ-ಆಕೆ ತನ್ನ ತಪ್ಪುಗಳಿಗಾಗಿ ಎಷ್ಟೊಂದು ನೊಂದಿರಬೇಕೊ–ಎಂದು
ಚಿಂತಿಸಿದ. ಅವಳ ಕುರಿತಾದ ಹಂಬಲ ಅಂತಹ ಗಳಿಗೆಯಲ್ಲಿ ಉಂಟಾ
ಗಿದ್ದರೂ, ಅದನ್ನು ತಡೆಹಿಡಿದಿದ್ದ. ಎಳಚಿತ್ತಾಯರ ಪರಿಹಾಸ್ಯದಿಂದ ಅವನ
ಮನಸ್ಸು ಚೇತರಿಸಿ, ಹಂಬಲವಾಗಿ, ಯೋಚನೆ ಹುಟ್ಟಿದಾಗ, ಕಣ್ಣಿನ
ಮುಂದೆ ಗೋಚರಿಸುತ್ತಿದ್ದ ಚಿತ್ರ–ವರಲಕ್ಷ್ಮಿಯದು ಒಬ್ಬಳದೇ. ಆದರೆ
ಆ ಕ್ಷಣಕ್ಕನಿಸಿತು. ಇನ್ನೊಬ್ಬರ ಜತೆಗೆ ಆಕೆ ಧಾವಿಸಿಬಂದದ್ದಾದರೂ,
ಬಂಗಾಡಿಗೇನೆ. ಶಾಂತುವಿನ ಮನಸ್ಸಿಗೆ ವಿಪ್ಲವಕ್ಕೆ ಕಾರಣವಾಗಿದ್ದ ಆಕೆ
ಯೊಡನೆ ತನ್ನ ಲಗ್ನ ಎಂದು ಕೇಳಿದರೆ, ಆಕೆ ಏನಂದಾಳು?—ಊರವರು
ಏನೆಂದಾರು— ಎಂಬ ಭೀತಿಯಾಯಿತು. ಮರು ಗಳಿಗೆಗೆ, ತನಗೆ ತಾನೇ
ಸಮಾಧಾನವನ್ನು ತಂದುಕೊಳ್ಳುತ್ತಾನೆ. ತಪ್ಪಿನ ದಾರಿಯನ್ನು ಒಮ್ಮೆಯೂ
ತುಳಿಯದ ಒಂದಾದರೊಂದು ಜೀವ ಈ ಲೋಕದಲ್ಲುಂಟೆ? ಕ್ಷಣದ
ಅಪರಾಧಕ್ಕೆ ಯಾವಜ್ಜೀವ ದಂಡನೆಯು ಸರಿಯೆ" ಎಂದು ಏನೇನೋ
ಸಮಾಧಾನ ತಂದುಕೊಳ್ಳುತ್ತಾನೆ. ಆದರೂ ಆಕೆಗೆ ಪತ್ರ ಬರೆಯುವ
ಸಾಹಸವಾಗಲಿಲ್ಲ.

ಅದೊಂದು ದಿನ ಶಂಕರ, ಮನೆಯ ಎದುರಿನ ನದಿಗೆ ಸೇತುವೆ
ಯೊಂದು ನಿರ್ಮಿಸುವ ಕೆಲಸದಲ್ಲಿ ನಿರತನಾಗಿದ್ದಾನೆ. ಪ್ರತಿ ವರ್ಷವೂ
ಬೀಳಲಿನ ಸೇತುವೆ ಹಾಕಿ, ತೆಗೆಯುವುದೊಂದು ಕೆಲಸವಾಗಿತ್ತು. ನದಿಯ

ದಂಡೆಯತನಕ ಈಗ ಗಾಡಿಯ ದಾರಿಯೂ ಆಗಿದೆ. ಮನೆಯತನಕ ಗಾಡಿ ಬರಬೇಕೆಂದು ಮಾಡಬೇಕೆಂಬ ಹಂಬಲ. ಈಚೆಯಿಂದ ಆಚೆಗೆ ಉಕ್ಕಿನ ಮಿಣಿಗಳನ್ನು ಹಾಕಿ, ಮರದ ಹಲಗೆಗಳಿಂದ ತೂಗು ಸೇತುವೆಯೊಂದನ್ನು ನಿರ್ಮಿಸುವ ಕೆಲಸ ಮಾಡಿಸುತ್ತಿದ್ದಾನೆ. ಹೀಗೊಂದು ದಿನ ಆತ ಕೆಲಸ ಮಾಡಿಸುತ್ತಿದ್ದಂತೆ ಎದುರಿನ ದಂಡೆಯಲ್ಲಿ ಅಂಚೆಯವನು ಕಾಣಿಸಿದ.

“ಇದೊಂದು ಒಳ್ಳೆಯ ಕೆಲಸವಾಯಿತಯ್ಯ. ಮಳೆಗಾಲದಲ್ಲಿ ನಿರಾತಂಕವಾಗಿ ನಿಮ್ಮಲ್ಲಿಗೆ ಬರುವುದಕ್ಕೆ ಅನುಕೂಲವಾಯಿತು” ಎನ್ನುತ್ತ, ಅರ್ಧ ಹಾಸಿದ ಹಲಗೆಗಳ ಮೇಲೆ ಡೊಂಬರಾಟ ಆಡುತ್ತ ದಾಟಿ ಬಂದು, ಶಂಕರನ ಕೈಗಳಮೇಲೆ ಪತ್ರಗಳನ್ನಿರಿಸಿ ತುಸು ಹೊತ್ತು ನಿಂತು ಮಾತನಾಡಿ ಹೊರಟುಹೋದ. ಒಂದೊಂದೇ ಕಾಗದವನ್ನು ತೆಗೆದು ನೋಡುತ್ತ ಶಂಕರ ಮನೆಯ ಕಡೆಗೆ ಹೊರಟ. ಅವುಗಳಲ್ಲಿ ತೀರ ದೀರ್ಘವಾದುದೊಂದು ಪತ್ರ ವರಲಕ್ಷ್ಮಿಯಿಂದಲೇ ಬಂದಿತ್ತು. ಆಕೆ ತನ್ನ ಆರೆಂಟು ವರ್ಷಗಳ ಜೀವನದ ಇತಿಹಾಸವನ್ನೇ ಕಥೆಯಂತೆ ನಿವೇದಿಸಿಕೊಂಡಿದ್ದಳು. ತನ್ನೆಲ್ಲಾ ಬಯಕೆ, ಆಸೆ, ನಿರಾಶೆಗಳನ್ನು, ತಪ್ಪು, ಒಪ್ಪುಗಳನ್ನು ಬಿನ್ನವಿಸಿಕೊಂಡಿದ್ದಳು—ಕೊನೆಗೆ ತೀರ್ಮಾನವಾಗಿ “ಇಷ್ಟೊಂದು ದಿನಗಳ ಸಾಹಸದಿಂದ ನಿನ್ನನ್ನು ಬಂದು ಸೇರಬೇಕು, ನಿನ್ನ ಜೀವನಕ್ಕೆ ನೆರವಾಗಬೇಕು—ಎಂದು ಒಂದಿಷ್ಟು ವೈದ್ಯಕೀಯ ವಿದ್ಯೆಯನ್ನೂ ಶುಶ್ರೂಷೆಯನ್ನೂ ಕಲಿತಿದ್ದೇನೆ. ನಾನು ನಿನ್ನ ಸ್ನೇಹಕ್ಕೆ ತಕ್ಕವಳೆಂದು ಕಂಡರೆ ಕರೆಯಿಸಿಕೊ; ಒಮ್ಮೆ ಅದು ಸಾಧ್ಯವಾಗಲಿಲ್ಲ—ಎಂದಾದರೆ ನಿನ್ನೂರಿನ ಜನಕ್ಕೆ ಉಪಕಾರವಾಗುವ ರೀತಿಯಲ್ಲಿ ಕೆಲಸಕ್ಕೆ ಅನುಕೂಲಿಸು” ಎಂದು ಬರೆದಿದ್ದಳು. ಪತ್ರ ಓದುತ್ತ ಓದುತ್ತ, ಮನೆಯನ್ನು ಸೇರಿದ; ಆಸನದಲ್ಲಿ ಕುಳಿತ. ತೆರೆಗಣ್ಣಿನಿಂದ ಮಾಡನ್ನು ನೋಡಿದ. “ಯಾರನ್ನು ಕೇಳೋಣ?” ಎನ್ನುತ್ತಿತ್ತು ಮನಸ್ಸು ತಂದೆ ದಿಲ್ಲಿಯಲ್ಲಿದ್ದರು. ಇನ್ನಾರನ್ನು ಕೇಳಬೇಕು? ಪತ್ರಕ್ಕೆ ಉತ್ತರ ಬರೆಯೋಣ ಎನಿಸಿತು. ಕೊನೆಗೆ ಉತ್ತರ ಬರೆಯುವುದು ಲೇಸಲ್ಲವೆಂದೂ ಅನಿಸಿತು. ತನ್ನದೇ ಆದ ಬೇರೊಂದು ನಿಶ್ಚಯ ಮಾಡಿಕೊಂಡು, ನೆಟ್ಟಗೆ ಕೃಷ್ಣನಿರುವಲ್ಲಿಗೆ ಹೋದನು. “ಕೃಷ್ಣ, ಒಂದು ಹತ್ತು ದಿನ ಕಾಲ ನಾನು ಊರಲ್ಲಿ ಇರುವುದಿಲ್ಲ. ನೀನಾಗಲೀ ನಿನ್ನ ತಮ್ಮನಾಗಲೀ ನಮ್ಮಲ್ಲಿಗೆ

ಹೋಗಿ ಇರಬೇಕು. ಎಂದು ತಿಳಿಸಿ, ದಿಲ್ಲಿಗೆ ಹೊರಟುಬಿಟ್ಟ.

* * * *

ಹೋದವನು ಎರಡು ವಾರಗಳ ಅವಧಿಯಲ್ಲಿ ಊರಿಗೆ ಮರಳಿ ಬಂದೂ ಆಯಿತು. ಬರುವಾಗ ತಂದೆಯನ್ನೂ, ವರಲಕ್ಷ್ಮಿಯನ್ನೂ ಕರೆದುಕೊಂಡು ಬಂದಿದ್ದ–ಎಂಬುದೇ ಹೆಚ್ಚಿನ ಸಮಾಚಾರ. ಅತ ಊರಿಗೆ ಬಂದ ಸಮಾಚಾರ ಎಳಚಿತ್ತಾಯರಿಗೆ ತಿಳಿಯುತ್ತಲೇ ಅವರೂ ಮನೆಗೆ ಧಾವಿಸಿ ಬಂದರು. "ಎಂದು ಬಂದಿರಿ ? ಯಾಕೆ ಅಷ್ಟು ಅವಸರದಲ್ಲಿ ಹೋದದ್ದು ? ತಂದೆಯವರು ಬಂದಿದ್ದಾರಂತಲ್ಲ. ನಿಮ್ಮ ತಾಯಿ ಈ ಬಾರಿಯೂ ಬರಲಿಲ್ಲವೇ" ಎಂಬ ಪ್ರಶ್ನೆಗಳ ಸುರಿಮಳೆ ಕೇಳಿದರು. ಅನಂತರ ಸಮಾಧಾನವಾಗಿ "ಆಗಲಿಕ್ಕಿಲ್ಲ; ಪೇಟೆಯ ಹೆಂಗಸರಿಗೆ ಇಂತಹ ಊರು ಹಿಡಿಸಲಿಕ್ಕಿಲ್ಲ. ಅದೂ, ದಿಲ್ಲಿಯಂತಹ ಊರಲ್ಲಿದ್ದವರು ಈ ಕೊಂಪೆಗೆ ಏಕೆ ಬಂದಾರು ? " ಎಂದರು.

"ಆ ಮಾತು ತೀರ ನಿಜ. ಆದರೂ ಎಳಚಿತ್ತಾಯರೇ, ಈ ಸಾರಿ ಒಂದು ಪೇಟೆಯ ಮೃಗವನ್ನು ಹಳ್ಳಿಗೆ ತಂದಿದ್ದೇನೆ. ನೀವೂ ಹೇಳುತ್ತಾ ಇದ್ದೀರಿ; ಮುಂದಕ್ಕೆ ತಳ್ಳಿ, ತಳ್ಳಿ ನನಗೂ ಬೇಸರವಾಯಿತು" ಎಂದಾಗ ಎಳಚಿತ್ತಾಯರಿಗೆ ಆ ಮಾತಿನ ತಲೆ ಬುಡವೇ ಆಗಲಿಲ್ಲ. ಅವರ ತಲೆಯೊಳಗೆ 'ಪೇಟೆಯ ಮೃಗ' ಹೋಗಿ 'ಬೇಟೆಯ ಮೃಗ' ವಾಗಿ "ಏನು, ಏನೆಂದಿರಿ ? ತಿಳಿಯಲಿಲ್ಲ." ಎಂದು ತಿರುಗಿ ಕೇಳಬೇಕಾಯಿತು.

"ವರಾ, ನಮ್ಮ ಸ್ನೇಹಿತರೊಬ್ಬರು ಬಂದಿದ್ದಾರೆ. ಬಾ ; ನಾನಿಲ್ಲಿ ಬರುವುದಕ್ಕೆ, ನಮ್ಮ ಅಜ್ಜಿ ಎಷ್ಟು ಕಾರಣಳೋ ಇವರೂ ಅಷ್ಟೇನೆ ಕಾರಣರು," ಎಂದೆನ್ನುತ್ತಲೇ, ವರಲಕ್ಷ್ಮಿ ಅರ್ಧ ಸಂಕೋಚದಿಂದ ನಗುತ್ತ ಹೊರಕ್ಕೆ ಬಂದಳು. ಮೊದಲ ಬಾರಿ ಕಾಣುತ್ತಿರುವ ಈ ಹಿರಿಯರಿಗೆ ವಂದಿಸಿದಳು.

ಉಷಾ ಪ್ರೆಸ್, ಮೈಸೂರು